ಕೊಡಗು.

ಸನ್ ೧೯೩೦ನೇ ಇಸವಿ

ಅಕ್ಟೋಬರ್ ತಾ ೩೧ನೇ ಶುಕ್ರವಾರ.

ನಾಣ್ಯ ವಿನಿಮಯ.

ಇಂಡಿಯಾದ ಎಲ್ಲಾ ಆರ್ಥಿಕ ಶಾಸ್ತ್ರಜ್ಞರನ್ನೂ ವ್ಯಾಪಾರಿಗಳನ್ನೂ ಈ ನಾಣ್ಯವಿನಿಮಯದ ವಿಷಯವು ಕಳವಳಗೊಳಿಸಿದೆ. ಬ್ರಿಟನ್ನಿನಲ್ಲಿ ಈಗ ಕೆಲವು ವರ್ಷಗಳಿಂದ ಚಿನ್ನವೇ ನಾಣ್ಯದ ಆಧಾರವಾಗಿಟ್ಟುಕೊಂಡಿದ್ದರು. ಅಂದರೆ ನಾಣ್ಯದ ಬೆಲೆಯನ್ನು ಚಿನ್ನದಿಂದ ನಿರ್ಣಯಿಸಿಕೊಳ್ಳುತ್ತಿದ್ದರು. ಇಂತಿಷ್ಟು ನಾಣ್ಯ ಕೊಟ್ಟರೆ ಇಂತಿಷ್ಟು ತೂಕ ಚಿನ್ನವನ್ನು ಸರಕಾರವು ಕೊಡುತ್ತದೆಯೆಂಬ ನಿಯಮವಿತ್ತು. ಇದೇ ತಿಂಗಳ 21 ನೇ ತಾರೀಖಿನಿಂದ ಸರಕಾರವು ನಾಣ್ಯ ಕೊಟ್ಟರೆ ಚಿನ್ನ ಕೊಡಬೇಕಾದ ನಿರ್ಬಂಧವಿಲ್ಲವೆಂತ ಬ್ರಿಟಿಷ್ ಸರಕಾರವು ತೀರ್ಮಾನಿಸಿತು. ಇದರಿಂದ ಏನಾಯಿತೆಂದರೆ ಇಂಗ್ಲೆಂಡಿನಲ್ಲಿ ಚಲಾವಣೆಯಲ್ಲಿರುವ ನಾಣ್ಯದ ಬೆಲೆಯು ಯುರೋಪ್ ಮತ್ತು ಅಮೇರಿಕಾದ ಬೇರೆ ರಾಜ್ಯಗಳ ನಾಣ್ಯದ ಲೆಖ್ಖದಲ್ಲಿ ಕಷ್ಟವಿಲ್ಲವೆಂತಾಯಿತು. ಇಂಗ್ಲಿಷ್ ರಾಜ್ಯದಲ್ಲಿ ಚಲಾವಣೆಯಲ್ಲಿರುವ ನಾಣ್ಯದ ಬೆಲೆಯು ದಿವಸದಿಂದ ದಿವಸಕ್ಕೆ ಒದಲಾಗುವಂತಾಯಿತು.

ಹೀಗೆ ಇಂಗ್ಲೆಂಡಿನ ನಾಣ್ಯದ ವಿಷಯ ತೀರ್ಮಾನವಾದಾಗಲೇ ಇಂಡಿಯಾದ ನಾಣ್ಯದ ಗತಿಯು ವಿಚಾರಣೀಯವಾಯಿತು. ಇಂಡಿಯಾದ ಜನರನ್ನಾಗಲೀ ಸಂಸ್ಥಾನಗಳನ್ನಾಗಲೀ ಕೇಳದೇನೇ ಇಂಡಿಯಾದ ನಾಣ್ಯದ ಬೆಲೆಯನ್ನು ಇಂಗ್ಲೆಂಡಿನಲ್ಲಿ ಈಗ ಜಾರಿಯಲ್ಲಿರುವ ನಾಣ್ಯದ ಬೆಲೆಯಲ್ಲಿ ನಿರ್ಧರಿಸಿಬಿಟ್ಟರು. ಈ ಮುಂಚೆ ಇಂಡಿಯಾದಲ್ಲಿ ಚಿನ್ನದ ನಾಣ್ಯ ಚಲಾವಣೆ ಇಲ್ಲದಿದ್ದರೂ ಇಂಡಿಯಾದ ರೂ. 21—3—10 ನ್ನು ಕೊಟ್ಟರೆ ಸರಕಾರವು ಒಂದು ತೊಲೆ ಚಿನ್ನವನ್ನು ಕೊಡಬೇಕೆಂತ ನಿರ್ಣಯವಿತ್ತು. ಮತ್ತು ಒಂದು ರೂಪಾಯಿಯ ಬೆಲೆಯು ಈಗ ಕೆಲವು ವರ್ಷಗಳಿಂದ ಇಂಗ್ಲಿಷ್ ನಾಣ್ಯದ 18 ಪೆನ್ಸ್ ಎಂತ ಸರಕಾರವು ನಿರ್ಣಯಿಸಿತ್ತು. ಈಗ ಇಂಡಿಯಾದ ನಾಣ್ಯ ಕೊಟ್ಟರೆ ಚಿನ್ನ ಕೊಡಬೇಕಾದ ಜವಾಬ್ದಾರಿ ಸರಕಾರಕ್ಕೆ ಇಲ್ಲ. ಆದರೆ ಇಂಡಿಯಾದ ರೂಪಾಯಿಯ ಬೆಲೆಯು ಈಗಿನ ಇಂಗ್ಲಿಷ್ ನಾಣ್ಯದ ಲೆಖ್ಖದಲ್ಲಿ 18 ಪೆನ್ಸ್ ಆಗಬೇಕೆಂತಲೇ ನಿರ್ಣಯಿಸಿಬಿಟ್ಟರು. ಈಗಿನ ಇಂಗ್ಲಿಷ್ ನಾಣ್ಯದ ಬೆಲೆಯು ಚಿನ್ನ ಕೊಂಡುಕೊಳ್ಳುವ ಶಕ್ತಿಯಲ್ಲಿ ಕಡಿಮೆಯಾಗಿದೆ. ಅದರಿಂದ ಇಂಡಿಯಾದ ರೂಪಾಯಿಗೂ ಚಿನ್ನ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಯಿತು. ಒಂದು ವಾರದ ಕೆಳಗೆ ಚಿನ್ನದ ಒಂದು ಪವನಿಗೆ ರೂ. 13—9—0 ಮಾರ್ಕೆಟಿನಲ್ಲಿದ್ದದ್ದು ಈಗ ಕಲ್ಕತ್ತೆ ಮುಂಬಯಿ ಒಂದರಲ್ಲೇ ಒಂದು ಪವನಿಗೆ ಹದಿನಾರು ರೂಪಾಯಿ ಆಗಿದೆಯೆಂತ ವರ್ತಮಾನವಿದೆ. ಇದರಿಂದ ರೂಪಾಯಿಯ ಬೆಲೆಯು ಪರರಾಷ್ಟ್ರಗಳ ನಾಣ್ಯದ ಲೆಖ್ಖದಲ್ಲಿ ಕಡಿಮೆಯಾಯಿತು.

ಈ ರೀತಿ ಇಂಡಿಯಾದ ನಾಣ್ಯದ ಬೆಲೆಯು ಇಂಗ್ಲೆಂಡಿನ ಈಗ ಸ್ಥಿರವಿಲ್ಲದ ನಾಣ್ಯದೊಂದಿಗೆ ಬೆಸೆದಿದ್ದರಿಂದ ಆದ ಗುಣದೋಷಗಳೇನು ಎಂತ ವಿಚಾರಿಸಬೇಕಾದದ್ದು ಮುಖ್ಯ ವಿಷಯವಾಗಿದೆ. ಹಿಂದೂಸ್ಥಾನದಿಂದ ಹೊರಗೆ ರಫ್ತಾಗುವ ಮಾಲುಗಳಿಗೆ ರೂಪಾಯಿ ಲೆಖ್ಖದಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಿನ ಬೆಲೆಯಾಗಬಹುದು. ಆದರೆ ಇಂಗ್ಲೆಂಡಿನ ವಿನಹ ಬೇರೆ ದೇಶಗಳಿಂದ ಹಿಂದೂಸ್ಥಾನಕ್ಕೆ ಬರುವ ಮಾಲುಗಳಿಗೆ ಕ್ರಯ ಹೆಚ್ಚಾಗುವುದು. ಹಿಂದೂಸ್ಥಾನದ ಕೃಷಿಕರು ಉತ್ಪತ್ತಿ ಮಾಡಿ ಪರದೇಶಗಳಿಗೆ ಹೋಗುವ ಕಚ್ಚಾ ಮಾಲುಗಳಿಗೆ ಕ್ರಯವು ಸ್ವಲ್ಪ ಮಟ್ಟಿಗೆ ಹೆಚ್ಚಾಗುವುದರಿಂದ ರೈತರಿಗೆ ಕೆಲವು ಸ್ವಲ್ಪ ಪ್ರಯೋಜನವೇನೋ ಆಗಬಹುದು. ಆದರೆ ಪರದೇಶಗಳಿಂದ ಬರುವ ಮಾಲುಗಳಿಗೆ ಕ್ರಯ ಹೆಚ್ಚುವುದು ಹಿಂದೀಯರಿಗೆ ನಷ್ಟವೇ. ಇಂಗ್ಲೆಂಡಿನಲ್ಲಿ ತಯಾರಾಗುವ ಮಾಲುಗಳಿಗೆ ಸಾಧಾರಣವಾಗಿ ಕ್ರಯ ಹೆಚ್ಚು. ಅಂಗಡಿಗಳಲ್ಲಿ ದೊರಕುವ ಎಷ್ಟೋ ಮಾಲುಗಳು ಇಂಗ್ಲೆಂಡಿನವಲ್ಲ. ಬೇರೆ ರಾಜ್ಯಗಳು ಸುಲಭ ಕ್ರಯದಲ್ಲಿ ಮಾರುತ್ತಿರುವ ಮಾಲುಗಳಿಗೆ ಇಂಗ್ಲೆಂಡಿನವರು ಕ್ರಯ ಕಡಿಮೆ ಮಾಡಬೇಕಾಗಿತ್ತು. ಈಗ ನಿರ್ಣಯವಾದ ನಾಣ್ಯ ವಿನಿಮಯದಿಂದ ಪರರಾಷ್ಟ್ರದ ಮಾಲುಗಳಿಗೆ ಎಲ್ಲಾ ಹೆಚ್ಚು ಕ್ರಯ ಕೊಡಬೇಕಾಗಿದೆ. ಇಂಗ್ಲೆಂಡಿನ ಮಾಲುಗಳ ಕ್ರಯವು ಈ ಮೊದಲಿನಂತೆಯೇ ಇರಬಹುದಾದರೂ ಬೇರೆ ರಾಷ್ಟ್ರಗಳ ಮಾಲುಗಳ ಸ್ಪರ್ಧೆ ಇಲ್ಲದಿದ್ದರೆ ಇಂಗ್ಲೆಂಡಿನ ಮಾಲಿಗೆ ಕ್ರಯ ಹೆಚ್ಚಿಸಬಹುದು. ಈಗಿನ ಧೋರಣೆಯಲ್ಲೇ ಇಂಗ್ಲೆಂಡಿನ ಮಾಲು ದುಬಾರಿಯಾದರೂ ಅದಕ್ಕಿಂತ ಸುಲಭ ಕ್ರಯದಲ್ಲಿ ದೊರಕುತ್ತಿದ್ದ ಬೇರೆ ರಾಷ್ಟ್ರದ ಮಾಲು ಈಗ ಇಂಗ್ಲಿಷ್ ಮಾಲಿಗಿಂತ ಹೆಚ್ಚು ಕ್ರಯದ್ದಾಗಬಹುದಾದ್ದರಿಂದ ಹೆಚ್ಚು ಕ್ರಯ ಕೊಟ್ಟು ಇಂಗ್ಲಿಷ್ ಮಾಲನ್ನೇ ಕೊಳ್ಳಬೇಕಾಯಿತು. ಹಿಂದೂಸ್ಥಾನಕ್ಕೆ ಇದು ಬಹಳ ಶೋಚನೀಯವಾಗಿದೆ.

ಅಲ್ಲದೆ ಹಿಂದೂಸ್ಥಾನದಲ್ಲಿ ಚಲಾವಣೆಯಲ್ಲಿರುವ ನಾಣ್ಯಗಳ ಆಧಾರವಾಗಿ ಕಾಪಾಡಿಟ್ಟಿದ್ದ ಚಿನ್ನವು ಪೇಪರ್ ದಲ್ಲೇ ಕಳೆದು ಹೋಗಬಹುದಾಗಿ ಕಾಣುತ್ತದೆ. ಯಾವ ದೇಶದಲ್ಲೇ ಆದರೂ ಅವರವರ ನಾಣ್ಯದ ಆಧಾರವಾಗಿ ಚಿನ್ನವನ್ನು ಕಾಪಿಡುವುದು ಸಹಜ. ಹಿಂದೂಸ್ಥಾನದ ರೂಪಾಯಿಗೆ ಮಟಕ್ಕಾಗಿ 18 ಪೆನ್ಸ್ (ಇಂಗ್ಲಿಷ್ ನಾಣ್ಯ) ಬೆಲೆಯೆಂತ ಇಂಡಿಯಾದವರ ಇಚ್ಛೆಗೆ ವಿರೋಧವಾಗಿ ನಿರ್ಣಯಿಸಿದ್ದರಿಂದ ಈ ನಾಣ್ಯದ ಆಧಾರವಾಗಿದ್ದ ಚಿನ್ನದಲ್ಲಿ 58 ಕೋಟಿ ಪವನಿನ ಬೆಲೆಯನ್ನು ಈಗಾಗಲೇ ಕಳೆದುಕೊಂಡೆಯೆಂತೆ. ಇದು ಎ.ಸಿಂದ ರೂಪಾಯಿ ಬೆಲೆಯನ್ನು ಈಗ ನಿರ್ಣಯಿಸಿದ್ದರಿಂದ ಈಗ ಉಳಿದಿರುವ ನಾಣ್ಯದ ಆಧಾರವಾದ ಚಿನ್ನವೂ ಸಹ ಕಳೆದು ಹೋಯಿತೆಂತ ಈ ವಾರ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಪ್ರಜಾಪ್ರತಿನಿಧಿಗಳಾದ ಶ್ರೀ. ಶಣ್ಮುಖಂ ಚೆಟ್ಟಿಯವರೇ ಮೊದಲಾದವರು ವಾದಿಸಿದರು. ಆಕ್ಷೇಪಣೆಗೆ ಕಾರಣವಿಲ್ಲವೆಂತ ಸರ್ಕಾರ ಪಕ್ಷದ ಮೆಂಬರರ ಜವಾಬೇನೂ ಬರಲಿಲ್ಲ. ಆದ್ದರಿಂದ ಹಿಂದೂಸ್ಥಾನದ ನಾಣ್ಯದ ಆಧಾರವು ಕಳೆದು ಹೋದೀತೆಂಬುದು ನಿಜವೆಂತಲೇ ಕಾಣುತ್ತದೆ.

ಹಿಂದುಸ್ಥಾನಕ್ಕೆ ಸ್ವರಾಜ ಸಿಕ್ಕಿದಾಗ ಹಿಂದೂಸ್ಥಾನದ ಆರ್ಥಿಕ ಸ್ಥಿತಿಯು ಭದ್ರವಾಗಿರಬೇಕು. ಹಾಗಾದರೇನೇ ಹಿಂದೂಸ್ಥಾನದ ಸ್ವಾತಂತ್ರ್ಯವು ಹಿಂದೂಸ್ಥಾನದ ಪ್ರಯೋಜನಕ್ಕೆ ಆದೀತು. ಸ್ವರಾಜ್ಯ ಶೀಘ್ರದಲ್ಲೇ ದೊರಕಬಹುದಾಗಿರುವಾಗ ಹಿಂದುಸ್ಥಾನದ ಆರ್ಥಿಕ ಸ್ಥಿತಿಯು ಅಭಿವೃದ್ಧಿಯನ್ನೇ ಕೆಡಿಸುವಂತಹದು ಬಹಳ ಹಾನಿಕರವಾದ ಕೆಲಸವಾಗಿದೆ. ಇದನ್ನು ತಿಳಿದೇ ಈ ವಾರ ಈ ಸಂಬಂಧವಾಗಿ ಎಸೆಂಬ್ಲಿಯಲ್ಲಿ ನಡೆದ ಚರ್ಚೆಯು ಸರ್ಕಾರಕ್ಕೆ ವಿರೋಧವಾಗಿ ತೀರ್ಮಾನವಾಯಿತು. ಇಂಡಿಯಾ ಸರ್ಕಾರವನ್ನೂ ಇಂಡಿಯಾದ ಜನಪ್ರತಿನಿಧಿಯ ಸಭೆಗಳಿಂದ ಎಸೆಂಬ್ಲಿಯನ್ನೂ ಕೇಳದೇನೇ ಈ ರೀತಿಯನ್ನು ಇಂಗ್ಲೆಂಡಿನ ನಾಣ್ಯಕ್ಕೆ ಅಂಟಿಸಿದ್ದಕ್ಕಾಗಿ ಸ್ಟೇಟ್ ಸೆಕ್ರೆಟರಿಯವರ ವರ್ತನೆಯನ್ನು ಖಂಡಿಸಿದ ಠರಾವಿಗೆ ಪ್ರಜಾಪ್ರತಿನಿಧಿಗಳಾದ ಸಭ್ಯರೂ ಒಟ್ಟುಗೂಡಿ ಠರಾವಿನ ಪರವಾಗಿ 64 ಓಟು, ವಿರೋಧವಾಗಿ 40 ಓಟು. ನಂತರವೂ ಸರ್ಕಾರಿ ಅಧಿಕಾರಿಗಳೂ ಸರಕಾರದಿಂದ ನೇಮಿಸಲ್ಪಟ್ಟ ಮೆಂಬರುಗಳು ಮಾತ್ರ ಸರ್ಕಾರಿ ಪರವಾಗಿದ್ದರು. ಇಷ್ಟೇ ಅಲ್ಲದೆ ಎಸೆಂಬ್ಲಿಯ ಪ್ರಜಾಪ್ರತಿನಿಧಿಗಳೆಲ್ಲರೂ ಕೂಡಿ ದುಂಡು ಮೇಜು ಪರಿಷತ್ತಿನ ಸದಸ್ಯರಿಗೆ ಈ ತೀರ್ಮಾನವನ್ನು ತಂತಿ ಮೂಲಕ ತಿಳಿಸಿ ಸರ್ಕಾರಿ ವರ್ತನೆಯನ್ನು ಬಲವಾಗಿ ಖಂಡಿಸಬೇಕೆಂತ ಕೇಳಿಕೊಂಡಿರುತ್ತಾರೆ. ಆದರೂ ಪಾರ್ಲಿಮೆಂಟಿನಲ್ಲಿ ಸ್ಟೇಟ್ ಸೆಕ್ರೆಟರಿಯವರು ಮಾಡಿದ ತೀರ್ಮಾನವನ್ನು ಬದಲಾಯಿಸಲಾಗುದಿಲ್ಲವೆಂತ ಉತ್ತರವಿತ್ತರು!

ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂಬುದನ್ನು ನಿರ್ಧರಿಸಲು ದುಂಡು ಮೇಜು ಪರಿಷತ್ತು ಕೂಡಿರುವಾಗಲೇ ಬ್ರಿಟಿಷ್ ಮಂತ್ರಿ ಮಂಡಲಿಯು ಹಿಂದೂಸ್ಥಾನದ ಅಭಿಪ್ರಾಯವನ್ನು ಕೃಣಕ್ಕೆಂತಲೂ ಕಡೆಯಾಗಿ ಎಣಿಸುವಾಗ ಹಿಂದೂಸ್ಥಾನಕ್ಕೆ ಸ್ವರಾಜ್ಯ ಸ್ವಾತಂತ್ರ್ಯವು ಈಗಲೇ ಸಿಕ್ಕುವ ಸಂಭವವಿದೆಯೇ? ಹಿಂದೂಸ್ಥಾನದ ಹೋರಾಟವು ನಡೆಯುತ್ತಿದ್ದಾಗ ಹೋರಾಟವನ್ನು ನಿಲ್ಲಿಸಬೇಕಾದರೆ ಸರ್ಕಾರದ ಮನೋಭಾವವು ಬದಲಾಗಬೇಕೆಂತಲೂ ಅಂತಹ ಸಾಧ್ಯತೆಯಿಲ್ಲ ಹಿಂದೀ ಜನರ ಅಭಿಪ್ರಾಯದಂತೆಯೇ ಸರ್ಕಾರವು ನಡೆಯುವಂತೆ ಮಹಾತ್ಮಾಜೀಯವರು ಕೇಳಿಕೊಂಡಿದ್ದರು. ಅದರೆ ಹಿಂದೀಯರ ಅಭಿಪ್ರಾಯಕ್ಕೆ ಅನುಕೂಲವಾಗಿ ನಡೆಯುವ ಬದಲು ಹಿಂದೀಯರನ್ನು ಅಲ್ಲಗಳೆದು ಅವರ ಕಣ್ಣುಗಟ್ಟುವ ಹಾಗೆ ಬ್ರಿಟಿಷ್ ಸರ್ಕಾರವು ವರ್ತಿಸಿದೆ. ಈ ಕೆಲಸದಿಂದ ಬ್ರಿಟಿಷ್ ಸರ್ಕಾರದ ಸ್ವರಾಜ್ಯದ ಪರವನ್ನು ತಿಳಿದುಕೊಳ್ಳಬಹುದಾದರೆ ಹಿಂದುಸ್ಥಾನದ ಹೋರಾಟವು ಇನ್ನೂ ಜೋರಾಗಿ ನಡೆಯಲಿಕ್ಕೆ ಬಾಕಿ ಇದೆಯೆಂತಲೇ ಊಹಿಸಬಹುದು.

ದುಂಡು ಮೇಜು ಪರಿಷತ್ತು.

ಮಹಾತ್ಮ ಗಾಂಧಿಯವರು ಸಹ ದುಂಡು ಮೇಜು ಪರಿಷತ್ತಿಗೆ ಹೋದ ನಂತರ ಹಿಂದೂಸ್ಥಾನದ ಪ್ರತಿಯೊಬ್ಬನ ದೃಷ್ಟಿಯೂ ದುಂಡು ಮೇಜು ಪರಿಷತ್ತಿನ ಕಡೆಗೇನೇ ತಿರುಗಿದೆ. ಆದರೆ ಆ ಸಭೆಯಲ್ಲಿ ಕೆಲಸಗಳು ಆಗಬೇಕಾದಷ್ಟು ಚುರುಕಾಗಿ ನಡೆಯುತ್ತಿರುವುದಿಲ್ಲ. ಈ ಸಭೆಯಲ್ಲಿ ಮಹಾತ್ಮರು ಕೂಡಲೇ ಸಭೆ ಕೂತ ಮೊದಲಿನ ದಿವಸವೇ ಅದರ ಕಾರ್ಯಕ್ರಮವನ್ನು ಕುರಿತು ಸ್ಪಷ್ಟ ರೂಪದಲ್ಲಿ ಟೀಕಿಸಿದರು. ಅಲ್ಲಿ ಆಗುತ್ತಿರುವ ರೀತಿಯಲ್ಲಿ ಚರ್ಚೆ ನಡೆಯುತ್ತಾ ಇದ್ದರೆ ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಸಭೆ ಅಂದರೆ ಚರ್ಚೆಗಾಗಿಯೇ ಚರ್ಚಿಸುವ ಸಭೆಯಾಗುತ್ತದೆ. ಹೊರತು ಮಹತ್ವದ ತೀರ್ಮಾನ ಮಾಡಲು ಕೂಡಿದ ಸಭೆಯಾಗಲಿಲ್ಲವೆಂತಲೂ ಕೆಲಸವೇನಾದರೂ ಆಗಬೇಕಾದರೆ ಸರ್ಕಾರದವರು ಹಿಂದೂಸ್ಥಾನಕ್ಕೆ ಏನು ಕೊಡಲು ತಯಾರಿರುವರೆಂಬುದನ್ನು ತಿಳಿಸಿದರೆ ಅದರ ಮೇಲೆ ಅಭಿಪ್ರಾಯ ಕೊಡಬಹುದೆಂತಲೂ ಹೇಳಿದರು.

ಅದರ ನಂತರ ಈ ಪರಿಷತ್ತಿನ ಕಾರ್ಯವು ಹೆಚ್ಚೇನೂ ಮುಂದುವರಿದಂತೆ ಕಾಣುವುದಿಲ್ಲ. ತಾ. 28ರಲ್ಲಿ ಕೇವಲ ಸಂಖ್ಯೆ ಕೋಮಿನವರ ಸಮಸ್ಯೆಯನ್ನು ತೀರ್ಮಾನಿಸಲು ನೇಮಿಸಲ್ಪಟ್ಟ ಉಪ ಕಮಿಟಿಯ ಸಭೆ ಸೇರಿತು. ಇದಕ್ಕೆ ಪ್ರಧಾನ ಮಂತ್ರಿಯವರೇ ಅಧ್ಯಕ್ಷರಾಗಿದ್ದಾರೆ. ಇವರು ಪ್ರಾರಂಭದಿಂದ ಮಹಾತ್ಮ ಗಾಂಧಿಯವರ ಸಲಹೆಗೆ ಮಂತ್ರಿಮಂಡಲಿಯು ಏನೂ ಗಮನಕೊಟ್ಟಂತೆ ಕಾಣುವುದಿಲ್ಲ.

ರಾಜರುಗಳ ಪರವಾಗಿ ಬಿಕಾನೀರ್ ರಾಜರು ಉತ್ತಮವಾದ ಕೆಲವು ತತ್ವಗಳನ್ನು ಹೇಳ ತೊಡಗಿದ್ದಾರೆ. ಮಧ್ಯ ಸರ್ಕಾರದಲ್ಲಿ ಎಷ್ಟರ ಮಟ್ಟಿಗೆ ಸ್ವಾತಂತ್ರ್ಯ ಕೊಡಬೇಕೆಂಬ ಮುಖ್ಯ ವಿಷಯವನ್ನು ಚರ್ಚಿಸಿ ತೀರ್ಮಾನಿಸಿಕೊಳ್ಳುವ ಸ್ಥಳವು ಕಡಿಮೆ. ಸಂಖ್ಯೆ ಜನರ ಹಕ್ಕುಗಳ ಕುರಿತು ಚರ್ಚೆ ಪ್ರಾರಂಭವಾಗಿದೆ. ಈ ತರಹದ ಕಾರ್ಯಕ್ರಮವನ್ನು ನೋಡಿದರೆ ಇಂಡಿಯಾದ ಶತ್ರುಗಳಾದ ಲಾರ್ಡ್ ಸೈಡನ್ ಹ್ಯಾಮ್ ಚರ್ಚಿಲ್ ಮುಂತಾದವರ ಗುಂಪು ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಿದೆ ಎಂತ ತೋರುತ್ತದೆ. ಪಾರ್ಲಿಮೆಂಟಿನಲ್ಲಿಗೆ ಸ್ವಾತಂತ್ರ್ಯದ ಉಪನ್ಯಾಸ ಕೊಡಲು ಅನುಕೂಲ ದೊರೆತದ್ದಕ್ಕೆ ಲಾರ್ಡ್ ಸೈಡನ್ ಕೋಮಿನ ಹಕ್ಕುಗಳ ಕುರಿತು ಕಠಿಣವಾಗಿ ವಾದಿಸಿದರು. ಪಾರ್ಲಿಮೆಂಟಿನ ಲೇಬರ್ ಪಾರ್ಟಿಗೆ ಉಪನ್ಯಾಸ ಕೊಡುವ ಅನುಕೂಲವನ್ನೂ ಲಾರ್ಡ್ ಸೈಡನ್ ಹ್ಯಾಮ್ ಮುಂತಾದವರು ಏರ್ಪಡಿಸಿ ಕೊಟ್ಟರಂತೆ! ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡಬೇಕೋ, ಬೇಡವೋ ಎಂದು ತೀರ್ಮಾನಿಸಿಕೊಳ್ಳುವ ಬದಲು ಸ್ವಾತಂತ್ರ್ಯ ಕೊಟ್ಟರೆ ಹಿಂದೂ, ಮುಸಲ್ಮಾನ್ ಮುಂತಾದವರು ಅನ್ಯೋನ್ಯ ಹೊಡೆದುಕೊಂಡು ಸತ್ತಾರು ಎಂಬುದನ್ನು ತೋರಿಸುವುದೇ ಹಿಂದೂಸ್ಥಾನದ ಶತ್ರುಗಳ ಕರ್ತವ್ಯವಾಗಿದೆ. ಇದಕ್ಕೆ ಬೇಕಾದ ಅನುಕೂಲಗಳನ್ನೆಲ್ಲಾ ಏರ್ಪಡಿಸಿ ಕೊಡುತ್ತಿರುವಂತೆ ಕಾಣುತ್ತದೆ.

ಈ ಎಲ್ಲಾ ಇಂಗ್ಲೆಂಡಿನ ಸರ್ಕಾರದ ಮಂತ್ರಿ ಮಂಡಲಿಯು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿಲ್ಲ. ಅದು ಮೂರು ಪಾರ್ಟಿಗಳ ಪ್ರತಿನಿಧಿಗಳಿಂದ ಕೂಡಿದ ಮಂಡಲಿಯು. ಅವರೊಳಗೆ ಒಗ್ಗಟ್ಟು ಇರುವಂತೆ ಕಾಣುವುದಿಲ್ಲ. ಆದಕಾರಣ ಬೇಗನೆ ಪಾರ್ಲಿಮೆಂಟಿಗೆ ಕೂಡಲೇ ಹೊಸ ಚುನಾವಣೆ ಆಗಬೇಕೆಂತ ಕೆಲವರು ವಾದಿಸುತ್ತಿರುವಂತೆ ಕಾಣುತ್ತದೆ. ಹಿಂದೂಸ್ಥಾನದ ಸ್ವರಾಜ್ಯ ಸ್ಥಾಪನೆಯ ಕಾರ್ಯವನ್ನು ಮಾರುಗೊತ್ತಿ ಇಂಗ್ಲೆಂಡಿನ ಒಳಗಿನ ಪಾರ್ಟಿ ಹೋರಾಟದಲ್ಲೇ ಬ್ರಿಟಿಷ್ ಸರ್ಕಾರವು ಮಗ್ನವಾಗಿರುವುದಾದರೆ ತಾನು ಹಿಂದೂಸ್ಥಾನಕ್ಕೆ ವಾಪಸು ಹೊರಟು ಹೋಗುವುದಾಗಿಯೂ, ಅನಂತರ ವಿದ್ಯಮಾನವು ಸರಿ ತೋರಿದರೆ ಪುನಃ ಬರುವ ಯೋಚನೆ ಮಾಡುತ್ತೇನೆಂತಲೂ ಮಹಾತ್ಮರು ಎಚ್ಚರಿಸುತ್ತಾರೆ. ಅಲ್ಲದೆ ಇಂಗ್ಲೆಂಡಿನ ಆರ್ಥಿಕ ಸ್ಥಿತಿಯು ಬಿಕ್ಕಟ್ಟಿಗೆ ಬಂದಿರುವುದರಿಂದ ಲೇಬರ್ (ಕೂಲಿಕಾರರ ಪಕ್ಷದವರು) ಸರಕಾರ ಹೋಗಿ ಸಮ್ಮಿಶ್ರ ಸರ್ಕಾರವಾದದ್ದು. ಅದರಿಂದಲೂ ಆ ಸ್ಥಿತಿ ಇಲ್ಲದೆ ಪುನಃ ಹೊಸ ಚುನಾವಣೆಯಿಂದ ಆರ್ಥಿಕ ಸ್ಥಿತಿಯನ್ನು ಸರಿಪಡಿಸಿಕೊಳ್ಳಬಹುದಾಗಿ ಬ್ರಿಟಿಷ್ ಸರ್ಕಾರವು ತಿಳಿದುಕೊಂಡಿದ್ದರೆ ಅದು ತಪ್ಪೆಂತಲೂ, ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟು ಹಿಂದೂಸ್ಥಾನದ ಸ್ನೇಹವನ್ನು ಸಂಪಾದಿಸಿದ ವಿನಹ ಬ್ರಿಟಿಷ್ ಜನಾಂಗದ ಆರ್ಥಿಕ ಸ್ಥಿತಿಯು ಸ್ಥಿರಗೊಳ್ಳುವುದಿಲ್ಲವೆಂತಲೂ ಮಹಾತ್ಮರು ಎಚ್ಚರಿಸಿದ್ದಾರೆ.

ಈ ಸಾರಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರೆತು ಹಿಂದೂಸ್ಥಾನಕ್ಕೆ ತೃಪ್ತಿಯಾಗದಿದ್ದರೆ, ಹಿಂದೂಸ್ಥಾನವು ತನ್ನ ಹೋರಾಟವನ್ನು ನಿಲ್ಲಿಸುವುದಿಲ್ಲವೆಂತಲೂ, ಯುವಕರು ಬ್ರಿಟಿಷ್ ಜನರ ಮೇಲೆ ಇನ್ನೂ ಹೆಚ್ಚು ದ್ವೇಷಿಸಲು ಪ್ರಾರಂಭಿಸಬಹುದೆಂತಲೂ ಮಹಾತ್ಮರು ಎಚ್ಚರಿಸಿದ್ದಾರೆ. ಆದರೆ ಯಾವ ಬ್ರಿಟಿಷ್ ಪಾರ್ಟಿ ಪಕ್ಷಗಳ ಸಮ ಸಂಖ್ಯೆಗೆ ಕೇವಲ ಬಹುಮತ ಸಾಮ್ರಾಜ್ಯವು ಸ್ಥಿರವಾಗಿದ್ದರೆ ಸಾಕೆನ್ನುವ ಕನ್ಸರ್ವೇಟಿವ್ ಪಾರ್ಟಿಯವರೇ ಬಲವಾಗಿ ಈಗಿನ ಮಂತ್ರಿ ಮಂಡಲಿಯು ಹಿಂದೂಸ್ಥಾನಕ್ಕೆ ಸ್ವಯಂ ಆಡಳಿತ ಕೊಡುವ ಬಗ್ಗೆ ಚಿಂತೆಯಾಗುತ್ತಾ ಬರುತ್ತಿದೆ.

ಹಿಂದುಸ್ಥಾನದ ಮೂವತ್ತು ಕೋಟಿ ಜನರನ್ನು ಪುನಃ ಅತಿಕಠಿಣದ ಹೋರಾಟಕ್ಕೆ ಗುರಿಪಡಿಸಿ ಇಷ್ಟು ದೊಡ್ಡ ಜನಾಂಗದ ಖಾಯಂ ಶತ್ರುತ್ವವನ್ನು ಸಂಪಾದಿಸುವ ಬದಲು ಒಂದೇ ನೀಡಿದ ಸ್ನೇಹದ ಹಸ್ತವನ್ನು ಬಿಗಿಯಾಗಿ ಹಿಡಿದು ಹಿಂದೂಸ್ಥಾನದ ಖಾಯಂ ಸ್ನೇಹವನ್ನು ಸಂಪಾದಿಸಿಕೊಳ್ಳುವ ಪ್ರಯೋಜನ ಹೊಂದುವ ಅವಕಾಶವನ್ನು ಬ್ರಿಟಿಷರು ಕಳೆದುಕೊಳ್ಳಬಾರದಾಗಿ ನಂಬುತ್ತೇವೆ. ಹಿಂದೂಸ್ಥಾನವು ಪೂರ್ಣ ಸ್ವಾತಂತ್ರ್ಯವಾಗಲು ಬ್ರಿಟಿಷ್ ಜನಾಂಗವು ಒಪ್ಪಿದರೆ ಹಿಂದೂಸ್ಥಾನದಲ್ಲಿ ತಯಾರಿಸಿಕೊಳ್ಳಲು ಸಾಧ್ಯವಿಲ್ಲದಿರುವ ಬಟ್ಟೆಯನ್ನು ಇಂಗ್ಲೆಂಡಿನಿಂದಲೇ ತರಿಸಿಕೊಳ್ಳುವ ಭಾವನೆ ಕೊಡಬಹುದೆಂದು ಮಹಾತ್ಮರು ಬಟ್ಟೆ ಕಾರ್ಖಾನೆಗಳಿರುವ ಲಾಂಕಶಯರಿನ ಜನರಿಗೆ ತಿಳಿಸಿರುತ್ತಾರೆ. ಇಷ್ಟು ಅಡಿದಾಗಿ ನಡಿಸುವವರು ಇದನ್ನು ನಂಬದೆ ಬ್ರಿಟಿಷ್ ಜನರು ಹಿಂದೂಸ್ಥಾನದ ಸ್ವಾತಂತ್ರ್ಯ ಸ್ಥಾಪನೆಗೆ ಸಹಾಯಕರಾದರೆ ಬುದ್ಧಿವಂತರು. ಇಲ್ಲವಾದರೆ ಹಿಂದುಸ್ಥಾನದ ಜನರು ತತ್ಕಾಲ ಕಷ್ಟಕ್ಕೆ ಗುರಿಯಾಗಬೇಕಾದರೂ ಮಹಾತ್ಮರ ಅಹಿಂಸಾ ಮಾರ್ಗವನ್ನೇ ಅನುಸರಿಸಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯದೆ ಇರುವುದಿಲ್ಲ. ಆಗ ಮಾತ್ರ ಹಿಂದೀಯರಿಂದ ಇಂಗ್ಲೆಂಡಿಗೆ ಯಾವ ತರಹ ಸಹಾಯವಾದರೂ ದೊರಕಬೇಕೆಂತ ಸ್ವಪ್ನದಲ್ಲಿ ಸಹ ಎಣಿಸಕೂಡದು.

ಗಾಂಧೀಯವರಿಗೆ ಗೌರವ.

ಅಮೇರಿಕಾದ ರೆವರೆಂಡ್ ಜೆ ಹೆಚ್. ಹೋಮ್ಸ್‌ರು ಬ ...ವದೇನೆಂದರೆ—

ಮಹಾತ್ಮ ಗಾಂಧಿಯವರು ಅಮೇರಿಕಾಕ್ಕೆ ಬಂದರೆ ನಾ... ...ವಲಂಬಿಸುವ ಮತವೇನೆಂಬದನ್ನು ನಮಗೆ ಅವರು ತಿಳಿಸಿ ...ಡುವುದೇ ಅವರು ಮಾಡುವ ಮೊದಲನೇ ಕೆಲಸ. ಎರ... ಕಾರಣಗಳಿಂದ ಇದು ಆಶ್ಚರ್ಯವಾಗಿ ತೋರಬಹುದು. ಮೊದಲನೇದೇನೆಂದರೆ—ಇವರು ಕ್ರಿಸ್ತಿಯನರಲ್ಲ, ಹಿಂ... ಕ್ರಿಸ್ತಿಯನರ ಸಂಪರ್ಕವಾಗಿದೆ. ಅನೇಕ ಬಾರಿ ಬೈಬಲಿ... ...ತನಗೆ ದೊರೆತ ಸಹಾಯವನ್ನು ಒಪ್ಪಿಕೊಂಡಿರುತ್ತಾರೆ. ...ರೂ ಈಗಲೂ ಅವರ ಪೂರ್ವೀಕರ ಮತವನ್ನೇ ಅನುಸರಿಸು...ರಾಗಿದ್ದಾರೆ.

ಎರಡನೇದೇನೆಂದರೆ—ಗಾಂಧಿಜೀಯವರ ಬಾಹ್ಯಜೀವನದ ...ವನು ಕ್ರಿಸ್ತಿಯನ್ ಆಚರಣೆಗಳೆಂತ ಭಾವಿಸುವ ಯಾವ ...ವೂ ಕಂಡುಬರುವುದಿಲ್ಲ. ಈಚೆಗೆ ಅವರು ಜೈಲಿನಲ್ಲಿ ...ಗ ಅವರ ಆತ್ಮದ ತೃಪ್ತಿಗಾಗಿ ಬೈಬಲನ್ನು ಓದಲಿಲ್ಲ ಗೀ... ...ನ್ನು ಓದುತ್ತಿದ್ದರು. ಅವರ ಪಾಠಶಾಲಾಸಂಸ್ಥೆಯ ...ರ್ಥನೆಗಳಲ್ಲಿ ಕ್ರಿಸ್ತಿಯನರು ನಂಬುವ ದೇವರನ್ನು ನೆನೆಯು... ...ಲ್ಲ ಅವರು ಪೂರ್ವೀಕರ ದೇವರನ್ನೇ ನೆನೆಯುತ್ತಾರೆ. ...ರನ್ನು ಕ್ರಿಸ್ತಿಯನ್ ವಾದಿಯಾಗಿ ಭಾವಿಸಲು ಸಾಧ್ಯವೇ... ದಕ್ಷಿಣ ಅಫ್ರಿಕಾದಲ್ಲಿ ಅವರ ಸ್ನೇಹಿತರು ಸಿ. ಎಫ್. ಆಂಡ್ರೂಸರು ಬೋಧಿಸುತ್ತಿದ್ದ ಕ್ರಿಸ್ತಿಯನ್ ಗುಡಿಗೆ ಒಳ... ಒಂದಾವರ್ತಿ ಹೋದಾಗ್ಯೆ ಆ ಗುಡಿಯ ... ಜನರಿಗೆ ...ವುದಾದ್ದರಿಂದ ಅವರು ಅಲ್ಲಿ ಇರಕೂಡದೆಂತ ಹೊರಕ್ಕೆ ...ಹಿಸಿದರು.

ಗಾಂಧಿಜೀಯವರ ವಿಷಯ ಹೇಳಿದ್ದನ್ನೆಲ್ಲಾ ಯೇಸುಕ್ರಿ... ...ನಿಗೂ ಹೇಳಬಹುದು. ಯೇಸುವು ಕ್ರಿಸ್ತಿಯನಲ್ಲ. ಅ... ...ರು ಯಹೂದಿಯಾಗಿದ್ದರು. ಯಹೂದಿ ಮತಾವಲಂಬಿಗ... ...ಗಿದ್ದರು. ಅವರು ಬೈಬಲಿನ 'ಹೊಸ ಟೆಸ್ಟಮೆಂಟ್' ಎಂ... ಭಾಗವನ್ನು ಓದಿದವರಲ್ಲ. ಅವರು ಕ್ರಿಸ್ತಿಯನ್ ದೇವರ... ...ನ್ನು ಪ್ರಾರ್ಥಿಸುತ್ತಿರಲಿಲ್ಲ. ಯಹೂದಿ ದೇವರಾದ "ಜೆ...ಹೋವಾ"ರನ್ನು ಪ್ರಾರ್ಥಿಸುತ್ತಿದ್ದರು. ಯೇಸುಕ್ರಿಸ್ತರನ್ನು ...ಮ ಗುಡಿಯ ಪಾದ್ರಿಯಾಗಿ ಭಾವಿಸಲು ಆಗುವುದಿಲ್ಲ. ಈ... ಅವರು ನ್ಯೂಯಾರ್ಕಿಗೆ ಒಂದರೆ ಇಲ್ಲಿನ ಯಾವ ಗುಡಿಯೂ ...ಕ್ಕೂ ಅವರನ್ನು ಹೋಗಗೊಡರು. ಇದರಿಂದೆಲ್ಲಾ ತಿಳಿಯ... ...ದೇನೆಂದರೆ—ಕ್ರಿಸ್ತ ಧರ್ಮವೆಂಬುದು ಹೊರಗಿನ ಆಚರಣೆಯ...ಲ್ಲ. ಜೀವನದಲ್ಲಿದೆ. ದಯೆ, ಕೆಟ್ಟದ್ದಕ್ಕೆ ವಿರೋಧ, ದ... ...ತ್ಯಾಳಿಕೆಯನ್ನು ಕಂಡರೆ ಭೀತಿ, ಮನುಷ್ಯ ಜಾತಿಯ ಮೇಲೆ ...ೀತಿ, ನಮ್ಮ ಶತ್ರುಗಳನ್ನಾದರೂ ಮನ್ನಿಸುವ ಗುಣ ಇವೇ ...ಕ್ರಿಸ್ತಧರ್ಮದ ಸಾರ. ಭೂಮಿ ಮೇಲೆ ಈಗ ಇರುವ ...ರ್ವರಿಗಿಂತಲೂ ಹೆಚ್ಚಾಗಿ ಮಹಾತ್ಮ ಗಾಂಧಿಯವರು ಯೇ...ಸುವು ಜೀವಿಸಿ ತೋರಿಸಿದ ಜೀವನವನ್ನು ಅನುಸರಿಸಿ ತೋರಿ...ಸುತ್ತಿದ್ದಾರೆ. ಆದ್ದರಿಂದ ನನಗೆ ತಿಳಿದ ಬೇರೆಯವರಿಗಿಂತಲೂ ...ವರು ಈ ಹಿಂದೂಸಾಧುವು ನಾವು ದೊಡ್ಡದಾಗಿ ಹೇಳಿಕೊ...ಳ್ಳುವ ಆದರೆ ಅತಿ ಸ್ವಲ್ಪವಾಗಿ ಆಚರಿಸುವ ಕ್ರಿಸ್ತಧರ್ಮವನ್ನು ...ಧರ್ಮಬೋಧಿಸಲು ಇವರು ಅರ್ಹರೆಂತ ನಾನು ನಂಬುತ್ತೇನೆ.

ಗಾಂಧಿಯವರು ನಮಗೂ ಪ್ರಪಂಚಕ್ಕೂ ...ಕೊಡಬ...ಹುದಾದ ಇನ್ನೊಂದು ಸಂಗತಿ ಯಾವದೆಂದರೆ— ಸುಲಭ ಜೀ...ವನ. ... ಕಾಲದಲ್ಲಿ ಆಸ್ತಿ ವಾಸ್ತಿಗಳ ತೊಡಕಿಲ್ಲದೆ ಇ...ರುವ ಸುಲಭ ಜೀವನವೇ ಅಮೇರಿಕಾ ನಮಗೊಂದು ಧ್ಯೇಯವಾ...ಗಿತ್ತು. ಆ ಧ್ಯೇಯವು ಅವಶ್ಯಕತೆಯಿಂದ ಕೈಕೊಳ್ಳಬೇಕಾಗಿ... ... ಅನೇಕ ವರ್ಷಗಳ ವರೆಗೆ ಈ ಧ್ಯೇಯವೇ ಜಾರಿಯಲ್ಲಿ... ... ಈಚೀಚೆಗೆ ಐಶ್ವರ್ಯದ ಭಾರವೇ ಹೆಚ್ಚಾಯಿತು.

ಅಮೇರಿಕಾದ ಸುಖಜೀವನದ ಮಧ್ಯೆ ಬರೀ ಮುಂಡು... ...ಟ್ಟು, ಬರೀ ಕಾಲಿನ, ಅಲ್ಪ ಸ್ವಲ್ಪ ಖರ್ಜೂರದಿಂದ ಮತ್ತು ... ...ದಿನ ಹಾಲಿನಿಂದ ಜೀವ ಧಾರಣೆ ಮಾಡುವ ನೆಲದ ಮೇಲೆ ಮ...ಲಗುವ ಗಾಂಧಿಯವರು ಈ ಊರಿಗೆ ... ವುದೆಂದರೆ—ವಿಚಿತ್ರ...ವಾಗಿ ಕಾಣುವುದು. ಆದರೆ ಈ ಲಂಗೋಟಿ, ಈ ಒಣ ಕಾ...ಲು, ಈ ಆಡಿನ ಹಾಲು ಇವು ಇಂಡಿಯಾದ ಸ್ವಾತಂತ್ರ್ಯದ ಹೋರಾಟದ ಕುರುಹಲ್ಲ. ಯೇಸುವು ಬೋಧಿಸಿದ "ದೇಹ...ಕ್ಕಿಂತ ಆತ್ಮ ದೊಡ್ಡದು" ಎಂಬ ತತ್ವವನ್ನು ಆಚರಿಸಿ ಒಂದು ... ...ಭವದ ಕುರುಹು ಎಂತ ತಿಳಿಯಬೇಕು.

ಗಾಂಧಿಯವರು ಈ ಸುಲಭ ಜೀವನದ ಗೂಢವನ್ನು ಅರಿ...ತು ಬೋಧಿಸುವುದೂ ಅಲ್ಲದೆ ಅದರ ಶಕ್ತಿಯನ್ನು ಸಹ ... ...ಂಗಪಡಿಸಿದ್ದಾರೆ. ಈಗ ಮಹಾತ್ಮ ಗಾಂಧಿಯವರು ತನ್ನ... ...ಜನಂಗಾಗಿ ನಡಿಸುತ್ತಿರುವ ಹೋರಾಟದಲ್ಲಿ ಅವರು ಕಳಕೊ...ಳ್ಳಲು ಏನೂ ಇಲ್ಲ. ಆದ್ದರಿಂದ ಫಲಿತಾಂಶದ ಹೆದರಿಕೆಯಿ... ...ದ ಬಡ ಗಡೆ ಹೊಂದಿದ್ದಾರೆಂಬದರಲ್ಲೇ ಅವರ ಒಂದು ಗುಟ್ಟು ... ...ತಿಂವುದು ಈ ಪ್ರಪಂಚದಲ್ಲಿ ನಿಮಗೆ ಎಷ್ಟೆಷ್ಟು ಹೆಚ್ಚು ಆ...ಸ್ತಿ ಇದೆಯೋ ಅಷ್ಟನ್ನು ನಿಮಗೆ ಒಳ ಕಟಿವೆ. ತುಂಬಾ ಆಸ್ತಿ ಹಣ ಇರುವವನಿಗೆ ತನ್ನ ಆಸ್ತಿ ವಾಸ್ತಿಗಳು ಎಂದು ಹೋದೀತೋ ಹೇಗೆ ಹೋದೀತೋ ಎಂಬ ಭೀತಿಯಲ್ಲಿರುವು...ದು. ರಾಜ್ಯ, ಐಶ್ವರ್ಯ, ವ್ಯಾಪಾರವಿರುವ ಜನಾಂಗಕ್ಕೇ...ನೇ ಯುದ್ಧದ ಭಯವಿರುವುದು ಎಂಬುದನ್ನು ನೀವು ಯೋ...ಚಿಸಿ ನೋಡಿದ್ದೀರೋ? ಒಡವನೇ ಹೆದರುವುದಿಲ್ಲ, ಬಿಕ್ಷ... ...ನಾಂಗಕ್ಕೇನೇ ಭೀತಿ ಇಲ್ಲ.

ಕರಾಚಿಯಲ್ಲಿ ಕಾಂಗ್ರೆಸಿಗೀಗ ಹೋಗಿದ್ದಾಗ ಸಾಮ್ಯ...ವಾದಿಗಳು ಅವರನ್ನು ಖಂಡಿಸಿ ಅವರ ಮೇಲೆ ಬೀಳುವ ಯೋ...ಚನೆಯಿಂದ ಸಹ ಅವರ ಭೇಟಿಗೆ ಹೋದ ವರ್ತಮಾನ ವಾಚ...ಕರು ತಿಳಿದಿರಬಹುದು. ಒಬ್ಬ ಬ್ರಿಟಿಷ್ ಆಫೀಸರನ್ನು ಕೊಂ...ದ ಮೂವರು ಹಿಂದೀಯರನ್ನು ಬ್ರಿಟಿಷ್ ಸರಕಾರವು ಕೊಲ್ಲಿ...ಸಿದ ಸಮಯದಲ್ಲಿ ಕರಾಚಿಯಲ್ಲಿ ಕಾಂಗ್ರೆಸ್ ಕೂಡಿತ್ತು. ಈ ಮೂವರ ಜೀವವನ್ನು ಉಳಿಸಲಿಲ್ಲವೆಂತ ಸಾಮ್ಯವಾದಿಗಳು ಗಾಂಧಿಯವರನ್ನು ಆಕ್ಷೇಪಿಸಿದರು. ಅವರನ್ನು ಕೊಲ್ಲುತ್ತೇವೆ ...ರು ಅಥವಾ ಘಾಯವನ್ನಾದರೂ ಮಾಡುತ್ತಿದ್ದರು. ಆದರೆ ಗಾಂಧಿಯವರ ಹಿಂಬಾಲಕರು ಅವರನ್ನು ರಕ್ಷಿಸಿದರು. ಸಾಮ್ಯವಾದಿಗಳ ಪ್ರತಿನಿಧಿಗಳು ಅನಂತರ ಗಾಂಧಿಯವರ ಭೇ...ಟಿಗೆ ಬಂದರು. ಈ ಭೇಟಿಯ ಕಾಲದಲ್ಲಿ ತಾನೊಬ್ಬನೇ ಇ...ರಬೇಕೆಂತ ಗಾಂಧಿಯವರು ಹೇಳಿದರು. ಈ ಹಿಂಸಾವಾದಿಗ...ಳಾದ ಯುವಕ ಹಿಂದೀಯರ ಹೇಳಿಕೆಯನ್ನು ಅವರ ನಮ್ರತೆ...ಯಿಂದಲೂ ತಾಳ್ಮೆಯಿಂದಲೂ ಕೇಳಿದರು. ಆಗ ಮಹಾತ್ಮ...ರು ಮಾತಾಡಿದರು. ಮಹಾತ್ಮರಿಂದಲೇ ಹೀಗೆ ಮಾತಾಡ...ಲು ಸಾಧ್ಯವಿತ್ತಷ್ಟೆ—'ನೀವು ನನ್ನನ್ನು ಹೊಡೆದರೂ ನಾನು ಪ್ರತಿಕಾರ ಮಾಡುವುದಿಲ್ಲ. ನನಗೆ ಅಂಗರಕ್ಷಕರಿಲ್ಲ. ದೇ...ವರೇ ನನ್ನ ಕಾಗರಕ್ಷಕ ... ... ನ...ನ್ನ ಶತ್ರುಗಳ ಮೇಲೆ ನನಗೆ ಇರುವ ಪ್ರೀತಿಗಾಗಿ ನನ್ನನ್ನು ಹು...ಚ್ಚನೆಂತ ಕೆಲವರು ಭಾವಿಸುತ್ತಾರೆ. ...ದರೆ ಶತ್ರುವನ್ನು ಪ್ರೀ...ತಿಸುವುದೇ ನನ್ನ ಜೀವನದ ಆಧಾರವಾಗಿದೆ. ಕಳಕೊಳ್ಳಲಿಕ್ಕೆ ನನಗೇನೂ ಇಲ್ಲ. ನಾನು ಭಿಕ್ಷುಕನು ಪವಿತ್ರವಾದ ಅಹಿಂ...ಸಾ ... ಹಿಂದೂಸ್ಥಾನವನ್ನು ಕ್ಯಾಬಿಸಿದಾಗ ನನ್ನ ಈ ... ... ನಾನು ಹಿಂದೂಸ್ಥಾನಕ್ಕೆ ... ...ದಕ ಮಾಡುತ್ತಿದ್ದೇನೆಂತ ನೀವು ಹೇಳುವುದಾದರೆ ಹಾಗೆ ... ...ಲು ವಿಶೇಷ ಅಡ್ಡಿ ಇಲ್ಲ. ಆದರೆ ನಿಮ್ಮನ್ನು ಪ್ರೀತಿಯ ... ...ತ ದದಾರಿಗೆ ತಿರುಗಿಸಲು ಪ್ರಯತ್ನಿಸುವುದು ನನ್ನ ಕರ್ತವ್ಯ...ವಾಗಿದೆ. ನಿಮ್ಮ ಮೇಲೆ ಪ್ರೀತಿಯಲ್ಲದೆ ಬೇರೆ ಆಯುಧ ನ...ನ್ನಲ್ಲಿಲ್ಲ. ನನ್ನನ್ನು ಕಾದುಕೊಳ್ಳುವ ಭಾರವನ್ನು ಯಾರೂ ವಹಿಸಿಕೊಳ್ಳಬೇಕಾಗಿಲ್ಲ. ದೇವರಿಂದಲೇ ಅದು ಸಾಧ್ಯವ...ಷ್ಟೆ.' ಗಾಂಧಿಯವರು ಮಾತಾಡಿ ಪೂರೈಸುವ ಮುಂಚೆ ಅವ...ರ ವಿರೋಧಿಗಳು ಪಶ್ಚಾತ್ತಾಪಪಟ್ಟು ಹೊರಟು ಹೋದರೆಂತ ಪ...ತ್ರಿಕೆಗಳಲ್ಲಿ ಬರೆದಿತ್ತು.

ನಾವು ಅಮೇರಿಕಾದವರು ಐಹಿಕಭೋಗಗಳಿಗೆ ಕಟ್ಟುಬಿ...ದ್ದಿದ್ದೇವೆ. ಈಗ ಆರ್ಥಿಕ ದುಸ್ಥಿತಿ ಬಂದಾಗ ಸಂಕಟಪಡು...ತ್ತೇನೆ. ರಾಜಕೀಯ ಅಪ್ರಮಾಣಿಕತೆಯನ್ನು ನೋಡಿದ...ರೂ ಪಶ್ಚಾತ್ತಾಪ ಹುಟ್ಟುವುದಿಲ್ಲ. ಈಗಿನ ಆರ್ಥಿಕ ಸ್ಥಿತಿ...ಯಿಂದ ಲಕ್ಷಾಂತರ ಜನರಿಗೆ ಅನ್ನವಿಲ್ಲದೆ ಹೋಗಿದೆಯೆಂಬುದು ... ...ಜನದ ಸಂಗತಿಯೇ ಆಗಿದೆ. ಆದರೆ ... ದೃಷ್ಟಿ ನಮಗೆ ಇದ್ದಿದ್ದರೆ ಈ ಸ್ಥಿತಿಯಿಂದ ಒಳ್ಳೇ ಪ್ರಯೋಜನ ... ದಕ್ಕೊಳ್ಳುವ ಅವಕಾಶ ದೊರಕಿತೆಂತ ಸಂತೋಷಪಡುತ್ತಿದ್ದೆವು.

ಮೂರು ವರ್ಷಗಳ ಕೆಳಗೆ ಒಬ್ಬ ಒಳ್ಳೇ ನಡತೆಯ ನ...ಡ್ಗ್ಲಿಷನ್ನರು ಇಂಡಿಯಾಕ್ಕೆ ಹೋಗಿ ಗಾಂಧಿಯವರನ್ನು ನೋ...ಡಿದರು. ಅವರು ಜೀವನದ ರೀತಿಯಲ್ಲಿ ಎಲ್ಲಾ ಅಮೇರಿ...ಕಾದವರಂತೆ ಇದ್ದರು. ಗಾಂಧಿಜೀಯವರ ಮುಂದೆ ನೀವು ಕೂತಿರುವಾಗ ಹೇಗಾಯಿತು ಎಂತ ಕೇಳಿದ್ದಕ್ಕೆ ಅವರ ಮುಂ...ದನ್ನು ನೋಡುವಾಗ ನನ್ನ ಸೊಗಸಾದ ದುಸ್ತುಕ ವಿಷಯ ಜೀ...ಕಿ ... ನನ್ನ ಮನಸಿಗೆ ಬರಲಿಲ್ಲ. ಅವರ ದೈವೀಕವಾದ ಅರ್ಧನಗ್ನ ದೇಹವನ್ನು ನೋಡುವಾಗ ನನ್ನ ಸುಖಜೀವನದ ...ನ್ನ ಸುಖವಿರು... ತೊಪ್ಪಿದ ದೇಹವನ್ನು ನೆನೆಸಿ ... ದೇಹದ ...ಲ್ಲ ... ಕತ್ತು ... ಇಡುತ್ತಿದ್ದೇನೆಂತ ಜ್ಞಾನವು ನನ್ನ ದೇಹದ ...ಲ್ಲಿ ... ... ಬರುತ್ತಿತು.

...ಹಾತ್ಮ ಗಾಂಧಿಯವರು ಜಡಪೇಕ್ಷೆಂತ, ಒಡವು ...ಂಚಕ್ಕಿಂತ ಜೀವಾಂಶ ಪರಮಾತ್ಮನೆಂಬ ನಿಪ್ಪಾನೆಂಬುದನ್ನು ಐಶ್ವರ್ಯದ ಸುಖಭೋಗದಲ್ಲಿ ಮುಳುಗಿರುವ ನಮಗೆ ಜ್ಞಾ... ...ಪಿಸುತ್ತಿದ್ದಾರೆ. ಗಾಂಧಿಯವರು ಪ್ರತಿನಿತ್ಯವೂ ಬೆಳಿಗ್ಗೆ ಸಾಯಂಕಾಲ ದೇವರ ಪ್ರಾರ್ಥನೆ ... ಕೊಂಡಿದ್ದಾರೆ ವಾರಕ್ಕೊಂದು ದಿನ ಮೌನವಾಗಿದ್ದು ದೇವರ ಪ್ರಾರ್ಥನೆಯ...ಲ್ಲಿ ಮಗ್ನರಾಗಿ ಆತ್ಮಶಕ್ತಿ ಪರಮಾತ್ಮನಿಗೂ ಇರುವ ಸಂಬಂ...ಧವನ್ನು ನೆನೆಸಿಕೊಳ್ಳುತ್ತಾರೆ. ಪ್ರಪಂಚದ ಪರಮಾವಧಿ ... ತ ಸತ್ಯತ್ವವನ್ನು ಕಾಣುತ್ತಿದ್ದಾರೆ. ಐಹಿಕ ಸುಖಭೋಗ...ಗಳ ಮೇಲಾಟದಲ್ಲಿ ಪರಮಾತ್ಮನ ಇರುವಿಕೆಯನ್ನು ಜ್ಞಾಪ... ...ಕ್ಕೆ ತಂದು ಸ್ವಲ್ಪ ವಿಶ್ರಾಂತಿ ಕೊಡುವುದು ಅವಶ್ಯ. ಇದು ಮಹಾತ್ಮ ಗಾಂಧಿಯವರಿಂದ ಸಾಧ್ಯವಿದೆ.

ಲಾರ್ಡ್ ಇರ್ವಿನರ ಸಂಗಡ ದೀರ್ಘಕಾಲ ಚರ್ಚೆ ನಡೆ... ...ದ ಮೇಲೆ ಲಾರ್ಡ್ ಇರ್ವಿನರು ಸೋತಿದ್ದರು. ಗಾಂಧಿ...ಯವರು ಏನೂ ಸೋತಿರಲಿಲ್ಲ. ಆದರೆ ಅವರ ದೇಹವು ...ಕೃಶ—ಶಕ್ತ ಕಡಿಮೆ. ಆಗ ತಾನೇ ಹಿಂದೂಸ್ಥಾನದ ಜೈ...ಗೆ ಸುಲ್ಲಿ ೩ ತಿಂಗಳ ಸೆರೆವಾಸವನ್ನು ಭರಿಸಿ ಬಂದಿದ್ದರು. ಕೆ... ...ಟ್ಯಾಂತರ ಜನರ ಸುಖದುಃಖದ ಜವಾಬ್ದಾರಿಯನ್ನು ವಹಿ... ...ರುವ ಇವರಿಗೆ ಇಷ್ಟೆಲ್ಲಾ ಶಕ್ತಿ ಹೇಗೆ ಬಂತು? ಇದಕ್ಕೆ ಗಾಂ...ಧಿಯವರು ಉತ್ತರಕೊಟ್ಟರು.—

'ಶುದ್ಧ ಹೃದಯ, ಶುದ್ಧ ಮನಸಾಕ್ಷಿ, ಗಳಿಗಳಿಗೆಯಾಗ...ದ ತಲೆ, ದೇವರ ಪ್ರಾರ್ಥನೆ, ದೇಹದಬಳಿಸುವ ಆಯಾಸದ ಮತ್ತ...ು ಸುಖಗಳ ವರ್ಜನೆ ... ... ಮತ್ತು ಮನಸ್ಸಿನಲ್ಲಿ ತಕ್ಕ... ...ಗ, ಮಾಂಸವಿಲ್ಲದ ಆಹಾರ ಎಲ್ಲಾ ಜೀವರಾಶಿಗಳ ಮೇಲೆ ಪ್ರೀತಿ "

ಪ್ರಾರ್ಥನೆ.

ಮಹಾತ್ಮ ಗಾಂಧಿಯವರು "ರಾಜಪುತಾನ" ಪಡಗದ...ಲ್ಲಿ ಸಾಯಂಕಾಲ ಪ್ರಾರ್ಥನೆಯಾದ ನಂತರ ಕೇಳಿದ ಸವಾ...ಲುಗಳಿಗೆ ಕೊಟ್ಟ ಜವಾಬುಗಳು—

"ಪ್ರಾರ್ಥನೆ" ಯ ಕುರಿತು ತಮ್ಮ ಅನುಭವವನ್ನು ಹೇಳಬೇಕೆಂತ ಕೇಳಿದ್ದಕ್ಕೆ ಹೇಳಿದ್ದೇನೆಂದರೆ—

ಪ್ರಾರ್ಥನೆಯೇ ನನ್ನ ಜೀವನದ ಆಧಾರ. ಪ್ರಾರ್ಥನೆ...ಯ ಸಹಾಯವಿಲ್ಲದಿದ್ದರೆ ನಾನು ಎಂದೋ ಹುಚ್ಚನಾಗಿರು...ತ್ತಿದ್ದೆ. ನನ್ನ ಜೀವನ ಚರಿತ್ರೆಯಿಂದ ನಾನು ಸಾರ್ವಜನಿಕ ಮತ್ತು ಸ್ವಂತ ಕಷ್ಟಗಳಿಗೆ ಒಳಗಾಗಿದ್ದೇನೆಂತ ತಿಳಿದೀತು. ಅಂಥಾ ಸಂದರ್ಭಗಳಲ್ಲಿ ನನಗೆ ದಿಕ್ಕು ತೋರದೆ ಹೋಗುತ್ತಿತ್ತು. ಆದರೆ ಪ್ರಾರ್ಥನೆಯ ಸಹಾಯದಿಂದ ಅಂಥಾ ದು...ಸ್ಥಿತಿಯಿಂದ ಬಿಡುಗಡೆ ಹೊಂದುತ್ತಿದ್ದೆನು. ಸತ್ಯವು ನನ್ನ ಜೀವನದ ಭಾಗವೇ ಆಗಿರುವಂತೆ ಪ್ರಾರ್ಥನೆಯು ಆಗಿರಲಿಲ್ಲ. ಅದು ಅವಶ್ಯಕತೆಯಿಂದಲೇ ಬಂದದ್ದಾಗಿದೆ. ಪ್ರಾರ್ಥನೆಯ ಸಹಾಯವಿಲ್ಲದೆ ನನಗೆ ಸುಖವೇ ಇಲ್ಲವೆಂತಾಯಿತು. ದೇ...ವರಲ್ಲಿ ನನ್ನ ನಂಬಿಕೆ ಹೆಚ್ಚಾದಂತೆಯೇ ಪ್ರಾರ್ಥನೆಯ ಮೇಲೆ ನನ್ನ ಕುತೂಹಲವು ಹೆಚ್ಚುತ್ತಾ ಬಂತು. ಪ್ರಾರ್ಥನೆ ಇಲ್ಲ...ದೆ ಜೀವನವೇ ನಿಸ್ಸಾರವಾಗಿ ತೋರುತ್ತದೆ. ದಕ್ಷಿಣ ಅಫ್ರಿ...ಕದಲ್ಲಿ ಕ್ರಿಸ್ತಿಯನ್ ಪ್ರಾರ್ಥನೆಗಳಿಗೆ ಸೇರಿದ್ದೆ. ಅದು ನನ್ನ ... ... ಆ ಪ್ರಾರ್ಥನೆಗೆ ಸೇರಲು ಸಾಧ್ಯ... ... ಅವರು ದೇವರನ್ನು ಬೇಡಿಕೊಳ್ಳುತ್ತಿದ್ದರು. ... ... ಆಗಲಿಲ್ಲ ... ಪ್ರಾರ್ಥನೆಯಲ್ಲಿ ನನಗೆ ... ... ಇರಲಿಲ್ಲ. ಅನಂತರ ಪ್ರಾರ್ಥನೆ ... ... ಜೀವನವೇ ವ್ಯರ್ಥವಾಗಿ ತೋರುತ್ತಾ ಬಂತು. ದೇಹ...ಕ್ಕೆ ಆಹಾರದ ಅವಶ್ಯಕತೆಯಂತೆ ಆತ್ಮಕ್ಕೆ ಪ್ರಾರ್ಥನೆಯು ಅವ...ಶ್ಯಕತೆ ಹೆಚ್ಚಾಗಿದೆ. ... ...—ದೇಹವನ್ನು ಆರೋಗ್ಯವಾಗಿ ... ... ಕೆಲವು ಸಾರಿ ಉಪವಾಸದ ಅವಶ್ಯಕತೆ ಇದೆ. ಆದರೆ ಪ್ರಾರ್ಥನೆಯಲ್ಲಿ ಉಪವಾಸವೆಂತ ಇಲ್ಲವೇ ಇಲ್ಲ. ಪ್ರಾರ್ಥನೆಯು ಹೆಚ್ಚಾಯಿತೆಂತಲೇ ಇಲ್ಲ. ಪ್ರಪಂಚದ ಬೋಧಕರಲ್ಲಿ ಅತಿ ಮುಖ್ಯ ಪ್ರಮುಖರಲ್ಲಿ ಮೂವರಾದ ಬು...ದ್ಧ, ಯೇಸು, ಮತ್ತು ಮಹಮ್ಮದ್ ಇವರು ತಮ್ಮ ಪ್ರಾ...ರ್ಥನೆಯಿಂದಲೇ ತಮಗೆ ಜ್ಞಾನ ಬಂತೆಂತಲೂ, ಪ್ರಾರ್ಥನೆ ಇ...ಲ್ಲದೆ ಜೀವಿಸುವುದೇ ಸಾಧ್ಯವಿರಲಿಲ್ಲವೆಂತಲೂ ನಿರಾಕ್ಷೇಪ...ವಾದ ಆಧಾರ ಕೊಟ್ಟಿದ್ದಾರೆ. ಅಷ್ಟು ದೂರದ ಆಧಾರವೇ...ಕೆ? ಕೋಟ್ಯಾಂತರ ಹಿಂದು, ಮುಸಲ್ಮಾನ್, ಕ್ರಿಸ್ತಿಯನರಿಗೆ ಜೀವನದಲ್ಲಿ ಪ್ರಾರ್ಥನೆಯಿಂದಲೇ ಶಾಂತಿ ದೊರಕುತ್ತದೆ. 'ಇವರು ಸುಳ್ಳುಗಾರರೇ' ಆತ್ಮ ವಂಚನೆಗೆ ಒಳಗಾದವರೇ? ... ... ಸುಳ್ಳಾದರೆ ಸತ್ಯಾನ್ವೇಷಕನಾದ ನನಗೆ ... ಅಂಥಾ ಸುಳ್ಳಲ್ಲೇ ನನ್ನ ಜೀವನದ ಆಧಾರವಿ...ದೆ. ಅದರ ಸಹಾಯವಿಲ್ಲದೆ ನಾನು ಒಂದು ಕ್ಷಣವಾದರೂ ಜೀವಿಸಲಾರೆ. ರಾಜಕೀಯ ರಂಗದಲ್ಲಿ ಕಗ್ಗತ್ತಲೆಯಾಗಿ ತೋರಿದರೂ ನನ್ನ ಶಾಂತಿಗೆ ಏನೂ ಭಂಗವಿಲ್ಲ. ನನ್ನ ಶಾಂತಿಯನ್ನು ನೋಡಿ ಹೊಟ್ಟೆ ... ಪಡುವವರನ್ನು ನಾನು ನೋಡಿದ್ದೇನೆ. ಆ ಶಾಂತಿಯು ಪ್ರಾರ್ಥನೆಯಿಂದಲೇ ನನಗೆ ದೊರೆತಿರುವುದು. ನಾನು ವಿದ್ಯೆಯಲ್ಲಿ ಪಂಡಿತನಲ್ಲ. ಆದ...ರೆ ಪ್ರಾರ್ಥನೆಯ ಪ್ರಿಯ. ಪ್ರಾರ್ಥನೆಯ ರೂಪವು ಯಾ...ವದೊಂದರಲ್ಲಿ ನನಗೆ ನಿಗವಿಲ್ಲ. ಆ ವಿಷಯದಲ್ಲಿ ಅವರವ...ರಿಗೆ ಯುಕ್ತ ತೋರಿದ ದಾರಿಯನ್ನು ಅನುಸರಿಸಬಹುದು. ಆ...ದರೆ ಕೆಲವು ನಿಶ್ಚಿತ ದಾರಿಗಳಿವೆ. ಅಂಥಾ ಸವೆದ ಪುರಾತನದ ಬೋಧಕರು ತೋರಿದ ದಾರಿಯನ್ನೇ ಉಪಯೋಗಿಸುವದು ಮೇ...ಲು. ... ... ನನ್ನ ಅನುಭವದ ಸಾಕ್ಷಿ. ಪ್ರತಿಯೊಬ್ಬನೂ ಪ...ರೀಕ್ಷಿಸಿ ... ಪ್ರತಿ ನಿತ್ಯದ ಪ್ರಾರ್ಥನೆಯಿಂದ ತನ್ನ ಜೀವನಕ್ಕೆ ಹೊಸತೊಂದನ್ನು ಆಪ್ಪರವಶನ್ನು ಕೂಡಿಸಲು ಆಗದಿರುವ ಧೈರ್ಯವನ್ನು ... ... ಅನುಭವಿಸಿ ನೋಡಬ...ಹುದು.

ಇನ್ನೊಬ್ಬ ... ಕೇಳಿದ್ದು—'ಸ್ವಾಮಿ ನೀವು ಜೀವದಲ್ಲಿ ... ... ನಾವು ನಂಬಿಕೆ ಇ...ಲ್ಲದವರಾ...ದ್ದೇವೆ—ಹೀಗಾದರೆ ನಾವು ಹೇಗೆ ಪ್ರಾರ್ಥಿಸು...ವುದು?'

ನಿಮ್ಮಲ್ಲಿ ದೇವರ ಮೇಲೆ ನಂಬಿಕೆ ಹುಟ್ಟಿಸುವುದು ನನ್ನಿಂ...ದ ಸಾಧ್ಯವಿಲ್ಲ. ಕೆಲವು ಸಂಗತಿಗಳು ಸ್ವತಃ ಸಿದ್ಧವಾಗಿವೆ. ಕೆಲವನ್ನು ಸಿದ್ಧಪಡಿಸುವ ಸಾಧ್ಯವೇ ಇಲ್ಲ. ದೇವರ ಇ...ರುವಿಕೆಯ ಗಣಿತ ಶಾಸ್ತ್ರದ ಸತ್ಯದಂತೆ. ಅದು ನಮ್ಮ ಹೃದಯಕ್ಕೆ ಗೋಚರವಾಗದೆ ಇರಬಹುದು. ಒಬ್ಬನಿಗೆ ನೋ... ... ದೇವರ ಇ...ರುವಿಕೆಯನ್ನು ತಿಳಿಯುವುದು ಅಸಾಧ್ಯ. ಕಾರಣಗಳನ್ನು ಕೊಟ್ಟು ದೇವರು ಇದ್ದಾನೆಂತ ನಿಮಗೆ ಒಪ್ಪಿಸುವುದು ಸಾಧ್ಯ...ವಿಲ್ಲ. ಯಾಕೆಂದರೆ—ದೇವರ ಇರುವಿಕೆಯು ಕಾರಣಗಳನ್ನು ಕೊಟ್ಟು ಒಪ್ಪಿಸಲು ಸಾಧ್ಯವಿರುವ ಸಂಗತಿಯಲ್ಲ! ಪ್ರಪಂ...ಚದ ಕೆಲವು ವಿದ್ವಾಂಸರಿಂದ ದೇವರು ಇದ್ದಾನೆಂತ ತಿಳಿ...ಯಬಹುದು. ಆದರೆ ಅಂಥಾ ಸಾಧನೆಗಳನ್ನು ಕೊಟ್ಟು ... ನಮ್ಮ ಬುದ್ಧಿಗೆ ಆಕ್ಷೇಪಣೆ ತೆಗೆಯುವುದಿಲ್ಲ. ಕಾರಣಗಳಿಂದ ... ... ಬಿಟ್ಟು ಮಕ್ಕ...ಳಂತೆ ... ... ನಂಬಿಕೆಯಂತೆ ದೇವರಿದ್ದಾನೆಂತ ನಂಬಲು ಪ್ರಾರಂಭಿಸಿ... ನಾನು ಇದ್ದೇನಾದರೆ ದೇವರು ಇದ್ದಾರೆ. ನನ್ನ ಜೀವನಕ್ಕೆ ... ... ಬೇಕಾದದ್ದು ಅವಶ್ಯ ಅದರಂತೆಯೇ ಕೋ...ಟ್ಯಾಂತರ ಜನರಿಗೆ ಸಹ ಅವಶ್ಯವಿದೆ. ಆದರೆ ಅವರಿಗೆ ಅವರ

Reg. No. M. 1930
If not delivered please return to
"KODAGU" OFFICE MERCARA.

ಕೊಡಗು.

ಸರ್ವೇಷ ಭೂತದಯಯಾ ವಿದ್ಯಾ ಶೀಲ ಪ್ರಯುಕ್ತತಾ / ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೧ನೇ ಇಸವಿ ಸೆಪ್ಟೆಂಬರ್ ತಾರೀಕು ೨೫ ನೇ ಶುಕ್ರವಾರ.	ಸಂಚಿಕೆ ೧೭

Telegrams — "Precious"

V. Subramaniyer
Jeweller,

Telephone — 3145

DIAMOND MERCHANT GOLD & SILVER SMITH.

Deals in all:-
SPORTS CUPS in all prices
MEADALS in up-to-date patterns
CASKETS in elegant styles

Nos. 2 & 3, Kuppumuthu st,
TIRUVATESWARANPET,
Post Box 423, Triplicane P. O.,
MADRAS.

Deals in all:-
GEM-SET JEWELS, set with Diamonds, Rubies etc.,
GOLD ARTICLES of all patterns
SILVER WARE in latest style

52—45



ಕೋವಿಗಳು, ಕತ್ತಿಗಳು, ಬಿಲ್ಲೆಗಳು, ... ಮದ್ದುಗುಂಡು ... ನಾನುಗಳು ಬಹು ಕಡಿಮೆ ದರದಲ್ಲಿ ದೊರೆಯುತ್ತವೆ

GOOLAMHUSAIN ALLIBHOY & SONS
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24—2

ಮತಿ ಜ್ವರಕ್ಕೆ
ರಾಮಬಾಣ ಕಷಾಯ

[illegible]

ಆರ್ಡರಿಗೆ ... 1—8—0, 3ಕ್ಕೆ ರೂ. 4—0—0, 6ಕ್ಕೆ ರೂ. 7—8—0, 12ಕ್ಕೆ ರೂ. 14

[illegible] ... 1, 3, 5ಕ್ಕೆ ರೂ. 1—4—0, 3—0—0, 5—12—0

[illegible] ... 3—8—0

[illegible] ... 2—10—0

[illegible] ... 5—8—0

ವಿಳಾಸ—ಮಹಾಲಕ್ಷ್ಮಿ ಔಷಧಾಲಯ, ... ಬೆಂಗಳೂರು.

52—20

ಬಾಲಾರ್ಕಮಧು.

[illegible]

[illegible]

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.
(ಮೈಸೂರು ಸ್ಟೇಟು.)

52—37

ವಿಷಯ ಮಾತಾಡಲು ಸಾಧ್ಯವಿರಲಾರದು. ಆದರೆ ಆ ನಂಬಿಕೆಯು ಅವರ ಧೈರ್ಯದಿಂದ ಅವರ ಜೀವನದ ಭಾಗವೇ ಆಗಿದೆಯೆಂತ ಕಂಡು ಬರುತ್ತಿವೆ. ಕಳೆದು ಹೋದ ನಂಬಿಕೆಯನ್ನು ಪುನಃ ಹುಟ್ಟಿಸಿಕೊಳ್ಳಬೇಕೆಂತ ನಾನು ಹೇಳುವುದಾಗಿದೆ. ಅದು ಸಾಧ್ಯವಾಗಬೇಕಾದರೆ ನಿಮ್ಮ ಬುದ್ಧಿಗೆ ಬೆಳಕು ತೋರಿಸಿರುವ ನಿಮ್ಮನ್ನು ನಿಮ್ಮ ಕಾಲಿನಿಂದಲೇ ನಿಲ್ಲಿಸುವ ನೀವು ಕಲಿತ ಎಷ್ಟೋ ಗ್ರಂಥಗಳನ್ನು ಮರೆಯಬೇಕಾಗಿದೆ. ಈ ಬ್ರಹ್ಮಾಂಡದಲ್ಲಿ ನಾವು ಅಣುವಿಗಿಂತಲೂ ಸಣ್ಣವರಾಗಿದ್ದೇವೆ ಎಂಬ ನಂಬಿಕೆಯಿಂದ ಪ್ರಾರಂಭಿಸಿರಿ. ಇದು ನಮ್ಮ ನಮ್ರತೆಯ ಗುರುತಾಗಿದೆ ಮತ್ತು ನಮಗೇನೂ ಗೊತ್ತಿಲ್ಲವೆಂಬುದನ್ನು ಒಪ್ಪಿಕೊಂಡಾತೆಯೂ ಜಗತ್ತಿನ ನಾವು ಅಣುವಿಗಿಂತಲೂ ಕೀಳು ಯಾಕೆಂದರೆ—ಅಣುವಾದರೂ ಸ್ವಭಾವದ ನಿಯಮವನ್ನು ಅನುಸರಿಸುತ್ತದೆ, ನಾವಾದರೋ ನಮ್ಮ ಮೂರ್ಖತನದ ಗರ್ವದಿಂದ ಸ್ವಭಾವದ ನಿಯಮವನ್ನು ಸಹ ಒಪ್ಪುವದಿಲ್ಲ. ಆದರೆ ನಂಬಿಕೆ ಇಲ್ಲದವರಿಗೆ ಹೇಳತಕ್ಕಂಥಾದ್ದು ನನ್ನಲ್ಲಿ ಏನೂ ಇಲ್ಲ.

ದೇವರು ಇದ್ದಾರೆಂತ ನೀವು ಒಂದಾವರ್ತಿ ಒಪ್ಪಿದರೆ ಪ್ರಾರ್ಥನೆಯ ಅವಶ್ಯಕತೆಯನ್ನು ಒಪ್ಪಲೇ ಬೇಕು. ನಮ್ಮ ಜೀವನವೇ ಒಂದು ಪ್ರಾರ್ಥನೆಯಾಗಿದೆ ಎಂತಲೂ ಅದ್ದರಿಂದ ದಿವಸದ ಯಾವುದಾದರೂ ಭಾಗದಲ್ಲಿ ಪ್ರಾರ್ಥನೆಗೆಂತಲೇ ಕೂರಬೇಕಾದಿಲ್ಲವೆಂಬ ವಿಪರೀತದ ಯೋಚನೆ ಮಾಡಬೇಡಿ. ಎಂದೆಂದೂ ದೇವರ ಸನ್ನಿಧಾನದಲ್ಲೇ ಇದ್ದರೂ ಸಹ ತಮ್ಮ ಜೀವನವೇ ಪ್ರಾರ್ಥನೆಯಾಗಿದೆ ಎಂತ ಹೇಳಿಕೊಳ್ಳಲಿಲ್ಲ. ನಿಜವಾಗಿಯೂ ಅವರ ಜೀವನವೇ ಒಂದು ಪ್ರಾರ್ಥನೆಯಾಗಿತ್ತು. ಆದರೂ ನಮಗಾಗಿ ಸ್ವಲ್ಪ ಕಾಲವನ್ನು ಪ್ರಾರ್ಥನೆಗೆಂತ ಇಟ್ಟುಕೊಂಡಿದ್ದರು. ದೇವರ ಭಕ್ತಿಯು ಪ್ರಮಾಣವನ್ನು ದಿನ ದಿನ ಮಾಡುತ್ತಿದ್ದರು. ದೇವರು ಪ್ರಮಾಣ ಮಾಡಬೇಕೆಂತ ಹೇಳುವುದಿಲ್ಲ. ಆದರೂ ನಾವು ಪ್ರಮಾಣವನ್ನು ದಿನ ದಿನ ಮಾಡಿಕೊಳ್ಳಬೇಕು. ಆಗ ನಾವು ಜೀವನದ ಎಲ್ಲಾ ಕಷ್ಟಗಳಿಂದಲೂ ಬಿಡುಗಡೆ ಹೊಂದುತ್ತೇವೆಂತ ನಿಮಗೆ ಭರವಸೆ ಕೊಡುತ್ತೇನೆ

ಗಾಂಧಿ ಸಪ್ತಾಹವನ್ನು ಹೇಗೆ ಆಚರಿಸಬೇಕು?

(ಕರ್ನಾಟಕದಿಂದ)

ಖಾದಿ, ಅಸ್ಪೃಶ್ಯತಾನಿವಾರಣೆ, ಗಾಂಧೀ ಚರಿತ್ರೆ ಏಕೆ ಆಚರಿಸಬೇಕು?

ಮಹಾತ್ಮ ಗಾಂಧೀಯವರು ಈಗ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠರೆಂದು ಪರಿಗಣಿಸಲ್ಪಟ್ಟಿದ್ದಾರೆ. ಹಿಂದೂಸ್ಥಾನದಲ್ಲಿಯಂತೂ ಅವರ ಸಮಾನರಾರೂ ಇಲ್ಲವೆಂಬುವುದನ್ನು ಬೇರೆ ಹೇಳಬೇಕಾಗಿಲ್ಲ. ಅವರ ಅನುಸಮತ್ವವು ಅವರ ಅದ್ವಿತೀಯತೆಯು ಅನೇಕ ರೀತಿಯಿಂದ ಸಿದ್ಧವಾಗುವದು, ಅವರ ಪ್ರತಿಯೊಂದು ಕೃತಿಯಲ್ಲಿ ವ್ಯಕ್ತವಾಗುವದು. ಅಂಥಾ ಮಹಾಮಹಿಮರು ಈಗ ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ಪ್ರಾಪ್ತ ಮಾಡಿ ಕೊಡಲಿಕ್ಕೆಂದು ಇಂಗ್ಲೆಂಡಿಗೆ ಹೋಗಿದ್ದಾರೆ, ತಮ್ಮ ಆಯುಷ್ಯದಲ್ಲಿಯ ಎಲ್ಲಕ್ಕೂ ದೊಡ್ಡ ಪ್ರಯತ್ನವನ್ನು ಅವರು ಮಾಡುತ್ತಲಿದ್ದಾರೆ. ಅವರ ೬೩ನೆಯ ಜನ್ಮ ತಿಥಿಯು ಇದೇ ೨ನೇ ಅಕ್ಟೋಬರ್ ದಿವಸ ಇರುವದು. ಆದಿನ ಅವರಿಗೆ ೬೨ ವರ್ಷ ತುಂಬಿ ೬೩ನೇ ವರ್ಷ ಪ್ರಾರಂಭವಾಗುವದು

ಅವರು ನಮ್ಮ ಹಿಂದೂಸ್ಥಾನದವರು. ಇಲ್ಲಿಯೇ ಹುಟ್ಟಿ ಇಲ್ಲಿಯೇ ಬೆಳೆದು. ನಮ್ಮ ಹಿತಕ್ಕಾಗಿಯೇ ಬೆಳೆದು ನಮ್ಮ ಹಿತಕ್ಕಾಗಿಯೇ ದುಡಿದು ಸಾಯುವವರು. ಅಂಥ ಮಹನೀಯರ ಜನ್ಮ ತಿಥಿಯನ್ನು ನಾವು ಪಾಲಿಸುವದು ಯಥಾ ಯೋಗ್ಯವು ಅತ್ಯಂತ ಅವಶ್ಯವು. ಆ ದಿನ ನಾವು ಅವರ ಶ್ರೇಷ್ಠ ಗುಣಗಳನ್ನು ನೆನೆಸಿ ನಮ್ಮಲ್ಲಿಯೂ ಅದೇ ಬಗೆಯ ಗುಣಗಳು ಬರಲೆಂದು ದೇವರನ್ನು ಪ್ರಾರ್ಥಿಸತಕ್ಕದ್ದು. ಅದನ್ನು ಆಚರಿಸುವುದರಿಂದ ಅವರಿಗೆ ನಾವು ಯೋಗ್ಯವಾದ ಮಾನವನ್ನು ಕೊಡುವದಲ್ಲದೆ ನಮ್ಮ ದೇಶದ ಲಾಭವನ್ನು ಮಾಡಿಕೊಳ್ಳುವೆವು.

ಅದನ್ನು ಹೇಗೆ ಆಚರಿಸಬೇಕು?

ಮಹಾತ್ಮ ಗಾಂಧಿಯವರ ಜನ್ಮ ತಿಥಿಯನ್ನು ನಾವು ಪಾಲಿಸಬೇಕು ಎಂಬದು ಸಿದ್ಧವು. ಆದರೆ ದಿನವನ್ನು ಆಚರಿಸುವದರಿಂದ ನಮ್ಮ ಕಾರ್ಯಭಾಗವು ಆಗದು. ಆದುದರಿಂದ ಇಡೀ ಒಂದು ವಾರವನ್ನು ನಾವು ಆಚರಿಸಬೇಕು. ಅಕ್ಟೋಬರ್ ತಿಂಗಳು ಎರಡನೇ ತಾರೀಕಿನಿಂದ ೮ನೇ ತಾರೀಕಿನ ವರೆಗೆ ನಾವು ಗಾಂಧೀ—ಸಪ್ತಾಹವೆಂದು ಆಚರಿಸಬೇಕು. ಅಂದರೆ ನಾವು ಮಾಡಬಹುದಾದ ಕಾರ್ಯಕ್ರಮವೆಲ್ಲ ಆಗಬಹುದು

ಅರ್ಥಾತ್ ಅವರ ಜಯಂತಿಯ ಸಮಾರಂಭವನ್ನು ಮಾಡುವದೆಂದರೆ ಕೇವಲ ಶಾಬ್ದಿಕ ಅಥವಾ ಪ್ರದರ್ಶಕ ರೀತಿಯಿಂದ ಆ ಸಮಾರಂಭವನ್ನು ಮಾಡಿ ಏನೂ ಉಪಯೋಗವಿಲ್ಲ. ಮಹಾತ್ಮಾ ಗಾಂಧಿಯವರು ಬರೇ ಭಾಷಣದಿಂದ ಅಥವಾ ಪ್ರದರ್ಶನದಿಂದ ಮರುಳಾಗುವರಲ್ಲ. ಅವರು ನುಡಿಗಿಂತ ನಡತೆಗೆ ಮಹತ್ವ ಕೊಡುವವರು. ಆದುದರಿಂದ ಗಾಂಧಿಯವರ ತತ್ವಗಳಂತೆ ಆಚರಿಸತಕ್ಕ ಕಾರ್ಯಗಳನ್ನು ನಾವು ಆಚರಿಸಿಯೇ ಅವರ ಜಯಂತೀ ಸಮಾರಂಭವನ್ನು ಮಾಡಬೇಕು.

ಮಹಾತ್ಮ ಗಾಂಧಿಯವರು ಕೇವಲ ರಾಜಕಾರಣೀ ಪುರುಷರಲ್ಲ. ಮಹಾತ್ಮ ಗಾಂಧಿಯವರು ಕೇವಲ ಸಾಧುಗಳಲ್ಲ. ಅವರು ಬರೀ ಸಮಾಜ ಸುಧಾರಕರಲ್ಲ, ಅವರು ಬರೇ ಧಾರ್ಮಿಕರಲ್ಲ. ಆದರೆ ಎಲ್ಲವುಗಳಿಂದ ಕೂಡಿದವರೊಬ್ಬ ಶ್ರೇಷ್ಠ ವಿಭೂತಿಗಳಾಗಿರುವರು. ಆದುದರಿಂದ ಅವರು ಕೈಕೊಂಡ ಅನೇಕ ಕಾರ್ಯಗಳಲ್ಲಿ ಕೆಲವೊಂದನ್ನಾದರೂ ಈ ಸಪ್ತಾಹದಲ್ಲಿ ಕೈಕೊಂಡು ಮಾಡಬೇಕಾಗಿದೆ.

ಕಾರ್ಯಕ್ರಮ.

ಗಾಂಧಿ ಸಪ್ತಾಹವು ೨ನೇ ಅಕ್ಟೋಬರದಿಂದ ಪ್ರಾರಂಭಿಸಿ ೮ನೇ ಅಕ್ಟೋಬರದ ವರೆಗೆ ನಡೆಯುವದು. ಈ ಸಪ್ತಾಹವು ಇಡೀ ಕರ್ನಾಟಕದಲ್ಲೆಲ್ಲ ಆಚರಿಸಬೇಕೆಂದು ನನ್ನ ನಮ್ರ ಸೂಚನೆಯಿದೆ. ಕರ್ನಾಟಕವು ಗಾಂಧೀ ಪ್ರಾಂತ್ಯವೆಂದು ಹಿಂದುಸ್ಥಾನದಲ್ಲಿ ಪ್ರಸಿದ್ಧವಿದೆ. ಆ ಪ್ರಸಿದ್ಧಿಗೆ ಅನುಸರಿಸಿ ನಮ್ಮ ಆಚರಣವಾಗಬೇಕು. ಆದುದರಿಂದ ಈ ಕೆಳಗಿನ ಕಾರ್ಯಕ್ರಮವನ್ನು ನಾನು ಸೂಚಿಸುವೆನು. ಅದರಲ್ಲಿ ಅಲ್ಲಲ್ಲಿಯ ಪರಿಸ್ಥಿತಿಗನುಸರಿಸಿ ಹೆಚ್ಚು ಕಡಿಮೆಗಳನ್ನು ಮಾಡಬಹುದು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ಇದೇ ೨೭—೨೮ನೇ ತಾರೀಕಿಗೆ ಅಂಕೋಲೆಯಲ್ಲಿ ಕೂಡತಕ್ಕವರಿದ್ದಾರೆ. ಅವರಾದರೂ ಕೆಲವು ಸೂಚನೆಗಳನ್ನು ಮಾಡಬಹುದು. ಆದರೆ ಅಲ್ಲಿಯ ವರೆಗೆ ನಾವು ಸಪ್ತಾಹವನ್ನು ಮಾಡುವ ಸಿದ್ಧತೆಯನ್ನು ಮಾಡಲಿಕ್ಕೆ ಬೇಕು. ಕಾರ್ಯಕ್ರಮವು ಈ ಕೆಳಗಿನಂತೆ ಇರಬಹುದೆಂದು ನಾನು ಸೂಚಿಸುವೆನು

(೧) ಇಡೀ ಸಪ್ತಾಹದಲ್ಲಿ ದಿನಾಲು ಖಾದಿ ಮಾರಾಟ ಮಾಡತಕ್ಕದ್ದು. ಪ್ರತಿಯೊಂದು ಊರವರು ಇಂತಿಷ್ಟು ಖಾದಿ ಮಾರಿಯೇ ತೀರತಕ್ಕದೆಂದು ನಿಶ್ಚಯ ಮಾಡಿ ಅದನ್ನು ಪೂರೈಸಬೇಕು. (೨) ಈ ಸಪ್ತಾಹದಲ್ಲಿ ಗಾಂಧೀ ಚರಿತ್ರೆಯನ್ನು ಓದಿಸಿ ಎಲ್ಲರಿಗೂ ಹೇಳುವದು. (೩) ಮಹಾತ್ಮ ಗಾಂಧಿಯವರು ಇಂಗ್ಲೆಂಡಿಗೆ ಏಕೆ ಹೋಗಿರುವರು, ಅವರ ಸ್ವಾಗತವು ಅಲ್ಲಿ ಯಾವ ಬಗೆಯಿಂದ ಆಗಿರುವದು. ಅವರು ಅಲ್ಲಿ ಏನು ಮಾಡುತ್ತಿರುವರು ಇದನ್ನೆಲ್ಲ ಜನರಿಗೆ ಹಳ್ಳಿ ಹಳ್ಳಿಗೆ ತಿಳಿಸುವದು (೪) ಅಸ್ಪೃಶ್ಯರೆಡೆಗೆ ಹೋಗಿ ಅಸ್ಪೃಶ್ಯತೆಯ ನಿವಾರಣೆ ಮತ್ತು ಅವರ ಉದ್ಧಾರದ ಸ್ವಲ್ಪವಾದರೂ ಕಾರ್ಯವನ್ನು ಮಾಡುವುದು. (೫) ಸತತ ಏಳುದಿನ ನೂಲು ತೆಗೆಯುವುದು ಅದು ಸಾರ್ವಜನಿಕ ಸ್ಥಳದಲ್ಲಿ ಆದರೆ ಒಳಿತು. (೬) ಮಹಾತ್ಮ ಗಾಂಧಿಯವರ ಮೆರವಣಿಗೆ, ಅವರ ಭಾವಚಿತ್ರದ ಸ್ಥಾಪನೆ ಸಭೆಗಳು ಮುಂತಾದದ್ದು

ಈ ಪ್ರಕಾರ ಸರ್ವರಿಗೂ ಸಮ್ಮತವಾಗುವ ಕಾರ್ಯಕ್ರಮವನ್ನು ಎಲ್ಲರೂ ಕೈಕೊಳ್ಳಬಹುದು. ಇದರಲ್ಲಿ ಎಲ್ಲರಿಗೂ ಪ್ರವೇಶವಿರಬೇಕು, ಇದರಲ್ಲಿ ಎಲ್ಲರಿಗೂ ಸರ್ಕಾರಿ ನೌಕರರಿಗೆ ಕೂಡ ಭಾಗ ತೆಗೆದುಕೊಳ್ಳಲಿಕ್ಕೆ ಬಂದಿರಬೇಕು.

ಈ ಕಾರ್ಯಕ್ರಮಗಳನ್ನು ನಾವು ಮಾಡಿದರೆ ಆ ಮಟ್ಟಿಗೆ ನಾವು ರಾಷ್ಟ್ರ ಸೇವೆಯನ್ನು ಮಾಡಿದಂತಾಗುವದು ಮಹಾತ್ಮ ಗಾಂಧಿಯವರ ಪುಣ್ಯ ಸ್ಮರಣ ಮಾಡಿದಂತಾಗುವುದು. ಅವರ ಜನ್ಮ ದಿನ ಈ ಸಾರಿ ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಕೂಡ ಆಚರಿಸಲ್ಪಡತಕ್ಕದಿದೆ. ಅಂದ ಮೇಲೆ ಅವರ ಜನ್ಮ ಭೂಮಿಯಾದ ಹಿಂದೂಸ್ಥಾನದಲ್ಲಿ ಅವರ ಪ್ರೀತಿಗೆ ಪಾತ್ರವಾದ ಕರ್ನಾಟಕದಲ್ಲಿ ಅದನ್ನು ಅದಷ್ಟು ವಿಜೃಂಭಣೆಯಿಂದ ನಾವು ಆಚರಿಸುವದು ಅವಶ್ಯವು. ರಂಗನಾಥ ದಿವಾಕರ.

ದುಂಡುಮೇಜು ಪರಿಷತ್ತಿನ ವರ್ತಮಾನ.

ಫೆಡರಲ್ ಸ್ಟ್ರಕ್ಚರ್ ಸಬ್ ಕಮಿಟಿಯ ಚರ್ಚೆಗಳು ತಾ. 23ರ ವರೆಗೆ ನಡೆದು ಇನ್ನೊಂದು ವಾರಕ್ಕೆ ಮುಂದರಿಸಲ್ಪಟ್ಟಿದೆ. ರಾಜರುಗಳು ತಾವಾಗಿಯೇ ಫೆಡರೇಶನಿಗೆ ಸೇರುವುದಾದ್ದರಿಂದ ಅವರ ಹಕ್ಕುಗಳಿಗೆ ದೋಷ ಬರದ ರೀತಿ ಎಲ್ಲಾ ರಾಜರುಗಳು ಫೆಡರೇಶನಿಗೆ ಸೇರದೆ ಇದ್ದರೂ ಸಹ ಮೇಲಿನ ಸಭೆಯಲ್ಲಿ ರಾಜರುಗಳ ಪ್ರತಿನಿಧಿಗಳು ಶೇಕಡ 50ರಷ್ಟು ಇರಬೇಕೆಂತಲೂ, ಕೆಳಗಿನ ಸಭೆಯಲ್ಲಿ ಮೂರನೇ ಒಂದು ಭಾಗ ಇರಬೇಕೆಂತಲೂ ವಾದಿಸಿದರು. ಈ ಅಭಿಪ್ರಾಯವು ಜನರ ಪಕ್ಷದ ಪ್ರತಿನಿಧಿಗಳನ್ನು ಗಾಬರಿಗೊಳಿಸಿದೆ. ಇದರ ಮೇಲೆ ಚರ್ಚೆ ನಡೆದು ಯಾವ ತೀರ್ಮಾನಕ್ಕೂ ಇನ್ನೂ ಬರಲಿಲ್ಲ.

ಮಿ. ಬಾಲ್ಡಿನರೂ, ಸರ್ ಸ್ಯಾಮುವೆಲ್ ಹೋರರೂ ಭಾಷಣ ಮಾಡಿದರೂ ಸಹ ಸರ್ಕಾರಿ ಉದ್ದೇಶವೇನೆಂಬವನ್ನು ತಿಳಿಸಲಿಲ್ಲ. ರಾಜರುಗಳಿಗೆ ಪ್ರತಿನಿಧಿತ್ವಾಧಿಕಾರಾಳ ಸಿಕ್ಕಿದ ವಿನಹ ಅವರು ಫೆಡರೇಶನಿಗೆ ಸೇರಲಾರರೆಂದೂ, ಅವರು ಸೇರದಿದ್ದರೆ ಫೆಡರೇಶನ್ ಸಾಧ್ಯವಿಲ್ಲವೆಂದೂ ಮುಂತಾಗಿ ಮಾತಾಡಿದರು.

ಸ್ತ್ರೀಯರ ಹಕ್ಕುಗಳನ್ನು ಹೊಸತಾಗಿ ನಿರ್ಮಾಣವಾಗಲಿಕ್ಕಿರುವ ರಾಜಕೀಯ ರಚನೆಯಲ್ಲಿ ಕಾದಿಡಬೇಕೆಂತ ಹಿಂದೂಸ್ಥಾನದ ಹೆಂಗಸರ ಪರವಾಗಿ ಒಂದು ಪತ್ರಿಕೆಯು ಪರಿಷತ್ತಿಗೆ ಕೊಡಲ್ಪಟ್ಟಿದೆ

ಫೆಡರಲ್ (ಮಧ್ಯವರ್ತಿ) ಸರ್ಕಾರಕ್ಕೂ, ಪ್ರಾಂತೀಕ ಸರ್ಕಾರಕ್ಕೂ ಆರ್ಥಿಕ ಸಂಬಂಧ ಹೇಗಿರಬೇಕೆಂಬದನ್ನು ನಿರ್ಣಯಿಸುವ ಬಗ್ಗೆ ಒಂದು ಉಪ ಕಮಿಟಿಯು ನೇಮಿಸಲ್ಪಟ್ಟಿದೆ. ಈ ಉಪ ಕಮಿಟಿಯು ಕೆಲಸವು ಸೋಮವಾರ ದಿನ ಪ್ರಾರಂಭವಾಗಿದೆ.

ಚಿಕ್ಕ ಕೋಮಿನವರ ಸಮಸ್ಯೆಯನ್ನು ತೀರಿಸಲು ನೇಮಕವಾದ ಕಮಿಟಿಯ ಕಾರ್ಯವು ಸೋಮವಾರ ದಿನ ಪ್ರಾರಂಭವಾಗಿದೆ. ಮಾಕ್ರಿಯವರಾದ ಮಿ. ಮೆಕ್ಡೊನಾಲ್ಡರು ಅಧ್ಯಕ್ಷರಾಗಿದ್ದರು. ಈ ಸಮಸ್ಯೆಯನ್ನು ಪ್ರತಿನಿಧಿಗಳು ತಮ್ಮೊಳಗೇನೇ ತೀರಿಸಿಕೊಳ್ಳುವುದು ಉತ್ತಮ ಸಂಚಾಮ್ಯರು. ತೀರ್ಮಾನಿಸಿದರೆ ಅದು ಕಾರ್ಯರೂಪಕ್ಕೆ ಬರುವಾಗ ಬಾಸವಾಗ ಶಾಶ್ವತವಾಗಿಯೂ ಹೇಳಿದರು. ಮಹಾತ್ಮ ಗಾಂಧಿಯವರು ಮುಸಲ್ಮಾನ್ ಪ್ರತಿನಿಧಿಗಳೊಡನೆಯೂ ಹಿಂದೂ ಪ್ರತಿನಿಧಿಗಳೊಡನೆಯೂ ಸಂಭಾಷಿಸುತ್ತಲಿದ್ದಾರೆ. ನಿರಾಶೆಯನ್ನೂ ಯಾವ ತೀರ್ಮಾನಕ್ಕೂ ಇನ್ನೂ ಬಂದಿರುವುದಿಲ್ಲ. ಸ್ತ್ರೀಯ ಪಕ್ಷದ ಮುಸಲ್ಮಾನರ ಪರವಾಗಿ ಡಾಕ್ಟರ್ ... ರಿಯವರು ಪರಿಷತ್ತಿಗೆ ಬಂದ ವಿನಹ ಯಾವ ತೀರ್ಮಾನಕ್ಕೂ ಬರುವುದು ಕಷ್ಟವೆಂತ ಮಹಾತ್ಮ ಗಾಂಧಿಯವರು ... ದ್ದಾರೆ. ಇದಕ್ಕೆ ಇನ್ನೂ ಮುಸಲ್ಮಾನರ ಒಪ್ಪಿಗೆ ದೊರೆತಿರುವುದಿಲ್ಲ. ಮುಸಲ್ಮಾನರು ಅವರ ಹದಿನಾಲ್ಕು ಶರತ್ತುಗಳನ್ನು ಇನ್ನೂ ಬಿಟ್ಟು ಕೊಟ್ಟಿರುವುದಿಲ್ಲ.

ಇಂಗ್ಲೆಂಡಿನಲ್ಲಿ ಮಹಾತ್ಮಗಾಂಧಿಯವರು

ಮಹಾತ್ಮ ಗಾಂಧಿಯವರಿಗೆ ಇಂಗ್ಲಿಷ್ ಸರಕಾರವು ಬಹಳ ಗೌರವ ಕೊಡುತ್ತಲಿದೆ. ಸಿಮ್ಲಾದಲ್ಲಿ ರಾಜಿ ಸಂಬಂಧವಾಗಿ ಹೋಗಿದ್ದಾಗ ಮಹಾತ್ಮರು ಕಾರನ್ನು ಉಪಯೋಗಿಸಲು ಬಿಟ್ಟರೆಂತ ಕೆಲವು ಯೂರೋಪಿಯನರು ಆಕ್ಷೇಪಿಸಿದ್ದರು. ಆದರೆ ಬ್ರಿಟಿಷ್ ಸರ್ಕಾರವು ಸಹ ಅದೇ ರೀತಿ ರಿಯಾಯಿತಿ ತೋರಿಸಿದೆ. ಇವರು ಪ್ರಯಾಣ ಮಾಡುವ ಕಾರಿನ ಸಂಗಡ ಇನ್ನೊಂದು ಪೋಲೀಸ್ ಕಾರನ್ನು ಕಳುಹಿಸಿ ರಸ್ತೆಯಲ್ಲಿ ಯಾವ ತುಮುಲ ಹೆಚ್ಚಾಗಿದ್ದರೆ ಪೋಲೀಸ್ ಗಾಡಿಯಲ್ಲಿ ಟ ಬಾರಿಸಿದರಾಯಿತು. ಮಹಾತ್ಮರ ಕಾರು ರೋಡ್ ನಿಯಮಕ್ಕೆ ವಿರೋಧವಾಗಿ ಮುಂದಿನ ಗಾಡಿಯ ಎಡ ಪಕ್ಕಕ್ಕಾಗಿ ಸಹ ಹೋಗಬಹುದು. ಈ ರಿಯಾಯಿತಿಯು ಸಾಧಾರಣದ ಜನರಿಗೆ ದೊರಕುವದಿಲ್ಲ.

ಮಹಾತ್ಮ ಗಾಂಧಿಯವರು ಲಾರ್ಡ್ ಇರ್ವಿನರೊಡನೆ ಧೀರ್ಘ ಸಂಭಾಷಣೆ ನಡೆಸಿದರು. ಲಾರ್ಡ್ ಇರ್ವಿನ್ ರೌಂಡ್ ಟೇಬಲ್ ಪ್ರತಿನಿಧಿಗಳ ಕೆಲಸಕ್ಕೆ ಸಹಾಯ ಮಾಡುತ್ತಲಿದ್ದಾರೆ.

ತಾ. 25ರಲ್ಲಿ ಮಹಾತ್ಮರು ಮೀರಾಬಾಯಿ, ಮಹದೇವ ದೇಸಾಯಿ, ಸಿ. ಯಫ್. ಆಂಡ್ರ್ಯೂಸ್, ಪಿಯಾರಿ ಲಾಲ್‌ರವರೊಡನೆ ಲಂಡನಿನಿಂದ ಬಟ್ಟೆ ಕಾರ್ಖಾನೆಗಳಿರುವ ಲ್ಯಾಂಕಶಯರಿಗೆ ರೈಲಿನಲ್ಲಿ 3ನೇ ಕ್ಲಾಸಿನಲ್ಲಿ ಪ್ರಯಾಣ ಮಾಡಿದರು. ಇವರ ದೇಹ ರಕ್ಷಣೆಗೆ ಗುಪ್ತ ಪೋಲೀಸಿನವರು ಸಹ ಇದ್ದರು. ಮಹಾತ್ಮರಿಗೆ ಲ್ಯಾಂಕಶಯರಿನಲ್ಲಿ ಬಹಳ ಸನ್ಮಾನ ದೊರೆಯಿತು. ಲ್ಯಾಂಕಶಯರಿನಲ್ಲಿ ಎರಡು ದಿವಸಗಳಿದ್ದು ಹಿಂದೂಸ್ಥಾನದ ಬಟ್ಟೆ ಬಹಿಷ್ಕಾರದ ದೆಸೆಯಿಂದ ಕೆಲಸವಿಲ್ಲದೆ ಹೋದ ಕೆಲಸಗಾರರನ್ನ, ಕಾರ್ಖಾನೆ ಮಾಲೀಕರನ್ನೂ ಕಂಡು ಸಂಭಾಷಿಸಿದರು. ಮಹಾತ್ಮರು ಈ ಸಂಬಂಧವಾಗಿ ಹೇಳಿರುವದೇನೆಂದರೆ—"ಅತಿಥ್ಯದಿಂದ ತನಗೆ ಸಂಪೂರ್ಣ ತೃಪ್ತಿಯಾಯಿತು. ಆದರೆ ಕೆಲಸಗಾರರ ಬಡತನ ನೋಡಿ ವ್ಯಸನಪಡುತ್ತೇನೆ. ಈ ಬಡತನಕ್ಕೆ ಸ್ವಲ್ಪ ಮಟ್ಟಿಗೆ ನಾನೇ ಕಾರಣನೆಂಬದು ಇನ್ನಷ್ಟೂ ವ್ಯಸನಕ್ಕೆ ಕಾರಣ. ಆದರೆ ತಾನು ಮಾಡಿದ ಕಾರ್ಯವು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ನಿರುದ್ಯೋಗಿಗಳ ಅಂದರೆ ಹಿಂದೂಸ್ಥಾನದ ಕೋಟ್ಯಾಂತರ ಬಡವರ ಸಲುವಾಗಿ ಎಂಬದರಿಂದ ಸ್ವಲ್ಪ ಸಮಾಧಾನವಿದೆ. ಇಂಡಿಯಾದ ಬಡತನಕ್ಕೆ ಹೋಲಿಸಿದರೆ ಲ್ಯಾಂಕಶಯರಿನ ಬಡತನವು ಏನೂ ಇಲ್ಲ. ಹೇಗಾದರೂ ರಾಜಿಯಿಂದ ಲ್ಯಾಂಕಶಯರಿನವರಿಗೂ ಸಹಾಯ ಮಾಡಲು ಸಾಧ್ಯವಿದೆಯೋ ಎಂಬದನ್ನು ನೋಡಲಿಕ್ಕಾಗಿಯೇ ಇಂಗ್ಲೆಂಡಿಗೆ ಬಂದಿದ್ದೇನೆ. ಇಂಡಿಯಕ್ಕೂ ಇಂಗ್ಲೆಂಡಿಗೂ ತೃಪ್ತಿಯಾದ ರಾಜಕೀಯ ಒಪ್ಪಂದವಾದರೆ ಇಂಡಿಯಾದಲ್ಲಿ ದೊರೆಯದಿರುವ ಬಟ್ಟೆಯನ್ನು ಲ್ಯಾಂಕಶಯರಿನಿಂದಲೇ ಕೊಂಡುಕೊಳ್ಳುವ ಏರ್ಪಾಡು ಮಾಡಬಹುದು. ಆದರೆ ಇಂಡಿಯಾವು ಸಂಪೂರ್ಣ ಸ್ವಾತಂತ್ರ್ಯವಾಗಬೇಕು ಮತ್ತು ಇಂಡಿಯಾದ ಕ್ಷೇಮಕ್ಕೆ ಹಾನಿ ಬರದಷ್ಟು ಮಟ್ಟಿಗೆ ಲ್ಯಾಂಕಶಯರಿಗೆ ಸಹಾಯ ಮಾಡಬಹುದು. ತನ್ನ ಕಾರ್ಯದಿಂದ ಲ್ಯಾಂಕಶಯರಿನವರಿಗೆ ಹಾನಿ ತಟ್ಟಿದರೂ ತನಗೆ ಆದರವಾದ ಗೌರವ ಕೊಟ್ಟದರಿಂದ ಲ್ಯಾಂಕಶಯರಿನವರ ಮನಸು ಇಂಡಿಯಕ್ಕೆ ವಿರೋಧವಾಗಿಲ್ಲದೆ ಇರುವುದು ಶುಭ ಸೂಚನೆಯಾಗಿದೆ. ತಾ. 27ರಲ್ಲಿ ಲಂಡನಿಗೆ ವಾಪಸು ಬಂದು ಹಿಂದೂ ಮುಸಲ್ಮಾನ್ ಸಮಸ್ಯೆಯ ಚರ್ಚೆಯಲ್ಲಿದ್ದಾರೆ.

ಶ್ರೀಮೂಲ ಕಾವೇರಮ್ಮನವರ ತುಲಾ ಸಂಕ್ರಮಣದ ಮುಹೂರ್ತ ಪಟ್ಟಿ.

1. ಸನ್ 1931ನೇ ಇಸವಿ ಅಕ್ಟೋಬರ್ ತಾರೀಕು 14ನೇ ಬುಧವಾರ ದಿನ ಬೆಳಿಗ್ಗೆ 9½ ಗಂಟೆಗೆ ವಿಶಾಖ ನಕ್ಷತ್ರ ವೃಶ್ಚಿಕ ಲಗ್ನ, ಗುರು ಕಾಲ ಹೋರೆಯಲ್ಲು ಅಕ್ಷಯ ಪಾತ್ರೆ ಇಡುವ ಶುಭ ಮುಹೂರ್ತ.

2. ಇದೇ ದಿನ ಮಧ್ಯಾಹ್ನದ ಮೇಲೆ ಸಾಯಂಕಾಲ 3½ ಗಂಟೆಗೆ ಅನುರಾಧ ನಕ್ಷತ್ರ, ಕುಂಭ ಲಗ್ನ, ಚಂದ್ರನ ಕಾಲ ಹೋರೆಯಲ್ಲು ಕಾಣಿಕೆ ಡಬ್ಬಿ ಮಡಗುವ ಶುಭ ಮುಹೂರ್ತ.

3 ಸನ್ 1931ನೇ ಇಸವಿ ಅಕ್ಟೋಬರ್ ತಾರೀಕು 17ನೇ ಶನಿವಾರ ದಿನ ಮಧ್ಯಾಹ್ನದ ಮೇಲೆ 4 ಗಂಟೆ 20 ನಿಮಿಟಿಗೆ ಸಂಯೋಗಿ ಪೂರ್ವಾಷಾಢ ನಕ್ಷತ್ರದಲ್ಲು ಶ್ರೀಮೂಲ ಕಾವೇರಮ್ಮನವರ ತುಲಾ ಸಂಕ್ರಮಣದ ತೀರ್ಥೋದ್ಭವ ಪುಣ್ಯ ಕಾಲದ ಶುಭ ಮುಹೂರ್ತ.

ಮುಜ್ರಾಯಿ ಇಲಾಖೆ, ಕೆ. ಚಂಗಪ್ಪ, (ಪ್ರೆಸಿಡೆಂಟ್.)

2—1

ವರ್ತಮಾನ ಸಂಗ್ರಹ.

ಒಳ ದೇಶ.

ಚೀಫ್ ಕಮಿಶನರವರು ಮಡಿಕೇರಿಗೆ ತಾರೀಕು 27ರಲ್ಲಿ ಬಂದಿರುವರು

ಮಡಿಕೇರಿ ನಾಡು ಸಹಕಾರ ಸ್ಟೋರು ಈ ತಾ 4ನೇ ಆದಿತ್ಯವಾರ ರಾ ಬಾ ಕೆ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಡುವುದು

ಲೋಕಪಾವನ ಆಫೀಸು ಸುಟ್ಟದ ಸಂಬಂಧವಾದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿರುವ ಕೇಸಿನಲ್ಲಿ ಸಾಕ್ಷಿ ವಿಚಾರ ತಾ 1ರಲ್ಲಿ ನಡೆದು ತ 2ರಲ್ಲಿ ನಡೆಯುತ್ತಲಿದ

ಸುಂಟಿಕೊಪ್ಪದ ಯೂಸುಫ್ ಮತ್ತು ಪಬ್ಲಿಕ್‌ನವರು ... ಅಲ್ಲಿಯ ಹೆಡ್ಮಾಸ್ಟರಾಗಿದ್ದ ಬಿ ಬಿ ಮುದ್ದಯ್ಯನವರ ...ಂಡ ಶಾಲೆಗೆ ವರ್ಗವಾಗಿ ಹೋಗುವ ಉದ್ದೇಶ್ಯ ಅವರಿಗೆ ...ಂದು ಟೀ ಪಾರ್ಟಿಯನ್ನು ಕೊಟ್ಟರೆಂದು ತಿಳಿಯಬರುತ್ತದೆ

ಪೂರ್ವ ಆಫ್ರಿಕದ ಕೊಡವರ ಸಂಘದ ... ಪುಟ್ಟಿಚಂಡ ಅಪ್ಪಯ್ಯನವರ ಅಕಾಲ ಮರಣವಾರ್ತೆಯನ್ನು ತಿಳಿದು ಸದರಿ ಸಂಘದವರು ಒಂದು ಮೀಟಿಂಗನ್ನು ಮಾಡಿ ... ವ್ಯಸನ ಸೂಚಕವಾದ ಠರಾವನ್ನು ಪಾಸು ಮಾಡಿ ಸದರಿಯವರ ಪತ್ನಿಯವರಿಗೂ ಕುಟುಂಬಕ್ಕೂ ಸಂತಾಪ ಪತ್ರ ಬರೆಯಬೇಕೆಂದು ಸದರಿ ಸಂಘದ ಗೌರವ ಕಾರ್ಯದರ್ಶಿಯವರಾದ ಮಿ ಸೋಮಯ್ಯಂಡ ಕಾಳಪ್ಪನವರು ತಿಳಿಸುತ್ತಾರೆ

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ... ತಾ 26—9—31ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆದು ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರು ಮಾಡಲ್ಪಟ್ಟವು (1) ವೀರಾಜಪೇಟೆ ಟೌನ್ ಸೊಸೈಟಿಗೆ ರೂ ...,000 (2) ದಕ್ಷಿಣ ಕೊಡಗು ಕೋಆಪರೇಟಿವ್ ಸೊಸೈಟಿಗೆ ರೂ 1000, (3) ಚೇರಳಶ್ರೀಮಂಗಲ ಸೊಸೈಟಿಗೆ ರೂ 1000 (4) ಅಮ್ಮತ್ತಿ ಟೌನ್ ಸೊಸೈಟಿಗೆ ರೂ 1200 (5) ಗೋಣಿಕೊಪ್ಪಲು ಟೌನ್ ಸೊಸೈಟಿಗೆ ರೂ 500 ಮತ್ತು (6) ಮಡಿಕೇರಿ ನಾಡು ಕೋಆಪರೇಟಿವ್ ಸ್ಟೋರಿಗೆ ರೂ 1000

ಸುಂಕದ ಕಟ್ಟೆಗಳನ್ನು ತೆಗೆದುಹಾಕಬೇಕೋ, ಮೋಟಾರು ಗಾಡಿಗಳಿಗೆ ಹೊಸ ತೆರಿಗೆ ಹಾಕಬೇಕೋ ಎಂಬ ವಿಷಯ ವಿಚಾರವನ್ನು ಮಾಡಲು ನೇಮಕವಾದ ಕಮಿಟಿಯು ತಾ 28ರಲ್ಲಿ ಕೂಡಿ ಚರ್ಚಿಸಿ ಈ ಕೆಳಗಿನ ಶಿಫಾರಸ್ಸು ಮಾಡಿರುವುದಾಗಿ ತಿಳಿಯುತ್ತೇವೆ ಸುಂಕದ ಕಟ್ಟೆಗಳಲ್ಲಿ ಮೋಟಾರು ಕಾರ್, ಬಸ್ಸು, ಲಾರಿ ಮೋಟಾರ್ ಸೈಕಲುಗಳಿಗೆ ಸುಂಕ ವಸೂಲು ಮಾಡಕೂಡದೆಂತಲೂ, ಬಸ್ಸು ಲಾರಿಗಳಿಗೆ ಇರುವ ರಿಜಿಸ್ಟ್ರೇಶನ್ ಫೀಸಿನ ಬದಲು ಬಸ್‌ಗಳಿಗೆ ಸೀಟು ಒಂದರ 44 ರೂಪಾಯಿ ... ಬಾಡಿಗೆ ಕಾರ್‌ಗಳಿಗೆ ಸೀಟು ಒಂದರ 30 ರೂಪಾಯಿ ... ಬಾಡಿಗೆ ಲಾರಿಗಳಿಗೆ 600 ರೂಪಾಯಿಯೂ ಸ್ವಂತ ಲಾರಿಗಳಿಗೆ 200 ರೂ ಯೂ, ಸ್ವಂತ ಕಾರ್‌ಗಳಿಗೆ 60 ರೂ ಯೂ ಮೋಟಾರ್ ಸೈಕಲ್‌ಗಳಿಗೆ 15 ರೂ ... ಒಂದರ ಕಂದಾಯ ಹಾಕಬೇಕೆಂತ ತೀರ್ಮಾನವಾಯಿತು

ಸುಂಕದ ಉತ್ಪತ್ತಿ ಪೂರಾ ಡಿಸ್ಟ್ರಿಕ್ಟ್ ಬೋರ್ಡಿಗೆ ಹೋಗುವುದಾಗಿದ್ದದ್ದರಿಂದ ಡಿಸ್ಟ್ರಿಕ್ಟ್ ಬೋರ್ಡಿಗೆ ಸರ್ಕಾರವು ಮೋಟಾರ್ ತೆರಿಗೆಯಿಂದ ಸಾಲಿಯಾನ 20,000 ರೂ ಎ... ಮುನ್ಸಿಪಾಲಿಟಿಗಳು ಮೋಟಾರ್ ಗಾಡಿಗಳಿಗೆ ... ಕಂದಾಯ ಇನ್ನು ಮೇಲೆ ಹಾಕಕೂಡದೆಂತಲೂ ಅದರ ... ಸರ್ಕಾರದಿಂದ ಈ ಸಂಸ್ಥೆಗಳಿಗೆ ... ನಷ್ಟಕ್ಕೆ ಸರಿಯಾದ ಗ್ರಾಂಟು ಕೊಡಬೇಕೆಂತಲೂ ತೀರ್ಮಾನವಾಯಿತು

ಇದೇ ಕಮಿಟಿಯ ಮುಂದೆ ಮೋಟಾರ್ ಬಸ್ಸುಗಳನ್ನು ... ಸುವ ಹಕ್ಕನ್ನು ಸಾರಾಯಿ ಅಂಗಡಿಗಳ ಹರಾಜು ಮಾಡುವಂತೆ ಹರಾಜು ಮಾಡಿ ... ವರು ಪ್ರಯತ್ನ ... ಗಳನ್ನು ನಮ್ಮ ಸರ್ಕಾರ ... ದಲ್ಲಿ ಯೋಚಿಸುತ್ತಿರುವ ಅಭಿಪ್ರಾಯವು ಯೋಚನೆಗೆ ಬಂ... ಆದರೆ ಮೋಟಾರ್ ಗಾಡಿಗಳಿಗೆ ಈಗ ಹಾಕಲು ಯೋಚಿಸುವ ಕಂದಾಯದ ಫಲಿತಾಂಶ ಏನಾಗುತ್ತೆಂಬುದನ್ನು ನೋಡಿ ನಂತರ ಯೋಚಿಸಬಹುದೆಂತ ತೀರ್ಮಾನವಾಯಿತು.

ಹಿಂದೂ ದೇಶ.

...ಲ್ಲಿ ಇರ್ವಿನ್—ಗಾಂಧಿ ರಾಜಿ ಒಪ್ಪಂದಕ್ಕೆ ವಿರೋಧವಾಗಿ ಸರ್ಕಾರದವರು ಯಾವ ಯಾವ ಬಾಬಿನಲ್ಲಿ ವರ್ತಿಸಿದರೆಂಬ ಚಾರ್ಜ್ ಶೀಟ್ ಪ್ರಕಟವಾದದ್ದಕ್ಕೆ ಸರ್ಕಾರದವರು ಉತ್ತರ ಕೊಟ್ಟಿದ್ದರು ಅದಕ್ಕೆ ಜವಾಬು ಕಾಂಗ್ರೆಸ್ ಅಧ್ಯಕ್ಷರು ಈಗ ಪ್ರಕಟಿಸಿದ್ದಾರೆ

ಕಾಶ್ಮೀರದ ಅನಂತ ನಾಗ್ ಎಂಬ ಊರಿನಲ್ಲಿ ... ಗೆ ಪೊಲೀಸ್ ಮತ್ತು ಮಿಲಿಟರಿಯವರಿಗೆ ಕಲ್ಲೆಸೆದು ... ಮಿಲಿಟರಿಯವರನ್ನು ಮುತ್ತಿದ್ದರಿಂದ ... ಪೊಲಿಸ್‌ನವರು ಮತ್ತು ಮಿಲಿಟರಿಯವರು ... ಮಿಲಿಟರಿ ... ಗುಂಡು ಹಾರಿಸಿ 19 ಜನರು ಸತ್ತಿದ್ದಾರೆ 30 ಜನರಿಗೆ ಗಾಯವಾಗಿದೆ ಇದು ಸರ್ಕಾರಿ ... ಮಾನ

ಗಿರಣಿಗಳಲ್ಲಿ ಕೆಲಸ ಮಾಡುವ ಜತ ಕೂಲಿಗಾರರ ಸಂ...ವನ್ನು ಕಡಿಮೆ ಮಾಡಬಾರದಾಗಿ ಕಾಂಗ್ರೆಸ್ಸಿನವರು ನಿಯುಕ್ತ ಪಡಿಸಿದ ಕಮಿಟಿಯವರು ಗಿರಣಿ ಮಾಲೀಕರಿಗೆ ತಿಳಿಸಿದ್ದರು ಕೆಲವು ಗಿರಣಿಗಳವರು ಹಿಂದೆ ಕಡಿಮೆ ಮಾಡಿದ ಸಂಬಳವನ್ನು ಪುನಃ ಯಥಾವತ್ತಾಗಿ ಕೊಡತೊಡಗಿರುವರು ಹಾಗೆಯೇ ದಿನಕ್ಕೆ 10 ಗಂಟೆಗಳ ಕೆಲಸವನ್ನು ಮಾತ್ರ ನಿಶ್ಚಯಿಸಬೇಕಾಗಿ ಆ ಕಮಿಟಿಯು ಕೇಳಿಕೊಂಡಿದೆ

ಸರದಾರ ವಲ್ಲಭಭಾಯಿಯವರ ವಿಷ್ಣುಪಡ ಮೇರೆಗೆ ಬೊಂಬಾಯಿಯಲ್ಲಿ ಕಳೆದ ... ದಿವಸಗಳಲ್ಲಿ ... ರೂಪಾಯಿಗಳ ಖಾದಿ ಮಾರಾಟವಾಗಿದೆ ಅದರಲ್ಲಿ ಬೊಂಬಾಯಿ ಉಪನಗರ ಕಾಂಗ್ರೆಸ್ ಕಮಿಟಿಯವರು ... ಸಾವಿರ ರೂ ಶ್ರೀ ಜೀವನಲಾಲ ಮತ್ತು ... ವರು ... ಮತ್ತು ... ಇವರ ... ರೂ ಗಳ ಖಾದಿಯನ್ನು ಕೊಂಡಿರುವರು.

ಸೆಪ್ಟೆಂಬರಿಯಲ್ಲಿ ಚರ್ಚೆಗೆ ಬಂದ ಪ್ರೆಸ್ ಬಿಲ್ಲಿನ ಮೇಲೆ ಮುಂದಿನ ಚರ್ಚೆ ನಡೆಯಲು ಅಡ್ಡಿ ಬಂದಿದೆ ಬಿಲ್ಲನ್ನು ಗಜೆಟಿನಲ್ಲಿ ಪ್ರಕಟಿಸಲಿಲ್ಲವೆಂಬುದೇ ಆಕ್ಷೇಪಣೆ ಅದರ ... ದಾದರಿಂದ ... ಮಾಡಿಕೊಳ್ಳುವಂತೆ ಕಾಣುತ್ತದೆ ಈ ಮಸೂದೆ ಶಾಸನಸಿಗೆ ವಿರೋಧ ತೋರಿಸಲು ಹಿಂದೂಸ್ಥಾನದ ಎಲ್ಲಾ ಪತ್ರಿಕೆಗಳೂ ತಾ 30ರಲ್ಲಿ ಪ್ರಕಟಿಸಬಾರದೆಂತ ಪತ್ರಿಕಾ ಕರ್ತರ ಸಭೆಯವರು ತೀರ್ಮಾನಿಸಿರುತ್ತಾರೆ

ಚರಕದ ಯಂತ್ರಗಳಲ್ಲಿ ಹೊಸ ಹೊಸ ಮಾದರಿಗಳನ್ನು ಕಂಡು ಹಿಡಿದು ... ಪರೀಕ್ಷೆ ... ಲ್ಲೇ ನಡೆಸುವರು ಅದರಲ್ಲಿ ತೇರ್ಗಡೆಯಾದವರಿಗೆ 1 ಲಕ್ಷ ರೂಪಾಯಿ ಬಹುಮಾನವಾಗಿ ಕೊಡಲ್ಪಡುವದೆಂದು ಮಹಾತ್ಮ ಗಾಂಧಿಯವರು ಹೇಳುತ್ತಾರೆ ಪರೀಕ್ಷೆಗೆ ಹಾಜರಾಗಬೇಕಾದವರು ಅವರವರ ಚರಕ ಯಂತ್ರಗಳನ್ನು ಅಹಮದಾಬಾದಿನಲ್ಲಿರುವ ... ಸಂಘದ ... ಒಕ್ಟೋಬರ್ ತಾ 31ರ ಒಳಗೆ ಕಳುಹಿಸಬಹುದು

ಮಂಗಳೂರಿನಿಂದ ಕಳೆದ ಮಂಗಳವಾರ ಹೊರಟ ಬರ್ಮಾ ಸರ 'ಒಂಕರಾ' ವಿಮಾನವು ಅದೇ ದಿನ ಅಪರಾಹ್ನ ? ಗಂಟೆಗೆ ಕೊಲೊಂಬೋ ಬಂದರಕ್ಕೆ ತಲುಪಿ, ಅಲ್ಲಿಂದ ಮರುದಿನ ಹೊರಟು ಮದ್ರಾಸಿಗೆ ಹೋಗಿ ಮುಂದ ಪಯಣಿಸುತ್ತ ತಾ 24ರಲ್ಲಿ ವಿಶಾಖಪಟ್ಟಣದ ಸಮುದ್ರದಲ್ಲಿ ಬಿದ್ದ ದೊಡ್ಡ ತರೆಯಿಂದ ... ಮುಳುಗಿ ಹೋಯಿತು ಅಲ್ಲೇ ದೂರದಲ್ಲಿದ್ದ ... ವೈಮಾನಿಕರನ್ನು ರಕ್ಷಿಸಿದರು ವಿಮಾನವನ್ನು ನೀರಿನಿಂದ ತೆಗೆಯಲಾಗಲಿಲ್ಲ

ಊರಾಪೇಟೆ ಪಟ್ಟಣದಲ್ಲಿ ಹಾವಾಡಿಗನು ಹಾವನ್ನು ... ಆಡಿಸುತ್ತಿದ್ದನು ಅವನ್ನು ನೋಡ ... ಒಬ್ಬ ವ್ಯಕ್ತಿ ... ಹಾವನ್ನು ಹಿಡಿದುಕೊಂಡು ಅದರ ತಲೆಯನ್ನು ಕಚ್ಚಿ ಎರಡು ಭಾಗ ಮಾಡಿ ... ಪೊಲೀಸಿನವರಿಗೆ ... ಪೊಲೀಸಿನವರು ಪತ್ತೆ ಹಚ್ಚಿ ... ಇನ್ನೂ ಸಿಕ್ಕಿಲ್ಲ

ತಾ 20ರಲ್ಲಿ ಬರ್ಮಾ ದೇಶದ ಚಾಕ್ ಎಂಬ ಸ್ಥಳದಲ್ಲಿ ಬರ್ಮಾ ಆಯಿಲ್ ಕಂಪೆನಿಯವರಿಗೆ ಸೇರಿದ ಎಣ್ಣೆಯ ಗೊದಾಂಗು ಮಹಾಶಬ್ದದೊಡನೆ ಹತ್ತಿಕೊಂಡು ಬೆಂಕಿಯ ಜ್ವಾಲೆಯು ವ್ಯಾಪಿಸಿದಿತು ಈ ಅನಾಹುತದಲ್ಲಿ ನಾಲ್ಕು ಮಂದಿ ಬರ್ಮೀಯರು ಮೃತರಾದರು ಅಲ್ಲದೆ ... ದೇಹವು ... ಆಸ್ಪತ್ರೆಗೆ ಕಳುಹಿಸಲಾಗಿದ್ದಿತು ಅಲ್ಲಿಗೆ ತಲುಪುವುದಕ್ಕೆ ಮುಂಚೆಯೇ ಅವರು ಮೃತಪಟ್ಟರು

... ಗಳು ಮಕ್ಕಳಿಗೆ ... ಸಂಪಾದನೆಗೆ ... ಅಸೆಂಬ್ಲಿ ಮತ್ತು ಲೆಜಿಸ್ಲೆಟಿವ್ ... ಡೆಪ್ಯೂಟೇಷನ್ ... ದಲ್ಲಿ ಈ ಅಭಿಪ್ರಾಯ ... ನೂಸು ಚರ್ಚೆಗೆ ತರಲಾಗುತ್ತದೆ

ಅಮೃತಬಜಾರ ಪತ್ರಿಕೆಯ ಎಡಿಟರ್ ತುಷಾರ್‌ಕಾಂತಿ ಘೋಷರವರು ಮಲಗುವ ಮನೆಗೆ ತಾರೀಕು ತಾ 21ರಲ್ಲಿ ... ಒಡೆದು ಸ್ವಲ್ಪ ಹೊಟ್ಟೆಗೆ ನಷ್ಟ ... ವಿದ್ಯುಚ್ಛಕ್ತಿಯ ತಂತಿಗಳು ... ಕೆಲಸ ನಿಂತು ಹೋಗಿದೆ ಅದೃಷ್ಟವಶಾತ್ ಮಿ ಘೋಷರವರು ಅವರ ಪತ್ನಿ ಮಗನ ಸಂಗಡ ... ಒಳ ಭಾಗಕ್ಕೆ ಹೋಗಿದ್ದ ಕಾರಣ ಅಪಾಯವೇನೂ ಸಂಭವಿಸಲಿಲ್ಲ

ಕಲ್ಕತ್ತಾ ಪಟ್ಟದ ಸಂಸ್ಕೃತ ವಿದ್ಯಾ ಸಂಘದವರು ಅಲ್ಲಿಯ ಕಾಲೇಜಿನಲ್ಲಿ ಸ್ಪೆಷಲ್ ಕಾನ್‌ವೊಕೇಶನ್ ಕೂಟವನ್ನು ನಡಿಸಿ ಡಾ ರವೀಂದ್ರನಾಥ್ ಟಾಗೋರ್‌ರವರಿಗೆ ಕವಿಸಾರ್ವಭೌಮ ಎಂಬ ಬಿರುದು ದಯಪಾಲಿಸಿದರು ... ಡಾ ಟಾಗೋರ್‌ರವರು ಸಂಸ್ಕೃತಕ್ಕೂ ಬಂಗಾಳಿ ಭಾಷೆಗೂ ಕೇವಲ ಸಂಬಂಧವಿರುವುದರಿಂದ ಬಂಗಾಳಿ ಭಾಷೆಯನ್ನು ಕಲಿಯುವವರಿಗೆ ಸಂಸ್ಕೃತವು ಅತ್ಯಂತ ಸಹಕಾರಿಯಾಗಿದೆ ಎಂದೂ, ಕಲ್ಕತ್ತಾ ಯುನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಸಂಸ್ಕೃತವು ಅವಶ್ಯ ಭಾಷೆಯಾಗಿ ಇರಲೇ ಬೇಕೆಂದು ತಿಳಿಸಿದರು

ಸರಕಾರದ ಖರ್ಚಿಗೆ ಬೇಕಾದಷ್ಟು ಉತ್ಪತ್ತಿ ದೊರೆಯದ್ದರಿಂದ ಸರಕಾರದವರು ಎಸೆಂಬ್ಲಿ ಮುಂದೆ ಈ ಕೆಳಗಿನ ವಿಷಯಗಳನ್ನು ತಿಳಿಸಿದ್ದಾರೆ—ವೈಸರಾಯರು ತಮ್ಮ ಸಂಬಳದ ಶೇಕಡ 20 ರಷ್ಟನ್ನೂ, ಅವರ ಕೌನ್ಸಿಲ್ ಮೆಂಬರುಗಳು ಶೇಕಡ 15 ರಷ್ಟು ಬಿಡಲು ಒಪ್ಪಿರುತ್ತಾರೆ ಬೇರೆ ಸರಕಾರಿ ನೌಕರರ ಸಂಬಳದಲ್ಲಿ ಶೇಕಡ 10 ರಷ್ಟು ಕಡಿಮೆ ಮಾಡಲಾಗುತ್ತದೆ ಈ ಕಡಿಮೆ ದರಗಳು 1931 ನೇ ಮಾರ್ಚಿ ತಿಂಗಳ ವರೆಗೆ ಜಾರಿಯಲ್ಲಿರತಕ್ಕದ್ದು ಅದಕ್ಕೆ ಮೊದಲಾಗಿಯ ... ಮರಾಲೋಚನೆಗೆ ಒಳಗಾಗಬಹುದು ಬರುವ ವರ್ಷ ಮಿಲಿಟರಿ ಇಲಾಖೆಯ ಖರ್ಚು 4½ ಕೋಟಿ ಇಳಿಸಲಾಗುವುದು

ಅಲ್ಲದೆ ಈ ಹೊಸ ತೆರಿಗೆಗಳನ್ನು ಹಾಕಲು ಸರಕಾರದವರು ನಿಶ್ಚೈಸಿರುತ್ತಾರೆ ಸುಂಕಗಳು—ಪರದೇಶಗಳಿಂದ ಬರುವ ಹತ್ತಿ ರಾತಲು ಒಂದರ 6 ಕಾಸು ... ಶೇಕಡ 10 ... ಗಳ ಮೇಲೆ ಶೇಕಡ ... ಬೇಕೆಂತಲೂ ... ಸಕ್ಕರೆಗೆ ಹಂಡ್ರೆಡ್‌ವೇಟಿಗೆ 6—12—0 ಇದ್ದ ಸುಂಕ ರೂ 7—4—0 ಕ್ಕೆ ಏರಿಸಬೇಕೆಂತಲೂ ... ಮೇಲೆಯೂ ... ಮೇಲೆಯೂ ... ರೂ 1000 ರೂ ... ಂದ 2000 ರೂ ವರೆಗೆ ಈ ವರ್ಷ ಇನ್‌ಕಂಟ್ಯಾಕ್ಸ್ ರೂಪಾಯಿಗೆ 2 ಕಾಸು, ಬರುವ ವರ್ಷ ರೂಪಾಯಿಗೆ 4 ಕಾಸು ... ಇನ್‌ಕಂಟ್ಯಾಕ್ಸ್ 1 ರಷ್ಟು ಮತ್ತು ಬರುವ ವರ್ಷ ... ತೆರಿಗೆಯನ್ನು 1 ರಷ್ಟು ... ಕಾಗದ ... 1¼ ಯಷ್ಟು ಮಾಡಬೇಕೆಂತ ... ಕಾಗದಕ್ಕೆ 1½ ... ಸುಂಕ ಎಕ್ಸೈಸ್ ತೆರಿಗೆಗಳು ... ಟಪಾಲು ... ವರೆಗೆ ಬರುವ ... ತಿಳಿಸಲಾಗಿ ... ಇದೆ

ವಿ ದೇ ಶ.

ಜಪಾನಿಗೂ, ಚೈನಾಕ್ಕೂ ಪ್ರಾರಂಭವಾಗಿದ್ದ ಯುದ್ಧವು ರಾಜಿಯಾಯಿತು ಆದರೂ ಅನ್ಯೋನ್ಯ ದ್ವೇಷದ ... ಳು ನಡೆಯುತ್ತಲಿವೆ

ಫ್ರಾನ್ಸಿನ ರೈಮಂಡ್ ಬ್ರೀಫ್ ಎಂಬವನು ಎಂಟು ವರ್ಷಗಳಿಂದ ರೋಗಿಯವರ ಜೀವ ಉಳಿಸಲಿಕ್ಕಾಗಿ 21 ಗ್ಯಾಲನ್ ರಕ್ತವನ್ನು ತನ್ನ ದೇಹದಿಂದ ಕೊಟ್ಟಿರುತ್ತಾನೆ ಇಷ್ಟು ರಕ್ತವನ್ನು 487 ಸಾರಿ ಇವನ ದೇಹದಿಂದ ತೆಗೆದದ್ದಾಗಿದೆ

ಬುಡಾಪೆಸ್ಟ್ ಸಮೀಪ ರೈಲು ಹಾದಿಯಲ್ಲಿ ಬಾಂಬು ಇಡಲ್ಪಟ್ಟು ... ರೈಲು ಬಂಡಿಯನ್ನು ... ಕಂದರಕ್ಕೆ ದೂಡಿ ಬಿಟ್ಟಿತು ... ನನು ಇನ್ನು ಈ ಲೋಕದಲ್ಲಿ ... ತು ಇದು ಕಮ್ಯೂನಿಷ್ಟರ ಕೆಲಸವೆಂದು ಸಂದೇಹ

ರಷ್ಯದವರು ರಹಸ್ಯವಾಗಿ ತಮ್ಮ ದೇಶದಲ್ಲೊಂದು ... ಯೂ ಸ್ಟೇಷನ್ನು ತೆರೆದು ಇಂಡಿಯದೊಂದಿಗೆ ಸಂಬಂಧವಿಡುವರೆಂದೂ ಇದು ಡಿಸೆಂಬರ್ ತಿಂಗಳಲ್ಲಿ ಪ್ರಾರಂಭವಾಗುವುದೆಂದೂ, ಮಾತುಕತೆಗಳನ್ನು ರಹಸ್ಯವೆನಿಸುವಂತೆ ದೇಶೀಯ ಭಾಷೆಯಲ್ಲೇ ನಡೆಯುವಂತೆ ರಷ್ಯದಲ್ಲೂ ಇಲ್ಲಿಯೂ ಏರ್ಪಾಡಾಗಿದೆಯೆಂದೂ ಲಂಡನ್ನಿನ ಡೈಲಿ ಮೈಲ್ ಪತ್ರಿಕೆ ಬರೆಯುತ್ತದೆ.

ಸರಕಾರದ ಈಗಿನ ಆರ್ಥಿಕ ಸ್ಥಿತಿಯು ಈ ವರ್ಷದ ... ಬರುವ ... ದಲ್ಲಿ 19 ಕೋಟಿ 5 ಲಕ್ಷ ಉತ್ಪತ್ತಿಗಿಂತ ಖರ್ಚು ... ಈಗಿನ ಮೇಲ್ಕಂಡ ಸಲಹೆಗಳಿಂದ ಈ ವರ್ಷ 10 ಕೋಟಿ 17 ಲಕ್ಷ ಕಡಿಮೆಯಾಗಬಹುದೆಂತಲೂ ಬರುವ ವರ್ಷ ... ಕೋಟಿ 23 ಲಕ್ಷ ಉಳಿತಾಯವಾಗಬಹುದೆಂತಲೂ ... ಂದಾಜು ... ಲಾಗಿದೆ

ವೀರಾಜಪೇಟೆ—ನಾಲ್ಕುನಾಡು—ಅಮ್ಮತ್ತಿ ನಾಡುಗಳ ಜಮ್ಮ ಒಟೆರುಗಳಲ್ಲಿ ವಿನಂತಿ.

ಮಾನನೀಯರೇ,

ಈಗ ಕಾಸೇ ಮಿ ... ಮಂಡ ಉತ್ತಯ್ಯನವರು ರಾಜಿನಾಮೆಯಿಂದ ಖಾಲಿಯಾದ ಕೌನ್ಸಿಲ್ ಸ್ಥಳಕ್ಕೆ ... ನಾನು ಒಬ್ಬ ಉಮೇದ್ವಾರನಾಗುತ್ತೇನೆ ದೇಶದ ಏಳಿಗೆಗಾಗಿ ತಾವು ಮಾಡಬೇಕಾದಿದ್ದ ಎಲ್ಲಾ ಕೆಲಸಗಳನ್ನೂ ತಮ್ಮ ಉತ್ಸಾಹದಿಂದ ಶಕ್ತಿ ಮೀರಿ ಕೆಲಸ ಮಾಡುವುದು ತಮಗೆ ತಿಳಿಯದ್ದಲ್ಲ. ಇನ್ನು ಮುಂದಕ್ಕೂ ತಮ್ಮೆಲ್ಲರ ಪ್ರೋತ್ಸಾಹದಿಂದ ಶಕ್ತಿಯುಳ್ಳದ ದೇಶ ಸೇವೆ ಮಾಡಬೇಕೆಂದಿದ್ದೇನೆ ಇದನ್ನು ಸಾಧಿಸಲು ಅನುಕೂಲವಾಗುವಂತೆ ತಾವೆಲ್ಲರೂ ನನ್ನ ಮೇಲೆ ವಿಶ್ವಾಸವಿಟ್ಟು ಈ ಅಕ್ಟೋಬರ್ ತಾರೀಕು 22ನೇ ಗುರುವಾರ ಓಟು ... ದುವ ಆಯಾಯ ಸ್ಥಳಗಳಿಗೆ ದಯಮಾಡಿಸಿ ನನ್ನ ಪರವಾಗಿ ಓಟು ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ವೀರಾಜಪೇಟೆ,
ತಾ 11—9—1931
4—3

ತಮಗೇ ಸೇವಕ
ಕೋಟೆರ ಪಿ ಚಿಣ್ಣಪ್ಪ.

ಸ್ತ್ರೀಯರ ಜಾಗ್ರತಿ.

(ಸಂಕ್ಷೇಪಿತವಾಗಿ [illegible])

ಜಪಾನ್ ದೇಶದ ಸ್ತ್ರೀಯರ ಸುಧಾರಣೆಯು ಚೈನಾ ದೇಶವನ್ನು ಮೀರಿ ಸಂಪೂರ್ಣ ಬದಲಾವಣೆಯನ್ನು ಆಶಿಸುತ್ತದೆ. ಜಪಾನು ಸ್ತ್ರೀಯರು ನಿರಂತರವಾಗಿ ಶ್ರಮವಹಿಸಿ ತಮ್ಮ ಉದ್ಯಮಗಳನ್ನು ಪ್ರಾರಂಭಿಸಿ ತಮ್ಮ ಸ್ವಾತಂತ್ರ್ಯವು ಪುರುಷರ ಸ್ವಾತಂತ್ರ್ಯಕ್ಕೆ ಸಮಾನವಾಗಿರಬೇಕೆಂದು ೧೯೨೦ ರಲ್ಲಿ "ನೂತನ ಸ್ತ್ರೀಯರ ಸಂಘ"ವೆಂಬ ಒಂದು ಸಂಘವನ್ನು ಸ್ಥಾಪಿಸಿದರು. ಜಪಾನಿನಲ್ಲಿ ಅದಕ್ಕೆ ಮೊದಲು ಸ್ತ್ರೀಯರು ರಾಜಕೀಯ ಸಭೆಗಳಿಗೆ ಹೋಗಕೂಡದೆಂದೂ ಸಭೆಗಳನ್ನು ಸೇರಿಸಕೂಡದೆಂದೂ ಒಂದು ನಿಬಂಧನೆ ಇತ್ತು. ಅದನ್ನು ತೊಲಗಿಸಬೇಕೆಂದು ಅಲ್ಲಿನ ಸ್ತ್ರೀಯರು ಹಟ ಹಿಡಿದು ಪ್ರಯತ್ನಪಟ್ಟು ೧೯೩೧ ರಲ್ಲಿ ಜಯಹೊಂದಿದರು. ಈಗ ಜಪಾನಿನಲ್ಲಿ ಸ್ತ್ರೀಯರು ರಾಜಕೀಯ ಸಭೆಗಳಲ್ಲಿ ಭಾಷಣಮಾಡುವುದಕ್ಕೂ ಕೇಳುವುದಕ್ಕೂ ಸಂಪೂರ್ಣ ಬಾಧ್ಯತೆಯುಂಟು.

ಜಪಾನು ಭಾಷೆಯಲ್ಲಿ ಹೆಂಡತಿಗೆ "ಒಕುಸಾಮ" ಎಂದು ಹೆಸರು. ಅದರರ್ಥವು "ಒಳಗಿರುವ ಹೆಣ್ಣು" ಎಂದು. ಹೀಗೆ ಅಲ್ಲಿನ ಸ್ತ್ರೀಯರು ೧೯೧೦ ರ ವರೆಗೂ ಸ್ವಾತಂತ್ರ್ಯರಹಿತರಾಗಿ ಮನೆಗಳಲ್ಲಿ ಕೊಳೆಯುತ್ತಿದ್ದರು. ಆದರೆ ಈಗ ಈ ವರ ಬಗೆಗಳಲ್ಲಿ ಸ್ವಾತಂತ್ರ್ಯೇಚ್ಛೆಯು ಬೇರೂರಿ ತಮ್ಮ ದೇಶದ ಎಲ್ಲ ವೃತ್ತಿಗಳಲ್ಲೂ ಅವರು ಆಶ್ಚರ್ಯವನ್ನುಂಟುಮಾಡುವವರಾಗಿ ದೇಶಕ್ಕೆ ಎಷ್ಟೋ ಉಪಕಾರಮಾಡುತ್ತಿದ್ದಾರೆ. ಜಗತ್ತಿನ ಸಮಸ್ಯೆಗಳಲ್ಲಿ ಕೂಡ ಇವರು ಮುಗ್ಧರಾಗಿ ಚರ್ಚಿಸುವರು. ಜಪಾನು ಸ್ತ್ರೀಯರಲ್ಲಿ ವೈದ್ಯವೃತ್ತಿಯು ಪ್ರಧಾನಸ್ಥಾನವನ್ನು ಪಡೆದಿದೆ. ಅದಕ್ಕೆ ಕಾರಣವು ಇವರು ಹೊಂದಿದ ಸರ್ವಸಂಗಪರಿತ್ಯಾಗದಿಂದ ಕೂಡಿದ ಶಿಕ್ಷಣ ಕ್ರಮವೇ. ಅಲ್ಲಿನ ಸ್ತ್ರೀಯರಲ್ಲಿ ೧೨೦೦ ಮಂದಿ ವೈದ್ಯರಾಗಿಯೂ ೩೫೦೦ ಮಂದಿ ದಾದಿಯರಾಗಿಯೂ ೫೦೦ ಮಂದಿ ದಂತವೈದ್ಯರಾಗಿಯೂ ಅನೇಕ ಮಂದಿ ಔಷಧಿಗಳನ್ನು ವಿಕ್ರಯಿಸುವವರಾಗಿಯೂ ಇದ್ದಾರೆ. ಜಪಾನಿನಲ್ಲಿ ಸಣ್ಣ ಸಣ್ಣ ಮೋಟಾರುಗಳನ್ನೂ ದೋಣಿಗಳನ್ನೂ ನಡೆಸುವವರು ಸ್ತ್ರೀಯರೇ.

ಟೋಕಿಯೋ ಪಟ್ಟಣದಲ್ಲಿ ಸ್ತ್ರೀಯರಿಂದ ೨೦ ಮಾಸಪತ್ರಿಕೆಗಳು ನಡೆಸಲ್ಪಡುತ್ತಿವೆ. ಅದರಲ್ಲಿ ಕೆಲವು ಬಾಲಿಕೆಯರಿಗಾಗಿಯೂ, ಕೆಲವು ದೊಡ್ಡವರಿಗಾಗಿಯೂ ಪ್ರಕಟಿಸಲ್ಪಡುತ್ತವೆ. ಕೆಲವು ಮಂದಿ ಸ್ತ್ರೀಯರು ಅಲ್ಲಿ ವಿದ್ಯಾಭ್ಯಾಸ ಮಾಡಿದವರು. ಹೀಗೆ ವಿದ್ಯಾಗಂಧವಿರುವ ದೇಶವನ್ನಭಿವೃದ್ಧಿಮಾಡುವುದು [illegible] ಮಾಸಪತ್ರಿಕೆಗಳಲ್ಲಿ ಸ್ತ್ರೀಯರಿಂದ ಬರೆಯಲ್ಪಡುವ ಲೇಖನಗಳಲ್ಲಿನ ವಿಷಯಗಳು ಅತಿ ನಿರ್ದಿಷ್ಟವಾದ [illegible] ವುಳ್ಳದಾಗಿ "ಜಗತ್ತಿನ ಸಮಸ್ಯೆಗಳನ್ನೂ ಮಾನವ [illegible]ಗಳನ್ನೂ ಜಪಾನು ಸ್ತ್ರೀಯರೆಷ್ಟು ಫಲವಿಟ್ಟು, [illegible] ಗಮನಿಸುತ್ತಿರುವರು" ಎಂದನ್ನುವಂತೆ ಓದುವರ ಮನಸ್ಸುಗಳನ್ನು ಬಹು ಸುಲಭವಾಗಿ ಆಕರ್ಷಿಸುತ್ತವೆ. ರಾಜಕೀಯ, [illegible], ಯುದ್ಧ ಸಂಬಂಧವಾದ ಸಾಂಘಿಕ ಸಮಸ್ಯೆಗಳು, ಅಂತಃಪಂಗಡಗಳಲ್ಲಿರುವ ತೊಂದರೆಗಳು, ಆರ್ಥಿಕ, ಆರೋಗ್ಯ, ಪರಿಶುದ್ಧತೆ, ಪ್ರೇಮ, ವಿವಾಹ, ಸ್ತ್ರೀಪುರುಷರ ಭೇದ, ವಿದೇಶದ ಸಂಬಂಧ ಮೊದಲಾಗಿ ಹೊರಗಿನವರು ಹೆದರದಾಗಿ ಚರ್ಚಿಸುವ ವಿಷಯಗಳಲ್ಲೂ ಜಪಾನು ಸ್ತ್ರೀಯರು ಮನಸ್ಸಿಟ್ಟು ಧೈರ್ಯಸಾಹಸಗಳಿಂದ ನಿಷ್ಕಲ್ಮಷ ಹೃದಯದಿಂದ ಚರ್ಚಿಸುವರು.

ಪಾಶ್ಚಿಮಾತ್ಯ ಸ್ತ್ರೀಯರಂತೆಯೇ ಪ್ರಾಚ್ಯದೇಶದ ಸ್ತ್ರೀಯರುಗಳಲ್ಲಿ ಸುಧಾರಣೆಯು ಬೇಕಾದಷ್ಟು ಮುಂದುವರಿದು ವಿಶ್ವಮಾನವ ಸೌಭಾಗ್ಯಕ್ಕೆ ಸಾಹಸಪಡುವ ಕಾಲವೀಗ ಬಂದಿದೆ. ಇದರಿಂದ ಲೋಕ ಕಲ್ಯಾಣವನ್ನು ಮಾಡಿ ದೇಶವಿದೇಶಗಳ ಸಂಯೋಗವಾಗಲು ಸ್ತ್ರೀಯರ ಪ್ರಯತ್ನಗಳೇ ಮಾರ್ಗದರ್ಶಕವಾಗಿರುತ್ತವೆ. ಹೀಗೆ ಜಗತ್ತಿನ ಐಕಮತ್ಯ ಸಾಧನೆಗೆ ನಾಯಕರಾದ ಲೆನಿನ್, [illegible], [illegible], ಸನ್‌ಯಾತ್‌ಸೇನ್, ರವೀಂದ್ರನಾಥಠಾಕೂರ್, ಮಹಾತ್ಮ ಗಾಂಧಿ, ಈ ಮಹಾಪುರುಷರಿಗೆ ಜಗತ್ತಿನ ಸ್ತ್ರೀಪುರುಷರೆಲ್ಲ ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಸ್ವಲ್ಪವೇ ಆಗಿವೆ. ಇಂದಿಗೂ ಅನೇಕ ಜನಾಂಗಗಳು ಆ ರೋಗದ ಕರಾಳವಕ್ತ್ರಕ್ಕೆ ಸಿಕ್ಕಿ ನರಳುತ್ತಿವೆ. ಇದರ ಪ್ರಭಾವಕ್ಕೆ ಸಿಕ್ಕದ ಯಾವೊಂದು ಜನಾಂಗವೂ 'ಆರೋಗ ದೃಢಕಾಯ'ವಾಗಿಲ್ಲ. ಎಂಬ ಯೋಚನೆಯೇ ನಮಗೆ ಹಿಡಿದಿಲ್ಲ! ಮಾನವಕುಲವು ಪ್ರಗತಿಪಥಕ್ಕೆ ಕಾಲಿಟ್ಟರೂ ಬಹಳ ಮುಂದೆ ಹೋಗಿಲ್ಲ. ಹತ್ತು ಹೆಜ್ಜೆಗಳಿಡುವಷ್ಟರಲ್ಲೇ ಮುಗ್ಗರಿಸಿದೆ! ನಾನಾ ರೋಗಗಳಿಂದ ನರಳುತ್ತಿದೆ!

ಯಾವ ಸಮಾಜವನ್ನೇ ನೋಡಲಿ ಒಬ್ಬ ಆರೋಗ್ಯವಂತನಾದರೂ ಕಾಣಬರುವನೇ? ಯಾವ ಜನಾಂಗವೇ ಆಗಲಿ ಧೈರ್ಯವಾಗಿ ಮುಂದೆ ಬಂದು 'ಇದೋ ಇವನು ನಮ್ಮ [illegible] ಆರೋಗ್ಯಶಾಲಿ' ಎಂದು ಹೇಳಲಿ ನೋಡೋಣ!

ಮಾನವನು ರೋಗದ ಗಣಿಯಾಗಿದ್ದಾನೆ: ಕಾಡುಮೇಡುಗಳಲ್ಲಿ ವಾಸಮಾಡುವ ಮೃಗಪಕ್ಷಿಗಳಾದರೂ ಮೇಲು! ಸಾಧುಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕತ್ತೆ, ಕುದುರೆ, ನಾಯಿ ಇವುಗಳಿಗೆ ಕೂಡ ಈಗ ಇಲ್ಲದ ರೋಗಗಳೆಲ್ಲ ಬರುತ್ತಿವೆ!! ನಾಗರಿಕತೆಯ ಮಹಿಮೆ! ಕೇವಲ ಗ್ರಾಮ್ಯ ಜನರು ಕೂಡ ಈ ನಾಗರಿಕತೆಯ ವಾಸನೆಯಿಂದ ನೊಣಗಳಂತೆ ಹಾಳಾಗುತ್ತಿದ್ದಾರೆ. 'ನಾಗರಿಕತೆ'. ವಾಸನೆಯೇ ನಾನಾ ಜನಾಂಗಗಳ ನಮೂಲವಾಗಿ ಹೋಗಿವೆ.

ರೋಗವೇ ದರೆ ದೇಹಕ್ಕೆ ಮಾತ್ರ ಬಂದು ಅಂಗಾಂಗಗಳಿಗೆ ನೋವುಂಟುಮಾಡಿ ಶರೀರದ ಐಕ್ಯತೆಗೇ ಭಂಗ ತರುವುದೆಂದು ತಿಳಿಯಬೇಡಿ. ರೋಗವೆಂಬುದು ಸಮಾಜಕ್ಕೂ ಬರುತ್ತದೆ. ಸಾಮಾಜಿಕ ವಿಪತ್ತುಗಳುದ್ಭವವಾಗಿ ಜೀವನದ ಅಂಗಾಂಗಗಳನ್ನೆಲ್ಲ ವಿಕಲಮಾಡಿ ಐಕ್ಯತೆಗೂ, ಸೌಂದರ್ಯಕ್ಕೂ, ಸುಖಕ್ಕೂ ಭಂಗ ತರುತ್ತವೆ.

ಅತೃಪ್ತಿ, ಅಶಾಂತಿ ಎಂಬೆರಡು ರೋಗಗಳು ಮಾನವನ ಮನೋರಾಜ್ಯ ಹೊಕ್ಕು ಅವನ ಸ್ವಭಾವವನ್ನೇ ಅವನ ನೈಸರ್ಗಿಕ ಪ್ರಕೃತಿಯನ್ನೇ ಬದಲಾಯಿಸಿವೆ. ಮಾನವನ ಆಶೆಗೆ ಪಾರವೇ ಇಲ್ಲ. ಅವನ ಅತೃಪ್ತಿಗೆ ಮೇರೆಯೇ ಇಲ್ಲ. ಇನ್ನು ಅವನಿಗೆ ಶಾಂತಿಯೆಲ್ಲಿಂದ ಬರಬೇಕು ?

'ಇನ್ನೇನು ಸಂಪಾದಿಸಲಿ ? ಇನ್ನೆಲ್ಲಿಗೆ ಹೋಗಲಿ' ಇದೇ ಅವನ ಪಲ್ಲವಿಯಾಗಿದೆ. ಈ 'ಅಶಾಂತಿ, ಅತೃಪ್ತಿ'ಯು ಮಾನವನ ಪ್ರಗತಿ ಲಕ್ಷಣವೆಂದು ಹಲವರು ವಾದಿಸುತ್ತಾರೆ. ಆ ವಾದದ ಸತ್ಯ ಅಸತ್ಯ ವಿಚಾರವೀಗಬೇಡ. ಈ ಅತೃಪ್ತಿ, ಅಶಾಂತಿಯು ಮಾನವರ ಜೀವನದ ಆತ್ಮಕೇಂದ್ರವನ್ನೇ ಅಲ್ಲಾಡಿಸಿ ಬಿಟ್ಟಿದೆ. ಶಾಂತಿ ಜೀವನದ ಮಧುರ ಗಾನವು ಮಾಯವಾಗಿ ಹೃದಯಮರ್ಮಸ್ಥಾನಭೇದಕವಾದ ಚೀತ್ಕಾರವು ಕೇಳಬರುತ್ತಿದೆ. ಮಾನವನು ಈಗ ತೋರಿಸುತ್ತಿರುವ 'ದಡಬಡ ಜೀವನ ನಮ್ಮನ್ನು ಎಲ್ಲಿಗೊಯ್ಯುತ್ತದೋ ದೇವರೇ ಬಲ್ಲ.'

ಅಖಿಲ ಭಾರತ ಸ್ವದೇಶಿ ವಸ್ತು ಪ್ರದರ್ಶನ.

ಹುಬ್ಬಳ್ಳಿ.

ಹುಬ್ಬಳ್ಳಿಯಲ್ಲಿ ನವಂಬರು ತಿಂಗಳ ಕಡೆಯ ವಾರದಲ್ಲಿ ನಡೆಯಲಿರುವ ಅಖಿಲ ಭಾರತ ವಸ್ತು ಪ್ರದರ್ಶನದ ಕೆಲಸ ಬಹಳ ಭರದಿಂದ ಸಾಗಿದೆ. ಪ್ರದರ್ಶನದ ಸಮಿತಿಯವರು ಈಗಾಗಲೇ ಸಾಧಾರಣವಾಗಿ ಪ್ರತಿಯೊಬ್ಬ ಖಾದಿಖಾನೆದಾರರೊಡನೆಯೂ ಪತ್ರವ್ಯವಹಾರ ನಡೆಸಿರುವರು. ಹಾಗೂ ಅನೇಕ ಕಾರಖಾನೆದಾರರ ಕಡೆಯಿಂದ ಉತ್ತರಗಳ ಸುರಿಮಳೆಯು ಆಗುತ್ತಿರುವವು. ಪ್ರದರ್ಶನದಲ್ಲಿ ಪ್ರದರ್ಶನಕ್ಕಾಗಿಯೇ ಆಗಲಿ ಕೇವಲ ಸ್ವದೇಶಿ ವಸ್ತುಗಳಿಗೆ ಮಾತ್ರ ಇಂಬು ಕೊಡಲಾಗುವುದು. ಅದರ ಸಂಬಂಧದಲ್ಲಿ ಮಾತ್ರ ಯಾವುದೇ ತರದ ಕೆಲಸಗಾರಿಕೆ ಇರಲಿ, ಕೈ ನೂಲಿನ ಹಾಗೂ ಕೈಮಗ್ಗದ ಅರಿವೆ ಕೈನೂಲಿನಿಂದಲೇ ತಯಾರಿಸಿದ ವಸ್ತುಗಳಿರತಕ್ಕದ್ದು. ಆ ಭಾಗವು ಅಖಿಲ ಭಾರತ ಚರಖಾ ಸಂಘದ ಕರ್ನಾಟಕ ಶಾಖೆಯವರ ನೇತೃತ್ವದಲ್ಲಿ ನಡೆಯುವುದು.

ಈ ಪ್ರದರ್ಶನದ ವೇಳೆಗೆ ಹಿಂದೂಸ್ಥಾನದಲ್ಲಿರುವ ಎಲ್ಲಾ ಕಾರಖಾನೆಗಳ ಹಾಗೂ ವ್ಯಾಪಾರ ಸಂಸ್ಥೆಗಳ ಬಗ್ಗೆ ಸಂಗ್ರಹ ಮಾಹಿತಿ ಪುಸ್ತಕವನ್ನು ತಯಾರಿಸಬೇಕೆಂದು ಕಮಿಟಿಯವರು ನಿಶ್ಚಯಿಸಿರುತ್ತಾರೆ. ಇದರಲ್ಲಿ ಹೆಚ್ಚು ಪ್ರಾಶಸ್ತ್ಯವನ್ನು ಪಡೆಯಬೇಕೆಂಬ ಇಚ್ಛೆಯುಳ್ಳವರು ಒಡನೆಯೇ ಪ್ರದರ್ಶನ ಕಮಿಟಿಯ ಕಾರ್ಯದರ್ಶಿಗಳ ಕಡೆಗೆ ಒಂದು ದೂರವಾಣಿಯನ್ನು ಕಳುಹಿಸಿ ತಮ್ಮ ಮಾಲುಗಳ ಪೂರ್ಣ ಮಾಹಿತಿ ಹಾಗೂ ತಾವು ತಯಾರಿಸಿದ ಮಾಲು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯವರು ಹೇಳಿರುವ ಸ್ವದೇಶೀ ಅರ್ಥವನ್ನು ಅನುಸರಿಸುವದೆಂದು ಖಾತ್ರಿ ಮಾಡಿ ಕೊಡತಕ್ಕದ್ದು. ಜಾಹಿರಾತುಗಳನ್ನು ಕೊಟ್ಟು ತಮ್ಮ ವ್ಯಾಪಾರವನ್ನು ಬೆಳಸಬೇಕೆಂದಿರುವ ವ್ಯಾಪಾರಸ್ಥರಿಗೆ ಒಂದು ಸುಸಂಧಿಯು ಒದಗಿದೆ. ಜಾಹೀರಾತುಗಳನ್ನು ಕೊಡಬೇಕೆಂದಿರುವವರು ದರ ಮೊದಲಾದ ಮಾಹಿತಿಗೆ 'ಅಖಿಲಭಾರತ ಸ್ವದೇಶೀ ವಸ್ತು ಪ್ರದರ್ಶನದ ಕಾರ್ಯದರ್ಶಿ ಹುಬ್ಬಳ್ಳಿ' ಇವರ ಕಡೆಗೆ ಪತ್ರವ್ಯವಹಾರ ಮಾಡಬಹುದು.

ಹುಬ್ಬಳ್ಳಿ, ಯ.ಂ ಯಂ ಚಂದರ್,
೮—೯—೩೦ ಕಾರ್ಯದರ್ಶಿ

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಚೆಂಬು ಗ್ರಾಮದ ಶಾಲೆ.

ಅಯ್ಯಾ,

ಮಹನೀಯರಾದ ಈ ಮೊದಲು ಡಿ. ಬೋರ್ಡು ಮೆಂಬರರಾಗಿರುವ ಶ್ರೀಯುತ ಯನ್. ಮುತ್ತಪ್ಪ ಬಿ. ಎ ಬಿ ಯಲ್ ಪ್ಲೀಡರು ಇವರು ಚೆಂಬು ಗ್ರಾಮಕ್ಕೆ 1 ಬೋರ್ಡು ಶಾಲೆ ಅಗತ್ಯವಿದೆಯೆಂದು ಡಿ. ಬೋರ್ಡು ವೈಸ್ ಪ್ರೆಸಿಡೆಂಟರವರಲ್ಲಿ ಬಲು ಪ್ರಯತ್ನದಿಂದ ಮಂಜೂರು ಮಾಡಿಸಿದ ಶಾಲೆಗೆ ಈಗ ಡಿ ಬೋರ್ಡಿನಲ್ಲಿ ಮೆಂಬರರಾಗಿರುವ ಮಿ. ಪಟ್ಟಮಾಡ ಚಿಣ್ಣಪ್ಪನವರು ಬಲು ಪ್ರಯತ್ನದಿಂದ ವೈಸ್ ಪ್ರೆಸಿಡೆಂಟರವರಲ್ಲಿಯೂ ಶ್ರೀಯುತ ಶಾಲಾ ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರಲ್ಲಿಯೂ ನಮ್ಮ ಗ್ರಾಮದ ವಿದ್ಯಾರ್ಥಿಗಳ ಹೀನಸ್ಥಿತಿಯನ್ನು ವರ್ಣಿಸಿದ ಮೇರೆ ನಮ್ಮ ಶಾಲೆಗೆ ಮಾಸ್ತರು ಮಂಜೂರಾದ ಹಾಗಾಯಿತು. ಹಾಗೆ ಮಂಜೂರಾದ ಶಾಲೆಗೆ ಶ್ರೀಯುತ ರಾಮಚಂದ್ರಯ್ಯ ಮಾಸ್ತರವರು ತಾ 28.9.30 ರಲ್ಲಿ ನಮ್ಮ ಗ್ರಾಮದ ಡಿ. ಬೋರ್ಡು ಶಾಲೆಯನ್ನು ತೆರೆದಿರುವರು. ಮೇಲೆ ಹೇಳಿದ ಮಹನೀಯರಿಗೆ ನಮ್ಮ ಹೃದಯಪೂರ್ವಕವಾದ ವಂದನೆಯನ್ನು ಅರ್ಪಿಸುವೆವು. ನಮ್ಮ ಈ ಮಲೆ ಪ್ರಾಂತ್ಯದ ಅತೀ ಹಳ್ಳಿಯಾಗಿರುವ ಚೆಂಬು ಗ್ರಾಮದ ಪ್ರಜೆಯು ಈ ದಿನ ಕೀರ್ತಿಪಟ್ಟಿತು. ಇಲ್ಲಿನ ವಿದ್ಯಾರ್ಥಿಗಳಿಗೆ ವಿದ್ಯೆ ಇಲ್ಲದೆ ಬಹಳ ಹೀನ ಸ್ಥಿತಿಯಲ್ಲಿರುವುದಾಯಿತು. ಈ ದಿನ ಈ ಶಾಲೆಗೆ ಸೇನುಕವಾಗಿರುವ ಶ್ರೀಯುತ ರಾವ್, ಚಂದ್ರಯ್ಯರವರು ಅಧ್ಯಕ್ಷರಾಗಿ ಸುಮಾರು 90 ಜನರಿಂದ ಸಭೆಯು ಜರುಗಿತು. ಕೂಡಿದ ಕೆಲವು ಮಹನೀಯರು ಅನೇಕ ಭಾಷಣಗಳನ್ನು ಮಾಡಿದರು. ವಿದ್ಯೆಯನ್ನು ಕುರಿತು ಶಾಲೆಗೆ ತಮ್ಮ ತಮ್ಮ ವಿದ್ಯಾರ್ಥಿಗಳನ್ನು ಸರಿಯಾಗಿ ಕಳುಹಿಸುವಂತೆ ಈ ಮೊದಲು ಖಾಸಗಿಯಾಗಿ ಮಿಶ್ಯನ್ ಶಾಲೆಯ ಉಪಾಧ್ಯಾಯರಾದ ಶ್ರೀಯುತ ಡಿ. ಜೆ ಚಾಕೋತಮ್ಮನವರು ದೀರ್ಘ ಭಾಷಣ ಮಾಡಿದರು. ತದನಂತರ ಅಧ್ಯಕ್ಷರು ವಿದ್ಯಾರ್ಥಿಗಳ ಕುರಿತು ಮತ್ತು ಶ್ರೀಯುತ ಹೊಸೂರು ಲಿಂಗಪ್ಪನವರು ಶಾಲೆಯ ಕುರಿತು ಹೊಂದಿದ ನಷ್ಟ ಕಷ್ಟಗಳ ಕುರಿತು ದೀರ್ಘ ಭಾಷಣದಿಂದ ದೇವರಿಗೆ ವಂದನೆಯನ್ನರ್ಪಿಸಿ ತಿಂಡಿ ತೀರ್ಥದಿಂದ ಸಭೆ ಬರಕತ್ತಾಯಿತು.

ಚೆಂಬು ಗ್ರಾಮಸ್ಥ

ಕೊಡಗೇತರರ ಪಾರ್ಟಿ.

ಅಯ್ಯಾ,

ಕೊಡಗಿನ ಬಾಕಿ ಎಲ್ಲಾ ಕೋಮುಗಳ ಜನರು ಕೊಡವರಿಗೆ ವಿರೋಧವಾಗಿ ನಿಲ್ಲಬೇಕೆಂದು ಮಿ. ಮಹಾಬಲಯ್ಯನವರು ಸೆಪ್ಟೆಂಬರ್ ತಾರೀಕು 11ರ 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದ ಬಹಿರಂಗ ಪತ್ರವು ಅವರ ಸಂಕೋಚ ಬುದ್ಧಿಯನ್ನು ಮಾತ್ರವಲ್ಲ, ಪೋಲೀಸ ಪ್ರಾಸ್‌ಕ್ಯುಟಿಂಗ್ ಇನ್‌ಸ್ಪೆಕ್ಟರವರ ಹುದ್ದೆಗೆ ಬೇರೆಯವರಿಗಿಂತ ತನ್ನ ಯೋಗ್ಯತೆಗಳಿಗೆ ತಾನು ಎಷ್ಟು ದೊಡ್ಡ ಪ್ರಾಮುಖ್ಯತೆಯನ್ನು ಕೊಟ್ಟಿರುವರೆಂಬುದನ್ನು ತೋರಿಸುತ್ತದೆ. ತಾನು ಆರಿಸಲ್ಪಡಲಿಲ್ಲವೆಂಬ ಸ್ವಾರ್ಥ ಬುದ್ಧಿಯಿಂದಲೂ, ಸಿಟ್ಟಿನಿಂದಲೂ, ಪೂರ್ಣ ಆಶಾಭಂಗದಿಂದಲೂ ರೇಗಿಬಿದ್ದಿದ್ದಾರೆ. ಅವರು ತನ್ನ ಯೋಗ್ಯತೆಯು ಹೆಚ್ಚಿನದೆಂದು ಯೋಚಿಸುವುದು ಮಾತ್ರವಲ್ಲ, ತನ್ನ ಅರ್ಜಿಯ ವಿಷಯ ಅವರೇ ಜಡ್ಜಿಗಳಾಗಿದ್ದಾರೆ ಮತ್ತು ಅವರು ಕೊಡವರಲ್ಲವೆಂಬುವುದೇ ಅವರ ಮುಖ್ಯ ಅರ್ಹತೆಯಾಗಿದೆ. ಒಬ್ಬ ಕೊಡಗೇತರನು ಆರಿಸಲ್ಪಡಲಿಲ್ಲವೆಂಬ ಕಾರಣದಿಂದ ಅವರ ವರ್ಗದವರನ್ನೆಲ್ಲಾ ಕೊಡವರಿಗೆ ವಿರೋಧವಾಗಿ ಪಾರ್ಟಿ ಮಾಡಲು ಕೇಳಿಕೊಂಡಿದ್ದಾರೆ. ಕಮಿಷನರವರು ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಅವರ [illegible] ಕೇಡು ಮಾಡಿದ್ದಾರೆ, ಯಾಕೆಂದರೆ ಅವರಲ್ಲಿ ಒಬ್ಬರು ಮೆ[illegible] ವರಲ್ಲಿ ಸುಳ್ಳು ಆಶೆಯನ್ನು ಹುಟ್ಟಿಸಿದ್ದರು ಮತ್ತು ಇಬ್ಬರು ಉಮೇದುವಾರರುಗಳೊಂದಿಗೆ ಖುದ್ದು ಮಾತಾಡಿದ [illegible] ಅವರ ಕೋರಿಕೆಯನ್ನು ತಿರಸ್ಕರಿಸಿದರು. ಇದರಲ್ಲಿ ಚರ್ಚೆ ಆಧಾರವಾದ ಸಂಗತಿ ಏನೂ ಇಲ್ಲ, ಯಾಕೆಂದರೆ ಬೋರ್ಡಿನವರು ಉಮೇದುವಾರರುಗಳೊಂದಿಗೆ ಸಂಭಾಷಣೆ ನಡಿಸಿದ ಮೇಲೆ ಉತ್ತಮರಾದವರನ್ನು ಆರಿಸಬೇಕು. ಮಿ. ರೈಯವರು ತನ್ನ ಯೋಗ್ಯತೆಗಳಿಗೆ ಅಷ್ಟು ದೊಡ್ಡ ಪ್ರಾಮುಖ್ಯತೆ ಕೊಡದೆ ಹೋಗಿದ್ದರೆ ಅವರಿಗೆ ಪೂರ್ತಿ ಆಶಾ ಭಂಗ ಉಂಟಾಗುತ್ತಿರಲಿಲ್ಲ. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಕೊಡವರಾದುದರಿಂದ ಪಕ್ಷ ವಹಿಸಿದರೆಂದರೂ, ಕಮಿಷನರವರು ಅವರಲ್ಲಿ ಬೇರೆಯವರಿಗಿಂತ ಉತ್ತಮ ಯೋಗ್ಯತೆಗಳನ್ನು ಕಂಡಿದ್ದರೆ ಖಂಡಿತವಾಗಿಯೂ ಅವರನ್ನು ಆರಿಸುತ್ತಿದ್ದರು. ಮಿ. ರೈಯವರು ನಾಲ್ವರೂ ಆರಿಸಲ್ಪಡುವರೆಂದು ಆಶಿಸಲಿಲ್ಲವಷ್ಟೆ. ಅಥವಾ ಬೇರೆ ಮೂವರು ತನ್ನಷ್ಟು ಗಟ್ಟಿಗರಲ್ಲರೆಂದು ಅವರು ಯೋಚಿಸುತ್ತಾರೋ ?

ಮಿ. ರೈಯವರ ಆಶಾಭಂಗದ ಕೂಗು ಈ ದೇಶದ ಆಲೋಚನಾಪರರಾದ ಜನರನ್ನೆಂದಿಗೂ ಎಬ್ಬಿಸಲಾರದು. ಪ್ರಥಮತಃ ಮಿ. ರೈಯವರು ಈ ದೇಶದಲ್ಲಿ ಯಾವ ಕೋಮಿನ ಪ್ರತಿನಿಧಿಯೆಂದು ತಿಳಿಯಬೇಕಾಗಿದೆ. ಅವರು, ಬ್ರಾಹ್ಮಣರ, ಗೌಡರುಗಳ, ಪಾರ್ಸಿಗಳ, ಪಂಚಮರ ಕ್ರೈಸ್ತರ, ಮುಸಲ್ಮಾನರ ಮತ್ತು ಕೊಂಕಣಿ ಕೋಮುಗಳ ಪ್ರತಿನಿಧಿಯಾಗಿರುವರೋ? ಅವರು ಕೊಡಗಿನಲ್ಲಿ ಹುಟ್ಟಿ ಬೆಳೆದವರೆಂದು ಊಹಿಸಿಕೊಂಡರೆ ಅವರು ಈ ಪ್ರಾಂತ್ಯದ ಉದ್ಯೋಗದಲ್ಲಿ ತಕ್ಕ ಭಾಗ ದೊರೆಯಬೇಕೆಂದು ಕೇಳಿದರೂ ಅವರು ನಿಜವಾಗಿ ಪ್ರತಿನಿಧಿಯಾಗಿರುವ ಕೋಮು ಬಹು ಸಣ್ಣದೆಂಬುವುದರಲ್ಲಿ ಸಂಶಯವಿಲ್ಲ. ಅವರು '[illegible]' ಕೋಮಿನ ಪ್ರತಿನಿಧಿಯಾಗಬಹುದಲ್ಲದೆ ಎಲ್ಲಾ ಕೊಡಗೇತರರ ಪ್ರತಿನಿಧಿಯಲ್ಲ. ಹೇಗೂ ಅವರು ಪತ್ರಿಕೆಗೆ ಸೇರಿ ಹನ್ನೊಂದು ಮಾಡಿಕೊಂಡು ತನ್ನ ಕೂಗನ್ನು ಪ್ರಕಟಿಸಿಕೊಳ್ಳಬೇಕೆಂದಿರುವರು. ಮಿ. ರೈಯವರು ಮಂಗಳೂರಿನಿಂದ ಕೆಲವು ಸಮಯಕ್ಕೆ ಹಿಂದೆ ತಾನೇ ಬಂದ ಸುಧಾರಣೆ ಹೊಂದಿದ (Cultured) ಮಹನೀಯರೆಂದು ಊಹಿಸುತ್ತೇನೆ. ಅವರು ಮಂಗಳೂರಿನಲ್ಲಿ ಕೊಂಕಣಿಯು ಬ್ರಾಹ್ಮಣನ ಮೇಲೆ ಜಗಳವಾಡುವುದಾಗಲೀ, ಬಂಟನು ಬಿಲ್ಲವನ ಕುತ್ತಿಗೆ ಹಿಸುಕುವುದಾಗಲೀ ಖಂಡಿತ ನೋಡಿರಲಿಕ್ಕಿಲ್ಲ. ಹಾಗಾದರೆ ಅವರು ಈ ದೇಶದಲ್ಲಿ ಜಾತಿ ಜಾತಿಗಳಿಗೂ, ಕೋಮು ಕೋಮುಗಳಿಗೂ ವೈಮನಸು ಹುಟ್ಟುವಂತೆ ಮಾಡಬೇಕೇ? ಮಹಾತ್ಮ ಗಾಂಧಿಯವರು ಪಡೆಯಲು ಉದ್ದೇಶಿಸಿರುವ ಸ್ವರಾಜ್ಯವು ಅವರಿಗೂ, ಅವರ ಕೋಮಿನವರಾದ ಬೇರೆಯವರಿಗೂ ಮಾತ್ರವಲ್ಲವೆಂಬುವುದು ಮಿ. ರೈಯವರಿಗೆ ತಿಳಿದಿದೆಯೇ? ಮಿ. ರೈಯವರು ದುಡುಕು ಮೇಲು ಪಂಕ್ತಿಯಲ್ಲಿ ಪ್ರವೇಶಿಸಿದವರಾಗಿ ಹೋಗಿದ್ದರೆ ಸಿಕ್ಕುವ ಸ್ವರಾಜ್ಯವನ್ನೆಲ್ಲಾ ಅವರಿಗೂ ಅವರ ಕೊಡಗೇತರ ಪಾರ್ಟಿಯವರಿಗೂ ಇಟ್ಟುಕೊಳ್ಳುತ್ತಿದ್ದರು. ಇನ್ನು ಮೇಲಾದರೂ ಅವರ ಮನೋಭಾವವನ್ನು ಬದಲಾಯಿಸಿ ಈ ದೇಶದ ಬೇರೆ ಕೋಮಿನವರೊಂದಿಗೆ ಬೆರೆತು ಶಾಂತಿಯಿಂದ ಇರಲಿ. ಇವರು ಬೇರೆ ಕೊಡಗೇತರ ಪಾರ್ಟಿ

...ನ್ನು ಮಾಡಬೇಕೆನ್ನುವುದರಿಂದ ಕೊಡವ ಸಭೆಯು ಬಲವು ...ತ್ತರವನ್ನು ಹೆಚ್ಚುತ್ತದೆ. ಹಾಗಾದರೆ ಈ ದೇಶದ ಕೊಡಗೇ ...ರ ಸ್ಥಿತಿಯು ಒಮ್ಮೆಳವಾಗಿ ಕೆಡುತ್ತದೆ. ಕೊಡಗವನ್ನು ಅವರ ...ಕದಲ್ಲೇ ಬಹಿಷ್ಕರಿಸುವ ಪ್ರಯತ್ನದಲ್ಲಿ ಎಂಥಾ ಜಾಣಶೀಲ ...ಗರು ಕೊಡಗೇತರರ ಹಿತಕ್ಕಾಗಿಯೋ ನಾನು ಎಚ್ಚರಿಸು ...ದೇನೆಂದರೆ ಈ ದೇಶದ ಜನಗಳನ್ನು ನಿಲ್ಲಿಸಬೇಕು. ಎಂಥಾ ...ಪೇಟೆಯ ಕೆಲವು ಮುಖ್ಯ ಅಧಿಕಾರಿಗಳೂ ಇತರರೂ ಕೊಡ ...ರ ಮೇಲೆ ದೊಣ್ಣೆ ಬೀಸಲು ಪ್ರಯತ್ನಿಸುತ್ತಾರೆ. ಇವರಿಗೆ ...ಯವರ 'ಕೊಡಗು' ಪತ್ರಿಕೆಯ ಮೂಲಕ ವಿಚಾರಿಸಿಕೊಂ ...ವಾಗಿದೆ. ಇವರು ಕೆಲಸ ಮಾಡಲು ಪ್ರಾರಂಭಿಸುವ ...ಂಚೆ ಚೆನ್ನಾಗಿ ಯೋಚಿಸಬೇಕಾಗಿದೆ.

ಈ ಕಾಲದಲ್ಲಿ ಬ್ರಾಹ್ಮಣ, ಪಂಚಮ ಅಥವ ಜಾತಿ ...ಂಗಡಗಳ ಬೇಧವಿಲ್ಲ. ಎಲ್ಲವರೂ ಬೇರೆಯುವದೊಂದಿಗ ...ಹಿತರಾಗಿಯೂ ಸಹೋದರರಾಗಿಯೂ ಶಾಂತಿಯಿಂದ ...ವಿಸಬೇಕಾಗಿದೆ. 'ಪ್ರ'ಗೂ 'ಣ'ಗೂ ಕೊಡಗ ಕೊಡಗೇ ...ರರಿಗೂ ವ್ಯತ್ಯಾಸ ಮಾಡುವ ಮನುಷ್ಯನು ಬಾವಿಯಲ್ಲಿರುವ ...ಪ್ಪೆಯಂತೆ ದೃಷ್ಟಿಯು ಬಹಳ ಸಂಕುಚಿತವಾದವನಾಗಿದ್ದಾನೆ ...ವರು ನೀರಿಲ್ಲದ ಬಾವಿಗೆ ಬಿದ್ದು ಆತ್ಮ ಹತ್ಯೆ ಮಾಡಿಕೊ... ...ಲು ಪ್ರಯತ್ನಿಸುವವರಂತವರಾಗಿದ್ದಾರೆ. ಅವರ ಶಕ್ತಿಯ ...ನ್ನು ಪ್ರದರ್ಶಿಸಬೇಕಾದರೆ ಒಟ್ಟು ಹಿಂದೂಸ್ಥಾನದ ಜನಾಂಗ ದೊಂದಿಗೆ ಬೆರೆಯುವುದಕ್ಕಿಂತ ಬೇರೆ ಉಪಾಯವಿಲ್ಲ. ಈ ಚಿಕ್ಕ ಪ್ರಾಂತ್ಯದ ಕಿರುಜಗಳ 'ಇಲ್ಲದ' ಕೆಲವು ಕೊಡಗರೊಂ ದಿಗೆ ಹೋರಾಡುವ ಬದಲು ಒಟ್ಟು ಹಿಂದೂಸ್ಥಾನದ 32 ಕೋ ಟಿ ಕೊಡಗೇತರರೊಂದಿಗೆ ಸಾರಿ ತಮ್ಮ ಅಭಿಮಾನವನ್ನು ... ಡಿಕೊಳ್ಳಬಹುದಲ್ಲವೇ ?

ಬಿ ಎ ಕರಿಯಪ್ಪ

Gents Lever Wrist Watch Rs. 4-12-0

ಜೆಂಟ್ಸ್ ಲೀವರ್ ರಿಸ್ಟ್ ವಾಚ್.



ಈ ಹೊಸ ನಮೂನೆ ಗಡಿಯಾರಗಳು ಬಹಳ ಬಲಿಷ್ಠವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟಿ... ನೋಡಲಿಕ್ಕೆ ಬಂಗಾರದ ಗಡಿಯಾರದ ಹಾಗೆ ಕಾಣುವುದು. ಚಿಕ್ಕ ಸೈಜು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುತ್ತೆ. ಇಂಗ್ಲಿಷ್ ಸಾಮಾನಿನ ... ಯಾರ ಗ್ಯಾರಂಟಿ 3 ವರ್ಷ ಗಳು ಕೊಡಲ್ಪಡುತ್ತೆ. ಪ್ರೀ ... ಟ್ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ 4-12-0

ಕಮಲಾ ಟ್ರೇಡಿಂಗ್ ಕಂಪನಿ

17 ಸಮ್ಮಾಳ್ ವಾರ್ ವೀದಿ

4-3 ಜಿ ಟಿ ಮದರಾಸ

British Photo Camera Rs. 2-8-0

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಾಗಳು ವಿಲಾಯಿತಿಯಲ್ಲಿ ತಯಾರಾದವು, ಈ ಕ್ಯಾಮರಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಜೊತೆಯಲ್ಲಿದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪ್ರೋಸ್ಪೆಕ್ಟಸ್ ಕಾಗದದ ಸೈಜಿನಲ್ಲಿ ಫೋಟೋಗಳನ್ನು ಎಷ್ಟು ಮಂದಿಗಳಿಗಾದರೂ ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ ... ಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ... ನ್ನು ಕಳುಹಿಸುವೆವು. ಕೃಪಯ ಕ್ಯಾಮರಾ 1ಕ್ಕೆ ರೂ 2-8-0

ಕಮಲಾ ಟ್ರೇಡಿಂಗ್ ಕಂಪನಿ.

17, ಸಮ್ಮಾಳ್ ವಾರ್ ವೀದಿ,

ಜಿ. ಟಿ. ಮದರಾಸ್

ದಿ ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯುರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪಿಸಲ್ಪಟ್ಟದ್ದು 1897)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ ಜನಪ್ರಿಯವೂ ಆಗಿರುವ ಈ ಕಂಪನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು— ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು— 152-3 ಕನ್ನಿಂಗ್‌ಹ್ಯಾಂ ಸ್ಟ್ರೀಟ್, ಬೆಂಗಳೂರು.

52-5

ಹೊಸ ಪುಸ್ತಕ ಶೃಂಗಾರದ ಪುಸ್ತಕ!!

[illegible]

ಮದನಕಲಾ ಶಾಸ್ತ್ರ.

... ಕ್ರಯ ರೂ ೧-೦-೦

... ಶಾಸ್ತ್ರ ... ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ... ಸ್ತ್ರೀಯರ ... ಫೋಟೋಗಳು ... ರಹಸ್ಯಗಳು ... ಪುರುಷರ ಜಾತಿಯ ಲಕ್ಷಣಗಳು ... ವಿನೋದಗಳು, ರತಿ— ... ಫೋಟೋಗಳ ಸಹಿತ ... ಈ ಶೃಂಗಾರದ ಪುಸ್ತಕವನ್ನು ... ಫೋಟೋಗಳು ಸಹಿತ ಪುಸ್ತಕ ...

ಕಮಲಾ ಟ್ರೇಡಿಂಗ್ ಕಂಪನಿ

17 ಸಮ್ಮಾಳ್ ವಾರ್ ವೀದಿ

1-4 ಜಿ ಟಿ ಮದರಾಸ



52-12

ಎಂ. ಎಸ್. ಶಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಬಂಗಾರದ ನಿಬ್ಬು ಕಾಂತದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟೆನ್ ಪೆನ್‌ಗಳು.

... ಫೌಂಟನ್ ಪೆನ್ 1ಕ್ಕೆ	ರೂ.	3 0 0
,, ,, ಬಿಗ್ ಬ್ಯಾರೆಲ್ ಪೆನ್ 1ಕ್ಕೆ		3 3 0
,, ,, ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ		3 8 0
,, ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ... ಕಲರ್ ಫೌಂಟನ್ ಪೆನ್ 1ಕ್ಕೆ		3 14 0
,, ,, ... ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ		4 2 0
,, ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಬ್ರವುನ್ ಕಲರ್ ಫೌಂಟನ್ ಪೆನ್ 1ಕ್ಕೆ		5 8 0
... ಫೌಂಟನ್ ಪೆನ್	1ಕ್ಕೆ	10 8 0
... ಪೆನ್	1ಕ್ಕೆ	11 0 0, & 20 10 0
... ಫೌಂಟನ್ ಪೆನ್	1ಕ್ಕೆ	3 8 0, & 3 12
... ಫೌಂಟನ್ ಪೆನ್	1ಕ್ಕೆ	6 4 0, & 6 12 0
... ಫೌಂಟನ್ ಪೆನ್	1ಕ್ಕೆ	8 2 0, & 8 10 0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ... ಟೈಂಪೀಸ್	1ಕ್ಕೆ	3 6 0
ಜರ್ಮನ್ ಮೇಡ್ ... ಟೈಂಪೀಸ್	1ಕ್ಕೆ	[illegible]
... ಅಲಾರಂ ಟೈಂಪೀಸ್	1ಕ್ಕೆ	6 0 ...
... ಅಲಾರಂ ಟೈಂಪೀಸ್	1ಕ್ಕೆ	[illegible]
... ಅಲಾರಂ ... ಟೈಂಪೀಸ್ ...	1ಕ್ಕೆ	[illegible]
... ಅಲಾರಂ ಟೈಂಪೀಸ್	1ಕ್ಕೆ	[illegible]
... ಅಲಾರಂ ... ಟೈಂಪೀಸ್	1ಕ್ಕೆ	14 ...
... ವಾಚ್	1ಕ್ಕೆ	5 ...
... ಪಾಕೆಟ್ ವಾಚ್	1ಕ್ಕೆ	12 4
... ರಿಸ್ಟ್ ವಾಚ್	1ಕ್ಕೆ	5 4 0, 7 8 0, 10 0 0 & 12 8



... ಅಲ್ಲದೆ ... ಫೌಂಟನ್ ಪೆನ್‌ಗಳು ... ದೊರೆಯುವವು.

ಮನಿ ಆರ್ಡರ್ ರವಾನಿಸಬೇಕಾದ ವಿಳಾಸ— ಎಂ. ಎಸ್. ಶಿದ್ದಪ್ಪ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

52-12

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	26,800
ಜಪ್ತಬಂದ ಠೇವಣಾತಿ —	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಮಾತ್ರ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ

ಪ್ರೆಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1931.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. — ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. — ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ
ಫಂಡವಾಳವು ಹೆಚ್ಚಾದದ್ದು—ಸುಮಾರು 20½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಹೊಂದಿರುವ 1,78,322 ಜನರಿಗೆ 38ಕೋಟಿ ರೂ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 ಕ್ಕಿಂತ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟವು. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ವರ್ಷಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಜಾಲಗಾಂವ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,

52—39 ಗಿರಿಗಾಂವ, ಮುಂಬಯಿ.

ಮಲೇರಿಯಾ ಜ್ವರಕ್ಕೆ

ಮಲೇರಿಯಾನ

ಕೊಡಗಿನ ಗುಡುಗುಡು ಎಂಬ ಚಳಿ ಜ್ವರಕ್ಕೂ, ಸುಡುಸುಡು ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಔಷದವೆಂದು ತಿಳಿದೆ? ಇಗೋ ರಾಜಮದ್ದು ಮಲೇರಿಯಾ ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗೆಡ್ಡೆಯನ್ನು ಖಾತ್ರಿಯಾಗಿ ಬಿಡುತ್ತದೆಂದು ಸ್ಥಿರ ನಂಬು ಕ್ರಯ ಬಾಟ್ಲಿಗೆ 1—, ½ ಡಜನ್ 8—8—0. 1 ಡಜನ್ 16—8—0.

ಕಂಪೌಂಡು ಸಿರಪ್ಪು ಬ್ಲಟಿ.

ಗುರುಗುರು ಉಬ್ಬಸ ಸೀನಸದ ರೋಗದಿಂದ ಕಠಿಣ ಕಷ್ಟ ಗಟ್ಟಿಯಾಗಿ ಎಳದಾಟ ಎದೆ ಮತ್ತು ಪಾರ್ಶ್ವನೋವು ಬಾಯುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು ಕಡೆಗೆ ಕಂಪೌಂಡು ಸಿರಪ್ಪು ಬ್ಲಟಿ ಎಂಬದನ್ನು ತಕ್ಷಣ ತರಿಸಿ ಕುಡಿಯಲಿ ಕ್ರಯ ಬಾಟ್ಲಿಗೆ ರೂ. 3—8—0.

ಕಂಪೌಂಡು ಸಿರಪ್ಪು ಬಸಲೀನ:—ಶ್ವಾಸಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪ್ಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿ ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು, ಕೆಮ್ಮು ಎದೆನೋವು, ರಕ್ತ ಬೆರತ ಕಫ, ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ರೋಗ ಮುಂದರಿಯದಂತೆ ಶಾಶ್ವತ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3—8—0.

ಕಂಪೌಂಡು ಸಿರಪ್ಪು ಸೆಬೀನ ಸೇಸಿಯಾ:—ಹೆಂಗಸರ ಮೂತ್ರದ್ವಾರದಿಂದಲೂ, ಗರ್ಭದ್ವಾರದಿಂದಲೂ ಹರಿಯುವ ಬಿಳೇ ಮೇಹ ರೋಗದಿಂದ ಸೊಂಟನೋವು, ಕೈಕಾಲು ಬಚ್ಚಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಗೊಳಿಸಿ ಬಲಪಡಿಸುವುದು ಕ್ರಯ ಬಾಟ್ಲಿಗೆ ರೂ. 3—8—0.

ಕಂಪೌಂಡು ಸಿರಪ್ಪು ಪೆಸಿಫೂರ:—ಪ್ರಮೇಹವೆಂಬ ಗುಪ್ತರೋಗವನ್ನು ಪಡೆಕೊಂಡು, ಮೂತ್ರ ಬಿಂದು ಬಿಂದುಗಳಾಗಿ ದ್ವಾರದೊಳಗೆ ಹುಣ್ಣು ವ್ರಣಗಳು, ದುರ್ನಾತ ಕೂಡಿದ ಕಳದಿ ಬಂದಾದ ರೀತಿಗೆ ಇತ್ಯಾದಿ ಕಠಿಣ ತರದ ರೋಗವನ್ನು, ಈ ಬಲವಾದ ಸಿರಪ್ಪು ಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ. 3—8—0.

ಶುದ್ಧ ವೈದ್ಯಮದ್ದುಗಳೂ ಹೋಮಿಯೋಪಥಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಫಟ 3—ರ ವರೆಗೆ ಓದಿಕೊಂಡು ಬರೆಯತಕ್ಕದ್ದು ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಬಸರಿಗೆ ಅವಶ್ಯ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯದಿಗೆ ದೊರಕುತ್ತವೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

52—48 **Malariana Co.,**
Hampankatta No 14. Mangalore.

ವಿಳಾಸ:—ಮಲೇರಿಯಾನ ಕಂಪೆನಿ,
ಹಂಪನಕಟ್ಟೆ, ನಂಬ್ರ 14, ಮಂಗಳೂರು ಪೋಸ್ಟು

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
ಮೆ. ಚೌರಿರ ಮಾಚಯ್ಯನವರು,

ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಚ್ಚಯ್ಯನವರು,
ಮರನಾಡು—ಮೆ. ಕೇಕಿರ ಅಚ್ಚಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದವ್ವಯ್ಯನವರು,
„ ಮೆ. ಸಣ್ಣುವಂಡ ಪೋಪ್ಪಯ್ಯನವರು ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಕ್ಕೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕಾರ್ಯದರ್ಶಿಗಳೂ ಮೆಂಬರನಲ್ಲಿಯೂ ಇರಬೇಕಾದ ಅಮಿತ ವ್ಯಾಪಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳ ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸ್ ಪ್ರಕಾರವಾಗಿ ತಯಾರಿಸಲ್ಪಟ್ಟಿಂತ ದಾವಾ ಫಾರಮುಗಳೂ ಪಿರಿಯಾದು ಫಾರಮುಗಳೂ, ಜಮ್ಮಾ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ.ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

Printed & published by P. I. Belliappa at "Kodagu" Press Mercara for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

[illegible]

ವರ್ಷಕ್ಕೆ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೧ನೇ ಇಸವಿ ಅಕ್ಟೋಬರ್ ತಾರೀಕು ೯ ನೇ ಶುಕ್ರವಾರ.	ಸಂಚಿಕೆ ೧೯

Telegrams Precious

S. Subramaniar Jeweller,

Telephone—3143

DIAMAND MERCHANT GOLD & SILVER SMITH.

Deals in all:-

SPORTS CUPS in all prices
MEADALS in up to date patterns
CASKETS in elegant styles

Nos 2 & 3, Kuppamuthu st,
TIRUVATESWARAPET,
Post Box 123, Triplicane P. O.,
MADRAS.

Deals in all:-

GEM SET JEWELS, set with diamond, Rubies etc,
GOLD ARTICLES of all patterns
SILVER WARE in latest style.

52—47



ಕೋವಿಗಳು, ಕತ್ತಿಗಳು, ಬಾಕುಗಳು, [illegible]

[illegible]

GOOLA[illegible]HUSA[illegible]LLJHOY
Largest Impor[illegible] of Firear[illegible]s and [illegible]ition
Cheapest priced firm in India,
24—4 210 Abdul Rehman Street, BOMBAY.

[illegible]

ಪ್ರತಿ ಜ್ವರಕ್ಕೆ [illegible]

[illegible]

52—22

ಬಾಲಾರ್ಕಮದು.

[illegible] ಬಾಲಾರ್ಕಮಧುವನ್ನು [illegible]

[illegible]

ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

ಕೊಡಗು.

ಸನ್ ೧೯೩೧ನೇ ಇಸವಿ

ಅಕ್ಟೋಬರ್ ತಾ ೯ನೇ ಶುಕ್ರವಾರ.

ಕೊಡಗಿನಲ್ಲಿ ಹೊಸ ತೆರಿಗೆ.

ಸಹಕಾರಿ ಸಂಘಗಳು ಬಡ ಜನರ, ಮುಖ್ಯ ಬಡ ರೈತರ ಸಹಾಯಕ್ಕಾಗಿ ಇರುವ ಸಂಸ್ಥೆಗಳಾದ್ದರಿಂದ ಅವುಗಳಿಗೆ ಸರಕಾರವು ವಿಧ ವಿಧದ ರಿಯಾಯಿತಿಗಳನ್ನು ಕೊಟ್ಟಿತ್ತು. ಅವುಗಳಲ್ಲಿ ಸಂಘಗಳಿಗೆ ಮೆಂಬರುಗಳು ಬರಕೊಡುವ ಖರಾರುಗಳಿಗೂ, ಸಂಘಗಳು ಬೇರೆಯವರಿಗೆ ಬರಕೊಡುವ ಖರಾರುಗಳಿಗೂ ಛಾಪಾಕಾಗದ ಬೇಕಿಲ್ಲವೆಂತಲೂ, ಅಂಥಾ ಖರಾರುಗಳನ್ನು ರಿಜಿಸ್ಟರ್ ಮಾಡಿಸುವದಕ್ಕೆ ರಿಜಿಸ್ಟ್ರೇಶನ್ ಫೀಸ್ ಕೊಡಬೇಕಾದದ್ದಿಲ್ಲವೆಂತಲೂ ರಿಯಾಯಿತಿ ಕೊಡಲಾಗಿತ್ತು. ಈಗಿನ ಸರಕಾರದ ಆರ್ಥಿಕ ಸ್ಥಿತಿಯಲ್ಲಿ ಅಂದರೆ ಖರ್ಚಿಗೆ ತಕ್ಕಷ್ಟು ಉತ್ಪತ್ತಿ ಇಲ್ಲದಿರುವಾಗ ಸರಕಾರದ ಖರ್ಚನ್ನು ಯಾವ ಯಾವ ವಿಧದಲ್ಲಿ ಕಡಿಮೆ ಮಾಡಬಹುದೆಂಬದನ್ನೂ, ಯಾವ ಯಾವ ಹೊಸ ತೆರಿಗೆಯನ್ನು ಹಾಕಬಹುದೆಂಬದನ್ನೂ ಆಲೋಚಿಸಲು ಒಂದು ಕಮಿಟಿಯು ನೇಮಕವಾಗಿ ಕೆಲಸ ಮಾಡುತ್ತಿರುವುದು ವಾಚಕರಿಗೆ ತಿಳಿದಿದೆಯಷ್ಟೆ. ಯಾವ ಯಾವ ರೀತಿಯಲ್ಲಿ ಖರ್ಚು ಕಡಿಮೆ ಮಾಡಬಹುದೆಂಬದನ್ನು ಶಿಫಾರಸು ಮಾಡಿರುತ್ತಾರೋ ತಿಳಿಯದು. ಆದರೆ ಅವರ ಶಿಫಾರಸಿನ ಫಲಿತಾಂಶವಾಗಿ ಮೇಲ್ಕಂಡ ಮೇರೆ ಸಹಕಾರಿ ಸಂಘಗಳಿಗೆ ಕೊಡಲ್ಪಟ್ಟಿದ್ದ ರಿಯಾಯಿತಿ ಅರ್ಧದಷ್ಟು ಸರಕಾರವು ತೆಗೆದು ಹಾಕಿದೆಯಾಗಿದೆಯೆಂದು ಗಜೆಟಿನಿಂದ ತಿಳಿದು ಬರುತ್ತದೆ.

ಒಟ್ಟು ಇಂಡಿಯಾದಲ್ಲೂ, ಅದರಂತೆಯೇ ನಮ್ಮ ದೇಶದಲ್ಲಿ ಸರಕಾರವು ಖರ್ಚು ಕಡಿಮೆ ಮಾಡಲು ಸಾಧ್ಯವಿದ್ದಷ್ಟು ಮಾಡದೆ ಜನರ ಮೇಲೆ ಹೊಸ ತೆರಿಗೆಯನ್ನು ಹಾಕುವುದು ಬಹಳ ಅನ್ಯಾಯವಾಗಿದೆ. ಖರ್ಚು ಕಡಿಮೆ ಮಾಡುವ ಬಾಬಿನಲ್ಲಿ ಸರ್ಕಾರ್ ತಿರುಗುವ ಅಧಿಕಾರಿಗಳ ಪಕ್ಕ ಮಾತ್ರ ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿರುವ ವರ್ತಮಾನವಿದೆಯೇ ಹೊರತು ಬೇರೆ ಯಾವ ಬಾಬಿನ ಖರ್ಚನ್ನೂ ಕಡಿಮೆ ಮಾಡುವ ಪ್ರಯತ್ನ ಇನ್ನೂ ನಡೆದಂತೆ ತೋರುವುದಿಲ್ಲ. ಭತ್ಯ ಕಡಿಮೆ ಮಾಡುವುದು ನಾವು ಈ ಮೊದಲೇ ಕೊಟ್ಟ ಸಲಹೆಯಂತೆ ಮಾಡಬೇಕಾದದ್ದು ಮಾಡಿರುವುದಿಲ್ಲ. ಹೆಚ್ಚು ಭತ್ಯ ಸಿಕ್ಕುವ ಅಧಿಕಾರಿಗಳ ಭತ್ಯವನ್ನು ಹೆಚ್ಚಾಗಿ ಕಡಿಮೆ ಮಾಡಬೇಕಿತ್ತು. ಹಾಗೆ ಎಲ್ಲರ ಭತ್ಯವನ್ನೂ ಒಂದೇ ದರದಲ್ಲಿ ಕಡಿಮೆ ಮಾಡಿದ್ದು ಯುಕ್ತವಲ್ಲ. ಅದು ಹಾಗಿರಲಿ—ಈ ಬಾಬಿನಲ್ಲಿ ಆದ ಉಳಿತಾಯವೂ ಬಹಳವಿರಲಾರದು. ಅಧಿಕಾರಿಗಳ ಸಂಬಳವನ್ನು ದರ್ಜೆವಾರು ಕಡಿಮೆ ಮಾಡಬೇಕಿತ್ತು. ಅದನ್ನು ಇನ್ನೂ ಮಾಡಿರುವುದಿಲ್ಲ. ಇಂಡಿಯಾ ಸರಕಾರದ ತೀರ್ಮಾನವನ್ನೇ ನಮ್ಮ ಸರಕಾರವೂ ಅನುಸರಿಸುವುದಾದರೆ ಎಲ್ಲಾ ದರ್ಜೆಯ ಅಧಿಕಾರಿಗಳ ಸಂಬಳವನ್ನೂ ಶೇಕಡ 10 ರಷ್ಟು ಕಡಿಮೆ ಮಾಡಬಹುದು. ಇದರಲ್ಲಿಯೂ ನ್ಯಾಯವಿಲ್ಲ. ಅಧಿಕಾರಿಗಳು ಹೊಂದುವ ಸಂಬಳದಲ್ಲಿ ತರಗತಿಮಾಡಿ ಹೆಚ್ಚೆಚ್ಚು ಸಂಬಳ ಪಡೆಯುವವರ ಸಂಬಳದಲ್ಲಿ ಹೆಚ್ಚೆಚ್ಚು ಕಡಿಮೆಮಾಡಿ 50 ರೂಪಾಯಿ ಒಳಗೆ ತಿಂಗಳಿಗೆ ಸಂಬಳವಿರುವವರ ಸಂಬಳವನ್ನು ಕಡಿಮೆ ಮಾಡಬಾರದಿತ್ತು.

ಹೇಗೂ ಇರಲಿ, ಈ ಬಾಬಿನಲ್ಲಿ ಖರ್ಚು ಕಡಿಮೆ ಮಾಡುವ ಮುಂಚೆ ಈ ತಿಂಗಳ 1 ನೇ ತಾರೀಖಿನಿಂದಲೇ ಸಹಕಾರಿ ಸಂಘಗಳಿಗೆ ಇದ್ದ ಸ್ಟಾಂಪಿನ (ಛಾಪಾಕಾಗದದ) ಮತ್ತು ರಿಜಿಸ್ಟರು ಖರ್ಚಿನ ರಿಯಾಯಿತಿಯನ್ನು ಈ ತಿಂಗಳು 1 ನೇ ತಾರೀಖಿನಿಂದಲೇ ತೆಗೆದು ಹಾಕಿ 1ನೇ ತಾರೀಖಿನ ಅನಂತರ ಆಗುವ ಲಿಖಾವಟ್ಟುಗಳಿಗೆ ಅರ್ಧ ಸ್ಟಾಂಪೂ, ಅರ್ಧ ರಿಜಿಸ್ಟರ್ ಖರ್ಚು ಕೊಡಬೇಕೆಂತ ಮಾಡಿ ಈಗಾಗಲೇ ಸಾಲದಲ್ಲಿ ಮುಳುಗಿ ನರಳುತ್ತಿರುವ ಸಂಘಗಳ ಮೆಂಬರುಗಳಿಗೆ ದೊಡ್ಡ ಹೊರೆ ಹಾಕಿದರು. ಈ ವರ್ಷ ರೈತರು ಬೆಳೆಯುವ ದವಸ ಧಾನ್ಯಗಳಿಗೆ ಬೆಲೆ ಇಲ್ಲದೆ ಸಂಘಗಳ ಸಾಲಗಳನ್ನು ರೈತರು ಕಟ್ಟಿದ್ದೇ ಬಹಳ ಕಡಿಮೆಯಾಗಿರುವಾಗ ಸಂಘಗಳಿಂದ ಸಾಲ ತೆಗೆದುಕೊಳ್ಳುವವರೂ ಸಂಘಗಳು ಬ್ಯಾಂಕಿಗೆ ಬರಕೊಡುವ ಲಿಖಾವಟ್ಟುಗಳಿಗೂ ಅರ್ಧ ಸ್ಟಾಂಪುಡ್ಯೂಟಿ ಕೊಡಬೇಕೆಂತ ಅಂದರೆ ಸಾಧಾರಣವಾಗಿ ಇತರರು ಖರಾರುಗಳಿಗೆ ಉಪಯೋಗಿಸುವ ಛಾಪಾಕಾಗದದ ಅರ್ಧ ಬೆಲೆಯ ಕಾಗದವನ್ನು ಉಪಯೋಗಿಸಬೇಕೆಂತಲೂ, ಅರ್ಧ ರಿಜಿಸ್ಟರು ಖರ್ಚು ಕೊಡಬೇಕೆಂತಲೂ ಮಾಡಿ ಈ ಮೊದಲೇ ಗರೀಬರಾದವರ ಮೇಲೆ ಇನ್ನೊಂದು ಹೊರೆ ಹಾಕಿರುವುದೂ ಅಲ್ಲದೆ ಎಲ್ಲಾ ವಿಧದಿಂದಲೂ ಸಹಾನುಭೂತಿ ದೊರಕಬೇಕಾದ ಸಹಕಾರಿ ಚಳವಳದ ಅಭಿವೃದ್ಧಿಗೆ ಒಂದು ಅಡಚಣೆ ಮಾಡಿದಂತೆಯೇ ಆಯಿತು.

1923 ರಲ್ಲಿ ಲಿಖಾವಟ್ಟುಗಳಿಗೆ ಹಾಕಬೇಕಾದ ಮತ್ತು ವ್ಯಾಜ್ಯಗಳಿಗೆ ಕೊಡಬೇಕಾದ ಸ್ಟಾಂಪನ್ನು ಒಂದಕ್ಕೆ ಒಂದೂವರೆ ಮಾಡಿದರು. ಆಗ ಜನರನ್ನು ಕೇಳಲಿಲ್ಲ. ಕೇಳಲಿಕ್ಕೆ ಅನುಕೂಲವೂ ಇರಲಿಲ್ಲ. ಈಗ ಕೌನ್ಸಿಲಾದರೂ ಇದೆ. ಕೌನ್ಸಿಲನ್ನು ಕೇಳದೆ ಈ ರೀತಿ ಚೀಫ್ ಕಮಿಶನರು ತಮ್ಮ ನಿರಂಕುಶ ಅಧಿಕಾರವನ್ನು ಉಪಯೋಗಿಸಿದ್ದು ಶೋಚನೀಯವೇ ಸರಿ. ಅಧಿಕಾರಿಗಳಲ್ಲದ ಕೌನ್ಸಿಲು ಮೆಂಬರುಗಳಿಂದ ಕೂಡಿದ ರಿಟ್ರೆಂಚ್‌ಮೆಂಟ್ ಕಮಿಟಿಯು ಶಿಫಾರಸು ಮೇರೆ ಮಾಡಿದ್ದೆನ್ನಬಹುದು. ಈ ಅಧಿಕಾರಿಗಳಲ್ಲದ ಮೆಂಬರುಗಳು ರೈತರ ಮೇಲೆ ಹೇರಿಸಿದ ಈ ಹೊರೆಗೆ ಒಪ್ಪಿಗೆ ಕೊಟ್ಟಿದ್ದರೆ ಇನ್ನಷ್ಟು ಶೋಚನೀಯವೇ ಸರಿ. ಇವರು ಸರಕಾರಕ್ಕೆ ಖರ್ಚಿಗೆ ಹಣವಿಲ್ಲವೆಂಬದನ್ನೇ ಮನಸಿಗೆ ತೆಗೆದುಕೊಂಡಿರಬೇಕೇ ಹೊರತು, ರೈತರ ಜೀವನವೇ ಅತಿ ಕಷ್ಟವಾಗಿರುವಾಗ ಅವರ ಕಷ್ಟನಿವಾರಣೆಗೆ ದಾರಿಯಾವುದೆಂಬದನ್ನು ಯೋಚಿಸಿರುವಂತೆ ಕಾಣುವುದಿಲ್ಲ. ಇವರಿಗೆ ರೈತರಗೋಳು ತಿಳಿದಿರುವಂತೆ ತೋರುವುದಿಲ್ಲ. ಸರಕಾರಿ ದೊಡ್ಡ ಖರ್ಚನ್ನು ಕಡಿಮೆ ಮಾಡುವ ಮುಂಚೆ ಯಾವ ತೆರಿಗೆ ಹಾಕಿದರೂ ರೈತರ ಅತೃಪ್ತಿ ಹೆಚ್ಚಾಗದಿರಲಾರದು.

ಇಂಡಿಯಾ ಸರಕಾರದ ತೆರಿಗೆಗಳು.

ಇಂಡಿಯಾ ಸರಕಾರವು ತುಂಬಾ ಹೊಸ ತೆರಿಗೆಗಳನ್ನು ಹಾಕುವ ಯೋಚನೆ ಮಾಡಿರುತ್ತದೆ. ಇಂಡಿಯಾ ಸರಕಾರವು ಹಾಕುವ ತೆರಿಗೆಗಳು ಹೆಚ್ಚಿನವು ಅಪ್ರತ್ಯಕ್ಷದವು. ಆದರೆ ರೈತರು ತೆರಿಗೆಯಾಗಿಯೇ ಕೊಡುವುದಿಲ್ಲ. ಉತ್ಪತ್ತಿ ಕಂದಾಯ (ಇನ್‌ಕಂಟ್ಯಾಕ್ಸ್) ಮಾತ್ರ ಪ್ರತ್ಯಕ್ಷ ಕಂದಾಯ. ವರ್ಷಕ್ಕೆ 2000 ರೂ ಗಿಂತ ಹೆಚ್ಚಾಗಿ ಉತ್ಪತ್ತಿ ಇದ್ದವರಿಗೆ ಈ ವರ್ಷದ ವರೆಗೆ ರೂಪಾಯಿಗೆ 5 ಕಾಸಿನಿಂದ ಹಿಡಿದು ಹೆಚ್ಚೆಚ್ಚು ಉತ್ಪತ್ತಿ ಇದ್ದಂತೆ ಹೆಚ್ಚೆಚ್ಚು ದರದಲ್ಲಿ ಕಂದಾಯ ವಸೂಲ್ ಮಾಡುತ್ತಿದ್ದರು. ಈ ವರ್ಷದ ಪ್ರಾರಂಭದಿಂದ ಅಂದರೆ ಏಪ್ರಿಲ್ 1 ರಿಂದ 2000 ರೂ ಉತ್ಪತ್ತಿ ಇರುವವರಿಗೆ ರೂಪಾಯಿಗೆ 9 ಕಾಸಿನಿಂದ ಹಿಡಿದು ದರವನ್ನು ಹೆಚ್ಚಿಸಿದರು. ಇದು ಸಾಲದೆ ಈಗ ಪುನಃ 2000 ರೂ ಗಿಂತ ಹೆಚ್ಚಿನ ಉತ್ಪತ್ತಿ ಇರುವವರಿಗೆ ಒಂದಕ್ಕೆ ಎಂಟನೇ ಒಂದು ಭಾಗದಷ್ಟು ಏರಿಸಲು ಯೋಚಿಸಿದ್ದಾರೆ—ಅಲ್ಲದೆ 1000 ರೂ. ನಿಂದ 2000 ರೂ. ವರೆಗೆ ಉತ್ಪತ್ತಿ ಇರುವವರಿಗೆ ಈ ವರ್ಷ ರೂಪಾಯಿಗೆ 2 ಕಾಸು ಬರುವ ವರ್ಷ 4 ಕಾಸು ದರದಲ್ಲಿಯೂ ಕಂದಾಯ ಹಾಕುವ ಯೋಚನೆ ಮಾಡಿರುತ್ತಾರೆ. ಕೆಲವು ವರ್ಷಗಳ ಹಿಂದೆ 1000 ರೂ. ಗಿಂತ ಹೆಚ್ಚು ಉತ್ಪತ್ತಿ ಇರುವವರಿಗೆ ಕಂದಾಯವಿತ್ತು. ರೈತರ ಪ್ರತಿನಿಧಿಗಳು ಕೌನ್ಸಿಲುಗಳಲ್ಲಿ ಹೋರಾಡಿ ಇದು ವಜವಾಗಿತ್ತು. ಇದನ್ನು ಈಗ ಪುನಃ ಹಾಕುವ ಯೋಚನೆ ಮಾಡಿದ್ದಾರೆ.

ಪರದೇಶದಿಂದ ಬರುವ ಎಲ್ಲಾ ಸಾಮಾನುಗಳಿಗೆ ಇದ್ದ ಸುಂಕವನ್ನು ಒಂದಕ್ಕೆ ಒಂದೂಕಾಲಿನಷ್ಟು ಹೆಚ್ಚಿಸಿದ್ದಾರೆ. ಉಪ್ಪಿಗೆ ಸಹ ಸುಂಕವನ್ನು ಒಂದೂಕಾಲಕ್ಕೆ ಏರಿಸಿದ್ದಾರೆ. ಈ ಎಲ್ಲಾ ಸುಂಕ ರೂಪದಲ್ಲಿ ವ್ಯಾಪಾರಿಗಳು ಕೊಡುವ ಹಣವು ರೈತರ ಮೇಲೆಯೇ ಬೀಳುವಂಥಾದ್ದು. ವ್ಯಾಪಾರಿಗಳು ಕೊಡುವ ಹೆಚ್ಚಿನ ಹಣವನ್ನು ಸಾಮಾನುಗಳ ಮೇಲೆ ಹೊರಿಸುವುದರಿಂದ ಅಂಥಾ ಸಾಮಾನುಗಳನ್ನು ಕೊಂಡುಕೊಳ್ಳುವ ಜನರು ಹೆಚ್ಚಿನ ಕ್ರಯ ರೂಪದಲ್ಲಿ ಈ ತೆರಿಗೆಗಳನ್ನು ಕೊಟ್ಟಂತಾಯಿತು. ಇದಕ್ಕಾಗಿಯೇ ಈ ತೆರಿಗೆಗಳು ಪ್ರತ್ಯಕ್ಷವಾಗಿ ಕೊಡುವ ಹಾಗಲ್ಲವೆಂತ ಹೇಳುವುದು.

ಪೋಸ್ಟಾಫೀಸುಗಳ ಮೂಲಕ ಕಾಗದ ಬರೆಯುವವರು ಮುಂಚೆ ಕಾರ್ಡಿಗೆ 3 ಕಾಸೂ ಕಾಗದಕ್ಕೆ 6 ಕಾಸೂ ಹಾಕುತ್ತಿದ್ದದ್ದು ಜನರಿಗೆ ನೆನಪಿನಲ್ಲಿರಬಹುದು. ಅದನ್ನು ಒಂದಕ್ಕೆ ಎರಡಾಗಿ ಹೆಚ್ಚಿಸಿ ಕೆಲವು ವರ್ಷಗಳಾದವು. ಈಗ ಪುನಹ ಅದನ್ನು ಒಂದಕ್ಕೆ ಒಂದೂವರೆಗೆ ಅಂದರೆ ಕವರಿಗೆ 1¼ ಆಣೆ ಕಾರ್ಡಿಗೆ 9 ಕಾಸು ಸಹ ಮಾಡುವ ಯೋಚನೆ ಮಾಡಿದ್ದಾರೆ. ಇದರಿಂದಲೂ, ಉಪ್ಪಿನ ಸುಂಕದಿಂದಲೂ ಬಡವರಿಗೆ ಸಹ ಹೊರೆ ಹೊರಿಸಿದಂತಾಯಿತು.

ಈ ಎಲ್ಲಾ ಹೆಚ್ಚಿನ ತೆರಿಗೆಗಳನ್ನು ಕೂಡಲೇ ಜಾರಿಗೆ ತರಬೇಕೆಂತ ಸರ್ಕಾರವು ಅವಸರದಲ್ಲಿತ್ತು. ಆದರೆ ಕೌನ್ಸಿಲು ಮೆಂಬರುಗಳು ಆಕ್ಷೇಪಿಸಿದ್ದರಿಂದ ಇವುಗಳನ್ನು ಹಾಕುವ ವಿಷಯ ಚರ್ಚೆಯು ಮಧ್ಯವರ್ತಿ ನ್ಯಾಯವಿಧಾಯಕ ಸಭೆಯಾದ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ನವಂಬರ್ ವರೆಗೆ ಮುಂದರಿಸಲಾಗಿದೆ. ಆದರೆ ಪ್ರೆಸ್ ಬಿಲ್ಲಿನಂಥ ಪ್ರಜಾ ಸ್ವಾತಂತ್ರ್ಯಕ್ಕೆ ಹಾನಿ ತರುವ ಕಾನೂನನ್ನೇ ಸುಲಭದಿಂದ ಮಂಜೂರ್ ಮಾಡಿಸಿಕೊಳ್ಳಲು ಸಾಧ್ಯವಾದಂಥ ಎಸೆಂಬ್ಲಿಯಲ್ಲಿ ಈ ಎಲ್ಲಾ ತೆರಿಗೆಗಳಿಗೂ ಎಸೆಂಬ್ಲಿಯ ಅನುಮತಿ ದೊರಕದ ಆಶ್ಚರ್ಯ ಪಡಬೇಕಾಗಿರಲಾರದು. ಎಸೆಂಬ್ಲಿಯ ಕೆಲವು ಜನಪ್ರಿಯ ಮೆಂಬರುಗಳು ದುಂಡು ಮೇಜು ಪರಿಷತ್ತಿಗೆ ಹೋಗಿದ್ದಾರೆ. ರಾಗಿನ ಎಸೆಂಬ್ಲಿಯನ್ನು ಕಾಂಗ್ರೆಸಿನವರು ಬಹಿಷ್ಕರಿಸುವುದರಿಂದ ಅದರಲ್ಲಿ ಜನರ ಸಂಧಿಗೆ ಪಾತ್ರರಾದ ಮೆಂಬರುಗಳು ಅತಿ ವಿರಳ, ಆದ್ದರಿಂದ ಸರ್ಕಾರಕ್ಕೆ ಬೇಕಾದಂಥ ವಿಷಯಗಳನ್ನು ಜಾರಿ ಮಾಡಿಸಿಕೊಳ್ಳಲು ಅನುಕೂಲವಾಗಿದೆ.

ಮಹಾತ್ಮ ಗಾಂಧಿಯವರ ಕಳೆದ ಅಸಹಕಾರವು ಮುಖ್ಯವಾಗಿ ಉಪ್ಪಿನ ಸುಂಕದ ಮೇಲೆಯೇ ನಡೆದದ್ದು [illegible] ಸರಕಾರವು ಎಲ್ಲಾ ತೆರಿಗೆಗಳಿಗಿಂತ ಉಪ್ಪಿನ ಸುಂಕವೇ [illegible] ಗಿ ಧರ್ಮಕ್ಕೆ ವಿರುದ್ಧವಾದದ್ದೆಂತ ಮಹಾತ್ಮರು ತಿಳಿದು [illegible] ಮೇಲೆ ತಮ್ಮ ಚಳವಳ ನಡಿಸಿದರು. ಅತಿ ಬಡವರಿಗೂ [illegible] ನುವಾರುಗಳಿಗೂ ಅತಿ ಅವಶ್ಯವಾದ ದೇವರು ಬೇಕಾದಷ್ಟು ಒದಗಿಸಿ ಕೊಟ್ಟಿರುವ ಈ ವಸ್ತುವನ್ನು ಏನೂ ಖರ್ಚಿಲ್ಲದೆ [illegible] ಮಾಯಿಸಿಕೊಳ್ಳುವ ಸ್ವತಂತ್ರವನ್ನು ಕಳೆದು ಸರ್ಕಾರವು [illegible] ರಿ ಸುಂಕವೆಂಬ ಹೊರೆ ಏರಿಸಿ ಕೊಡುವುದನ್ನೇ ಉಪ್ಪಿ [illegible] ಗಿಸಬೇಕೆಂತ ನಿರ್ಬಂಧಿಸಿದ್ದು ಪೂರಾ ಅನ್ಯಾಯವೆಂಬುದು [illegible] ತ್ಯಕ್ಷವಾದ ಸಂಗತಿ. ಮಹಾತ್ಮಾಜೀಯವರು ಇತ್ತೀಚೆಗೊಂದು ವ್ಯಾಖ್ಯಾನ ಕೊಡುತ್ತಿದ್ದರೆಂಬದು ಗಾಂಧಿ [illegible] ಇರ್ವಿನ್ ರಾಜಿಯಲ್ಲಿ ಸಹ ಉಪ್ಪು ದೊರೆಯುವ ಸ್ಥಳದ [illegible] ಬರು ಸುಂಕವಿಲ್ಲದೆ ಉಪ್ಪನ್ನು ಜಮಾಯಿಸಿಕೊಳ್ಳ [illegible] ವೆಂಬ ಶರತನ್ನು ಮಂಜೂರು ಮಾಡಿಸಿಕೊಂಡಿದ್ದಾರೆಂಬುದು [illegible] ತಿಳಿಯುತ್ತದೆ ಅಲ್ಲದೆ ಸ್ವರಾಜ್ಯ ಸರ್ಕಾರದಲ್ಲಿ ಉಪ್ಪಿನ [illegible] ಕವಿರಲಿಕ್ಕೇ ಕೂಡದೆಂತ ಸಹ ಒಂದು ಶರತು ಮಾಡಿಕೊಂಡಿದ್ದಾರೆ.

ಸ್ವರಾಜ್ಯ ಚಳವಳದಲ್ಲಿ ಉಪ್ಪಿನ ಸುಂಕವನ್ನು ತೆಗೆದು ಹಾಕುವ ವಿಷಯಕ್ಕೆ ಇಷ್ಟೊಂದು ಪ್ರಾಮುಖ್ಯತೆ [illegible] ಸ್ವರೂ ಸ್ವರಾಜ್ಯ ಕೊಡುವ ವಿಷಯ ದುಂಡು ಮೇಜು [illegible] ಷತ್ತಿನಲ್ಲಿ ಚರ್ಚೆ ನಡೆಯುತ್ತಿರುವಾಗಲೇ ಇಂಡಿಯಾ ಸರ[illegible] ರವು ಉಪ್ಪಿನ ಸುಂಕವನ್ನು ತೆಗೆದು ಹಾಕುವ ಬದಲು ಅದನ್ನು ಏರಿಸಲು ಯೋಚಿಸಿರುವುದನ್ನು ನೋಡಿದರೆ ಈಗಿನ ಸರ್ಕಾರವು ಜನರ ಅಭಿಪ್ರಾಯವನ್ನು ಎಷ್ಟರ ಮಟ್ಟಿಗೆ ತಿರಸ್ಕರಿಸುತ್ತದೆಂಬದು ತಿಳಿಯುತ್ತದೆ. ಈ ಸುಂಕವನ್ನು ನಿರೋಧಿಸಲು ಹೋರಾಟವನ್ನು ನಡಿಸಬೇಕಾಗುತ್ತದೆಯೆಂತ ಮಹಾತ್ಮಾಜೀಯವರು ಲಂಡನಿನಿಂದ ತಂತಿ ಮೂಲಕ ವರ್ತಮಾನ ಕಳುಹಿಸಿರುತ್ತಾರೆ. ಈ ಎಲ್ಲಾ ಸರ್ಕಾರದ ವರ್ತನೆಗಳಿಂದ ಹಿಂದೂಸ್ಥಾನಕ್ಕೆ ಸ್ವರಾಜ್ಯ ದೊರಕುವ ದಿನವು ಬಹು ದೂರದಲ್ಲಿದೆಯೆಂತ ತೋರುತ್ತದೆ.

ಇಂಡಿಯಾ ಸರ್ಕಾರವು ಸರ್ಕಾರದ ಖರ್ಚು ಕಡಿಮೆ ಮಾಡುವ ಮುಂಚೆ ಹೊಸ ತೆರಿಗೆಗಳನ್ನು ಹಾಕುವ ಯೋಚನೆ ಮಾಡಿರುವುದನ್ನೂ ಖಂಡಿಸಬೇಕಾಗಿದೆ. ವೈಸರಾಯರು ತಮ್ಮ ಸಂಬಳದ ಶೇಕಡ 20ರಷ್ಟೂ, ಅವರ ಕೌನ್ಸಿಲ್ ಮೆಂಬರುಗಳು ಶೇಕಡ 15ರಷ್ಟೂ, ಕಡಿಮೆ ಮಾಡಿಕೊಳ್ಳಲು ಒಪ್ಪಿರುವದು ಶ್ಲಾಘನೀಯವೇ. ಆದರೆ ಅವರಿಗೆ ಸಿಕ್ಕುವ ಸಂಬಳವನ್ನು ಮನಸಿಗೆ ತೆಗೆದುಕೊಂಡರೆ ಅವರು ಬಿಟ್ಟು ಕೊಟ್ಟದ್ದು ಸಾಕೆಂತ ಹೇಳಲಾಗುವುದಿಲ್ಲ. ಬೇರೆ ಎಲ್ಲಾ ಸರ್ಕಾರಿ ಅಧಿಕಾರಿಗಳು ಸಂಬಳವನ್ನು ಶೇಕಡ 10ರಷ್ಟು ಮಾತ್ರ ಇಳಿಸಲಾಗುತ್ತದೆಯಂತೆ. ಇನ್ನೊಂದು ಕಡೆ ನಾವು ಎಣಿಸಿರುವ ಮೇರೆ ಇದು ನ್ಯಾಯಕ್ಕೆ ಸರಿಯಾಗಲಿಲ್ಲ.

ಮಿಲಿಟರಿ ಇಲಾಖೆಗಾಗಿ 55 ಕೋಟಿ ರೂ ಖರ್ಚಾಗುವುದು ದುಂದು ಖರ್ಚು. ಇಂಡಿಯಾದ ಪ್ರಯೋಜನಕ್ಕಾಗಿ ಈ ಖರ್ಚಾಗುವುದಲ್ಲ. ಸಾಮ್ರಾಜ್ಯದ ಭದ್ರತೆಗಾಗಿ ಇದ್ದದ್ದರಿಂದ ಈ ಖರ್ಚನ್ನು ಇಂಡಿಯಾದ ಮೇಲೆ ಹಾಕುವುದು ನ್ಯಾಯವಲ್ಲವೆಂತ ವರ್ಷಾರಭ್ಯದಿಂದ ಜನರ ಪ್ರತಿನಿಧಿಗಳು ಕೂಗುತ್ತಿದ್ದರೂ ಅದರಲ್ಲಿ ಈಗ ಬರೇ 4½ ಕೋಟಿ ರೂ. ಮಾತ್ರ ಉಳಿಸಲು ಯೋಚಿಸಿದ್ದಾರಂತೆ! ಈ ಮೊದಲೇ ಈ ವರ್ಷ 3½ ಕೋಟಿ ರೂ. ಉಳಿಸುವ ಯೋಜನೆ ಮಾಡಿದ್ದಾರೆ. ಆದರೂ ಪ್ರಪಂಚಕ್ಕೂ, ಹಿಂದೂಸ್ಥಾನಕ್ಕೂ ಬಂದಿರುವ ಇಂಥಾ ಆರ್ಥಿಕ ಸಂಕಟದ ಸಮಯದಲ್ಲಿ 47 ಕೋಟಿ ರೂಪಾಯಿಗಳನ್ನು ಹಿಂದೂಸ್ಥಾನಕ್ಕೆ ಅವಶ್ಯವಿಲ್ಲದ ಮಿಲಿಟರಿಗಾಗಿ ಖರ್ಚು ಮಾಡುವುದು ಎಂಥಾ ಅನ್ಯಾಯವಾಗಿದೆ! ಇದು ಮತ್ತು ಇದರಂಥ ದುಂದು ಖರ್ಚು ನಿಲ್ಲಿಸುವ ಮುಂಚೆ ಅತೀ ಬಡವರಿಗೂ ಸಹ ಹೊಸ ತೆರಿಗೆಯನ್ನು ಹಾಕುವ ಏರ್ಪಾಡು ಮಾಡುತ್ತಲಿದ್ದಾರೆ!

ಸುಂಕ ಹಾಕುವ ವಸ್ತುಗಳನ್ನು ಆರಿಸುವುದರಲ್ಲೂ ಬ್ರಿಟಿಷ್ ವ್ಯಾಪಾರಕ್ಕೆ ಅನುಕೂಲವಾಗುವಂತೆ ನೋಡಿಕೊಂಡಿದ್ದಾರೆ. ಹಿಂದೂಸ್ಥಾನದಲ್ಲಿ ಬ್ರಿಟಿಷರ ಬಟ್ಟೆಗಳ ಪೈಕಿ ಹೆಚ್ಚಾಗಿ ವಿಕ್ರಯವಾಗುವುದು ಬಟ್ಟೆ. ಈ ವ್ಯಾಪಾರಕ್ಕೆ ಅಡ್ಡಿ ಬರುವುದು ಹಿಂದೂಸ್ಥಾನದಲ್ಲಿ ತಯಾರಾಗುವ ಬಟ್ಟೆ. ಹಿಂದೂಸ್ಥಾನದಲ್ಲಿ ಬಟ್ಟೆ ತಯಾರಕರು ನಯವಾದ ಉದ್ದ ಎಳೆಯ ಹತ್ತಿಯನ್ನು ಪರದೇಶದಿಂದ ತರಿಸುತ್ತಾರೆ. ಪರದೇಶದಿಂದ ಬರುವ ಈ ಹತ್ತಿಗೆ ಈಗ ಹೆಚ್ಚಿನ ಸುಂಕ ಹಾಕುವ ಯೋಚನೆ ಇದೆ. ಮತ್ತು ಬಟ್ಟೆ ತಯಾರಾಗಲು ಕಾರ್ಖಾನೆಗಳು ಬೇಕು. ಕಾರ್ಖಾನೆಗಳಿಗೆ ಯಂತ್ರಗಳು ಬೇಕು. ಯಂತ್ರಗಳಿಗೆ ಸುಂಕ ಹಾಕಿದ್ದರಿಂದಲೂ, ನಾಣ್ಯ ವಿನಿಮಯದ ಗಲಾಟೆಯಿಂದಲೂ ಹಿಂದೂಸ್ಥಾನಕ್ಕೆ ಯಂತ್ರಗಳು ತರಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಅಷ್ಟರ ಮಟ್ಟಿಗಾದರೂ ಬ್ರಿಟಿಷರ ಬಟ್ಟೆಯೇ ಹಿಂದೂಸ್ಥಾನದಲ್ಲಿ ವಿಕ್ರಯವಾಗುತ್ತದೆ. ಬಡ ಹಿಂದೀಯರ ಮೇಲೆ ಹೊರೆ ಹೊರಿಸಿಯಾದರೂ ಬ್ರಿಟಿಷರು ಪ್ರಯೋಜನ ಹೊಂದಬೇಕು.

ದುಂಡು ಮೇಜು ಪರಿಷತ್ತಿನ ಫೆಡರಲ್ ಸ್ಟ್ರಕ್ಚರ್ ಕಮಿಟಿಯಲ್ಲಿ ಮಹಾತ್ಮ ಗಾಂಧಿಯವರು ಮಾಡಿದ ಭಾಷಣ.

ನಿಮ್ಮ ಮುಂದೆ ಕಾಂಗ್ರೆಸಿನ ಧ್ಯೇಯವನ್ನು ತಿಳಿಸಬೇಕೆ ಪಶುಕಲಿಸಲಿಕ್ಕಾಗಿ ಮತ್ತು ಸಾಧ್ಯವಿದ್ದ ಒಪ್ಪಂದ [illegible]ವನ್ನು ಕಂಡು ಹಿಡಿಯಲಿಕ್ಕಾಗಿ ನಾನು ದುಂಡು ಮೇಜು ಪರಿಷತ್ತಿನಲ್ಲಿ ಭಾಗಿಯಾಗಲು ಲಂಡನಿಗೆ ಬಂದಿದ್ದೇನೆ. ಸರ್ಕಾರಿ ಅಧಿಕಾರಿಗಳಿಗೆ ಈ ಚರ್ಚೆಯಲ್ಲಿ ತೊಂದರೆ ಕೊಡುವುದು ನನ್ನ ಉದ್ದೇಶವಲ್ಲ. ಇಲ್ಲಿ ಕೂಡಿದ ಸಹ ಉದ್ಯೋಗಿಗಳಿಗೂ, ನನಗೂ ಎಷ್ಟೇ ಮತಭೇದವಿದ್ದರೂ ಅವರಿಗೆ ಆತಂಕ ಮಾಡುವ ಉದ್ದೇಶ ನನ್ನಲ್ಲಿ ಇಲ್ಲ. ನಾನು ಇಲ್ಲಿ ಇರುವುದು ನಿಮ್ಮ ಮತ್ತು ಸರ್ಕಾರದ ಸ್ನೇಹವನ್ನೇ ಹೊಂದಿದೆ. ಈ ಕಾನ್‌ಫರೆನ್ಸಿನ ಕಾರ್ಯಕ್ಕೆ ಯಾವ ಸಮಯದಲ್ಲಾದರೂ ನನ್ನಿಂದ ಸಹಾಯವಾಗಲಾರದೆಂದು ತೋರಿದ ಒಡನೆ ನಾನು ಬಿಟ್ಟು ಹೋಗಲು ತಯಾರಿದ್ದೇನೆ.

ಸರ್ಕಾರಕ್ಕೂ, ಕಾಂಗ್ರೆಸಿಗೂ ಮತ್ತು ಇಲ್ಲಿ ನೆರೆದ ಸಹ ಉದ್ಯೋಗಿಗಳಿಗೂ, ನನಗೂ ಹೆಚ್ಚು ಬಲವಾದ ಮತಭೇದಗಳಿರುವುದರಿಂದ ಇಷ್ಟು ಮಾತು ಹೇಳಬೇಕಾಯಿತು. ನಾನು ಮಾಡುವ ಕೆಲಸಕ್ಕೂ ಹದ [illegible]. ನಾನು ಕಾಂಗ್ರೆಸಿನ ಬಡ ಸೇವಕನಾಗಿದ್ದೇನೆ. ಆದ್ದರಿಂದ ಕಾಂಗ್ರೆಸ್ ಎಂದರೇನು, ಅದರ ಧ್ಯೇಯವೇನೆಂಬುದನ್ನೂ ತಿಳಿಸಬೇಕಾಗಿದೆ. ಅಗ ನನ್ನ ಮೇಲಿರುವ ಭಾರವು ಬಹಳ ದೊಡ್ಡದೆಂತ ನಿಮಗೆ ತಿಳಿಯುತ್ತದೆ. ಕಾಂಗ್ರೆಸು ಹಿಂದೂಸ್ಥಾನದ ಅತೀ ದೀರ್ಘ ಕಾಲದಿಂದ ನಡೆದು ಬರುವ ರಾಜಕೀಯ ಸಂಸ್ಥೆಯಾಗಿದೆ. 50 ವರ್ಷಗಳಿಂದ ಪ್ರತಿ ವರ್ಷವೂ ಸಭೆ ಕೂಡುತ್ತಾಬಂದಿದೆ. ಅದು ಮೂಲವಾಗಿಯೂ ರಾಷ್ಟ್ರೀಯ ಸಂಸ್ಥೆಯಾಗಿದೆ. ಅದು ಯಾವುದೇ ಒಂದು ಜಾತಿ, ಪಂಗಡ ಅಥವಾ ಯಾವ ಸಂಸ್ಥೆಯಲ್ಲ, ಹಿಂದೂಸ್ಥಾನದ ಎಲ್ಲರ ಕ್ಷೇಮವನ್ನೂ ಕಾಪಾಡಲಿಕ್ಕಿರುವ ಸಂಸ್ಥೆಯಾಗಿದೆ. ಅದನ್ನು ಪ್ರಾರಂಭಿಸಲು ಯೋಚಿಸಿದ್ದು ಒಬ್ಬ ಬ್ರಿಟಿಷ್ ಗೃಹಸ್ಥರೆಂತ ಹೆಮ್ಮೆಯಿಂದ ಹೇಳುತ್ತೇನೆ. ಎ. ಓ. ಹ್ಯೂಮ್ ಎಂಬವರೇ ಕಾಂಗ್ರೆಸಿನ ತಂದೆಯಾಗಿದ್ದಾರೆ. ಅದನ್ನು ಸಾಕಿದ್ದು ಇಬ್ಬರು ಪಾರ್ಸಿ ಸದ್ಗೃಹಸ್ಥರು. ಶ್ರೀ. ದಾದಾಭಾಯಿ ನೌರೋಜಿ ಮತ್ತು ಸರ್ ಫಿರೋಜ್‌ಶಾ ಮೆಹತಾ—ಮೊದಲನೇಯವರನ್ನು ಒಟ್ಟು ಹಿಂದೂಸ್ಥಾನವೇ ಪೂಜ್ಯ ಪಿತಾಮಹನೆಂತ ಗೌರವಿಸುತ್ತದೆ. ಪ್ರಾರಂಭದಿಂದಲೇ ಈ ಸಂಸ್ಥೆಯಲ್ಲಿ ಮುಸಲ್ಮಾನ್, ಕ್ರಿಶ್ಚಿಯನ್, ಎಂಗ್ಲೋ ಇಂಡಿಯನ್ ಮುಂತಾದ ಎಲ್ಲಾ ಪಂಗಡಗಳ ಪ್ರತಿನಿಧಿಗಳೂ ಇದ್ದರು. ಗತಿಸಿದ ಶ್ರೀ. ಬದ್ರುದ್ದಿನ್ ತಯಬ್ಜಿಯವರು ಕಾಂಗ್ರೆಸನ್ನು ಸ್ವಂತ ಸಂಸ್ಥೆಯನ್ನಾಗಿ ಮಾಡಿಕೊಂಡಿದ್ದರು. ಮುಸಲ್ಮಾನರೂ, ಪಾರ್ಸಿಯವರೂ ಅಧ್ಯಕ್ಷರಾಗಿದ್ದರು. ದೇಶೀ ಕ್ರಿಸ್ತರಾದ ಡಬ್ಲ್ಯು. ಸಿ. ಬೋನರ್ಜೀಯವರು ಅಧ್ಯಕ್ಷರಾಗಿದ್ದರು. ಸದ್ಗೃಹಸ್ಥರಾದ ಕಾಳೀಚರಣ ಬನರ್ಜೀಯವರು ಕಾಂಗ್ರೆಸಿಗೆ ಸೇರಿದ್ದರು. ನಮ್ಮ ಈ ಗುಂಪಿನಲ್ಲಿ ಶ್ರೀ. ಕೆ. ಟಿ. ಪಾಲರು ಇಲ್ಲ. ಕಾಂಗ್ರೆಸಿಗೆ ಸೇರದವರಲ್ಲದಿದ್ದರೂ ಅವರು ರಾಷ್ಟ್ರೀಯಪಕ್ಷದವರಾಗಿದ್ದರು.

ಮೌಲಾನಾ ಮಹಮದಾಲಿಯವರನ್ನು ಕಳಕೊಂಡೆವು. ಅವರು ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು. ಈಗಲೂ ಕಾಂಗ್ರೆಸಿನ ಕಾರ್ಯಕಾರಿ ಮಂಡಲಿಯ 15 ಸದಸ್ಯರಲ್ಲಿ ನಾಲ್ವರು ಮುಸಲ್ಮಾನರು. [illegible] ಅಧ್ಯಕ್ಷರಾಗಿದ್ದರು. ಡಾಕ್ಟರ್ ಅನ್ಸಾರಿ [illegible] ಮತ್ತು ಶ್ರೀ. ಸರೋಜಿನೀ ನಾಯುಡುರವರು. ಇವರು ಕಾರ್ಯಕಾರಿ ಮಂಡಲಿಯಲ್ಲಿ ಈಗಲೂ ಇದ್ದಾರೆ. ಆದ್ದರಿಂದ ಕಾಂಗ್ರೆಸಿಗೆ ಜಾತಿಮತ ಭೇದವಿಲ್ಲ, ಸ್ತ್ರೀ ಪುರುಷರೆಂಬ ಭೇದವಿಲ್ಲವೆಂತ ನಿಮಗೆ ತಿಳಿದೀತು.

ಕಾಂಗ್ರೆಸು ಪ್ರಾರಂಭದಿಂದಲೂ ಅಸ್ಪೃಶ್ಯರಿಗ ಸಮಾ [illegible]. ಕಾಂಗ್ರೆಸ್ಸಿನ ಸಂಗಡವೇ ಸಮಾಜ ಸುಧಾರಣೆ ಸಭೆಗಳೂ ನಡೆಯುತ್ತಿದ್ದವು. ಈ ಸಂಸ್ಥೆಗೆ ಶ್ರೀ ರಾನಡೆಯವರು ತುಂಬಾ ಕೆಲಸ ಮಾಡಿದ್ದಾರೆ. ಅವರ ಮುಂದಾಳುತನದಲ್ಲಿ ಈ ಸಂಸ್ಥೆಯು ಅಸ್ಪೃಶ್ಯತಾ ನಿವಾರಣೆ ಕೆಲಸವನ್ನು ಕೈಕೊಂಡಿತ್ತು. 1920ರಲ್ಲಿ ಕಾಂಗ್ರೆಸು ಅಸ್ಪೃಶ್ಯತಾ ನಿವಾರಣೆಯನ್ನು ಕಾಂಗ್ರೆಸಿನ ರಾಜಕೀಯ ಕಾರ್ಯ ಭಾಗದಲ್ಲಿ ಒಂದಾಗಿ ಅಂಗೀಕರಿಸಿಕೊಂಡಿತು. ಹಿಂದೂ ಮುಸಲ್ಮಾನ ಒಗ್ಗಟ್ಟು ಅಂದರೆ ಎಲ್ಲಾ ಜಾತಿಗಳೊಳಗಿನ ಒಗ್ಗಟ್ಟು ಸ್ವರಾಜ್ಯ ಸ್ಥಾಪನೆಗೆ ಎಷ್ಟು ಅವಶ್ಯವೋ ಅಷ್ಟೇ ಅಸ್ಪೃಶ್ಯತಾ ನಿವಾರಣೆಯೂ ಅವಶ್ಯವೆಂತ ಕಾಂಗ್ರೆಸು 1920ರಲ್ಲಿ ತೀರ್ಮಾನಿಸಿತು.

ಈಗಲೂ ಈ ತೀರ್ಮಾನವು ಜಾರಿಯಲ್ಲಿದೆ. ಆದರಿಂದ ಈ ಸಂಸ್ಥೆಯು ನಿಜವಾಗಿಯೂ ರಾಷ್ಟ್ರೀಯವೆಂಬುದು ಸ್ಪಷ್ಟವಾಗುತ್ತದೆ. ರಾಜರುಗಳ ಅನುಮತಿಯಿಂದ ಹೇಳುವುದೇನೆಂದರೆ—ಪ್ರಾರಂಭದಿಂದಲೇ ಕಾಂಗ್ರೆಸು ರಾಜರುಗಳಿಗಾಗಿ ಕೆಲಸ ಮಾಡುತ್ತಲಿದೆ. ದಾದಾಭಾಯಿ ನೌರೋಜಿಯವರು ಮೈಸೂರು ಮತ್ತು ಕಾಶ್ಮೀರದ ರಾಜಮನೆತನದವರಿಗಾಗಿ ಹೋರಾಡಿದರು. ಆದರಿಂದ ಈ ರಾಜ ಮನೆತನದವರು ಕಾಂಗ್ರೆಸಿಗೂ, ದಾದಾಭಾಯಿ ನೌರೋಜಿಯವರಿಗೂ ಕೃತಜ್ಞರಾಗಿರಬೇಕು.

[illegible] ವರೆಗೂ ದೇಶೀ ರಾಜರುಗಳ ಒಳಗಿನ ಆಡಳಿತ ವಿಷಯಕ್ಕೆ ಕಾಂಗ್ರೆಸು ಕೈಹಾಕದೆ [illegible] ಕಾಂಗ್ರೆಸ್ ಸಹಾಯ ಮಾಡಿದೆ. ಈ ವಿವರಣೆಯಿಂದ ಕಾಂಗ್ರೆಸ್ ರಾಷ್ಟ್ರೀಯ ಸಂಸ್ಥೆಯೆಂಬುದು ಎಲ್ಲರಿಗೂ ತಿಳಿದೀತು. ಕಾಂಗ್ರೆಸು [illegible]. ಕಾಂಗ್ರೆಸು ನಿಜವಾಗಿಯೂ ಏಳು ಲಕ್ಷ ಗ್ರಾಮಗಳಲ್ಲಿ [illegible] ಮೂಕ ಪ್ರಾಣಿಗಳಂತಿರುವ ಕೋಟ್ಯಂತರ ಜನರ ಪ್ರತಿನಿಧಿಯಾಗಿದೆ. [illegible] ಕೋಟ್ಯಂತರ ಜನರ ಹಿತ [illegible] ಎಲ್ಲಾ ಹಿತಕ್ಕೂ [illegible] ಕಾಂಗ್ರೆ[illegible] ಇದು ಮುಖ್ಯ [illegible] ಕೃಷಿಕ [illegible] ಕಾಂಗ್ರೆಸ್ [illegible] ಲುವವ ಸಂಘದ [illegible] 1000 ಗ್ರಾಮ[illegible]ಗಳಿಗೆ ಕೈನೂಲಿನ [illegible] ಕೊಟ್ಟಿದೆಯೆಂತಲೂ ಇವರಲ್ಲಿ ಅರ್ಧದಷ್ಟು ಮುಸಲ್ಮಾನ್ ಹೆಂಗಸರಾಗಿದ್ದಾರೆಂತಲೂ ನಿಮಗೆ ತಿಳಿಸಿದರೆ ಆಶ್ಚರ್ಯ ವಾದೀತು. ಇವರಲ್ಲಿ ಸಾವಿರಾರು ಜನರು ಅಸ್ಪೃಶ್ಯರೂ ಇದ್ದಾರೆ. ಈ ರೀತಿ ಲಕ್ಷ ಗ್ರಾಮಗಳಲ್ಲೂ ರಚನಾ ಕಾರ್ಯವನ್ನು ಕಾಂಗ್ರೆಸು ಮಾಡಿದೆ. ಎಲ್ಲಾ ಗ್ರಾಮವಾಸಿಗಳಿಗೂ ಕೈರಾಟೆಯ ಸಂದೇಶವನ್ನು ಕೊಡಲು ಕಾಂಗ್ರೆಸು ನಿಶ್ಚೈಸಿದೆ.

ಈ ರೀತಿ ದೇಶದ ಪ್ರತಿನಿಧಿಯಾಗಿರುವ ಕಾಂಗ್ರೆಸು ಮಾಡಿದ ತೀರ್ಮಾನವು ಆಶ್ಚರ್ಯಕರವಾದದ್ದಲ್ಲ. ನಿಮ್ಮ ಮನಸಿಗೆ ಒಪ್ಪದೆ ಇರಬಹುದು. ಅಸಾಧ್ಯವಾದುದನ್ನು ಕಾಂಗ್ರೆಸು ಕೇಳುತ್ತದೆಯೆಂತ ನಿಮಗೆ ತೋರಬಹುದು. ಆದರೂ ಅದು ಮಾಡಿದ ತೀರ್ಮಾನವನ್ನು ಅತಿ ಸೌಮ್ಯ ರೀತಿಯಿಂದ ನಾದರೂ ದೃಢವಾಗಿ ನಿಮ್ಮ ಮುಂದೆ ಇಡಲು ನಾನು ಬಂದಿದ್ದೇನೆ. ಆದರ ತೀರ್ಮಾನವನ್ನು ಸಾಧಿಸಲು ನನ್ನಿಂದ ಸಾಧ್ಯವಿದ್ದಷ್ಟು ಪ್ರಯತ್ನಿಸುತ್ತೇನೆ. ಕಾಂಗ್ರೆಸಿನ ತೀರ್ಮಾನವು ಕೋಟ್ಯಂತರ ಮೂಕ ಜನರ ಹಿತಕ್ಕೆ ವಿರೋಧವೆಂತ ನೀವು ನನಗೆ ಒಪ್ಪಿಸಿದರೆ ನನ್ನ ಅಭಿಪ್ರಾಯವನ್ನು ಬದಲಾಯಿಸಿಯೇನು. ಆದರೂ ಹಾಗೆ ಬದಲಾಯಿಸುವ ಮೊದಲು ನನ್ನನ್ನು ಕಳುಹಿಸಿದ ಕಾಂಗ್ರೆಸನ್ನು ಕೇಳಿಕೊಳ್ಳಬೇಕು. ಕಾಂಗ್ರೆಸು ನನಗೆ ಕೊಟ್ಟ ಹುಕುಮನ್ನು ಓದುತ್ತೇನೆ. ಅದರಿಂದ ನನ್ನ ಕಾರ್ಯವು ಎಷ್ಟರ ಮಟ್ಟಿಗೆ ತಡೆಯುಳ್ಳದ್ದಾಗಿದೆಯೆಂತ ನಿಮಗೆ ತಿಳಿದೀತು.

ಕರಾಚಿ ಕಾಂಗ್ರೆಸಿನಲ್ಲಿ ಆದ ತೀರ್ಮಾನವೇನೆಂದರೆ—"ಕಾಂಗ್ರೆಸ್ ಕಾರ್ಯಕಾರಿ ಮಂಡಲಿಗೂ, ಇಂಡಿಯಾ ಸರ್ಕಾರಕ್ಕೂ ಆದ ರಾಜಿಯನ್ನು ಈ ಕಾಂಗ್ರೆಸ್ ಒಪ್ಪಿಕೊಂಡು ಕಾಂಗ್ರೆಸ್ಸಿನ ಧ್ಯೇಯವು ಪೂರ್ಣ ಸ್ವರಾಜ್ಯವೆಂಬದನ್ನು ಪುನಃ ನಿರ್ಧರಿಸುತ್ತದೆ. ಬ್ರಿಟಿಷ ಸರ್ಕಾರದೊಂದಿಗೆ ಕಲೆತು ಚರ್ಚಿಸಲು ಅವಕಾಶ ದೊರಕಿದರೆ ಈ ಧ್ಯೇಯದ ಸಾಧನೆಗಾಗಿಯೇ ಕಾಂಗ್ರೆಸು ಕೆಲಸ ಮಾಡುತ್ತದೆ. ಮುಖ್ಯವಾಗಿ ಸೈನ್ಯ, ಪರರಾಜರ ಸಂಬಂಧ, ಆದಾಯ ವೆಚ್ಚ, ಆರ್ಥಿಕ ಸ್ಥಿತಿಯ ಮೇಲೆ ಹಿಂದೂಸ್ಥಾನಕ್ಕೆ ಪೂರ್ತಿ ಹಕ್ಕು ಸಿಕ್ಕುವಂತೆ ಕಾಂಗ್ರೆಸ್ ಕೆಲಸ ಮಾಡುತ್ತದೆ. ಅಲ್ಲದೆ ಸರ್ಕಾರವು ಮಾಡಿದ ಸಾಲವನ್ನು ಅಜಮಾಯಿಸಿ ಇಂಡಿಯಾವು ಎಷ್ಟನ್ನು ವಹಿಸಿಕೊಳ್ಳಬೇಕು, ಇಂಗ್ಲೆಂಡು ಎಷ್ಟನ್ನು ವಹಿಸಿಕೊಳ್ಳಬೇಕು ಎಂಬುದನ್ನು ಕಂಡು ಹಿಡಿಯಲು ನಿಷ್ಪಕ್ಷಪಂಚಾಯಿತಿಯನ್ನು ನೇಮಿಸಬೇಕು. ಆದರೂ ಹಿಂದೂಸ್ಥಾನಕ್ಕೆ ಹಿತವಾಗುವ ಸಂದರ್ಭದಲ್ಲಿ ಕಾಂಗ್ರೆಸ್ ಪ್ರತಿನಿಧಿಯು [illegible] ಒಪ್ಪಬಹುದು."

ಈ ತೀರ್ಮಾನವನ್ನು ಮನಸಿನಲ್ಲಿಟ್ಟುಕೊಂಡು ಈ ಮೊದಲು ಈ ಪರಿಷತ್ತು ನಡೆದ [illegible]ಗಳನ್ನು ನೋಡಿದೆನು. ಸರ್ಕಾರದ [illegible] ಮಂತ್ರಿ[illegible] ಭಾಷಣ [illegible] ಓದಿ [illegible] ಕಾಂಗ್ರೆಸಿನ ತೀರ್ಮಾನ [illegible] ಜನ[illegible] ಹಿತವಾ[illegible] [illegible] ಅದೆಯ[illegible] [illegible] ಕಾಂಗ್ರೆಸ[illegible] ವಿರೋಧ[illegible] ಜಾರದು.

[illegible] ಆದ [illegible] [illegible] ನವ ಹಿತಕ್ಕಾಗಿ [illegible] ಕೈಬಿಡಬೇಕಾಗಿ [illegible]

[illegible] ರಾಜಕೀಯ ಸ್ವಾತಂತ್ರ್ಯ ಸಿಕ್ಕಿದರೆ ಸಾಲದು. ಪೂರ್ಣ ಸ್ವಾತಂತ್ರ್ಯ ಬೇಕೆಂತ ಹೇಳುವುದು ಬ್ರಿಟನಿನ ಸಂಬಂಧವನ್ನು ನಾನು ತಪ್ಪಿಸಿಕೊಂಡಿದ್ದೇನೆಂತ ಪ್ರಪಂಚದ ಮುಂದೆ ತೋರಿಸಿಕೊಳ್ಳಲಿಕ್ಕಿಲ್ಲ. ಕಾಂಗ್ರೆಸಿನ ತೀರ್ಮಾನದಲ್ಲೇ ಬ್ರಿಟಿಷರೊಂದಿಗೆ ಪಾಲುವಂತಿಗೆಯಲ್ಲಿ ಕೆಲಸ ಮಾಡಬಾರದೆಂತ ಇಲ್ಲ. ಆದರೆ ಆ ಪಾಲುಗಾರಿಕೆ ಸಮಾನ ಸ್ವತಂತ್ರರಾದವರೊಡನೆ ಇರುವ ಪಾಲುದಾರಿಕೆಯಾಗಬೇಕು.

ನಾನು ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಯೆಂತ ಹೇಳಿಕೊಳ್ಳಲು ಹೆಮ್ಮೆ ಪಡುತ್ತಿದ್ದೆನು. ಕೆಲವು ವರ್ಷಗಳಿಂದ ಪ್ರಜೆಯೆಂತ ಹೇಳಿಕೊಳ್ಳುವುದನ್ನು ಬಿಟ್ಟಿದ್ದೇನೆ. ಅದರ ಬದಲು ದಂಗೆ ಕೋರನೆಂತ ಕರೆಸಿಕೊಳ್ಳಲು ಅಪೇಕ್ಷಿಸುತ್ತೇನೆ. ಈಗಲೂ ಸಾಮ್ರಾಜ್ಯದ ಪ್ರಜೆಯಾಗಲು ಇಷ್ಟಪಡುವುದಿಲ್ಲ. ಕಾಮನ್‌ವೆಲ್ತ್ ಎಂದರೆ ಸಂಯುಕ್ತ ಸಮಾನ ಹಕ್ಕುಗಳುಳ್ಳ ರಾಜ್ಯಗಳ ಕೂಟದ ಪ್ರಜೆಯಾಗಬೇಕೆಂತ ಇದ್ದೇನೆ. ಅಂಥಾ ಪಾಲುದಾರಿಕೆಯು ಬಲಾತ್ಕಾರದಿಂದ ಒಂದು ರಾಜ್ಯದ ಮೇಲೆ ಇನ್ನೊಂದು ರಾಜ್ಯವು ಹಾಕಬಾರದು. ಅಂಥಾ ಪಾಲುದಾರಿಕೆಯು ಅನ್ಯೋನ್ಯ ಪ್ರಯೋಜನಕ್ಕಾಗಿರಬೇಕು. ಬ್ರಿಟಿಷ್ ಮಂತ್ರಿಗಳು ಚರ್ಚೆಗೆ ತಕ್ಕ ಉತ್ತರ ವನ್ನು ಕಂಡು ಹಿಡಿಯುವುದರಲ್ಲಿ ಮಗ್ನರಾಗಿರುವಾಗ ನಾವು ಈ ದುಂಡು ಮೇಜು ಪರಿಷತ್ತಿನಲ್ಲಿ ಸೇರಿ ಅವರಿಗೆ ತೊಂದರೆ ಕೊಟ್ಟಂತಾಗುವುದಿಲ್ಲವೇ ಎಂತ ಯೋಚಿಸಿದೆ—ಇಲ್ಲ—ಯಾಕೆಂದರೆ ಗುಲಾಮಗಿರಿಗೊಳಗಾಗಿ ಶಕ್ತಿಯಿಂದ ಆಳಲ್ಪಡುವ ಹಿಂದೂಸ್ಥಾನಕ್ಕಿಂತ ಸ್ವತಂತ್ರವಾಗಿರುವ, ಸಮಾನ ಪಕ್ಷದ ಹಿಂದೂಸ್ಥಾನದಿಂದ ಬ್ರಿಟನಿನ ಕಷ್ಟನಿವಾರಣೆಗೆ ಸಹಾಯವಾದೀತು.

ಬ್ರಿಟನಿನೊಂದಿಗೆ ಜೇರಿಯುವರ ಸಂಗಡ ಹೋರಾಡಲು [illegible] ಹಿಂದೂಸ್ಥಾನವು ತಯಾರಾಗಿದೆ. ಆದರೆ ಬೇರೆ ಜನಾಂಗಗಳನ್ನು ಅಧೀನಪಡಿಸಲಿಕ್ಕಲ್ಲ, ಒಟ್ಟು ಪ್ರಪಂಚದ ಸ್ವಾತಂತ್ರ್ಯಕ್ಕಾಗಿ—ಮನುಷ್ಯ ಜಾತಿಯವರಲ್ಲೇ ಒಂದು ಭಾಗವಿರುವ ಜನಾಂಗಕ್ಕೆ ಸೇರಿದ ನಾನು, ಸ್ವಾತಂತ್ರ್ಯವನ್ನು ಅಪೇಕ್ಷಿಸುವುದು ಬೇರೆ ಜನಾಂಗಗಳ ಮೇಲೆ ಅಥವಾ ಒಬ್ಬ ವ್ಯಕ್ತಿಯ ಮೇಲಾದರೂ ಅಧಿಕಾರ ಚಲಾಯಿಸಲಿಕ್ಕಲ್ಲವೆಂಬುದನ್ನು ನಂಬಿ. ನಿಮ್ಮ ಸೌಂದರ್ಯವಾದ ದ್ವೀಪದ ಸಮೀಪ ಬರುತ್ತಾ ನಾನು ಏನು ಯೋಚಿಸಿದೆನೆಂದರೆ—ಹಿಂದೂಸ್ಥಾನವನ್ನು ಸ್ನೇಹದ ದೇಶ್ಯಾರದಿಂದ ಕಟ್ಟಿದರೆ ಬ್ರಿಟನಿನ ಒಡ್ಡೆಟ್ಟನ್ನು ಅಂದರೆ ಆಯವ್ಯಯದ ಪಟ್ಟಿಯನ್ನು ಒಂದು ವರ್ಷಕ್ಕಲ್ಲ ಬಹು ವರ್ಷಕ್ಕೆ ಸರಿಪಡಿಸಲು ಸಹಾಯವಾದೀತೆಂತ ಯೋಚಿಸಿದೆ. ಚಕ್ರವರ್ತಿಗಳೂ ಬಹಳ ಧೈರ್ಯಶಾಲಿಯೂ, ಧೈರ್ಯದಲ್ಲಿ ಅದ್ವಿತೀಯರಾದ, ಗುಲಾಮಗಿರಿಯನ್ನ ಹೋಗಲಾಡಿಸಿದ, ಅವರಿಗೆ ಅನೇಕ ಸಾರಿ ಸಹಾಯ ಮಾಡಿದ ಜನಾಂಗಕ್ಕೂ, ಪುರಾತನ ಕಾಲದಿಂದಲೂ ಬಂದ ಕೋಟಿ ಸಂಖ್ಯೆಯಲ್ಲಿರುವ, ಗಂಭೀರವಾದ ಇತಿಹಾಸವಿರುವ, ಹಿಂದೂ ಮುಸ್ಲಿಮ್ ಸಂಸ್ಕೃತಿಯನ್ನೊಳಗೊಂಡ ತುಂಬಾ ಕ್ರಿಶ್ಚಿಯನರುವ ಸಾಹಸಕ್ಕೂ, ಧರ್ಮಕ್ಕೂ ಹೆಸರುಗೊಂಡ ಪಾರ್ಸಿ ಜನಾಂಗವನ್ನೆಲ್ಲಾ ಒಳಗೊಂಡ ಜನಾಂಗಕ್ಕೂ ನಾಲು ವಂತಿಗೆಯ ಏರ್ಪಾಡು ಒಪ್ಪಿಗೆಯಿಂದಾದರೆ ಏನು ಮಾಡಿಕೊಳ್ಳಕೂಡದು? ದೇವರ ಸಹಾಯದಿಂದ ಹಿಂದೂ ಮುಸಲ್ಮಾನರು ಒಗ್ಗಟ್ಟಾದರೆ ಅಂಥಾ ಸ್ವತಂತ್ರವಿರುವ ಹಿಂದೀ ಜನಾಂಗಕ್ಕೂ, ಬ್ರಿಟನರಿಗೂ ಸ್ನೇಹವಾದರೆ, ಅನ್ಯೋನ್ಯ ಎಷ್ಟೊಂದು ಸಹಾಯವಾದೀತು? ದೇಶದೊಳಗಿನ ಕಷ್ಟನಿವಾರಣೆಗೆ ಸಹ ತುಂಬಾ ಸಹಾಯವಾದೀತು. ಇಂಥಾ ಸ್ನೇಹವಸ್ಥೆಯ ಆಶೆಯೊಡನೆ ಈ ದ್ವೀಪಗಳನ್ನು ನಾನು ಸೇರಿದ್ದೇನೆ—ಇಂಥಾ ಆಶೆ ಇನ್ನೂ ಇಟ್ಟುಕೊಂಡಿದ್ದೇನೆ.

ಇಷ್ಟು ಹೇಳಿದರೆ ನಾನು ಹೇಳಬೇಕಾದದ್ದೆಲ್ಲಾ ಹೇಳಿದಂತಾಯಿತು. ಅಲ್ಪ ಸ್ವಲ್ಪ ವ್ಯತ್ಯಾಸದಿಂದ ತಪಶೀಲನ್ನು ನೀವು ಭರ್ತಿಮಾಡಿಕೊಳ್ಳಬಹುದು. ಸೈನ್ಯ ಮುಂತಾದ್ದರ ಮೇಲೆ ಪೂರ್ಣ ಹಕ್ಕು ಬೇಕೆಂತ ನಾನು ಹೇಳಿದ್ದರ ಅರ್ಥವೇನೆಂತ ನಿಮಗೆ ತಿಳಿದೀತು. ಪಾಲುಗಾರರೊಳಗೆ ಹಳೆ ಪಾಲುದಾರನು ಹೋಗಿ ಹೊಸ ಪಾಲುದಾರನು ಬರುವಾಗ ಧನದವಶದ ಲೆಕ್ಕ ನೋಡುವುದು ಸ್ವಾಭಾವಿಕವಾಗಿದೆ. ಈ ತರದ ಅಜಮಾಯಿಸಿ ಆಗಬೇಕೆಂತ ಹಿಂದೂಸ್ಥಾನವು ಕೇಳುವುದು. ಎರಡು ಜನಾಂಗಗಳ ಪ್ರಯೋಜನಕ್ಕಾಗಿಯೂ ಆಗಿದೆ. ಹಿಂದೂಸ್ಥಾನವು ನ್ಯಾಯವಾಗಿ ವಹಿಸಬೇಕಾದದ್ದನ್ನು ವಹಿಸಿಕೊ[illegible] ಬ್ರಿಟಿಷ್ ಜನಾಂಗವು ಹೇಳಲಾರದೆಂತ ನಾನು ನಂಬುತ್ತೇನೆ. ಹಿಂದೂಸ್ಥಾನವು ನ್ಯಾಯವಾಗಿ ವಹಿಸಬೇಕಾದ [illegible] ವಹಿಸಿಕೊಳ್ಳ[illegible] ತಯಾರಿದೆಯೆಂತ ಕಾಂಗ್ರೆಸ್ಸಿನ [illegible] ನಾನು ಇಲ್ಲಿ ಹೇಳುತ್ತೇನೆ. ಪ್ರಪಂಚದ [illegible] ವಹಿಸಿಕೊಳ್ಳಬೇಕಾದರೆ ನಾವೆ [illegible] ಕೊಡಬೇಕಾದ ಎಲ್ಲಾ ಸಾಲವನ್ನು ನಮ್ಮ ದೇ[illegible] ಕೊಡಲು ತಯಾರಿದ್ದೇವೆ.

ಕಾಂಗ್ರೆಸ್ ತೀರ್ಮಾನದ [illegible] ವಿವರವಾಗಿ [illegible] ನಾನು [illegible] [illegible] ಅಧ[illegible] [illegible] ವಿಷಯ ಸಹ ತಕ್ಕ [illegible] ಅವಶ್ಯಕ[illegible] [illegible] ಹೇಳಿದಂತಾಯಿತು. ಇಷ್ಟು ದೀರ್ಘ ಭಾಷಣ ಮಾಡಬೇಕೆಂತ ಯೋಚಿಸಿರಲಿಲ್ಲ. ಆದರೆ ನಾನು [illegible]ರಿಂದ [illegible] ಸರಿಯಾಗಿ ಮಾಡಬೇಕಾದರೆ ಇಷ್ಟು ಇಲ್ಲಿ ಈಗಲೇ ಹೇಳಬೇಕಾಯಿತು. ಬ್ರಿಟನಿಗೂ, ಹಿಂದೂಸ್ಥಾನಕ್ಕೂ ಗೌರವ [illegible] ಸಮಾನ ಹಕ್ಕುಗಳಿರುವ ಪಾಲುದಾರಿಕೆಯು [illegible] ಭಾವನೆಯಿಂದ ಈ ನಿಮ್ಮ ದ್ವೀಪದಿಂದ ಹಿಂತಿರುಗಬೇಕೆಂತ ಇದ್ದೇನೆ.

ನಿಮ್ಮ ಮಧ್ಯೆ ಇರುವಷ್ಟು ಕಾಲ ನನ್ನ ಈ ಆಶೆಯು ಕೈಗೂಡಲಿ ಎಂತ ದೇವರನ್ನು ಪ್ರಾರ್ಥಿಸುತ್ತಲಿರುತ್ತೇನೆ. 45 ಮಿನಿಟುಗಳ ಕಾಲ ನಾನು ತೆಗೆದುಕೊಂಡರೂ ನನ್ನನ್ನು ತಡೆಯದೆ ಇದ್ದದ್ದಕ್ಕೆ ನಾನು ಅಧ್ಯಕ್ಷರನ್ನು ವಂದಿಸುತ್ತೇನೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್.

ತಾ. ೪ರಲ್ಲಿ ಕೊಡಗು ಕೌನ್ಸಿಲಿನ ಅಧಿವೇಶನವು ಚೀಫ್ ಕಮಿಶನರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರ ಭಾಷಣಾ ಪ್ರಶ್ನೋತ್ತರ ಆದನಂತರ ಗತಿಸಿದ ಸರ್ ಯಸ್. ಇ. ಪಿಯರ್ಸರ ಮರಣಕ್ಕೆ ವ್ಯಸನ ಸೂಚಕ ಠರಾವು ಚರ್ಚಿಸಲ್ಪಟ್ಟು ಮಂಜೂರಾಯಿತು ಅನಂತರ ಗ್ರಾಮಾಂತರಗಳಲ್ಲಿ ಜನನ ಮರಣದ ಲೆಖ್ಖವನ್ನು ಸರಿಯಾಗಿ ಬರೆದು ಇಡುವಂತೆ ಬಲಾತ್ಕರಿಸಲು ಒಂದು ಮಸೂದೆ ಖಾನೂನು ಸಭೆಯ ಮುಂದೆ ಕಮಿಶನರವರಿಂದ ತರಲ್ಪಟ್ಟು ಮೆ. ಗಳಾದ ಬಿ. ಶ್ರೀಪತಿರಾವ್, ಪಿ ಎ ಚಂಗಪ್ಪ, ಆರ್ ತಿಮ್ಮಪ್ಪ ಪುಂಜ, ಸಿ. ಯಸ್. ಪೂವಯ್ಯ, ಬಿ ಎ. ಬೆಳ್ಯಪ್ಪ, ನಿಕಾಲ್ಸ್ ಮತ್ತು ಕಮಿಶನರವರಿಂದ ಕೂಡಿದ ಸಿಲೆಕ್ಟ್ ಕಮಿಟಿಯ ಚರ್ಚೆಗೆ ಇಡಲಾಯಿತು ಸಿಲೆಕ್ಟ್ ಕಮಿಟಿಯು ಅದರ ಶಿಫಾರಸನ್ನು ತಾ. 20—12—1931 ರ ಒಳಗೆ ಕೊಡಬೇಕೆಂತಲೂ ತೀರ್ಮಾನವಾಯಿತು

ಕೊಡಗಿಗೆ ಇಂಡ್ಯಾ ಗವರ್ನ್‌ಮೆಂಟಿನ ಹಳೇ ಸಿಲ್ಕು ಸಾಲವನ್ನು ಕೊಡಬೇಕೆಂತ ಕೇಳಿಕೊಳ್ಳಬೇಕೆಂಬ ಠರಾವು ಮೆ ಬಿ ಶ್ರೀಪತಿರಾಯರಿಂದ ತರಲ್ಪಟ್ಟು ಚರ್ಚೆ ನಡೆದು ಸರ್ಕಾರದಿಂದ ಅಂಗೀಕರಿಸಲ್ಪಟ್ಟಿತು

ಕೋ-ಆಪರೇಟಿವ್, ಟಕಾವಿ ವಗೈರೆ ಸಾಲಗಳಿಗೆ ಹರಾಜಾಗುವ ಜಮ್ಮದ ಭೂಮಿಗಳನ್ನು ಜಮ್ಮದವರಿಗೇನೇ ಮಾರಬೇಕೆಂತಲೂ, ಮಾರಿದ ಮೇಲೂ ಅಂಥಾ ಭೂಮಿಯನ್ನು ಜಮ್ಮವಾಗಿಯೇ ಇಡಬೇಕೆಂತಲೂ ಪಿ. ಪಿ ಯಂ. ನಾಣಯ್ಯನವರು ತಂದ ಠರಾವು ಚರ್ಚೆ ನಡೆದು ಬಹುಮತ ವಿರೋಧದಿಂದ ಮಂಜೂರಾಗಲಿಲ್ಲ

ಊರುಡುವೆಗಳಲ್ಲಿರುವ ಮೈನರ್ ಫಾರೆಸ್ಟ್ ಉತ್ಪತ್ತಿಗಳ ಹುಟ್ಟುವಳಿಯನ್ನು ಸಂಬಂಧಪಟ್ಟ ಗ್ರಾಮಸ್ಥರಿಗೇನೇ ಕೊಡಬೇಕೆಂತಲೂ, ದೇವರ ಕಾಡುಗಳ ಅಂಥಾ ಉತ್ಪತ್ತಿಯನ್ನು ಆಯಾ ದೇವಸ್ಥಾನಗಳಿಗೇನೇ ಕೊಡಬೇಕೆಂತಲೂ ಮೆ ಚೆನ್ನಮಲ್ಲಪ್ಪನವರು ತಂದ ಠರಾವನ್ನು ಸರ್ಕಾರವು ವಿರೋಧಿಸಿದರೂ ಬಹುಮತದಿಂದ ಮಂಜೂರಾಯಿತು

ಅದೇ ಮೆಂಬರು ಮೈಸೂರಿಯಿಂದ ಕಾಡು ಮಣ್ಣನ್ನು ರೈತರು ವ್ಯವಸಾಯದ ಪ್ರಯೋಜನದ ಬಗ್ಗೆ ಯಾವಾಗಲೂ ಉಪಯೋಗಿಸುವ ಹಕ್ಕು ಕೊಡಬೇಕೆಂತ ತಂದ ಠರಾವು ಸಹ ಮಂಜೂರಾಯಿತು. ಮೈನರ್ ಫಾರೆಸ್ಟ್ ಉತ್ಪತ್ತಿಯನ್ನು ಆರ್ಜಿದಾರ ಮಾಲೀಕರ ಪಾಸಿನೊಡನೆ ಸಾಗಿಸುವ ಸ್ವತಂತ್ರ ಕೊಡಬೇಕೆಂತ ತಂದ ಠರಾವು ಸಹ ಮಂಜೂರಾಯಿತು.

ಮೆ. ಕೊಂಗಂಡ ಗಣಪತಿಯವರು ಈ ಕೆಳಗಿನ ಠರಾವನ್ನು ಚರ್ಚೆಗೆ ತಂದರು—ಸಹಕಾರಿ ಸಂಘಗಳನ್ನು ಚೆನ್ನಾಗಿ ಅಜಮಾಯಿಸುವ ರೆಜಿಸ್ಟ್ರಾರರು ಒಡೆಯಬಾರದು ಈ ವಿಷಯದಲ್ಲಿ ಚೀಫ್ ಕಮಿಶನರವರ ಹುಕುಂ ಆಗುವ ವರೆಗೆ ಕರಡ ಸಂಘವನ್ನು ಒಡೆಯಬಾರದು.

ಮೆ ನಡಿಕೇರಿಯಂಡ ಸೋಮಯ್ಯನವರು ಈ ಠರಾವನ್ನು ಪುರಸ್ಕರಿಸಿದರು ಠರಾವಿನ ಮೊದಲನೇ ಭಾಗದಂತೆ ನಡೆಯುವಲ್ಲಿ ಸಹಕಾರಿ ಖಾನೂನೇ ಇದೆಯಾದ್ದರಿಂದಲೂ, ಎರಡನೇ ಭಾಗಕ್ಕೆ ಸಂಬಂಧಪಡುವ ಕರಡ ಸಂಘವು ಒಡೆದಾದನಂತರ ಅಪೀಲ್ ಮಾಡಿಯೂ ಸೋತದ್ದರಿಂದಲೂ ಕಮಿಶನರು ಸಹ ಠರಾವನ್ನು ವಿರೋಧಿಸಿದರು. ಮೆ. ಗಣಪತಿಯವರು ಕರಡ ಸಂಘದ ಸಂಬಂಧವಾದ ಎರಡನೇ ಭಾಗವನ್ನು ವಾಪಸು ತೆಗೆದುಕೊಂಡರು. ಮೊದಲನೇ ಭಾಗವು ಬಹುಮತದಿಂದ ಮಂಜೂರಾಯಿತು.

ಮೆ ನಿಕಲ್ಸರು, ಕೊಡಗಿನ ಕಾಫಿ ಕೃಷಿಗೆ ಬಹಳ ಕೇಡನ್ನುಂಟುಮಾಡುವ ಬೋರರ್ ಹುಳವು ಹೆಚ್ಚಾಗಿ ಹರಡದಂತೆ ಮಾಡುವ ಬಗ್ಗೆ ಬೋರರ್ ತಗಲಿದ ಗಿಡಗಳನ್ನು ಎಲ್ಲಾ ತೋಟಗಾರರೂ ಕಿತ್ತು ನಾಶಪಡಿಸುವಂತೆ ಬಲಾತ್ಕರಿಸುವ ಖಾನೂನು ಜಾರಿಗೆ ತರಬೇಕೆಂಬ ಠರಾವನ್ನು ತಂದರು. ಠರಾವಿಗೆ ಎಲ್ಲರ ಒಪ್ಪಿಗೆ ಇತ್ತಾದರೂ ಗರೀಬ ತೋಟಗಾರರಿಗೆ ಅಂಥಾ ಗಿಡಗಳನ್ನು ಕೀಳುವ ಖರ್ಚನ್ನಾದರೂ ಕೊಡಬೇಕೆಂತ ಮೆ. ಬಿ ಎ. ಬೆಳ್ಯಪ್ಪನವರು ವಾದಿಸಿದರು. ಶಕ್ತಿ ಇಲ್ಲದ ತೋಟಗಾರರ ತೋಟದಲ್ಲಿ ಅಂಥಾ ಗಿಡಗಳನ್ನು ಸರ್ಕಾರವೇ ಕೀಳಬೇಕೆಂತ ಮೆ. ನಾಣಯ್ಯನವರು ವಾದಿಸಿದರು. ಸರ್ಕಾರವು ಈ ಠರಾವಿಗೆ ಒಪ್ಪುತ್ತಾದರೂ ಪರಿಹಾರ ಕೊಡುವ ವಿಷಯ ಯೋಚಿಸಬೇಕಾಗಿದೆಯೆಂತಲೂ, ಈ ಬಗ್ಗೆ ಇಲ್ಲಿಗೆ ಬೇರೆ ಖಾನೂನನ್ನೇ ಮಾಡಬೇಕಾಗಿದೆಯೆಂತಲೂ ಕಮಿಶನರು ಹೇಳಿದರು. ಮೆ. ನಿಕಲ್ಸರು ಇದಕ್ಕೆ ಕಮಿಶನರ ಸಹಾನುಭೂತಿ ಇದೆಯಾದ್ದರಿಂದ ಠರಾವನ್ನು ವಾಪಸು ತೆಗೆದುಕೊಳ್ಳುತ್ತೇನೆಂತ ಹೇಳಿದರು.

ಕೊಡಗಿನ ನ್ಯಾಯ ಶೀರ್ಷಿನ ಅಧಿಕಾರಗಳನ್ನು ಅಡಳಿತದ ಅಧಿಕಾರದಿಂದ ಬೇರ್ಪಡಿಸಬೇಕೆಂಬ ಠರಾವು ಮೆ. ಬಿ. ಎ. ಬೆಳ್ಯಪ್ಪನವರಿಂದ ತರಲ್ಪಟ್ಟಿತು. ಈ ತತ್ವವನ್ನು ಮೇಲ್ದರ್ಜೆಯಾದ ಚೀಫ್ ಕಮಿಶನರಿಗೂ, ಕೆಳಗಿನ ದರ್ಜೆಯಾದ ಪಾರುಪತ್ಯಗಾರರಿಗೂ ಅನ್ವಯಿಸಿಯಾಗಿದೆಯಾದರೂ ಕಮಿಶನರು ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಗೆ ಇನ್ನೂ ಅನ್ವಯಿಸಲಿಲ್ಲವೆಂತಲೂ ಒಬ್ಬರಲ್ಲೇ ಪೋಲಿಸ್ ಮತ್ತು ಮೇಜಿಸ್ಟ್ರೇಟ್ ಅಧಿಕಾರವಿರುವುದು ದುರುಪಯೋಗವಾಗುತ್ತಿದೆಯೆಂತಲೂ, ಬೇರೆ ಡಿಸ್ಟ್ರಿಕ್ಟ್ ಜಡ್ಜಿಯೇ ನೇಮಕವಾಗಬೇಕೆಂತಲೂ ಇದು ಸಾಧ್ಯವಾಗದಿದ್ದರೆ ಮದ್ರಾಸಿಗೆ ದೇಶವನ್ನು ಸೇರಿಸಬೇಕೆಂಬ ವಾದವು ಹಾಗಬಹುದೆಂತಲೂ, ಗಜೆಟೆಡ್ ಉದ್ಯೋಗಸ್ಥರನ್ನು ವರ್ಗಾಯಿಸಬೇಕೆಂಬ ವಾದಕ್ಕೆ ಜನ್ನ ಒಪ್ಪಿಗೆ ಮೊದಲು ಇಲ್ಲದಿದ್ದರೂ ಈಗ ಆ ವಾದದಲ್ಲಿ ನ್ಯಾಯವಿದೆಯೆಂತ ತೋರುತ್ತಿದೆಯಾಗಿಯೂ ವಗೈರೆ ಮೆ. ಬೆಳ್ಯಪ್ಪನವರು ವಾದಿಸಿದರು. ಮೆ. ತಿರುವೆಂಗಡಂ ಪಿಳ್ಳೆ, ಮತ್ತು ಪಿ. ಪಾಂಡಂಡ ಚಂಗಪ್ಪನವರು ಸಹ ಠರಾವನ್ನು ವಿರೋಧಿಸಿದರು. ಠರಾವಿನ ತತ್ವವು ನ್ಯಾಯವಾಗಿದ್ದರೂ ಸಾಧ್ಯವಿದ್ದಷ್ಟು ಮಾಡಲಾಗಿದೆಯಾಗಿಯೂ ಹೆಚ್ಚಿನ ಖರ್ಚು ತಗಲುವ ಯಾವ ಏರ್ಪಾಡನ್ನೂ ಈಗ ಜಾರಿಗೆ ತರಲಾಗುವುದಿಲ್ಲವೆಂತಲೂ ಕಮಿಶನರವರು ವಾದಿಸಿದರು. ಠರಾವು ಓಟಿಗೆ ಹಾಕಲಾಗಿ ಬಹುಮತದಿಂದ ನಾಪಾಸಾಯಿತು

ಕೃಷಿಕರಿಗೆ ಈಗ ಒಂದೊದಗಿರುವ ಕಷ್ಟಕಾಲವನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಸಾಲಗಳ ಮರುಪಾವತಿಯನ್ನು ಕೆಲವು ಕಾಲದನಂತರ ಮಾಡುವ ಅನುಕೂಲ ಕೊಡುವಂತೆ ನ್ಯಾಯ ಶೀರ್ಷಿನ ಅಧಿಕಾರಿಗಳಿಗೆ ಹುಕುಂ ಕೊಡಬೇಕೆಂಬ ಠರಾವನ್ನು ಮೆ. ಬಿ. ಎ ಬೆಳ್ಯಪ್ಪನವರು ಚರ್ಚೆಗೆ ತಂದರು. ಮೆ. ತಿರುವೆಂಗಡಂ ಪಿಳ್ಳೆಯವರು ವಿರೋಧಿಸಿದರು. ಇವರು ಹೇಳಿದ್ದೇನೆಂದರೆ—ಈಗಿನ ಆರ್ಥಿಕ ಸಂಕಟವು ಬರೇ ಕೃಷಿಕರಿಗೆ ಮಾತ್ರವಲ್ಲ, ವ್ಯಾಪಾರಿಗಳಿಗೂ ಇದ. ಸಿವಿಲ್ ಕೋರ್ಟುಗಳ ಮೇಲೆ ಇರುವ ನಂಬಿಕೆಯು ಬಿಟ್ಟು ಹೋದೀತು ರೈತರ ಗೋಳು ಇನ್ನಷ್ಟು ಹೆಚ್ಚಾದೀತು ಬಿಟ್ಟು ಹುಟ್ಟಾದೀತು ಕೃಷಿಕರೇ ಸಾಲ ಕೊಟ್ಟವರಿದ್ದಾರೆ. ಅವರಿಗೆ ಸಹ ಕಷ್ಟವಾದೀತು., ಎಂತ ವಗೈರೆ ಹೇಳಿದರು ಕೃಷಿಕರಿಗೆ ಕಷ್ಟವಿರುವುದು ಸರ್ಕಾರಕ್ಕೆ ತಿಳಿದಿದೆಯಾಗಿಯೂ ಅಂತ. [illegible] ಮಾಡುವ ಎನಸು ಎಪ್ರಿಲ್ ತಿಂಗಳ ಗಜೆಟ್ಟಿನಲ್ಲಿ ಪ್ರಕಟವಾಗಿದೆಯಾಗಿಯೂ ಹೇಳಿದರು. ಠರಾವನ್ನು ವಾಪಸು ತೆಗೆದುಕೊಂಡರು

ರಿಟ್ರೆಂಚ್‌ಮೆಂಟ್ ಕಮಿಟಿಯ ಶಿಫಾರಸ್ಸುಗಳನ್ನು ಜಾರಿಗೆ ತರುವ ಮುಂಚೆ ಅವನ್ನು ಕೌನ್ಸಿಲಿನ ಅಭಿಪ್ರಾಯ ಪಡೆಯುವ ಬಗ್ಗೆ ಚರ್ಚೆಗೆ ಇಡಬೇಕೆಂತ ಮೆ. ಯಸ್. ಎ. ಸೋಮಯ್ಯನವರು ಠರಾವು ತಂದರು. ಠರಾವಿನ ಉದ್ದೇಶವು ಒಳ್ಳೆಯದೇ ಯಾದರೂ ಅದಕ್ಕಾಗಿ ಕೌನ್ಸಿಲಿನ ಅಧಿವೇಶನವೊಂದನ್ನು ಮಾಡಬೇಕಾಗುತ್ತದೆಯೆಂತಲೂ, ಅವರ ಶಿಫಾರಸ್ಸುಗಳನ್ನು ಒಳಕೊಂಡು ತಯಾರಿಸುವ ಬಜೆಟ್ಟಿನ ಮೇಲೆ ಕೌನ್ಸಿಲಿನ ಅಭಿಪ್ರಾಯ ಕೊಡಬಹುದೆಂತಲೂ ಕಮಿಶನರವರು ಹೇಳಿದರು

ಠರಾವು ಬಹುಮತದಿಂದ ನಾಪಾಸಾಯಿತು.

ಅನಂತರ ಉದ್ಯೋಗಸ್ಥರಲ್ಲದ ಮೆಂಬರುಗಳೇ ಸೇರಿ ಫೈನಾನ್ಸ್ ಕಮಿಟಿಯನ್ನು ಆರಿಸಿಕೊಂಡರು ಮೆ. ಗಳಾದ ಬಿ ಶ್ರೀಪತಿರಾಯರೂ, ಪಿ. ಎ. ಚಂಗಪ್ಪನವರೂ, ಮತ್ತು ಬಿ. ಎ ಬೆಳ್ಯಪ್ಪನವರೂ ಮೆಂಬರುಗಳಾಗಿ ಚುನಾಯಿತರಾಗಿದ್ದಾರೆ

ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಈ ಮುಂಚೆ ಆದ ತೀರ್ಮಾನಗಳ ಮೇಲೆ ಚೀಫ್ ಕಮಿಷನರವರ ಹುಕುಂ.

1928ರಲ್ಲಿ ಮೆ. ತಿಮ್ಮಪ್ಪ ಪುಂಜರು ಹಿಂದುಳಿದ ಪಂಗಡದವರ ಕ್ಷೇಮವನ್ನು ನೋಡಿಕೊಳ್ಳಲು ಒಂದು ಲೇಬರ್ ಡಿಪಾರ್ಟ್‌ಮೆಂಟನ್ನು ಏರ್ಪಡಿಸಬೇಕೆಂತಲೂ, ಈ ಪಂಗಡದವರಿಗೆ ಕೊಡಲು ತಕ್ಕದಾದ ಜಾಗಗಳನ್ನು ತರಿಕಟ್ಟಿ ವ್ಯವಸಾಯಕ್ಕೆ ಕೊಡಬೇಕೆಂತಲೂ ಠರಾವು ತಂದು ಮಂಜೂರಾದ ಠರಾವಿನ ಮೇಲೆ ಚೀಫ್ ಕಮಿಷನರಿಗೆ ಸಹಾನುಭೂತಿ ಇದೆ, ಇವರಿಗೆ ಬಡಗಿ, ಗಾರೆ ಮತ್ತು ಮೋಚಿ ಕೆಲಸಗಳನ್ನು ಕಲಿಸುವ ಏರ್ಪಾಡು ಮಾಡುವ ಯೋಚನೆ ಇದೆ. ಇದಕ್ಕಾಗಿ ಹಿಡಬ್ಲ್ಯು. ಡಿ. ಯ ವರ್ಕ್ ಶಾಪಿನಲ್ಲಿ ಈ ಪಂಗಡದ ಒಬ್ಬನನ್ನು ತಿಂಗಳಿಗೆ 9 ರೂ. ಸ್ಕಾಲರ್ ಶಿಪ್ಪಿನಲ್ಲಿ ತರಬೇತು ಕೊಡಲಾಗುತ್ತದೆಯೆಂತಲೂ ಚೀಫ್ ಕಮಿಶನರು ತೀರ್ಮಾನಿಸಿರುತ್ತಾರೆ.

ಫಾರೆಸ್ಟ್ ಇಲಾಖೆಯಲ್ಲಿ ಸಿಬ್ಬಂದಿ ಕಡಿಮೆ ಮಾಡಬೇಕೆಂತ ಬಜೆಟ್ ಠರಾವು ಪಾಸಾದದ್ದಕ್ಕೆ ಒಬ್ಬ ಎಕ್ಸ್‌ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರನ್ನು ಮದ್ರಾಸಿಗೆ ಕಳುಹಿಸುವ ಬಗ್ಗೆ ಮದ್ರಾಸಿಗೆ ಬರೆದಿದೆಯಾಗಿಯೂ ಹೆಚ್ಚಿನ ಕಡಿತ ಎನಸು ರಿಟ್ರೆಂಚ್‌ಮೆಂಟ್ ಕಮಿಟಿಯ ಶಿಫಾರಸು ಬಂದ ನಂತರ ಯೋಚಿಸಲಾಗುತ್ತದೆಯೆಂತಲೂ ಚೀಫ್ ಕಮಿಶನರು ತೀರ್ಮಾನಿಸಿರುತ್ತಾರೆ

ರೈತರ ಜನ್‌ರಿಜರ್ವ್ಡ್ ಜಾಗಗಳಲ್ಲಿ ತೆಗೆದ ಗಂಧದ ಮರದ ಉತ್ಪತ್ತಿಯಲ್ಲಿ ಅವರ ಪಾಲಿಕರಿಗೆ ಹಿಸೆ ಕೊಡಬೇಕೆಂಬ ಬಜೆಟ್ ಠರಾವಿಗೆ ಚೀಫ್ ಕಮಿಶನರ ಸಹಾನುಭೂತಿ ಇದ್ದರೂ ಬಜೆಟ್ಟನ್ನು ವ್ಯತ್ಯಾಸ ಮಾಡಲಾಗುವುದಿಲ್ಲ ಆದರೆ ಅನ್ ರಿಜರ್ವ್ಡ್ ಜಾಗಗಳನ್ನು ಜೇಸ್ಲ್ಯಾಂಡ್ ರೂಲ್ಸ್ ಮೇರೆ ಮಂಜೂರು ಮಾಡುವಾಗ ಗಂಧವನ್ನು [illegible] ಮಾಡದಂತೆ ರೂಲ್ಸ್ ತಿದ್ದುಪಡಿ ಮಾಡಲಾಗುವುದು.

ಲೇಡಿ ಡಾಕ್ಟರುಗಳನ್ನು ನೇಮಿಸಬೇಕೆಂಬ ಠರಾವಿನ ಮೇಲೆ ಆ ಬಗ್ಗೆ ಬಜೆಟ್ಟಿನಲ್ಲಿ ಹಣ ಇಡಲಾಗಿದೆ

ದನಗಳ ದೊಡ್ಡರೋಗಕ್ಕೆ ಸೀರಂ ಸೈಮಲ್ಟೇನಿಯಸ್ ಕ್ರಮದಲ್ಲಿ ಇನಾಕ್ಯುಲೇಶನ್ ಮಾಡುವ ಪದ್ಧತಿಯನ್ನು ಪ್ರಾರಂಭಿಸಬೇಕೆಂಬ ಠರಾವನ್ನು ಚೀಫ್ ಕಮಿಶನರವರು ಅಂಗೀಕರಿಸಿರುತ್ತಾರೆ ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಅನುಕೂಲತೆ ಮಾಡಿಕೊಡಬೇಕೆಂಬ ಠರಾವನ್ನು ಅಂಗೀಕರಿಸಿಕೊಂಡು ಆ ಬಗ್ಗೆ ಹಣ ಇಡಲಾಗಿದೆ. ಮಡಿಕೇರಿ ಭಾಗದಂತ್ಲ ರಸ್ತೆಯ ಸೇತುವೆಗಳನ್ನು ರಿಪೇರಿ ಮಾಡಬೇಕೆಂಬ ಠರಾವನ್ನು ಅಂಗೀಕರಿಸಿಕೊಂಡು [illegible]ಲ್ಲಿ ಹಣ ಇಡಲಾಗಿದೆ.

ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿ ಇಡಬೇಕೆಂಬ ಠರಾವನ್ನು ಅವಶ್ಯ ಬರುವಾಗ ಉಪಯೋಗಿಸುವ ಬಗ್ಗೆ ಇಡಲಾಗುತ್ತದೆ.

ಕೊಡಗಿಗೆ ರಾಜಕೀಯ ಸುಧಾರಣೆ ಕೊಡಬೇಕೆಂಬ ಠರಾವನ್ನು ಇಂಡಿಯಾ ಸರ್ಕಾರಕ್ಕೆ ಕಳುಹಿಸಲಾಗಿದೆ

ಲೇಡಿಗಳ ಫೋಟೋಗಳ ಸಹಿತ ಪ್ರಿಂಟಾಗಿದೆ

ರತಿರಹಸ್ಯ

ಎಂಬ ಮರ್ಮಶಾಸ್ತ್ರ ಕ್ರಯ ಹನ್ನೆರಡು ಅಣೆ

ಕನ್ನಡ ಭಾಷೆಯಲ್ಲಿ ಅಂದವಾದ ಗ್ಲೇಜ್ ಕಾಗದದಲ್ಲಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ಶಹರ ವೇಶ್ಯಾ ಸ್ತ್ರೀಯರ ಪ್ರೀತಿಯ ಮರ್ಮ, ಮಜೆಯಾದ ಜವಾನ್, ಫ್ರೆಂಚ್ ದೇಶದ ಸ್ತ್ರೀಯರ ಮಲಗುವ ಮನೆ, ಪ್ರೋತ್ಸಾಹವನ್ನು ಸ್ತ್ರೀ ಪುರುಷರ ಅನೇಕ ರಹಸ್ಯಗಳು, 30 ಕ್ಕೂ ಫೋಟೋಗಳ ಸಹಿತ ಕೂಡಿದೆ ಈ ಶೃಂಗಾರವಾದ ಪುಸ್ತಕವು ಓದಲು ಬಹು ಆನಂದವಾಗಿರುವುದು. ಕ್ರಯ ಫೋಟೋಗಳ ಸಹಿತ ಪುಸ್ತಕ 1ಕ್ಕೆ 0—12—0. ಬೇಕಾದವರು ಹನ್ನೆರಡು ಅಣೆ ಪೋಸ್ಟ್ ಸ್ಟ್ಯಾಂಪ್ ಕಳುಹಿಸಿದರೆ ಈ ಪುಸ್ತಕವನ್ನು ಪೋಸ್ಟು ಮೂಲಕ ಇನಾಮಾಗಿ ಕಳುಹಿಸುತ್ತೇವೆ

ಟಿ. ರಾಯಲ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 1224, ಮದರಾಸ್

4—1 The Royal Co,
Post Box No 1224, G. P. O. Madras

REVOLER!!

ಭಯವಿಲ್ಲ! ಲೈಸೆನ್ಸ್ ಬೇಕಿಲ್ಲ

ಜರ್ಮನ್ ಪಿಸ್ತೂಲ್ ಎಂಬ ರಿವಾಲ್ವರ್,

ಕ್ರಯ ರೂ. 2—0—0.

ಇದು ಜರ್ಮನ್ ದೇಶದಲ್ಲಿ ಬಲಿಷ್ಟವಾದ ಸಾಮಾನುಗಳಿಂದ ಮಾಡಲ್ಪಟ್ಟಿದೆ. ತೋರಿಸಲು ಸರಿಯಾಗಿದೆ ನೋಡುವವರು ನಿಜವಾದ ರಿವಾಲ್ವರ್ ಎಂದು ಹೇಳುವರು. ಚೆನ್ನಾಗಿ ಸುಡುತ್ತೆ ಲೈಸೆನ್ಸ್ ಬೇಕಾಗಿಲ್ಲ. ಆತ್ಮ ರಕ್ಷಣೆಗಾಗಿ ಬಹಳ ಉಪಕಾರ. ಕಳ್ಳರಿಂದ ತಪ್ಪಿಸಿಕೊಳ್ಳಬಹುದು. ಸುಡುವಾಗ (Noise) ಶಬ್ದವಾಗುತ್ತೆ. ರಾತ್ರಿ ಕಾಲಗಳಲ್ಲಿ ತಿರುಗಾಡುವವರಿಗೆ ಬಹಳ ಪ್ರಯೋಜನವಾದದ್ದು. 100 ಶೋಟುಗಳ (Shots ಸಹಿತ ಪಿಸ್ತೂಲ್ 1ಕ್ಕೆ ಕ್ರಯ ರೂ. 2—0—0.

ನೆಲ್ಸನ್ ವಾಚ್ ಕಂಪೆನಿ,
17 ನಮ್ಮಳ್‌ವಾರ್ ಬೀದಿ,
ಜಿ. ಟಿ. ಮದ್ರಾಸ್

Nelson Watch Co.,
1—1 17 Nammalwar St
G. T. Madras

ವೀರಾಜಪೇಟೆ—ನಾಪ್ರೋಕ್ಲು—ಅಮ್ಮತ್ತಿ ನಾಡುಗಳ ಜಮ್ಮ ಓಟರುಗಳಲ್ಲಿ ವಿನಂತಿ.

ಮಹಾಶಯರೇ,

ಈಗ ತಾನೇ ಮೆ. ಕೋದಂಡ ಉತ್ತಯ್ಯನವರ ರಾಜೀನಾಮೆಯಿಂದ ಖಾಲಿಯಾದ ಕೌನ್ಸಿಲ್ ಸ್ಥಳಕ್ಕೆ ಇಲ್ಲಿ ನಾನು ಒಬ್ಬ ಉಮೇದ್ವಾರನಾಗಿರುತ್ತೇನೆ. ದೇಶದ ಏಳಿಗೆಗಾಗಿ ತಾವು ಮಾಡಬೇಕೆಂದಿದ್ದ ಎಲ್ಲಾ ಕೆಲಸಗಳಲ್ಲಿಯೂ ಕಷ್ಟ ಉತ್ಸಾಹದಿಂದ ಶಕ್ತಿ ಮೀರಿ ಕೆಲಸ ಮಾಡಿದ್ದು ತಮಗೆ ತಿಳಿಯದ್ದಲ್ಲ. ಇನ್ನು ಮುಂದಕ್ಕೂ ತಮ್ಮೆಲ್ಲರ ಪ್ರೋತ್ಸಾಹದಿಂದ ಕೈಯಲ್ಲಾದ ದೇಶ ಸೇವೆ ಮಾಡಬೇಕೆಂದಿದ್ದೇನೆ. ಇದನ್ನು ಸಾಧಿಸಲು ಅನುಕೂಲವಾಗುವಂತೆ ತಾವೆಲ್ಲರೂ ನನ್ನ ಮೇಲೆ ವಿಶ್ವಾಸವಿಟ್ಟು, ಈ ಅಕ್ಟೋಬರ್ ತಾರೀಕು 22ನೇ ಗುರುವಾರ ಓಟು ಕೊಡುವ ಆಯಾಯ ಸ್ಥಳಗಳಿಗೆ ದಯಮಾಡಿ ನನ್ನ ಪರವಾಗಿ ಓಟು ಕೊಟ್ಟು ಪ್ರೋತ್ಸಾಹಿಸುವಂತಾಗಿ ಪ್ರಾರ್ಥನೆ.

ವೀರಾಜಪೇಟೆ, ತಮಗಳ ಸೇವಕ,
ತಾ 11—9—1931. **ಕೋಟೆರ ಪಿ. ಚಿಟ್ಟಿಪ್ಪ.**
4—4

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ತಾ 27ನೇ ಆದಿತ್ಯವಾರ ಬೆಳಿಗ್ಗೆ ವೀರರಾಜಪೇಟೆ. ಪೊನ್ನಂಪೇಟೆ ಕುಶಾಲಪುರ ಮತ್ತು ಕೋಟೆಊರು ಊರಂಬ ಲದಲ್ಲಿ ಮಾಸಿಕ ಧ್ವಜಾಭಿವಂದನೆಯು ನಡಿಸಲ್ಪಟ್ಟಿತು

ಚೀಫ್ ಕಮಿಶನರು ಈ ದಿನ (ತಾ 9—10—31) ಮಡಿ ಕೇರಿಯಿಂದ ಬೆಂಗಳೂರಿಗೆ ಹೊರಟು ಹೋಗುತ್ತಾರೆ ಪ್ರ ಸ್ತ ನವಂಬರ್ ಪ್ರಾರಂಭದಲ್ಲಿ ವಾಪಸು ಬರುವರಾಗಿ ತಿಳಿಯ ಬರುತ್ತದೆ

ಶ್ರೀ ಮೂಲ ಕಾವೇರಮ್ಮನವರ ತುಲಾ ಸಂಕ್ರಮಣದ ತೀರ್ಥೋದ್ಭವವು ಇದೇ ತಿಂಗಳು 17ನೇ ಶನಿವಾರ ದಿನ ಮಧ್ಯಾಹ್ನದ ಮೇಲೆ 4 ಗಂಟೆ 20 ಮಿಟಿಗೆ ಸರಿಯಾಗಿ ನಡೆಯುವ ಪುಣ್ಯಕಾಲ

ಮಡಿಕೇರಿ ಅರಮನೆಯ ಅಭದ್ರವಾದ ಭಾಗಗಳನ್ನು ಬಿ ಚ್ಚಿ ಕಟ್ಟಿಸುವ ಬಗ್ಗೆ ಕಂಟ್ರಾಕ್ಟರುಗಳಿಂದ ಟೆಂಡರ್‌ಗಳನ್ನು ಸರಕಾರವು ಬರಮಾಡಿ ಕೊಂಡಿತ್ತು ಅಂಥಾ ಟೆಂಡರುಗಳ ನ್ನು ತಾ 10 ರಲ್ಲಿ ತೆರೆಯುವರು

ತಾ 14—9—31ರಲ್ಲಿ ಹಾಲುಗುಂದ ಭಗವತೀ ಪುಸ್ತಕ ಭಂಡಾರದ ಹೊಸ ಕಟ್ಟಡದ ಪ್ರವೇಶದ ಜನರಲ್ ಮೀಟಿಂಗು ಮ ರಾ ರಾ ಶ್ರೀ ಕೆ ಪಿ ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆ ಯಿತೆಂದು ಸದರಿ ಸೆಕ್ರೆಟರಿಯವರು ತಿಳಿಸಿದ್ದಾರೆ

ಕೊಡಗಿನ ಸ್ವಯಂಸೇವಕ ಮಂಡಳಿಯವರು ಈ ವಾರ ಪೊನ್ನಂಪೇಟೆ ಮತ್ತು ವೀರರಾಜಪೇಟೆ ಕಡಗಳಲ್ಲಿ [illegible] ಮನೆ ಮನೆಗೆ ಹೊತ್ತುಕೊಂಡು ಹೋಗಿ ಮಾರಾಟ ಮಾಡಿ 'ಗಾಂಧಿ ವಾರ'ವನ್ನು ಆಚರಿಸಿದರೆಂದು ತಿಳಿದು ಬರುತ್ತದೆ

ಸಹಕಾರಿ ಸಂಘಗಳು ಖಾಸಗಿಯವರಿಗೆ ರಿಜಿಸ್ಟರ್ [illegible] ದ ಬಗ್ಗೆ ಕೊಡಬೇಕಾಗಬಹುದಾದ ರಿಜಿಸ್ಟ್ರೇಶನ್ ಫೀಸಿನಲ್ಲಿ ಅರ್ಧವನ್ನೂ, ಸಹಕಾರಿ ಸಂಘಗಳು ಯಾ ಸಂಘಗಳ ಮೆಂಬರು ಗಳು ಬರೆದುಕೊಡಬೇಕಾದ ಎಲ್ಲಾ ಲಿಖಿತವಟ್ಟುಗಳಿಗೆ ಅರ್ಧ ಸ್ಟಾಂಪ್ ಡ್ಯೂಟಿಯನ್ನೂ ಮಾಫಿ ಮಾಡಿರುವರಾಗಿ ಗಜೆಟಿನ ಲ್ಲಿ ಪ್ರಕಟವಾಗಿದೆ ಅಂದರೆ ಈ ವರೆಗೆ ಪೂರ್ತಿ ಮಾಫಿಯಾ ಗಿದ್ದದ್ದು ಈಗ ಅರ್ಧ ಮಾತ್ರ ಮಾಫಿಯೆಂದಾಯಿತು ಇದು ಇದೇ ತಿಂಗಳು 1ನೇ ತಾರೀಕಿನಿಂದ ಜಾರಿಗೆ ಬರತಕ್ಕದ್ದು.

ಮುನಿಸಿಪಾಲಿಟಿಗಳೊಳಗೆ ಮನೆ ಕಂದಾಯ ಕೊಡುವ ವರು ಮನೆ ಖಾಲಿ ಇದ್ದ ದೆಸೆಯಿಂದ ಕಂದಾಯ ಮಾಫಿ ಕೊ ಡಬೇಕೆಂತ ಕೇಳಬೇಕಾದರೆ ಖಾಲಿಬಿದ್ದ 1 ತಿಂಗಳೊಳಗೂ ಪು ನಃ ಮನೆಗೆ ವಾಸಕ್ಕೆ ಜನರು ಸೇರಿದ ಒಂದು ತಿಂಗಳೊಳಗೂ ಮುನಿಸಿಪಲ್ ಪ್ರೆಸಿಡೆಂಟರಿಗೆ ಬರಹ ಮೂಲಕ ತಿಳಿಸಬೇಕೆಂತ ಲೂ, ರೂಲನ್ನು ತಿದ್ದುಪಡಿ ಮಾಡುವ ಯೋಚನೆಯಲ್ಲಿ ಚೀ ಫ್ ಕಮಿಶನರು ಇದ್ದಾರೆಂತಲೂ, ಇದಕ್ಕೆ ಆಕ್ಷೇಪಣೆ ಇರುವ ವರು ಇದೇ ತಿಂಗಳು 19 ನೇ ತಾರೀಕಿನೊಳಗೆ ಬರಕೊಳ್ಳಬೇ ಕೆಂತಲೂ ಗಜೆಟಿನಲ್ಲಿ ಪ್ರಕಟವಾಗಿದೆ

ಕೊಡಗು ವಿಲೇಜ್ ಪಂಚಾಯತಿ ಆಕ್ಟ್ ಮೇರೆ ಪೊನ್ನ ಪ್ಪೆಟೆ, ಮರೂರಿಗಾಗಿ ಒಂದು ಪಂಚಾಯತಿಯನ್ನೂ, ಕೂರೆನೂ ರು ಗದ್ದೆ ಹೊಸಳ್ಳಿಗಾಗಿ ಒಂದು ಪಂಚಾಯತಿಯನ್ನೂ ಸಿದ್ದಾ ಪುರಕ್ಕೆ, ಪೊನ್ನಂಪೇಟೆಗೆ, ಭಾಗಮಂಡಲಕ್ಕೆ ಒಂದೊಂದು ಪಂ ಚಾಯತಿಯನ್ನೂ 1932 ನೇ ಇಸವಿ ಎಪ್ರಿಲ್ 1ರಿಂದ ಏರ್ಪಡಿ ಸಬೇಕೆಂತ ಚೀಫ್ ಕಮಿಶನರು ತೀರ್ಮಾನಿಸಿರುತ್ತಾರೆ—ಮ ಬ್ಬಾಲೆ ಪಂಚಾಯತಿಗೆ 12 ಜನರೂ ಕೂರೆನೂರು ಮತ್ತು ಸಿ ದ್ದಾಪುರ ಪಂಚಾಯತಿಗಳಿಗೆ 10 ಜನರೂ, ಪೊನ್ನಂಪೇಟೆ ಭಾ ಗಮಂಡ್ಲ ಪಂಚಾಯತಿಗಳಿಗೆ 8 ಜನ ಪಂಚಾಯತರು ಇರಬೇ ಕೆಂತಲೂ ತೀರ್ಮಾನಿಸಿರುತ್ತಾರೆ ಪಂಚಾಯತಿ ಆಕ್ಟ್ ಮೇರೆ ಆಯಾ ತಾಲೋಕಿನ ಸುಬೇದಾರರುಗಳು ಪಂಚಾ ಯತಿ ಛೇರ್‌ಮೆನ್‌ರಾಗಿ ನೇಮಿಸಲ್ಪಟ್ಟಿದ್ದಾರೆ

— —

ಹಿಂದೂ ದೇಶ.

ಇದೇ ತಿಂಗಳು 1 ರಲ್ಲಿ ಡಾಕ್ಟರ್ ಎನ್ನಿ ಬಿಸೆಂಟಮ್ಮನವ ರ 85 ನೇ ಜನ್ಮ ದಿನವನ್ನು ಆಚರಿಸಿದರು

ಮಧುರೆಯಲ್ಲಿ ಸಾರಾಯಿ ಅಂಗಡಿ ಪಿಕೆಟ್ ಮಾಡುತ್ತಿ ದ್ದ ಸ್ವಯಂಸೇವಕರ ಮೇಲೆ ಲಾಠಿ ಚಾರ್ಜು ನಡೆಯಿತು

ತಾ 2 ರಲ್ಲಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಮ ಹಾತ್ಮ ಗಾಂಧಿಯವರ ಜನ್ಮ ದಿನವನ್ನು ಬಹಳ ವಿಜೃಂಭಣೆ ಯಿಂದ ಆಚರಿಸಿದರು

ತಿರುವಾಂಕೂರು ಸಂಸ್ಥಾನದಲ್ಲಿ ದೇವಸ್ಥಾನಗಳಲ್ಲಿ ನಾ ಯಕಸಾನಿಯರು (ದೇವದಾಸಿ) ಇರುವ ಪದ್ಧತಿಯನ್ನು ಸರ ಕಾರವು ನಿಲ್ಲಿಸಿದೆ.

ಮದ್ರಾಸ್ ಅಧಿಪತ್ಯದಲ್ಲಿ ಬಸ್‌ಗಳಿಗೂ, ಲಾರಿಗಳಿಗೂ ಹಾಕಿರುವ ಹೊಸ ಕಂದಾಯವನ್ನು ಕಡಿಮೆ ಮಾಡಬೇಕೆಂತ ಕೆಲವು ಚಳವಳ ನಡೆಯುತ್ತಲಿದೆ.

ಪ್ರೆಸ್‌ಬಿಲ್ಲ್ ಅಂದರೆ ವೃತ್ತಪತ್ರಿಕೆಗಳನ್ನು ನಿರ್ಬಂಧಿಸುವ ಹೊಸದಿದ ಕಾನೂನು ಎಸೆಂಬ್ಲಿಯಲ್ಲಿ ಪಾಸಾಯಿತು [illegible] ಸ್ಸಿಲ್ ಆಫ್ ಸ್ಟೇಟಿನಲ್ಲಿ ಚರ್ಚೆಯಲ್ಲಿದೆ

ಆಸಾಮ್ ಗವರ್ನರು ತಮ್ಮ ಸಂಬಳದ ಶೇಕಡ 15 ರಷ್ಟು ಕಡಿಮೆ ಮಾಡಿಕೊಳ್ಳಲು ಒಪ್ಪಿರುತ್ತಾರೆ ಆದರ ಕೌನ್ಸಿಲು ಮೆಂಬರುಗಳು ಶೇಕಡ 10 ರಷ್ಟು ಬಿಡಲು ಒಪ್ಪಿರುತ್ತಾರೆ

ಗುಜರಾತ್ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮಿ ಕೆ. ಯಮ್. ಮುನ್ಶಿಯವರು ಗುಜರಾತಿನಲ್ಲಿ ಜನ್ಮವೆತ್ತಿದ ಮಹಾತ್ಮ ಗಾಂಧಿಯವರನ್ನು ಕಳಕಳಿಯಿಂದ ಶ್ಲಾಘಿಸಿದರು,

ಶ್ರೀ. ರಾಮಲಿಂಗ ರೆಡ್ಡಿಯವರು ಕಾಂಗ್ರೆಸಿಗೆ ಸೇರಿದ್ದಾ ರೆ ಇವರು ಧಾರವಾಡದಲ್ಲಿ ಪ್ರವಾಸಮಾಡಿ ಗಾಂಧಿ ವಾ ರವನ್ನು ಪ್ರಾರಂಭಿಸುವ ಸಮಾರಂಭದಲ್ಲಿ ತಾ 2 ರಲ್ಲಿ ಒಂ ದು ಉಪನ್ಯಾಸ ಕೊಟ್ಟರು

ಕಾಂಗ್ರೆಸ್ ಅಧ್ಯಕ್ಷರಾದ ವಲ್ಲಭ ಭಾಯಿ ಪಟೇಲರು ಬೊಂಬಾಯಿಯಲ್ಲಿ ಒಂದು ಭಾಷಣದಲ್ಲಿ ಸಮುದ್ರದ ಆಚೆ ಯಿಂದ ಯುದ್ಧದ ಭೇರಿಯ ಶಬ್ದ ಕೇಳಿಸುತ್ತಲಿದೆ ಯುದ್ಧ ಕ್ಕೆ ಸನ್ನದ್ಧರಾಗಿರಬೇಕು ಎಂತ ಹೇಳಿದ್ದಾರೆ

ತಾ 2 ರಲ್ಲಿ ತ್ರಿಚನಾಪಳ್ಳಿ ಮಹಾತ್ಮ ಗಾಂಧಿಯವರ ಜ ನ್ಮ ದಿವಸ ಆಚರಿಸುವ ಸಂಬಂಧವಾಗಿ ಶಾಲೆಯಿಂದ ವಿದ್ಯಾರ್ಥಿ ಗಳು ಗೈರ್ಹಾಜರಾದರೆಂಬ ಕಾರಣಕ್ಕಾಗಿ ವಿದ್ಯಾರ್ಥಿಗಳನ್ನು ಸ್ಕೂಲಿನಿಂದ [illegible] ಮಾಡಿದ್ದಾರೆ [illegible] ಸಭೆ ಸೇರಿ ಈ ಕೃ ತ್ಯವನ್ನು ಖಂಡಿಸಿರುತ್ತಾರೆ.

ನೆಲ್ಲೂರು ಜಿಲ್ಲೆಯಲ್ಲಿ ಸಮುದ್ರದ ಕರಾವಳಿ ಮಲ್ಲಿ ಗ್ರಾ ಮವಾಸಿಗಳು ಉಪ್ಪನ್ನು ಮುಫತ್ತಾಗಿ [illegible] ತ್ತಿದ್ದ ರು ದೂರ ಗ್ರಾಮಗಳಿಂದ ರೈತರು ಉಪ್ಪು [illegible] ರುತ್ತಾರೆಂತ ಸರಕಾರದವರು ಈ [illegible] 250 ಜನರ ಮೇಲೆ [illegible] ಮಾಡಿದ್ದಾರೆ

[illegible] ಶ್ರೀ [illegible] ನವ ಯಿತು [illegible] ಡಗ ಸಹಾಯ ಮಾಡುತ್ತಿಲ್ಲವೆಂತ ಈ ಸಭೆಯಲ್ಲಿ ಹೇಳಿದರು.

ಬಾರ್ಡೋಲಿಯಲ್ಲಿ ಕಂದಾಯ [illegible]

[illegible] ಸಿದಿ ನಡಿಸ [illegible] ಸಂಶಯವು ಹುಟ್ಟಿತ್ತು [illegible] ಆ ತನಿಖೆಯು ಪ್ರಾರಂಭವಾಗಿದೆ ರೈತರ ಪಕ್ಷವಾಗಿ ಬೊಂಬಾಯಿಯ ಪ್ರ ಸಿದ್ಧ ವಕೀಲರಾದ ಬುಲಾಭಾಯಿ ದೇಸಾಯಿಯವರು ನಿಂತಿ ದ್ದಾರೆ. ಈ ತನಿಖೆ ತೀರುವ ವರೆಗೂ ಸರ್ದಾರ ವಲ್ಲಭ ಭಾ ಯಿ ಪಟೇಲರು ಬಾರ್ಡೋಲಿಯಲ್ಲೇ ನಿಲ್ಲಲು ನಿಶ್ಚಯಿಸಿತ್ತಾ ರೆ ಕಾಂಗ್ರೆಸ್ ಆಫೀಸೇ ಅಲ್ಲಿಗೆ ವರ್ಗವಾಗಿದೆ

ಬೊಂಬಾಯಿಯಿಂದ ತಾ 3 ರಲ್ಲಿ ಹೊರಟ ರಾವಲ್ ಪಿಂಡಿ ಎಂಬ ಹಡಗದಲ್ಲಿ ಎರಡು ಕೋಟಿ ರೂಪಾಯಿ ಬೆಲೆ ಬಾಳುವ ಚಿನ್ನವು ಅಮೇರಿಕಾಕ್ಕೆ ರಫ್ತಾಯಿತು ಈ ರೀತಿ ಯಾದೂಸ್ಥಾನದಿಂದ ಚಿನ್ನದ ಹೊಳೆಯು ಹರಿಯುವುದನ್ನು ತ ಡೆಯಬೇಕೆಂತ ವ್ಯಾಪಾರಿಗಳು ಪ್ರಯತ್ನಿಸುತ್ತಾರೆ ಆದರೆ ಈ ಸಂಬಂಧವಾಗಿ ಎಸೆಂಬ್ಲಿಯಲ್ಲಿ ಪೈನಾನ್ಸ್ ಮೆಂಬರರು ಕೊಟ್ಟ ಜವಾಬಿನಿಂದ ಸರಕಾರದವರು ಈ ಹೊಳೆಯನ್ನು ಕೂ ಡಲೇ ತಡೆಯುವ ಯೋಚನೆಯಲ್ಲಿ ಇಲ್ಲವೆಂತ ತಿಳಿಯಿತು

ಮಧ್ಯವರ್ತಿ ಸರಕಾರದಿಂದ ನೇಮಿತವಾದ ರಿಟ್ರೆಂಚ್ ಮೆಂಟ್ ಕಮಿಟಿಯವರ ಶಿಫಾರಸುಗಳು ಪ್ರಕಟವಾಗಿವೆ ರಿ ಟ್ರೆಂಚ್‌ಮೆಂಟ್ ಕಮಿಟಿ ಇಲ್ಲದೆ ಸರಕಾರದ ಖರ್ಚನ್ನು ಕ ಡಿಮೆ ಮಾಡಿಕೊಳ್ಳದಿರುವುದಕ್ಕೆ ಆಶ್ಚರ್ಯವನ್ನು ಸೂಚಿಸಿದ್ದಾ ರೆ. ಲೀ ಕಮಿಶನ್ ಶಿಫಾರಸು ಮೇರೆ ಕೊಟ್ಟ ಹೆಚ್ಚಿನ ಸಂಬ ಳ ವಿನಹ ಬೇರೆ ಎಲ್ಲಾ ರಿಯಾಯಿತಿಗಳ [illegible] ಬೇ ಕು ಸರಕಾರಿ ಅಧಿಕಾರಿಗಳು ಸರಕಾರಿ ಮನೆಗಳಿಗೆ ಕೊಡುವ ಬಾಡಿಗೆಯನ್ನು ನಿರ್ಣಯಿಸುವ ರೀತಿ ಸರಿಯಿಲ್ಲ ಮನೆ ಮತ್ತು ಜಾಗಕ್ಕೆ ತಗಲಿದ ಖರ್ಚಿನ ಮೇಲೆ ಲೆಖ್ಖ ಹಾಕಬೇ ಕು ಹಿಂದೂಸ್ಥಾನದ ಹೊರಗೆ ಕೊಡುವ ಪೆನ್ಶನ್ ರಜದ ಸಂಬಳ [illegible] ಮೇಲೆ ಇನ್‌ಕಂಟ್ಯಾಕ್ಸ್ ಹಾಕಿದರೆ ಅರ್ಧ ಕೋಟಿ ರೂಪಾಯಿ ಉತ್ಪತ್ತಿ ಬರುತ್ತದೆ ದೊಡ್ಡ ಸಂಬಳದ ಅಧಿಕಾರಿಗಳಿಗೆ ಕೆಲಸ ಕಡಿಮೆ ಅವರ ಸಂಬಳ ಕಡಿ ಮೆ ಮಾಡಬೇಕು ಇನ್ನೂ ಇದೇ ರೀತಿ ಅನೇಕ ಬಾಬುಗಳ ಲ್ಲಿ ಖರ್ಚು ಕಡಿಮೆ ಮಾಡಲು ಶಿಫಾರಸು ಮಾಡಿದ್ದಾರೆ ಹಿಂದೂಸ್ಥಾನದ ಖಜಾನೆಗಳನ್ನು ದೇಶೀಯರಿಗೇನೇ ಕೊಟ್ಟು ಉತ್ಪತ್ತಿ ಹೆಚ್ಚಿಸಿಕೊಳ್ಳಬಹುದೆಂತಲೂ ಸೂಚಿಸಿದ್ದಾರೆ

ವಿದೇಶ.

ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿಗೆ ಹೊಸ ಚುನಾವಣೆ ನ ಡೆಸಲು ಮಂತ್ರಿ ಮಂಡಲಿಯವರು ನಿಶ್ಚೈಸಿರುತ್ತಾರೆ

ಲಂಕಾಶಾಯರಿನಲ್ಲಿ ಬಟ್ಟೆ ವ್ಯಾಪಾರವು ಹೆಚ್ಚುತ್ತಲಿದೆ ಕೆಲಸ ನಿಲ್ಲಿಸಿದ್ದ ಕೆಲವು ಕಾರ್ಖಾನೆಗಳು ಕೆಲಸ ಪ್ರಾರಂಭಿಸಿವೆ.

ಚೈನಾ ಜಪಾನ್ ಹೋರಾಟವು ಪೂರ್ತಿಯಾಗಿ ನಿಂತಿ ರುವುದಿಲ್ಲ ಜಾಕ ರಾಷ್ಟ್ರ ಸಭೆಯವರು ರಾಜಿಯಾಗ ಬೇಕೆಂತ ಉಭಯ ಪಾರ್ಟಿಯವರನ್ನು ಕೇಳಿಕೊಂಡಿರುತ್ತಾರೆ

ಇಂಗ್ಲೆಂಡಿನ ಸ್ಟೈಯಿನ್ ಪೂರ್ತಿ ಎಂಬವರು ಆಕಾಶ ವಿಮಾನದಲ್ಲಿ ಗಂಟೆಗೆ 415.2 ಮೈಲು ವೇಗದಲ್ಲಿ ಹಾರಿ ಪ್ರ ಪಂಚದಲ್ಲೆಲ್ಲಾ ಅತ್ಯಂತ ಹೆಚ್ಚಿನ ವೇಗದಲ್ಲಿ ಹಾರಿದವರೆಂ ಖ್ಯಾತಿ ಪಡೆದಿರುತ್ತಾರೆ

ಇಂಗ್ಲೆಂಡಿನ ಆಫೀಸರ ಸಂಬಳಗಳು [illegible] ಕಡಿಮೆ ಮಾಡಲ್ಪಟ್ಟಿದೆ [illegible] ದ್ದವರಿಗೆ 2000 ಪೌಂಡೂ, 6000 ಪೌಂಡು ಇದ್ದವರಿಗೆ 2000 ಪೌಂಡೂ ಸಹ ಕಡಿಮೆ ಮಾಡುವುದೆಂತ ತೀರ್ಮಾನವಾಗಿದೆ

ನಿರುದ್ಯೋಗಿಗಳ ಸಂಬಂಧವಾಗಿ ನಿರುದ್ಯೋಗಿಗಳು [illegible] ಪಿಕ್ಯಾಡಿಲಿ ಸರ್ಕಸ್ಸಿನಲ್ಲಿ ದಂಗೆ ನಡೆಸಿದರು.

50,000 ಸಾವಿರ ಜನರು ಭಾಗಿಗಳಾಗಿದ್ದರು [illegible] ರ್ [illegible] ಪಾರ್ಲಿಮೆಂಟು ಭವನದ ಸಹ [illegible] ಗಿದ್ದಾರೆ

ಪಾರ್ಲಿಮೆಂಟಿನ ಹೌಸ್ ಆಫ್ ಲಾರ್ಡ್ಸ್ [illegible] ಮುಂದೆ ಸಾವಿರಾರು ನಿರುದ್ಯೋಗಿಗಳು ಸೇರಿ ನಿರುದ್ಯೋಗಿ ಗಳ ಜೀವನಕ್ಕೆ ಸರ್ಕಾರವು ಕೊಡುವ [illegible] ಕಡಿಮೆ ಮಾಡಬಾರದೆಂಬುದನ್ನು ಹೇಳಿಕೊಳ್ಳಲಿಕ್ಕಾಗಿ ಗುಂಪು ಕೂಡಿ ದ್ದರು. ಪೋಲೀಸಿನವರು ಚದರಿಸುವಾಗ ಪೋಲೀಸಿನವರ ಮೇಲೆ ಕೈಮಾಡಿದರು. ಪತ್ತು ಜನರು ದಸ್ತಗಿರಿ ಮಾಡಲ್ಪ ಟ್ಟಿದ್ದಾರೆ.

ಪಾರ್ಲಿಮೆಂಟಿನ ಮೆಂಬರುಗಳ ಮುಂದೆ ಮುಸಲ್ಮಾನರ ಪ್ರತಿನಿಧಿಗಳು ತಮ್ಮ ಹಕ್ಕುಗಳ ಕುರಿತು [illegible] ಗ [illegible] (ಜಾಯಿಂಟ್ ಸಿಲೆಕ್ಟ್ ಕಮಿಟಿ) [illegible] ವರು ಮುಸಲ್ಮಾನರು [illegible] ಭಕ್ತರಾಗಿದ್ದಾರೆ [illegible] ವರ ಹಕ್ಕುಗಳನ್ನು [illegible] ಬ್ರಿಟಿಷರ ಕರ್ತವ್ಯವೆಂತ ವಾದಿಸಿದರು. ಇವರು ಯಾವಾಗಲೂ ಹಿಂದೂಸ್ಥಾನದ [illegible] ಭಕ್ತರಾಗಿದ್ದವರು

ಇಂಗ್ಲೆಂಡಿನಲ್ಲಿ ಮಹಾತ್ಮ ಗಾಂಧಿಯವರು.

[illegible] ವಿದ್ಯಾರ್ಥಿಗಳು ಮಹಾತ್ಮಜೀ [illegible] ಸತ್ಕರಿಸಿದರು. ವಿದ್ಯಾರ್ಥಿಗ [illegible] ಹೇಳಿದರು.

[illegible] ರಲ್ಲಿ ಹಿಂದೀ ವಿದ್ಯಾರ್ಥಿಗಳು ಗಾಂಧಿ ಜೀಯವರನ್ನು ಸತ್ಕರಿಸಿದರು ಆಗ ಮುದುಕರು ಕಳೆದ [illegible] ಹೆಚ್ಚು ಪ್ರಶ್ನೆಗಳಲ್ಲಿ ಇಂಗ್ಲೆಂಡಿನಲ್ಲಿ ಹಿಂದೀ ವಿದ್ಯಾರ್ಥಿಗಳು ಮಾಡಿದ [illegible] ಧರಿಸಬೇಕೆಂದು ಕೇಳಿದಕ್ಕೆ ಇಂಗ್ಲಿಷ್ ದುಸ್ತನ್ನೇ ಧರಿಸಬೇಕೆಂತ ಹೇಳಿದರು

ಸೈಮನ್ ಕಮಿಶನಿನ ಸದಸ್ಯರಾಗಿದ್ದ ಲಾರ್ಡ್ [illegible] ಮ್ಯಾಮರು ಮಿ ಗಾಂಧಿಯವರು ಬ್ರಿಟನಿನ ಅತ್ಯಂತ [illegible] ಶತ್ರುವಾಗಿದ್ದಾರೆಂತಲೂ, ಇವರಿಗಿಂತ ಗಾಂಧಿಯವರು ಬೆ [illegible] ರಾಜತಂತ್ರ [illegible] ರೆಂತಲೂ ಗಾಂಧೀಜೀಯವರಿಗೆ ಬ್ರಿಟನಿನವರು ಸ್ವಾಗತ ಕೊ ಡತ್ತಿರುವುದು ಬ್ರಿಟನಿಗೆ ನಾಚಿಕೆಗೇಡಿತನವಾಗಿದೆಯೆಂತಲೂ ಒಂದು ಭಾಷಣದಲ್ಲಿ ಹೇಳಿದರು

ತಾ 1ರಲ್ಲಿ ಲಂಡನಿನಲ್ಲಿರುವ ಎಲ್ಲಾ ಹಿಂದೀಯರು ಸೇರಿ ಗಾಂಧೀಜೀಯವರನ್ನು ಸತ್ಕರಿಸಿದರು ಆಗ ಮಹಾ ತ್ಮಜೀಯವರು ಸರ್ಕಾರವು ತಮ್ಮ ಉದ್ದೇಶವನ್ನು ಕೂಡಲೇ ಹೇಳಬೇಕೆಂತಲೂ, ತನ್ನಿಂದ ಇಲ್ಲಿ ಕೆಲಸವೇನೂ ಆಗ ಬರಲಿಲ್ಲ ವೆಂತ ಹೇಳಿದ ಕೂಡಲೇ ತಾನು ಇಂಗ್ಲೆಂಡಿಗೆ ಬೆನ್ನು ಹಾಕು ತ್ತೇನೆಂತಲೂ ಹೇಳಿದರು ಆ ಸಮಾರಂಭದಲ್ಲಿ 375 ಪೌಂ ಡ್ ಗಳು ಒಪ್ಪಿಸಲ್ಪಟ್ಟಿತು

ಪಾರ್ಲಿಮೆಂಟಿನ ಸದಸ್ಯರಿಗೆ ಮಹಾತ್ಮರು ಭಾಷಣ ಕೊ ಟ್ಟನಂತರ ಕನ್ಸರ್ವೇಟಿವ್ ಮೆಂಬರುಗಳು [illegible] ಅವರ ಸ್ವ [illegible] ನ್ನು ಅಪೇಕ್ಷಿಸಿದರು 10 ನಿಮಿ ಕೊಟ್ಟ ನಂತರ [illegible] ಹೋದರು

ಕಡಿಮೆ ಸುಬ್ಬೆ ಕೇಳಿ ನವರ ಹಕ್ಕುಗಳ ಕುರಿತು ರಾ ತ್ರಿ [illegible] ಮೀಟಿಂಗುಗಳು ಆಗುತ್ತಲಿವೆ ಅಸ್ಪೃಶ್ಯರಿಗೂ ಕ್ರಿಶ್ಚಿಯನರಿಗೂ ಪ್ರತ್ಯೇಕ ಚುನಾವಣೆಯ ಹಕ್ಕನ್ನು ಕೊಡ ಲು ಮಹಾತ್ಮಜೀ ಒಪ್ಪುವುದಿಲ್ಲ

ತಾ 2ರಲ್ಲಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಗಾಂ ಧಿ ಸೊಸೈಟಿ ಮುಂತಾದ ಸಂಸ್ಥೆಗಳೂ ಸೇರಿ ಮಹಾತ್ಮರ ಜ ನ್ಮ ದಿವಸವನ್ನು ಆಚರಿಸಿದರು ಒಂದೇ ಮಣ್ಣು ಮತ್ತು ಫಲ ಹಾರಕ್ಕೆ ಇತ್ತು ಮಹಾತ್ಮರು ಅದನ್ನು ಸಹ ತಿನ್ನದೆ ಆಡಿ ನ ಹಾಲು ಮಾತ್ರ ಕುಡಿದರು ಅಲ್ಲಿ ಅವರು ಹೇಳಿದ್ದೇನಂ ದರೆ 'ಆಕಾಶವು ಕಪ್ಪು ಮುಚ್ಚಿಕೊಂಡಿದೆ ಪುನಃ ಹೋ ರಾಡಲು ತಯಾರಿದ್ದೇವೆ ನಮ್ಮ ರಕ್ತದ ಗಂಗಾ ಪ್ರವಾಹವ ನ್ನೇ ಹರಿಸಲು [illegible] ಆದರೆ ನಾವು ಯಾರ ಮೇ ಲೆ [illegible] ಸ್ವಾತಂತ್ರ್ಯ [illegible] ಹೇಳಿದರು [illegible] 100 [illegible] ಕೊಟ್ಟರು ಹಿಂದೀ ಸ್ತ್ರೀಯರು ಕಳೆದ ಹೋರಾಟದಲ್ಲಿ ಮಾಡಿದ ತ್ಯಾಗವನ್ನು ರಶ್ಲಾಘಿಸಿದರು.

ತಾ 3ರಲ್ಲಿ ಕೇಂಬ್ರಿಜಿಗೆ ಹೋಗಿ ಅಲ್ಲಿ ಗುಡಿಯಲ್ಲಿ ಪ್ರಾರ್ಥನೆಯಲ್ಲಿ ಭಾಗ [illegible] ಲಂಡನ್ [illegible] ಮುಕ್ಕೊಂಡರು [illegible] ಕಾರ್ಯವನ್ನು ಕಡಿಮೆ ಮಾಡುತ್ತಾರೆ

ಡಾಕ್ಟರ್ [illegible] ಎಂಬವರು ಗಾಂಧೀಯವರ [illegible] ಕ್ಕೆ ತಕ್ಕೆಯ ಉಪದೇಶಗಳನ್ನು ಶ್ಲಾಘಿಸಿದರು. ಯೇಸು ಕ್ರಿಸ್ತನಿಗೆ ಗಾಂಧಿಯವರನ್ನು ಹೋಲಿಸಿದರು

ತಾ 3ರಲ್ಲಿ ಕೇಂಬ್ರಿಜ್‌ನಿನ ಮಗಧ ಪರಿಷತ್ತಿಗೆ ಮ ಹಾತ್ಮಜೀಯವರು ಕೇಂಬ್ರಿಜಿನಿಂದ ಹಿಂತಿರುಗಿದರು

ಗಾಂಧೀ ಜಯಂತಿ.

(ತಾ, ೨–೧೦–೩೦ರ 'ಕರ್ಮವೀರ'ದಿಂದ)

ಇವತ್ತು ಮಹಾತ್ಮ ಗಾಂಧೀಯವರ ಜಯಂತಿ. ಇದೊಂದು ಪವಿತ್ರ ದಿನವು, ಶುಭ ದಿನವು, ಯಾಕಂದರೆ—ಮಹಾತ್ಮರಂಥವರು ಹುಟ್ಟಿದ ದಿನವಿದು, ಅವರಿಗೆ ೬೨ ವರ್ಷ ತುಂಬಿದ ದಿನವಿದು. ಅನ್ಯ ಅನೇಕ ಮಾನವರು ಹುಟ್ಟುವರು ಸಾಯುವರು. ಅವರವರ ಜಯಂತಿಗಳನ್ನು ಅವರವರ ಮನೆಯವರಾದರೂ ಮಾಡುವರೋ ಇಲ್ಲವೋ? ಮಹಾತ್ಮ ಗಾಂಧಿಯವರ ಜನ್ಮ ದಿನವನ್ನು ಇವತ್ತು ಹಿಂದೂಸ್ಥಾನವು ಆಚರಿಸುವುದಲ್ಲದೆ, ಇಂಗ್ಲೆಂಡ್, ಫ್ರಾನ್ಸ್, ಅಮೇರಿಕಾ ಮುಂತಾದ ದೇಶಗಳಲ್ಲಿಯೂ ಅವರ ಅನುಯಾಯಿಗಳು ಕೂಡ ಈ ದಿನವನ್ನು ಸಮಾರಂಭದಿಂದ ಆಚರಿಸುವರು.

ಹೀಗೆ ಇಡೀ ಜಗತ್ತಿನಲ್ಲಿ ಅವರ ಅನುಯಾಯಿಗಳಾಗುವ ಕಾರಣವೇನು? ಅವರು ಒಂದು ಸಾಮಾನ್ಯ ವ್ಯಕ್ತಿಗಳಲ್ಲ. ಗಾಂಧಿಯೆಂದರೆ ಇವತ್ತು ಮೂರುಮರೆ ಮೊಳದ ಒಂದು ದೇಹವಲ್ಲ; ಒಂದು ವಿಶಿಷ್ಟ ಕುಲಶೀಲದಲ್ಲಿ ಹುಟ್ಟಿ ಬೆಳೆದ ಶರೀರ ವಿಶಿಷ್ಟವಲ್ಲ. ಮಹಾತ್ಮರು ಜಗತ್ತಿಗೆ ಒಂದು ಸಂದೇಶ ಕೊಡಲು ಒಂದು ಶಕ್ತಿಯು ಮಹಾತ್ಮರೆಂದರೊಂದು ಆಕಾಶವಾಣಿಯು. ಅವರ ದೇಹವು ಇರಲಿ, ಹೋಗಲಿ, ಅವರು ಯರವಡಾ ಕಾರಾಗೃಹದಲ್ಲಿ ಸೆರೆಯಾಳಾಗಿರಲಿ, ಇಲ್ಲವೆ ಸಾಮ್ರಾಜ್ಯದ ರಾಜಧಾನಿಯಾದ ಲಂಡನ್ನಿನಲ್ಲಿ ಹಿಂದೀ ರಾಷ್ಟ್ರದ ಪ್ರತಿನಿಧಿಗಳಾಗಿ ಹೋಗಿರಲಿ, ಅವರ ಧ್ವನಿಯು ಇಡೀ ನವಪಂಚ ಪೃಥ್ವಿಯಲ್ಲಿ ಕೇಳಿರುವದು. ಅವರು ಏನು ಮಾಡುವರು ಇದರ ಕಡೆಗೆ ಇಡೀ ಜಗತ್ತಿನ ದೃಷ್ಟಿ ಇದೆ.

ಅವರೊಬ್ಬ ಋಷಿಗಳು, ಸತ್ಯದರ್ಶನ ಪಡೆದ ದ್ರಷ್ಟಾರರು, ಒಂದು ಹೊಸ ಧರ್ಮದ ಪ್ರಣೇತರು. ಅವರನ್ನು ಹೋಲಿಸುವದಾದರೆ ಬುದ್ಧ ಕ್ರಿಸ್ತ, ಮಹಮ್ಮದ ಮುಂತಾದವರೊಡನೆಯೇ ಹೋಲಿಸಬೇಕಾಗುವುದು. ಮುಂಗಾಣದ ರಾಷ್ಟ್ರಗಳಿಗೆ ಅವರು ಹಾದಿತೋರಿಸುವವರು. ಬಡವರಿಗೆ, ದೀನರಿಗೆ, ಹೀನರಿಗೆ, ಪತಿತರಿಗೆ ಧೈರ್ಯಗೊಟ್ಟು ಮುಂದೆ ಕರೆದು ಅವರನ್ನು ಬಲವುಳ್ಳವರನ್ನಾಗಿ ಮಾಡುವವರು. ಬಲವುಳ್ಳವರಿಗೆ, ಧನವಂತರಿಗೆ, ಬುದ್ಧಿವಂತರಿಗೆ ಅನ್ಯರು ಹಾದಿ ತೋರಿಸುವ ಅವಶ್ಯಕತೆ ಇರುವುದಿಲ್ಲ. ಆದರೆ ಆರ್ತರಿಗೆ, ದುಃಖ ಸಂತಪ್ತರಿಗೆ, ಪೀಡಿತರಿಗೆ ಯಾರೂ ಕೇಳುವವರಿರುವುದಿಲ್ಲ, ಅಂಥವರಿಗೆ ಮಹಾತ್ಮರು ಕೈಕೊಟ್ಟು ಮೇಲಕ್ಕೇಳಲು ಸಾಮರ್ಥ್ಯ ಕೊಡುತ್ತಿರುವರು.

ಮಹಾತ್ಮ ಗಾಂಧಿಯವರು ಹೊಸ ಧರ್ಮದ ಪ್ರಣೇತರೆಂದು ಮೇಲೆ ಹೇಳಿದೆವು. ಅವರು ಬರೇ ರಾಜಕಾರಣೀ ಪುರುಷರಲ್ಲ. ಬರೇ ತಮ್ಮ ಷ್ಟಕ್ಕೆ ತಾವೇ ಸಾತ್ವಿಕ ಭಾವದಿಂದಿರುವ ಸಾಧುಗಳಲ್ಲ. ದುಃಖ—ದಾಸ್ಯ—ವ್ಯಸನ—ಕಡು ಕುತನದ ರಾಶಿಯಲ್ಲಿ ಮುಳುಗುತ್ತಿರುವ ಇಡೀ ಮಾನವೀ ಸಮಾಜವನ್ನೇ ಮೊನ್ನೆ ಕೋಲು ಹಾಕಿ ಮೇಲಕ್ಕೆ ತಲುಬ್ಬುಗಿಸಿದ ಕರ್ಮಯೋಗಿಗಳವರು.

ಧರ್ಮಕ್ಕೆ ಎರಡು ರೂಪಗಳು—ಒಂದು ಅದರ ತಾತ್ವಿಕ ಸ್ವರೂಪ, ಇನ್ನೊಂದು ಅದರ ಆಚಾರ ಸ್ವರೂಪ. ಮಹಾತ್ಮ ಗಾಂಧಿಯವರ ಧರ್ಮದ ಆ ಎರಡು ರೂಪಗಳ ವಿವರವನ್ನು ನಾವು ಇಲ್ಲಿ ಹೇಳಬಹುದು.

ಸತ್ಯವೇ ಪರಮಾತ್ಮನು. ಅದು ಸರ್ವವ್ಯಾಪಿ, ಸರ್ವಶಕ್ತಿಮಾನ್ ಇರುವದು. ದರಿದ್ರ ನಾರಾಯಣನಲ್ಲಿ ಅಧಿಷ್ಠಿತವಾದ ಪರಮಾತ್ಮ ಸ್ವರೂಪವನ್ನು ಈಗ ಮಹಾತ್ಮ ಗಾಂಧಿಯವರು ತಮ್ಮ ಇಷ್ಟದೈವತವೆಂದು ಉಪಾಸಿಸುತ್ತಿರುವರು. ಪರರ ದುಃಖವನ್ನು ತಿಳಿದುಕೊಳ್ಳುವವನೇ ವೈಷ್ಣವ—ಭಕ್ತ ಎಂದು ನರಸಿಂಹ ಮಹಾತ್ಮರು ನುಡಿದ ವಾಕ್ಯವು ಮಹಾತ್ಮರಿಗೆ ಅತ್ಯಂತ ಪ್ರಿಯವು. ಅನಾತಕ್ತರಾಗಿ ಈ ದರಿದ್ರ ನಾರಾಯಣನ ಸೇವೆ ಮಾಡುವುದೇ ಮಹಾತ್ಮರ ಕರ್ಮಯೋಗವು. ಪ್ರತಿಯೊಂದು ವ್ಯಕ್ತಿಯು ಆ ಸತ್ಯವೆಂಬ ಪರಮ ಶಕ್ತಿಯ ಘಟಕವು. ಆ ಶಕ್ತಿಯ ಆ ದೇಶದಿಂದ ಸ್ಫೂರ್ತಿಗೊಂಡು ಕೇವಲ ನಿಮಿತ್ತಮಾತ್ರನಾಗಿ ವ್ಯಕ್ತಿಯು ಕಾರ್ಯಮಾಡತಕ್ಕದ್ದು. ಪ್ರತಿಯೊಬ್ಬ ವ್ಯಕ್ತಿಯು ಆ ಪರಮ ಶಕ್ತಿಯೊಡನೆ ತನ್ನ ಸಂಬಂಧವನ್ನು ಪ್ರಾರ್ಥನೆಯ ಮುಖಾಂತರ ತೋರಿಸತಕ್ಕದ್ದು. ಅಂತಃಕರಣವು ಎಷ್ಟು ಪವಿತ್ರವಾಗುವುದೋ ಅಷ್ಟು ಈ ಸಂಬಂಧವು ನಿಕಟವಾಗಬಹುದು. ಆ ಸಂಬಂಧವನ್ನು ಹೆಚ್ಚೆಚ್ಚು ಬೆಳೆಯಿಸಿ ಸದ್ದೈವ ಜನತಾ ಜನಾರ್ದನನ ನಿಷ್ಕಾಮ ಸೇವೆ ಮಾಡುತ್ತ ಪರಮ ಶಾಂತಿ ಸುಖವನ್ನನುಭವಿಸುತ್ತಿರುವುದೇ ಮಹಾತ್ಮ ಗಾಂಧಿಯವರ ಮೋಕ್ಷವೆಂದು ಹೇಳಬಹುದು. ಇದೇ ಮಹಾತ್ಮ ಗಾಂಧಿ ಧರ್ಮದ ತತ್ವ ಸ್ವರೂಪವು.

ಇದಕ್ಕನುಕೂಲವಾಗಿ ಈ ಧ್ಯೇಯವು ಸಾಧಿಸುವಂತೆ ಮಹಾತ್ಮರು ತಮ್ಮ ಆಚಾರ ಧರ್ಮವನ್ನು ಆಣಿ ಮಾಡಿರುವರು. ಜಗತ್ತಿನಲ್ಲೆಲ್ಲ ತಮ್ಮ ತತ್ವಗಳ ಮತ್ತು ಕಾರ್ಯದ ಪ್ರಸಾರವಾಗಬೇಕಾದರೆ ಹಿಂದೂಸ್ಥಾನವು ಸ್ವತಂತ್ರವಾಗಲೇ ಬೇಕೆಂದು ಅವರ ಸಿದ್ಧಾಂತವಿರುವುದು. ಆದುದರಿಂದ ಅವರು ಸದ್ಯಕ್ಕೆ ಹಿಂದೂಸ್ಥಾನವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿರುವರು. ಇಲ್ಲಿಯ ದರಿದ್ರ ನಾರಾಯಣನ ಸೇವೆಯೇ ತಮ್ಮ ಪರಮ ಧರ್ಮವೆಂದು ಅವರು ಆಚರಿಸುತ್ತಿರುವರು. ಅಹಿಂಸಾ ಪಾಲಿಸುವದೇ ಅವರ ನಿತ್ಯಯಜ್ಞ ಕರ್ಮ. ಖಾದಿ ಧಾರಣವೇ ಅವರ ಮುಡಿ. ೬ ಲಕ್ಷ ಬಡ ಬಗ್ಗರ ಹಿತವೇ ಅವರು ಸಾಧಿಸತಕ್ಕ ಕಾರ್ಯ. ಪತಿತವೆಂದೆಣಿಸಲ್ಪಟ್ಟ ಅಸ್ಪೃಶ್ಯರ ಉದ್ಧಾರವೇ ಹಿಂದೂಸ್ಥಾನದ ಉದ್ಧಾರವೆಂದು ಅವರು ತಿಳಿಯುತ್ತಿರುವರು. ಉಪವಾಸ, ತಪಸ್ಸು, ಬ್ರಹ್ಮಚರ್ಯ, ಅಸ್ತೇಯ ಅಪರಿಗ್ರಹ ಈ ಮುಂತಾದವುಗಳಿಂದ ಚಿತ್ತ ಶುದ್ಧಿ ಮಾಡಿಕೊಂಡು ಸಮರ್ಥರಾಗಿ, ಹೆಚ್ಚು ಬಲವುಳ್ಳವರಾಗಿ ಜನಸೇವೆ ಮಾಡುವುದೇ ಅವರ ಆಚಾರ ಧರ್ಮವು.

ಇನ್ನು ಈಗ ಯಾವ ಧ್ಯೇಯವನ್ನು—ಹಿಂದೂಸ್ಥಾನದ ಸ್ವಾತಂತ್ರ್ಯ—ಅವರು ಸಾಧಿಸಬೇಕೆನ್ನುವರೋ ಮತ್ತು ಜಗತ್ತಿಗೊಂದು ಹೊಸ ಮಾರ್ಗವನ್ನು ತೋರಿಸಬೇಕೆನ್ನುವರೋ ಅದು ಯಾವುದು? ಅದು ಅವರ ಅಹಿಂಸಾ ಮಾರ್ಗ, ಪ್ರೇಮದ ಮಾರ್ಗ, ಸತ್ಯದ ಆಗ್ರಹ ಹಿಡಿದು ಅಚಲ ಧೈರ್ಯದಿಂದ ಯಾವುದಕ್ಕೂ ಸೊಪ್ಪು ಹಾಕದೆ, ಯಾರನ್ನೂ ನೋಯಿಸದೆ ಶತ್ರುಗಳಿಂದ ಬೇಕಾದ ಕಷ್ಟಗಳಾದರೂ ಅವುಗಳನ್ನು ಸಹಿಸುತ್ತಾ ಶತ್ರುಗಳನ್ನು ಗೆಲ್ಲುವುದೇ ಅವರ ಹೊಸ ಸತ್ಯಾಗ್ರಹ ಮಾರ್ಗವು. ಅನ್ಯಾಯ, ಜುಲುಮೆ, ಕೆಡಕು ಇವುಗಳಿಗೆ ಯಾವ ಸಹಾಯವನ್ನೂ ಕೊಡದೆ ಈ ಮಾರ್ಗದಿಂದ ಸಾಗಿದರೆ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವು ದೊರಕುವುದಲ್ಲದೆ ಇಡೀ ಜಗತ್ತಿನಲ್ಲಿ ಶಾಂತಿ ಸಾಮ್ರಾಜ್ಯವು ನೆಲೆಗೊಳ್ಳುವದು. ಈ ಮಾರ್ಗವು ಪರಿಣಾಮಕಾರಿ ಎಂಬ ವನ್ನು ಸಿದ್ಧ ಮಾಡುವ ಹೊಣೆಯು ಮಾತ್ರ, ಈಗ ಹಿಂದೂಸ್ಥಾನದ ಮೇಲೆ ಇದೆ. ಈ ಜಯಂತಿಯ ವಾರದಲ್ಲಿ ನಾವು ಈ ಮೇಲಿನ ತತ್ವಗಳ ಅಭ್ಯಾಸ ಮತ್ತು ಅದರಂತೆ ಕೃತಿ ಮಾಡಿ ಜಗತ್ತಿಗೆ ಹೊಸ ಹಾದಿ ತೋರಿಸುವ ಶ್ರೇಷ್ಠ ಕಾರ್ಯದಲ್ಲಿ ಶ್ರೇಯೋಭಾಗಿಗಳಾಗಬೇಕು.

"ನಾಣ್ಯದ ವಿನಿಮಯ"

ಭಂಗಾರ, ಬೆಳ್ಳಿ ಧಾರಣೆಯು ಬಿದ್ದಮೇಲೇ ವಿಲಾಯತಿ ಬ್ಯಾಂಕುಗಳು ೫ ದಿವಸಗಳ ವರೆಗೆ ಮುಚ್ಚಲ್ಪಟ್ಟವು. ಎಲ್ಲಿ ನೋಡಿದಲ್ಲಿ ಸರಕಾರವು ದಿವಾಳೀ ತೆಗೆಯಿತೆಂಬ ಹರಟೆ. ಈಗಿನ ಪರಿಸ್ಥಿತಿಯನ್ನು ಚೆನ್ನಾಗಿ ಪರೀಕ್ಷಿಸಿ, ಅದರ ನಿಜ ಸ್ಥಿತಿಯನ್ನು ನಮ್ಮ ವಾಚಕರಿಗೆ ಅರುಹಬೇಕೆಂದು ಈ ಲೇಖನವನ್ನು ಬರೆದಿರುತ್ತೇವೆ. ಅರ್ಥಶಾಸ್ತ್ರದ ಎಷ್ಟೋ ತಜ್ಞರು ಈ ಪರಿಸ್ಥಿತಿಯ ವಿಷಯವಾಗಿ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಆದರೂ ನಮ್ಮ ಅಭಿಪ್ರಾಯವನ್ನು ನಾವು ಇಲ್ಲಿ ಸ್ಪಷ್ಟವಾಗಿ ವ್ಯಕ್ತಮಾಡಿದ್ದೇವೆ.

ಹಿಂದೂಸ್ಥಾನ ಮತ್ತು ಇಂಗ್ಲೆಂಡು ಇವೆರಡು ದೇಶಗಳ ಸಂಬಂಧವು ಯಜಮಾನ ಸೇವಕರ ಸಂಬಂಧವಿದ್ದಂತಿರುತ್ತದೆ. ಇಂಗ್ಲೆಂಡು ಹೇಳಿದಂತೆ ಹಿಂದೂಸ್ಥಾನವು ಕೇಳಲೇಬೇಕು. ಇಂಗ್ಲೆಂಡಿಗೆ ಆಪತ್ತು ಒದಗಿದರೆ ಅದು ತನ್ನ ಭಾರವನ್ನು ಹಿಂದೂಸ್ಥಾನದ ಮೇಲೆ ಹಾಕಲಿಕ್ಕೆ ಪ್ರಯತ್ನಿಸುತ್ತದೆ. ಕಳೆದ ಮಹಾಯುದ್ಧದಲ್ಲಿ ಇಂಗ್ಲೆಂಡು ಮಿತಿಮೀರಿ ಹಣವನ್ನು ವೆಚ್ಚ ಮಾಡಲು ಅದರಿಂದ 'ಧನಕೋ' ದೇಶವು ಹೋಗಿ 'ಋಣಕೋ' ದೇಶವಾಗಹತ್ತಿತು. ಮಹಾ ಯುದ್ಧದ ನಂತರ ಇಂಗ್ಲೆಂಡಿನ ಧನಕೋ ಸ್ಥಾನವು ಅಮೇರಿಕದ ಕಡೆಗೆ ಹೋಯಿತು. ಯೂರೋಪಿನ ಎಲ್ಲ ಸರಕಾರಗಳೂ ಸಾಲವನ್ನು ಒಯ್ಯುತ್ತಿದ್ದರು. ಆದಾಯಕ್ಕೂ, ವ್ಯಯಕ್ಕೂ ತಾಳ ಮೇಳವಿಲ್ಲದಂತಾಯಿತು. ಜಗತ್ತಿನಲ್ಲಿ ವ್ಯಾಪಾರವು ಇಂಗ್ಲೆಂಡಿನ ಕೂಡ ನಡೆಯುತ್ತಿತ್ತು. ಇಂಗ್ಲೆಂಡಿನ ಪೌಂಡುಗಳು ಯಾವ ದೇಶಾದ ದೇಶದಲ್ಲಿ ನಡೆಯುತ್ತಿದ್ದವು. ಯಾಕಂದರೆ ಪ್ರತಿಯೊಂದು ರಾಷ್ಟ್ರದ ವ್ಯಾಪಾರಸ್ಥರ ಸಂಬಂಧವು ಇಂಗ್ಲೆಂಡಿನ ಬ್ಯಾಂಕಿನ ಇರುತ್ತಿತ್ತು. ಈ ಸ್ಥಿತಿಯು ಕ್ರಮೇಣ ಇಲ್ಲದಂತಾಗುತ್ತ ನಡೆಯಿತು. ಇಂಗ್ಲೆಂಡು ಬ್ಯಾಂಕಿನ ನೋಟುಗಳನ್ನು ಬೇಕಾದಲ್ಲಿ ಪೌಂಡಿನ ಬೆಲೆಗೆ ತೆಗೆದುಕೊಳ್ಳುತ್ತಿದ್ದರು. ಇಂಗ್ಲೆಂಡಿನ ಸರಕಾರಕ್ಕೆ ಹಣದ ಕೊರತೆಯುಂಟಾಗಿ ಆಯವ್ಯಯಕ್ಕೆ ಮೇಳಗೂಡಿಸುವದು ಕಠಿಣವಾಯಿತು. ಈ ವರ್ಷ ಅದರ ಜಮಾ ಖರ್ಚಿನಲ್ಲಿ ಕೊರತೆ ಬೀಳಹತ್ತಿತು. ಯೂರೋಪಿನ ಸರಕಾರಗಳು ಸಾಲದಲ್ಲಿ ಮುಳುಗಿದವು. ಜನರಲ್ಲಿ ಕೊಳ್ಳುವ ಶಕ್ತಿಯು ಕಡಿಮೆಯಾಯಿತು. ಮತ್ತು ಎಲ್ಲ ಪದಾರ್ಥಗಳ ಉತ್ಪತ್ತಿಯೂ ಹೆಚ್ಚಾಯಿತು. ಹೀಗಾಗಿ ಧಾರಣೆಯು ಇಳಿಯಿತು. ಇದರಿಂದ ಎಲ್ಲ ರಾಷ್ಟ್ರಗಳಿಗೂ ಹಾನಿಯಾಯಿತು. ಇಂಗ್ಲೆಂಡಿಗೆ ಹಣದ ಕೊರತೆಯುಂಟಾದ ಕೂಡಲೆ ಅದನ್ನು ಹೇಗೆ ಸರಿಪಡಿಸಿಕೊಳ್ಳಬೇಕೆಂಬುದನ್ನು ವಿಚಾರ ಮಾಡುವ ಸಲುವಾಗಿ ಒಂದು ಕಮಿಟಿಯನ್ನು ನೇಮಿಸಿದರು. ವ್ಯಾಪಾರದ ಇದೇ ಸ್ಥಿತಿಯು ಹೀಗೆಯೇ ಉಳಿದರೆ ಮುಂದಿನ ವರ್ಷ ೧೧೯ ಮಿಲಿಯನ್ (೧ ಮಿಲಿಯನ್ ಅಂದರೆ ೧೦ ಲಕ್ಷ) ಪೌಂಡುಗಳ ಕೊರತೆ ಬೀಳುವದೆಂದು ಆ ಕಮಿಟಿಯವರು ಕಂಡುಹಿಡಿದರು. ಜಮಾ ಖರ್ಚನ್ನು ಜಾಯಿಗೂಡಿಸುವ ಸಲುವಾಗಿ ಅಲ್ಲಿ ಕೋಲಾಹಲವೆದ್ದಿತು. ಕೂಲಿಕಾರ ಪಕ್ಷದ ಸರಕಾರವು ತನ್ನ ಅಧಿಕಾರವನ್ನು ಬಿಟ್ಟಿತು. ಮೊದಲೇ ಜಗತ್ತಿನ ವ್ಯಾಪಾರ ಕೇಂದ್ರವು ಇಂಗ್ಲೆಂಡಿನಿಂದ ಅಮೇರಿಕದ ಕಡೆಗೆ ಹೋಗಿತ್ತು. ಮತ್ತು ಇಂಗ್ಲೆಂಡು ಸರಕಾರವು ಈ ಪ್ರಕಾರ ಸಾಲದಲ್ಲಿ ಮುಳುಗಹತ್ತಿದ್ದಾರೆಂದು ಕಂಡು ಯೂರೋಪಿನ ಎಲ್ಲ ರಾಷ್ಟ್ರಗಳು ಬೆದರಿದವು. ಫ್ರಾನ್ಸ್, ಮತ್ತು ಅಮೇರಿಕಾ ದೇಶಗಳು ಅದಷ್ಟು ಭಂಗಾರವನ್ನು ತಮ್ಮ ಕಡೆಗೆ ಎಳೆದುಕೊಂಡಿತ್ತವು. ಇಂಗ್ಲೆಂಡಿನ ಕೂಡ ವ್ಯಾಪಾರ ಮಾಡುವ ಪರರಾಷ್ಟ್ರದವರು ಇಂಗ್ಲೆಂಡಿನಿಂದ ಬರತಕ್ಕ ಹಣವನ್ನು ಭಂಗಾರ ರೂಪದಿಂದ ಬೇಡಹತ್ತಿದರು. ಇಂಗ್ಲೆಂಡ್ ಬ್ಯಾಂಕಿನ ನೋಟುಗಳನ್ನು ಒಲ್ಲೆನ್ನಹತ್ತಿದರು. ಅದ್ದರಿಂದ ಆ ನೋಟುಗಳ ಬೆಲೆಯು ಕಡಿಮೆಯಾಗಹತ್ತಿತು. ಮತ್ತು ಭಂಗಾರವು ಇಂಗ್ಲೆಂಡಿನಿಂದ ಹೊರಗೆ ಹೋಗಬೇಕಾಯಿತು. ಎಲ್ಲ ಭಂಗಾರವು ಹೊರಗೆ ಹೋಗುವದೆಂದು ತಿಳಿದು ನೋಟು ಕೊಟ್ಟರೆ ಭಂಗಾರವನ್ನು ಕೊಡುವದಿಲ್ಲೆಂದು ಜಾಹೀರ ಮಾಡಿದರು. ಮತ್ತು ಪರದೇಶದಿಂದ ಹುಂಡಿಗಳು ಅದಷ್ಟು ಬರದಂತೆ ವ್ಯವಸ್ಥೆ ಮಾಡಹತ್ತಿದರು. ಹಿಂದೂಸ್ಥಾನದ ಹುಂಡಿಗಳಾದರೂ ಯಾವದೊಂದು ನಿಶ್ಚಿತ ಧೋರಣವನ್ನು ಸ್ವೀಕರಿಸುವ ವರೆಗೆ ಬರಬಾರದೆಂದು ತಿಳಿದು ಇಲ್ಲಿಯ ಬ್ಯಾಂಕುಗಳನ್ನು ಮುಚ್ಚಲಿಕ್ಕೆ ಹಚ್ಚಿದರು. ಹಿಂದೂಸ್ಥಾನದಲ್ಲಿಯ ರೂ. ಯ ಬೆಲೆಯನ್ನು ಮನಬಂದಂತೆ ಹೆಚ್ಚು ಕಡಿಮೆ ಮಾಡುವ ಅಧಿಕಾರವನ್ನು ಸರಕಾರದವರು ಯಾರನ್ನೂ ಕೇಳದೆ ನಡಿಸಹತ್ತಿದ್ದಾರೆ ಇಂಗ್ಲೆಂಡನ್ನು ಮುಳುಗಿಸಬೇಕೆಂದು ಅಮೇರಿಕಾ ಮೊದಲಾದ ರಾಷ್ಟ್ರಗಳು ಇಂಗ್ಲೆಂಡಿನ ಬ್ಯಾಂಕಿನ ನೋಟುಗಳ ಬೆಲೆಯನ್ನು ಕಡಿಮೆ ಮಾಡಹತ್ತಿದ್ದಾರೆಂದು ಕೆಲವರು ಅನ್ನುತ್ತಾರೆ. ಅದು ಏನೇ ಇರಲಿ, ಇಂಗ್ಲೆಂಡು ತನ್ನಲ್ಲಿದ್ದ ಭಂಗಾರವನ್ನು ಹೊರಗೆ ಬಿಡಲೊಲ್ಲದು. ರಾಜ್ಯದ ಸಾಲವು ಬೆಳೆದು ಹೋಗಿದೆ. ವ್ಯಾಪಾರವು ಮಂದವಾದದ್ದರಿಂದ ಜನರಲ್ಲಿ ಹಣವಿಲ್ಲ. ಸರಕಾರದ ಆದಾಯವು ಕಡಿಮೆಯಾಗಿದೆ. ನಿರುದ್ಯೋಗವು ಬೆಳೆದು ಹೋಗಿದೆ. ಹೀಗಾಗಿ ಇಂಗ್ಲೆಂಡಿನ ಸರಕಾರವು ಪೇಚಾಡಹತ್ತಿದೆ. ಹಿಂದೂಸ್ಥಾನವನ್ನು ಇನ್ನಷ್ಟು ಹಿಂಡಬೇಕೆಂದು ಇಂಗ್ಲೆಂಡು ಆತುರಪಡಹತ್ತಿದೆ.

ಹಿಂದೂಸ್ಥಾನಕ್ಕಾಗುವ ಹಾನಿ.

ಹಿಂದೂಸ್ಥಾನದಲ್ಲಿ ಭಂಗಾರದ ಧಾರಣೆಯು ಏರಿದ ಕೂಡಲೆ ಕೆಲವರು ಸಂತೋಷಪಟ್ಟರು. ಸರಕಾರದವರು ನಮ್ಮ ಮೇಲೆ ಉಪಕಾರ ಮಾಡಿದರೆಂದು ಕೆಲವರು ತಿಳಿದುಕೊಂಡಿರಬಹುದು. ಆದರೆ ಇದೆಲ್ಲ ಘಟೋತ್ಕಚನ ಮಾಯಾಬಜಾರ ಅಥವಾ ಜಾದೂ ಆಟದಂತಿರುತ್ತದೆ. ಈಗ್ಗೆ ಏರಿದ ಧಾರಣೆಯ ಏರಿಕೆಯು ಶಾಶ್ವತವಾದದ್ದಲ್ಲ. ವ್ಯಾಪಾರದಲ್ಲಿ ಜೂಜಾಟಿಕೆಯು ನಡೆದಿರುತ್ತದೆ. ರೂಪಾಯಿಗೆ ಕೃತ್ರಿಮ ಬೆಲೆಯನ್ನಿಟ್ಟು ಅದನ್ನು ಶಾಶ್ವತ ಮಾಡಲಿಕ್ಕೆ ಪ್ರಯತ್ನ ಮಾಡಿ ಸರಕಾರದವರು ಈಗ ಬಗಲೆತ್ತಿದ್ದಾರೆ. ರೂಪಾಯಿಗೆ ಹದಿನೆಂಟು ಪೆನ್ಸ್ ಬೆಲೆ ಇಡುವದರಿಂದ ಹಿಂದೂಸ್ಥಾನಕ್ಕೆ ವಿಪರೀತ ಹಾನಿಯಾಗಿದೆಯೆಂದು ನಾವು ಅನೇಕ ಸಾರೆ ಸಪ್ರಮಾಣ ಸಿದ್ಧಮಾಡಿ ತೋರಿಸಿದ್ದೇವೆ. ಪುನರುಕ್ತಿಯಾದರೂ ಚಿಂತೆಯಿಲ್ಲ ಇಲ್ಲಿ ಪುನಃ ಒಂದು ಉದಾಹರಣೆಯನ್ನು ಕೊಟ್ಟು ತೋರಿಸುತ್ತೇವೆ. ಪೇಟೆಯಲ್ಲಿ ೫ ಆಣೆಗೆ ಒಂದು ಪದಾರ್ಥವು ಸಿಗುತ್ತದೆಂದು ಇಟ್ಟುಕೊಳ್ಳೋಣ. ನಿಮ್ಮ ಹತ್ತರವಿದ್ದ ಪಾವಲಿಯ ಬೆಲೆಯು ೫ ಆಣೆ ಇರುತ್ತದೆಂದು ನೀವು ತಿಳಿದುಕೊಂಡಿದ್ದೀರಿ. ಈ ಪಾವಲಿ ಕೊಟ್ಟು ೫ ಆಣೆಯ ಪದಾರ್ಥವನ್ನು ತೆಗೆದುಕೊಂಡು ಬರಲಿಕ್ಕೆ ನೀವು ನಿಮ್ಮ ಆಳಿಗೆ ಒತ್ತಾಯಪಡಿಸುತ್ತೀರಿ. ನಿಮ್ಮ ಆಳು ತನ್ನ ಕೈಯಿಂದ ಒಂದಾಣೆ ಕೊಟ್ಟು ನಿಮಗೆ ಆ ಪದಾರ್ಥವನ್ನು ತಂದುಕೊಡಬೇಕಾಗುತ್ತದೆ ಅದರಂತೆ ಸರಕಾರದವರು ರೂಪಾಯಿಯ ಬೆಲೆಯನ್ನು ಹದಿನೆಂಟು ಪೆನ್ಸ್ ಮಾಡಿ ಹಿಂದೂಸ್ಥಾನ ಸರಕಾರದ ಪರವಾಗಿ ವಿಲಾಯತಿಯಲ್ಲಿ ಕಾದಿಟ್ಟ ಭಂಗಾರದೊಳಗಿಂದ ಹಣವನ್ನು ಕೊಡುತ್ತದೆ. ಇದೇ ವರ್ಷದಲ್ಲಿ ಕಾದಿಟ್ಟ ಭಂಗಾರದಲ್ಲಿ ೨೩ ಕೋಟಿ ರೂಪಾಯಿಗಳ ಭಂಗಾರವನ್ನು ಸರಕಾರದವರು ಮಾರಿಬಿಟ್ಟಿದ್ದಾರೆ. ಹುಂಡಿಗಳಾಗಲಿ, ನೋಟುಗಳಾಗಲಿ ಸರಕಾರದ ಬೊಕ್ಕಸಕ್ಕೆ ಬಂದರೆ ಅವುಗಳನ್ನು ಬದಲಾಯಿಸಿ ಭಂಗಾರ ಕೊಡುವದನ್ನು ತುರ್ತಕ್ಕೆ ನಿಲ್ಲಿಸಿದ್ದಾರೆ. ಸರಕಾರದವರು ಆ ಬಗ್ಗೆ ಆಶ್ವಾಸನವನ್ನು ಮಾತ್ರ ಕೊಡುತ್ತಾರೆ. ಒಂದು ರೂಪಾಯಿಯನ್ನು ನಾವು ಇಂಗ್ಲೆಂಡಿಗೆ ಕಳುಹಿಸಿದರೆ ೧೮ ಪೆನ್ಸ್ ಭಂಗಾರ ನಾಣ್ಯವನ್ನು ಕೊಡುವ ಬದಲು ಅವರನ್ನ ನೋಟನಂತೆ ೧೮ ಪೇನ್ಸಿನ ಇಂಗ್ಲೆಂಡಿನ ಬ್ಯಾಂಕಿನ ನೋಟನ್ನು ಕೊಡುತ್ತೇವೆಂದು ಮೊನ್ನೆ ಜಾಹೀರು ಮಾಡಿದ್ದಾರೆ. ಇದರಿಂದ ರೂಪಾಯಿಗಳ ಬೆಲೆಯು ಕಡಿಮೆಯಾಯಿತು. ಕೃತ್ರಿಮ ಬೆಲೆಯನ್ನು ರೂಪಾಯಿಗಿಟ್ಟು ಹಿಂದೂಸ್ಥಾನವನ್ನು ಹಾನಿಗೆ ಗುರಿ ಮಾಡಿದ್ದಾರೆ. ರೂಪಾಯಿಗಳನ್ನು ತೆಗೆದುಕೊಂಡು ಕಾಗದವನ್ನು ಕೊಡುತ್ತಾರೆ. ಇದರಿಂದ ಇಂಗ್ಲೆಂಡಿನ ವ್ಯಾಪಾರವು ಹಿಂದೂಸ್ಥಾನದ ಕೂಡ ಹೆಚ್ಚಾಗುವದು. ಹಿಂದೂಸ್ಥಾನದ ಜನರಿಗೆ ಬ್ರಿಟಿಷ್ ಮಾಲನ್ನು ತೆಗೆದುಕೊಳ್ಳಲಿಕ್ಕೆ ಹಚ್ಚಿ ಅದಷ್ಟು ಹಣವನ್ನು ಸೆಳೆದುಕೊಳ್ಳಬೇಕೆಂದು ಹುಂಚಿಕೆ ಹಾಕಿದಂತೆ ತೋರುತ್ತದೆ. ಜಪಾನ್, ಜರ್ಮನಿ ಮೊದಲಾದ ದೇಶಗಳ ಕೂಡ ಹಿಂದೀ ಜನರು ವ್ಯಾಪಾರ ಮಾಡಿದರೆ ಇಲ್ಲಿಂದ ಭಂಗಾರವನ್ನೇ ಕಳುಹಿಸಬೇಕಾಗುತ್ತದೆ. ಮೊದಲು ಇಂಗ್ಲೆಂಡಿನ ಮುಖಾಂತರವಾಗಿ ಜಯೂ ರಾಷ್ಟ್ರದವರು ಈ ದೇಶದ ಹಣವನ್ನು 'ತರಿಸಿಕೊಳ್ಳುತ್ತಿದ್ದರು. ಈಗ ಇಂಗ್ಲೆಂಡಿನವರು ರೂಪಾಯಿಗೆ ಬದಲಾಗಿ ಬ್ಯಾಂಕು ನೋಟನ್ನು ಕೊಡುತ್ತಾರೆ. ಅವುಗಳ ಬೆಲೆಯು ಪರದೇಶಗಳಲ್ಲಿ ಕಡಿಮೆಯಾಗಿದೆ. ಅದ್ದರಿಂದ ಹಿಂದೀ ವ್ಯಾಪಾರಿಗಳು ಪರದೇಶಗಳ ಕೂಡ ಪ್ರತ್ಯಕ್ಷ ವ್ಯಾಪಾರ ಮಾಡಬೇಕಾದರೆ ಭಂಗಾರವನ್ನೇ ಕಳುಹಿಸಬೇಕಾಗುತ್ತದೆ. ಅದ್ದರಿಂದ ಆ ಮಾಲು ತುಟ್ಟಿ ಬೀಳುತ್ತದೆ. ಹೀಗಾಗಿ ಹಿಂದೀ ಜನರು ಇಂಗ್ಲೆಂಡಿನ ಸರಕನ್ನೇ ಕೊಂಡುಕೊಳ್ಳಬೇಕಾಗುತ್ತದೆ. ಸ್ವಭಾವಿಕವಾಗಿ ಇಲ್ಲಿಯ ಹಣವು

...ಗ್ಲೆಂಡಿಗೆ ಹೋಗುತ್ತದೆ. ಈ ಸಂಗತಿಯನ್ನು ಬ್ರಿಟಿಷ್ ...ವೇ ಸಂತೋಷದಿಂದ ಹೇಳುತ್ತಿದ್ದಾರೆ. ಪರದೇಶದ ವಾ...ನ್ನು ಬಹಿಷ್ಕರಿಸಬೇಕೆಂದು ಹಿಂದೀ ರಾಷ್ಟ್ರವು ಒದ್ದಾಡು...ರುವಾಗ ಇದೊಂದು ಹುಚ್ಚಿಕೆ ಮಾಡಿ ಸಾಮಾನುಗಳನ್ನು ...ನ್ನ ಮಾಡಿ ಅವುಗಳನ್ನು ನಮ್ಮ ತಲೆಯ ಮೇಲೆ ಹೇರಬೇಕ...ತ್ತಾರೆ. ಹತ್ತಿ, ಧಾನ್ಯ ಮೊದಲಾದವುಗಳ ಧಾರಣೆಯು ...ಗ ಕಿಂಚಿತ್ ಏರಿದರೂ ಇದು ಶಾಶ್ವತವಾಗಿ ನಿಲ್ಲಲಾರದು ...ವುಗಳ ಧಾರಣೆಗಳು ಇಳಿದ ಕಾರಣಗಳು ಬೇರೆ ಇರುತ್ತವೆ ...ಯ ಬೆಲೆಯನ್ನು ಕೃತ್ರಿಮ ರೀತಿಯಿಂದ ಹೆಚ್ಚಿಸಿದ್ದರಿಂದ ...ಒಗ್ಗಿಸಲ್ಲಿಯ ಹುಟ್ಟುವಳಿಯು ಹೆಚ್ಚಾಗಿದ್ದರಿಂದಲ ನಾ...ನಾರ ದೇಶಗಳ ಮತ್ತು ಕಡಿಮೆಯಾದ್ದರಿಂದಲೂ ಧಾನ್ಯ ...ತ್ತು ಹತ್ತಿಯ ಧಾರಣೆಯು ಕಡಿಮೆ ಯಾಗಿರುತ್ತದೆ. ...ಳದಲ್ಲಿ ಅಧಿಕವಾಸವೆಂಬಂತೆ ಮುಂದೀ ದಾರಣೆಯಲ್ಲಿ ...ರದವರು ಕೈಹಾಕಿ ಮತ್ತಷ್ಟು ಹಾನಿ ಮಾಡಿದ್ದಾರೆ. ...ದೀ ರಾಷ್ಟ್ರದವರು ತಮ್ಮ ಸಾಲವನ್ನು ಬಿಟ್ಟುಬಿಡಬೇಕು ...ತ್ತು ಭಂಗಾರವನ್ನು ತಮ್ಮ ಕಡೆಗೆ ಒಗ್ಗಿಕೊಂಡು ಹ ಗಿದ...ದ ಪ್ರವೃತ್ತಿಯನ್ನು ಬಿಟ್ಟು ಸರಳ ವ್ಯವಹಾರ ಮಾಡಬೇ...ಕು. ರೂಪಾಯಿಗೆ ಬೆಲೆಯನ್ನು ಕೃತ್ರಿಮ ರೀತಿಯಿಂದ ಗೊತ್ತು ಮಾಡುವುದು ಈಗಿನ ಸರಕಾರದ ಧೋರಣವು ಹಿ ದುಸ್ಥಾನಕ್ಕೆ ಅತ್ಯಂತ ಹಾನಿ ಕಟ್ಟುವಂಥಾದ್ದಿರುತ್ತದೆ.

ಕ ಟ

Gents Lever Wrist Watch Rs 4 12-0

ಜೆಂಟ್ಸ್ ಲೀವರ್ ರಿಸ್ಟ್ ವಾಚ್.

ಈ ಹೊಸ ನಮೂನೆ ಗಡಿಯಾರಗ ... ಒಡೆಯ ಒಲಿಷ್ಟವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟದೆ. ನೋಡಲಿಕ್ಕೆ ಬಂಗಾರದ ಗಡಿಯಾರದ ಹಾಗೆ ಕಾಣುವದು. ಚಿಕ್ಕ ಸ್ಟೀಲು ಕೈಯಲ್ಲಿ ಕಟ್ಟಿಕೊ ... ನಮೂನೆ ಗಡಿಯಾರ ಗ್ಯಾರಂಟಿ 3 ವರ್ಷಗಳು ... ಬ್ರೇಸ್ಲೆಟ್ ಸಹಿತ ಗಡಿಯಾರದ 1ಕ್ಕೆ ರೂ 4-12-0

ಕಮಲಾ ಟ್ರೇಡಿಂಗ ಕಂಪನಿ
17 ಸನ್ಯಾಸಿ ಬಜಾರ್ ಬೀದಿ
4-4 ಜಿ ಟಿ ಮದರಾಸು

British Photo Camera Rs 2-8-0

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಾಗಳು ... ತಯಾರಾದವು. ಈ ಕ್ಯಾಮರಾ ... ಸಹಾಯವಿಲ್ಲದೆ ಎಷ್ಟು ... ಫೋಟೋಗಳನ್ನು ತೆಗೆ... ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದ ... ಫೋಟೋ ... ಫೋಟೋಗಳನ್ನು ಮುಂದಿಗಳಿಗಾದರೂ ತೆಗೆಯಬಹುದು. ಫೋಟೋ ತೆಗೆಯುವದನ್ನು ಕಲಿತ ... ಫೋಟೋ ತೆಗೆಯುವ ... ಕ್ಯಾಮರಾ 1ಕ್ಕೆ ರೂ 2-8-0

...ಡಿಂಗ್ ಕಂಪನಿ
ಸನ್ಯಾಸಿ ಬಜಾರ್ ಬೀದಿ
ಜಿ ಟಿ ಮದರಾಸು.

ಎಂಪೈರ್ ಆಫ್ ಇಂಡಿಯಾ ಲೈಫ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದ 18)

ಹಿಂದೂಸ್ಥಾನದಲ್ಲಿ ... ಇದುವ್ರದಕ್ಕೆ ...

ಏಜನ್ಸಿ ವರ್ಷ! ... ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:-	ಬ್ರಾಂಚ್ ಆಫೀಸು:-
ಎಂಪೈರ್ ಆಫ್ ಇಂಡಿಯಾ	152-3 ಕನಿಂಗ್ಹ್ಯಾಮ್ ಸ್ಟ್ರೀಟ,
ಲೈಫ್ ಬಿಲ್ಡಿಂಗ್,	ಬೆಂಗಳೂರು
೨2-6 ಬೊಂಬಾಯಿ.	

... ಶೃಂಗಾರದ ಪುಸ್ತಕ!!

...

ಮದನ ಕಾ... ಶಾಸ್ತ್ರ

...

ಕನ್ನಡ ... ಪ್ರೀತಿಯ ರಹಸ್ಯಗಳು. ... ದೇಶದ ... ಫೋಟೋಗಳು ... ಪ್ರೀತಿ ... ರಹಸ್ಯಗಳು. ... ಪುರುಷರ ಜಾತಿಯ ಲಕ್ಷಣಗಳು. ... ದೇಶದಲ್ಲಿ ಸ್ತ್ರೀ ... ರತಿ ... ಆನಂದವಾಗುವದಕ್ಕೆ ... ಫೋಟೋ ... ಈ ಶೃಂಗಾರವಾದ ಪುಸ್ತಕವನ್ನು ... ಫೋಟೋಗಳು ಸಹಿತ ಪುಸ್ತಕ ...

ಕಮಲಾ ಟ್ರೇಡಿಂಗ್ ಕಂಪನಿ
17 ಸನ್ಯಾಸಿ ಬಜಾರ್ ಬೀದಿ
4-4 ಜಿ ಟಿ ಮದರಾಸು.



೨2-13

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಸ್ಪ್ರೇಟ್ ಭಂಗಾರದ ನಿಬ್ಬು ಹಾಕಿದ ಪ್ರಾತ್ರಿಯಾ... ಬಂದಿರುವವಿಷ್ಟು ಅದ ಫೌಂಟೆನ್‌ಪೆನ್‌ಗಳು.

... ಫೌಂಟೆನ್‌ಪೆನ್ 1ಕ್ಕೆ	ರೂ 3 0 0
... ಪೆನ್ 1ಕ್ಕೆ	3 3 0
... ಪೆನ್ 1ಕ್ಕೆ	3 8 0
... ಕಲರ್ ... ಫೌಂಟೆನ್‌ಪೆನ್ 1ಕ್ಕೆ	4 11 0
... ಕಲರ್ ... ಫೌಂಟೆನ್‌ಪೆನ್ 1ಕ್ಕೆ	4 ? 0
... ಕಲರ್ ಫೌಂಟೆನ್ ಪೆನ್ 1ಕ್ಕೆ	5 8 0
... ಫೌಂಟೆನ್‌ಪೆನ್ 1ಕ್ಕೆ	10 8 0
... ಪೆನ್ 1ಕ್ಕೆ	14 0 0 & 20 10 0
... ಫೌಂಟೆನ್‌ಪೆನ್ 1ಕ್ಕೆ	3 8 0 & 3 12
... ಪೆನ್ 1ಕ್ಕೆ	6 4 0 & 6 12 0
... ಪೆನ್ 1ಕ್ಕೆ	8 ? & 8 10 0

ಟೈಂಪೀಸ್‌ಗಳು.

... ಇರುವ ... ಟೈಂಪೀಸ್ 1ಕ್ಕೆ	3 6 0
... ಟೈಂಪೀಸ್ 1ಕ್ಕೆ	2
... 1ಕ್ಕೆ	6
... ಟೈಂಪೀಸ್ ... 1ಕ್ಕೆ	4 8
... ಅಲಾರಾಂ ಟೈಂಪೀಸ್ 1ಕ್ಕೆ	1 6
... ಅಲಾರಾಂ ...	13
... ಟೈಂಪೀಸ್ 1ಕ್ಕೆ	13
... ವಾಚ್ 1ಕ್ಕೆ	5 10
... ವಾಚ್ 1ಕ್ಕೆ	1 4
... 1ಕ್ಕೆ	5 1 0, 7 8 0, 10 0 0, 12 8



ಇಲ್ಲಿ ... ಹೊಸ ನಮೂನೆ ... ಪ್ಲೆಟ್ 1ಕ್ಕೆ 3-6-0 ...

ಹೋಲ್‌ಸೇಲ್ ... ವ್ಯಾಪಾರಸ್ಥರ ಮಾಡಿ ... ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೨2-13

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

	ರೂ.
ಷೇರ್ ಬಂಡವಾಳ —	50,000
ವಸೂಲಾದ ಷೇರ್ ಮೊಬಲಗು —	26,800
ಜಮೆಯಾದ ಠೇವಣಾತಿ —	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು ರಾವ್ ಬಹದ್ದೂರ್.

ಟ್ರೆಜರರ್, ಮನೆಯಪ್ಪಂಡ ಬೆಳ್ಯಪ್ಪನವರು

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್,

ತಾರೀಖು 1—7—1931.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು ಕೊಡುವುದರಿಂದ ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52—40 **ಗಿರಿಗಾಂವ, ಮುಂಬಯಿ.**

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ದಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
ಮೆ. ಬ್ಯಾಲೆ ಮಾದಯ್ಯನವರು,

ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಪ್ಪಯ್ಯನವರು,
ಮೆರನಾಡು—ಮೆ. ಕೀಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಸಾಪ್ಪೋಳ್ಳು—ಎಮ್. ಆರ್. ವೆಂಕಪ್ಪಯ್ಯನವರು
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಒಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಸೆಂಡ ನಂಗಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರು,
" ಮೆ. ಸಣ್ಣುವಂಡ ಬೋಪಯ್ಯನವರು ಮತ್ತು ಆರಮಣಮಾಡ ಪಿ ಕಾರ್ಯಪ್ಪನವರು,
ಕುದಿಕೇರಿ ಮತ್ತು ತಿತಿಮತ್ತಿ—ಮೆ. ಬಿ ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ನಾಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ
ಬಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊತ್ತದ 1,78,322 ಜನರಿಗೆ 38ಕೋಟಿ ರೂ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದು. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಠಿಣ ಶಿಸ್ತಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಲ್ಲಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಿಪುರ	ತಿರುವೇಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

ಮಲೇರಿಯಕ್ಕೆ ಮಲೇರಿಯಾನ

ಕೊಡಗಿನ ಗುಡುಗುಡು ಎಂಬ ಚಳಿ ಜ್ವರಕ್ಕೂ, ಸುತ ಬಿಡು ಜ್ವರಕ್ಕೂ, ಗಟ್ಟಿಯಾದ ಜ್ವರಗಡ್ಡೆಗೂ ಗುಣಕಾರವಾದ ರಾಯವೆಂದು ಶಿಫಾರಸಾದ ರಾಜಮದ್ದು ಮಲೇರಿಯಾನ. ಸಂಪೂರ್ಣ ಜ್ವರವನ್ನು ಗುಣಪಡಿಸಿ ಗಡ್ಡೆಯನ್ನು ಬಾತ್ರಯಿಸಿ ಬಿಡುತ್ತದೆಂದು ಸ್ಥಿರ ನಂಬು. **ಕ್ರಯ ಬಾಟ್ಲಿಗೆ** 1—[illegible] ½ ಡಜನ್ 8—8—0. 1 ಡಜನ್ 16—8—0.

ಕಂಪಾಂಡು ಸಿರಪ್ಪು ಬ್ಲಟಿ.

ಗುಡುಗುಡು ಅಬ್ಬಸ ನೀವಸದ ರೋಗದಿಂದ ಕಾಲ ಕಾಲಕ್ಕೆ ಗಟ್ಟಿಯಾಗಿ ಎಳದಾಟ ಎದೆ ಮತ್ತು ಪಾರ್ಶ್ವ ನೋವು [illegible] ಯುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು ಕಡ್ಡಾಯವಾಗಿ ಕಂಪಾಂಡು ಸಿರಪ್ಪು ಬ್ಲಟಿ ಎಂಬದನ್ನು ತಕ್ಷಣ ತರಿಸಿ ಕುಡಿಯಲಿ **ಕ್ರಯ ಬಾಟ್ಲಿಗೆ ರೂ.** 3—8—0.

ಕಂಪಾಂಡು ಸಿರಪ್ಪು ಬಸಲೀನ:—ಶ್ವಾಸಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪ್ಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿದರೆ ಶರೀರದಲ್ಲಿ ಉಂಟಾಗುವ ಹುಣ್ಣು ವ್ರಣಗಳು ಕೆಮ್ಮು ಎದೆನೋವು, ರಕ್ತ ಮಿಶ್ರ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ದೀರ್ಘ ಆಯುಷ್ಯ ಕಾಪಾಡಿ ಆರೋಗ್ಯ ಕೊಡುವದು **ಕ್ರಯ ಬಾಟ್ಲಿಗೆ ರೂ.** 3—8—0.

ಕಂಪಾಂಡು ಸಿರಪು ಸೆಬೀನ ಸೇಪಿಯ:—ಹೆಂಗಸರ ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ಬಿಳಿ ಕೆಂಪು ರೋಗದಿಂದ ಸೊಂಟನೋವು ಕೈಕಾಲು ಬಚ್ಚಲು, ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸುವದು **ಕ್ರಯ ಬಾಟ್ಲಿಗೆ ರೂ.** 3—8—0.

ಕಂಪಾಂಡು ಸಿರಪು ವೆಸಿಕೂಲ:—ಪ್ರಮೇಹವೆಂಬ ಗುಪ್ತರೋಗವನ್ನು ಪಡೆಕೊಂಡು, ಮೂತ್ರ ಬಿಂದು ಬಿಂದುವಾಗಿ [illegible] ದ್ವಾರದೊಳಗೆ ಹುಣ್ಣು ವ್ರಣಗಳು, ದುರ್ನಾತದ ಕೊಳಕು ಹಳದಿ ಬಣ್ಣದ ರೇಸಿಗೆ ಇತ್ಯಾದಿ ಕಠಿಣ ತರದ ರೋಗವನ್ನು ಈ ಬಲವಾದ ಸಿರಪು ಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವದು **ಕ್ರಯ ಬಾಟ್ಲಿಗೆ ರೂ.** 3—8—0.

ಶುದ್ಧ ಚಿಕಿತ್ಸೆ ಮದ್ದುಗಳೂ ಹೋಮಿಯೋಪಥಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಪುಟ 3—5ರ ವರೆಗೆ ಓದಿಕೊಂಡು ಬರೆಯತಕ್ಕದ್ದು. ಪರೀಕ್ಷಿಸಿ ಕೊಡುವ ದೃಷ್ಟಿ ಚಕ್ರಗಳೂ, ಬಿಸಲಿಗೆ ಇಡತಕ್ಕ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಖರೀದಿಗೆ ದೊರಕುತ್ತವೆ.

ಆರೋಗ್ಯಭಾಗ್ಯದ ಏಕ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

52—49 **Malariana Co.,**
Hampankatta No 14 Mangalore

ವಿಳಾಸ.—ಮಲೇರಿಯಾನ ಕಂಪೆನಿ,
ಹಂಪನಕಟ್ಟೆ ನಂಬರು 14, ಮಂಗಳೂರು ಪೋಸ್ಟು

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ [illegible] ಒಟ್ಟು ಮೆಂಬರನ್ನೂ ಇರಬೇಕಾದ ಅಮಿತ [illegible] ಬ್ಯಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳ ಕ್ರಮ ಪ್ರಕಾರ ನಡೆಸಲು ಅತ್ಯವಶ್ಯವಾಗಿರುವ, [illegible] ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮಾ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, [illegible] ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು [illegible] ಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಒಯ್ಯಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

Printed & published by P. I Belliappa at "Kodagu" Press Mer for "Kodagu" Ltd.

Reg. No. [illegible]

If not delivered please return to
"KODAGU" OFFICE MERCARA.

ಕೊಡಗು.

[illegible]

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಸ್ತಕ ೧೧	ಮಡಿಕೇರಿ, ಸನ್ ೧೯೩೧ನೇ ಇಸವಿ ಅಕ್ಟೋಬರ್ ತಾರೀಕು ೧೬ನೇ ಶುಕ್ರವಾರ.	ಸಂಚಿಕೆ ೨೦

Telegrams — "Precious"

V. Subramaniaier Jeweller,

Telephone — 3145.

DIAMAND MERCHANT GOLD & SILVER SMITH.

Deals in all:—
SPORTS CUPS in all prices
MEADALS in up-to-date patterns
CASKETS in elegant styles

Nos. 2 & 3, Kuppumuthu St.,
TIRUVATESWARANPET,
Post Box 423, Triplicane P. O.,
MADRAS.

Deals in all:—
GEM-SET JEWELS, set with Diamonds, Rubies etc.,
GOLD ARTICLES of all patterns
SILVER WARE in latest style

52–48



[illegible]

[illegible]

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
24–5 **210 Abdul Rehman Street, BOMBAY.**

[illegible] 1—8—0, 3 [illegible] 4—0—0; 6 [illegible] 7—8—0, 12 [illegible] 14

[illegible]

[illegible]

52–23

ಬಾಲಾರ್ಕಮದು.

[illegible]



[illegible] 1 [illegible] 12 [illegible] 9 [illegible]

[illegible]

ಯಂ. ವಿ. ಪ್ರಸಾದಿಕ,
[illegible]

52–40

ಕೊಡಗು

ಸನ್ ೧೯೩೧ನೇ ಇಸವಿ

ಅಕ್ಟೋಬರ್ ತಾ ೧೬ನೇ ಶುಕ್ರವಾರ.

ಕೋಮುವಾರು ಸಮಸ್ಯೆ.

ಹಿಂದೂ ದೇಶದಲ್ಲಿ ಹಲವು ಜಾತಿ, ಮತ ಭೇದಗಳಿರುವವಾದರೂ ಇಲ್ಲಿ ಕೋಮುವಾರು ಸಮಸ್ಯೆಯೆಂದರೆ ಹಿಂದೂ ಮುಸಲ್ಮಾನ ಜಾತಿಗಳ ಸಮಸ್ಯೆಯೆಂದೇ ಪ್ರಸಿದ್ಧಿಗೊಂಡಿದೆ. ಯಾಕೆಂದರೆ, ಹಿಂದೂಸ್ಥಾನದಲ್ಲಿ ಇವೆರಡು ಪ್ರಮುಖ್ಯ ಮತಸ್ಥರಿಗೆ ಇರುವ ಭಿನ್ನಾಭಿಪ್ರಾಯಗಳು ಸರಿಹೋದಲ್ಲಿ ಬೇರೆ ಜಾತಿ ಅಲ್ಪ ಸಂಖ್ಯಾತ ಕೋಮುಗಳ ಭಿನ್ನಭೇದಗಳನ್ನು ಸುಲಭದಿಂದಲ್ಲಿಯೇ ತೀರಿಸಿಕೊಳ್ಳಬಹುದಾಗಿದೆ. ಈ ಕಾರಣ ಸ್ವಾತಂತ್ರ್ಯ ಹೋರಾಟಕ್ಕೂ, ರಾಷ್ಟ್ರೀಯತ್ವಕ್ಕೂ ಆಗಾಗ್ಯೆ ಅಡ್ಡಬರುತ್ತಿರುವ ಮುಳ್ಳಿನಂಥ ಈ ವಿಚಾರವನ್ನು ತೀರ್ಮಾನಿಸಲು ಹಿಂದೂ ಮುಸಲ್ಮಾನರ ಒಗ್ಗಟ್ಟಿಗಾಗಿ ಈ ಮೊದಲು ಭಾರತ ಭೂಮಿಯಲ್ಲಿಯೇ ಹಲವು ಸಾರಿ ಪ್ರಯತ್ನಿಸಲಾಯಿತು. ಆದರೆ ಅದು ಕೈಗೂಡಲಿಲ್ಲ. ಹಿಂದೂ ದೇಶದಲ್ಲಿನ ಸದ್ಯದ ವಾತಾವರಣವು ಈ ತೀರ್ಮಾನಕ್ಕೆ ಅನುಕೂಲವಾಗಿಲ್ಲದಿರುವುದರಿಂದ ಇಂಗ್ಲೆಂಡಿನಲ್ಲಿ ಈ ವಿಷಯವು ತೃಪ್ತಿಕರವಾಗಿ ನಿರ್ಣಯಿಸಲ್ಪಡುವುದೆಂದು ಜನರು ಆಶಿಸಿದ್ದರು. ಆದರೆ ಕಳೆದ ವಾರ ಲಂಡನ್ನಿನಿಂದ ಬಂದ ವರ್ತಮಾನವು ಇಂಡಿಯಾದ ಹಿತೈಷಿಗಳಿಗೆಲ್ಲಾ ತುಂಬಾ ಆಶಾಭಂಗವನ್ನುಂಟುಮಾಡಿ [illegible]

ದುಂಡು ಮೇಜು ಪರಿಷತ್ತಿನವರು ಈ ಪ್ರಾಮುಖ್ಯ ಸಮಸ್ಯೆಯನ್ನು ಬಿಡಿಸಲು ಮೈನಾರಿಟೀಸ್ ಸಬ್ ಕಮಿಟಿ ಅಂದರೆ ಅಲ್ಪ ಸಂಖ್ಯಾತ ಉಪ ಸಮಿತಿಯೊಂದನ್ನು ನೇಮಿಸಿದ್ದರು. ಈ ಸಮಿತಿಗೆ ಬ್ರಿಟನ್ನಿನ ಪ್ರಧಾನ ಮಂತ್ರಿಯೂ ಮತ್ತು ದುಂಡು ಮೇಜು ಪರಿಷತ್ತಿನ ಪ್ರೆಸಿಡೆಂಟರಾದ ಮಿ. ರಾಮ್ಸೆ ಮೆಕ್ಡೊನಾಲ್ಡರವರೇ ಅಧ್ಯಕ್ಷರಾಗಿರುವರು. ಸರ್ಕಾರ ನಿಯಮಿತವಾದ ಸಮಿತಿಯಲ್ಲಿ ಈ ಪ್ರಶ್ನೆಯನ್ನು ತೀರ್ಮಾನಿಸಲು ಕಷ್ಟಸಾಧ್ಯವಾಗಬಹುದಾದ ಕಾರಣ ಮಹಾತ್ಮ ಗಾಂಧಿಯವರ ಸೂಚನೆ ಮೇರೆ ಅವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಣ್ಣ ಉಪ ಕಮಿಟಿಯು ಏರ್ಪಾಡು ಮಾಡಲಾಯಿತು. ಅದರಲ್ಲಿ ಹಿಂದೂ, ಮುಸಲ್ಮಾನ್, ಸಿಖ್, ಅಸ್ಪೃಶ್ಯ, ಆಂಗ್ಲೊ ಇಂಡಿಯನ್, ಕ್ರಿಶ್ಚಿಯನ್, ಯೂರೋಪಿಯನ್ ಮೊದಲಾದ ಜಾತಿಗಳ ಮುಖ್ಯ ಪ್ರತಿನಿಧಿಗಳು ಕಲೆತು ಹಿಂದೂ ದೇಶದ ಮುಂದಿನ ರಾಜಕೀಯ ರಚನೆಯಲ್ಲಿ ತಮ್ಮ ತಮ್ಮ ಕೋಮುಗಳಿಗೆ ಬೇಕಾದ ಹಕ್ಕು ಬಾಧ್ಯತೆಗಳನ್ನು ಕುರಿತು ಚರ್ಚಿಸಲಾರಂಭಿಸಿದರು. ಒಂದು ವಾರದವರೆಗೆ ಮಹಾತ್ಮ ಗಾಂಧಿಯವರು ಬೇರೆ ಪ್ರತಿನಿಧಿಗಳೊಂದಿಗೆ ಈ ಸಂಗತಿಯನ್ನು ತೀರ್ಮಾನಿಸಲು ಸರ್ವ ಪ್ರಯತ್ನ ಮಾಡಿದರು. ಆದರೆ ಎಲ್ಲವೂ ನಿಷ್ಫಲವಾಯಿತು. ಯಾವ ತೀರ್ಮಾನಕ್ಕೂ ಬರಲು ಸಾಧ್ಯವಾಗಲಿಲ್ಲ. ಇದಕ್ಕೆ ಕೋಮುವಾರು ತತ್ವವಾದಿಗಳ ಹಠಮಾರಿತನವೇ ಕಾರಣವಾಗಿ ಕಂಡುಬರುತ್ತದೆ. ಈ ಅಪಜಯವು ಹಿಂದೂ ರಾಷ್ಟ್ರಕ್ಕೆ ನಾಚಿಕೆಯನ್ನೂ, ವ್ಯಸನವನ್ನೂ ಉಂಟುಮಾಡುವಂಥದ್ದಾಗಿದೆ.

ಈ ಉಪ ಕಮಿಟಿಯಲ್ಲಿ ಅಲ್ಪ ಸಂಖ್ಯಾತ ಕೋಮುಗಳ ಪ್ರತಿನಿಧಿಗಳು ಮುಂದಿನ ಸೆಂಟ್ರಲ್ ಎಸೆಂಬ್ಲಿಯಲ್ಲಿಯೂ, ಪ್ರಾಂತೀಕ ಕೌನ್ಸಿಲುಗಳಲ್ಲಿಯೂ ತಮ್ಮ ಕೋಮುಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂದು ವಾದಿಸಿದರು. ಆದರೆ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಪ್ರತಿನಿಧಿಯಾದ ಗಾಂಧಿಜೀಯವರು ಮುಸಲ್ಮಾನರಿಗು ಮತ್ತು ಸಿಖ್ಖರಿಗು ವಿನಹ ಬೇರೆ ಯಾವ ಕೋಮಿನವರಿಗೂ ಪ್ರತ್ಯೇಕ ಪ್ರಾತಿನಿಧ್ಯವಿರಕೂಡದೆಂದೂ, ಇವೆರಡು ಜಾತಿಯವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡುವುದು ತತ್ಕಾಲ ನಿವಾರಿಸಕೂಡದಂಥ ಕೆಡಕೆಂತಲೂ ಸೂಚಿಸಿದರು. ಕಾಂಗ್ರೆಸ್ಸಿನ ತೀರ್ಮಾನದಂತೆ ಪ್ರಾಯ ಪ್ರಬುದ್ಧರಿಗೆಲ್ಲಾ ಓಟಿನ ಹಕ್ಕು ಸಿಕ್ಕಿದ ಮೇಲೆ ಅಲ್ಪ ಸಂಖ್ಯಾತ ಕೋಮುಗಳಿಗೆ ಪ್ರತ್ಯೇಕ ಪ್ರಾತಿನಿಧ್ಯದ ಅವಶ್ಯಕತೆಯೇ ಇರುವುದಿಲ್ಲ ಮಾತ್ರವಲ್ಲ, ಅವರಿಗೆ ಅದರಿಂದ ಕೆಡಕುಗಳೂ ಸಹ ಆಗುವ ಸಂಭವವಿದೆ. ಇಷ್ಟೇ ಅಲ್ಲ, ಎಲ್ಲಾ ಚಿಕ್ಕ ಚಿಕ್ಕ ಕೋಮಿನವರೂ ಎಸೆಂಬ್ಲಿಗಾಗಲೀ, ಕೌನ್ಸಿಲಿಗಾಗಲೀ ಪ್ರತ್ಯೇಕ ಪ್ರತ್ಯೇಕ ಪ್ರತಿನಿಧಿಗಳನ್ನು ಕಳುಹಿಸಿದರೆ ಸದರಿ ಸಂಸ್ಥೆಯಲ್ಲಿ ಕೋಮುವಾರು ವಾದ ವಿವಾದಗಳು ಹೆಚ್ಚುವವೇ ಹೊರತು, ಇಡೀ ರಾಷ್ಟ್ರಕ್ಕೆ ಪ್ರಯೋಜನಕರವಾದ ಕಾರ್ಯಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. ಕೋಮುವಾರು ಪ್ರತಿನಿಧಿತ್ವವು ಪ್ರಜಾ ಪ್ರಭುತ್ವದ ತತ್ವಕ್ಕೆ ವಿರೋಧವಾದದ್ದಾಗಿದೆ. ಆದುದರಿಂದ ಪ್ರಜಾಧಿಪತ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್ಸಿನ ಪ್ರತಿನಿಧಿಯು ಜಾತಿವಾರು ಪ್ರಾತಿನಿಧ್ಯಕ್ಕೆ ಒಪ್ಪದೆ ಇರುವುದು ಸಹಜವಾಗಿದೆ. ಆದರೆ ಇದು ಅಪಜಯಕ್ಕೆ ಕಾರಣವಾಗಲಿಲ್ಲ.

ಹಿಂದೂ ಮುಸಲ್ಮಾನರ ಸಮಸ್ಯೆಯೇ ಅಲ್ಲಿಯೂ ಅತಿ ಪ್ರಾಮುಖ್ಯ ಸ್ಥಾನವನ್ನು ಹೊಂದಿತು. ಮುಸಲ್ಮಾನರ ಪ್ರತಿನಿಧಿಗಳಾದ ಆಗಾ ಖಾನರು, ಸರ್ ಎಂ. ಶಾಫಿಯವರು, ಮಿ. ಜಿನ್ನಾರವರೇ ಮೊದಲಾದವರು ತಮ್ಮ ಮೊದಲಿನ 14 ಶರತುಗಳನ್ನು ಬಿಟ್ಟು ಅಲುಗಾಡುವುದಿಲ್ಲವೆಂದು ಹಠಹಿಡಿದರು. ಮಹಾತ್ಮರು ಹಿಂದೂ ಮುಸಲ್ಮಾನರ ಐಕ್ಯತೆಗಾಗಿ ಹಿಂದೂಗಳ ಮತ್ತು ಇಡೀ ರಾಷ್ಟ್ರದ ಹಿತವನ್ನೂ ಕೂಡ ಸ್ವಲ್ಪ ಮಟ್ಟಿಗೆ ಬಿಟ್ಟುಕೊಡಲು ಸಿದ್ಧರಾದರು. ರಾಷ್ಟ್ರೀಯತ್ವಕ್ಕೆ ವಿರೋಧವಾಗಿಯಾದರೂ ಮುಸಲ್ಮಾನರಿಗೆ ತಾತ್ಕಾಲಿ ಪ್ರತ್ಯೇಕ ಚುನಾವಣೆ ಇಡಲು ಒಪ್ಪುತ್ತೇನೆಂದರು. ಅಂದರೆ ಹೊಸ ರಚನೆಯು ಜಾರಿಗೆ ಬಂದ ಕೂಡಲೇ ಮುಸಲ್ಮಾನ ಓಟರುಗಳೆಲ್ಲರ ಅಭಿಪ್ರಾಯ ತೆಗೆದುಕೊಂಡು, ಅವರು ಬಹುಮತದಿಂದ ಪ್ರತ್ಯೇಕ ಚುನಾವಣೆ ಬೇಕೆಂದರೆ ಹಾಗೆ ನಡೆಸಲು ಗಾಂಧಿಜೀಯವರು ಸಮ್ಮತಿಸಿದರು. ಈ ಅಭಿಪ್ರಾಯಕ್ಕೆ ರಾಷ್ಟ್ರೀಯ ಪಕ್ಷದ ಹಿಂದೂಗಳು ಮಾತ್ರವಲ್ಲ, ಮುಸಲ್ಮಾನರೂ ಕೂಡ ಒಪ್ಪಿಗೆಯನ್ನೀಯಲಾರರು. ಯಾಕೆಂದರೆ, ಈಗಿನ ಸ್ಥಿತಿಯಲ್ಲಿ ಮುಸಲ್ಮಾನ ಓಟರುಗಳ ನಿಜವಾದ ಅಭಿಪ್ರಾಯ ತೆಗೆಯುವುದು ಸುಲಭ ಸಾಧ್ಯದ ಕೆಲಸವಲ್ಲ. ಕೋಮುವಾರು ತತ್ವವಾದಿಗಳು ಹಿಂತಾ ಮಾರ್ಗವನ್ನಾದರೂ ಕೈಕೊಂಡು ಓಟರುಗಳಿಂದ ತಮಗೆ ಬೇಕಾದ ಪ್ರತ್ಯೇಕ ಚುನಾವಣೆಯ ಅಭಿಪ್ರಾಯವನ್ನೇ ಕೊಡಿಸುವರೆಂಬ ಭಯವು ಹಲವರಿಗಿದೆ, ಮತ್ತು ಇದು ಅನುಭವದ ವಿಷಯವೂ ಆಗಿದೆ. ಇದಲ್ಲದೆ ಮುಸಲ್ಮಾನರಿಗೆ ಪಂಜಾಬು ಮತ್ತು ಬಂಗಾಳ ಕೌನ್ಸಿಲುಗಳಲ್ಲಿ ಬಹುಮತವಿರುವಂತೆಯೂ, ಮುಸಲ್ಮಾನರು ಕಡಿಮೆ ಸಂಖ್ಯೆ ಇರುವಲ್ಲಿ ಅವರಿಗೆ ತೂಕವಿರುವಷ್ಟು ಪ್ರಾತಿನಿಧ್ಯ ಕೊಡಲೂ ಮಹಾತ್ಮರು ಒಪ್ಪಿದರು. ಇಷ್ಟಾದರೂ ಕೂಡ ಜಾತಿವಾರು ತತ್ವವಾದಿಗಳಾದ ಮುಸಲ್ಮಾನ್ ಮುಖಂಡರು ಮಹಾತ್ಮರ ಶರತುಗಳಿಗೆ ಒಪ್ಪಲಿಲ್ಲ. ತಮ್ಮ ಹಠವೇ ಗೆಲ್ಲಬೇಕೆಂದು ನಿಶ್ಚಯಿಸಿದರು. ತನ್ನ ಶರತುಗಳು ಮುಸಲ್ಮಾನರಿಗೆ ಒಪ್ಪಿಗೆಯಾಗದೆ ಹೋದರೆ ಈ ಸಮಸ್ಯೆಯನ್ನು ತೀರ್ಮಾನಿಸಲು ಹಿಂದೀಯರೂ, ಬ್ರಿಟಿಷರೂ ಅಲ್ಲದೆ ಸ್ವಾತಂತ್ರ್ಯ ನ್ಯಾಯ ಮಂಡಳಿಯೊಂದಕ್ಕೆ ಬಿಡುವ ಎಂದು ಗಾಂಧಿಜೀಯವರು ಸೂಚಿಸಿದಕ್ಕೆ ಹಿಂದೂ ಪ್ರತಿನಿಧಿಗಳು ಸಮ್ಮತಿಸಿದರು. ಆದರೂ ಮಹಮ್ಮದೀಯ ಪ್ರತಿನಿಧಿಗಳು ಒಪ್ಪಲಿಲ್ಲ. ಈದ ಕಾರಣ ಮಹಾತ್ಮರ ಪ್ರಯತ್ನಗಳು ನೀರಿಗೆ ಹೋಮ ಹಾಕಿದಂತಾಯಿತು.

ನಂತರ ಸೇರಿದ 'ಮೈನಾರಿಟೀಸ್ ಸಬ್ ಕಮಿಟಿ'ಯಲ್ಲಿ ಮಹಾತ್ಮರು ತನ್ನ ಅಪಜಯವನ್ನು ಕುರಿತು ತುಂಬಾ ನೋವಿನಿಂದ ಭಾಷಣ ಮಾಡಿದರು. ಆಗ್ಯೆ, ದುಂಡು ಮೇಜು ಪರಿಷತ್ತಿನ ಹಾಗೂ ಉಪ ಸಮಿತಿಗಳ ಮೆಂಬರುಗಳು ಜನರಿಂದ ಆರಿಸಲ್ಪಡದೆ ಸರ್ಕಾರದಿಂದ ನೇಮಿಸಲ್ಪಟ್ಟವರಾದ ಕಾರಣ ಅವರು ಜನರ ನಿಜವಾದ ಪ್ರತಿನಿಧಿಗಳಲ್ಲವಾದುದರಿಂದಲೂ, ಬ್ರಿಟಿಷ್ ಸರ್ಕಾರದವರು ಇಂಡಿಯಕ್ಕೆ ಎಷ್ಟರ ಮಟ್ಟಿಗೆ ಸ್ವಾತಂತ್ರ್ಯ ಆಡಳಿತವನ್ನು ಬಿಟ್ಟುಕೊಡುತ್ತಾರೆಂಬುದನ್ನು ಹೇಳದೆ ಇರುವುದರಿಂದಲೂ ಅಲ್ಪ ಸಂಖ್ಯಾತರ ಸಮಸ್ಯೆಯನ್ನು ಬಿಡಿಸಲು ಸಾಧ್ಯವಾಗಲಿಲ್ಲವೆಂದು ಅವರು ಹೇಳಿದರು. ಈ ಮಾತುಗಳಲ್ಲಿ ತುಂಬಾ ನಿಜವಿದೆಯೆಂಬುದು ಯಾರಿಗೆ ತಿಳಿಯದು? ಗಾಂಧಿಜೀಯವರು ಈ ಮಾತುಗಳನ್ನು 'ಫೆಡರಲ್ ಸ್ಟ್ರಕ್ಚರ್' ಕಮಿಟಿಯು ಮೀಟಿಂಗು ಪ್ರಾರಂಭವಾದಂದಿನಿಂದಲೇ ಹೇಳುತ್ತಿದ್ದಾರೆ. ಆದರೆ ಬ್ರಿಟಿಷ್ ಸರ್ಕಾರದವರು ಈ ವಿಷಯಕ್ಕೆ ಏನೊಂದೂ ಗಮನ ಕೊಡದೆ ಕೋಮುವಾರು ಸಮಸ್ಯೆ ಚರ್ಚೆಯನ್ನು ಮುಂದಕ್ಕೆ ತಂದು ಹಾಕಿಕೊಂಡು ಜಾತಿವಾರು ತತ್ವವಾದಿಗಳಾದ ಮುಸಲ್ಮಾನ ಪ್ರತಿನಿಧಿಗಳನ್ನು ಯಾವ ತೀರ್ಮಾನಕ್ಕೂ ಬಾರದಂತೆ ಉಪಯೋಗಿಸಿಕೊಂಡರೆಂದೇ ಹಲವು ರಾಷ್ಟ್ರೀಯ ಪಕ್ಷದ ಮುಂದಾಳುಗಳ ಅಭಿಪ್ರಾಯವಾಗಿದೆ.

ಈ ಸಮಸ್ಯೆಯ ತೀರ್ಮಾನಕ್ಕೆ ಇನ್ನೊಂದು ಮುಖ್ಯ ಅಡಚಣೆ ಇದೆ. ಎಸೆಂಬ್ಲಿಯ ಮಾಜಿ ಅಧ್ಯಕ್ಷರಾದ ಶ್ರೀಯುತ ವಿಠ್ಠಲ ಭಾಯಿ ಪಟೇಲರವರು ಕಳೆದ ಜೂನ್ ತಿಂಗಳಲ್ಲಿ ಲಂಡನಿನಲ್ಲಿ ನಡೆದ ಇಂಡಿಯನ್ [illegible] ಕಾನ್ಫರೆನ್ಸಿನಲ್ಲಿ ಹೇಳಿದಂತೆ, 'ದೇಶದಲ್ಲಿ ಅಧಿಕಾರವಿರುವ ಮೂರನೇ ಪಾರ್ಟಿ ಇರುವ ವರೆಗೆ ಜಾತಿ ಪಂಗಡಗಳ ಕೊರಗು ಎಂದಿಗೂ ಇಲ್ಲದಾಗದು. ಹಾಗಾದ ಮೇಲೆ ಹಿಂದೂಗಳೂ, ಮುಸಲ್ಮಾನರೂ, ತಮ್ಮೊಳಗಿರುವ ವ್ಯತ್ಯಾಸಗಳನ್ನು ಸರಿಪಡಿಸಿಕೊಂಡರೆ ತಮಗೆ ಬೇಕಾದದ್ದು ಒಡನೆ ದೊರೆಯುವದೆಂದು ಹೇಳುವುದರಲ್ಲಿ ಪ್ರಯೋಜನವೇನು?' ಇದು ಗಾಡಿಯನ್ನು ಎತ್ತುಗಳ ಮುಂದೆ ಕಟ್ಟಿದಂತಾಗುವುದು. ಹಿಂದೀಯರಿಗೆ ಬೇಕಾದ ಸ್ವಾತಂತ್ರ್ಯವು ದೊರೆತ ಕೂಡಲೆ ಹಿಂದೂ, ಮುಸಲ್ಮಾನರಿಗಿರುವ ಭಿನ್ನಾಭಿಪ್ರಾಯಗಳು ಸುಲಭದಲ್ಲಿ ತೀರ್ಮಾನಿಸಲ್ಪಡುವವು.

ಸದರಿ ಸಬ್ ಕಮಿಟಿಯ ಮೀಟಿಂಗಿನಲ್ಲೇ ಅಧ್ಯಕ್ಷರಾದ ಪ್ರಧಾನ ಮಂತ್ರಿಯವರು ಮಾಡಿದ ಭಾಷಣವು ಹಿಂದೀಯರಿಗೆ ತುಂಬಾ ಅಸಮಾಧಾನಕರವಾದದ್ದೂ ಮತ್ತು ಅಸಹ್ಯವಾದದ್ದೂ ಆಗಿದೆ. ಸತ್ಯಸಂಧರೆಂದು ಲೋಕ ವಿಖ್ಯಾತರಾದ ಮಹಾತ್ಮ ಗಾಂಧಿಯವರೇ ಮೊದಲಾದ ಹಿಂದೂಸ್ಥಾನದ ಪ್ರಮುಖ್ಯ ಮುಂದಾಳುಗಳನ್ನು ಪ್ರಧಾನ ಮಂತ್ರಿಯವರು ಸಂಬೋಧಿಸಿ 'ಮಹನೀಯರೇ, ಪ್ರಮಾಣಿಕರಾಗಿರಿ' ಎಂದಿದ್ದು ಅಲ್ಲಿದ್ದ ಪ್ರತಿನಿಧಿಗಳಿಗೆ ಮಾತ್ರವಲ್ಲ, ಇಡೀ ರಾಷ್ಟ್ರಕ್ಕೇ ಅವಮರ್ಯಾದೆ ಮಾಡಿದಂತಾಗಲಿಲ್ಲವೆ? ಮಿ. ಮೆಕ್ಡನಾಲ್ಡರವರು ಹಿಂದೀಯ ಮುಖಂಡರನ್ನು ಮಕ್ಕಳೆಂದು ಭಾವಿಸಿ, ಅವರಿಗೆ 'ರಾಬರ್ಟ್ ಮತ್ತು ಜೇಡರ ಹುಳದ' ಕಥೆಯನ್ನು ನೆನಪಿಗೆ ತಂದಿದ್ದು ಹಾಸ್ಯಾಸ್ಪದವಲ್ಲವೇ? ಕೋಮುವಾರು ಪ್ರಶ್ನೆಯನ್ನು ತೀರ್ಮಾನಿಸದೆ ರಚನೆಯ ಕಾರ್ಯವನ್ನು ಮುಂದೆ ನಡೆಸಲು ಸಾಧ್ಯವಾಗುವುದಿಲ್ಲವೆಂತಲೂ, ಹಿಂದೀಯರು ಈ ತೀರ್ಮಾನಕ್ಕೆ ಬಾರದೆ ಹೋದರೆ ತಾವು (ಬ್ರಿಟಿಷರು) ಅಭಿಪ್ರಾಯದಂತೆ ಇಂಡಿಯಾ ಸರ್ಕಾರದಲ್ಲಿ ಸುಧಾರಣೆ ತರಲು ದೃಢಪಡಿಸಿರುತ್ತೇವೆಂತಲೂ ಪ್ರಧಾನ ಮಂತ್ರಿ ಹೇಳಿದ್ದು ತುಂಬಾ ಅಸಮಾಧಾನಕರವಾಗಿದೆ. ಈ [illegible]ಯಿಂದ ಇವರೇ ಈ ಮೊದಲು ಹಿಂದೀಯರಿಗೆ ಕೊಟ್ಟಿದ್ದ [illegible]ಗಳನ್ನೆಲ್ಲಾ ಹಿಂತೆಗೆದಿರುವರೆಂಬುದು ಸ್ಪಷ್ಟವಾಗುತ್ತದೆ. ಹಿಂದೀಯರೊಳಗಿರುವ ವ್ಯತ್ಯಾಸಗಳನ್ನು ಹೋಗಲಾಡಿಸಲು ಸಹಾಯ ಮಾಡುವುದರ ಬದಲು, ಅವುಗಳ ದೆಸೆಯಿಂದ ಯಾವ ಸ್ವಾತಂತ್ರ್ಯ ಸರ್ಕಾರ ಕೊಡಲಾಗುವುದಿಲ್ಲವೆಂದು ಪ್ರಧಾನ ಮಂತ್ರಿಯವರೇ ಹೇಳಿದ ಮಾತುಗಳು ಇಂಡಿಯಾದ ಪ್ರತಿನಿಧಿಗಳ ಕಣ್ಣುಗಳನ್ನು ಇನ್ನಾದರೂ ತೆರೆಸಲಿ. 'ಇಬ್ಬರಿಗೆ ಗುದ್ದಾಟ ಮೂರನೆಯವನಿಗೆ ಲಾಭ' ಎಂಬ ಗಾದೆ ಮಾತಿನ ಹೇಳಿಕೆಯ ನಿಜತ್ವವನ್ನು ಹಿಂದೀ ಪ್ರತಿನಿಧಿಗಳು ಇನ್ನಾದರೂ ಅರಿತುಕೊಂಡು ಪ್ರಯೋಜನ ಹೊಂದುವರೆ?

ನಮ್ಮ ಪ್ರಾಂತ್ಯದ ಚೀಫ್ ಕಮಿಷನರವರು [illegible] ಕೌನ್ಸಿಲು ಅಧಿವೇಶನದಲ್ಲಿ ಹೇಳಿದಂತೆ ಅಲ್ಪ ಸಂಖ್ಯಾತ ಕೋಮುಗಳಿಗೆ ಬಹುಮತ ಕೋಮಿನವರ ಪ್ರೇಮ, ವಿಶ್ವಾಸಗಳಿಗಿಂತ ಹೆಚ್ಚಿನ ಸಂರಕ್ಷಣೆ ಬೇರೊಂದಿಲ್ಲ, ಜನರ ವಿಶ್ವಾಸವಿಲ್ಲದೆ ಯಾವ ಸರ್ಕಾರಕ್ಕೂ ರಾಜ್ಯಭಾರ ಮಾಡುವುದು ಕಷ್ಟಸಾಧ್ಯ ಎಂಬ ಸಂಗತಿಗಳನ್ನು ದುಂಡು ಮೇಜು ಪರಿಷತ್ತಿನಲ್ಲಿರುವ ಹಿಂದೀ ಪ್ರತಿನಿಧಿಗಳೂ, ಬ್ರಿಟಿಷ್ ಅಧಿಕಾರಿಗಳೂ ಚೆನ್ನಾಗಿ ನೆನಪಿಗೆ ತಂದುಕೊಂಡರೆ, ಸದರಿ ಪರಿಷತ್ತನ್ನು ಯಶಸ್ವಿಪ್ರದವಾಗಿ ಮಾಡುವುದು ಅಸಾಧ್ಯವೇನೂ ಅಲ್ಲ. ಈ ಪವಿತ್ರ ಪ್ರಸಂಗದಲ್ಲಿ ಭಾಗಿಗಳಾಗಿರುವವರೆಲ್ಲರಿಗೂ ಜಗದೀಶ್ವರನು ಚಿತ್ತಶುದ್ಧಿ ಮಾಡಿ, ಉಭಯ ಕಡೆಯವರಿಗೂ ಶ್ರೇಯಸ್ಕರವಾದಂಥ ತೀರ್ಮಾನಕ್ಕೆ ಬರುವಂತೆ ಮಾಡಲೆಂದು ಪ್ರಾರ್ಥಿಸುತ್ತೇವೆ.

ಚೀಫ್ ಕಮಿಶನರ ಭಾಷಣ.

ಈ ತಾ. 8ರಲ್ಲಿ ಕೌನ್ಸಿಲು ಮೀಟಿಂಗನ್ನು ಪ್ರಾರಂಭಿಸುವಾಗ ಚೀಫ್ ಕಮಿಶನರು ಮಾಡಿದ ಭಾಷಣ

ಮಹನೀಯರೇ, ಪುನಃ ನಿಮ್ಮನ್ನೆಲ್ಲರನ್ನೂ ನೋಡಿ ಮತ್ತು ದಿವಸದಿಂದ ದಿವಸಕ್ಕೆ ಹೆಚ್ಚಾಗುತ್ತಲಿರುವ ಕಠಿಣ ಸಮಸ್ಯೆಗಳನ್ನು ಬಿಡಿಸಲು ನಿಮ್ಮ ಸಹಾಯ ಪಡೆಯಲಿಕ್ಕೆ ಸಂತೋಷ ಪಡುತ್ತೇನೆ. ಕೊಡಗಿನಲ್ಲಿರುವ ನಾವೆಲ್ಲರೂ ಒಂದೇ ಮನೆ ಜನರು, ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಕಷ್ಟಗಳೆಲ್ಲಾ ಸುಲಭದಲ್ಲಿ ಪರಿಹಾರವಾಗುವವು.

ಕಳೆದ ವರ್ಷ ಈ ಸಮಯದಲ್ಲಿ ನಾವು ಕೂಡಿದ್ದಾಗ ದುಂಡು ಮೇಜು ಪರಿಷತ್ತಿನ ಕಾರ್ಯಗಳು ಬೇಗನೆ [illegible]ದವಾಗಿ ತೀರಿಯಾವೆಂತ ಆಶಿಸಿದ್ದೆವು. ಆದರೆ ಇನ್ನೂ ಆ ಕೆಲಸವು ಆಖೈರವಾಗಲಿಲ್ಲ. ಕಾನ್ಫರೆನ್ಸು ಈಗ [illegible] ಬಿಕ್ಕಟ್ಟಿನ ಚರ್ಚೆಯಲ್ಲಿದೆ. ಕಡಿಮೆ ಸಂಖ್ಯೆ [illegible]ವರ ಪ್ರತಿನಿಧಿಗಳನ್ನು ನಿರ್ಣಯಿಸುವುದು ಯಾವ [illegible] ಕಷ್ಟವಾಗಿರುತ್ತದೆ. ಅದರಲ್ಲೂ ಎಷ್ಟೋ ಜಾತಿ ಪಂಗಡಗಳಿಂದ ತುಂಬಿದ ಈ ಖಂಡದಲ್ಲಿ ಇನ್ನೆಷ್ಟು ಕಷ್ಟವೆಂದು ಹೇಳಬೇಕಾಗಿಲ್ಲ. ಅದು ಕಠಿಣ ಸಮಸ್ಯೆಯೇ ಹೌದು. [illegible]ದರೆ ಪ್ರತ್ಯೇಕ ಪ್ರತಿನಿಧಿಗಳನ್ನು ಕಳುಹಿಸುವ ಹಕ್ಕು ಬೇಕೆನ್ನುವವರು ತಮ್ಮ ಕೋರಿಕೆಯನ್ನು ಅನಾವಶ್ಯವಾಗಿ [illegible]ಣ ಮಾಡುತ್ತಿದ್ದಾರೆಂತಲೂ, ಆಕೀ ಬಿಗಿ ಹಿಡಿದಿದ್ದಾರೆಂದೂ ನನ್ನ ಅಭಿಪ್ರಾಯ. ಕಡಿಮೆ ಸಂಖ್ಯೆ ಕೋಮಿನವರಿಗೆ ಇಷ್ಟೇ ಭದ್ರತೆಗಳನ್ನು ಏರ್ಪಡಿಸಿದರೂ ಅವರ ಹಕ್ಕುಗಳು [illegible]ವಾಗುತ್ತವೆಯೆಂತ ಹೇಳಲಿಕ್ಕಾಗುವುದಿಲ್ಲ. ಹೇಗೂ ಕಡಿಮೆ ಸಂಖ್ಯೆಯವರ ಕ್ಷೇಮವು ಬಹು ಸಂಖ್ಯೆಯ ಕೋಮಿನವರ ಸ್ನೇಹ, ಸಹಾನುಭೂತಿ ಮತ್ತು ತಮ್ಮ ಹಕ್ಕುಗಳಿಗೆ ಮರ್ಯಾದೆಯನ್ನು ಹೊಂದಿರುತ್ತದೆ. ಈ ದೇಶದಲ್ಲಿ ಅಷ್ಟೇ ಅದರೂ ಸಾಧಾರಣ ಜನಸಮುದಾಯದ ಸಹಾಯ ವಿನಹ ಯಾವ ಸರ್ಕಾರಕ್ಕೇ ಆದರೂ ಆಡಳಿತ ನಡೆಸುವುದು ಸಾಧ್ಯವಾಗಲಾರದು. ಈ ಭರತಖಂಡದ [illegible]ವನ್ನು ಇನ್ನು ಮೇಲೆ ನಡೆಸುವವರು ಈ ವಿಷಯವನ್ನು ಮರೆಯಲಾರರು.

ಕಳೆದ ವರ್ಷ ಇದ್ದ ಬಿಕ್ಕಟ್ಟಿನ ಕಾಲದಲ್ಲಿ ಈ ದೇಶದ ಜನರು ಸರ್ಕಾರಕ್ಕೂ, ಸರ್ಕಾರದ ಅಧಿಕಾರಿಗಳಿಗೂ ಈ ರೀತಿ ಒತ್ತಾಸೆ ಕೊಟ್ಟಿರುವುದಕ್ಕೆ ಸಂತೋಷ ಪಡುತ್ತೇನೆ. ಕಳೆದ 12 ತಿಂಗಳುಗಳಿಂದ ಹೆಚ್ಚಾಗಿ ಈ [illegible]ಕ್ಕಿದೆಯೆಂಬುದಕ್ಕೆ ಇನ್ನೂ ಸಂತೋಷ ಪಡುತ್ತೇನೆ. [illegible]ರಲ್ಲಿ ಬೇರೆ ಬೇರೆ ಕೋಮಿನವರೊಳಗೆ ಇರುವಷ್ಟು [illegible]

(೩ನೇ ಪುಟದಲ್ಲಿ ಮುಂದುವರಿದಿದೆ)

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿ.

ಅಂಕೋಲೆಯಲ್ಲಿ ಗೊತ್ತಾದ ನಿರ್ಣಯಗಳು.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿ ಹಾಗೂ ಅದರ ಕಾರ್ಯಕಾರಿ ಮಂಡಲದ ಸಭೆಗಳು ಮೊದಲೇ ಗೊತ್ತಾದಂತೆ ತಾ. 26 ಹಾಗೂ 27ನೇ ದಿನ ಅಂಕೋಲೆಯಲ್ಲಿ ಸೇರಿದ್ದವು. ಪ್ರಾಂ. ಕಾಂ. ಕಮಿಟಿಯ 25 ಸದಸ್ಯರು ಸಭೆಗೆ ಬಂದಿದ್ದರು ಕಾರ್ನಾಡ ಸದಾಶಿವರಾಯರು ಅಧ್ಯಕ್ಷರಾಗಿದ್ದರು. ಅಗ ಪ್ರಾಂತೀಕ ಕಾಂಗ್ರೆಸ್ ಕಮಿಟಿಯಲ್ಲಿ ಗೊತ್ತಾದ ಮುಖ್ಯ ನಿರ್ಣಯಗಳೇನಂದರೆ:—

(೧) ಶ್ರೀ. ಬಿ ವಿ ಶೇಷಗಿರಿರಾವ್ ಇವರು ರಾಜೀನಾಮೆ ಕೊಟ್ಟ ಕ ಪ್ರಾಂ. ಕಾಂ. ಕಮಿಟಿಯ ಅಡಿಟರರ ಸ್ಥಳಕ್ಕೆ ಗಾವಿಯ ಶ್ರೀ. ಹಣಮಂತರಾವ್ ವಣಸೂರ ಇವರ ನೇಮಿಸಬೇಕು.

(೨) ಕರ್ನಾಟಕದಲ್ಲಿ ಅಸ್ಪೃಶ್ಯತಾ ನಿವಾರಣೆಯ ಕಾರ್ಯವನ್ನು ಸಾಗಿಸುವುದಕ್ಕಾಗಿ ಕಾರ್ನಾಡ ಸದಾಶಿವರಾಯರು ಮುಖ್ಯಸ್ಥರನ್ನಾಗಿಯೂ, ಶ್ರೀ. ಜಿ. ಜಿ. ಕಾಖಾರ್ನಿಸ ಕಾರ್ಯದರ್ಶಿಗಳನ್ನಾಗಿಯೂ ನೇಮಿಸಬೇಕು. ಈ ಕಾರ್ಯದ ಬಗ್ಗೆ ಪ್ರವಾಸ, ಟಪಾಲು ವೆಚ್ಚ ಮುಂತಾದ್ದಕ್ಕಾಗಿ ಬರುವ ೩ ತಿಂಗಳ ವರೆಗೆ ತಿಂಗಳಿಗೆ ೨೫ ರೂ. ಮಂಜೂರು ಮಾಡಬೇಕು

(೩) ಕರ್ನಾಟಕದಲ್ಲಿ ಎಲ್ಲ ಸಮಾರಂಭಗಳಲ್ಲಿ ಇದು "ಕರ್ನಾಟಕ ಮಾತಾಕೀ ಜೈ" ಎಂಬ ಜಯಕಾರವು ಹಾಗೂ 'ಕರ್ನಾಟಕಾಂಬೆ ನೀ ಧನ್ಯೆ ಧನ್ಯೆ' ಎಂಬ ಪದವು ಅನ್ಯತ್ರ ಬಂದಿರುವುದರಿಂದಲೂ, ಕರ್ನಾಟಕವು ಪ್ರತ್ಯೇಕವಾದ ರಾಜಕೀಯ ಪ್ರಾಂತ್ಯವಾಗುವ ವರೆಗಾದರೂ ಇದು ಅತ್ಯಂತ ಅವಶ್ಯವಿರುವದೆಂದು ಕರ್ನಾಟಕವು ತಿಳಿದಿರುವುದರಿಂದಲೂ ಕಾಂಗ್ರೆಸ್ ಕಾರ್ಯಕಾರಿ ಮಂಡಲವು ಇದೇ ಕ್ರಮವು ನಡೆಯುವಂತೆ ಅಪ್ಪಣೆಯನ್ನೀಯಬೇಕಾಗಿ ಈ ಸಭೆಯು ಬೇಡಿಕೆ ಇದೆ

(೪) ಕಾಂಗ್ರೆಸ್ ಕಾರ್ಯಕಾರಿ ಮಂಡಳದವರು ಈ ವಿಷಯದಲ್ಲಿ ನಿರ್ಣಯವನ್ನು ಹೇಳುವ ವರೆಗೆ ಅವರು ಈ ವರೆಗೆ ನಿಶ್ಚಯಮಾಡಿದ ಕ್ರಮವನ್ನೇ ಕರ್ನಾಟಕದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅನುಸರಿಸಬೇಕೆಂದು ಈ ಸಭೆಯು ನಿಶ್ಚಯಿಸುತ್ತದೆ.

(೫) ಪ್ರಾಂತೀಕ ಸ್ವಯಂ ಸೇವಕರ ವಿಭಾಗದ ಮುಖ್ಯಸ್ಥರನ್ನಾಗಿ ಶ್ರೀ ೦೦. ರಾ. ದಿವಾಕರರನ್ನು ಈ ಸಭೆಯು ನೇಮಿಸುತ್ತದೆ ಈ ವಿಭಾಗದ ಕಚೇರಿಯ ಸ್ಥಳವನ್ನು ಗೊತ್ತುಮಾಡುವದು ಮತ್ತು ಪುರುಷ ಹಾಗೂ ಸ್ತ್ರೀ ಸ್ವಯಂ ಸಂಘಟನೆಗಾಗಿ ಕಾರ್ಯದರ್ಶಿಗಳನ್ನು ನೇಮಿಸುವುದು ಇವುಗಳನ್ನು ಶ್ರೀ ದಿವಾಕರರೇ ತಮಗೆ ತಮ್ಮ ತವಾಗಿ ಮಾಡಬೇಕು. ಈ ಕಾರ್ಯದ ವೆಚ್ಚಕ್ಕಾಗಿ ಸದ್ಯ ರೂ. ಮಂಜೂರು ಮಾಡಿದೆ ಬರುವ ಡಿಸೆಂಬರೊಳಗಾಗಿ ಕರ್ನಾಟಕದಲ್ಲಿ ೫೦೦ ಸ್ವಯಂ ಸೇವಕರೂ ಶಿಕ್ಷಣ ಕೊಟ್ಟು ಸಿದ್ಧಪಡಿಸಬೇಕು ಹಾಗೂ ವಿಶೇಷ ಸಂಗತಿಗಳನ್ನು ಶ್ರೀ ದಿವಾಕರರೇ ನಿರ್ಣಯಿಸುವರು

ಮಾದರಿಯ ತಾಲೂಕಿನ ಘಟನೆಯ ವಿಷಯ ನೇಮಿಸಲ್ಪಟ್ಟ ಉಪ ಮಂಡಲದ ವರದಿಯನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ, ಈ ಸಭೆಯು ನಿರ್ಣಯಿಸುವುದೇನಂದರೆ—ಅದೇ ಉಪ ಮಂಡಲದ ರ ತಮ್ಮ ವರದಿಯಂತೆ ಮುಂದಿನ ವಿಚಾರಣೆಯನ್ನಾದರೂ ಸಾಗಿಸಿ ಮುಂದೆ ಬರುವ ಕಾರ್ಯಕಾರೀ ಮಂಡಲದ ಸಭೆಗೆ ವರದಿಯನ್ನು ಸಾದರಪಡಿಸಬೇಕು. ಶ್ರೀ. ದ. ...ಕರರೂ ಈ ಉಪ ಮಂಡಲದ ಸಭಾಸದರಾಗಿ

ಸಿರಸಿ ಸಿದ್ದಾಪುರ ತಾಲೂಕಿನಲ್ಲಿಯ ತೋಟಗಳಿಗೆ ಕೊಳೆ ರೋಗ ಉಂಟಾದ್ದನ್ನು ಪರೀಕ್ಷಿಸಿ ಒಪ್ಪಿಸುವುದಕ್ಕೋಸುಗ ಶ್ರೀ. ನಾ. ಗು. ಜೋಶಿ ಕರಮಕರ, ಬಿಂದು ಮಾಧವ ಬುರ್ಲಿ ಹಾಗೂ ... ಮುತರನ್ನು ಈ ಸಭೆಯು ನೇಮಿಸುತ್ತದೆ.

ಮೈಸೂರು ಸಂಸ್ಥಾನದಲ್ಲಿಯ ದಬ್ಬಾಳಿಕೆಯನ್ನು ... ಸೂರು ಮಹಾರಾಜರು ಹಾಗೂ ದಿವಾನರೊಡನೆ ಚರ್ಚೆ ಮಾಡಿ ಪ್ರಜೆಗಳ ಮುಂದಿನ ಧೋರಣವ ... ಸುವ ಕುರಿತು ಶ್ರೀ. ಕಾರ್ನಾಡ ಸದಾಶಿವರಾ... ಕ. ರಂಗ ಅಯ್ಯಂಗಾರ ಇವರದೊಂದು ಉಪ ... ಈ ಸಭೆಯು ನೇಮಿಸುತ್ತದೆ.

ಪರದೇಶೀ ವಸ್ತ್ರಗಳ ಬಹಿಷ್ಕಾರದಷ್ಟೇ ಪರದೇಶೀ ... (Mercerised yarn) ಹಾಗೂ ಉಂಡೆ ರೇ... ಷ್ಕಾರವೂ ಅವಶ್ಯವಾಗಿದೆ ಎಂಬುದನ್ನು ಜಿಲ್ಲಾ ಕಮಿಟಿಗಳ ಗಮನಕ್ಕೆ ಈ ಸಭೆಯು ತರಬಯಸು... ಶೀ ನೇಯ್ಗೆಯ ಉದ್ಯೋಗದ ಹಿತದ ದೃಷ್ಟಿ... ಶದ ನೂಲಿನ ಆಯಾತವನ್ನು ನಿಲ್ಲಿಸಲು ... ಗಳು ಕೂಡಲೇ ಪ್ರಯತ್ನ ಪಡಬೇಕೆಂದೂ ಈ ಸ... ಮಾಡಿಕೊಳ್ಳುತ್ತದೆ.

(೯) ಗ್ರಾಮ ಸಂಘಟನೆಯ ಕಾರ್ಯಕ್ಕಾಗಿ ಬರುವ ೩ ತಿಂಗಳುಗಳ ಸಲುವಾಗಿ ೩೦೦ ರೂ. ಮಂಜೂರು ಮಾಡಲಾಗಿದೆ.

(೧೦) ಸಿರಸಿ ಸಿದ್ದಾಪುರ ತಾಲೂಕಿನಲ್ಲಿಯ ಹುಲ್ಲುಬನ್ನಿಯ ವಿಷಯದ ವಿಚಾರಣೆಯ ಬಗ್ಗೆ ಕಾರವಾರ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಈ ಮೊದಲೇ ಒಂದು ಉಪ ಮಂಡಲವನ್ನು ನೇಮಿಸಿದ್ದು, ಈ ಉಪ ಮಂಡಲವು ಆದಷ್ಟು ತೀವ್ರವೇ ತನ್ನ ವರದಿಯನ್ನು ಸಿದ್ಧಗೊಳಿಸಬೇಕೆಂದೂ, ಅದನ್ನು ಕ. ಪ್ರಾಂ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲದ ಮುಂದಿನ ಸಭೆಯ ಮುಂದೆ ಇಡಬೇಕೆಂದೂ ಈ ಸಭೆಯು ವಿಜ್ಞಾಪಿಸುತ್ತದೆ

(೧೧) ಶ್ರೀ ಹಣಮಂತ ನಾಯಕ ನಂದಗಡ ಹಾಗೂ ದಾವೂ ಅಣ್ಣಾ ಲೇಂಗಡೆ ಇವರ ಅಕಾಲಿಕ ನಿಧನದ ಬಗ್ಗೆ ದುಃಖ ಪ್ರದರ್ಶನವು ಮಾಡಲಾಯಿತು.

(೧೨) ಮಹಾರಾಷ್ಟ್ರ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಅಕ್ಕಲಕೋಟೆ ಸಂಸ್ಥಾನವನ್ನು ತಮ್ಮ ಹದ್ದಿನಲ್ಲಿ ಎಳೆದುಕೊಳ್ಳುವ ಪ್ರಯತ್ನ ನಡೆಸಿದ್ದರ ವಿರುದ್ಧ ಅ. ಭಾ. ಕಾಂ ಕಮಿಟಿಯ ನೆರವನ್ನು ಕೇಳಬೇಕೆಂದು ಗೊತ್ತಾಯಿತು

(೧೩) ಬಾಗಲಕೋಟದ ಸೆರೆ ಹಾವಳಿಯ ಕಷ್ಟ ನಿವಾರಣೆಯ ವಿಷಯದಲ್ಲಿ ಆಯಾ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಆ ಸಂಘರ್ಷದ ವಿನಂತಿಯನ್ನು ಎಲ್ಲ ಕಡೆಗೆ ಪ್ರಸಿದ್ಧ ಮಾಡಿ, ಅದಕ್ಕೆ ಸಹಾಯ ಮಾಡುವವರು ತಮ್ಮ ಸಹಾಯವನ್ನು ಕಟ್ಟಕಡೆಯಲ್ಲಿಯ ಮುಖ್ಯ ಕಚೇರಿಗೆ ಕಳುಹಿಸುವಂತೆ ವಿನಂತಿ ಮಾಡಿಕೊಳ್ಳಬೇಕೆಂದು ನಿರ್ಣಯವಾಯಿತು

ಪೊನ್ನಂಪೇಟೆನಾಡು ಸಹಕಾರ ಕೂಟದ

1931-32ನೇ ಸಂವತ್ಸರದ ವಾರ್ಷಿಕ ಜನರಲ್ ಮೀಟಿಂಗು.

ಈ ದಿನದ ಮೀಟಿಂಗಿನಲ್ಲಿ ಈ ಕೂಟಕ್ಕೆ ಸಂಯೋಜಿಸಲ್ಪಟ್ಟ 23 ಸಂಘಗಳ ಪೈಕಿ ಈ ಕೆಳಗಿನ ಸಂಘಗಳ ಡೆಲಿಗೇಟರುಗಳು. ಮತ್ತು ಸಂಯೋಜಿತ ಸಂಘಗಳ ಕೆಲ ಮೆಂಬರುಗಳು ಮತ್ತು ಸಹಕಾರಿ ಸಂಘಗಳ ಇನ್‌ಸ್ಪೆಕ್ಟರವರ , ಸೂಪರ್‌ವೈಜರವರು ಅಲ್ಲದೆ ಪೊನ್ನಂಪೇಟೆ ನಾಡಿನ ಅಸಿಸ್ಟೆಂಟ್ ಪಾರುಪತ್ಯಗಾರರೂ ಹಾಜರಿದ್ದರು.

1 ಮತ್ತೂರು, 2. ತಿತಿಮತಿ(?), 3. ಕೋಟೂರು, 4 ದೇವನೂರು, 5. ಬಿರುನಾಣಿ(?), 6. ಬೆಸಗೂರು, 7. ನಲ್ಲೂರು, 8. ಹುದೂರು, 9 ಹಳ್ಳಿಗಟ್ಟು, 10. ಕುಂದ 11. ಈಚೂರು ಬಿಸ್ಕಪ್ಪ, 12 ಕಂಗಳತ್ನಾಡು, 13 ಮಾಯಮುಡಿ, 14. ಬಾಳಲೆ, 15 ಅರ್ವತೊಕ್ಲು, 16 ಚಿಕ್ಕಮಂಡೂರು, 17 ಕೊಟ್ಟಗೇರಿ 18 ಈಚೂರು, 19 ಗೋಣಿಕೊಪ್ಪಲು ಟೌನ್ 20. ಪೊನ್ನಂಪೇಟೆ ಟೌನ್, 21. ಕೈಕೇರಿ 22. ಕುತ್ತುನಾಡು, ಮತ್ತು 23 ಮುಗುಟಗೇರಿ ಸಂಘಗಳ (ಸಂಘ ಬಂದಿಗ ಇಟ್ಟ ರಂತೆ) ಪ್ರತಿನಿಧಿಗಳು ಹಾಜರಿದ್ದರು.

1. ಈ ದಿನದ ಮೀಟಿಂಗಿಗೆ ಮೆ ಸಡಿಕೇರಿಯಂಡ ಮಂದಣ್ಣನವರನ್ನು ಅಧ್ಯಕ್ಷರಾಗಿ ಆರಿಸಲಾಯಿತು

2. ಅಧ್ಯಕ್ಷರ ಅನುಮತಿ ಮೇರೆ ಕೂಟದ 1930-31ರ ಆಡಿಟ್ ವರದಿಯನ್ನು ಯೂನಿಯನ್ ಸುಪರ್‌ವೈಜರು ಸಭೆಯ ಮುಂದೆ ಓದಿ ಹೇಳಿದರು ಆ ವೇಳೆ ಸದರಿ ರಿಪೋರ್ಟನ್ನು ಚರ್ಚೆಗೆ ಇಡಲಾಯಿತು..

(a) ಆಡಿಟ್ ರಿಪೋರ್ಟಿನಲ್ಲಿ ಕಾಣಿಸಿದ ವಿನಾರಿಜರ್ವ ಫಂಡ್(?) ಹಣ ವಸೂಲು ಮಾಡುವ ವಿಷಯ ಚರ್ಚೆ ನಡೆದು 1925ರಿಂದ 1929ನೇ ಇಸವಿಯ ವರೆಗೆ ಬಾಕಿ ಇರುವ ಪ್ರತಿನಿಧಿ ಹಣಗಳನ್ನು ವಸೂಲು ಮಾಡುವದಾಗಿಯೂ ಮತ್ತು 1929-31ನೇ ಸಂವತ್ಸರಗಳ ಬಾಕಿಯನ್ನು ಜಾಗ್ರತೆ ವಸೂಲು ಮಾಡಬೇಕಾಗಿಯೂ ತೀರ್ಮಾನಿಸಲಾಯಿತು.

(b) ರಿಜಿಸ್ಟ್ರಾರವರ ಟೀ ಪಾರ್ಟಿಗೆ ಸಂಯೋಜಿತ ಸಂಘಗಳ ಪರವಾಗಿ ಖರ್ಚು ಮಾಡಿದ ಬಾಬ್ತು ವಸೂಲಿಗೆ ಬಾಕಿಯಾಗಿರುವ ರೂ. 12-0-0 ಗಳನ್ನು ಸದರಿ ಸಂಘಗಳಿಂದ ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

3 ಈ ಕೂಟದ 1931-32ನೇ ಸಂವತ್ಸರದ ಒಂದು ವರ್ಷದ ಕಾರುಬಾರುಗಳನ್ನು ನಡಿಸಲಿಕ್ಕೆ ಈ ಕೆಳಗಿನ ಮೆಂಬರುಗಳನ್ನು ಈ ಕೂಟದ ಆಡಳಿತ ಮಂಡಳಿಯವರನ್ನಾಗಿ ಆರಿಸಲಾಯಿತು.

ಮೆ. ಗಳಾದ (1) ಚೆಪ್ಪುಡಿರ ಪೊನ್ನಪ್ಪನವರು, (2) ಕೊಂಗಂಡ ಗಣಪತಿಯವರು, (3) ಪುತ್ತಮನೆ ಮುದ್ದಯ್ಯನವರು, (4) ಅಂಮಣಮಾಡ ನಂಜಪ್ಪನವರು, (5) ಕೊಟ್ಟಂಗಡ ಬೋಪ್ಪಯ್ಯನವರು, (6) ಪುಚ್ಚಿಮಾಡ ಕಟ್ಟಪ್ಪನವರು 7. ಕಾಂಡೆರ ಬೆಳ್ಳಿಯ್ಯನವರು.

(2) ಈ ಮೇಲ್ಕಂಡ ಆಡಳಿತ ಮಂಡಳಿಯವರ ಪೈಕಿ ಮೆ. ಕೊಂಗಂಡ ಗಣಪತಿಯವರನ್ನು ಪ್ರೆಸಿಡೆಂಟರಾಗಿಯೂ, ಮತ್ತು ಅಮ್ಮಣಮಾಡ ಕಾರ್ಯಪ್ಪನವರನ್ನು ಕಾರ್ಯದರ್ಶಿಯವರಾಗಿ ಆರಿಸಲಾಯಿತು.

(3) ಮತ್ತು ಮೆ. ಕೊಂಗಂಡ ಗಣಪತಿಯವರನ್ನು ಸೆಂಟ್ರಲ್ ಬ್ಯಾಂಕ್ ಡೆಲಿಗೇಟರಾಗಿಯೂ ಆರಿಸಲಾಯಿತು.

4. ಯೂನಿಯನ್ನಿಗೆ ಒಬ್ಬ ಕ್ಲಾರ್ಕನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ಪಂಚಾಯಿತ ಮಂಡಳಿಯವರಿಗೆ ಕೊಡಲಾಯಿತು.

5. ಸುಪರ್‌ವಿಜನ್ ಫಂಡ್ ಹಣದಿಂದ 100/—ರೂಪಾಯಿಗಳ ಗ್ರಾಂಟನ್ನು ಯೂನಿಯನ್ನಿಗೆ ಕೊಡಿಸಿ ಕೊಡಬೇಕಾಗಿ ಮೆ. ಚೆಪ್ಪುಡಿರ ಎ. ಪೊನ್ನಪ್ಪನವರು ಸೂಚಿಸಿದರು. ಇದನ್ನು ಮೆ ಹೆಗ್ಗಡಂಗಳ(?) ಬೋಪ್ಪಯ್ಯನವರು ಅನುಮೋದಿಸಿದರು. ಆದ್ದರಿಂದ ಫೆಡರೇಶನ್‌ರವರನ್ನು ಈ ವಿಷಯ ಬರೆದು ಕೇಳಿಕೊಳ್ಳುವಂತೆ ಬಹುಮತದಿಂದ ತೀರ್ಮಾನಿಸಲಾಯಿತು.

6. ಇನ್‌ಸ್ಪೆಕ್ಟರ್ ಬೋರ್ಡ್ ರಸ್ತೆಗಳ ರಿಪೇರಿಯನ್ನು ಸಹಕಾರಿ ಸಂಘಗಳು ಒಪ್ಪಿಕೊಳ್ಳುವಂತೆಯೂ, ಸದರಿ ವಿಷಯಕ್ಕೆ ಯೂನಿಯನ್ ಪ್ರೆಸಿಡೆಂಟರವರು ಸರ್ಕಾರಕ್ಕೆ ಜವಾಬುದಾರರಾಗಿರುವಂತೆಯೂ, ಎಲ್ಲಾ ಸಂಘಗಳ ಪ್ರೆಸಿಡೆಂಟರುಗಳು ಯೂನಿಯನ್ ಪ್ರೆಸಿಡೆಂಟರಿಗೆ ಜವಾಬ್ದಾರರಾಗಿರಬೇಕೆಂದೂ ತೀರ್ಮಾನಿಸಲಾಯಿತು.

7 ಸಂಘಗಳ ಸಂಖ್ಯೆಗಳನ್ನು ಕಮ್ಮಿ ಮಾಡಿ ಸಾಧ್ಯವಾಗುವಲ್ಲಿ ದೊಡ್ಡ ಸಂಘಗಳನ್ನಾಗಿ ಏರ್ಪಡಿಸುವದರ ವಿಷಯ ಚರ್ಚೆಗೆ ಬಂದು, ರಿಜಿಸ್ಟ್ರಾರವರಿಂದಾಗಲೀ, ಫೆಡರೇಶನವರಿಂದಾಗಲೀ ಸದರಿ ವಿಷಯ ಸೂಚನೆ ಕೊಡದ್ದರಿಂದ ಸದ್ಯಕ್ಕೆ ಈ ವಿಷಯವನ್ನು ಬಾಕಿ ಮಾಡಲಾಯಿತು. ಅಲ್ಲದೆ ಸದರಿ ವಿಷಯವನ್ನು ಲೋಕಲ್ ಕಾನ್‌ಫರೆನ್ಸಿನಲ್ಲಿ ಇತ್ಯರ್ಥಗೊಳಿಸುವಂತೆ ಬಹುಮತದಿಂದ ತೀರ್ಮಾನಿಸಲಾಯಿತು.

8 ಈ ದಿವಸದ ಮೀಟಿಂಗಿಗೆ ರಿಜಿಸ್ಟ್ರಾರವರಿಗೂ ಮತ್ತು ಫೆಡರೇಶನವರಿಗೂ ಹಾಜರಾಗಲು ತಿಳಿಸಿಯೂ ಯಾವುದೆಂದು ಜವಾಬು ಕಳುಹಿಸದೆ ಇದ್ದದರಿಂದ ಸಭೆಯು ವಿಷಾದಿಸುತ್ತದೆ

9. ಆಯಾಯ ಯೂನಿಯನ್‌ಗಳ ಪ್ರೆಸಿಡೆಂಟರುಗಳನ್ನು ಬ್ಯಾಂಕಿನ ಡೈರೆಕ್ಟರುಗಳಾಗಿ ಮುನಾಯಿಸದೆ ತೆಗೆದುಕೊಳ್ಳಬೇಕಾಗಿಯೂ, ಈ ವಿಷಯವನ್ನು ಬ್ಯಾಂಕಿನ ಜನರಲ್ ಮೀಟಿಂಗಿಗೆ ಒಂದು ಠರಾವನ್ನಾಗಿ ಕಳುಹಿಸಬೇಕಾಗಿಯೂ ತೀರ್ಮಾನಿಸಲಾಯಿತು.

10 ಈ ಕೂಟದ ಈ ಮೊದಲು ಪ್ರೆಸಿಡೆಂಟರಾಗಿದ್ದ ಮೆ. ಸಿ ಎ ಪೊನ್ನಪ್ಪನವರು ಬಹಳ ಒಳ್ಳೇ ಕೆಲಸ ಮಾಡಿರುವುದರಿಂದ ಅವರ ಒಳ್ಳೇ ಕೆಲಸವನ್ನು ರಿಕಾರ್ಡು ಮಾಡಲು ಸರ್ವಸಮ್ಮತದಿಂದ ತೀರ್ಮಾನಿಸಲಾಯಿತು.

11. ಕೂಟದ ಆಫೀಸು ದಿನವನ್ನು ಪ್ರತಿ ಸೋಮವಾರ ದಿನ ಪೂರ್ವಾಹ್ನ 11 ಗಂಟೆ ಸಮಯಕ್ಕೆ ಸರಿಯಾಗಿ ಇಟ್ಟುಕೊಳ್ಳಬೇಕಾಗಿಯೂ, ಸದರಿ ದಿನಗಳಲ್ಲಿ ಮೀಟಿಂಗುಗಳನ್ನು ಕೂಡ ಏರ್ಪಡಿಸಿಕೊಳ್ಳುವಂತೆಯೂ ತೀರ್ಮಾನಿಸಲಾಯಿತು.

12. ಈ ದಿನ ಬಂದ ಡೆಲಿಗೇಟುಗಳು ಆಗೀಕರಿಸುವ(?) ಕನ್ನಡ ಪ್ರಿಂಟಾದ ಬೈಲಾವನ್ನು ರಿಜಿಸ್ಟರ್ ಮಾಡಿಸಿಕೊಳ್ಳುವಂತೆ ಸರ್ವಸಮ್ಮತದಿಂದ ತೀರ್ಮಾನಿಸಲಾಯಿತು.

ಅಧ್ಯಕ್ಷರು ಸಂಘಗಳನ್ನು ಕುರಿತು ಉಪನ್ಯಾಸ ಮಾಡಿದನಂತರ ಮೀಟಿಂಗನ್ನು ಬರಖಾಸ್ತು ಮಾಡಲಾಯಿತು.

ಯನ್. ಕೆ ಮಂದಣ್ಣ,
(ಅಧ್ಯಕ್ಷ)

ಎಲ್ಲ ಕಾಂಗ್ರೆಸ್ ಕಮಿಟಿಗಳಿಗೆ

ಹಾಗೂ ಕಾರ್ಯಕರ್ತರಿಗೆ:—

ಅ ಭಾ. ಕಾಂ ಕಮಿಟಿಯ ಕಾರ್ಯದರ್ಶಿಗಳಾದ ಪಂಡಿತ ಜವಾಹಿರ್‌ಲಾಲ್ ನೆಹರೂರವರು ತಿಳಿಸುವುದೇನಂದರೆ:—

ಧ್ವಜ ವಂದನೆ.

ಇದು ವರೆಗೆ ನಡೆದಂತೆ ಇನ್ನು ಮುಂದೆಯೂ ಪ್ರತಿ (ಇಂಗ್ಲಿಷ್) ತಿಂಗಳ ಕಡೆಯ ರವಿವಾರ ದಿನ ಬೆಳಿಗ್ಗೆ ರಾಷ್ಟ್ರಧ್ವಜ ವಂದನೆಯು ನಡೆಯತಕ್ಕದ್ದು. ಅದರ ವೇಳೆಯನ್ನು ಮಾತ್ರ, ಈಗ ೭ ಗಂಟೆಯೆಂದು ಬದಲು ಮಾಡಿದೆ. ಸ್ಥಾನಿಕ ಅಡಚಣೆಯ ಮೂಲಕ ೭ ಗಂಟೆಗೆ ಅನುಕೂಲವಾಗದಿದ್ದರೆ ೮ ಗಂಟೆಗೆ ಧ್ವಜ ವಂದನೆಯಾಗಬಹುದು. ಧ್ವಜ ವಂದನೆಯ ಸಮಯದಲ್ಲಿ ನಡೆಯಬೇಕಾದ ಕ್ರಮವು ಹಿಂದೂಸ್ಥಾನೀ ಸೇವಾದಲದವರು ತಮ್ಮ ಸ್ವಯಂ ಸೇವಕರಿಗಾಗಿ ಹಾಕಿಕೊಟ್ಟಂತೆ ಇರಬೇಕು ಸೇವಾದಲದ ಮುಖ್ಯ ಕಚೇರಿಯವರು ಈ ಕ್ರಮವನ್ನು ಪ್ರಸಿದ್ಧಪಡಿಸುವರು. ಈ ವಿಷಯದಲ್ಲಿ ನೀವು ಅವರಿಗೆ ಬರೆಯಲೂ ಬಹುದು.

ಸ್ವಯಂ ಸೇವಕರೂ, ಜಾತಿ ಸಂಘಗಳೂ.

ಕಾಂಗ್ರೆಸ್ ಸ್ವಯಂ ಸೇವಕರು ಜಾತಿ ಸಂಘಗಳನ್ನು ಸೇರಬಾರದಾಗಿ ಅಪ್ಪಣೆಯಿತ್ತ ವಿಷಯದಲ್ಲಿ ಕೆಲವರಿಗೆ ಸಂದೇಹ ಉಂಟಾದ್ದರಿಂದ ಮುಂದಿನ ವಿವರವನ್ನು ಪ್ರಸಿದ್ಧಪಡಿಸಲಾಗಿದೆ:—ಧರ್ಮದ ಆಧಾರದ ಮೇಲಿನ ರಾಜಕೀಯ ಅಥವಾ ಆರ್ಥಿಕ ಅಧಿಕಾರಗಳನ್ನು ಬೇಡುವ ಸಂಘಗಳು ಜಾತಿ ಸಂಘಗಳೆಂದು ತಿಳಿಯಬೇಕು. ಸ್ವಯಂ ಸೇವಕರು ಇಂಥ ಸಂಘಗಳ ಸಭಾಸದರಾಗಕೂಡದು. ಅದರಂತೆ ಕಾಂಗ್ರೆಸ್ ವಿರುದ್ಧವಾದ ಧ್ಯೇಯ ಅಥವಾ ಕಾರ್ಯಕ್ರಮಗಳುಳ್ಳ ರಾಜಕೀಯ ಸಂಸ್ಥೆಗಳಿಗೂ ಸ್ವಯಂ ಸೇವಕರು ಸಭಾಸದರಾಗಕೂಡದು.

ಪ್ರಾಂತೀಯ ಸ್ವಯಂ ಸೇವಕ ಮಂಡಲದವರು ಈ ವಿಷಯದ ಲ್ಲಿ ನಿರ್ಣಯವನ್ನು ಹೇಳುವರು. ಸಂದೇಹ ಬಂದಾಗ ಕಾಂಗ್ರೆಸ್ ಸ್ವಯಂ ಸೇವಕ ವಿಭಾಗದ ಮುಖ್ಯಸ್ಥರನ್ನು ಕೇಳಬಹುದು.

ಸ್ವಯಂ ಸೇವಕಿಯರ ವಿಭಾಗ.

ಕಾಂಗ್ರೆಸ್ ಸ್ವಯಂ ಸೇವಕಿಯರ ವಿಭಾಗಕ್ಕೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರನ್ನು ಮುಖ್ಯಸ್ಥರನ್ನಾಗಿ ನೇಮಿಸಿದೆ. ಅವರಿಗೆ ಬರೆಯಬೇಕಾದರೆ ಮುಂಬಯಿಯ ಮುಖ್ಯ ಕಚೇರಿಗೆ ಬರೆದರೆ ಸಾಕು. ಅವರ ಹೆಸರಿಗೇ ಬರೆಯಬೇಕಾದರೆ ೨೦, ವೆಲ್ಲಸ್ಲಿ ರೋಡ್, ಪುಣೆ. (Camp) ಎಂದು ಬರೆಯಬಹುದು.

ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಾಲಯ, ಧಾರವಾಡ. } ರಾ. ರಾ. ಹುಕ್ಕೇರಿಕರ, (ಪ್ರಧಾನ ಕಾರ್ಯದರ್ಶಿ.)

ಚೀಫ್ ಕಮಿಶನರ ಭಾಷಣ.

(೭ನೇ ಪುಟದಿಂದ ಮುಂದುವರಿದದ್ದು.)

ಸ್ಥಿತಿಯು ಹಿಂದೂಸ್ಥಾನದ ಬೇರೆ ಯಾವ ಪ್ರಾಂತ್ಯದಲ್ಲೂ ಇಲ್ಲವೆಂತ ನಾನು ತಿಳಿಸಬಹುದು. ಈ ದೇಶದ ಸ್ಥಿತಿಯೇ ಇದಕ್ಕೆ ಕಾರಣವೆಂತ ನಾನು ನಂಬುತ್ತೇನೆ. ನಮ್ಮ ಸುತ್ತಲೂ ತುಂಬಾ ಸೌಂದರ್ಯವಿದೆ. ಇಂಥಾ ಸೌಂದರ್ಯಕ್ಕೆ ವಿರೋಧವಾದ ಮನೋಭಾವಗಳು ಬಹುಕಾಲ ಇರಲಾರವು.

ನಾವು ಕಳೆದ ಸಾಲ ಕೂಡಿದಂದಿನಿಂದ ಆರ್ಥಿಕ ತುಫಾನಗಳು ಎದ್ದಿವೆ. ಶಾಂತಿಯುಕ್ತವಾದ ಹವೆಯು ಇನ್ನೂ ತೋರ ಬರುವುದಿಲ್ಲ. ಆದರೆ ಬಿರುಗಾಳಿಯುಕ್ತವಾದ ರಾತ್ರಿಯು ತೀರುತ್ತಾ ಬರುತ್ತಿದೆಯೆಂಬ ಕುರುಹುಗಳಿವೆ. ಖಾಸಗಿ ವಾಣಿಯೂ ಕಳೆದುಹೋಗುತ್ತದೆಯೆಂತ ಹೇಳಬಹುದು. ಮಿಸಿ... ನಮ್ಮನ್ನು ಎಂದೂ ಬಿಟ್ಟು ಹಾಕಿದುದಿಲ್ಲ.

ಪ್ರತ್ಯೇಕ ವಿಷಯಗಳನ್ನು ಕುರಿತು ಹೇಳುವುದಾದರೆ, ರಿಟ್ರೆಂಚ್‌ಮೆಂಟ್ ಕಮಿಟಿಯವರು ಕೆಲವು ತಿಂಗಳುಗಳಿಂದ ನಮ್ಮ ಅತೀ ಅಪ್ರಿಯವಾದ ಕೆಲಸವನ್ನು ತೃಪ್ತಿಕರವಾಗಿ ನಮಗಾಗಿ ಮಾಡಿದುದಕ್ಕಾಗಿ ಆ ಕಮಿಟಿಯವರಿಗೆ ನಾವೆಲ್ಲರೂ ಕೃತಜ್ಞರಾಗಿದ್ದೇವೆ. ಅವರ ಗುರುತ್ವ ಫೈನಾನ್ಸ ಕಮಿಟಿಯ ಸಹಾಯದಿಂದ ಮುಂದಿನ ವರ್ಷದ ಬಜೆಟ್ಟನ್ನು ಆದಾಯ ವೆಚ್ಚ ಸರಿ ತೂಕವಾಗಿರುವಂತೆ ಮಾಡಬಹುದೆಂತ ನಂಬುತ್ತೇನೆ.

ಕಳೆದ ವರ್ಷ ನಾ... ನ ಮಾಡಿದಂತೆ ಚೀಫ್ ಕಮಿಶನರಿಗೆ ಇದ್ದ ... ಅಧಿಕಾರವನ್ನು ... ನಡೆಸುತ್ತಿದ್ದಾರೆಂಬುದು. ನಿಮಗೆ ತಿಳಿದಿದೆ. ... ಈ ವಿಚಾರವನ್ನು ಇದೇ ವರ್ಷಕ್ಕೆ ... ಈ ವಿಚಾರವನ್ನು ... ತೆಗೆದುಕೊಳ್ಳಲಾಗಿದೆ.

ನಮ್ಮ ... ಅಭಿವೃದ್ಧಿ ಪಡಿಸುತ್ತೇವೆಂತಲೂ, ... ಕೈಕೊಳ್ಳುತ್ತೇವೆಂತಲೂ ಕಳೆದ ವರ್ಷ ವಾಗ್ದಾನ ಮಾಡಿದ್ದೆ. ಮೊದಲನೇ ವಾಗ್ದಾನವು ನಡೆಸಲಾಗಿದೆಯೆಂತ ನೀವು ಒಪ್ಪುವಿರಿ ಎಂತ ನಂಬುತ್ತೇನೆ. ಈಗ ನಮ್ಮ ದೇಶದ ಎಲ್ಲಾ ರಸ್ತೆಗಳು ಇರುವ ಒಳ್ಳೇ ಸ್ಥಿತಿ ... ನಮ್ಮ ಡಿ. ಪಿ. ಡಬ್ಲ್ಯು. ಇಂಜಿನಿಯರರಿಗೆ ಧನ್ಯವಾದ ಕೊಡುತ್ತೇನೆಂತ ನಂಬುತ್ತೇನೆ. ಅಂಥವರು ರಿಪೇರಿಗೆ ಬೇಕಾಗುವಷ್ಟು ಬರ ಮಾಡಿಕೊಳ್ಳಲಾಗಿದೆ. ಅವನ್ನು ಕಾಪಾಡು... ಕರ ... ಬೇಕಾಗುತ್ತದೆ.

ಮಲೇರಿಯವನ್ನು ನಿವಾರಿಸಲು ಪ್ರಯತ್ನವು ನಡೆಯುತ್ತಲೇ ಇದೆ. ಈ ವರೆಗೆ ಆದ ಪ್ರಯತ್ನವು ತೃಪ್ತಿಕರವಾಗಿದೆ. ಇನ್ನೂ ತುಂಬಾ ಮಾಡಲಿಕ್ಕಿದೆ. ಸರಕಾರದ ಪ್ರಯತ್ನಕ್ಕೆ ಸಹಾಯಕರವಾದ ಕೆಲಸಗಳನ್ನು ಪ್ಲಾಂಟರುಗಳೂ, ಇತರ ಮಹನೀಯರೂ ತಮ್ಮಿಂದ ಸಾಧ್ಯವಿದ್ದಷ್ಟು ಮಾಡುವರೆಂತ ನಂಬುತ್ತೇನೆ. ಸರಕಾರವೇ ಎಲ್ಲಾ ಕೆಲಸ ಮಾಡಬೇಕೆಂತಾದರೆ ಹಣದ ಅಭಾವದಿಂದ ಜಯಪ್ರದವಾಗಿ ಕೆಲಸವಾಗಲಾರದು.

ದುಂಡುಮೇಜು ಪರಿಷತ್ತು.

ಇಂಗ್ಲೆಂಡಿನ ಪಾರ್ಲಿಮೆಂಟನ್ನು ಮುಕ್ತಾಯಗೊಳಿಸಿ ಹೊಸ ಚುನಾವಣೆಯ ಏರ್ಪಾಡು ನಡೆದಿದೆ. ಆದರೂ ದುಂಡು ಮೇಜು ಪರಿಷತ್ತಿನ ಕಾರ್ಯಗಳು ನಿರಾತಂಕವಾಗಿ ನಡೆಯುವ ಏರ್ಪಾಡು ಮಾಡಿದೆಯೆಂದಾಗಿ ಸ್ಟೇಟ್ ಸೆಕ್ರೆಟರಿಯವರು ತಿಳಿಸಿದರು.

ತಾ ೭ರ ವರೆಗೆ ಕಡಿಮೆ ಸಂಖ್ಯೆ ಕೋಮಿನವರ ಹಕ್ಕುಗಳ ಭದ್ರತೆ ವಿಷಯವು ಒಂದು ಖಾಸ್ಗಿ ಕಮಿಟಿಯಲ್ಲಿ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ಚರ್ಚಿಸಲ್ಪಟ್ಟಿತು. ತಾ. ೭ನೇ ರಾತ್ರಿಗೆ ಈ ಕಮಿಟಿಯ ಕೆಲಸವು ಪ್ರಯೋಜನಕಾರಿಯಾಗದೆ ಮುಕ್ತಾಯವಾಯಿತು.

ತಾ. ೮ರಲ್ಲಿ ನಡೆದ ಮೈನಾರಿಟೀಸ್ ಕಮಿಟಿಯಲ್ಲಿ ಮಹಾತ್ಮ ಗಾಂಧಿಯವರು ಈ ಸಂಬಂಧವಾಗಿ ಮಾಡಿದ ಭಾಷಣದ ಸಾರಾಂಶ—

"ನನ್ನಿಂದ ಸಾಧ್ಯವಿದ್ದಷ್ಟು ಈ ಸಮಸ್ಯೆಯ ಬಿಡುಗಡೆಗೆ ನಾನು ಪ್ರಯತ್ನಿಸಿದೆ. ಆದರೆ ಈ ಅಪಜಯವು ನಮಗೆ ನಾಚಿಕೆಕರವೆಂತ ಹೇಳಿದರೆ ಪೂರ್ತಿ ಹೇಳಿದಂತಾಗಲಿಲ್ಲ. ಇಲ್ಲಿಗೆ ಪ್ರತಿನಿಧಿಗಳಾಗಿ ಬಂದವರು ಸರಕಾರದಿಂದ ಆರಿಸಲ್ಪಟ್ಟವರೇ ಹೊರತು ಚುನಾಯಿತರಲ್ಲ. ಸಮಸ್ಯೆಯ ಬಿಡುಗಡೆಯು ಸಾಧ್ಯವಾಗಲು ಇರಬೇಕಾದವರು ಇಲ್ಲಿ ಇಲ್ಲ.

ಅಲ್ಲದೆ ಈ ಕೋಮುವಾರು ಸಮಸ್ಯೆಯ ತೀರ್ಮಾನಕ್ಕೆ ಇದು ಸಮಯವಲ್ಲ. ನಮಗೆ ಏನು ಸಿಕ್ಕುತ್ತದೆಯೆಂಬುದನ್ನು ತಿಳಿಯುವ ಮುಂಚೆ ಈ ವಿಷಯವು ಚರ್ಚಿಸಬಾರದಿತ್ತು. ನಮಗೆ ಸಿಕ್ಕುವಂಥಾದ್ದು ಏನೆಂತ ತಿಳಿದರೆ, ಅದನ್ನು ಒಪ್ಪಿಕೊಳ್ಳುವುದು ಅರ್ಥವೆಂತ ತೋರಿದರೆ ಈ ಕೋಮುವಾರು ಜಗಳವಾಡಿ ಸಿಕ್ಕುವಂಥಾದ್ದನ್ನು ಕಳೆದುಕೊಳ್ಳಲಿಕ್ಕಿಲ್ಲ. ನಮ್ಮ ಕೋಮುವಾರು ಜಗಳಗಳು ಬಲವಾಗಲು ಅಥವಾ ಪ್ರಾರಂಭವಾಗಲು ಪರಕೀಯರ ಆಳ್ವಿಕೆಯೇ ಕಾರಣವಾಗಿದೆ. ಆದ್ದರಿಂದ ಸ್ವಾತಂತ್ರ್ಯದ ಬಿಸಿಲಿನಲ್ಲೇ ಕೋಮುವಾರು ಜಗಳದ ಮಂಜುಗಡ್ಡೆಯ ಬೆಟ್ಟವಾದರೂ ಕರಗಿ ಹೋದೀತು. ಆದ್ದರಿಂದ ಮುಂದಾಗಿ ಸ್ವರಾಜ್ಯ ರಚನೆಯನ್ನು ತಯಾರಿಸುವ ಪ್ರಯತ್ನ ನಡೆಯಬೇಕು. ಆ ಹೊಸ ರಚನೆಯಲ್ಲೇ, ಈ ಸಮಸ್ಯೆಯನ್ನು ನ್ಯಾಯ ತೀರ್ಪಿನ ಅಧಿಕಾರಿಗಳು ತೀರಿಸಬೇಕೆಂತ ನಮೂದಿಸಬಹುದು. ಜನ ಸಮುದಾಯದ ಕಾಂಗ್ರೆಸು ಹೆಚ್ಚು ಕಡಿಮೆಯಲ್ಲಿ ತೀರಿಸಲು ತಯಾರಿದೆ. ಅಸ್ಪೃಶ್ಯರನ್ನು ತುಚ್ಛೀಕರಿಸುವವರಿಗೆ ಅತಿ ಕಠಿಣ ಶಿಕ್ಷೆ ಕೊಡುವಂಥ ಕಾನೂನು ಮಾಡಲು ಸಹ ನಾನು ತಯಾರಿದ್ದೇನೆ. ಆದರೆ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯಿಂದ ಸಹಾಯವಾಗಲಾರದೆಂತ ಹೇಳುತ್ತೇನೆ."

ಅದೇ ಕಮಿಟಿಯಲ್ಲಿ ಸರ್. ಯಂ. ಶಫಿಯವರು ಮಾಡಿದ ಭಾಷಣದ ಸಾರಾಂಶ—

ಗಾಂಧಿಯವರು ಈ ಸಮಸ್ಯೆಯನ್ನು ಬಿಡಿಸಲು ಸರ್ವ ಪ್ರಯತ್ನ ಮಾಡಿದರೆಂತ ಮುಸಲ್ಮಾನರ ಪರವಾಗಿ ನಾನು ಒಪ್ಪುತ್ತೇನೆ. ಆದರೆ ಇಲ್ಲಿಗೆ ಬಂದ ಪ್ರತಿನಿಧಿಗಳು ಚುನಾಯಿತರಲ್ಲವೆಂಬುವುದನ್ನು ನಾನು ಒಪ್ಪುವುದಿಲ್ಲ. ಮುಸಲ್ಮಾನ್ ಮೆಂಬರುಗಳೆಲ್ಲಾ ಮುಸ್ಲಿಂ ಸಂಸ್ಥೆಗಳ ಪ್ರತಿನಿಧಿಗಳಾಗಿದ್ದಾರೆ. ಈಗ ನಡಿಸಿದ ಪ್ರಯತ್ನಗಳು ನಿಷ್ಫಲವಾದದ್ದಕ್ಕೆ ನಾನು ವ್ಯಸನ ಪಡುತ್ತೇನೆ. ಕೋಮುವಾರು ಪ್ರಶ್ನೆಯನ್ನು ತೀರಿಸಿದ ವಿನಹ ರಾಜಕೀಯ ರಚನೆಯನ್ನು ನಿಶ್ಚೈಸಲಿಕ್ಕೆ ಸಾಧ್ಯವೇ ಇಲ್ಲ. ಬೇರೆ ಪಂಚಾಯಿತರ ತೀರ್ಮಾನಕ್ಕೆ ಮುಸಲ್ಮಾನರು ಒಪ್ಪುವುದೇ ಇಲ್ಲ. ಬ್ರಿಟಿಷ್ ಸರಕಾರವೇ ಇದನ್ನು ತೀರಿಸಲು ಅರ್ಹತೆಯುಳ್ಳದ್ದಾಗಿದೆ.

ಸರ್ ಪಾತ್ರೋರವರು ಮಧ್ಯವರ್ತಿ ಸರಕಾರದ ರಚನೆಯನ್ನು ಹಿಂದಿನಿಂದ ನಿಶ್ಚೈಸಿಕೊಂಡು ಪ್ರಾಂತೀಯ ಸ್ವಾತಂತ್ರ್ಯ ಕೊಟ್ಟು ಮುಂದರಿಸಬಹುದೆಂತ ಸೂಚಿಸಿದರು.

ಅಸ್ಪೃಶ್ಯರ ಪರ ಮೆಂಬರಾದ ಡಾಕ್ಟರ್ ಅಂಬೇಡ್ಕರರು ಹೇಳಿದ್ದೇನೆಂದರೆ—

'ಮನಸು ನೋಯುವಂಥ ಮಾತುಗಳನ್ನಾಡಬಾರದೆಂತ ನಿನ್ನೆ ನಮ್ಮೊಳಗೆ ಒಪ್ಪಂದವಿದ್ದರೂ ಗಾಂಧೀಜಿಯವರು ಇದಕ್ಕೆ ವಿರೋಧವಾಗಿ ವರ್ತಿಸಿದರು. ನಾನು ಮತ್ತು ನನ್ನಂಥವರಿಗಿಂತ ನಮ್ಮ ಕೋಮಿನ ಹವಾಲುಗಳನ್ನು ಹೇಳಲು ತನಗೆ ಅರ್ಹತೆಯುಂಟೆಂತ ಗಾಂಧಿಯವರು ಹೇಳಿದರು. ಇದು ಬೇಜವಾಬ್ದಾರಿ ಮನುಷ್ಯರು ಹೇಳಿಕೊಳ್ಳುವುದಾಗಿದೆ. ಈ ಪ್ರಶ್ನೆಯನ್ನು ಬ್ರಿಟಿಷ್ ಸರಕಾರವೇ ತೀರಿಸಬೇಕಾಗಿದೆ. ಬೇರೆಯವರ ಪಂಚಾಯಿತಿಗೆ ಬಿಡಲು ನಾನು ಒಪ್ಪುವುದಿಲ್ಲ. ಈ ಪ್ರಶ್ನೆಯು ತೀರ್ಮಾನವಾಗುವ ವರೆಗೆ ಸ್ವರಾಜ್ಯ ರಚನೆಯು ಮಾತೇ ಎತ್ತಕೂಡದು. ಬ್ರಿಟಿಷರಿಂದ ಅಧಿಕಾರ ದೇಶೀಯರಿಗೆ ಬರಬೇಕೆಂತ ನನ್ನ ಜಾತಿಯವರು ಎಂದೂ ಕೇಳಲಿಲ್ಲ. ಬರುವುದಾದರೆ ಎಲ್ಲರಿಗೂ ಬರಬೇಕೆಂತ ಮಾತ್ರ ಹೇಳುವುದಾಗಿದೆ.

ಇನ್ನೂ ಒಬ್ಬರಿಬ್ಬರ ಭಾಷಣಗಳಾದನಂತರ ಮಂತ್ರಿಯವರಾದ ಮೆಕ್ಡೋನಾಲ್ಡರು ಅಧ್ಯಕ್ಷ ಸ್ಥಾನದಿಂದ ಹೇಳಿದ್ದೇನೆಂದರೆ—

"ಈ ಪ್ರಶ್ನೆಯು ಜಯಪ್ರದವಾಗಿ ತೀರಲಿಲ್ಲವೆಂಬುದಕ್ಕೆ ನಾನು ವ್ಯಸನಪಡುತ್ತೇನೆ. ನಿಮ್ಮ ಆತ್ಮ ಗೌರವಕ್ಕಾಗಿ ಇದನ್ನು ನೀವೇ ತೀರಿಸಿಕೊಳ್ಳಬೇಕೆಂತ ನಾವು ಮೊದಲಿನಿಂದಲೇ ಹೇಳುತ್ತಲಿದ್ದೇವೆ. ನಾವು ತೀರಿಸಿದರೆ ಅದಕ್ಕೆ ವಿರೋಧವಾಗುವುದಾದರೆಂದು ತಂದ ಕಾನೂನು ಭಂಗವನ್ನು ಮಹಾತ್ಮ ಗಾಂಧಿಯವರು ಮಾಡಿಯಾರು.

ಹಿಂದೂಸ್ಥಾನದಲ್ಲಿ ಈ ಕೋಮುವಾರು ಸಮಸ್ಯೆ ಇದ್ದೇ ಇದೆ. ಇದನ್ನು ತೀರಿಸಿಕೊಳ್ಳಲು ಆಗದಿದ್ದಕ್ಕೆ ನಿಮ್ಮನ್ನು ಚುನಾಯಿಸಿದ್ದು ಸರಿಯಲ್ಲವೆಂತ ಹೇಳಬೇಡಿ. ಪ್ರತಿನಿಧಿಗಳಾಗಿರಿ. ಇದು ಕಠಿಣ ಪ್ರಶ್ನೆ, ತೀರಿಸಲಾಗಲಿಲ್ಲವೆನ್ನಿ. ಸಮುದಾಯದ ಚಳವಳ ನಡಿಸಿದ ಇತರರನ್ನು ಆರಿಸಿದರೂ ಇದೇ ಪರಿಣಾಮ ಇದ್ದೇ ಇರುತಿತ್ತು. ಈ ಸಮಸ್ಯೆಯನ್ನು ಜಯಪ್ರದವಾಗಿ ಬಿಡಿಸಿಕೊಳ್ಳಲು ಪುನಃ ಪುನಃ ಪ್ರಯತ್ನಿಸಿರಿ. ಈ ಸಮಸ್ಯೆಯನ್ನು ಬಿಡಿಸದೆ ರಾಜಕೀಯ ರಚನೆಯನ್ನು ಮಾಡಲು ನಿಮಗೂ ಸಹ ಸಾಧ್ಯವಾಗಲಾರದು.

ನೀವು ಬಿಟ್ಟರೂ ಈ ಪರಿಷತ್ತನ್ನು ಜಯಪ್ರದ ಮಾಡಬೇಕೆಂತ ನಮ್ಮ ಇಚ್ಛೆ. ನಿಮ್ಮ ಆಲೋಚನೆ ಕೇಳಿದನಂತರ ನಿಮಗೆ ಯಾವ ತರದ ಆಡಳಿತ ರಚನೆಯನ್ನು ಕೊಡುವುದೆಂತ ನಿಶ್ಚೈಸುತ್ತೇವೆಂತಲ್ಲವೇ ನಮ್ಮ ವಾಗ್ದಾನ. ಈಗ ಚರ್ಚೆಯ ಮಧ್ಯದಲ್ಲಿ ನಮ್ಮ ರಚನೆಯನ್ನು ನಿಮ್ಮ ಮುಂದಿಡಲು ಸಾಧ್ಯವಿದೆಯೇ? ಹಿಂದೂಸ್ಥಾನದ ಸರಕಾರವನ್ನು ಕ್ರಮ ಕ್ರಮವಾಗಿ ಸ್ವತಂತ್ರದ ಕಡೆಗೆ ಹೋಗುವ ರೀತಿ ಸರಕಾರದ ರಚನೆಯನ್ನು ನಿರ್ಮಿಸಬೇಕೆಂತ ಸರಕಾರದ ಇರಾದೆ. ಇದಕ್ಕೆ ಅಡ್ಡಿ ಬರಬೇಡಿ.

ಸರ್. ಯಂ. ಶಫಿಯವರು ಮಾಡಿದ ಭಾಷಣಕ್ಕೆ ರಾಷ್ಟ್ರೀಯ ಪಕ್ಷದವರಾದ ಮೌ. ಶಿವರ್ವಾನಿ ಎಂಬವರು ಬರೆದಿರುವುದೇನೆಂದರೆ—'ಸರ್ ಶಫಿಯವರು ಹೇಳುವ ಮುಸ್ಲಿಮ್ ಲೀಗ್ ಮುಂತಾದ ಸಂಸ್ಥೆಗಳಲ್ಲಿ ಮೆಂಬರುಗಳೆಷ್ಟು ಇದ್ದಾರೆ? ಇವರಲ್ಲಿ ಚಂದಾ ಕೊಟ್ಟವರೆಷ್ಟು? ಈ ಎಲ್ಲಾ ಸಂಸ್ಥೆಗಳಲ್ಲಿರುವ ಮೆಂಬರುಗಳ ಸಂಖ್ಯೆಗಿಂತ ಸಾವಿರದಷ್ಟು ಹೆಚ್ಚು ಮುಸಲ್ಮಾನ್ ಮೆಂಬರುಗಳು ಕಾಂಗ್ರೆಸಿನಲ್ಲಿದ್ದಾರೆ. ಸರ್ ಶಫಿ ಮತ್ತು ಜಿನ್ನಾರವರು ಜಾಸ್ತಿ ನೂರಾರು ವರ್ಷ ಸಮ್ಮಿಶ್ರ ಚುನಾವಣೆಯೇ ಮುಸಲ್ಮಾನರಿಗೆ ಉತ್ತಮವೆಂತ ಹೇಳಿದ್ದಾರೆ. ಪ್ರತ್ಯೇಕ ಚುನಾವಣೆಯು ವಿಷವೆಂತ ಹೇಳಿದ್ದರು. ಈಗ ಮುಸಲ್ಮಾನರಿಗೆ ವಿಷ ಕೊಡುವುದು ಯಾತಕ್ಕೆ? ಮುಸಲ್ಮಾನರ ಮುಖಂಡರು ಹೆಚ್. ಹೆಚ್. ಆಗಾ ಖಾನರಾಗಿದ್ದಾರೆ. ಇವರಿಗೆ ಹಿಂದೂಸ್ಥಾನದ ಸಂಸ್ಕೃತಿ ಏನು ಗೊತ್ತಿದೆ? ಮೌಲಾನಾ ಶೌಕತ್ ಅಲ್ಲಿಯವರು ಕಾಂಗ್ರೆಸನ್ನು ಬಿಟ್ಟು ಬ್ರಿಟಿಷರೊಂದಿಗೆ ರಾಜಿ ಮಾಡಿಕೊಳ್ಳುತ್ತಾರಂತೆ! ಇವರಿಗೆ ಬೊಂಬಾಯಿಯ ಮಾಜಿ ಗವರ್ನರ ರಾಜಭಕ್ತಿಯ ಸರ್ಟಿಫಿಕೇಟು ಬೇಕು! ನನ್ನ ಜಾತಿಯವರನ್ನು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುವ ಬ್ರಿಟಿಷ ಮುತ್ಸದ್ದಿಗಳೇ ಸಮರ್ಥರು. ನಮ್ಮ ಜನರಿಗೆ ಸರಿಯಾದ ದಾರಿಯಲ್ಲು ಹೋಗಲು ದೇವರು ಬುದ್ಧಿ ಕೊಡಲಿ'

ಎಸೆಂಬ್ಲಿ ಪ್ರೆಸಿಡೆಂಟರಾಗಿದ್ದ ಹಾಲಿ ಇಂಗ್ಲೆಂಡಿನಲ್ಲಿರುವ ಶ್ರೀ. ವಿಟ್ಠಲಭಾಯಿ ಪಟೇಲರು ಈ ವಿಷಯವಾಗಿ ಹೇಳುವುದೇನೆಂದರೆ:—

'ಮಂತ್ರಿಯವರ ಭಾಷಣವು ಪ್ರತಿನಿಧಿಗಳಿಗೆ ಅಗೌರವವನ್ನುಂಟುಮಾಡುವಂಥಾದ್ದಾಗಿದೆ. ಸರಕಾರವು ಹಿಂದೂಸ್ಥಾನಕ್ಕೆ ಸ್ವತಂತ್ರ ಕೊಡುವ ಇರಾದೆಯಲ್ಲಿಲ್ಲವೆಂತ ಇವರ ಭಾಷಣದಿಂದ ತಿಳಿಯುತ್ತದೆ. ಈ ಮೊದಲು ಬ್ರಿಟಿಷ್ ಸರಕಾರವು ಈ ಪರಿಷತ್ತಿನ ವಿಷಯ ಮಾಡಿದ ವಾಗ್ದಾನಗಳನ್ನೆಲ್ಲಾ ಮರೆತು, ತಮಗೆ ತೋರಿದಷ್ಟು ಸುಧಾರಣೆ ಮಾತ್ರ ಹಿಂದೂಸ್ಥಾನಕ್ಕೆ ಕೊಡುವುದರಲ್ಲಿದ್ದಾರೆಂತ ಸ್ಪಷ್ಟವಾಯಿತು. ಈ ಭಾಷಣವು ಕಾನೂನು ಭಂಗದ ಚಳವಳವನ್ನು ತುಚ್ಛೀಕರಿಸಿದೆ. ಈ ಭಾಷಣವು ಗಾಂಧಿ—ಇರ್ವಿನ್ ಒಪ್ಪಂದಕ್ಕೆ ವಿರೋಧವಾಗಿದೆ. 'ಪ್ರಮೋಷಕರಾಗಿರಿ' ಎಂತ ಮಂತ್ರಿಯವರು ಹೇಳಿದ್ದು ಕಾಂಗ್ರೆಸ್ಸಿಗೆ ಮಾತ್ರವಲ್ಲ, ಒಟ್ಟು ಹಿಂದೂಸ್ಥಾನಕ್ಕೇನೇ ಅಗೌರವ ತೋರಿಸಿದಂತಾಯಿತು. ಇಂಥಾ ಮಾತುಗಳಾದ ಮೇಲೆ ಕಾಂಗ್ರೆಸ್ ಪ್ರತಿನಿಧಿಯಾಗಲೀ, ಇತರ ಹಿಂದೀಯರಾಗಲೀ ಪರಿಷತ್ತಿನಲ್ಲಿ ಇರಬಾರದೆಂತ ನನ್ನ ಅಭಿಪ್ರಾಯ. ಯಾವ ತರಹದ ಸರಕಾರ ರಚನೆ ಸಿಕ್ಕುತ್ತದೆಯೆಂತ ತಿಳಿದ ಮೇಲೆ ಕೋಮುವಾರು ಪ್ರಶ್ನೆಯು ಚರ್ಚೆಗೆ ಬರಬೇಕೇ ಹೊರತು, ಮೊದಲೇ ಬರಕೂಡದೆಂತ ನಾನು ಪ್ರಾರಂಭದಿಂದಲೇ ಹೇಳಿದ್ದೇನೆ. ಆದ್ದರಿಂದ ಸ್ವಾತಂತ್ರ್ಯವನ್ನು ಕೊಡುವ ವಿಷಯ ಬ್ರಿಟಿಷ್ ಸರಕಾರವು ತಿಳಿಸಿದ ವಿನಹ ಕಾಂಗ್ರೆಸ್ ಪ್ರತಿನಿಧಿಯು ಪರಿಷತ್ತಿನಲ್ಲಿ ಭಾಗಿಯಾಗಬಾರದು. ಸರಕಾರದ ಇಚ್ಛೆಯನ್ನು ತಿಳಿಸಿದ ಕೂಡಲೇ ಪರಿಷತ್ತು ಮುಗಿಯಬೇಕು. ಯಾಕೆಂದರೆ ಕಾಂಗ್ರೆಸ್ಸಿನವರು ಕೇಳಿದ ಸ್ವಾತಂತ್ರ್ಯವನ್ನು ಕೊಡಲು ಸರಕಾರವು ತಯಾರಾಗಿಲ್ಲ. ಕೋಮುವಾರು ಸಮಸ್ಯೆಯನ್ನು ಮುಂದಾಗಿಯೇ ಚರ್ಚೆಗೆ ಬರಬೇಕೆಂತಲೇ ಬ್ರಿಟಿಷ್ ಸರಕಾರವು ತಂದದ್ದು. ಇದರಿಂದ ಆಗುವ ಹಾನಿಯನ್ನು ಹಿಂದೀ ಮೆಂಬರುಗಳು ಮುಂದಾಗಿಯೇ ತಿಳಿದುಕೊಳ್ಳತಕ್ಕದ್ದು ವಿಷಾದಕರ.

ತಾ. ೯ರಲ್ಲಿ ಫೆಡರಲ್ ಕಮಿಟಿಯು ಸೇರಿತು. ಅಧ್ಯಕ್ಷರಾದ ಲಾರ್ಡ ಸ್ಯಾಂಕಿಯವರು ಒಳ್ಳೇ ಅಭಿಪ್ರಾಯಗಳಿಂದ ಕೂಡಿದ ಭಾಷಣ ಮಾಡಿದರು. ಅದರ ಸಾರಾಂಶವೇನೆಂದರೆ—

"ಕೋಮುವಾರು ಸಮಸ್ಯೆಯು ಇನ್ನೂ ಬಿಡುಗಡೆಯಾಗದ್ದಕ್ಕೆ ವ್ಯಸನ ಪಡುತ್ತೇನೆ. ಆದರೆ ನಾನು ಧೈರ್ಯಗುಂದುವವನಾಗಿಲ್ಲ. ಈ ಪರಿಷತ್ತಿನ ಕಾರ್ಯ ಜಯಪ್ರದವಾಗಿ



26—14

ಬೇಕೆಂತ ನಾವೆಲ್ಲರೂ ನಿಶ್ಚೈಸಿದವರಾಗಿದ್ದೇವೆ. ಈಗ ವಿದ್ದರೆ ಪ್ರಪಂಚವು ನಮ್ಮನ್ನು ನೋಡಿ ನಕ್ಕೀತು. ಹಿಂದೂಸ್ಥಾನದಲ್ಲಿ ಯಾವ ಪಂಕ್ತಿ ಬಂದೊಡನೆ ನೀವೆಲ್ಲರೂ ವಾಪಸು ಹಿಂದೂಸ್ಥಾನಕ್ಕೆ ಹೋದಾಗ್ಯೆ ಯುವರು ಏನು ತಂದಿರಿ ಎಂತ ಕೇಳುವಾಗ ಏನೂ ಇಲ್ಲ ಹೇಳುವಿರೋ ?

ನೀವು ಬಹಳ ತ್ಯಾಗದಿಂದ ಸಾವಿರಾರು ಮೈಲು ದೂರ ದುವಿರಿ. 35 ಕೋಟಿ ಜನರ ಕ್ಷೇಮವನ್ನು ಸಾಧಿಸಲು ಸುವಿರಿ. ಅದ್ದರಿಂದ ಎಲ್ಲರೂ ಸರ್ವ ಪ್ರಯತ್ನ ಮಾಡಿ ರಂಪತ್ತನ್ನು ಜಯಪ್ರದಗೊಳಿಸಬೇಕು. ಹಿಂದೂಸ್ಥಾನ ದ ಜನರು ಅನ್ಯೋನ್ಯತೆಯಿಂದ ಇರುವ ಜನಾಂಗ ನೋಡಲು ಬ್ರಿಟಿಷರು ಇಚ್ಛಿಸುತ್ತಾರೆ. ಇದಕ್ಕೆ ಸ ಸ್ಕರಿಸಿರಿ.

ಒಗ್ಗಟ್ಟಾಗಲು ಮನಸ್ಸು ಮಾಡಿರಿ. ನಿಮ್ಮ ಪೂರ್ವಿಕ ನೀವು ಸಹ ಆಶಿಸುತ್ತಿದ್ದ ಶಿಬಿರವು ನಿಮ್ಮ ಕಣ್ಣೆದುರಿಗೆ ಅದನ್ನು ಸ್ವಾಧೀನ ಪಡಿಸಿಕೊಳ್ಳುವುದನ್ನು ಬಿಟ್ಟು ನುವಾದ ಜಗಳವಾಡಿ ಹೊರಟು ಹೋಗುತ್ತೀರೋ ? ಸ್ಥಿತಿಯನ್ನು ಸಮರ್ಪಕವಾಗಿ ತೀರಿಸುವ ರೀತಿ ಯಾವ ಯೋಚಿಸಿರಿ.

ಇಲ್ಲಿ ಪಾರ್ಲಿಮೆಂಟ್ ಚುನಾವಣೆಯು ಪ್ರಾರಂಭವಾಗಿ ನದಿಂದ ನಮ್ಮ ಮನಸ್ಸು ಈ ಕೆಲಸದಿಂದ ಬೇರೆ ಕಡೆ ತ್ತಿದೆ. ಸ್ವಲ್ಪ ಕಾಲ ಕಳೆಯಬಹುದಾದರೂ ಇಲ್ಲಿನ ವಣೆ ಹೇಗೆ ನಡೆಯುತ್ತದೆ ಎಂಬುದನ್ನು ನೀವು ತಿಳಿದು ನಿ, ನಿಮ್ಮ ದೇಶದಲ್ಲೂ ಆಗಲಿಕ್ಕಿರುವ ಚುನಾವಣೆಗೆ ಸ ಹಾಯವಾದೀತು.

ಮುಂದೆ ಆಗಲಿಕ್ಕಿರುವ ಫೆಡರೇಶನಿನಲ್ಲಿ ಮಧ್ಯವರ್ತಿ ಸರಕಾರ, ಪ್ರಾಂತೀಕ ಸರಕಾರಗಳಿಗೂ ಇರಬೇಕಾದ ಆ ಸಂಬಂಧವನ್ನು ಕುರಿತು ಸಲಹೆ ಕೊಡಲು ಏರ್ಪಾಡಾದ ಯು ಒಗ್ಗಟ್ಟಿನ ರಿಪೋರ್ಟು ಬರೆದಿದೆ. ಇದು ತೃಪ್ತಿ

ಒಟ್ಟು ಹಿಂದೂಸ್ಥಾನಕ್ಕೆ ಇರಬೇಕಾದ ಅಸ್ತೀರ್ ಕೋ ಹೇಗಿರಬೇಕು ಎಂಬ ವಗೈರೆ ಕುರಿತು ಲಾರ್ಡ್ ಸ್ಯಾಂ ವರು ತಯಾರಿಸಿದ ರಿಪೋರ್ಟನ್ನು ಮೆಂಬರುಗಳಿಗೆ ಕೊ

ವರ್ತಮಾನ ಸಂಗ್ರಹ.

ಒ ಳ ದೇ ಶ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂ ಈ ತಾ. 31 ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯುವದೆಂ ತಿಳಿಯುತ್ತೇವೆ.

ರಿಟ್ರೆಂಚ್‌ಮೆಂಟ್ ಕಮಿಟಿಯ ಮೀಟಿಂಗೊಂದು ಈ 14 ರಲ್ಲಿ ನಡೆಯಿತು. ಪುನಹ ಈ ತಾ. 23 ರಲ್ಲಿ ನಡೆ ವದೆಂದು ತಿಳಿಯಬರುತ್ತದೆ.

ಈ ತಾ. 13ನೇ ಮಂಗಳವಾರ ಬೆಳಗ್ಗೆ 8½ ಗಂಟೆಗೆ ಮ ರಿಯಲ್ಲಿ ಭೂಕಂಪವಾಯಿತು. ಸ್ವಲ್ಪ ಹೊತ್ತು ಗುಡು ಶಬ್ದವು ಕೇಳಿಸಿದಲ್ಲದೆ ಭೂಮಿಯು ಅಲ್ಲಾಡಿತು.

ಕೊಡಗಿನ ಯೂರೋಪಿಯನ್ ಪ್ಲಾಂಟರುಗಳ 'ಕಾಗ ನ್ ರೇಸಸ್' ಎಂಬ ಕುದುರೆ ಆಟವು ಈ ತಾ 15 ರಲ್ಲಿ ಬಸೂರಿನಲ್ಲಿ ನಡೆಯಿತೆಂದು ತಿಳಿಯಬರುತ್ತದೆ.

ಸಹಕಾರಿ ಇನ್‌ಸ್ಪೆಕ್ಟರುಗಳ ಮತ್ತು ಸುಪರ್‌ವೈಜರುಗಳ ಕಾನ್ಫರೆನ್ಸು ಈ ತಾ. 11 ರಲ್ಲಿ ಕೋಆಪರೇಟಿವ್ ರಜಿ ಸ್ಟ್ರಾರರವರ ಅಧ್ಯಕ್ಷತೆಯಲ್ಲಿ ಫೆಡರೇಶನಿನ ಆಫೀಸಿನಲ್ಲಿ ನಡೆ ಯಿತು.

ಫೆಡರೇಶನಿನ ಕಮಿಟಿ ಮೆಂಬರುಗಳ ಮತ್ತು ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಜಂಟಿ ಮೀಟಿಂಗೊಂದು ಈ ತಾ ರಲ್ಲಿ ಫೆಡರೇಶನಿನ ಆಫೀಸಿನಲ್ಲಿ ನಡೆಯುವುದಾಗಿ ತಿಳಿಯು ತ್ತದೆ.

ಕೌನ್ಸಿಲು ಮೀಟಿಂಗಿಗಾಗಿ ಮಡಿಕೇರಿಗೆ ಬಂದಿದ್ದ ಚೀ ಫ್ ಕಮಿಷನರವರು ಕಳೆದ ಸೋಮವಾರ ದಿನ ಬೆಂಗಳೂರಿಗೆ ವಾಪಸು ಹೋದರು. ಕಳೆದ ವಾರ ಪ್ರಕಟಿಸಿದಂತೆ ತಾ. 9 ಹೋಗಲಿಲ್ಲ.

ವೀರರಾಜಪೇಟೆಯಲ್ಲಿರುವ ಕೊಡವರ ಕೈಲು ಪೊಳ್ದು ಸಂಘ ಈ ತಾ. ೩ ರ ಸಾಯಂಕಾಲ ಹೈಸ್ಕೂಲು ಆಟದ ಬಯಲಿನಲ್ಲಿ ಆಟೋಟಗಳನ್ನು ನಡಿಸಿ, ರಾತ್ರಿ ಸದರಿ ಸ್ಕೂ ಲ್ ಹಾಲ್‌ನಲ್ಲಿ ಒಂದು ಔತಣವನ್ನು ಮಾಡಿದರು.

'ಕೊಡಗು' ಕಂಪೆನಿಯ ಡೈರೆಕ್ಟರುಗಳ ಇನ್ನೊಂದು ಮೀಟಿಂಗು ಈ ತಾ. 23 ನೇ ಶುಕ್ರವಾರ ಸಾಯಂಕಾಲ 5 ಗಂಟೆಗೆ ಮಡಿಕೇರಿಯಲ್ಲಿ ಕಂಪೆನಿಯ ಆಫೀಸಿನಲ್ಲಿ ನಡೆಯು ವುದು.

'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗೊಂದೂ, ಮತ್ತು ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಲಿಯ ಮೀಟಿಂಗೂ ಕಳೆದ ಆದಿತ್ಯವಾರ ವೀರರಾಜಪೇಟೆಯಲ್ಲಿ ನಡೆದವು. ಇವುಗಳ ವಿವರವು ಇನ್ನೊಂದು ಕಡೆ ಪ್ರಕಟವಾ

"ಲೋಕಪಾವನ" ಪತ್ರಿಕೆಯ ಪ್ರಿಂಟಿಂಗ್ ಪ್ರೆಸ್ಸಿನ ಸಂಬಂಧ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯು ತ್ತಿರುವ ಕ್ರಿಮಿನಲ್ ಮೊಕದ್ದಮೆಯಲ್ಲಿ ಕಳೆದ ಮಂಗಳವಾರ ಮತ್ತು ಬುಧವಾರ ಸಾಕ್ಷಿಗಳ ವಿಚಾರವೆಲ್ಲಾ ಮುಗಿದು, ವಾ ದ ಸಡಿಸಲಿಕ್ಕೆ ಈ ತಾ. 24 ಕ್ಕೆ ಇಡಲಾಗಿದೆಯೆಂದು ತಿಳಿಯು ತ್ತೇವೆ.

ಇಂಡಿಯಾದಲ್ಲಿ ಸ್ಟೇಟ್ ರೈಲ್ವೆಗಳ ಸುಪೀರಿಯರ್ ರೆವೆನ್ಯೂ ಸಿಬ್ಬಂದಿಗಳಲ್ಲಿ ಮೆಕ್ಯಾನಿಕಲ್ ಇಂಜಿನೀಯರಿಂಗ್ ಮತ್ತು ಟ್ರಾನ್ಸ್‌ಪೋರ್ಟೇಶನ್ (ಪವರ್) ಇಲಾಖೆಗಳ ಉದ್ಯೋಗಗಳ ಆರಿಸುವಿಕೆ ಬಗ್ಗೆ ನಿಬಂಧನೆಗಳ ಪ್ರತಿಯೊಂದು ನಮ್ಮ ಆಫೀಸಿಗೆ ಕಳುಹಿಸಲ್ಪಟ್ಟಿದೆ. ಅಪೇಕ್ಷಿಸುವವರು ಬಂದು ನೋಡಿಕೊಂಡು ಹೋಗಬಹುದು.

ಊಟಕರ್ಮಂಡ್ ಸರ್ಕಲಿನ ಫಾರೆಸ್ಟ್ ಕನ್‌ಸರ್ವೇಟರಾದ ಮಿ ಡಬ್ಲ್ಯೂ. ಸಿ ವಿಲ್‌ಸನ್‌ರವರು ಕೊಡಗಿನ ಫಾರೆಸ್ಟ್ ಇಲಾಖೆಯಲ್ಲಿ ಸಿಬ್ಬಂದಿ ಖರ್ಚು ಎಷ್ಟರ ಮಟ್ಟಿಗೆ ಕಡಿಮೆ ಮಾಡಬಹುದೆಂದು ವಿಚಾರಿಸಲು ಈ ತಾ 12 ರಲ್ಲಿ ಮಡಿಕೇರಿಗೆ ಬಂದರು. ಈ ತಾ. 14ರಲ್ಲಿ ನಡೆದ ರಿಟ್ರೆಂಚ್‌ಮೆಂಟ್ ಕಮಿಟಿ ಮೀಟಿಂಗಿನಲ್ಲಿ ಅವರು ಹಾಜರಿದ್ದರು.

ಪೋಲೀಸು ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ ಹುದ್ದೆಗೆ ಚುನಾಯಿಸಲ್ಪಟ್ಟ ಮಿ. ಮಲ್ಲೇಂಗಡ ಮುತ್ತಣ್ಣನವರು ಈ ತಾ. 15 ರಲ್ಲಿ ಬೆಂಗಳೂರು ಪೋಲೀಸು ಟ್ರೈನಿಂಗ್ ಶಾಲೆಗೆ ಹೋಗಿ ಸೇರಿದರೆಂದೂ, ಸದರಿ ಶಾಲೆಯಲ್ಲಿ ಸಬ್ ಇನ್‌ಸ್ಪೆಕ್ಟರ್ ಹುದ್ದೆಗೆ ತರಬೇತು ಹೊಂದುತ್ತಿದ್ದ ಮಿ. ಕೊಂಗಟ್ಟೀರ ಅಚ್ಚಪ್ಪನವರು ತರಬೇತು ಮುಗಿಸಿಕೊಂಡು ಮಡಿಕೇರಿಗೆ ವಾಪಸು ಬಂದಿರುವರೆಂದೂ ತಿಳಿಯುತ್ತೇವೆ.

ಪೋಲೀಸು ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರಾಗಿದ್ದ ಮಿ. ನಡಿಕೇರಿಯಂಡ ಚಿಣ್ಣಪ್ಪನವರ ಮರಣದ ನಂತರ ಮಡಿಕೇರಿ ತಾಲೋಕು ಸಬ್ ಇನ್‌ಸ್ಪೆಕ್ಟರಾಗಿದ್ದ ಮಿ. ಕೋಡಿಮಣಿಯಂಡ ಕೃಷ್ಣನವರ ಮಡಿಕೇರಿ ಹಂಗಾಮಿ ಪ್ರಾಸಿಕ್ಯೂಟಿಂಗ್ ಸಬ್ ಇನ್‌ಸ್ಪೆಕ್ಟರಾಗಿಯೂ, ಸಿದ್ದಾಪುರದಲ್ಲಿ ಹೆಡ್ ಕಾನ್‌ಸ್ಟೇಬಲರಾಗಿದ್ದ ಮಿ. ಎಂ. ಅಬ್ದುಲ್ ಗಫೂರ್‌ಖಾನ್‌ರವರು ತತ್ಕಾಲ ಮಡಿಕೇರಿ ತಾಲೋಕು ಸಬ್ ಇನ್‌ಸ್ಪೆಕ್ಟರಾಗಿಯೂ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯ ಬರುತ್ತದೆ.

ಸತ್ಯನಾರಾಯಣ ಸರ್ವಿಸು ಬಾಬ್ತು, ವೀರರಾಜೇಂದ್ರಪೇಟೆಯಿಂದ ಬೆಳಗ್ಗೆ 7½ ಗಂಟೆಗೆ ಹೊರಟು ಮಾನಂದೋಡಿಗೆ ಹೋಗಿ, ಸಾಯಂಕಾಲ ವಾಪಾಸು ಬರುವ ಬಸ್ಸಲ್ಲದೆ, ವೀರರಾಜಪೇಟೆಯಿಂದ ಮಧ್ಯಾಹ್ನ 3½ ಗಂಟೆಗೆ ಕುಟ್ಟಕ್ಕೆ ಹೊರಟು ಹೋಗುವ ಬಸ್ಸು ಸಹ, ಸೀದಾ ಮಾನಂದೋಡಿಗೆ ಹೋಗಿ, ಬೆಳಗ್ಗೆ ಕುಟ್ಟದಿಂದ ಹೊರಡುವ ಬದಲು, ಮಾನಂದೋಡಿಯಿಂದ ಬರುವ ಏರ್ಪಾಡು ತಾ. 1—10—31 ರಿಂದ ಮಾಡ ಲಾಗಿದೆಯೆಂದು ತಿಳಿಯಬರುತ್ತದೆ.

ಹಿಂ ದೂ ದೇ ಶ.

ಇಂಡಿಯನ್ ಸ್ಯಾಂಡ್‌ಹರ್ಸ್ಟ್ (ಮಿಲಿಟರಿ) ಕಾಲೇಜು ಡೇರಾಡನ್ನಿನಲ್ಲಿ ಸ್ಥಾಪಿಸಲ್ಪಡುವ ಸಂಭವವು ಹೆಚ್ಚಾಗಿದೆ.

ಮಹಾತ್ಮ ಗಾಂಧಿಯವರು ಐರಿಷ್ ಫ್ರೀ ಸ್ಟೇಟನ್ನು ಬೇಗನೆ ಸಂದರ್ಶಿಸುವ ಆಲೋಚನೆಯಲ್ಲಿದ್ದಾರೆಂದು ವರ್ತಮಾನ

ಬ್ರಿಟಿಷ್ 'ಪಾರ್ಲಿಮೆಂಟು ಈ ತಾ 7ರಲ್ಲಿ ಅರಸರಿಂದ ಮುಕ್ತಾಯಗೊಳಿಸಲ್ಪಟ್ಟಿತು. ಹೊಸ ಚುನಾವಣೆಯು ಈ ತಾ. 27ರಲ್ಲಿ ನಡೆಯಲಿಕ್ಕಿದೆ.

ಭಾಷಾನುವಾರು ಕನ್ನಡ ಪ್ರೊತ್ತ ಕರ್ನಾಟಕ ಪ್ರಾಂತ್ಯವನ್ನು ಸ್ಥಾಪಿಸುವ ವಿಷಯ ಸಿಂಧು ಮತ್ತು ಒರಿಸ್ಸಾ ಪ್ರಾಂತ್ಯಗಳ ವಿಚಾರಣೆಯೊಂದಿಗೆ ಆಲೋಚಿಸಬೇಕೆಂಬ ಠರಾವನ್ನು ಮುನ್ಸಿಪಾಲಿಟಿಯವರು ಠರಾವು ಪಾಸು ಮಾಡಿರುವರು.

ಬರ್ಮಾ ದುಂಡುಮೇಜು ಪರಿಷತ್ತಿನ ಬ್ರಿಟಿಷ್ ಮೆಂಬರುಗಳ ಹೆಸರುಗಳು ಪ್ರಕಟವಾಗಿವೆ. ಸದರಿ ಪರಿಷತ್ತಿನ ಅಧ್ಯಕ್ಷರಾಗಿ ಅರ್ಲ್ ಪೀಲ್‌ರವರು ನೇಮಿಸಲ್ಪಟ್ಟಿರುವರು.

ಈ ತಿಂಗಳು 27 ರಲ್ಲಿ ನಡೆಯಲಿಕ್ಕಿರುವ ಬ್ರಿಟಿಷ್ ಪಾರ್ಲಿಮೆಂಟಿನ ಜನರಲ್ ಚುನಾವಣೆಗೆ ಎಲ್ಲಾ ಪಾರ್ಟಿಗಳ ಸುಮಾರು 1200 ಜನರು ಉಮೇದುವಾರರಾಗಿ ನಿಲ್ಲುವರೆಂದು ವರ್ತಮಾನ.

ಮುಜಾಫರ್ ಪುರದಲ್ಲಿ ಒಬ್ಬ ಹಿಂದೂ ಮಹಿಳೆಯು ಮೂರು ಮಕ್ಕಳನ್ನು ಹೆತ್ತಿರುವಳು. ಗಂಡು ಮಗು ಸತ್ತು ಹೋಗಿ ಉಳಿದ ಎರಡು ಹೆಣ್ಣು ಮಕ್ಕಳೂ, ತಾಯಿಯೂ ಕ್ಷೇಮದಲ್ಲಿರುವರಂತೆ.

ಮೊನ್ನೆ ತಾನೇ ಎಸೆಂಬ್ಲಿಯಲ್ಲಿ ಪಾಸಾದ ಪ್ರೆಸ್ಸು ಬಿಲ್ಲನ್ನು ವೈಸರಾಯರು ಮಂಜೂರು ಮಾಡಿರುವರು. ಅದು ಈಗ ಜಾರಿಗೆ ಬಂದಿದೆ. ಪ್ರೆಸ್ಸುಗಳ ಮತ್ತು ಪತ್ರಿಕೆಗಳ ಪಾಡನ್ನು ಇನ್ನು ಹೇಳುವುದೇ ಬೇಡ!

ಇಂಡಿಯಾ ಸರ್ಕಾರದವರು ಸರ್ಕಾರಿ ಉದ್ಯೋಗಸ್ಥರ ಸಂಬಳದಲ್ಲಿ ಎಲ್ಲರಿಗೂ ಒಂದೇ ರೀತಿಯಲ್ಲಿ ಅಂದರೆ ಶೇಕಡ 10 ರಂತೆ ಕಡಿಮೆ ಮಾಡಲು ಮಾಡಿರುವ ಸೂಚನೆಯನ್ನು ಕೆಲವರು ಅತೃಪ್ತಿಯನ್ನು ತೋರಿಸುತ್ತಿರುವರು.

ಹಿಂದೀಯರು ಬ್ರಿಟಿಷ್ ಧ್ವಜದ ಕೆಳಗೆ ತಮ್ಮೊಂದಿಗೆ ಸರಿಸಮಾನತ್ವದ ಪಾಲುದಾರರಾಗಿರಲು ತಾವು ಉತ್ಸಾಹವುಳ್ಳವರಾಗಿದ್ದೇವೆಂದು ಬ್ರಿಟನ್ನಿನ ಲೇಬರ್ ಪಾರ್ಟಿಯವರು ತಮ್ಮ ತಾ. 7ರ ಕಾನ್‌ಫರೆನ್ಸಿನಲ್ಲಿ ಠರಾವು ಪಾಸು ಮಾಡಿದರು.

ಹಿಂದೂಸ್ಥಾನದ ಅನೇಕ ಅಸ್ಪೃಶ್ಯರ ಮುಂದಾಳುಗಳು ಮಹಾತ್ಮರಲ್ಲಿ ಸಂಪೂರ್ಣ ವಿಶ್ವಾಸವನ್ನು ಸೂಚಿಸಿಯೂ, 'ಮೈನಾರಿಟೀಸ್ ಕಮಿಟಿಯಲ್ಲಿ ಡಾ. ಅಂಬೇಡ್ಕರವರ ಭಾಷಣವನ್ನು ವಿರೋಧಿಸಿಯೂ ಗಾಂಧೀಜಿಯವರಿಗೆ ತಂತಿ ವಾರ್ತೆ ಕಳುಹಿಸಿರುವರು.

ಜಗಳೂರ್ ಎಂಬಲ್ಲಿಗೆ ಹೋಗಕೂಡದೆಂದು ಮೇಜಿಸ್ಟ್ರೇಟರು ಮಾಡಿದ ಹುಕುಮನ್ನು ಉಲ್ಲಂಘಿಸಿದಕ್ಕಾಗಿ ಬಂಗಾಳದ ಸುಭಾಷ್ ಚಂದ್ರಬೋಸ್‌ರವರು ದಸ್ತಗಿರಿ ಮಾಡಲ್ಪಟ್ಟಿರುವರೆಂಬ ವರ್ತಮಾನ ಸಿಕ್ಕಿಲ್ಲವೆಂದು ಇತ್ತಲಾಗಿ ತಿಳಿಯಬರುತ್ತದೆ

ಬೇರಾರನ್ನು ಹೈದರಾಬಾದಿನ ನೈಜಾಮರ ಸರ್ಕಾರಕ್ಕೆ ಬಿಟ್ಟು ಕೊಡುವಂತೆ ನೈಜಾಮರ ಪರವಾಗಿ ಬ್ರಿಟಿಷ್ ಸರ್ಕಾರದೊಂದಿಗೆ ಸಂಧಾನಗಳು ನಡೆಯುತ್ತಿವೆ. ನೈಜಾಮರು ಇದಕ್ಕಾಗಿ 14 ಕೋಟಿ ರೂಪಾಯಿ ಬ್ರಿಟಿಷರಿಗೆ ಕೊಡಬೇಕೆಂದು ಬ್ರಿಟಿಷರು ಸೂಚಿಸಿರುವರೆಂದೂ ಸುದ್ದಿ.

ಯುನೈಟೆಡ್ ಪ್ರಾಂತ್ಯದ ಪ್ರಾಂತೀಕ ಸೇವಾದಳದ ಶಿಬಿರವು ಕಳೆದ ತಾ. 24 ರಲ್ಲಿ ಕಾಶೀ ವಿದ್ಯಾ ಪೀಠದ ಕುಮಾರ ವಿದ್ಯಾಲಯದಲ್ಲಿ ತೆರೆಯಲ್ಪಟ್ಟಿತು. ಪಂಡಿತ ಸುಂದರಲಾಲಜಿಯವರು ಅಧ್ಯಕ್ಷರಾಗಿದ್ದರು. ತಾ. 20 ರಿಂದಲೇ ತರಬೇತು ಪ್ರಾರಂಭಿಸಲ್ಪಟ್ಟಿದೆ. ಮಿ. ಮಾಕಂಡ ಮಂದಣ್ಣನವರು ಶಿಬಿರದ ಚಾರ್ಜಿನಲ್ಲಿರುವರು. 21 ಡಿಸ್ಟ್ರಿಕ್ಟುಗಳಿಂದ 45 ಜನರು ತರಬೇತಿಗೆ ತೆಗೆದುಕೊಳ್ಳಲ್ಪಟ್ಟಿರುವರು.

ನೇಶನಲ್ ಲೇಬರ್ ಕ್ಲಬ್ಬಿನವರು ಮಹಾತ್ಮರಿಗೆ ಸ್ವಾಗತ ಪತ್ರ ನೀಡಿದಾಗ, 'ನಮ್ಮ ಸ್ವಾತಂತ್ರ್ಯಕ್ಕಾಗಿ ಒಂದು ಮಿಲಿಯ ಪ್ರಾಣವನ್ನು ನೀಡಬೇಕಾದರೂ ಅದು ಹೆಚ್ಚಲ್ಲವೆಂತಲೂ, ಹೇಗೂ ಮನುಷ್ಯ ರಕ್ತವನ್ನು ಚೆಲ್ಲದೆ ಸ್ವಾತಂತ್ರ್ಯವನ್ನು ಪಡೆದ ಹೆಸರುವಾಸಿಯು ಇಂಡಿಯಾಕ್ಕೆ ಬರುವಂತೆ ಕಾಂಗ್ರೆಸಿನವರು ಅಹಿಂಸಾ ತತ್ವದಿಂದಲೇ ಹೋರಾಟವನ್ನು ನಡಿಸುವರೆಂದೂ,' ಗಾಂಧೀಜಿಯವರು ಭಾಷಣ ಮಾಡಿದರು.

'ಮೈನಾರಿಟೀಸ್' ಸಮಸ್ಯೆಯನ್ನು ತೀರ್ಮಾನಿಸಲು ಲಂಡನಿನಲ್ಲಿ ಹಿಂದೂ ಮುಸಲ್ಮಾನ್ ಪ್ರತಿನಿಧಿಗಳು ಪುನಹ ಸಂಭಾಷಣೆ ನಡಿಸಲು ಪ್ರಾರಂಭಿಸಿರುವರೆಂದು ವರ್ತಮಾನ.

ಮಹಾತ್ಮಗಾಂಧಿಯವರು ತಮ್ಮ ತಮ್ಮ ದೇಶಗಳನ್ನು ಸಂದರ್ಶಿಸಬೇಕೆಂದು ಅಮೇರಿಕಾ, ಫ್ರಾನ್ಸ್, ಜರ್ಮನಿ, ಇಟಲಿ ಜೆಕೊಸ್ಲವೇಕಿಯ, ಈಜಿಪ್ಟ್, ಹಂಗೇರಿ ಮತ್ತು ಡೆನ್ಮಾರ್ಕ್ ದೇಶಗಳ ಸಾಮಾಜಿಕ, ಆರ್ಥಿಕ ಮತ್ತು ಮತ ಸಂಬಂಧ ಸಂಸ್ಥೆಗಳಿಂದ ಅವರಿಗೆ ಒತ್ತಾಯದ ಆಹ್ವಾನಗಳು ಬಂದಿವೆಯೆಂದು ಪ್ರಕಟವಾಗಿದೆ. ಅಮೇರಿಕಾಕ್ಕೆ ಹೋಗುವುದನ್ನು ಮುಂದಕ್ಕೆ ಹಾಕಬೇಕೆಂದು ರೆವರೆಂಡ್ ಜೆ. ಹೆಚ್. ಹೋಮ್ಸ್‌ರವರು ಮಹಾತ್ಮರಿಗೆ ಬರೆದಿರುವರಂತೆ. ಅಮೇರಿಕಾದ ನೀಗ್ರೋ ಜನರು ತಮ್ಮ ಆಮಂತ್ರಣವನ್ನು ದಿನೇ ದಿನೇ ಕಳುಹಿಸುತ್ತಿರುವ ರೆಂಬ ಸುದ್ದಿ.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ವೀರರಾಜಪೇಟೆ ದೇವಾಂಗದ ಬೀದಿಯಲ್ಲಿರುವ, ಮೇ. ಕೋದಂಡ ಉತ್ತಯ್ಯನವರು ಬಾಡಿಗೆಗೆ ವಾಸವಿದ್ದ, ಪಾಳು ಬೀಳುವನ್ನು ದೇವಾಂಗದ ತಿಮ್ಮಶೆಟ್ಟಿ ಹೆಂಡತಿ ಪಾತಿ ವೆಂಗಮ್ಮನವರ ಹಿರಿಯ ಮಗ ಪಾತಿ ಚಿಕ್ಕ ತಿಮ್ಮಶೆಟ್ಟಿ ವೈನರು ಮಕ್ಕಳು ಮರಿಶೆಟ್ಟಿ ಯಾನೆ ತಿಮ್ಮಶೆಟ್ಟಿ ಮತ್ತು ದಾಸಪ್ಪ ವಗೈರೆ ಬಾಬ್ತು ವ ಹಡಿಮನೆ ವಗೈರೆ ಸ್ಥಿರಸೊತ್ತುಗಳನ್ನು ಮಾರೀ ಕಳೆದ ಪಾತಿ ಬಸವನಲ್ಲಿ, ವೆಂಗಮ್ಮ ಮತ್ತು ತಿಮ್ಮಮ್ಮ ವಗೈರೆಯರು ವೈನರುಗಳ ಪ್ರಯೋಜನಾರ್ಥವಾಗಿ ಪಾಲೇಕಂಡ ಉತ್ತಪ್ಪನಾದ ನನಗೆ ಕ್ರಯ ನಿಶ್ಚಯದಿಂದ ಎಗ್ರಿಮೆಂಟ್ ಮಾಡಿ ಕೊಟ್ಟಿರುವದರಿಂದ, ಈ ಮಧ್ಯೆ ಸದರಿ ಸೊತ್ತುಗಳನ್ನು ಬೇರೆ ಯಾರೇ ಆದರೂ ಭೋಗ್ಯ, ಗಿರ್ವಿ, ಕ್ರಯ ವಗೈರೆ ಮಾಡಿಕೊಂಡು ಆ ಬಗ್ಗೆ ಪಾವತಿ ಮಾಡುವ ಹಣಕ್ಕೆ ಈ ಸೊತ್ತು ಈಡಾಗುವುದಿಲ್ಲವೆಂತ ಈ ಮೂಲಕ ತಿಳಿಸಲಾಗಿದೆ.

ವೀರರಾಜಪೇಟೆ. ಪಾಲೇಕಂಡ ಉತ್ತಯ್ಯ.

ತಾ 13—10—31.

2—1.

ಕೊಡಗು ಜಮೀನ್ದಾರರ ಸಂಘದ ಕಮಿಟಿ ಮೀ ಟಿಂ ಗು.

ವೀರರಾಜಪೇಟೆಯಲ್ಲಿ ತಾ. 11—10—31ರಲ್ಲಿ ನಡೆದ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್.

ಮೇ. ಗಳಾದ (1) ಸಿ ಎಮ್ ವೆಂಕಪ್ಪಯ್ಯನವರು (ಅಧ್ಯಕ್ಷರು), (2) ಪಿ ಐ ಚಿಣ್ಣಪ್ಪನವರು, (3) ಮುಕ್ಕಾಟಿರ ಕಮುಂಬೈಯ್ಯನವರು, (4) ಮಾಚೆಟ್ಟೀರ ಮುತ್ತಣ್ಣನವರು, (5) ಅಜ್ಜಿಕುಟ್ಟೀರ ಪೊನ್ನಪ್ಪನವರು, (6) ಮಂಡೆಯಂಡ ಕುಟ್ಟಪ್ಪನವರು, (7) ಪಾರ್ವಂಗಡ ಚಂಗಪ್ಪನವರು, (8) ಬಿದ್ದಂಡ ಸುಬ್ಬಯ್ಯನವರು ಮತ್ತು (9) ಕೋಟೆರ ಚಂಗಪ್ಪನವರು (ಸೆಕ್ರೆಟರಿಯವರು) ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಮಂಜೂರು ಮಾಡಲಾಯಿತು.

2. ಲೆಕ್ಕ ಓದಿ ಒಪ್ಪಲಾಯಿತು.

3. ಟ್ರೆಜರರ ಕೈಯಲ್ಲಿರುವ ಹಣವನ್ನು ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕಬೇಕೆಂತ ಸೂಚಿಸಿ, ಒಪ್ಪಲಾಯಿತು.

4 ನಾಡಿನವರು ಪಬ್ಲಿಕ್ ಮೀಟಿಂಗುಗಳನ್ನು ಮಾಡಿ ಸಂಘದ ಪ್ರಚಾರ ಕೆಲಸವನ್ನು ಮಾಡಬೇಕು. ಇಂಥಾ ಮೀಟಿಂಗುಗಳನ್ನು ಸೇರಿಸಲು ಸಂಘದ ಖರ್ಚಿನಿಂದ ನೋಟೀಸ್ ಪ್ರಿಂಟ್ ಮಾಡಿಸಬಹುದು. ಆ ಮೀಟಿಂಗುಗಳನ್ನು ಸೆಕ್ರೆಟರಿಯವರು ಏರ್ಪಡಿಸಬೇಕು. ಆಯಾ ತಾಲೋಕು ಕಮಿಟಿ ಮೆಂಬರೇಗಳು ಸಹ ಮೀಟಿಂಗುಗಳ ಏರ್ಪಾಡಿಗೆ ಸಹಾಯ ಕೊಡಬೇಕು

ಮೈ ಸೋಮಯ್ಯನಂತೆ ಅಪ್ಪಯ್ಯನವರು ಆ ಮೀಟಿಂಗುಗಳ ನೋಟೀಸು ಹಂಚಲು, ಜನಸೇರಿಸಲು ಮತ್ತು ಚಂದಾ ವಸೂಲು ಮಾಡಲು ಸಹಾಯ ಮಾಡುವಂತೆ ನೇಮಿಸಲಾಗಿದೆ. ಇವರು ವಸೂಲು ಮಾಡುವ ಮತ್ತು ಇಂಥಾ ಮೀಟಿಂಗುಗಳಲ್ಲಿ ವಸೂಲು ಆಗುವ ಚಂದಾ ಮೊಬಲಗಿನಲ್ಲಿ ಶೇಕಡ 12½ ರಂತೆ ಇವರಿಗೆ ಕಮಿಶನ್ ಕೊಡತಕ್ಕದ್ದು.

5. ಶಾಸನದ ಒರವಣಿಗೆಯನ್ನು ಚರ್ಚೆ ಒಪ್ಪಲಾಯಿತು

ಕಂಡು ಯಾ ಶಿರೆಯು ಪೈಕಿ ಯಾವುದು ಸುಲಭ ಖರ್ಚಿನಲ್ಲಿ ಆಗುತ್ತದೆಯೊ ಅದರಲ್ಲಿ ಮಾಡತಕ್ಕದ್ದು.

ಸಿ. ಯನ್. ವೆಂಕಪ್ಪಯ್ಯ,
(ಅಧ್ಯಕ್ಷ.)

ಪ ರ ರ ಒ ಡ ವೆ ಯ ಆ ಶೆ.

(ಮ. ಅ. ಶಾಸ್ತ್ರಿ, ಬೆಂಗಳೂರು)

ಶನಿವಾರ ದಿನ. ಪ್ರಾತಃಕಾಲ ಸುಮಾರು ಆರು ಘಂಟೆಯ ಸಮಯ. ಊರಿನ ಸುಮಂಗಲಿಯರು ಹಾಸಿಗೆಗಳಿಂದೆದ್ದು ತಮ್ಮ ಮನೆಗೆಲಸಗಳನ್ನು ಬಹಳ ಸಡಗರದಿಂದ ಮಾಡಿಕೊಳ್ಳುತ್ತಲಿದ್ದರು ಪುರುಷರು ಕೈಗಳಲ್ಲಿ ಗುದ್ದಲಿಗಳನ್ನು ಹಿಡಿದುಕೊಂಡು ತಮ್ಮ ಗದ್ದೆಗಳನ್ನು ನೋಡಿಕೊಂಡು ಬರುವುದಕ್ಕಾಗಿ ತಂಡ ತಂಡವಾಗಿ ಹೋಗುತ್ತಿದ್ದರು. ಪಕ್ಷಿಗಳು ತಮ್ಮ ಗೂಡುಗಳಿಂದ ಹೊರಗೆ ಒಂದು ಕಲಕಲಧ್ವನಿಯನ್ನು ಮಾಡುತ್ತಿದ್ದವು. ಅಂದು ಹುತ್ತರಿ ಹಬ್ಬದ ಕಡೇ ದಿನವಾಗಿತ್ತು. ಆ ಊರಿನ ಹೆಸರು ಕೆಂಪನಳ್ಳಿ.

8 ಘಂಟೆಯಾಯಿತು. ಆ ವೇಳೆಯಲ್ಲಿ ಮುತ್ತಣ್ಣನು ತನ್ನ ಗದ್ದೆಯನ್ನು ನೋಡಿಕೊಂಡು ಬಂದು ತನ್ನ ಗೃಹವನ್ನು ಸೇರಿದನು. ಅಲ್ಲಿ ತನ್ನ ಬಂಧು ಬಳಗದವರೆಲ್ಲರೂ ಆನಂದ ಸಾಗರದಲ್ಲಿ ಯಥೇಷ್ಟವಾಗಿ ವಿಹರಿಸುತ್ತಿದ್ದರು. ಆದರೆ ಮನೋಹರವಾದ ಮುಖವೊಂದು ಮಾತ್ರ ಆ ಹೊತ್ತು ಎಷ್ಟೋ ವಿಷಣ್ಣವಾಗಿ ತೋರಿತು, ಅವಳ ಮುಖಚಂದ್ರನ ಪ್ರಭೆ ಕುಂದಿತ್ತು, ಕಣ್ಣುಗಳಿಂದ ಅಶ್ರುಪೂರವು ತುಳುಕುತ್ತಿತ್ತು, ಇವಳನ್ನು ನೋಡಿ ಮುತ್ತಣ್ಣನು,—"ಪೂವಿ, ನೀನು ಇಂದಿನ ದಿನ ಇಷ್ಟು ದುಃಖಕ್ಕೆ ಈಡಾಗಲು ಕಾರಣವೇನು" ಎಂದು ಕೇಳಿದನು. ಅದನ್ನು ಕೇಳಿ ಪೂವಮ್ಮನು ರೋಧಿಸತೊಡಗಿದಳು. ನಾನಾವಿಧವಾಗಿ ಅವಳನ್ನು ಸಂತೈಸಿ, ಕೊನೆಗೆ ತನ್ನ ದ್ರಾಣೇಶ್ವರಿಯ ಮನೋಭಾವವನ್ನು ಮುತ್ತಣ್ಣನು ತಿಳಿದನು

ಮುತ್ತಣ್ಣನು ಕೇವಲ ವಿದ್ಯಾವಂತನಾಗಿದ್ದರೂ, ಹಣವಂತನಾಗಿರಲಿಲ್ಲ ತನ್ನ ಕಷ್ಟಾರ್ಜಿತದಿಂದ ತನ್ನ ಕುಟುಂಬದ ಜೀವನೋಪಾಯವನ್ನು ಸಾಂಗವಾಗಿ ನಡೆಯಿಸುತ್ತಿದ್ದನು. ಇವನ ಅಣ್ಣನು ಐಶ್ವರ್ಯವಂತನಾಗಿದ್ದು ಮುತ್ತಣ್ಣನಿದ್ದ ಮನೆಯಿಂದ ಕಾಲು ಮೈಲು ದೂರದಲ್ಲಿ ಸ್ವಂತ ಮನೆಯನ್ನು ಕಟ್ಟಿಕೊಂಡು, ವಾಸ ಮಾಡುತ್ತಿದ್ದನು ಈತನ ಪತ್ನಿಯು ಆ ದಿನ ನಾಡು ಮಂದಿನ ಕೋಲಿಗೆ ಹೋಗಲು ಹೊರಟಿದ್ದಳು. ಈಕೆಯು ಹತ್ತಿರ ತನಗೆ ಬೇಕಾದಷ್ಟು ನಗನಾಣ್ಯಗಳಿದ್ದವು ಅಂದು ಪೂವಮ್ಮನು ಸಹ ನಾಡುಕೋಲಿಗೆ ಹೋಗಲು ಸಿದ್ಧಮಾಡುತ್ತಿದ್ದಳು ಆದರೆ ತನ್ನ ಸವತಿಯಂತೆ ತಾನು ಸಹ ಹೆಚ್ಚು ಬೆಲೆಯುಳ್ಳ ಆಭರಣಗಳನ್ನು ಧರಿಸಿಕೊಂಡು ಹೋಗಲು ತನ್ನ ದಾರಿದ್ರ್ಯ ದೇವತೆಯು ಅನುಕೂಲಿಸದೆ ಇರುವುದನ್ನು ನೆನೆದು, ಹೇಗಾದರೂ ನಾಡಿನವರ ಮುಂದೆ ತನ್ನ ಸವತಿಗಿಂತಲೂ ತಾನು ಹೆಚ್ಚು ಶೋಭಿಸಬೇಕೆಂದು ಯೋಚಿಸಿ ತಮ್ಮ ನೆರೆಮನೆಯವನಾಗಿದ್ದ ಗಣಪತಿಯ ಮನೆಯಿಂದ ಕೆಲವು ಒಡವೆಗಳನ್ನು ತರಲು ತನ್ನ ಪತಿಗೆ ಹೇಳಿದ್ದಳು. ಹೀಗೆ ಮುತ್ತಣ್ಣನು ತಂದು ಕೊಡದೆ ಇದ್ದುದೇ ಈಕೆಯ ದುಃಖಕ್ಕೆ ಕಾರಣವಾಗಿತ್ತು.

ಇದನ್ನು ತಿಳಿದು ಮುತ್ತಣ್ಣನು ನಾನಾ ವಿಧವಾಗಿ ಚಿಂತಿಸಿದನು ಒಂದು ಭಾರಿ ಈಕೆಯನ್ನು ವಿದ್ಯಾ ಹೀನಳನ್ನಾಗಿ ಮಾಡಿದ ಈಕೆಯ ತಂದೆ ತಾಯಿಗಳನ್ನು ನಿಂದಿಸಿದನು. ವಿದ್ಯಾವಂತಳಾಗಿದ್ದರೆ ತನ್ನಲ್ಲಿದ್ದ ಚಿನ್ನದ ಸರಪಣಿಯಿಂದಲೂ, ಹೊಸ ಬಿದ್ದರ್ ಸೀರೆಯಿಂದಲೂ ತೃಪ್ತಿ ಹೊಂದದೆ ಪರರ ಒಡವೆಗಳಿಗೆ ಆಸೆ ಪಡುತ್ತಿದ್ದಳೇ? ಆದರೆ ಮುತ್ತಣ್ಣನು ತನ್ನ ಅರ್ಧಾಂಗಿಯ ಮನಸನ್ನು ನೋಯಿಸಲು ಇಷ್ಟಪಡಲಿಲ್ಲ ಆಕೆಯ ಮೇಲೆ ಪೂರ್ಣ ಪ್ರೀತಿಯುಳ್ಳವನಾಗಿದ್ದನು. ಆದುದರಿಂದ ಗಣಪತಿಯ ಮನೆಗೆ ಹೋಗಿ ಈಕೆಗೆ ಬೇಕಾದ ವಸ್ತುಗಳನ್ನು ತಂದು ಕೊಡುವುದಾಗಿ ಯೋಚಿಸಿ, ಕೂಡಲೇ ಅಲ್ಲಿಗೆ ಹೊರಟನು. ಇವನು ಸಜ್ಜನನೂ, ನಂಬಿಗಸ್ತನೂ ಆದುದರಿಂದ ಇವನ ಪತ್ನಿಗೆ ಬೇಕಾದ ವಸ್ತುಗಳೆಲ್ಲವೂ ಗಣಪತಿಯಿಂದ ದೊರಕಿತು.

ಹೀಗೆ ತಂದ ಕಾಶ್ಮೀರ್ ಸೀರೆಯನ್ನೂ, ಒಂದು ಬಂಗಾರದ ನೆಕ್‌ಲೇಸನ್ನೂ, ಒಂದು ಪೊಡೊಂಬನ್ನೂ, ಒಂದು ಪುಶ್ಯರಾಗದ ಓಲೆಯನ್ನೂ ಧರಿಸಿ, ಪೂವಮ್ಮನು ತನ್ನ ಸವತಿ ಮೊದಲಾದವರೊಂದಿಗೆ ತನ್ನ ಪತಿ ಸಮೇತ ನಾಡು ಮಂದಿಗೆ ಹೊರಟಳು. ಅಲ್ಲಿ ಆಟ ನೋಟಗಳು ತೀರುತ್ತಲೇ ಸಾಯಂಕಾಲವಾಯಿತು, ಎಲ್ಲರೂ ಹಿಂದಿರುಗಿದರು ಮುತ್ತಣ್ಣನು ತನ್ನ ಪತ್ನಿಯೊಡಗೂಡಿ ಬೇಗ ಬೇಗನೆ ನಡೆಯುತ್ತಿದ್ದನು. ಕೊನೆಗೆ ತನ್ನ ಅಣ್ಣನ ಮನೆಯನ್ನು ದಾಟಿ ಒಂದು ಕಾಲುದಾರಿಗಾಗಿ ತನ್ನ ಭವನಕ್ಕೆ ಹೋಗುತ್ತಿದ್ದನು. ಈ ದಾರಿಯ ಎರಡು ಪಕ್ಕದಲ್ಲಿಯೂ ಎತ್ತರವಾದ ದಿಣ್ಣೆಗಳಿದ್ದುವು ಸುಮಾರು ಆರೂವರೆ ಗಂಟೆ ಸಮಯವಾಗಿದ್ದಿತು. ಸೂರ್ಯನು ಅಸ್ತಮಯವಾಗಿದ್ದನು. ಭೂಮಂಡಲವೇ ನಿಶಬ್ದವಾಗಿದ್ದಂತೆ ತೋರುತ್ತಿತ್ತು. ಆ ವೇಳೆಯಲ್ಲಿ 'ಹಿಡಿಯಿರಿ' ಎಂಬ ಧ್ವನಿಯು ದಂಪತಿಗಳಿಬ್ಬರಿಗೆ ಕೇಳಿಸಿತು ಆ ಧ್ವನಿಯು ಕರೆ ತಿರುಗುವಷ್ಟರೊಳಗೆ ನಾಲ್ವರು ವೇಷಧಾರಿಗಳು ದಾರಿಯ ಬದಿಯ ದಿಣ್ಣೆಯಿಂದ ಹಟ್‌ಯೊಂದು ಹಾರಿ ಈ ದಂಪತಿಗಳಿಬ್ಬರನ್ನು ಬಂಧಿಗಳಾಗಿ ಮಾಡಿದರು. "ಪ್ರಾಣದ ಮೇಲೆ ಆಸೆ ಇದ್ದರೆ ಕೂಗಬೇಡಿ; ಕೂಗಿದರೆ ನಿಮ್ಮನ್ನು ಯಮಲೋಕಕ್ಕೆ ಈಗಲೇ ಕಳುಹಿಸುತ್ತೇವೆ" ಎಂದು. ವೇಷಧಾರಿಗಳು ತಮ್ಮ ಕತ್ತಿಗಳನ್ನು ಇವರ ಮುಖದ ಮುಂದೆ ತೋರಿಸಿ, ಹೇಳಿದರು. ಮುತ್ತಣ್ಣನೂ, ಅವನ ಪತ್ನಿಯೂ ಯಾವ ಉಪಾಯವೂ ತೋಚದವರಾದರು. ವೇಷಧಾರಿಗಳು ಇವರಿಬ್ಬರ ಕಣ್ಣುಗಳನ್ನು ಬಟ್ಟೆಗಳಿಂದ ಕಟ್ಟಿ ಒಬ್ಬೊಬ್ಬರನ್ನು ಒಂದೊಂದು ಮರಕ್ಕೆ ಕಟ್ಟಿದರು. ಕೂಡಲೆ ಪೂವಮ್ಮನ ಆಭರಣಗಳೆಲ್ಲವನ್ನೂ ಅಪಹರಿಸಿಕೊಂಡು ಓಡಿ ಹೋದರು. ಇಷ್ಟೂ ಬರೇ ಮೂರು ನಿಮಿಷದಲ್ಲಿ ನಡೆದು ಹೋಯಿತು!

ಈ ವೇಷಧಾರಿಗಳು ನಾಡುಕೋಲಿನಲ್ಲಿ ಪೂವಮ್ಮನ ಆಭರಣಗಳನ್ನು ನೋಡಿ ಅವುಗಳನ್ನು ಅಪಹರಿಸಬೇಕೆಂದು ಯೋಚಿಸಿ, ಕೋಲು ಹಬ್ಬ ತೀರುವುದಕ್ಕೆ ಕೊಂಚ ಮುಂಚೆಯೇ ಬಂದು ತಮ್ಮ ವೇಷವನ್ನು ಬದಲಾಯಿಸಿಕೊಂಡು ದಾರಿಯಲ್ಲಿ ಹೊಂಚುಹಾಕಿ ಅವಿತುಕೊಂಡಿದ್ದರು. ಇವರು ಓಡಿಹೋದ ಶಬ್ದವನ್ನು ಕೇಳುತ್ತಲೇ ಮುತ್ತಣ್ಣನು ಸಹಾಯಕ್ಕೆ ಕೂಗಿದನು. ಕೂಗನ್ನು ಕೇಳಿ ಇವನ ತಂದೆಯು, ಆಳುಗಳ ಸಮೇತ ಓಡಿ ಬಂದು ಇವರನ್ನು ಕಟ್ಟಿದ ಹಗ್ಗದಿಂದ ಬಿಡಿಸಿ ಮನೆಗೆ ಕರೆದುಕೊಂಡು ಹೋದನು. ಆಳುಗಳು ಆಭರಣಗಳನ್ನು ಅಪಹರಿಸಿದ ಕಳ್ಳರನ್ನು ನಾನಾದಿಕ್ಕುಗಳಲ್ಲಿ ಹುಡುಕಿದರು. ಎಲ್ಲಿಯೂ ಸಿಗಲಿಲ್ಲ.

ಮಾರನೆಯ ದಿನ ಮುತ್ತಣ್ಣನು ಪೋಲೀಸು ಸ್ಟೇಶನ್ನಿಗೆ ಹೋಗಿ ಪಿರ್ಯಾದಿಕೊಟ್ಟನು. ಪೋಲೀಸಿನವರಿಂದಲೂ ಕಳ್ಳರ ಪತ್ತೆ ಆಗಲಿಲ್ಲ. ಈಗ ಗಣಪತಿಯ ಒಡವೆಗಳನ್ನು ಹಿಂದಕ್ಕೆ ಕೊಡುವ ಬಗೆಯೆಂತು? ಗಣಪತಿಯಂತೂ 'ಶೈಲಕ್' (Shylock) ನ ಹಿರಿಯ ಸಹೋದರನಾಗಿದ್ದನು. ಇದೇ ಒಳ್ಳೆಯ ಸಮಯವೆಂದು ನೆನೆಸಿ, ಆ ಒಡವೆಗಳ ಒಟ್ಟು ಕ್ರಯವು 500 ರೂಪಾಯಿಯಾಗುವುದಾದರೂ ಅವುಗಳ ಬೆಲೆ 1000 ರೂಪಾಯಿಗಿಂತ ಮಿಗಿಲೆಂತಲೂ, ಆ ಹಣವನ್ನು ಕೂಡಲೆ ಕೊಡದಿದ್ದರೆ ಕ್ರಿಮಿನಲ್ ಮೊಕದ್ದಮ್ಮೆ ಮಾಡುತ್ತೇನೆಂತಲೂ, ಮುತ್ತಣ್ಣನಿಗೆ ಇವನು ಹೇಳತೊಡಗಿದನು. ಈ ದಿಕ್ಕಟ್ಟಿನಲ್ಲಿ ಮುತ್ತಣ್ಣನಿಗೆ ದಾರಿತೋರಲಿಲ್ಲ. ತನ್ನಲ್ಲಿದ್ದ ಕಿಂಚಿತ ಒಡವೆಗಳನ್ನು ಮಾರಿ ಕೊಂಚ ಹಣವನ್ನು ವಾವತಿಮಾಡಿದನು. ಬಾಕಿ ಹಣಕ್ಕೆ ಕರಾರು ಬರೆದುಕೊಟ್ಟನು. ಒಂದು ವರ್ಷವಾಯಿತು. ಹಣದ ಬಡ್ಡಿ ಏರಿತು; ಮುತ್ತಣ್ಣನಿಗೆ ಸಾಲ ತೀರಿಸುವ ಶಕ್ತಿ ಇಲ್ಲದಾಯಿತು ಗಣಪತಿಯು ಇವನ ಆಸ್ತಿಯೆಲ್ಲವನ್ನೂ ಜಪ್ತಿಮಾಡಿಸಿದನು. ಇದರಿಂದಲೂ ಹಣವು ಭರ್ತಿಯಾಗದೆ ಕೊನೆಗೆ ಮುತ್ತಣ್ಣನಿಗೆ ಜೈಲು ಪ್ರಾಪ್ತಿಯಾಯಿತು.

ಕೆಲವು ತಿಂಗಳ ಹಿಂದೆ ಪೂವಮ್ಮನನ್ನು ನೋಡಿದೆನು. ಈಗ ಮುತ್ತಣ್ಣನ ಅಣ್ಣನ ಮನೆಯಲ್ಲಿ ಜೀವಿಸುತ್ತಾಳೆ. "ಪರರ ಒಡವೆಗಳನ್ನು ತೊಡುವ ಆಶೆಯಿಂದಲ್ಲವೇ ನನ್ನ ಪ್ರಾಣೇಶ್ವರನನ್ನು ಈ ಸಂಕಟಕ್ಕೆ ಈಡು ಮಾಡಿದೆನು. ಎಲೈ, ದುರಾಶೆ ದೇವತೆಯೇ, ನನ್ನಂತೆ ಬೇರೆ ಎಷ್ಟು ಸ್ತ್ರೀಯರನ್ನು ಹೀಗೆ ದುಃಖ ಸಾಗರದಲ್ಲಿ ಮುಳುಗಿಸಿದೆ 'ಸಾಲ ಮಾಡಿ ತಿಂದ ಚಪಾತಿಗಿಂತಲೂ ದುಡಿದು ತಿಂದ ಅವಲಕ್ಕಿಯೇ ಮೇಲು' ಎಂಬಂತೆ ಪರರ ಒಡವೆಗಿಂತಲೂ ತಾವು ಕಷ್ಟಾರ್ಜಿತದಿಂದ ಸಂಪಾದಿಸಿದ ನಾರು ಸೀರೆಯೇ ತಮ್ಮ ಶರೀರದಲ್ಲಿ ಹೆಚ್ಚು ಶೋಭಿಸುವುದು ಎಂದು ಈಗ ತಿಳಿದೆನು. ಎಲೈ ಸಹೋದರಿಯರೇ, ಒಬ್ಬಳು ತನ್ನ ಪತಿವ್ರತಾ ಧರ್ಮದಿಂದಲೂ, ತನ್ನ ನಿರ್ಮಲ ಹೃದಯದಿಂದಲೂ, ತನ್ನ ಪತಿಯು ಗಳಿಸಿದ ವಸ್ತುಗಳಲ್ಲಿ ತೃಪ್ತಿ ಹೊಂದುವುದರಿಂದಲೂ ಈ ಲೋಕದಲ್ಲಿ ದೇವರ ಪ್ರೀತಿಗೂ, ಮನುಷ್ಯರ ಪ್ರೇಮಕ್ಕೂ ಒಳಗಾಗುವಳಲ್ಲದೆ ಪರರ ಒಡವೆಗಳನ್ನು ಧರಿಸುವುದರಿಂದಲ್ಲ" ಎಂದು ಎಲ್ಲರಲ್ಲಿಯೂ ಶೋಕಿಸುತ್ತಿದ್ದಳು

ಇದನ್ನು ಕೇಳಿದ ಕೊಡಗಿನ ಸಹೋದರಿಯರನೇಕರು ಪರರ ವಸ್ತುಗಳಿಗೆ ಆಶೆ ಪಡುವ ಭ್ರಾಂತಿಯನ್ನು ಇನ್ನಾದರೂ ಬಿಡುವರೇ?

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗರೂ. ಕೊಡಗೇತರರೂ.

ಅಯ್ಯಾ,

ಸರ್ಕಾರವೆಂದರೆ ಜನಸಮುದಾಯದ ಸುಖ ಸೌಕರ್ಯಗಳನ್ನು ಕಾಪಾಡುವುದಕ್ಕೋಸ್ಕರ ಜನರಿಂದ ಸ್ಥಾಪಿಸಲ್ಪಟ್ಟ ಒಂದು ಸಂಸ್ಥೆಯಾಗಿದೆ. ಈ ಸಂಸ್ಥೆಯು ನಾನಾ ರೂಪವಾದ ಕಾರುಬಾರುಗಳನ್ನು ನಡೆಸಲು ಬೇಕಾದಷ್ಟು ಹಣವೂ, ಯೋಗ್ಯರಾದ ನೌಕರರೂ ಬೇಕಾಗುತ್ತೆ. ಹಣವನ್ನು ಜನರು ಕಂದಾಯ ಕಾಣಿಕೆ ರೂಪದಿಂದಲೂ, ಇನ್ನು ನಾನಾ ತರಹದ ರೂಪದಿಂದಲೂ ಒದಗಿಸಿಕೊಡುತ್ತಾರೆ. ಆದರೆ ಸರ್ಕಾರದ ನಾನಾ ತರಹದ ಕೆಲಸ ಕಾರ್ಯಗಳನ್ನು ಸರಿಯಾಗಿ ನಡೆಸುವುದಕ್ಕೆ ಆಯಾ ಉದ್ಯೋಗಗಳಿಗೆ ಯೋಗ್ಯರಾದ ಜನರನ್ನು ದೇಶದ ವಿದ್ಯಾವಂತರಾದವರ ಸಮೂಹದಿಂದ ಆರಿಸಿ ತೆಗೆದುಕೊಳ್ಳುವುದು ಸರ್ಕಾರ ಭಾರವನ್ನು ವಹಿಸಿರತಕ್ಕ ಮುಖ್ಯಾಧಿಕಾರಿಗಳಿಗೆ ಸೇರಿರುತ್ತದೆ. ಇಂಥ ಮುಖ್ಯಾಧಿಕಾರಿಗಳು ಸರ್ಕಾರದ ನಾನಾ ಶಾಖೆಗಳನ್ನು ಸರಿಯಾಗಿ ನಡಿಸಿ, ಜನರಿಗೆ ಅತೃಪ್ತಿ ಉಂಟಾಗದಂತೆ ನೋಡಿಕೊಳ್ಳಬೇಕಾದ ಕಾರಣ ಅವರು ಆಯಾ ಉದ್ಯೋಗಗಳಿಗೆ ತಕ್ಕವರಾದವರನ್ನೇ ಆರಿಸುತ್ತಾರೆ. ಅವರ, ಮುಖ್ಯವಾಗಿ ಸರ್ಕಾರಿ ನೌಕರಿಗೆ ಬರುವವರಿಗೆ ತಾನು ವಹಿಸಿಕೊಳ್ಳಲು ಇಚ್ಛಿಸುವ ಉದ್ಯೋಗದಲ್ಲಿ ಪರಿಪೂರ್ಣ ಜ್ಞಾನವೂ, ಅದನ್ನು ನಿರ್ವಹಿಸಲಿಕ್ಕೆ ತಕ್ಕಷ್ಟು ತ್ರಾಣವೂ (ಶರೀರ ಧಾರ್ಢ್ಯ) ಗುಣ ನಡತೆಯೂ, ಆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಪಂಬೂಪ ಸುಪ್ರಸಿದ್ಧ ದೇಶೀಯ ವಿಮೋ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,

ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಕೋತೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟ ಸರ್ಕಾರದ ಭದ್ರತೆಯಿಂದ ಜೀತೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3 ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಅಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೆ ಮೊಬಲಗನ್ನು ಲಾಭ ಸಹಿತ ವಾಪತಿಕೊಡುವುದರಲ್ಲಿ ಹೆಸರುಗೊಂಡಿದೆ

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡಿಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಇಂದು ಭಾಗಗಳಾಗಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವರ್ಗದವರಿಗೆ ಜೋಡಿಪಾಲಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಕಂಪನ್ ಸ್ಟೋರ್,
ಮಡಿಕೇರಿ. (26—1)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಬುಧ, ವಿದ್ಯೆಯು ಇದೆಯೋ ಎಂದು ನೋಡಬೇಕೇ ಹೊರತು, ಕೇಳುವಾತರು ಜನರನ್ನೆ ಮೆಚ್ಚಿಸುವುದಕೋಸ್ಕರ ಅಯೋಗ್ಯರಾದವರನ್ನು ಆರಿಸಿದರೆ ಕಡೆಗೆ ಅಂಥ ಮುಖ್ಯಾಧಿಕಾರಿಗಳ ಸ್ಥಿತಿಯು "ಕತ್ತೆ, ಮಗ, ತಂಬೆ" ಯವರ ಕಥೆಯಂತಾಗುವುದು.

ನಮಗೆ ಬೇಕಾದದ್ದು ಸರಿಯಾದ ಸರ್ಕಾರ. ನಾವು ವರ್ಷಂಪ್ರತಿ ಕಂದಾಯ ತೆರುತ್ತಿರುವುದು. ವಿದ್ಯಾವಂತರಾದ ನಾನಾ ಕೋಮುಗಳ ಯುವಕರಿಗೆ ಸಂಬಳದ ರೂಪದ ಹಂಚುವುದಕ್ಕಲ್ಲ. ವೀರಶೈವ ಮತದವರು 50 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಕಂದಾಯ ಕೊಡುವರಾದರೆ ಇವರು ಕೊಡಗಿನಲ್ಲಿ ಇತರ [illegible] ಅನುಭವಿಸುವಷ್ಟೇ ಸುಖ ಸೌಕರ್ಯ, ಶಾಂತಿ, ಐಶ್ವರ್ಯಗಳನ್ನು ಸರ್ಕಾರದಿಂದ ಅನುಭವಿಸುವುದಿಲ್ಲವೇ? ಇದರಲ್ಲೇನಾದರು ಸರ್ಕಾರವು ಭಿನ್ನ ಭೇದವನ್ನು ತೋರಿಸಿದುದಾದರೆ ಕವಿ ಕಶನರ್ ಸಾಹೇಬರಿಗೆ ಡೆಪ್ಯೂಟೇಶನ್ ಹೋಗುವುದರಲ್ಲೂ, ಮ. ರಾ. ಶ್ರೀ ಮಹಾಬಲಯ್ಯ ಬಿ. ಎ., ಬಿ. ಎಲ್. (ಯು. ಟಿ. ಸಿ.) ಯವರು ಪತ್ರಿಕೆಯಿಂದ ಕೊಡಗಿನ ಕೊಡಗೀತರಿಗೆ ಬಹಿರಂಗವಾಗಿ ಸಭೆ ಸ್ಥಾಪಿಸಲು ಕೂಗಿಕೊಳ್ಳುವುದರಲ್ಲೂ ಅರ್ಥವಿರಬಹುದು . ...

. ...

.. .. ಪೂರ್ವದಲ್ಲಿ ಕೊಡಗು ರಾಜನ ಕಾಲದಲ್ಲಿ ಶಿವಾಚಾರಿಗೆಲ್ಲಾ [illegible], ಜಂಗಮರುಗಳನ್ನು ಕೊಟ್ಟು ಅಲ್ಲಲ್ಲಿ ಮಠ ಸ್ಥಾಪನೆ ಮಾಡುವಾಗ್ಯೆ ಕೊಡವರು [illegible] ಯೋಗ್ಯರಾದರನು ಆರಿಸುವಾತರನಾಗಿ ಎಂದರೆ ಸರ್ಕಾರದವರು ಅವರ ಯೋಗ್ಯತೆಯನ್ನು ಅಲ್ಲಗಳೆದು ಕೊಡಗರ ಪಕ್ಷವನ್ನೇ ವಹಿಸ ತ್ಯಾಗರೋ? ಮ. ರಾ. ಶ್ರೀ ಯನ್ ಮುದ್ದಪ್ಪ ಬಿ. ಎ. ಬಿ. ಎಲ್. ನವರು ಕೊಡಗರೇ? ಕೆ ನಾರಾಯಣರಾಯರು ಕೊಡಗರೇ? ಕೊಡಗು ಕಮಿಶನರ್ ಸಾಹೇಬರು ಕೊಡಗು ಸಭೆಯ ಪ್ರೆಸಿಡೆಂಟರೋ? ಅಲ್ಲ ಅವರು ಕೊಡಗರಾದ ಡಿ. ಮೇ. ಸಾಹೇಬರ ಹೇಳಿಕೆಯಲ್ಲಿ ಇರುವವರೇ? ಇಲ್ಲದಿದ್ದರೆ ಮಹಾಬಲಯ್ಯನವರು ಕೊಡಗೀತರರನ್ನು ಎಚ್ಚರಿಸಿ ಕೊಡಗೀತರರ ಸಭೆ ಸ್ಥಾಪಿಸಲು ಕೂಗಿಕೊಳ್ಳುವುದರ ಅರ್ಥವೇನು?

ಸರ್ಕಾರದ ಉದ್ಯೋಗಗಳಲ್ಲಿ ಭಾಗ [illegible] ವೇಶದಲ್ಲಿ 'ಅನಾಮಧೇಯ'ರಾಗಿಲ್ಲದೆ ಇರಬೇಕಾದರೆ ನೀವ ಯಾವ ಉದ್ಯೋಗವನ್ನಾದರೂ ಕೈಕೊಳ್ಳಲು ತಯಾರಾಗಿದ್ದೀರ. ಈ ಮೊದಲು ಪೋಲೀಸ್ ಸಬ್ ಇನ್ಸ್‌ಪೆಕ್ಟರರ ಉದ್ಯೋಗಕ್ಕೆ [illegible] ನಡೆದ ಎರಡು ಚುನಾವಣೆಗಳಲ್ಲಿ [illegible] ಯುವರಾಗಲೀ ಏತಕ್ಕೆ ಬೇಡಾದಲ್ಲಿ? ಅದು ಸರ್ಕಾರಿ ಉದ್ಯೋಗವಲ್ಲವೇ? ಅದು ನಿಮ್ಮ ಮಾನವನ್ನು ಉಳಿಸುವುದಿಲ್ಲವೇ? ಆಗ ಆ ಉದ್ಯೋಗವು ನಿಮಗೆ ಅಯೋಗ್ಯವಾಗಿ ಕಂಡಿರಬಹುದು. ಹಾಗೆಯೇ ಈಗ ಈ ಉದ್ಯೋಗಕ್ಕೆ ನೀವು ಯೋಗ್ಯರಲ್ಲದವರಾಗಿ [illegible] ಕಂಡರಬಹುದು.

ಅನುಭವಸ್ಥರೆಂಬ [illegible] ಹೇಳುವುದರಲ್ಲಿ ಅರ್ಥವಿದೆ. ಆದರೆ ಚುನಾವಣೆಯ ವಿಷಯ ಪ್ರಕಟಣೆಯಾದುದರಿಂದ ನೀವು ಸುಮ್ಮನಿದ್ದಿರೇಕೆ? ಪ್ರಕಟನೆಯ ಕಡತು ಮೇಲೆ ಎಲ್ಲಾ ಯೋಗ್ಯತೆಗಳೂ ಇದಕ್ಕ [illegible] ನನ್ನು ಬಿಟ್ಟು, ತನ್ನ ದೇಶವನ್ನು ಬಿಟ್ಟು ಪರದೇಶದಲ್ಲಿ [illegible] ವೃತ್ತಿಯನ್ನು ನಡೆಸುತ್ತಿರುವ [illegible] ಕನಸೋ ವಸಂತ ಹೋಬಳಿ ಗೋಪಾಲಪುರದಲ್ಲಿದ್ದುಕೊಂಡು ಮದ್ರಾಸ್ ಹೈಕೋರ್ಟಿನಲ್ಲಿ ಎಪ್ಪಂಟಿಸ್ ಕರಬೇತನ್ನು ಹೊಂದುತ್ತಿರುವ ಮಲ್ಲಪ್ಪನವರಿಗಾಗಲೀ ಕೊಡಬೇಕಾಗಿತ್ತು ಎಂಬುದ ಅರ್ಥವೇನು?

'ಯೋಗ್ಯರಾದ ವಿದ್ಯಾರ್ಥಿ [illegible] ಟಿಪ್ಪು [illegible] ಇನ್ಸ್‌ಪೆಕ್ಟರ್ [illegible] ಈ ಮಹಾ ಪುತ್ರನ್ನ [illegible] [illegible]

ಮೃತ [illegible] ಕೆಲಸದಲ್ಲಿದ್ದ [illegible] ಗೆ ಸಹಾಯ ಮಾಡ [illegible] ಹೇಗೆ [illegible]

ಬಿದ ಕಳ್ಳತನವನ್ನೋ, ಅಥವಾ ಕೊಲೆಗಾರನನ್ನೋ ದಯ ತೋರಿಸಿ ಬಿಟ್ಟುಬಿಡ ಬಹುದಾದಲೇ?

ಮಲ್ಲಪ್ಪನವರಿಗೆ ತಾವು ಕಲಿತ ವಿದ್ಯೆಯಲ್ಲಿ [illegible] ಯೋಗ್ಯತೆ ಇದ್ದರೆ ಇವರಾಗಲೀ, ಇವರ ಸಂಗಡದವರಾಗಲೀ ಈ ಉದ್ಯೋಗವು ಸಿಕ್ಕದಕ್ಕೆ [illegible] ಕಾರಣವಿಲ್ಲ. ಇವರ ಸಂಗಡದವರೆಲ್ಲಾ ತನ್ನ [illegible] ಈ ಉದ್ಯೋಗದಿಂದ [illegible] ದಾಗಿದ್ದ ಉತ್ಪತ್ತಿಗಿಂತಲೂ ಹೆಚ್ಚೇ ಸಿಕ್ಕಬಹುದು. ಇವರ ಸಂಗಡದಲ್ಲಿ ಇವರೊಬ್ಬರೇ [illegible] ಇವರ ಸಂಗಡದ ಸೇವೆಯನ್ನು ಬಹಳವಾಗಿ ಮಾಡಿ ಜನ ಪ್ರೀತಿಯನ್ನು ಸಂಪಾದಿಸಬಹುದು.

ಮ. ರಾ. ಶ್ರೀ ಮಹಾಬಲಯ್ಯನವರು 'ತ್ರಿವಿಧ' ರಾದಲ್ಲಿ ಘಟ್ಟಿಗನ್ನು [illegible] ಆದರೆ [illegible] ಈ ಉದ್ಯೋಗದ ತೊಂದರೆ? ಈ ಉದ್ಯೋಗವನ್ನು ಅಪಹರಿಸಲಿಕ್ಕೆ ಘಟ್ಟದರೇ ಅಲ್ಲ ನಿಜವಾಗಿಯೂ ಘಟ್ಟಿಗರಾದವರೇ? [illegible] ಉದ್ಯೋಗಗಳಿಗೆ [illegible] ಗೆ [illegible] ಮನಸ್ಸಾದವನ್ನು [illegible] ಸಮಾಧಾನವಾಗಿ ನಿಸ್ಸಕೊಂಡಿರೆ.

'ಯುವಕ

ಅರಮನೆ ಬಡೇರ

[illegible]

ಕಳೆದ ಏಳೆಂಟು ವರ್ಷಗಳಿಂದ ಮಡಿಕೇರಿಯಲ್ಲಿರುವ ಅರಮನೆಯನ್ನು ರಿಪೇರಿ ಮಾಡಬೇಕೆಂದು ಸರ್ಕಾರದವರು [illegible] [illegible]

[illegible]

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897)

ಹಿಂದೂಸ್ಥಾನದಲ್ಲಿ ಹಳೇದು, ಬಲವುಳ್ಳದ್ದೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು— ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು— 152–3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

52–7

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[illegible] ಬಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತು ಆದ ಫೌಂಟೆನ್ ಪೆನ್‌ಗಳು.

[illegible] ಫೌಂಟನ್ ಪೆನ್ 1ಕ್ಕೆ	ರೂ 3 0 0
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 3 0
„ [illegible] ಕ್ಯಾಪ್ ಪೆನ್ 1ಕ್ಕೆ	3 8 0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್, [illegible] ಕಲರ್ ಫೌಂಟನ್ ಪೆನ್ 1ಕ್ಕೆ	3 11 0
„ [illegible] ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4 [illegible] 0
„ ಸಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಬ್ರೌನ್ ಕಲರ್ ಫೌಂಟನ್ ಪೆನ್ 1ಕ್ಕೆ	[illegible] 6 0
[illegible] ಸ್ವಾನ್ ಫೌಂಟನ್ ಪೆನ್ 1ಕ್ಕೆ	10 8 0
[illegible] ಪೆನ್ 1ಕ್ಕೆ	11 6 0, & 20 10 0
[illegible] ಫೌಂಟನ್ ಪೆನ್ 1ಕ್ಕೆ	[illegible] 0, & [illegible] 12
[illegible] ಫೌಂಟನ್ ಪೆನ್ 1ಕ್ಕೆ	[illegible] 0, & 6 12 [illegible]
[illegible] ಫೌಂಟನ್ ಪೆನ್ 1ಕ್ಕೆ	8 [illegible] 0, & [illegible] 10 0

ಟೈಂಪೀಸ್ [illegible]

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್	1ಕ್ಕೆ 3 [illegible]
ಜರ್ಮನ್ ಮೇಡ್ ಸಣ್ಣ ಟೈಂಪೀಸ್	1ಕ್ಕೆ 2 [illegible]
ಲಿಗಲಿಯಾ ಆಕಾರಂ ಟೈಂಪೀಸ್ 1ಕ್ಕೆ 6 [illegible]	[illegible] 6 [illegible]
ಲಿಗಲಿಯಾ ಸ್ವಾಸ್ಟಿಕ [illegible] ಟೈಂಪೀಸ್ 1ಕ್ಕೆ	[illegible]
ಲಿಗಲಿಯಾ ಆಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನವು	1ಕ್ಕೆ 8 10 [illegible]
ಬಿಗ್‌ಬೆನ್ ಆಲಾರಂ ಟೈಂಪೀಸ್	1ಕ್ಕೆ [illegible] 6 [illegible]
ಬಿಗ್‌ಬೆನ್ ಆಲಾರಂ [illegible] ಟೈಂಪೀಸ್	1ಕ್ಕೆ 13 [illegible]
[illegible] ಖಾತ್ರಿಯುಳ್ಳ ಬಂದೋಬಸ್ತು ಆದ [illegible] ವಾಚ್	1ಕ್ಕೆ [illegible]
ಮಿಹೋ ನಮೂನೆಯಲ್ಲಿ [illegible] ಪಾಕೆಟ್ ವಾಚ್	1ಕ್ಕೆ 12 [illegible]
ನಿಕ್ಕಲ್ ಕೇಸ್ ಸಿಲಿಂಡರ್ ಮುತೆಂಬ [illegible] ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12 8 [illegible]



ಇಲ್ಲಿ ನಮೂದಿ [illegible] ವಾದ ಟೈಂ [illegible] 1ಕ್ಕೆ 3–6–0 ವಾ [illegible] ಕಿಂಗ್ ಪೋಸ್ಟೇಜು [illegible] ಬಾಯಿಸಾ.

ಮನಿ ಯಾರ್ಡರ್ ರವಾನಿಸ ವಿಳಾಸ — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, [illegible]

52–14

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ
ಶೇರ್ ಬಂಡವಾಳ	—	40,000
ವಸೂಲಾದ ಶೇರ್ ಮೊಬಲಗು	—	26 800
ಒಟ್ಟು ಬಂದ ಠೇವಣಾತಿ	—	2 50 301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೊರತಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಡುತ್ತಾರೆ

ಪ್ರೆಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್	ಮನೆಯಪ್ಪಂಡ ಬೆಳ್ಯಪ್ಪ [illegible]

ಸೆಕ್ರೆಟರಿ

ಸಿ ಯನ್ ವೆಂಕಪ್ಪಯ್ಯನವರು ಬಿ ಎ, ಬಿ ಎಲ್

ತಾರೀಖು 1—7—1931

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52—41 **ಗಿರಿಗಾಂವ, ಮುಂಬಯಿ.**

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಲಾಗಿದೆ.

ಏಜೆಂಟರುಗಳು

ಉತ್ತರ ಕೊಡಗಿಗೆ ಮ॥ [illegible] ಮಾದಯ್ಯನವರು,

ದಕ್ಷಿಣ ಕೊಡಗಿಗೆ—ಮ॥ ಸೋಮೆಯಂಡ ಅಪ್ಪಯ್ಯನವರು
ಮರನಾಡು—ಮ॥ [illegible] ಅಪ್ಪಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮ॥ ಮಂಡೇಪಂಡ ಸೋಮಯ್ಯನವರು (ಖಾದಿಭಂಡಾರ)
ನಾಪೋಕ್ಲು—ಎಮ್. ಆರ್ ವೆಂಕಪ್ಪಯ್ಯನವರು.
ಶ್ರೀಮಂಗಲ ನಾಡು—ಮ॥ ಅಪ್ಪಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮ॥ [illegible]
ಅಮ್ಮತ್ತಿ—ಸಿದ್ದಾಪುರ—ಮ॥ [illegible]
ಪೊನ್ನಂಪೇಟೆನಾಡು—ಮ॥ ಪಿ. ಜಿ. ಮುದ್ದಪ್ಪಯ್ಯನವರು, ಮತ್ತು ಆರಮಣಮಾಡ ಪಿ ಕಾರ್ಯಪ್ಪನವರು
ಕುದಿಕೇರಿ & ತಿತಿಮತ್ತಿ—ಮ॥ [illegible] ಮಾದಪ್ಪಯ್ಯನವರು.
ಸುಂಟಿಕೊಪ್ಪ—ಮ॥ ಅಪ್ಪನೆರವಂಡ [illegible]

ಸೂಚನೆ—ಪ್ರಿಂಟು ಆದ ರಶೀತಿ ಹೊಂದಿರುವವರಲ್ಲದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ

ಮ್ಯಾನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ **ವರ್ಷದ ಫಲಿತಾಂಶಗಳು.**

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ	ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ	ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1 78 322 ಜನರಿಗೆ 38ಕೋಟಿ ರೂ

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22·4ರಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾವೆ

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀ [illegible] ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿ [illegible] ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖ್ಲೆಗಳಿಂದಲೂ [illegible] ದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು,

ಅಥವಾ [illegible] ಈ ಕೆಳಗಿನ ಯಾವ ಆಫೀಸುಗಳಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟ [52—]

ಮಲೇರಿಯಾ ಜ್ವರಕ್ಕೆ ಮಲೇರಿಯಾನ

ಕೊಡಗಿನ ಗುಡುಗುಡು ಎಂಬ ಚಳಿಜ್ವರಕ್ಕೂ ಸುಡುಸುಡುವ ಬಿಸಿಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿವಿರಾ? ಇಗೋ ರಾಜ ಮದ್ದು **ಮಲೇರಿಯಾನ**ವು ಸಂಪೂರ್ಣ ಜ್ವರವನ್ನು ಗುಣಪಡಿಸಿ ಗಡ್ಡೆಯನ್ನು ಖಾತ್ರಿಯಿಂದ ಕರಗಿಸಿ ಬಿಡುತ್ತದೆಂದು ಸ್ಥಿರ ನಂಬು **ಕ್ರಯ ಬಾಟ್ಲಿಗೆ** 1—8 ½ ಡಜನ್ 8—8—0, 1 ಡಜನ್ 16—8—0.

ಕಂಪಾಂಡು ಸಿರಪು ಬ್ಲಟ.

ಗುರುಗುರು ಉಬ್ಬಸ ನೇವಸದ ರೋಗದಿಂದ ಕೆಟ್ಟ ಕೆಮ್ಮು ಘಟ್ಟಿಯಾಗಿ ಎಳದಾಟ ಎದೆ ಮತ್ತು ಪಾರ್ಶ್ವನೋವು ಬ್ರಾಂಕೈಟಿಸ್ ಯುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು ಕಡೆಮದ್ದಾಗಿ ಕಂಪಾಂಡು **ಸಿರಪು ಬ್ಲಟ** ಎಂಬವನ್ನು ತಕ್ಷಣ ಕರಿಸಿ ಕುಡಿಯಲಿ **ಕ್ರಯ ಬಾಟ್ಲಿಗೆ ರೂ.** 3—8—0.

ಕಂಪಾಂಡು ಸಿರಪು ಬಸಲೀನ:—ಶ್ವಾಸಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿಕೊಂಡರೆ ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು, ಕೆಮ್ಮು, ಎದೆನೋವು ರಕ್ತ ಬೀಳುವ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ರೋಗಿಗೆ ಮುಂದರಿಯದಂತೆ ಕಾಪಾಡಿ ಆರೋಗ್ಯ ಕೊಡುವುದು **ಕ್ರಯ ಬಾಟ್ಲಿಗೆ ರೂ** 3—8—0.

ಕಂಪಾಂಡು ಸಿರಪು ಸೆಬೀನ ಸೇಕುರಿ:—ಹೆಂಗಸರ ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ಬಿಳೀ ಸೆರಗೆಂಬ ರೋಗದಿಂದ ಸೊಂಟನೋವು ಕೈಕಾಲು ಬಚ್ಚಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಗೊಳಿಸಿ ಬಲಪಡಿಸುವುದು **ಕ್ರಯ ಬಾಟ್ಲಿಗೆ ರೂ.** 3—8—0.

ಕಂಪಾಂಡು ಸಿರಪು ವೆಸಿಫೂಬ.—ಪ್ರಮೇಹವೆಂಬ ಗುಪ್ತರೋಗವನ್ನು ತಡೆಕೊಂಡು ಮೂತ್ರ ಬಿಂದು ಬಿಂದುಗಳಾಗಿ ಉರಿ [illegible] ದ್ವಾರದೊಳಗೆ ಹುಣ್ಣು ವ್ರಣಗಳು ದುರ್ವಾಸನೆ ಕೂಡಿದ ಹಳದಿ ಬಣ್ಣದ ರೇಗಿಗೆ ಇತ್ಯಾದಿ ಕೆಟ್ಟ ಕಠಿಣ ರೋಗವನ್ನು ಈ ಬಲವಾದ ಸಿರಪು ಸಂಪೂರ್ಣ ಗುಣಪಡಿಸಿ ಆರೋಗ್ಯ ಕೊಡುವುದು **ಕ್ರಯ ಬಾಟ್ಲಿಗೆ ರೂ** 3—8—0.

ಶುದ್ಧ ಚಿಕಿತ್ಸಾಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಫಟ [illegible] ರ ವರೆಗೆ ಓದಿಕೊಂಡು ಬರೆಯತಕ್ಕದ್ದು ಪರೀಕ್ಷಿಸಿ ಕೊಡುವ ದೃಷ್ಟಿಚಶ್ಮೆಗಳೂ ಬಿಸಿಲಿಗೆ ಇಡತಕ್ಕ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯದಿಗೆ ದೊರಕುತ್ತವೆ

ಆರೋಗ್ಯಭಾಗ್ಯದ ರೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

52—50 **Malariana Co,** Hampankatta No 14 Mangalore	ವಿಳಾಸ —ಮಲೇರಿಯಾನ ಕಂಪೆನಿ, ಹಂಪನಕಟ್ಟೆ ನಂಬ್ರ 14 ಮಂಗಳೂರು ಪೋಸ್ಟು

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಉಪಕಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ ರೂಲ್ಸಿನ ಸಾರವಾಗಿ ತಯಾರಿಸಲ್ಪಟ್ಟಿರುವ ದಾವತಿ ಫಾರಮುಗಳೂ, ಖರಾರು ಫಾರಮುಗಳೂ ಜಮಾ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ಸಿಯರ್ ಪುಸ್ತಕಗಳೂ ರಶೀತಿ ಪುಸ್ತಕಗಳೂ ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ ಬೇಕಾದವರು ಆರ್ಡರು ಕೊಟ್ಟಲ್ಲಿ ವಿ ಪಿ ಮೂಲಕ ಕಳುಹಿಸಲಾಗುವುದು

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

Printed & published by P I Belliappa at "Kodagu" Press Mercara for "Kodagu" Ltd.

Reg. No. M. 50.
If not delivered please return to
"KODAGU" OFFICE MERCARA.

ಕೊಡಗು.

ಸರ್ವೇಷ ಭೂತದಯಯಾ ವಿದ್ಯಾ ಶೀಲ ಪ್ರಯುಕ್ತಯಾ | ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೧ನೇ ಇಸವಿ ಅಕ್ಟೋಬರ್ ತಾರೀಕು ೨೩ನೇ ಶುಕ್ರವಾರ.	ಸಂಚಿಕೆ ೩೧

Telegrams — "..."

V. Subramaniyer Jeweller,

DIAMAND MERCHANT GOLD & SILVER SMITH.

Deals in all:—
SPORTS CUPS in all prices
MEADALS in up-to date patterns
CASKETS in elegant styles

Nos. 2 & 3, Kuppumuthu st
TIRUVATESWARANPET
Post Box 423, Triplicane P. O.
MADRAS.

Deals in all:—
GEM SET JEWELS set with Diamonds Rubies etc.
GOLD ARTICLES of all patterns
SILVER WARE in latest style.

52-49



ಕೋವಿಗಳು, ಕತ್ತಿಗಳು, ಬಚೀಗಳು, ... ಮತ್ತು ... ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SON,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

41-6

ಬಾಲಾರ್ಕಮಧು.



52-41

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿಮೊಗ್ಗಾ.

ರಕ್ತ ಪುಷ್ಟಿ ಕಷಾಯ

ಚಂದನಾಸವ:— ...

ರೋಮನಾಶಿನಿ:— ...

ಮನೋಲ್ಲಾಸಿನಿ ತೈಲ:— ...

52-24

ಕೊಡಗು.

ಸನ್ ೧೯೩೧ನೇ ಇಸವಿ

ಅಕ್ಟೋಬರ್ ತಾ. ೨೩ನೇ ಶುಕ್ರವಾರ.

ಕೊಡಗಿನ ಸರ್ಕಾರದ ಹಳೇ ಸಿಲ್ಕು.

ಕೊಡಗು ಪ್ರಾಂತ್ಯಕ್ಕೆ ಕೌನ್ಸಿಲು ದೊರೆತು, ಇಲ್ಲಿಯ ಸರ್ಕಾರದ ಆದಾಯ ವೆಚ್ಚವು ಇಂಡಿಯಾ ಸರ್ಕಾರದಿಂದ ಪ್ರತ್ಯೇಕಿಸಲ್ಪಡುವ ಮೊದಲು ಇಲ್ಲಿಯ ಖಜಾನೆಯಲ್ಲಿ ಸುಮಾರು ಸಲ್ಪತು, ವರ್ಷಗಳಿಂದ ಕೂಡಿಟ್ಟ ಹಣವಾಯಿತು ಸೇರಿ ಉಳಿತಾಯವಾಗಿತ್ತೆಂತಲೂ ಅದನ್ನು ಪೂರ್ತಿಯಾಗಿ ಅಥವಾ ಅದರ ಸ್ವಲ್ಪ ಭಾಗವನ್ನಾದರೂ ಇಂಡಿಯಾ ಸರ್ಕಾರದವರು ಈಗ ಬೇರ್ಪಡಿಸಲ್ಪಟ್ಟಿರುವ ಇಲ್ಲಿಯ ಪ್ರಾಂತೀಕ ಸರ್ಕಾರಕ್ಕೆ ಕೊಡಬೇಕೆಂತಲೂ ಈ ಮೊದಲು ಕೌನ್ಸಿಲಿನಲ್ಲಿ ಜನಪ್ರತಿನಿಧಿಗಳು ಹೆಚ್ಚು ಸಾರಿ ಠರಾವು ಪಾಸುಮಾಡಿರುತ್ತಾರೆ. ಆದರೆ ಆಗ ಇಲ್ಲಿಯ ಸ್ಥಳೀಯ ಸರ್ಕಾರದವರು ಸದರಿ ಠರಾವನ್ನು ಅಂಗೀಕರಿಸಲಿಲ್ಲ. ಆದರೂ ಕೂಡ ಆ ಠರಾವನ್ನು ಇಂಡಿಯಾ ಸರ್ಕಾರಕ್ಕೆ ಕಳುಹಿಸಬೇಕಾಯಿತು. ಇಂಡಿಯಾ ಸರ್ಕಾರದವರು ಕೊಡಗಿನ ಸರ್ಕಾರದಲ್ಲಿ ಸಾಕಷ್ಟು ಉಳಿತಾಯ ಇರುವುದರಿಂದ ಹಳೇ ಸಿಲ್ಕನ್ನು ಈಗ ಕೊಡಲಿಕ್ಕಾಗುವುದಿಲ್ಲವೆಂದು ಹೇಳಿಬಿಟ್ಟರು.

ಈ ಪ್ರಾಂತ್ಯಕ್ಕೆ ನ್ಯಾಯ ವಿಧಾಯಕ ಸಭೆಯು ದೊರೆತ ನಂತರ ಎರಡು ವರ್ಷಗಳಲ್ಲಿ ವರ್ಷವೊಂದು ಲಕ್ಷದಂತೆ ಉಳಿತಾಯವಾದದ್ದು ಯಾರಿಗಾದರೂ ಆಶ್ಚರ್ಯವಾಗದೆ ಇರದು. ಈ ಉಳಿತಾಯಕ್ಕೆ ಇಲ್ಲಿಯ ಅಧಿಕಾರಿಗಳೇ ಕಾರಣರೆಂಬುದರಲ್ಲಿ ಸಂಶಯವಿಲ್ಲ. ಕೌನ್ಸಿಲು ಪ್ರಾರಂಭದಲ್ಲಿ ಖಜಾನೆಯ ಮೇರೆ ಇಡಬೇಕಾದ 50 ಸಾವಿರ ರೂಪಾಯಿ ಸಿಲ್ಕು ಇಟ್ಟುದಲ್ಲದೆ, ಸರ್ಕಾರದ ಆದಾಯವನ್ನು ಭದ್ರಪಡಿಸಲಿಕ್ಕಾಗಿಯೂ, ಮುಂದೆ ಬರಬಹುದಾದ ಕೆಟ್ಟ ವರ್ಷಗಳ ಅಂದರೆ ಉತ್ಪತ್ತಿ ಕಡಿಮೆಯಾಗುವ ವರ್ಷಗಳ ಖರ್ಚಿಗಾಗಿಯೂ ಉಳಿತಾಯವನ್ನು ಹೆಚ್ಚಿಸುತ್ತಾ ಬಂದರು. ನಂತರ ಅಧಿಕಾರಿಗಳು ಬಜೆಟ್ಟನ್ನು ತಯಾರಿಸುವಾಗ್ಯೆ ಉತ್ಪತ್ತಿಯನ್ನು ಕಡಿಮೆಯಾಗಿಯೂ, ಖರ್ಚನ್ನು ಹೆಚ್ಚಾಗಿಯೂ ಅಂದಾಜು ಮಾಡಿ ವರ್ಷಾಂತ್ಯದಲ್ಲಿ ವೆಚ್ಚ ಕಳೆದು ಆದಾಯದಲ್ಲಿ ಉಳಿತಾಯವಾಗುತ್ತಾ ಬಂತು. ದೇಶಾಭಿವೃದ್ಧಿಯ ಅಂದರೆ ಜನ ಹಿತದ ಕಾರ್ಯಗಳೆಷ್ಟೋ ಇದ್ದರೂ ಕೂಡ ವರ್ಷ ಪ್ರಾರಂಭದ ಬಜೆಟ್ ಮೀಟಿಂಗಿನಲ್ಲಿ ಬಜೆಟ್ಟಿನಲ್ಲಿ ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗಿ ತೋರಿಸಲ್ಪಡುತ್ತಿದ್ದ ಕಾರಣ ಅಂಥಾ ಕೆಲಸಗಳಿಗೇನೂ ಹಣ ದೊರೆಯುತ್ತಿರಲಿಲ್ಲ. ಈ ಸಂಬಂಧ ಕೌನ್ಸಿಲಿನಲ್ಲಿ ಜನ ಪ್ರತಿನಿಧಿಗಳ ಕೂಗು 'ಅರಣ್ಯ ರೋದನ' ವಾಗುತ್ತಿತ್ತು. ಹಿಂದಿನ ವರ್ಷಗಳ ಸಿಲ್ಕನ್ನು ಹೊಸ ಕೆಲಸಗಳಿಗೆ ಉಪಯೋಗಿಸುವ ಹಕ್ಕು ಈ ಕೌನ್ಸಿಲಿನವರಿಗೆ ಇಲ್ಲದ್ದರಿಂದ ಹಳೇ ಸಿಲ್ಕು ಬೆಳೆಯುತ್ತಾ ಬಂತು. ಈ ಉಳಿತಾಯವು ಇಂಡಿಯಾ ಸರ್ಕಾರದವರ ದೃಷ್ಟಿಗೆ ಬಿತ್ತು. ಆದುದರಿಂದಲೇ ಅವರು ಮೇಲಿನ ಜವಾಬು ಕೊಡಲು ಅವಕಾಶವಾಯಿತು.

ಇಲ್ಲಿಯ ಸರ್ಕಾರದಲ್ಲಿ ಉಳಿತಾಯವಾಗಲು ಇನ್ನೊಂದು ಕಾರಣವಿದೆ. ಕೌನ್ಸಿಲು ಸರ್ಕಾರ ಬರುವ ಮುಂಚೆ ತಕ್ಕ ಕಾರಣಗಳೂ, ಅವಶ್ಯಕತೆಯೂ ಇಲ್ಲದೆ ಜನರ ಅಭಿಮತಕ್ಕೆ ವಿರೋಧವಾಗಿ ಕೋರ್ಟ್ ಫೀಜು ಸ್ಟಾಂಪಿನ ದರವನ್ನೂ, ಪಿರ್ಯಾದುಗಳಿಗೆ ಉಪಯೋಗಿಸಬೇಕಾದ ಛಾಪಾ ಕಾಗದದ ದರವನ್ನೂ, ಡಿಸ್ಟ್ರಿಕ್ಟ್ ಬೋರ್ಡ್ ಸೆಸ್ಸನ್ನೂ ಹೆಚ್ಚಿಸುವುದರ ಮೂಲಕ ಜನರ ಮೇಲೆ ಹೊಸ ತೆರಿಗೆಗಳ ಭಾರವನ್ನು ಹೇರಿ, ಸರ್ಕಾರ ಆದಾಯವನ್ನು ಹೆಚ್ಚಿಸಿಕೊಂಡರು. ಮೊದಲಿದ್ದ ತೆರಿಗೆಗಳ ಹೊರೆಯನ್ನೇ ಹೊರಲಾರದ ಜನರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹಾಕಿ ಬಜೆಟ್ಟಿನಲ್ಲಿ ಉಳಿತಾಯ ತೋರಿಸುತ್ತಾ ಬಂದದ್ದು ದೊಡ್ಡ ಅನ್ಯಾಯವಾಗಿದೆ.

ಫಾರೆಸ್ಟು ಇಲಾಖೆಯಲ್ಲಿ ದೊಡ್ಡ ಸಿಬ್ಬಂದಿಯನ್ನಿಟ್ಟುಕೊಂಡು ಖರ್ಚು ಮಾಡುತ್ತಿರುವ ಕಾರಣ ಅದಕ್ಕೆ ಸರಿಯಾದ ಆದಾಯ ತೋರಿಸುವ ಒಗ್ಗಿ ಗಂಧದ ಮರಗಳನ್ನು ಹೇರಳವಾಗಿ ಕಡಿದು ಉತ್ಪತ್ತಿ ದೊಡ್ಡದು ಮಾಡುತ್ತಾ ಬಂದಿರುತ್ತಾರೆ. ನ್ಯಾಯವಾಗಿ ಮಾಡಬೇಕಾದಂತೆ ಬಲಿತ ಮರಗಳನ್ನೇ ಕಡಿಯುವುದರ ಬದಲು ಎಳೇ ಮರಗಳನ್ನೂ ಕಡಿದು ಮುಂದಿನ ಜನಾಂಗದ ಹಕ್ಕಾದ ಉತ್ಪತ್ತಿಯನ್ನು ಈಗಲೇ ಉಪಯೋಗಿಸುತ್ತಿರುವುದು ಎಂದೂ ಸರಿಯಲ್ಲ. ಹೀಗೆ ಅನ್ಯಾಯವಾಗಿ ಗಂಧದ ಉತ್ಪತ್ತಿಯನ್ನು ಹೆಚ್ಚಿಸಿಕೊಂಡದ್ದು ಬಜೆಟ್ಟಿನಲ್ಲಿ ಉಳಿತಾಯವಾಗಲು ಮತ್ತೊಂದು ಕಾರಣವಾಗಿದೆ.

ಸ್ಥಳೀಯ ಸರ್ಕಾರದ ಅಧಿಕಾರಿಗಳು ಜನರ ಹಿತದ ದೃಷ್ಟಿಯಿಂದ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದ ಪಕ್ಷದಲ್ಲಿ ಇಂಥಾ ನಿಜವಲ್ಲದ ಸಿಲ್ಕು ಉಂಟಾಗುತ್ತಲೇ ಇರಲಿಲ್ಲ. ಖಜಾನೆಯ ಮೇರೆ ಇಡಬೇಕಾದ ಸಿಲ್ಕನ್ನು ಬಿಟ್ಟು ಆದಾಯ ವೆಚ್ಚವನ್ನು ಸರಿಯಾಗಿ ಅಂದಾಜು ಮಾಡುತ್ತಾ, ಪ್ರತಿ ವರ್ಷವೂ ಉಳಿತಾಯವಾಗುವ ಹಣವನ್ನು ಪ್ರತಿನಿಧಿಗಳು ಕೌನ್ಸಿಲಿನಲ್ಲಿ ಸೂಚಿಸಿದ ಜನ ಪ್ರಯೋಜನಾರ್ಥವಾದ ಕೆಲಸಗಳಿಗೆ ಉಪಯೋಗಿಸಿದ್ದರೆ ಬಜೆಟ್ಟಿನ ಉಳಿತಾಯವೇ ನಿಲ್ಲುತ್ತಿರಲಿಲ್ಲ. ಮಾತ್ರವಲ್ಲ, ಜನಸಮುದಾಯದ ಅಭಿವೃದ್ಧಿ ಬಗ್ಗೆ ಅವಶ್ಯವಿರುವ ಕೆಲಸಗಳಿಗೆ ವೆಚ್ಚ ಮಾಡುವಂತಿದ್ದರೆ ಸರ್ಕಾರವು ಸಾಲ ಮಾಡಬೇಕಾಗುತ್ತಿತ್ತು. ನಿಜ ಸ್ಥಿತಿಯು ಹೀಗಿರುವಲ್ಲಿ ನಮ್ಮ ಸ್ಥಳೀಕ ಸರ್ಕಾರದವರು ದೊಡ್ಡ ಉಳಿತಾಯವನ್ನು ತೋರಿಸಿ, ಇಂಡಿಯಾ ಸರ್ಕಾರದಿಂದ ದೊರೆಯಬೇಕಾದ ಹಳೇ ಸಿಲ್ಕನ್ನು ಪಡೆಯಲು ಪ್ರಯತ್ನಿಸುವುದರ ಬದಲು ಇಂಡಿಯಾ ಸರ್ಕಾರದಿಂದ ಸಿಲ್ಕು ದೊರಕಲು ಅಡಚಣೆಯಾಗುವಂತೆ ಕಾರುಬಾರು ಮಾಡುತ್ತಾ ಬಂದರು.

ಇದು ಒಂದೆರಡು ವರ್ಷಗಳ ಹಿಂದಿನ ಸ್ಥಿತಿಯಾಗಿತ್ತು. ಇತ್ತೀಚಿಗೆ ಜನರ ಆರ್ಥಿಕ ಸ್ಥಿತಿಯು ಕೆಡುತ್ತಾ ಬಂದಿರುವುದರಿಂದಲೂ ಕಾಫಿ ಬೆಳೆಗಾರರ ವಿಶೇಷವಾದ ಬೆಳೆಯ ಬೆಲೆ ಪೇಟೆಯಲ್ಲಿ ಕ್ರಮಕ್ರಮವಾಗಿ ಕಡಿಮೆಯಾಗುತ್ತಾ ಬರುತ್ತಿರುವುದರಿಂದಲೂ ಸರ್ಕಾರದ ಆದಾಯವು ಇಳಿಯುತ್ತಾ ಬರುತ್ತಿರುವ ಕಾರಣ ಉಳಿತಾಯವಾಗುವ ಬದಲು ವೆಚ್ಚವು ಉತ್ಪತ್ತಿಯನ್ನು ಮೀರುತ್ತಿದೆ. ಈಗ ಎರಡು ವರ್ಷಗಳಲ್ಲಿ ಮೊದಲಿನ ಉಳಿತಾಯದ ಅರ್ಧವನ್ನು ಖರ್ಚು ಮಾಡಲ್ಪಟ್ಟಿದೆ. ಇನ್ನು ಒಂದೆರಡು ವರ್ಷಗಳಲ್ಲಿ ಏನಾಗುವದೋ ತಿಳಿಯದು. ಇದು ಆವಶ್ಯಕ ವಿಷಯವಾದ ಕೆಲಸವನ್ನು ನಡಿಸಲಿಕ್ಕೆ ಮಾತ್ರ ಉಪಯೋಗಿಸಿದ್ದಾಗಿದೆ. ಜನರ ಹಿತದ ಹೊಸ ಕೆಲಸಗಳಿಗೇನೂ ವ್ಯಯ ಮಾಡಿರುವುದಿಲ್ಲ. ಆದುದರಿಂದ ಇಂಡಿಯಾ ಸರ್ಕಾರದವರ ಮೇಲಿನ ಕಾರಣವು ಈಗ ಸರಿ ಹೋಗುವುದಿಲ್ಲವೆಂದು ಅವರಿಗೆ ತಿಳಿಸುವುದು ಅವಶ್ಯವಾಗಿದೆ.

ಈ ಮೊದಲು ಎಷ್ಟೋ ಸಾರಿ ಹೇಳಿರುವಂತೆ ಈ ಪ್ರಾಂತ್ಯವು ಇಂಡಿಯಾ ಸರ್ಕಾರದ ಆಡಳಿತದಲ್ಲಿದ್ದಾಗ್ಯೆ ಮಾವುಕೂಟ ಟ್ರಸ್ಟಿಗಾಗಿ ಕೂಡಿದ ಹಣದ, ಆಗಲೇ ದುರಸ್ತು ಮಾಡಬೇಕಾಗಿದ್ದ ಅರಮನೆ ರಿಪೇರಿಯು ಮತ್ತು ಆಗ ಉದ್ಯೋಗದಲ್ಲಿದ್ದು ರಿಟೈರ್ ಆಗಿರುವವರ ಪೆನ್ಶನಿನ ಜವಾಬ್ದಾರಿಯನ್ನು ಇಂಡಿಯಾ ಸರ್ಕಾರದವರೇ ವಹಿಸಿಕೊಳ್ಳಬೇಕಾದದ್ದು ನ್ಯಾಯವಲ್ಲವೇ? ಈ ಜವಾಬ್ದಾರಿಗಳನ್ನೆಲ್ಲಾ ಪ್ರಾಂತೀಯ ಸರ್ಕಾರದ ಮೇಲೆ ಹಾಕಿರುವಾಗ್ಯೆ ಆ ಕಾಲದಲ್ಲಿ ಉಂಟಾದ ಸಿಲ್ಕನ್ನು ಇಂಡಿಯಾ ಸರ್ಕಾರದವರು ಇಲ್ಲಿಯ ಸರ್ಕಾರಕ್ಕೆ ಕೊಡಬೇಕಾದದ್ದು ಅತ್ಯವಶ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಇಂಡಿಯಾ ಸರ್ಕಾರವನ್ನು ಉಳಿದದ್ದು ಕೊಡಬೇಕೆಂತ ಸ್ಥಳೀಯ ಸರ್ಕಾರವು ಕೇಳಿದ್ದಕ್ಕೆ, 1929ರಲ್ಲಿ ಇಂಡಿಯಾ ಸರ್ಕಾರವು ಕೊಟ್ಟ ಜವಾಬಿನಲ್ಲಿ, ಇಂಡಿಯಾ ಸರ್ಕಾರದ ಆಡಳಿತಕ್ಕೆ ಕೊಡಗು ಒಳಪಟ್ಟಿದ್ದಾಗ ಆದ ಹೆಚ್ಚಿನ ಖರ್ಚುಗಳ ಕಾರಣಗಳಿಗಾಗಿ ಇಂಡಿಯಾ ಸರ್ಕಾರವು ಕೊಡಗಿಗೆ ಸಿಲ್ಕು ಕೊಡಲು ಒಪ್ಪುವುದಿಲ್ಲವೆಂತಲೂ, ಪ್ರಾಂತೀಯ ಉತ್ಪತ್ತಿಯಿಂದ ಪ್ರಾಂತೀಯ ಸರ್ಕಾರದ ಖರ್ಚನ್ನು ನಡಿಸಲು ಸಾಧ್ಯವಿಲ್ಲವಾದರೆ ಮಾತ್ರ ಇಂಡಿಯಾ ಸರ್ಕಾರವು ಸಿಲ್ಕು ಕೊಡುವ ಯೋಚನೆ ಮಾಡೀತೆಂತಲೂ, ಮುಂದೆ ಅವಕಾಶ ಬಂದಾಗ ಆಲೋಚಿಸಬಹುದೆಂತಲೂ ಒಂದಿದೆಯೆಂತ ಚೀಫ್ ಕಮಿಶನರು ಕೌನ್ಸಿಲಿಗೆ ತಿಳಿಸಿದರು. ಇಂಡಿಯಾ ಸರ್ಕಾರವು ಮಾವುಕೂಟ ಟ್ರಸ್ಟಿಗಾಗಿ ಕೂಡಿದ ಅನಾವಶ್ಯಕವಾದ ಸುಮಾರು 20 ಲಕ್ಷ ರೂಪಾಯಿಯ ಜವಾಬ್ದಾರಿಯನ್ನು ಹೊರಲೇ ಬೇಕು. ಪ್ರಾಂತೀಕ ಸರ್ಕಾರಕ್ಕೆ ಪ್ರತಿಭಟಿಸಲು ಶಕ್ತಿ ಇಲ್ಲದ್ದರಿಂದ ಸುಮ್ಮನೆ ಇರಬೇಕಾಗಿದೆಯಷ್ಟೆ. ಕಾಂಗ್ರೆಸಿನವರು ಇಂಡಿಯಾ ಸರ್ಕಾರವು ಇಂಡಿಯಾದ ಮೇಲೆ ಹೊರಿಸಿದ ಸಾಲಗಳಲ್ಲಿ ಯಾವ್ಯಾವುದಕ್ಕೆ ಇಂಡಿಯಾವು ಜವಾಬ್ದಾರಿಯಾಗಬೇಕೆಂತ ನಿಷ್ಪಕ್ಷ ಪಂಚಾಯಿತರ ತನಿಖೆಯಾಗಬೇಕೆಂತ ಕೇಳಿಕೊಳ್ಳುವ ಮೇರೆ ನಮ್ಮ ಸ್ಥಳೀಯ ಸರ್ಕಾರಕ್ಕೆ ಶಕ್ತಿ ಅಥವಾ ಹಕ್ಕು ಇದ್ದರೆ ಇಂಡಿಯಾ ಸರ್ಕಾರವು ಈ ದೇಶದ ಉತ್ಪತ್ತಿಯಿಂದ ಮಾಡಿದ ಅನಾವಶ್ಯವನ್ನು ಕುರಿತು ತನಿಖೆ ನಡಿಸಬೇಕೆಂತ ಕೇಳಬೇಕು. ಅಂಥಾ ತನಿಖೆಯಿಂದ ಸ್ಥಳೀಯ ಸರ್ಕಾರದ ಬೊಕ್ಕಸಕ್ಕೆ ತುಂಬಾ ಪ್ರಯೋಜನವಾಗುವುದರಲ್ಲಿ ಸಂಶಯವಿಲ್ಲ.

ಈ ಉಳಿತಾಯದ ವಿಷಯ ಈ ತಾ 8 ರಲ್ಲಿ ನಡೆದ ಕೌನ್ಸಿಲು ಮೀಟಿಂಗಿನಲ್ಲಿ ಪುನಃ ಬಂದು, ಠರಾವು ಪಾಸುಮಾಡಲಾಯಿತು. ಆದರೆ ಈ ಸಾರಿ ಸ್ಥಳೀಯ ಸರ್ಕಾರದವರು ಅದನ್ನು ಅಂಗೀಕರಿಸಿರುವರು. ಇದರಿಂದ ಈಗಿನ ಚೀಫ್ ಕಮಿಷನರವರಿಗೆ ಈ ವಿಷಯದಲ್ಲಿ ಜನರ ನ್ಯಾಯವಾದ ಕೋರಿಕೆಯಲ್ಲಿ ಸಹಾನುಭೂತಿ ಇದೆಯೆಂದು ಕಂಡುಬರುತ್ತದೆ. ಆದ ಕಾರಣ ಅವರು ಹಳೇ ಸಿಲ್ಕನ್ನು ಪಡೆಯಲು ಇಂಡಿಯಾ ಸರ್ಕಾರಕ್ಕೆ ನ್ಯಾಯವಾದ ಎಲ್ಲಾ ಸಬೂಬುಗಳನ್ನು ತೋರಿಸಿ ತನ್ನ ಕೈಯ್ಯಲ್ಲಾಗುವ ಪ್ರಯತ್ನ ಮಾಡಿಯಾರೆಂತ ನಂಬುತ್ತೇವೆ. ಅವರು ಈ ಸಂಗತಿಯನ್ನು ಕುರಿತು ಮಾಡುವ ಯತ್ನಗಳಿಗೆ ದೇಶದವರ ಒತ್ತಾಸೆ ಇದೆಯೆಂಬುದರಲ್ಲಿ ಸಂಶಯವಿಲ್ಲ. ಅವರ ಪ್ರಯತ್ನವು ಸಫಲವಾಗಿ, ದೇಶದ ಜನರ ದೀರ್ಘಕಾಲದ ಕೋರಿಕೆಯೊಂದು ನೆರವೇರಲಿ ಎಂತ ಹಾರೈಸುತ್ತೇವೆ.

ದುಂಡು ಮೇಜು ಪರಿಷತ್ತು.

ಫೆಡರಲ್ ಸರ್ಕಾರದ ಆದಾಯ ವೆಚ್ಚದ ವಿಷಯ ಕುರಿತು ನೇಮಿಸಲ್ಪಟ್ಟಿದ್ದ ಉಪ ಕಮಿಟಿಯ ವರದಿ ಚರ್ಚೆ ನಡೆಯುತ್ತಲೇ ಇದೆ. ಇನ್ನೂ ಅಖೈರಿಗೆ ಬಂದಿರುವುದಿಲ್ಲ.

ಅಲ್ಪ ಸಂಖ್ಯೆ ಕೋಮಿನವರ ಪ್ರಶ್ನೆಯೂ ತೀರ್ಮಾನಕ್ಕೆ ಬಂದಿರುವುದಿಲ್ಲ. ಕಾಂಗ್ರೆಸಿನವರು ಪೂರ್ಣ ಸ್ವರಾಜ್ಯಕ್ಕೆ ಮುಸಲ್ಮಾನರು ಒಪ್ಪುವುದಾದರೆ ಮುಸಲ್ಮಾನರ ಕೋರಿಕೆಗಳನ್ನು ಅಂಗೀಕರಿಸಬಹುದೆಂತ ಮಹಾತ್ಮ ಗಾಂಧಿಯವರು ಹೇಳಿರುವರೆಂತಲೂ, ಆದರೆ ಆಡಳಿತ ರಚನೆಯು ಹೇಗಿರತಕ್ಕದೆಂತ ಮಹಾತ್ಮ ಗಾಂಧಿಯವರು ತಪಶೀಲಾಗಿ ವಿವರಿಸಿದ ವಿನಹ ತಮ್ಮ ಜವಾಬು ಕೊಡಲಿಕ್ಕಾಗುವುದಿಲ್ಲವೆಂತ ಮುಸಲ್ಮಾನರು ಅಭಿಪ್ರಾಯಪಡುತ್ತಾರೆಂತಲೂ ವರ್ತಮಾನವಿದೆ.

ಡಾಕ್ಟರ್ ಅಂಬೇಡ್ಕರರು ಅಸ್ಪೃಶ್ಯರ ಪರವಾಗಿ ಕೇಳುವ ಕೋಮುವಾರು ಚುನಾವಣೆ ಪದ್ಧತಿ ಬೇಕೆಂಬುದು ಯುಕ್ತವಲ್ಲವೆಂತಲೂ, ಅಸ್ಪೃಶ್ಯರಿಗೆ ಮಹಾತ್ಮರಲ್ಲಿ ನಂಬಿಕೆ ಇದೆಯೆಂತಲೂ ಕೆಲವು ಕಡೆಗಳಿಂದಲೂ ಅಂಬೇಡ್ಕರರು ಕೇಳುವುದು ಯುಕ್ತವಾಗಿದೆಯೆಂತ ಕೆಲವು ಕಡೆಗಳಿಂದಲೂ ಇಂಡಿಯಾದಿಂದ ಇಂಗ್ಲೆಂಡಿಗೆ ವರ್ತಮಾನಗಳು ಹೋಗುತ್ತಲಿವೆ.

ದುಂಡು ಮೇಜು ಪರಿಷತ್ತು ನವಂಬರ್ ತಾ. ... ಅಖೈರಾಗುತ್ತದೆಯೆಂತಲೂ ಮುಂದೆ ಅವಶ್ಯವಿದ್ದರೆ ಹಿಂದೂಸ್ಥಾನದಲ್ಲಿ ಅದರ ಕೆಲಸವನ್ನು ಮುಂದುವರಿಸಬಹುದೆಂತ ಸರ್ಕಾರದವರು ತಿಳಿಸುತ್ತಾರೆಂತ ವರ್ತಮಾನವಿದೆ. ಪ್ರತಿನಿಧಿಗಳೆಲ್ಲಾ ನವಂಬರ್ ತಾ. 13ರಲ್ಲಿ ಲಂಡನಿನಿಂದ ಹಿಂದೂಸ್ಥಾನಕ್ಕೆ ಹಿಂದಿರುಗುವ ಏರ್ಪಾಡು ಮಾಡಿದ್ದಾರೆ.

ಇಂಗ್ಲೆಂಡಿನಲ್ಲಿ ಮಹಾತ್ಮ ಗಾಂಧಿಯವರು.

ದುಂಡು ಮೇಜು ಪರಿಷತ್ತಿನ ಕಾರ್ಯದಲ್ಲಿ ಭಾಗಿಯಾಗುವುದಲ್ಲದೆ ಮಹಾತ್ಮಜೀಯವರು ಅಲ್ಲಲ್ಲಿ ಸಭೆಗಳಲ್ಲಿ ಹಿಂದೂಸ್ಥಾನದ ಸ್ವರಾಜ್ಯ ಸ್ಥಾಪನೆಯ ಕುರಿತು ಭಾಷಣಗೈಯುತ್ತಿದ್ದಾರೆ.

ತಾ 14ರಲ್ಲಿ ಎಲ್ಲಾ ದೇಶಗಳ ವಿದ್ಯಾರ್ಥಿಗಳ ಕೂಟದಲ್ಲಿ ಒಂದು ಭಾಷಣ ಮಾಡಿದರು. ಅನಂತರ ಒಂದು ತಾಸಿನವರೆಗೆ ಸವಾಲುಗಳಿಗೆ ಜವಾಬು ಕೊಟ್ಟರು.

ದೇಶೀ ರಾಜ್ಯಗಳ ಪ್ರಜೆಗಳ ಪ್ರತಿನಿಧಿಗಳಿಗೆ ಭೇಟಿಕೊಟ್ಟು ಅವರ ಪರವಾಗಿ ರಾಜರುಗಳಲ್ಲಿ ಮಾತನಾಡುವುದಾಗಿ ವಚನ ಕೊಟ್ಟಿದ್ದಾರೆ.

ಇಂಡಿಯಾ ಆಫೀಸಿನಲ್ಲಿ ಹಣದ ವಿನಿಮಯದ ಕುರಿತು ತಾ 17ರಲ್ಲಿ ಒಂದು ಚರ್ಚೆ ನಡೆಯಿತು. ಅದರಲ್ಲಿ ಮಹಾತ್ಮಜೀಯವರು ಹಿಂದೀ ಕೃಷಿಕನ ದುಸ್ಥಿತಿಯನ್ನು ಕುರಿತು ಸ್ಪಷ್ಟವಾದ ಮಾತುಗಳನ್ನು ಆಡಿದರು. ಕೃಷಿಕರು ಕಂದಾಯ ಕಟ್ಟಬೇಕಾದರೆ ತಮ್ಮ ಹೆಂಗಸರ ನಗಗಳನ್ನು ಮಾರಬೇಕಾಗಿ ಬಂದಿದೆ. ಚಲಾವಣೆಯ ನಾಣ್ಯಕ್ಕೆ ಚಿನ್ನವು ಆಧಾರವಾಗಿದ್ದದ್ದನ್ನು ತಪ್ಪಿಸಿದ್ದರಿಂದ ಹಿಂದೀ ಕೃಷಿಕರಿಗೆ ತಾವು ಮಾರುವ ಪದಾರ್ಥಗಳಿಗೆ ಹೆಚ್ಚು ಬೆಲೆ ಬರುತ್ತಿತ್ತು. ರೂಪಾಯಿಯನ್ನು ಇಂಗ್ಲೆಂಡಿನಲ್ಲಿ ಚಲಾವಣೆಯಲ್ಲಿ ನೋಟಿಗೆ ಗಂಟು ಹಾಕಿದ್ದರಿಂದ ಹಿಂದೀ ಕೃಷಿಕನಿಗೆ ಬರುತ್ತಿದ್ದ ಪ್ರಯೋಜನವನ್ನು ದೊರೆಯದಂತೆ ಮಾಡಿದೆ ಎಂತ ಹೇಳಿದರು.

ತಾ 17ರಲ್ಲಿ ಗಾಂಧಿಜೀಯವರು ನಾಟಿಂಗ್ಹಾಮ್ ಊರಿಗೆ ಹೋದರು. ಅಲ್ಲಿನ ವಿಶ್ವವಿದ್ಯಾಲಯದ ಪ್ರೊಫೆಸರುಗಳೂ, ವಿದ್ಯಾರ್ಥಿಗಳೂ ಅವರಿಗೆ ಸನ್ಮಾನವಿತ್ತರು. ಮಹಾತ್ಮರು ಹಿಂದೀ ಸ್ವರಾಜ್ಯದ ಕುರಿತು ಭಾಷಣ ಮಾಡುತ್ತಾ ಹಿಂದೂಸ್ಥಾನದಲ್ಲಿ ಹಿಂದೂಮುಸಲ್ಮಾನರು ಒಗ್ಗಟ್ಟಾಗದೆ ಇದ್ದರೂ, ಪಟ್ಟಣಗಳಲ್ಲಿ ಒಂದೊಂದು ದಂಗೆಯಾಗುವುದರಿಂದ ಹಿಂದೂ ಮುಸಲ್ಮಾನರೊಳಗೆ ಒಗ್ಗಟ್ಟಿಲ್ಲವೆಂತ ಭಾವಿಸಬಾರದು. 7 ಲಕ್ಷ ಗ್ರಾಮಗಳಲ್ಲಿ ಹಿಂದೂ ಮುಸಲ್ಮಾನರು ಅಣ್ಣ ತಮ್ಮಂದಿರಂತೆ ಅನ್ಯೋನ್ಯತೆಯಲ್ಲಿದ್ದಾರೆಂತ ಹೇಳಿದರು.

ಬರ್ಮಿಂಗ್ಹಾಮಿನಲ್ಲಿ ಒಂದು ಕೂಟದಲ್ಲಿ ತಾ. 1... ಮಾಡಿದ ಭಾಷಣದಲ್ಲಿ ಮಹಾತ್ಮರು ಹೇಳಿರುವುದೇನೆಂದರೆ ಕಾಂಗ್ರೆಸಿನವರು ತಯಾರಿಸಿದ ಆಡಳಿತ ರಚನೆಗೆ ಹಿಂದೂಸ್ಥಾನದಲ್ಲಿ ಹಿಂದೂ, ಮುಸಲ್ಮಾನ್, ಸಿಖ್ಖ ಮುಂತಾದ ಸರ್ವ ಜನರೂ ಒಪ್ಪಿದ್ದಾರೆ. ಆದರೆ ಅದು ಲಂಡನಿನಲ್ಲಿ ಅಂಗೀಕಾರವಾಗುವ ಸಂಭವವಿಲ್ಲ. ಯಾಕೆಂದರೆ, ದುಂಡು ಮೇಜು ಪರಿಷತ್ತಿನಲ್ಲಿ ಕಾಂಗ್ರೆಸ್ ಸಹ ಬೇರೆ ಸಂಸ್ಥೆಗಳಂತೆ ಒಂದು ಸಂಸ್ಥೆಯೆಂದು ಭಾವಿಸಲ್ಪಟ್ಟಿದೆ. ಆದರೆ ಹಿಂದೂಸ್ಥಾನದಲ್ಲಿ ಕಾಂಗ್ರೆಸ್ಸಿನ ಮುಂದೆ ಬೇರೆ ಯಾವ ಸಂಸ್ಥೆಯೂ ಗೋಚರಕ್ಕೆ ಬರುವ ಸಂಭವವಿಲ್ಲ. ಕಾಂಗ್ರೆಸ್ ಸರ್ಕಾರದ ಆಡಳಿತವನ್ನು ವಹಿಸಿಕೊಳ್ಳಲು ತಯಾರಾಗಿದೆ. ಬ್ರಿಟಿಷ್ ಸರ್ಕಾರವು ಹಿಂದೂಸ್ಥಾನದ ಆಡಳಿತವನ್ನು ಕಾಂಗ್ರೆಸಿಗೆ ವಹಿಸಿದರೆ ಕೋಮುವಾರು ಸಮಸ್ಯೆಯು ತಾನಾಗಿಯೇ ಬಗೆಹರಿಯಾಗುವುದು. ಹಿಂದೂಸ್ಥಾನದ ಬಡತನಕ್ಕೆ ಬ್ರಿಟಿಷ್ ಆಡಳಿತವೇ ಮುಖ್ಯ ಕಾರಣ. ಹೊಸ ತಿಳ್ಳಿಯನ್ನು ಕಟ್ಟಿದ್ದು ಒಂದು ...

(೪ನೇ ಪುಟದಲ್ಲಿ ಮುಂದುವರಿದಿದೆ)

ಪ್ಯಾರಿಸ್‌ನಲ್ಲಿ ಗಾಂಧಿಜೀಯವರು.

(ಹಿಂದೀ "ಪ್ರತಾಪ"ಕ್ಕೆ ಪ್ರೊಫೆಸರ್ ಚಂದ್ರದತ್ತ ಇಂಡೋಕರವರು ಬರೆದದ್ದು.)

ದುಂಡು ಮೇಜು ಸಭೆಯಲ್ಲಿ ಕಾಂಗ್ರೆಸ್ ಸೇರಿದ್ದು ಸರಿಯೋ, ಅಥವಾ ರಾಜನೀತಿಕ ಪಟುತ್ವವನ್ನು ತೋರಿಸಿತೋ, ಮಹಾತ್ಮಜೀಯವರು ಲಂಡನಿಗೆ ಹೋಗಬೇಕಿತ್ತೋ, ಇಲ್ಲವೋ ಎಂಬ ಪ್ರಶ್ನೆಗಳ ಮೇಲೆ ಇಂಡಿಯಾದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿ ಸಹ ಕಠಿಣ ಮತಭೇದವಿದೆ. ರಾಜಿಮಾಡಿಕೊಳ್ಳಲಿಕ್ಕಾಗಿ ಸೇರಿಸಲ್ಪಟ್ಟ ದುಂಡು ಮೇಜು ಪರಿಷತ್ತಿನಿಂದ ಸಂಪೂರ್ಣ ಸ್ವಾತಂತ್ರ್ಯ ದೊರೆಯಲಾರದೆಂತ ತಿಳಿಸುವುದು ಸ್ಪಷ್ಟವೇ ಸರಿ. ಮಹಾತ್ಮಜೀಯವರು ವಿಚಕ್ಷಣ ರಾಜನೀತಿವಾದಿಗಳಾಗಿದ್ದಾರೆ. ಆದರೆ ಅವರಿಗೆ ಸಹ ಇಂಥಾ ಕನಸು [illegible] ಭರತಖಂಡವನ್ನು ಬಿಡುವ ಮುಂಚೆ ದುಂಡು ಮೇಜು ಸಭೆಯಿಂದ ಸಫಲವಾಗಲಾರದೆಂತ ಹಿಂದೂಸ್ಥಾನವು ಆಸೆ ಪಡಲು ಸಾಧ್ಯವಿಲ್ಲವೆಂತ ಸಾಫ್ ಸಾಫ್ ಹೇಳಿದ್ದಾರೆ. ಹಾಗಾದರೆ ಮಹಾತ್ಮರು ಇಲ್ಲಿಗೆ ಬಂದದ್ದು ವ್ಯರ್ಥವೇ? ಅಲ್ಲ. [illegible] ದಯೆ ಸತ್ಯ, ನಿಷ್ಠೆ ಮತ್ತು ದೃಢತೆ ಇವುಗಳ [illegible] ಪುರುಷರ ಯಾವುದೇ ಹೆಜ್ಜೆಯಾಗಲೀ, ವಚನವಾಗಲೀ ಭಾರತ ದೇಶದ ಮೇಲ್ಮೆಗೆ ಸಹಾಯಕವಾಗದೆ ಇರಲಾರದು. [illegible] 'ರಾಜಪುತಾನ' ಹಡಗವು ಮಾರ್ಸೇಲ್ಸ್ ಬಂದರದಲ್ಲಿ [illegible] ತಂದಿನಿಂದ ಯುರೋಪಿನ ದೃಷ್ಟಿ ಎಲ್ಲವೂ ಗಾಂಧಿಯವರ ಕಡೆಗೆ ತಿರುಗಿದೆ. ಸಾಮ್ರಾಜ್ಯವಾದಿಗಳಾದ [illegible] ಉಸ್ತಾದರಾದ ಬಿಳೀ ಜನರ [illegible] ಸುಖದಿಂದ [illegible] ಆ [illegible] ದ್ವೀಪದಲ್ಲಿ ಇಂದು ಮಹಾತ್ಮಜೀಯವರ [illegible] ವಾಗಿದೆ. ಬೆಳಗಿನ ಮಧ್ಯಾಹ್ನದ ಸಾಯಂಕಾಲದ ಪತ್ರಿಕೆಗಳಲ್ಲೂ, ವಾರ ಪತ್ರಿಕೆಗಳಲ್ಲೂ, ಮಾಸ ಪತ್ರಿಕೆಗಳಲ್ಲೂ, ಸಿನೇಮಗಳಲ್ಲೂ, ಥಿಯೇಟರುಗಳಲ್ಲೂ, ರೇಡಿಯೋಗಳಲ್ಲೂ, ಕಾಫಿ ಕ್ಲಬ್‌ಗಳಲ್ಲೂ, ನಾಟ್ಯ ಶಾಲೆಗಳಲ್ಲೂ, ಮಕ್ಕಳ ಕಥೆಗಳಲ್ಲೂ, ಪ್ರೊಫೆಸರ್ ಮತ್ತು ರಾಜನೀತಿಜ್ಞರ ಗಂಭೀರ ಮಾತುಗಳಲ್ಲೂ, ಪ್ರತಿಯೊಂದು ಕಡೆಯಲ್ಲೂ ಗಾಂಧೀ, ಗಾಂಧೀಯವರ ವಿಷಯವೇ ಇದೆ. ಹಾಸ್ಯದ ಪತ್ರಿಕೆಗಳಿಗೆ ಹಾಸ್ಯಾಸ್ಪದವಾದ ನಕ್ಷೆಗಳನ್ನು ನಗುಬರಿಸುವ ವಿಷಯಗಳನ್ನು ಬರೆಯುವ ಲೇಖಕರನ್ನು ಹಿಡಿದು ಅಂತರ ರಾಷ್ಟ್ರೀಯ ಗಂಭೀರ ವಿಷಯಗಳ ಕುರಿತು ಬರೆಯುವವರ ವರೆಗೂ ಗಾಂಧೀಜೀಯವರು ಒಂದು ಖಜಾನೆಯಂತಾಗಿದ್ದಾರೆ. ಈ ಸಮಯ ವೃತ್ತಾಂತ ಪತ್ರಿಕೆಗಳ ಲೇಖಕರಿಗೆ ಒಳ್ಳೇ ಸುಗ್ಗಿ ಕಾಲವಾಗಿದೆ. ಪತ್ರಿಕೆಗಳಲ್ಲಿ ಪ್ರವಾಹವೇ ಬಂದಿದೆ. [illegible] ಕಾಲವನ್ನು ಕೂಡಲೇ ಮರೆಯಲು ಮಾಡುವುದಿಲ್ಲವೆಂಬಂತ ಮಹತ್ವದ ವಿಷಯಗಳಿರಲಿ, 'ಗಾಂಧಿ' ಯವರ ಮುಂದೆ ಮಾಸಿಹೋದ ವಿಷಯಗಳಂತಿವೆ. ಗಾಂಧೀಜೀಯವರ ಆ [illegible] ಖದ್ದರ್, ಲಂಗೋಟಿ, ಉಣ್ಣೆಯ ಶಾಲು, ಜೋಡು, [illegible] ಚರಖ ನೋಲುವಾಗಿನ ಮೌನ, ಹಲ್ಲಿಲ್ಲದ ಬಾಯಿ, ಮೋಹಿಸುವ ನಗು, ಅವರ ಶಿಷ್ಯಳಾದ ಮಿಸ್ ಸ್ಲೇಡ್ ಯಾನೆ ಮೀರಾ ಬೆನ್ ಇತ್ಯಾದಿ ವಿಷಯಗಳಿಂದ ಸಮಸ್ತ ಪತ್ರಿಕೆಗಳೂ ತುಂಬಿ ಹೋಗಿವೆ.

ಆ ದಿನದ ಪ್ರಾತಃಕಾಲದ ಪ್ಯಾರಿಸಿನ ದೃಶ್ಯವು ನೋಡತಕ್ಕದ್ದಾಗಿತ್ತು. ಪ್ಯಾರಿಸಿನಲ್ಲಿ ಬೆಳಗ್ಗೆ 6½ ಗಂಟೆ ಸಮಯವು ಬಹಳ ಕಷ್ಟಕರವಾಗಿರುತ್ತದೆ. ಅವರೂ ಫ್ರಾನ್ಸಿನ ಸಾವಿರಾರು ನರ ನಾರೀಯರು ತಮ್ಮ ಬೆಚ್ಚಗಿರುವ ಹಾಸಿಗೆಯನ್ನು ಬಿಟ್ಟು ಸ್ಟೇಷನ್ನಿಗೆ ತಲುಪಿದ್ದರು. ಭಾರತೀಯರಾದರೋ ಎಲ್ಲರೂ ಬಂದಿದ್ದರು. ಸ್ಟೇಷನೆಲ್ಲವೂ ಪೋಲೀಸಿನವರಿಂದ ತುಂಬಿತ್ತು. ಫ್ರೆಂಚ್ ಸರ್ಕಾರವು ಸ್ಟೇಷನಿನೊಳಗೆ ಯಾರನ್ನೂ ಬಿಡಬಾರದೆಂತ ಸಖತ್ ಹುಕುಂ ಮಾಡಿತ್ತು. ಜನರ ಗುಂಪುಗಳು ಗಾಂಧಿಜೀವರ ದೇಹವನ್ನು ನುಚ್ಚು ಗೊಳಿಸಿ ಬಿಟ್ಟೀತು ಎಂಬ ಭಯವೇ ಈ ಹುಕುಮಿಗೆ ಕಾರಣ. ಬರೀ 15 ಜನ ಭಾರತೀಯರಿಗೆ ಮಾತ್ರ ಪ್ರತಿನಿಧಿಗಳಾಗಿ ಪಾಸ್ ಸಿಕ್ಕಿತ್ತು. ಆ 15ರಲ್ಲಿ ನಾನೂ ಒಬ್ಬನಾಗಿದ್ದೆ. ಅಲ್ಲದೆ 150 ಜನ ಪತ್ರಿಕೆಗಳ ಪ್ರತಿನಿಧಿಗಳಿಗೂ ಮತ್ತು ಸಿನೇಮಾ ಫೋಟೋಗ್ರಾಫರುಗಳಿಗೂ ಪ್ರವೇಶಕ್ಕೆ ಅನುಮತಿ ದೊರಕಿತ್ತು. ಉಳಿದ ಜನಸಮೂಹವೆಲ್ಲ ಸ್ಟೇಷನಿನ ಪ್ರಾಂಗಣದಲ್ಲಿ ತುಂಬಿತ್ತು. ಹೋಮ್ ಡಿಪಾರ್ಟ್‌ಮೆಂಟಿನವರು ಬಹಳ ಜಾಗರೂಕತೆಯಿಂದ ನಮ್ಮ ಪಾಸ್‌ಗಳನ್ನು ಪರೀಕ್ಷಿಸಿ ನಮ್ಮನ್ನು ಒಳಕ್ಕೆ ಬಿಟ್ಟರು. ಗಾಡಿಯು ಸ್ಟೇಷನಿಗೆ ನುಗ್ಗಿದೊಡನೆಯೇ ಸಿನೇಮಾ ಫೋಟೋಗ್ರಾಫರುಗಳು ಮೆಗ್ನೀಶಿಯಂ ಬೆಳಕಿನಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಮನಸಿನ ಉತ್ಸಾಹ ಉಕ್ಕಿ ಬಂತು. ಗಾಂಧೀಜಿಯವರು ಕಿಟಕಿಯ ಹತ್ತಿರ ಬಂದರು. ಫ್ರಾನ್ಸಿನ ಜನಸಮೂಹವು 'ಗಾಂಧೀಕೀ ಜೈ' ಎಂಬ ಅರ್ಥ ಕೊಡುವ 'ವಿವೇ ಗಾಂಧಿ' ಎಂತ ಜಯ ಘೋಷ ಮಾಡಿದ್ದು ಸ್ಟೇಷನ್ ತುಂಬ ಹರಡಿತು. ಆ ಟ್ರೈನಿನಲ್ಲಿ ಇನ್ನೂ ಅನೇಕ ಭಾರತೀಯ ಮುಖಂಡರಿದ್ದರೂ ಸಹ ಸರ್ವರ ದೃಷ್ಟಿಯೂ ಆ ಮುಗುಳು ನಗೆಯಿಂದ ಕೂಡಿದ ಕೈ ಜೋಡಿಸಿದ ಸನ್ಯಾಸಿಯ ಮೇಲೆ ನಟ್ಟಿತ್ತು. ಮೊದಲನೇ ಸಾರಿ ಇವರನ್ನು ನೋಡಿದವರೆಲ್ಲರೂ ವಿಸ್ಮಿತರಾದರು ಮತ್ತು ಮುಗ್ಧರಾಗಿ ಹೋದರು. ಜಯದ ಹಾರಗಳನ್ನು ಹಾಕಿದನಂತರ ವಿದ್ಯಾರ್ಥಿ ಪರಿಷತ್ತು ಮತ್ತು ವ್ಯಾಪಾರೀ ಮಂಡಳಿಯವರು ಸ್ವಾಗತವನ್ನಿತ್ತರು. ಗಾಂಧೀಜಿಯವರು ಸಮೀಪಿಸಲು ಅನುಕೂಲ ದೊರೆತನಂತರ ನನ್ನ ನೋಡಿದ ಹೊರಗಿನವರಿಗೆ ತುಂಬಾ ಈರ್ಷೆಯಾಗಿತ್ತು. ಗಾಂಧೀಜಿಯವರು ಗಾಡಿಯಿಂದ ಇಳಿದು ಗುಂಪಿನ ಮುಂದೆ ಸ್ವಲ್ಪ ಕಾಲ ಬಂದು ನಿಂತರು. ನಾವು ಮುಷ್ಟಿಯೊಳಗೆ ಅಡಗುವಷ್ಟು ಮಾತ್ರ ಇರುವ ಆ ಶರೀರವನ್ನು ನಮ್ಮ ಭುಜದ ಮೇಲೆ ಎತ್ತಿ ಜನ ಸಮೂಹಕ್ಕೆ ಸುಲಭ ದರ್ಶನ ಮಾಡಿಸಿಕೊಟ್ಟೆವು. ಜನತೆಯ ಉತ್ಸಾಹ ಮತ್ತು ಅಭಿಲಾಷೆಯನ್ನು ನೋಡಿದ ಮಹಾತ್ಮರು ನಗುತ್ತಾ ಜನತೆಯ ವಂದನೆಯನ್ನು ಜೋಡಿಸಿದ ಕೈಗಳಿಂದ ಸ್ವೀಕರಿಸಿದರು. ಜನರು ಮೌನವಾಗಿದ್ದರು. ಲಕ್ಷಾಂತರ ಜನರ ರೆಪ್ಪೆ ಸಹ ಮುಚ್ಚುತ್ತಿರಲಿಲ್ಲ. ಪೋಲೀಸ್ ಸಿಪಾಯಿ ಮತ್ತು ಆಫೀಸರುಗಳು ಚಿತ್ರದ ಬೊಂಬೆಗಳಂತೆ ಸ್ತಂಭಿತರಾಗಿದ್ದರು. ವಿಸ್ಮಯ, ಆಶ್ಚರ್ಯ, ಭಕ್ತಿ, ಸನ್ಮಾನ ಮತ್ತು ಸಹಾನುಭೂತಿಯ ಅದ್ಭುತ ವಾತಾವರಣವು ವ್ಯಾಪಿಸಿಕೊಂಡಿತ್ತು. ಅಲ್ಲಿ ನೆರೆದಿದ್ದ ಸುಮಾರು 500 ಜನ ಹಿಂದೀಯರು ಒಂದು ತರದ ಅಲೌಕಿಕ ಆನಂದವನ್ನನುಭವಿಸುತ್ತಿದ್ದರು. ನಾವು ವಿದೇಶದಲ್ಲಿ ಸನಾಥರೆಂತ ನಮ್ಮೊಳಗೆ ಭಾವನೆ ಹುಟ್ಟಿದ್ದು ಇದೇ ಮೊದಲನೇ ಸಾರಿ. ಮಹಾತ್ಮಜಿಯವರ ಅನುಮತಿ ಪಡೆದು ಸ್ಟೇಷನ್ ಹೊರಗೆ ನಾನು ಬರುವಾಗ ನನ್ನ ಹಣೆಯು ಎತ್ತರವಾಗಿತ್ತು, ಎದೆಯು ವಿಶಾಲವಾಗಿತ್ತು ಮತ್ತು ಮುಖದಲ್ಲಿ ಆಹ್ಲಾದ ಮತ್ತು ಗೌರವ ತುಂಬಿತ್ತು. ಪಾಶ್ಚಾತ್ಯರ ದೃಷ್ಟಿಯಲ್ಲಿ ನಮ್ಮ ಸ್ಥಿತಿಯು ಹತ್ತರಷ್ಟು ಏರಿತು. ಎರಡು ಗಂಟೆಯಲ್ಲಿ ಪ್ಯಾರೀಸಿನವರು ಎಚ್ಚರವಾದಾಗ ಗಾಂಧೀಜಿಯವರು ಫ್ರಾನ್ಸಿನ ಸರಹದ್ದು ದಾಟಿದ್ದರು. ಆದರೂ ಅವರ ಆತ್ಮವೂ ಎಲ್ಲೆಲ್ಲೂ ತುಂಬಿತ್ತು. ಈ ದಿವಸ ಸಮಸ್ತ ಪತ್ರಿಕೆಗಳೂ ಮಹಾತ್ಮರ ವ್ಯಕ್ತಿತ್ವ ಶಕ್ತಿಯನ್ನು ನೋಡಿ ಮುಗ್ಧರಾಗಿದ್ದಾರೆ. ಅವರ ಸ್ಪಷ್ಟ ಇಂಗ್ಲಿಷ, ಮೋಹಿನೀ ಶೈಲಿ, ತೂಗಿದ ಶಬ್ದಗಳು, ವಿಚಾರ ಗಾಂಭೀರ್ಯ, ಪರಿಸ್ಥಿತಿ ವಿಮರ್ಶನ, ಸ್ಥಿರತ್ವ, ಪರಿಶುದ್ಧತೆ, ದೃಢತ್ವ, ಮತ್ತು ಪ್ರತಿಯೊಂದು ಶಬ್ದಕ್ಕೂ 35 ಕೋಟಿ ಜನರ ಬೆಂಬಲವಿರುವ ಕೋಮಲ, ಸ್ಪಷ್ಟ, ನಮ್ರ, ಗಾಂಭೀರ್ಯಯುಕ್ತವಾದ ಭಾಷಣಗಳನ್ನು ವಿರೋಧ ಪಕ್ಷದ ಪತ್ರಿಕೆಗಳೂ ಸಹ ಪ್ರಶಂಸಿಸುತ್ತಿವೆ.

ಯಾರ ಸಹಾನುಭೂತಿಯು ನಮ್ಮ ಧ್ಯೇಯಕ್ಕೆ ಇದೆಯೋ ಅವರ ಸಂತೋಷವು ಅವರ್ಣನೀಯವಾಗಿದೆ. ವಿಶ್ವವಿಖ್ಯಾತವಾದ ಚಿಕಾಗೋ ಪಟ್ಟಣದ 'ಡೆಯಿಲಿ ಟ್ರಿಬ್ಯೂನ್' ಎಂಬ ಪ್ಯಾರಿಸಿನಲ್ಲಿ ಸಹ ಪ್ರಕಟವಾಗುವ ಪತ್ರಿಕೆಯು ನಿಷ್ಪಕ್ಷ ಮತ್ತು ಯಥಾರ್ಥವಾದ ವರ್ಣನೆಯನ್ನು ಕೊಟ್ಟಿದೆ. ಅದರ ವಾತ್ತಾಹಾರರೊಬ್ಬರು 'ರಾಜಪುತಾನ' ಹಡಗದಲ್ಲಿ ಗಾಂಧೀಜೀಯವರ ಸಂಗಡ ಇದ್ದರು. ಆ ಪತ್ರಿಕೆಯು ಬರೆಯುವುದೇನಂದರೆ —

'ಮಹಾತ್ಮಜೀಯವರ ಶಬ್ದಕೌಶಲ, ತರ್ಕ, ಅವರ ವಾಕ್ಶಕ್ತಿ, ರಾಜನೀತಿಜ್ಞತೆ ಮುಂತಾದ್ದರಿಂದ ಬ್ರಿಟಿಷ್ ರಾಜನೀತಿಜ್ಞರು ಸ್ತಂಭಿತರು ಮತ್ತು ಚಕಿತರಾಗಿದ್ದಾರೆ. ಲಾರ್ಡ್ ಸ್ಯಾಂಕೀ, ಲಾರ್ಡ್ ರೀಡಿಂಗರಂಥ ನ್ಯಾಯ ಪಂಡಿತರು ಮುಗ್ಧ ಮತ್ತು ಹತಬುದ್ಧರಾಗಿದ್ದಾರೆ. ಮಹಾತ್ಮಜೀಯವರ ಮೋಹಕ ಶಬ್ದ ಪ್ರತಿಧ್ವನಿಯಿಂದ ಐತಿಹಾಸಿಕ ಅರಮನೆಯಾದ ಸೆಂಟ್ ಜೇಮ್ಸ್ ಪ್ಯಾಲೇಸಿನ ಕಾರಿಡೋಲುಗಳು ನಡುಗಿ ಹೋಗಿವೆ."

ಈ ಆರು ದಿನಗಳಲ್ಲಿ ಮಹಾತ್ಮಜೀಯವರು ಎಷ್ಟೊಂದು ಭಾರತ ವರ್ಷದ ಸೇವೆ ಮಾಡಿದ್ದಾರೆಂದರೆ, ದುಂಡು ಮೇಜು ಪರಿಷತ್ತಿನ ಕಾರ್ಯದಿಂದ ಸಫಲತೆ ದೊರೆಯದಿದ್ದರೂ ನಮಗೇನೂ ನಷ್ಟವಿಲ್ಲವೆನ್ನಬಹುದು. ಈ ವೃದ್ಧ, ದಂತ ಹೀನ, ಬಾಗಿದ ದೇಹವಿರುವ ಭಾರತೀಯ ಫಕೀರನು ತನ್ನ ತಪಸ್ಸಿನ ಕೂಡಿಟ್ಟ ಶೇಖರ ಬಲದಿಂದ ಯುರೋಪನ್ನು [illegible] ಬಿಟ್ಟಿದ್ದಾನೆ. ಮಹಾತ್ಮ ಗಾಂಧಿಯವರಿಗೆ ಆಗುವ ಸನ್ಮಾನವು ಭಾರತ ದೇಶದ ಸಭ್ಯತೆ, ಸಂಸ್ಕೃತಿ ಮತ್ತು ಸ್ವಾತಂತ್ರ್ಯಕ್ಕಾಗಿ ಮಾಡುತ್ತಿರುವ ಪ್ರಯತ್ನಕ್ಕೆ ಸನ್ಮಾನ ಮತ್ತು ಸಹಾನುಭೂತಿ ದೊರೆತಂತೆಯೇ ಆಗಿದೆ. ಈ ಸಹಾನುಭೂತಿಯು ಸ್ವಾತಂತ್ರ್ಯ ಯುದ್ಧದಲ್ಲಿ ಪ್ರಯೋಜನಕ್ಕೆ ಬಂದೀತು.

ಸ್ವತಂತ್ರ ಭಾರತದಲ್ಲಿ.

ಮಹಾತ್ಮ ಗಾಂಧಿಯವರು 'ಡೈಲಿ ಹೇರಾಲ್ಡ್' ಪತ್ರಿಕೆಯಲ್ಲಿ ಬರೆದ ಲೇಖನದಿಂದ.

ನಾನಿಲ್ಲಿಗೇಕೆ ಬಂದಿದ್ದೇನೆ? ನನ್ನ ನಂಬಿಕೆಗಳೇನು? ನಾನು ಸಾಧಿಸಬೇಕೆಂದಿರುವ ಭಾವಿ ಭಾರತವೆಂತಹದ್ದು.... -

ಯಾವುದನ್ನು ನಾನು ಸತ್ಯವೆಂದು ನಂಬಿರುವೆನೋ ಅದಕ್ಕಾಗಿ ಹೋರಾಡಲು ನಾನಿಲ್ಲಿ ಬಂದಿದ್ದೇನೆ. ಏಕೆಂದರೆ, ಸತ್ಯವು ಜೀವನದ ಅಡಿಗಲ್ಲು. ಸಮಸ್ತ ಪ್ರಪಂಚವೂ ಸತ್ಯದ ಆಧಾರದ ಮೇಲೆ ನಿಂತಿದೆ. ಸರ್ವ ವ್ಯಾಪಿಯೂ, ಆದ್ಯಂತ ರಹಿತವೂ ಆದದ್ದು—ಸತ್ಯ.

ಸಕಲ ವಿಚಾರಗಳಲ್ಲೂ ಸತ್ಯಕ್ಕೆ ಅಗ್ರ ಸ್ಥಾನವನ್ನು ಕೊಡುವುದು ಸತ್ಯ, ಇದು ನನ್ನ ಅನುಭವ ಮಾತು. ನನ್ನ ರಾಜಕರಣವು ಅಸತ್ಯರಹಿತವಾಗಿರಬೇಕೆಂಬುವುದೇ ನನ್ನ ಆಕಾಂಕ್ಷೆ. ಅಸತ್ಯದಿಂದ ಎಂಥಾ ಮಹತ್ಕಾರ್ಯ ಸಾಧನೆಯಾಗುವ ಸಂಭವವಿದ್ದರೂ, ನಾನು ಜೇರೆ ಸತ್ಯ ಮಾರ್ಗವನ್ನು ಬಿಟ್ಟು ಅಸತ್ಯ ಕೂಪಕ್ಕೆ ಬೀಳಲಾರೆ.

ನನ್ನ ವಿಚಾರವಾಗಿ ಅನೇಕರು ಅನೇಕ ವಿಧವಾಗಿ ಹೇಳುತ್ತಾರೆ. ನಾನು ಮಹಾ ತತ್ವಜ್ಞಾನಿ ಎನ್ನುವವರು ಕೆಲವರು. ನಾನು ಭಾರಿ ಪಗಂಬರನೆನ್ನುವವರು ಹಲವರು. ಆದರೆ ನಾನಿಷ್ಟು ಮಾತ್ರ ಹೇಳಬಲ್ಲೆ. ನಾನು ಮಹಾ ಜ್ಞಾನಿಯೂ ಅಲ್ಲ, ಪಗಂಬರನೂ ಅಲ್ಲ; ದೈವಭಕ್ತಿಯುಕ್ತವಾದ ಸರಳ ಜೀವನವನ್ನು ನಡಿಸುವುದೇ ನನ್ನ ಪರಮ ಧ್ಯೇಯ.

"ಇತರರು ನನ್ನ ವಿಚಾರವಾಗಿ ಬರೆದಿರುವುದನ್ನು ಓದಿದಾಗಲಾಗಲಿ, ಕೇಳಿದಾಗಲಾಗಲೀ ನನ್ನ ಮನಶ್ಶಾಂತಿಗೆ ಭಂಗವುಂಟಾಗುವುದೇ? ನನ್ನ ಮನಶ್ಶಾಂತಿಗೆ ಭಂಗ ಬರಲು ಕಾರಣವಿಲ್ಲ" ನನ್ನ ಕಾರ್ಯ ಕಲಾಪಗಳಲ್ಲಿ ನನ್ನದೇ ಆದ ತತ್ವವೊಂದನ್ನು ನಾನು ಆಚರಿಸುತ್ತೇನೆ. ಪ್ರತಿ ದಿನವೂ ಸ್ವಲ್ಪ ಕಾಲ ನೂಲು ತೆಗೆಯುವುದು ನನ್ನ ಅಭ್ಯಾಸ. ನೂಲು ತೆಗೆಯುವಾಗ ನಾನು ವಿಶಾದರೂಪ ಆಲೋಚನೆಯನ್ನು ಮಾಡುತ್ತಿರುತ್ತೇನೆ. ಈ ಆಲೋಚನಾ ಕಾಲದಲ್ಲಿ ಯಾವವಿಧವಾದ ದುಷ್ಟಭಾವನೆಗಳೂ ನನ್ನ ಮನವನ್ನು ಪ್ರವೇಶಿಸಲು ನಾನು ಅವಕಾಶ ಕೊಡುವುದಿಲ್ಲ. ನೀವೂ ಚರಕದ ಅಭ್ಯಾಸವನ್ನು ಕೈಗೊಳ್ಳಿ. ಈ ಚರಕವು ನನಗಿಂತಲೂ ಉತ್ತಮವಾದ ಬೋಧಕನೆಂದು ನಿಮಗೆ ತೋರುವುದು. ಸಹನೆ, ಕಾರ್ಯದಕ್ಷತೆ ಮತ್ತು ಸರಳತೆಗಳನ್ನದು ನಿಮಗೆ ಚೆನ್ನಾಗಿ ಹೇಳಿಕೊಡುವುದು. ಈ ಚರಕವು ಹಿಂದೂ ದೇಶದ ಅಸಂಖ್ಯಾತ ಜನರ ಅನ್ನದಾತ, ಅಂತೆಯೇ ಇದು ಅವರ ಆರಾಧ್ಯ.

ನನ್ನ ಉಡುಪಿನ ವಿಚಾರವಾಗಿ ಅನೇಕರು ಕುತರ್ಕ ಮಾಡುತ್ತಾರೆ, ಹಾಸ್ಯಮಾಡುತ್ತಾರೆ. ನಾನೇಕೆ ಸೊಂಟಕ್ಕೊಂದು ಲಂಗೋಟಿ ಮಾತ್ರ ಸುತ್ತಿಕೊಂಡಿದ್ದೇನೆಂದು ಅನೇಕ ಜನ [illegible] ನನ್ನನ್ನು ಕೇಳುತ್ತಾರೆ. ನಾನು ಆ ರೀತಿ ವಸ್ತ್ರಧಾರಣೆ ಮಾಡುವುದನ್ನು ಕಂಡು ಅನೇಕರು ಅಸಹ್ಯಪಟ್ಟುಕೊಳ್ಳುತ್ತಾರೆ. ಆಂಗ್ಲೇಯರು ಇಂಡಿಯಾಕ್ಕೆ ಬಂದಾಗ ತಮ್ಮ ದೇಶದ ಉಡುಪುಗಳನ್ನು ಬಿಟ್ಟು, ಇಂಡಿಯಾದ ಹವೆಗೆ ಹಿತಕರವಾದ ಹಿಂದೀ ಉಡುಪನ್ನು ಅವರು ಧರಿಸುವರೇನು? ಅವರೆಂದಿಗೂ ಹಾಗೆ ಮಾಡರು. ಆದ ಮೇಲೆ ನಾನೇಕೆ ನನಗೆ ಒಗ್ಗಿರುವ ಉಡುಪನ್ನು ಬಿಟ್ಟು ವಿದೇಶಿ ಉಡುಪನ್ನು ಧರಿಸಬೇಕು? ನನ್ನ ಉಡುಪಿನ ವಿಚಾರವಾಗಿ ಪ್ರಶ್ನೆ ಮಾಡುವವರಿಗೆ ನಾನು ಕೊಡುವ ಉತ್ತರವಿದೇ.

ನಾನು ಇಂಗ್ಲೆಂಡಿಗೆ ವಲಸೆ ಬಂದು ಇಲ್ಲೇ ನೆಲೆಸಲಿದ್ದರೆ, ನಾನು ಆಂಗ್ಲ ಆಚಾರ ವ್ಯವಹಾರಗಳನ್ನು ಆಚರಣೆಗೆ ತಂದುಕೊಳ್ಳುವುದು ಆವಶ್ಯಕ. ಆದರೆ ನಾನೀಗ ಇಂಗ್ಲೆಂಡಿಗೆ ಬಂದಿರುವುದು, ಒಂದು ಮಹತ್ಕಾರ್ಯ ಸಾಧನೆಗಾಗಿ. ನನ್ನನ್ನು ಈ ಕಾರ್ಯದಲ್ಲಿ ನಿಯೋಜಿಸಿರುವ ಅಸಂಖ್ಯಾತರಾದ ಭಾರತೀಯರು ಧರಿಸುವ ಉಡುಪನ್ನೇ ನಾನು ಧರಿಸಿದ್ದೇನೆ. ನಾನು ಸಾಧಿಸಲಿರುವ ಮಹತ್ಕಾರ್ಯದ ಲಾಂಛನ ಆ ಉಡುಪು. ನನ್ನ ದೇಶದ ಜನರ ಪ್ರತಿನಿಧಿ ನಾನು. ನನ್ನ ಕರ್ತವ್ಯವನ್ನು ನಾನು ನೆರವೇರಿಸಲು ಹೆಣಗುತ್ತಿದ್ದೇನೆ.

ಸ್ತ್ರೀ ಪುರುಷರ ಸಮಾನತೆಯ ವಿಚಾರ. ಸ್ತ್ರೀಯರಿಗೂ ಪುರುಷರಿಗೂ ಸಮಾನವಾದ ಹಕ್ಕುಬಾಧ್ಯತೆಗಳಿರಬೇಕೆಂಬುವುದೇ ನನ್ನ ಬಯಕೆ. ಸ್ವಾತಂತ್ರ್ಯ ಭಾರತದಲ್ಲಿ ಅವರಿಗೆ ಆ ಹಕ್ಕು ದೊರೆಯುವಂತೆ ಮಾಡುತ್ತೇನೆ. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಮಂದಿ ಭಾರತ ಮಹಿಳೆಯರು ನನ್ನ ಸಂಗಡ ಸಹಕರಿಸಿ ಕೆಲಸ ಮಾಡಿದ್ದಾರೆ. ನನಗೂ, ಅವರಿಗೂ ಗಾಢ ಮೈತ್ರಿಯುಂಟಾಗಿದೆ. ನನ್ನ ಅಭಿಪ್ರಾಯದಲ್ಲಿ ನನ್ನ ಬ್ರಹ್ಮಚರ್ಯ ಮತ್ತು ಸ್ತ್ರೀಯರ ವಿಚಾರದಲ್ಲಿ ನನಗಿರುವ ವಾತ್ಸಲ್ಯ ಇವೇ ನನ್ನ ಅಕೃತ್ರಿಮ ಸ್ನೇಹವನ್ನು ಪ್ರೇರೇಪಿಸಿದುವೆಂದು ತೋರುತ್ತದೆ. ನಮ್ಮ ದೇಶದಲ್ಲಿ ಸ್ತ್ರೀಯರು ನಿಕೃಷ್ಟವಾಗಿ ಗಣಿಸಲ್ಪಟ್ಟಿದ್ದರೆಂದು ನಿಮ್ಮಲ್ಲನೇಕರು (ಪಾಶ್ಚಾತ್ಯರು) ನಂಬಿದ್ದೀರಿ. ಅದೆಲ್ಲಾ ಸುಳ್ಳು. ಬಾಹ್ಯ ದೃಷ್ಟಿಯಿಂದ ನೋಡುವವರಿಗೆ ನಮ್ಮ ಸ್ತ್ರೀಯರು ಬಂಧನದಲ್ಲಿ ಸಿಕ್ಕಿರುವಂತೆ ತೋರುತ್ತದಷ್ಟೆ. ಆದರೆ ಇದು ವಾಸ್ತವಾಂಶವಲ್ಲ.

ನಮ್ಮ ಮನೆಗಳಲ್ಲಿ ಸ್ತ್ರೀಯರಿಗೆ ಅಪಾರ ಸ್ವಾತಂತ್ರ್ಯವಿದೆ. ಸಾವಿರಾರು ವರ್ಷಗಳಿಂದ ನಮ್ಮ ದೇಶದ ಸ್ತ್ರೀಯರೂ ಪುರುಷರೂ ಸಮಾನಸ್ಥಾನದಲ್ಲಿದ್ದಾರೆ. [illegible] ಮನೆ ಕೆಲಸವನ್ನು [illegible] ಬಿಟ್ಟರೆ ಅನೇಕ ಜನ ಗಂಡಸರು [illegible].

ನಮ್ಮ ಹಳ್ಳಿಗಾಡುಗಳಲ್ಲಿ ನಮ್ಮ ಸ್ತ್ರೀಯರೂ, ಪುರುಷರೂ ಯಾವ ವಿಧವಾದ ಭೇದವೂ ಇಲ್ಲದೆ ಸಮಾನಸ್ಕಂಧರಂತೆ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ. ತಮ್ಮ ಜೀವನ ರಥವನ್ನು ಸುಗಮವಾಗಿ ನಡೆಸಲು ಅವರಿಬ್ಬರೂ ಪರಸ್ಪರ ಸ್ನೇಹಿತರಂತೆ ಕೆಲಸ ಮಾಡುವರು. ಈ ಸ್ತ್ರೀ ಪುರುಷ ಸ್ವಾತಂತ್ರ್ಯವು ನಮಗೆ ಗೋಚರವಾಗುವುದು. ಧನಿಕರ ಸಮಾಜದಲ್ಲಿ ಹಣದ ಶಕ್ತಿಯಿಂದ ಅವರು ತಮ್ಮ ಕೆಲಸಗಳನ್ನು ಇತರರ ಕೈಯಲ್ಲಿ ಮಾಡಿಸಿಕೊಳ್ಳುತ್ತಾ ತಾವು ಅಪ್ರಯೋಜಕರಾಗಿ ಪರಿಣಮಿಸಿರುವರು. ಧನಿಕರ ಮನೆಗಳಲ್ಲಿ ಮಾತ್ರ ಸ್ತ್ರೀಯರು ಕೆಳಗೆ ಮೇಲಗೆ ಅತ್ತಿಂದಿತ್ತಗೆ ಚಲಿಸುತ್ತಿರುವ ಬೊಂಬೆಯಂತಿರುವರು. ಆ ಮನೆಗಳಿಗೆ ಅವರೊಂದು ಭೂಷಣ ಮಾತ್ರ.

ಸ್ವತಂತ್ರ ಭಾರತದಲ್ಲಿ ಸಮಸ್ತ ಅಧಿಕಾರಗಳಲ್ಲಿಯೂ, ಉದ್ಯೋಗಗಳಲ್ಲಿಯೂ ಸ್ತ್ರೀಯರ ಪ್ರವೇಶಕ್ಕೆ ಅವಕಾಶವಿರಬೇಕು. [illegible] ಆಗಿಲ್ಲದಿದ್ದಲ್ಲಿ, ಸ್ತ್ರೀ ಪುರುಷರಿಬ್ಬರಿಗೂ ಸಮಾನವಾದ ಹಕ್ಕುಬಾಧ್ಯತೆಗಳುಳ್ಳವರೆಂದು ಹೇಳುವುದು ಹೇಗೆ? [illegible] ನಾವು ನಮ್ಮ ಸ್ತ್ರೀಯರಿಗೆ ಈ ಸ್ವಾತಂತ್ರ್ಯವನ್ನು [illegible] ವಾದರೂ, ಅವರು ಮಾತ್ರ ಮನೆತನದ ರಾಣಿಯ ಪಟ್ಟವನ್ನು ಬಿಟ್ಟು ಕೊಟ್ಟು ಈ ಉದ್ಯೋಗಗಳಿಗೆ ಸೇರ ಬಯಸುವುದು [illegible]

ಸಂಬುತ್ತೇನೆ. ಏಕೆಂದರೆ ಅವಳು ಸ್ವಭಾವತಃ ಮಾತೃತ್ವಕ್ಕೆ ತಕ್ಕಷ್ಟು ಬಿಟ್ಟು ಕೊಡತಕ್ಕವಳು. ನ್ಯಾಯದಲ್ಲಿ ಕೇಂದ್ರೀಕೃತವಾಗಿರುವ ಸಂಸಾರವೆಂಬ ತೀಕ್ಷ್ಣವಾದ ಮಕ್ಕಳುಗಳಿಂದ ಪ್ರವಾಸವಂತೆ ಕೆಲಸವೂ ಹೊರಗಿನ ಮನೆಯವರಿಗೆ ಹೋದರೆ ಮನೆವಾರ್ತೆಯು ನಿರುಪಯೋಗವಾಗುವುದಿಲ್ಲವೆಂದು ನನ್ನ ಅಭಿಪ್ರಾಯ. ತಾಯಿಯು ಮನೆ ಬಿಟ್ಟು ಹೊರಟು ಹೋದರೆ ಮಕ್ಕಳ ರಕ್ಷಣೆಯನ್ನು ಶಾಸ್ತ್ರೋಕ್ತ ಪದ್ಧತಿಯಿಂದ ನೋಡಿಕೊಳ್ಳುವರಿನ್ನಾರು? ಮಕ್ಕಳೇ ಸಂಸಾರದ ಸರ್ವಸ್ವ. ಬಡ ಜನತೆಯ ಭಾಗ್ಯವೂ ಅವರೇ.

ಬುದ್ಧಿವತಿಯರಾದ ಹಲವು ಸ್ತ್ರೀಯರು ತಮಗೆ ತಕ್ಕ ಉದ್ಯೋಗವನ್ನವಲಂಬಿಸಿ, ಹೆಚ್ಚು ಹಣವನ್ನು ಸಂಪಾದಿಸಬಹುದು. ತಮ್ಮ ಮಕ್ಕಳ ಪೋಷಣೆಯನ್ನು ಅತಿ ಜಾಗರೂಕತೆಯಿಂದ ನೋಡಿಕೊಳ್ಳುವ ದಾಯಿಯರನ್ನು ನಿಯಮಿಸಬಹುದು. ಇವೆಲ್ಲಾ ವಿಶೇಷ ವಿಚಾರಗಳು. ಸಾಧಾರಣವಾಗಿ ತನ್ನ ಸಂಸಾರದ ರಕ್ಷಣೆಗೆ ಬೇಕಾದ ದ್ರವ್ಯಾರ್ಜನೆ ಮಾಡುವುದು ಪುರುಷನ ಕರ್ತವ್ಯ. ಅವನು ತನ್ನ ಆ ಪವಿತ್ರ ಕರ್ತವ್ಯವನ್ನು ನೆರವೇರಿಸಲು ಬದ್ಧನಾಗಿರುತ್ತಾನೆ. ಅವನು ತನ್ನ ಆ ಕರ್ತವ್ಯವನ್ನು ನೆರವೇರಿಸಲು ತೃಪ್ತನಾಗಬೇಕು, ತನ್ನ ಗೃಹವನ್ನು ಕಂಪಾದನೆಗಾಗಿ ಕಳುಹಿಸುವುದು ತನ್ನ ಮಕ್ಕಳಿಗೆ ಪೂರ್ಣ ಸುಖ ವಂಚಿಸಿದಂತೆ. ತಾಯಿಯನ್ನು ಮನೆಯಿಂದ ಮಕ್ಕಳನ್ನು ಪೋಷಿಸುವಂತೆ ಮಾಡುವುದು ಎಷ್ಟು ಉಚಿತವಾಗಿರುವುದೋ? ಮಕ್ಕಳ ಶಾರೀರಕ ಹಾಗೂ ನೈತಿಕ ಅಭಿವೃದ್ಧಿಯನ್ನು ಉತ್ತಮ ರೀತಿಯಿಂದ ಸಾಗಿಸುವುದು ತಾಯಿಯಾದವಳ ಕರ್ತವ್ಯ. ಜನಾಂಗದ ಉನ್ನತಿ ಅವನತಿಗಳು ತಾಯಿಯ ಈ ಕರ್ತವ್ಯವನ್ನವಲಂಬಿಸಿದೆ. ತಾಯಿಯು ತನ್ನ ಈ ಪ್ರಥಮ ಕರ್ತವ್ಯವನ್ನು ಸರಿಯಾಗಿ ಮಾಡದಿದ್ದಲ್ಲಿ ಆ ಮೇಲೆ ಆ ನಷ್ಟವನ್ನು ಸರಿಗೊಳಿಸುವುದು ಯಾರಿಂದಲೂ ಸಾಧ್ಯವಿಲ್ಲ. ಮಹಾತ್ಮರ ಸಾಧಕರಾದ ಕೆಲವರು ಸಂಸಾರ ಸುಖವನ್ನು ತ್ಯಜಿಸಿ, ಸ್ವಾರ್ಥತ್ಯಾಗ, ಬ್ರಹ್ಮಚರ್ಯವನ್ನು ಅವಲಂಬಿಸಬಹುದು. ಆದರೆ ಜನಸಾಮಾನ್ಯಕ್ಕೆ ಸಂಸಾರ ಸೇವೆ ದೇವನ ಆವಶ್ಯಕತೆಯುಂಟೆಂದು ಹೇಳಬಹುದು.

"ಪ್ರಜಾಮತ."

ನಾಲ್ಕು ಮಕ್ಕಳ ತಾಯಿಯು ಗಂಡಸಾದಳು!

ವಾರ್ಸಾದ ಚಿಕಿತ್ಸಾಲಯ (ಆಸ್ಪತ್ರೆ) ದಲ್ಲಿ ಒರ್ವ ವಿಚಿತ್ರ ರೋಗಿಯ ಚಿಕಿತ್ಸೆಯಾಯಿತು. ಹಿಂದೂ ಜಾತಿಯ ಒರ್ವ ಹೆಣ್ಣು ಮಗಳು ನಾಲ್ಕು ಮಕ್ಕಳನ್ನು ಹಡೆದಿದ್ದಾಳೆ. ನಾಲ್ಕನೇ ಕೂಸು ಹುಟ್ಟಿದಂದಿನಿಂದ ಈ ಹೆಣ್ಣು ಮಗಳಿಗೆ ಪುರುಷ ರೂಪವು ಬರ ಹತ್ತಿದೆ. ಸ್ತ್ರೀಯರಿಗೆ ಸಹಜವಾದ ಅವಳ ಸುಸ್ವರವು ಪುರುಷರಂತೆ ಕಠೋರವಾಗ ಹತ್ತಿದೆ. ಬಾಳೆಯ ದಿಂಡಿನಂತಿದ್ದ ಅವಳ ಕೈ ಕಾಲುಗಳ ಮೇಲೆ ಕೂದಲುಗಳು ಬೆಳೆಯ ಹತ್ತಿವೆ. ಇಷ್ಟಕ್ಕೇ ನಿಲ್ಲಲಿಲ್ಲ, ಈ ಚಂದ್ರವದನೆಗೆ ಇತ್ತೀಚೆಗಾಗಿ ಗಡ್ಡ, ಮೀಸೆಗಳೂ ಬೆಳೆಯ ಹತ್ತಿವೆ. ಸಾರಾಂಶ ನಾಲ್ಕು ಮಕ್ಕಳ ಈ ಮಹಾ ತಾಯಿಯು ಗಂಡಸಾಗ ಹತ್ತಿದ್ದಾಳೆ.

ಡಾಕ್ಟರರ ಅಭಿಪ್ರಾಯ.

ಈ ಬಗ್ಗೆ ಸುಪ್ರಸಿದ್ಧ ಡಾ. ಹಿಷ್ಟರ ಫೆಲ್ಡ ಎಂಬವರು ಅನ್ನುವುದೇನೆಂದರೆ—

ಇದು ನಿಜವಾಗಿಯೂ ವಿಚಿತ್ರ ಸಂಗತಿಯು. ಯಾಕೆಂದರೆ ನಾಲ್ಕು ಮಗನ ಮೇಲೆ ಈ ಹೆಣ್ಣು ಮಗಳ 'ಲಿಂಗವು' (ಜಾತಿ) ಬದಲಿಸಿತು. ಸ್ತ್ರೀ ಪುರುಷರಿಗೆ ಜನನೇಂದ್ರಿಯಗಳು ಬಹಳ ಸಾಮಾನ್ಯವಾದುವುಗಳಾಗಿವೆ. ಕೆಲವೊಂದು ಪರಿಸ್ಥಿತಿಯಲ್ಲಿ ಹೀಗೆ ಲಿಂಗ ಬೇಧವಾಗುವುದುಂಟು ಎಂದು ನುಡಿದನು.

ಹೀಗೆ ಉಭಯ ಸಾಮಾನ್ಯ ಜನನೇಂದ್ರಿಯಗಳುಳ್ಳ ಒಂದು ವ್ಯಕ್ತಿಯು ಮತ್ತೊಂದು ವ್ಯಕ್ತಿಗೆ ಗರ್ಭದಾನ ಮಾಡಲೂ ಸ್ವತಃ ಗರ್ಭ ಧರಿಸಲು ಶಕ್ಯವಿದೆಯೋ? ಎಂದು ಕೇಳಲು ಡಾಕ್ಟರರು—ಇದು ಶಕ್ಯವಿಲ್ಲ. ಇಂಥ ಉದಾಹರಣೆಗಳು ನನ್ನ ಕಣ್ಣ ಮುಂದೆ ಬಂದಿಲ್ಲ. ಆದರೆ ಈ ಪ್ರಕಾರದ ಉದಾಹರಣೆಗಳನ್ನು ಕಥೆ ಕಾದಂಬರಿಗಳಲ್ಲಿ ಓದಿದ್ದೇನೆ. ಎಂದು ಉತ್ತರಿಸಿದರು. ಆಗಲೂ ತಿಬಿಂಗಿಯ ಕಥೆಯೇನೂ ಸುಳ್ಳಲ್ಲವೆಂಬಂತಾಯಿತು.

'ಕ. ಟಾ.'

ಮಧು ಸಂಗ್ರಹ.

ಹಣವನ್ನು ಮನಸ್ಸಿಗೆ ಬಂದಂತೆ ವೆಚ್ಚ ಮಾಡುವವರು ಲಂಡನ್, ಪ್ಯಾರಿಸ್, ನ್ಯೂಯಾರ್ಕ ಪಟ್ಟಣಗಳಲ್ಲಿಲ್ಲ; ಈ ಬಡ ಹಿಂದೂಸ್ಥಾನದಲ್ಲಿಯೇ ಇದ್ದಾರೆಂದು ಶ್ರೀ ಕನ್ಹಯಾಲಾಲ ಗೌಡಾ ಎಂಬುವವರು 'ದ ಪ್ಯಾಥಾಲಜಿ ಆಫ್ ಪ್ರಿನ್ಸಸ್' ಎಂಬ ಪುಸ್ತಕದಲ್ಲಿ ಈ ಪ್ರಕಾರ ದೃಢೀಕರಿಸಿದ್ದಾರೆ—

"ಭರತಖಂಡದಲ್ಲಿ ೫೬೨ ಸಂಸ್ಥಾನಾಧಿಪತಿಗಳಿದ್ದಾರೆ. ಇವರ ಅಧೀನದಲ್ಲಿ ೭ ಕೋಟಿ ಜನರಿದ್ದರೂ, ಅವರ ಕ್ಷೇಮಕ್ಕಾಗಿ ಈ ರಾಜರುಗಳಿಲ್ಲದೆ ಕೇವಲ ತಮ್ಮ ೫೬೨ ಜನರಿಗಾಗಿಯೇ ಇದ್ದಾರೆ. ಈ ರಾಜರುಗಳ ಉತ್ಪನ್ನದ ಮೇಲಿಂದ ಇವರ ವೆಚ್ಚದ ಪ್ರಮಾಣವು ಅತ್ಯಧಿಕವಾಗಿದೆ.

ರಾಜರುಗಳ ಹೆಸರು.	ಉತ್ಪನ್ನ.	ವೆಚ್ಚದ ಪ್ರಮಾಣ
ಇಂಗ್ಲೆಂಡ್	೧೬೦೦	೧
ಬೆಲ್ಜಂ	೧೦೦೦	,,
ಇಟಲಿ	೫೦೦	,,
ಡೆನ್ಮಾರ್ಕ	೩೦೦	,,
ಜಪಾನ್	೪೦೨	,,
ತ್ರಾವಣಕೋರ	೧೭	,,
ಮೈಸೂರು	೧೪	,,
ನಿಜಾಮ	೧೩	,,
ಬರೋಡ	೧೩	,,

ತಮ್ಮ ಉತ್ಪನ್ನದ ೫ನೇಯ ಒಂದು ಭಾಗವನ್ನು ಬಿಕಾನೇರದ ರಾಜರು ವೆಚ್ಚ ಮಾಡುತ್ತಿದ್ದಾರೆ. ಆದಾಯದ ೩ನೇ ಒಂದು ಭಾಗವನ್ನು ವೆಚ್ಚ ಮಾಡುವ ಸಂಸ್ಥಾನಿಕರೂ ಈ ದೇಶದಲ್ಲಿದ್ದಾರೆ."

ಈ ಪ್ರಕಾರ ಪ್ರಜೆಗಳು ಕಂದಾಯ ಮುಂತಾದುವುಗಳ ಮೂಲಕ ಕಷ್ಟಪಟ್ಟು ಕೊಟ್ಟ ಹಣವನ್ನು ದುಂದು ವೆಚ್ಚ ಮಾಡುವುದಕ್ಕಿಂತ ಪ್ರಜೆಗಳ ಕ್ಷೇಮಕ್ಕಾಗಿಯೇ ವಿದ್ಯೆ, ಕೈಗಾರಿಕೆ, ವೈದ್ಯಾಲಯ, ಕೆರೆ, ಬಾವಿ ಮುಂತಾದ ಲೋಕೋಪಯೋಗದ ಮಹತ್ಕಾರ್ಯಗಳನ್ನು ಮಾಡಿ ತಾವು ಕೀರ್ತಿ ಹೊಂದುವುದಲ್ಲದೆ ತಮ್ಮ ಪ್ರಜೆಗಳೂ ಸುಖಿಗಳಾಗುವಂತೆ ಮಾಡುವದು ಯುಕ್ತವಲ್ಲವೇ? ಭರತ ಖಂಡಕ್ಕೆ ಪ್ರಜಾ ಪ್ರಭುತ್ವವು ದೊರೆತಾಗ ಈ ದುಂದುಗಾರಿಕೆಯು ತಾನಾಗಿಯೇ ನಿಲ್ಲುವುದು. ಆ ಮುಂಚೆಯೇ ನಿಲ್ಲುವದು ಕ್ಷೇಮಕರವೂ, ಭೂಷಣಪ್ರದವೂ ಆಗಿಲ್ಲವೇ?

....

ಪಾಶ್ಚಾತ್ಯ ದೇಶಗಳಲ್ಲಿ ಕಾಫಿ ಕುಡಿಯುವುದು ಬಹಳ; ಜರ್ಮನಿಯಲ್ಲಿ ಒಬ್ಬ ಮನುಷ್ಯನು ವರ್ಷಕ್ಕೆ ೫ ಪೌಂಡು ಕಾಫಿ ಕುಡಿಯುತ್ತಾನೆ. ಇಂಗ್ಲೆಂಡಿನಲ್ಲಿ ಒಬ್ಬ ಮನುಷ್ಯನು ವರ್ಷಕ್ಕೆ ೧೨/೩ ಪೌಂಡು ಕಾಫಿ ಕುಡಿಯುತ್ತಾನೆ. ಕಾಫಿಯನ್ನು ಸೇವಿಸುವುದರಿಂದ ಮಿದುಳಿಗೂ ಸ್ನಾಯುಗಳಿಗೂ ಅಪಾಯ ಸಂಭವಿಸುತ್ತದೆಂದು ಒಬ್ಬ ಪಾಶ್ಚಾತ್ಯ ಡಾಕ್ಟರರು ಅಭಿಪ್ರಾಯಪಟ್ಟಿದ್ದಾರೆ.

....

ಮನುಷ್ಯನ ಆಹಾರ ಪದಾರ್ಥಗಳಲ್ಲಿ ಗೋಧಿಯು ಒಂದು ಮುಖ್ಯ ಧಾನ್ಯವಾಗಿದೆ. ಇದು ರಷ್ಯಾ ದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಮಹಾ ಯುದ್ಧದ ಪೂರ್ವದಲ್ಲಿ ಆ ದೇಶದಲ್ಲಿ ಒಂದು ವರ್ಷಕ್ಕೆ ೭೫ ಕೋಟಿ ೭೦ ಲಕ್ಷ ಬುಶೆಲ್ ಗೋಧಿಯು ಬೆಳೆಯುತ್ತಿದ್ದಿತು. ಒಂದು ಬುಶೆಲ್ ಎಂದರೆ ೧||| ಸೇರು. ಮಹಾ ಯುದ್ಧದ ನಂತರ ರಷ್ಯಾ ದೇಶದಲ್ಲಿ ಗೋಧಿಯ ಬೆಳೆಯು ಕಡಿಮೆಯಾದುದನ್ನು ನೋಡಿ ಯೂರೋಪದ ಬೇರೆ ರಾಷ್ಟ್ರಗಳೂ ಹೆಚ್ಚು ಬೆಳೆಯಲಾರಂಭಿಸಿದವು. ಮಹಾ ಯುದ್ಧದ ಮುಂಚೆ ರಷ್ಯಾ ದೇಶದ ವಿನಾ ಪ್ರಪಂಚದಲ್ಲಿ ಎಲ್ಲಾ ರಾಷ್ಟ್ರಗಳ ಗೋಧಿಯ ಬೆಳೆಯು ೧ ಅಬ್ಜ ೮೦ ಕೋಟಿ ೭೦ ಲಕ್ಷ ಬುಶೆಲ್ಸ್‌ಗಳಷ್ಟು ಇದ್ದಿತು. ಆದರೆ ಕ್ರಿ. ಶ. ೧೯೨೬ರಿಂದ ೩೦ರೊಳಗಾಗಿ ೨ ಅಬ್ಜ ೬೦ ಕೋಟಿ ೩೦ ಲಕ್ಷ ಬುಶೆಲ್ಸ್ ಗೋಧಿ ಬೆಳೆಯಲ್ಪಟ್ಟಿತು.

ರಷ್ಯಾ ದೇಶವೂ ಗೋಧಿಯನ್ನು ಹೆಚ್ಚು ಬೆಳೆಯಲಾರಂಭಿಸಿತು. ಮೊದಲು ೭೫|| ಕೋಟಿ ಬುಶೆಲ್ಸ್ ಗೋಧಿಯನ್ನು ಬೆಳೆಯುತ್ತಿದ್ದಿತಷ್ಟೆ. ಕ್ರಿ. ಶ. ೧೯೩೦ನೆಯ ವರ್ಷದಲ್ಲಿ ೧ ಅಬ್ಜ ೨ ಕೋಟಿ ೫೦ ಲಕ್ಷ ಬುಶೆಲ್ಸ್ ಗೋಧಿಯನ್ನು ಬೆಳೆಯಿತು. ಈ ವರ್ಷ ಇದಕ್ಕಿಂತಲೂ ಹೆಚ್ಚಾಗಿ ಬೆಳೆಯುವದು. ಈ ಪ್ರಕಾರ ವಿದೇಶಗಳಲ್ಲಿ ಗೋಧಿಯು ಬೆಳೆಯು ಹೆಚ್ಚಿದ್ದರಿಂದ ಹಿಂದೂಸ್ಥಾನದ ಗೋಧಿಯು ಪರದೇಶಗಳಿಗೆ ಹೋಗುವದು ಕಡಿಮೆಯಾಯಿತು. ಈ ದೇಶದಲ್ಲಿ ಗೋಧಿಯ ಬೆಲೆಯು ಕಡಿಮೆಯಾಗಿರುವುದಕ್ಕೆ ಇದೊಂದು ಮುಖ್ಯ ಕಾರಣವಾಗಿದೆ. ಎಲ್ಲಾ ರಾಷ್ಟ್ರದವರೂ ಸ್ವಾವಲಂಬಿಗಳಾದರೆ ಎಲ್ಲರಿಗೂ ಕ್ಷೇಮವಲ್ಲವೇ? ಸ್ವದೇಶಿಯ ದಿವ್ಯ ಸಂದೇಶವಾದರೂ ಇದೇ ಪ್ರಕಾರ ಇದೆ.

'ಕ ಟೈಮ್ಸ್'

ಇಂಗ್ಲೆಂಡಿನಲ್ಲಿ ಮಹಾತ್ಮ ಗಾಂಧಿಯವರು.

(೨ನೇ ಪುಟದಿಂದ ಮುಂದುವರಿದದ್ದು.)

ವೇ ಆಗಿದೆ. ಕೋಟ್ಯಾಂತರ ಜನರು ಹೊಟ್ಟೆಗೆ ಇಲ್ಲದೆ ಇರುವಾಗ ವೈಸರಾಯರು ಊಟ, ನಾಟ್ಯವನ್ನು ಏರ್ಪಡಿಸ ಬಹುದನ್ನು ಖಂಡಿಸಿದರು.

ಬರ್ಮಿಂಗ್ಹಾಮಿನ ಬಿಷಪರು ಮಹಾತ್ಮರೊಂದಿಗೆ ದೀರ್ಘಕಾಲ ಸಂಭಾಷಣೆ ನಡಿಸಿದರು.

ತಾ 19 ರಲ್ಲಿ ಲಂಡನಿಗೆ ವಾಪಸು ಬಂದರು. ತಾ. 20 ರಲ್ಲಿ ಲಂಡನಿನಲ್ಲಿ ಒಂದು ಸಂಸ್ಥೆಯಲ್ಲಿ ಭಾಷಣ ಮಾಡಿದರು.

ಜರ್ಮನಿಯ ವಿಖ್ಯಾತ ವಿಜ್ಞಾನ ಶಾಸ್ತ್ರಜ್ಞರಾದ ಪ್ರೊಫೆಸರ್ ಐನ್‌ಸ್ಟೀನ್ ಎಂಬವರು ಗಾಂಧಿಜೀಯವರ ಅಹಿಂಸಾವಾದವನ್ನು ಶ್ಲಾಘಿಸಿ ಜರ್ಮನಿಗೆ ಬರಬೇಕೆಂತ ಆಮಂತ್ರಣವನ್ನು ಕಳುಹಿಸಿರುತ್ತಾರೆ.

ಸರದಾರ್ ವಲ್ಲಭಭಾಯಿ ಪಟೇಲರು ಅನುಮತಿ ಕೊಟ್ಟರೆ ದುಂಡು ಮೇಜಿನ ಕೆಲಸ ತೀರಿದ ನಂತರ ಯುರೋಪಿನ ದೇಶಗಳಲ್ಲಿ ಪ್ರವಾಸ ಮಾಡಲು ಇಚ್ಛಿಸುತ್ತೇನೆಂತ ಮಹಾತ್ಮರು ಹೇಳಿದರು.

'ದೇಶೀ ರಾಜರುಗಳು ಫೆಡರೇಶನಿಗೆ ಸೇರಲು ಅಪೇಕ್ಷಿಸದಿದ್ದರೂ ಬ್ರಿಟಿಷ್ ಇಂಡಿಯಕ್ಕೆ ಸ್ವರಾಜ್ಯ ಕೊಡಲೇ ಬೇಕು. ಫ್ರೆಂಚ್ ಮತ್ತು ಪೋರ್ತುಗೀಸ್ ಇಂಡಿಯದವರು ಸ್ವರಾಜ್ಯ ರಚನೆಗೆ ಹೇಗೆ ಸೇರಬೇಕಾದ ಅವಶ್ಯವಿಲ್ಲವೋ ಹಾಗೆಯೇ ದೇಶೀ ರಾಜರುಗಳೂ ಸೇರಬೇಕಾದ ಅವಶ್ಯವಿಲ್ಲ. ಅಲ್ಪ ಸಂಖ್ಯಾತರ ಸಮಸ್ಯೆಯು ರಾಜಿಯಲ್ಲಿ ತೀರ್ಮಾನವಾಗದಿದ್ದರೆ ನ್ಯಾಯಮತಿಪೂರ್ಣ ಅಧಿಕಾರಿಗಳ ಪಂಚಾಯತಿಗೆ ಬಿಡಲು ತಯಾರಿದ್ದೇನೆಂತ' ಹೇಳಿದರು.

ತಾ. 18 ರಲ್ಲಿ ದೇವರ ಮಹಿಮೆ ಕುರಿತು ಗ್ರಾಮಫೋನಿನಲ್ಲಿ ರೆಕಾರ್ಡ್ ನುಡಿಯುವ ಬಗ್ಗೆ ಒಂದು ಭಾಷಣ ಮಾಡಿದರು!

ಮಗುವೋ, ಯುವತಿಯೋ?

ಇಂಗ್ಲೆಂಡಿನಲ್ಲಿ ಒಬ್ಬ ವಿಶೇಷ ತರದ ಹುಡುಗಿ ಇರುವಳು. 'ಅವಳಿಗೆ 25 ವರ್ಷ ಪ್ರಾಯವಾಗಿದ್ದರೂ ಅವಳ ಎತ್ತರ ಬರೇ 26 ಇಂಚು! ಭಾರ 33 ರಾತಲು!! ನೋಡುವಾಗ 3—4 ವರ್ಷದ ಮಕ್ಕಳಂತೆ ಇದ್ದಾಳೆ. ಅಂಗಡಿಗಳಲ್ಲಿ ತಯಾರು ಮಾಡಿದ ಅಂಗಿ, ಜಾಕೆಟುಗಳ್ಯಾವವೂ ಅವಳಿಗೆ ಸರಿಯಾಗುವುದಿಲ್ಲ; ಪ್ರತ್ಯೇಕ ಹೊಲಿಸಬೇಕಾಗಿದೆ. ಆಕೆ, ತನ್ನನ್ನು ವರಿಸಲು ಇಚ್ಛಿಸುವ ಯುವಕರ ಕೋರಿಕೆಯನ್ನು ತಿರಸ್ಕರಿಸಿ, ನಾಟಕದಲ್ಲಿ ವೇಷ ಧರಿಸಿ ನಾಟ್ಯವಾಡುವುದನ್ನು ಪ್ರೀತಿಸುತ್ತಿದ್ದಾಳೆ. ಅವಳೊಂದಿಗೆ ಇನ್ನು ಕೆಲವು ಕುಳ್ಳ ಸ್ತ್ರೀ ಪುರುಷರಿರುವರು. ಅವರ ಸಂಘ ಒಂದನ್ನು ಆಕೆಯು ಸ್ಥಾಪಿಸಿರುವಳು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೆ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಒಡವರ ದೀನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಬಡಳಿತದಿಂದ ಬರ್ಚ ಬೋಕೆ ಮಾಡಿ ಇಂಡಿಯಾ ಸರಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟ ಸರಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3 ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಬಿಚಿಗೆ ಅನ್ವಯ ಕೊಡುವೆಯೂ, ದೀರ್ಘ ಸಮಯ ಕೆಗೆಮಕೊಳ್ಳದೆಯೂ ಶೀಘ್ರದಲ್ಲಿ ವಿಮೆ ಮೊಬಲಗನ್ನು ಲಾಭ ಸಹಿತ ಸಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭವತಮಿಂದದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಗಳಾಗಿ; **ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರೆಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ** ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳೆಕೊಳ್ಳಬಾರದು.

ಆಫೀಸು—
ಟೆಂಪಲ್ ಸ್ಟ್ರೀಟ್,
ಮಡಿಕೇರಿ. (26—2)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ ಏಜೆಂಟ್.

ವರ್ತಮಾನ ಸಂಗ್ರಹ.

ಒಳದೇಶ.

"ಕೊಡಗು" ಕಂಪೆನಿಯ ಪಾಲುದಾರರ ವಾರ್ಷಿಕ ಜನ ಮೀಟಿಂಗು ಬರುವ ನವಂಬರು ತಾ. 22 ನೇ ಆದಿತ್ಯವಾ[ರ] [ಮ]ಡಿಕೇರಿಯಲ್ಲಿ ನಡೆಯಲಿಕ್ಕಿದೆ.

ಕಾಂಗ್ರೆಸ್ಸಿನ ಸೇವಾಸ್ವಯಂಸೇವಕರ ಪರೀಕ್ಷೆಯನ್ನು ನಡಿಸಲಿ[ಕ್ಕೆ] [ಹುಬ್ಬಳ್ಳಿ]ಗಿ ಧಾರವಾಡದ ಶ್ರೀಯುತ ಬಿಂದು ಮಾಧವ ಬುರ್ಲಿಯ [ಬೇ]ಗನೆ ಕೊಡಗಿಗೆ ಬರಲಿಕ್ಕಿರುವರೆಂದು ಸುದ್ದಿ ಇದೆ.

ಈ ತಾ. 21 ರಲ್ಲಿ ದಸರಾಹಬ್ಬವು ಮಡಿಕೇರಿಯಲ್ಲಿ ವಿ[ಜೃಂ]ಭಣೆಯಿಂದ ನಡಿಸಲ್ಪಟ್ಟಿತು. ಮೂರು ಕೇರುಗಳ ಮೆರ[ವ]ಣಿಗೆಯು ಪಟ್ಟಣದ ಬೀದಿಗಳಲ್ಲೆಲ್ಲಾ ಆಯಿತು. ಗಲಭೆಯು [ಯಾ]ವುದೊಂದೂ ನಡೆಯಲಿಲ್ಲ.

ಫಾರೆಸ್ಟು ರೇಂಜರ್ ಉದ್ಯೋಗಕ್ಕೆ ಡೇರಾಡೂನ್‌ನಲ್ಲಿ ಶಿ[ಕ್ಷಣ]ವನ್ನು ಹೊಂದುತ್ತಿದ್ದ ಮೆ. ಪುಟ್ಟಿಚಂಡ ಪೂವಯ್ಯನವರು [ಪ್ರ]ಥಮಗತಿಯಲ್ಲಿ ಪಾಸಾಗಿ, ಈ ತಾ. 16 ರಲ್ಲಿ ಅಂಡಮಾನ [ದ್ವೀಪ]ಕ್ಕೆ ಹೊರಟು ಹೋದರೆಂತ ತಿಳಿಯಬರುತ್ತದೆ.

ಹಿಂದೂಸ್ಥಾನೀ ಸೇವಾದಳದ ಮೆ. ಅಜ್ಜಿಕುಟ್ಟಿರ ತಮ್ಮ[ಯ್ಯ]ನವರು ಹುಬ್ಬಳ್ಳಿಯಿಂದ ಈ ತಾ. 16 ರಲ್ಲು ತಲಚೇರಿಗೆ [ಕಳ]ುಹಿಸಲ್ಪಟ್ಟಿರುವರು. ಅವರು ಮಲಬಾರಿನಲ್ಲಿ ಮೂರು [ತಿಂ]ಗಳ ವರೆಗೆ ಸೇವಾದಳಕ್ಕೆ ಸ್ವಯಂಸೇವಕರನ್ನು ತಂಟಿ ತ[ರು]ವರೆಂದು ತಿಳಿಯಬರುತ್ತದೆ.

ಶ್ರೀ ಕಾವೇರಿ ತುಲಾ ಸಂಕ್ರಮಣದ ಜಾತ್ರೆಯ ಈ [ತಾ]. 17 ರಲ್ಲಿ ನಡೆಯಿತು. ಅದೇ ದಿನ ಹಗಲು ... [ಘಂ]ಟೆಗೆ ತೀರ್ಥೋದ್ಭವವಾಯಿತು. ಈ ಸಾರಿ ಜನಸ್ತೋಮ ಕಳೆದ ವರ್ಷದಷ್ಟು ಇರಲಿಲ್ಲವೆಂತಲೂ, ಮಳೆಯ ... [ತೊಂದ]ರೆಯೇನೂ ಆಗಲಿಲ್ಲವೆಂತ ತಿಳಿಯುತ್ತೇವೆ.

ವೀರರಾಜಪೇಟೆಯಲ್ಲಿ ಕಳೆದ ತಾರೀಕು 21 ರಲ್ಲಿ ಸಹಕಾ[ರ] ಸ್ಟೋರೊಂದು ಮೆ. ಕೋದಂಡ ಕರುಂಬಯ್ಯನವರ ಅ[ಧ್ಯ]ಕ್ಷತೆಯಲ್ಲಿ ಬೆಳಿಗ್ಗೆ ಒಂಬತ್ತು ಗಂಟೆಗೆ ತೆರೆಯಲ್ಪಟ್ಟಿತಂ[ತೆ]. ಈ ಸಮಯದಲ್ಲಿ ಮೆ. ಕೆ. ಪಿ ಚಿಣ್ಣಪ್ಪನವರು ಸಹ[ಕಾ]ರ ತತ್ವ ಮತ್ತು ಸ್ಟೋರ್ ಸಂಘಗಳ ಕೆಲಸವನ್ನು ವಿವರಿ[ಸಿ] [ಭಾ]ಷಣ ಮಾಡಿದರೆಂದೂ ತಿಳಿಯುತ್ತೇವೆ.

ವೀರಾಜಪೇಟೆ—ಅಮ್ಮತ್ತಿ—ನಾಪೋಕ್ಲು ಜಮ್ಮ ಓಟರು[ಗಳ] ಪರ ಕೌನ್ಸಿಲಿನಲ್ಲಿ ಖಾಲಿ ಬಿದ್ದಿರುವ ಸ್ಥಳಕ್ಕೆ ಉಪ ಚು[ನಾ]ವಣೆಯ ಬಗ್ಯೆ ಈ ತಾ. 22 ನೇ ಗುರುವಾರ ಓಟುಗಳು ತೆ[ಗೆಯ]ಲ್ಪಟ್ಟವು. ಮೆ. ಕೆ. ಪಿ ಚಿಣ್ಣಪ್ಪನವರು ಮತ್ತು ಮೆ. [...] ಪಿ ಚಂಗಪ್ಪನವರುಗಳಿಬ್ಬರು ಮಾತ್ರ ಉಮೇದುವಾರರಾ[ಗಿ]ದ್ದರು. ಸುಮಾರು ಶೇಕಡ 50 ರಷ್ಟು ಓಟರುಗಳ ಓಟು [ಹಾಕ]ಲು ಬಂದಿದ್ದರೆಂದೂ, ಓಟುಗಳು ನಾಳೆ ದಿನ ಲೆಖ್ಖ ಮಾ[ಡಲ್ಪಡು]ವವೆಂದೂ ತಿಳಿಯುತ್ತೇವೆ.

ತಾರೀಕು 13—10—31 ರಲ್ಲಿ ದಕ್ಷಿಣ ಕೊಡಗಿನ ಸಹ[ಕಾ]ರಿಗಳ ಮೀಟಿಂಗೊಂದು ವೀರಾಜಪೇಟೆಯಲ್ಲಿ ಮೆ. ಕೋ[ದಂ]ಡ ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಈಗ ತಾ[ಜಾ]ಗಿ ಸಹಕಾರ ಸಂಘಗಳಲ್ಲಿ ರಿಜಿಸ್ಟರ್ ಮಾಡಲ್ಪಡುವ ದಸ್ತೇ[ವ]ಜುಗಳಿಗೆ ಅರ್ಧ ಸ್ಟ್ಯಾಂಪು ಡ್ಯೂಟಿ ಹಾಕಿದರ ವಿಷಯ ವಿ[ರ]ೋಧ ಮತ್ತು ಅತೃಪ್ತಿಯನ್ನು ಸೂಚಿಸಿ, ಇದನ್ನು ರದ್ದು [ಮಾ]ಡಲು ಕೊಡಗು ಕಮಿಶನರವರ ಮೂಲಕ ಚೀಫ್ ಕಮಿಶ[ನ]ರವರಿಗೆ ಠರಾವು ಕಳುಹಿಸಲಾಯಿತೆಂದೂ ತಿಳಿಯಬರುತ್ತದೆ.

ತಾರೀಕು 13—10—31 ರಲ್ಲಿ ವೀರಾಜಪೇಟೆಯಲ್ಲಿ ವೀ[ರ]ರಾಜಪೇಟೆ ನಾಡು, ಕಡಿ... ಶ್ರೀಮಂಗಲ, ಅಮ್ಮತ್ತಿ ನಾ[ಡು]ಗಳ ಸಹಕಾರಿಗಳ ಮೀಟಿಂಗೊಂದು ರಿಜಿಸ್ಟ್ರಾರವರಾದ ಮೆ. ಎಂ. ಯಸ್. ಮುಂಡಣ್ಣನವರ ಅಧ್ಯಕ್ಷತೆಯಲ್ಲಿ ನಡೆದು, ವೀ[ರ]ರಾಜಪೇಟೆಯಲ್ಲಿ ಒಂದು (ಲೋನ್ ಮತ್ತು ಸೇಲ್) ವ್ಯಾಪಾರ ಮಾಡುವ, ಮತ್ತು ಕೊಂಡುಕೊಳ್ಳುವ ಸಂಘವನ್ನು ಮಾಡಬೇಕೆಂ[ದು] ತೀರ್ಮಾನಿಸಿದಲ್ಲದೆ, ರೂಲ್ಸ್ ಮಾಡಲು 15 ಜನರಿಂದ ಕೂ[ಡಿ]ದ ಕಮಿಟಿಯೊಂದು ನೇಮಿಸಲಾಯಿತೆಂದು ತಿಳಿಯುತ್ತೇವೆ.

ಕಾವೇರಿ ಬಸ್ಸ್ ಸರ್ವಿಸಿನ ಒಬ್ಬ ಪಾಲುದಾರರಾದ ಮೆ. ಪಾಲೇಕಂಡ ಐಯ್ಯಮ್ಮನವರು ಪಾಲುದಾರಿಕೆಯನ್ನು ಒಡೆ[ಯ]ಬೇಕೆಂತ ಇನ್ನೊಬ್ಬನೇ ಪಾಲುದಾರರಾದ ಮೆ. ಪಾಂಡಂ[ಡ] ನಂಜಪ್ಪನವರ ಮೇಲೆ ತಂದ ದಾವೆಯಲ್ಲಿ ಪಾಲುದಾರಿಕೆಯನ್ನು ಒಡೆಯಲು ಮೆ. ನಂಜಪ್ಪನವರು ಒಪ್ಪಿದ್ದರಿಂದ ಹಾಗೆ[ಯೇ] ಕಮಿಷನರವರ ಕೋರ್ಟಿನಲ್ಲಿ ಈ ತಾ. 19 ರಲ್ಲಿ ತೀ[ರ್ಮಾ]ನವಾಯಿತು. ಪಾಲುವಂತಿಕೆಯ ಲೆಕ್ಕಚಾರ ತೀರುವ ವರೆಗೆ ಸದರಿ ಕೋರ್ಟಿನ ಶಿರಸ್ತೆದಾರರಾದ ಮೆ. ಕೊಡಂದೇರ ಸುಬ್ಬಯ್ಯನವರು ಸದರಿ ಸರ್ವಿಸನ್ನು ನಡಿಸಲು 'ರಸೀವರಾ'ಗಿ ನೇಮಿಸಲ್ಪಟ್ಟಿರುತ್ತಾರೆ.

ಹಿಂದೂದೇಶ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ಈ ತಾ. 27 ರಲ್ಲಿ ಡೆಲ್ಲಿಯಲ್ಲಿ ನಡೆಯುವುದು.

ದುಂಡು ಮೇಜು ಪರಿಷತ್ತಿನ ಡೆಲಿಗೇಟರುಗಳ ಕಡೇ [ತಂ]ಡವು ಈ ತಾ. 17 ರಲ್ಲಿ ಬೊಂಬಾಯಿಯಿಂದ ಲಂಡನಿ[ಗೆ] ಹೊರಟು ಹೋದರು.

ಬರುವ ಬೊಂಬಾಯಿ ಮುನ್ಸಿಪಲ್ ಕೌನ್ಸಿಲು ಚುನಾವ[ಣೆ]ಗೆ ಕಾಂಗ್ರೆಸ್ ಪಕ್ಷದ ಉಮೇದುವಾರರುಗಳು ನಿಲ್ಲುವಂತೆ ಅಲ್ಲಿಯ ಕಾಂಗ್ರೆಸ್ ಕಮಿಟಿಯವರು ತೀರ್ಮಾನಿಸಿರುವರು.

ಕೊಸ್ಸೀಪುರದಲ್ಲಿ ಒಂದು ಹತ್ತಿನೂಲು ಕಾರ್ಖಾನೆಗೆ ತಾ. 20 ರಲ್ಲಿ ಆಕಸ್ಮಿಕವಾಗಿ ಬೆಂಕಿ ಬಿತ್ತು. ಆ ಕಟ್ಟಡದಲ್ಲಿ 40 ಸಾವಿರ ಮೂಟೆ ನಾರು ಇತ್ತು. ಹಲವು ಲಕ್ಷ ರೂಪಾಯಿ ನಷ್ಟವಾಗಿದೆಯೆಂದು ತಿಳಿಯಬರುತ್ತದೆ.

ಸುಭಾಷ್ ಚಂದ್ರಬೋಸ್‌ರವರು ಬಗಟ್ಯ್ ಕಾನ್ಫರೆನ್ಸಿಗೆ ಹೋಗುತ್ತಿದ್ದಾಗ್ಯೆ ನಾಪಸ್ಟ್ರ ಪೋಲೀಸಿನವರು ಅವರನ್ನು ಕಾನೂನಿಗೆ ವಿರೋಧವಾಗಿ 31 ಗಂಟೆಗಳ ವರೆಗೆ ಪೋಲೀಸು ಸ್ಟೇಶನಿನಲ್ಲಿ ಕೂಡಿದ್ದು ನಂತರ ವಿನಹಿಂದೂ ತರತ್ತಿಲ್ಲದ ಬಿಟ್ಟರೆಂದು ಬೋಸ್‌ರವರೇ ಪ್ರಕಟಿಸಿದ್ದಾರೆ.

ಮೈಸೂರು ಪ್ರಾಂತ್ಯದ ಆರ್ಥಿಕ ಹೀನಸ್ಥಿತಿಯ ದೆಸೆಯಿಂದ ಸಿಬ್ಬಂದಿ ಖೋತೆ ಮಾಡುತ್ತಿರುವ ಕಾರಣ ಪ್ರಜೆಗಳೊಂದಿಗೆ ತಾನೂ ತ್ಯಾಗ ಮಾಡಬೇಕೆಂದು ಅಲ್ಲಿಯ ಮಹಾರಾಜರು ತನ್ನ ಸ್ವಂತ ಬೊಕ್ಕಸದಿಂದ ಎರಡು ಲಕ್ಷ ರೂ. ಕೊಡುತ್ತೇನೆಂದು ಹೇಳಿದ್ದಾರೆ. ಇದೊಂದು ಬಹು ಉದಾರದ ಮತ್ತು ಉತ್ತಮವಾದ ಉದಾಹರಣೆಯಾಗಿದೆ.

ಹಿಂದೂಸ್ಥಾನದ ಸರಕಾರದವರು ಸೂಚಿಸಿರುವಂತೆ ಎಲ್ಲಾ ಉದ್ಯೋಗಸ್ಥರುಗಳ ಸಂಬಳವನ್ನು ಶೇಕಡ 10 ರಂತೆ ಕಡಿಮೆ ಮಾಡುವುದರ ಬದಲು ಹೆಚ್ಚಿನ ಸಂಬಳದವರದು ಸ್ವಲ್ಪ ಹೆಚ್ಚಾಗಿಯೂ, ಕಡಿಮೆ ಸಂಬಳದವರದು ಸ್ವಲ್ಪ ಕಡಿಮೆ ದರದಲ್ಲೂ ಖೋತೆ ಮಾಡಬೇಕೆಂದು ಮದ್ರಾಸು ಎಗ್ಸಿಕ್ಯುಟಿವ್ ಕೌನ್ಸಿಲಿನವರು ತೀರ್ಮಾನಿಸಿರುವರೆಂದು ವರ್ತಮಾನ.

ಮಹಾತ್ಮಾ ಗಾಂಧಿಜೀಯವರ ಜನ್ಮ ದಿನ ವಾರದಲ್ಲಿ ಹಿಂದೂಸ್ಥಾನದಲ್ಲಿ 60,000 ಪೌಂಡು ಅಂದರೆ ರೂ 8,20,000 ಬೆಲೆಯ ಖಾದಿ ಬಟ್ಟೆಯು ವ್ಯಾಪಾರವಾಗಿದೆಯೆಂದು ತಿಳಿದು ಬರುತ್ತದೆ. ಅದರಲ್ಲಿ 35,000 ರೂಪಾಯಿಯ ಖಾದಿಯು ಕರ್ನಾಟಕ ಪ್ರಾಂತ್ಯದಲ್ಲಿ ವ್ಯಾಪಾರವಾಗಿದೆಯೆಂದು ತಿಳಿಯಬರುತ್ತದೆ. ಬೊಂಬಾಯಿ ಪಟ್ಟಣದಲ್ಲಿಯೇ 2,45,000 ರೂಪಾಯಿಯ ಖಾದಿಯು ಖರ್ಚಾಗಿದೆ.

ಕೆಲವು ಸಮಯದಿಂದ ಕಾಶ್ಮೀರದಲ್ಲಿ ಮುಸಲ್ಮಾನ ಗಲಾಟೆಯು ನಡೆಯುತ್ತಲೇ ಇತ್ತು. ಅಲ್ಲಿಯ ಮಹಾರಾಜರ ಉದಾರ ಬುದ್ಧಿಯಿಂದ ಅದು ಈಗ ಶಮನ ಮಾಡಲ್ಪಟ್ಟಿದೆ. ಮುಸಲ್ಮಾನರ ಕೋರಿಕೆ ಮೇರೆ ಮುಸಲ್ಮಾನರ ಮಾತ್ರವಲ್ಲ, ಎಲ್ಲಾ ಕೋಮಿನವರ ಹಕ್ಕು ಬಾಧ್ಯತೆಗಳನ್ನೂ, ಹಿತವನ್ನೂ ಕುರಿತು ವಿಚಾರಿಸಲು ಮಹಾರಾಜರು ಒಂದು ಕಮಿಶನನ್ನು ನೇಮಿಸಲು ಒಪ್ಪಿರುವರು.

ಮಧ್ಯ ಪ್ರಾಂತ್ಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರುವ ಶ್ರೀಯುತ ಯಂ. ವಿ ಅಭ್ಯಾಂಕರವರಿಗೆ, ಅವರ ಕಾಂಗ್ರೆಸ್ ಕೆಲಸ ಮತ್ತು ದೇಶಸೇವೆಗಾಗಿ ಅಲ್ಲಿಯ ಪಬ್ಲಿಕ್ ಜನರು ಈ ತಾ. 20 ರಲ್ಲಿ 10,000 ರೂಪಾಯಿಯನ್ನು ಅವರಿಗೆ ಉಚಿತವಾಗಿ ಕೊಟ್ಟರು. ಅವರು ಅದನ್ನು ವಂದನಾಪೂರ್ವಕ ಅಂಗೀಕರಿಸಿಕೊಂಡು, ಅದನ್ನು ಕಾಂಗ್ರೆಸ್ ಕೆಲಸಕ್ಕೆ ಉಪಯೋಗಿಸುತ್ತೇನೆಂತ ಹೇಳಿದರು.

ಮೈಸೂರು ಸಂಸ್ಥಾನದ ಪ್ರಜಾಪಕ್ಷ ದ್ವಿತೀಯ ಸಮ್ಮೇಳನವು ಈ ತಾ 26 ಮತ್ತು 27 ರಲ್ಲಿ ಮೈಸೂರು ರಂಗಾಚಾರ್ಲು ಮೆಮೋರಿಯಲ್ ಹಾಲ್‌ನಲ್ಲಿ ನಡೆಯುವುದೆಂತಲೂ, ಹಾಸನದ ಡಿ. ಬೋರ್ಡ್ ಅಧ್ಯಕ್ಷರಾದ ಮೆ ಹೆಚ್. ಬಿ ಗುಂಡಪ್ಪಗೌಡರವರು ಅಧ್ಯಕ್ಷತೆಯನ್ನು ವಹಿಸಲು ಒಪ್ಪಿರುವರೆಂತಲೂ ಸ್ವಾಗತ ಸಭೆಯ ಅಧ್ಯಕ್ಷರಾದ ಧ. ಸಾ. ಪಿ. ಬಸವಪ್ಪನವರು ತಿಳಿಸುತ್ತಾ...

ಮೆ. ಸೆನ್‌ಗುಪ್ತರವರು ಅನಾರೋಗ್ಯದ ದೆಸೆಯಿಂದ ಡಾಕ್ಟರುಗಳು ಹೇಳಿದ ಮೇರೆ ಯುರೋಪಿಗೆ ತನ್ನ ಪತ್ನಿ ಸಮೇತ ಈ ತಾ. 2.. ರಲ್ಲಿ ಬೊಂಬಾಯಿಯಿಂದ ಹಡಗು ಹತ್ತಿದರು. ಹಡ[ಗು] ಹತ್ತ[ುವ] ಮೊದಲು ಅವರು—'ಇಂಡಿಯಾದ ಮತ್ತು ಇಂಗ್ಲೆಂಡಿನ ಸದ್ಯದ ಸ್ಥಿತಿಯನ್ನು ನೋಡಿದರೆ 'ಯುದ್ಧವು ಸಮೀಪಿಸುತ್ತಿದೆಯೆಂದು ಸ್ಪಷ್ಟವಾಗುತ್ತದೆ. ಯುದ್ಧ ವಿರಾಮ ಸಂಧಿಯು [ಅಲ್ಪ]... ... ಬಾಲಕರನ್ನು ನಂಬಿಸುವ ಸೇನಾಧಿಪತಿಯು ಹುಚ್ಚನೆಂದೆನ್ನಿಸಿಕೊಳ್ಳುವನು. ಬರುವ ಯುದ್ಧಕ್ಕೆ ತಯಾರಾಗಿರಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಬರುವ ಯುದ್ಧದಲ್ಲಿ ಬಂಗಾಳವು ಪ್ರಾಮುಖ್ಯ ಭಾಗವನ್ನು ವಹಿಸುವುದರಲ್ಲಿ ಸಂಶಯವಿಲ್ಲ'ವೆಂದು ಮುಂತಾಗಿ ಹೇಳಿದರು.

ಮದ್ರಾಸಿನಲ್ಲಿ ಒಬ್ಬಳು ಸಿನಿಮಾ ನಟಿ ಬಹು ಸುಂದರಿ. ಆಕೆಯ ಸಿನಿಮಾದ ನಟನೆಯನ್ನು ಕಂಡು ಸಾವಿರಾರು ಮಂದಿ ಗಂಡಂದಿರು ಮನೆ ಬಿಟ್ಟು ಹೆಂಡಿರನ್ನು ತೊರೆದು, ಮಕ್ಕಳನ್ನು ಬಿಟ್ಟು—ಅವಳ ಬೆನ್ನ ಹಿಂದೆ ಓಡಾಡುತ್ತಾರಂತೆ. ಹೀಗಾಗಿ ಹೆಂಡಿರೆಲ್ಲಾ ಒಂದಾಗಿ ಅವಳ ಮೇಲೆ ಅರ್ಜಿ ಮಾಡಿದ್ದಾರೆ. 'ಇವಳು ಲೋಕಕಂಟಕಳಾಗಿದ್ದಾಳೆ. ನಮ್ಮ ಗಂಡಂದಿರ ಹೃದಯವನ್ನು ಕದ್ದಿದ್ದಾಳೆ. ಇವಳು ಸಿನಿಮಾದಲ್ಲಿ ನಟಿಸದಂತೆ, ಇದು ವರೆಗಿನ ಚಿತ್ರಗಳನ್ನು ತೋರಿಸದಂತೆ ಕೋರ್ಟಿನ ಆಜ್ಞೆಯಾಗಬೇಕು"—ಎಂದದರ ಸಾರಾಂಶ. ಆದಕ್ಕವಳ ಉತ್ತರ—ತನ್ನ ಗಂಡಂದಿರನ್ನು ಆಂಕೆಯಲ್ಲಿ ಇಡಲು ಸಾಧ್ಯವಿಲ್ಲದ ಹುಚ್ಚಿಯರಿರಬಹುದು. ಅವರು ತಮ್ಮನ್ನಾಗಲೀ, ತಮ್ಮ ಗಂಡಂದಿರನ್ನಾಗಲೀ ದೂರಬೇಕಲ್ಲದೆ ನನ್ನನ್ನಲ್ಲ—ಇದಕ್ಕೇನು ಸಂದೇಹ!

ವಿದೇಶ.

ನೀಗ್ರೊಸ್ಸೀ ಜನರ ತಲೆಯ ಕೂದಲು ಬೇರೆ ಜನರಂತೆ ನೆಟ್ಟಗೆ ಇಲ್ಲದೆ ಸುರುಳಿಕೊಂಡಿದೆ. ಅದನ್ನು ನೆಟ್ಟಗ ಮಾಡುವ ಔಷಧಿ ಕಂಡು ಹಿಡಿದು ಹಣ ಸಂಪಾದಿಸುವ ಯತ್ನವನ್ನು ಕೆಲವರು ಮಾಡಿದರು. ಆದರೆ ಅಮೇರಿಕದ ಕೆಲವು ನೀಗ್ರೊ ಜನರು ಈ ಬಲೆಗೆ ಬಿದ್ದರೂ, ದಕ್ಷಿಣ ಆಫ್ರಿಕದ ನೀಗ್ರೊ ಜನರು ಈ ಉಪಾಯದಿಂದ ದೂರವಾಗಿ ನಿಂತಿರುವರಂತೆ!

ಲಂಡನಿನಲ್ಲಿ ಹೊಸದಾಗಿ ಕಟ್ಟಲಿಕ್ಕಿರುವ ಒಂದು ಹೊಟೇಲಿಗೆ ಕಬ್ಬಿಣದ ಮುಖ್ಯ ತೊಲೆಯೊಂದನ್ನು ಅದನ್ನು ಮಾಡಿದ ಮಿಡ್ಲ್ಸ್‌ಬರೋದಿಂದ ಲಂಡನಿಗೆ ತರಲು 20,000 ಪೌಂಡ ಖರ್ಚಾಯಿತಂತೆ! ಆ ತೊಲೆಯು 63 ಅಡಿ ಉದ್ದವೂ, 98 ಟನ್ ಭಾರವೂ ಉಳ್ಳದ್ದಾಗಿದೆ. ಅದನ್ನು ಟ್ರೈನಿನಿಂದ ಲಾರಿಗೆ ತೆಗೆದು ಹಾಕಲು, ಸೂರಾರು ಕೂಲಿಗಳಿಗೆ 24 ಗಂಟೆ ಹಿಡಿಯಿತಂತೆ! ಇದೇ ಪ್ರಪಂಚದಲ್ಲಿ ಅತ್ಯಂತ ದೊಡ್ಡ ತೊಲೆಯಂತೆ.

ಬ್ರಿಟನ್ನಿನ ಪಾರ್ಲಿಮೆಂಟಿನ ಜನರಲ್ ಚುನಾವಣೆಯ ಪ್ರಚಾರ ಕೆಲಸವು ಜೋರಿನಿಂದ ನಡೆಯುತ್ತಿದೆ. 67 ಉಮೇದುವಾರರುಗಳು ವಿರೋಧವಿಲ್ಲದೆ ಚುನಾಯಿಸಲ್ಪಟ್ಟಿರುವರು. ಇನ್ನು 1221 ಉಮೇದುವಾರರುಗಳು ಅರ್ಜಿ ಹಾಕಿರುವರು. ಪಾರ್ಲಿಮೆಂಟಿನ ಒಟ್ಟು ಮೆಂಬರುಗಳ ಸಂಖ್ಯೆ 615 ಮುಖ್ಯವಾಗಿ ನೇಶನಲ್ ಸರ್ಕಾರ ಪಕ್ಷದ ಉಮೇದುವಾರರುಗಳಿಗೂ, ಲೇಬರ್ ಪಕ್ಷದ ಉಮೇದುವಾರರುಗಳಿಗೂ ಸ್ಪರ್ಧೆ ನಡೆಯುತ್ತಿದೆ. ಆ ಮಧ್ಯೆ ನೇಶನಲ್ ಸರ್ಕಾರದ ಪರ ಮಂತ್ರಿಗಳೊಳಗೆ ವ್ಯಾಪಾರ ಸುಂಕದ ಸಂಬಂಧ ಭಿನ್ನಾಭಿಪ್ರಾಯಗಳು ಹುಟ್ಟಿವೆಯಂತೆ. ಹೇಗೂ ಕನ್ಸರ್ವೇಟಿವ್ ಪಕ್ಷ ನೇಶನಲ್ ಸರ್ಕಾರದ ಪಾರ್ಟಿಯವರೇ ಬಹುಮತದಿಂದ ಚುನಾಯಿಸಲ್ಪಡುವರೆಂದು ಊಹಿಸಲಾಗಿದೆ.

ಐರ್ಲೆಂಡಿನಲ್ಲಿ ಈಗಿರುವ ಫ್ರೀ ಸ್ಟೇಟ್ ಸರ್ಕಾರವನ್ನು ಕಿತ್ತು ಹಾಕಬೇಕೆಂದು ಅಲ್ಲಿ ಕ್ರಾಂತಿ ನಡಿಸಲು ಗುಪ್ತ ಒಳಸಂಚು ನಡೆಯುತ್ತಿದೆಯೆಂದು ತಿಳಿದು ಅಲ್ಲಿಯ ಸರ್ಕಾರದವರು ಶಾಸನವನ್ನು ತತ್ಕಾಲ ಜಾರಿ ಮಾಡಿ ಕ್ರಾಂತಿಕಾರರನ್ನು ಮಿಲಿಟರಿ ನ್ಯಾಯ ಮಂಡಳಿಯ ... ಶಿಕ್ಷಿಸುವಂತೆ ಅಲ್ಲಿಯ ಪಾರ್ಲಿಮೆಂಟಿನಲ್ಲಿ ತೀರ್ಮಾನ ... ಈಗಾಗಲೇ ಮಿಲಿಟರಿ ನ್ಯಾಯ ಮಂಡಳಿಯು ನೇಮಿಸಲ್ಪಟ್ಟು, ಹನ್ನೆರಡು ಸಂಘಗಳು ಕಾನೂನು ವಿರುದ್ಧವಾದವೆಂದು ಪ್ರಕಟಿಸಲ್ಪಟ್ಟಿವೆ. ಆ ಮಿಲಿಟರಿ ಮಂಡಳಿಯು ಮರಣದಂಡನೆ ಕೊಡಲು ... ಸ್ವತಂತ್ರ ದೇಶದಲ್ಲಿ ಜನರು ದಂಗೆ ಎದ್ದು ರಕ್ತದ ಪ್ರವಾಹವುಂಟಾಗುವುದೆಂದು ಜನರು ಪಬ್ಲಿಕ್ ಮೀಟಿಂಗುಗಳಲ್ಲಿ ಭಾಷಣ ಮಾಡುತ್ತಿರುವರು.

ದಕ್ಷಿಣ ಕೊಡಗಿನ ಮಹನೀಯರಲ್ಲಿ ವಿನಂತಿ.

ಮಹನೀಯರೇ,

ಕಳೆದ ಇಪ್ಪತ್ತು ವರ್ಷಗಳಿಂದ ದಕ್ಷಿಣ ಕೊಡಗಿನ ... ಸ್ವಾರ್ಥರಹಿತ ಕೆಲಸ ಮಾಡಿ ಕೆಲಸವಿಂದ ರಿಟೈರ್ ಆದ ಶ್ರೀಮಾನ್ ಕೋದಂಡ ಮುತ್ತಣ್ಣನವರು (ಬಾರ್-ಎಟ್-ಲಾ) ದಕ್ಷಿಣ ಕೊಡಗಿನಲ್ಲಿ ತಿಳಿಯದವರು ಬಹಳ ಕಡಿಮೆ ಜನರಿರಬಹುದು. ಇವರು ತಮ್ಮ ಕೆಲಸವನ್ನು ಬಹಳ ನಿಧಾನ್ಯವಾಗಿಯೂ, ಸತ್ಯ ಪ್ರಮಾಣಿಕತೆಯಿಂದ ಮಾಡಿದ್ದು ಎಲ್ಲರಿಗೂ ತಿಳಿದೇ ಇದೆ. ಇವರನ್ನು ಸನ್ಮಾನಿಸುವ ವಿಷಯದ ಕುರಿತು ದಕ್ಷಿಣ ಕೊಡಗಿನ ಹಿತಚಿಂತಕರ ಮೀಟಿಂಗೊಂದನ್ನು ಈ ತಾರೀಕು 28ನೇ ಬುಧವಾರ ಮಧ್ಯಾಹ್ನ 2 ಗಂಟೆಗೆ ವೀರಾಜಪೇಟೆ ರಂಗ ಮಂದಿರದಲ್ಲಿ ನಡಿಸಬೇಕಾಗಿ ತೀರ್ಮಾನಿಸಿರುವುದರಿಂದ ಎಲ್ಲರೂ ದಯಮಾಡಬೇಕಾಗಿ ಕೋರುವ.

ಸಿ. ಎಸ್. ಉತ್ತಯ್ಯ,
ನಾಯಡ ಬೆಳ್ಯಪ್ಪ,
ಪಟ್ಟಡ ಚಂಗಪ್ಪ,
ಐನಂಡ ಬಿ. ಕಾ[ರ್ಯ]ಪ್ಪ,
ತಿ. ಪಿ. ಚಿಣ್ಣಪ್ಪ.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—

ವೀರರಾಜೇಂದ್ರಪೇಟೆ ನಾಡಿನ ಬೇರಿಯಲ್ಲಿರುವ ಪಾಲೇಕಂಡ ಉತ್ತಯ್ಯನಾದ ನನ್ನ ಬಾಬ್ತಿಗೆ ಪಾಲನ್ನು ... ದೇವಣಗೇರಿ ... ಮೆಂಬರ ... ಚಿಕ್ಕ ತಿಮ್ಮಕ್ಕ ಮೈಸನು ಮ... ... ಪಾಲು ಮನೆ ... ಮತ್ತು ದಾಸಪ್ಪ ವಗೈರೆ ... ಮಹದಿಮನೆ ವಗೈರೆ ಸ್ಥಿರಸೊತ್ತುಗಳನ್ನು ಮೇಲೀರ ... ಮತ್ತು ತಿಮ್ಮಮ್ಮ ... ಗೈರೆಯರು ಮೈಸರುಗಳ ಪ್ರಯೋಜನಾರ್ಥವಾಗಿ ನಾಲೇಕಂಡ ಉತ್ತಯ್ಯನಾದ ನನಗೆ ಕ್ರಮ ನಿಶ್ಚಯದಿಂದ ಎಗ್ರಿಮೆಂಟು ಮಾಡಿ ಕೊಟ್ಟಿರುವದರಿಂದ, ಈ ಮಧ್ಯೆ ಸದರಿ ಸೊತ್ತುಗಳನ್ನು ಬೇರೆ ಯಾರಾದರೂ ಭೋಗ್ಯ, ಗಿರ್ವಿ, ಕ್ರಯ ವಗೈರೆ ಮಾಡಿಕೊಂಡು ಆ ಬಗ್ಯೆ ಪಾವತಿ ಮಾಡುವ ಪಕ್ಷಕ್ಕೆ ಈ ಸೊತ್ತು ಈಡಾಗುವುದಿಲ್ಲವೆಂತ ಈ ಮೂಲಕ ತಿಳಿಸಲಾಗಿದೆ.

ಪಾಲೇಕಂಡ ಉತ್ತಯ್ಯ.

ವೀರರಾಜಪೇಟೆ
ತಾ 13—10—31.

2—2.

ದೇವರ ಮಹಿಮೆ.

ಮಹಾತ್ಮ ಗಾಂಧಿಯವರು ದೇವರ ಮಹಿಮೆ ವಿಷಯ ಪರವಾದ ಭಾಷಣವನ್ನು ಗ್ರಾಮೋಫೋನಿಗೆ ತಾ. [illegible] ರ್ಕಾರ್ಡ್ ಮಾಡಿದ್ದಾರೆ. ಇದೇ ವಿಷಯ ಇವರು ಹೇಳಿ ಕಳೆ ಕೊಟ್ಟ ಅಭಿಪ್ರಾಯವೇನೆಂದರೆ—

ಸರ್ವವನ್ನೂ ವ್ಯಾಪಿಸಿರುವ ತಿಳಿಯಲು ಅಶಕ್ಯವಾದ ಶಕ್ತಿಯು ಇದೆ. ಅದು ನನಗೆ ಪ್ರತ್ಯಕ್ಷಗೋಚರವಾಗದಿದ್ದರೂ ನನಗೆ ಅನುಭವಕ್ಕೆ ಸಿಕ್ಕುತ್ತದೆ. ಆ ಸಾಕ್ಷ್ಯ ಸಿಕ್ಕದೆ, ಇದೆಯೆಂತ ಭಾಸವಾಗುತ್ತಿದ್ದರೂ ರುಜುವಾತಿಗೆ ಒಳಗಾಗದ ವಸ್ತು. ನನ್ನ ಇಂದ್ರಿಯಗಳಿಗೆ ಗೋಚರವಾಗುವ ಎಲ್ಲಾ ಇತರ ವಿಷಯಗಳಿಗಿಂತಲೂ ಬೇರೆ ತರದ್ದಾಗಿದೆ. ಅದು ಇಂದ್ರಿಯಗಳನ್ನೆಲ್ಲಾ ಮೀರಿದ ವಸ್ತುವಾಗಿದೆ. ಕೆಲವು ಮಟ್ಟಿಗೆ ದೇವರು ಇದ್ದಾನೆಂತ ಕಾರಣ ಕೊಟ್ಟು ನಿದರ್ಶಿಸಬಹುದು.

ಸಾಧಾರಣ ಐಹಿಕ ವಿಷಯಗಳಲ್ಲೂ ಜನರು ತಮ್ಮನ್ನು ಯಾರು ಆಳುತ್ತಾರೆ, ಯಾಕೆ, ಹೇಗೆ ಆಳುತ್ತಾರೆಂಬದನ್ನು ತಿಳಿದುಕೊಂಡಿರುವುದಿಲ್ಲ. ಆದರೂ ಆಳುವಂಥಾ ಅಧಿಕಾರ ಒಂದು ಇದೆಯೆಂತ ಮಾತ್ರ ತಿಳಿದಿದ್ದಾರೆ. ಕಳೆದ ವರ್ಷ ನನ್ನ ಮೈಸೂರು ಪ್ರವಾಸದ ಕಾಲದಲ್ಲಿ ಅನೇಕ ಬಡ ಗ್ರಾಮವಾಸಿಗಳನ್ನು ನೋಡಿದೆ. ನನ್ನ ಸವಾಲಿಗೆ, ತಮ್ಮನ್ನು ಯಾರೋ ದೇವರು ಆಳುತ್ತಿದ್ದಾರೆಂತ ಉತ್ತರ ದೊರೆಯಿತು. ತಮ್ಮನ್ನು ಆಳುವ ರಾಜನ ವಿಷಯ ಆ ಗ್ರಾಮವಾಸಿಗಳ ತಿಳುವಳಿಕೆ ಇಷ್ಟು ಕಡಿಮೆಯಾಗಿರುವಾಗ ಇವರು ಇವರ ರಾಜರಿಗೆ ಇರ ವ್ಯತ್ಯಾಸ ತ ದೇವರಿಗೆ ನಾನು ಅತಿ ಅಲ್ಪ ವಿಷಯವಾಗಿರುವಾಗ್ಯೂ, ರಾಜನಿಗೆ ರಾಜನಾದ ದೇವರ ಇರುವಿಕೆಯನ್ನು ನಾನು ಅನುಭವಿಸಿ ತಿಳಿದುಕೊಳ್ಳದೆ ಇರುವುದರಲ್ಲಿ ಆಶ್ಚರ್ಯವೇನಿದೆ?

ಮೈಸೂರು ರೈತರಿಗೆ ಮೈಸೂರಿನ ಆಳ್ವಿಕೆಯಲ್ಲಿ ಕ್ರಮ ವಿಶೇಷ [illegible] ಅನುಭವದಂತೆಯೇ ನನಗೂ ಈ ಪ್ರಪಂಚದಲ್ಲಿ ಕ್ರಮವಿದೆಯೆಂತ ತಿಳಿಯುತ್ತದೆ. ಪ್ರಪಂಚದಲ್ಲಿ ಇರುವ ಪ್ರತಿಯೊಂದು ವಸ್ತುವನ್ನು ಇರುವ ಅಥವಾ ಜೀವಿಸುವ ವಸ್ತುವನ್ನೂ ಆಳುತ್ತಿರುವ ಕಾನೂನು (ನಿಯಮ) ಒಂದು ಇದೆ. ಅದು ಕುರುಡ ಕಾನೂನಲ್ಲ. ಕಾರಣ, ಕಾನೂನು ಜೀವರಾಶಿಯನ್ನು ಆಳಲು ಸಾಧ್ಯವಿಲ್ಲ. ಸರ್ ಜಗದೀಶ ಚಂದ್ರ ಬೋಸರ ಶೋಧನೆಯಿಂದ ಒಂದೇ ಜಡ ವಸ್ತುವೂ ಸಹ ಜೀವವೆಂತ ಗೊತ್ತಾಗಿದೆ.

ಎಲ್ಲಾ ಜೀವವನ್ನು ಆಳುತ್ತಿರುವ ಕಾನೂನೇ (ನಿಯಮ.) ದೇವರು. ಕಾನೂನೂ, ಕಾನೂನು ಮಾಡುವವನೂ ಒಂದೇಯಾಗಿದೆ. ಕಾನೂನು ಅಥವಾ ಕಾನೂನು ಮಾಡುವವನ ವಿಷಯ ನನಗೇನೂ ಗೊತ್ತಿಲ್ಲವೆಂಬ ಕಾರಣದಿಂದ ಕಾನೂನಾಗಲೀ ಕಾನೂನು ಮಾಡುವವನಾಗಲೀ ಇಲ್ಲವೆಂತ ನಾನು ಹೇಳಲು ಅಸಾಧ್ಯ! ದೇಶವನ್ನು ಆಳುವ ಶಕ್ತಿ ಇರುವುದನ್ನು ನಾನು ತಿಳಿದುಕೊಂಡರೂ, ಕೊಳ್ಳದಿದ್ದರೂ ನನಗೆ ಪರಿಣಾಮವು ಒಂದೇಯಾಗಿರುವಂತೆ ದೇವರು ಅಥವಾ ಕಾನೂನು ಇಲ್ಲವೆಂತ ನಾನು ಹೇಳಿದರೂ ಅದರ ವ್ಯಾಪಕವು ನನ್ನ ಮೇಲೆ ಏನೂ ಕಡಿಮೆಯಾಗುವುದಿಲ್ಲ. ಆದರೆ ಪ್ರಾಪಂಚಿಕ ಆಳುವ ಶಕ್ತಿಯನ್ನು ಅಂಗೀಕಾರ ಮಾಡಿಕೊಂಡರೆ ಅಂಥಾ ಆಳ್ವಿಕೆಗೆ ಒಳಗಾಗಿರುವುದು ಸುಲಭವಾಗುವಂತೆ ದೇವರ ಶಕ್ತಿಯನ್ನು ನಮ್ರತೆಯಿಂದ ಅಂಗೀಕಾರ ಮಾಡಿಕೊಂಡರೆ ಜೀವನವನ್ನು ಸಾಗಿಸುವುದು ಸುಲಭವಾಗುತ್ತದೆ.

ನನ್ನ ಸುತ್ತಲಿರುವ ಎಲ್ಲವೂ ಯಾವಾಗಲೂ ಬದಲಾಗುತ್ತಲೂ, ಸಾಯುತ್ತಲೂ ಇರುವಾಗ ಅದರಲ್ಲೆಲ್ಲಾ ಬದಲಾಗದಿರುವ, ಎಲ್ಲವನ್ನೂ ಒಂದಾಗಿಟ್ಟುಕೊಳ್ಳುವ, ಸೃಷ್ಟಿ ಮಾಡುವ, ನಾಶಪಡಿಸುವ, ಪುನಃ ಸೃಷ್ಟಿ ಮಾಡುವ ಶಕ್ತಿಯೊಂದು ಇದೆಯೆಂತ ನನಗೆ ಮಬ್ಬುಮಬ್ಬಾಗಿ ಕಾಣುತ್ತದೆ. ಆ ಶಕ್ತಿಯೇ ದೇವರು. ನನ್ನ ಇಂದ್ರಿಯಗಳಿಗೆ ಗೋಚರವಾಗುವ ಸರ್ವವೂ ನಾಶವಾಗುತ್ತಿರುವಾಗ ಅವನೊಬ್ಬನೇ ಉಳಿದಿರುತ್ತಾನೆ.

ಈ ಶಕ್ತಿಯು ಕರುಣೆಯುಕ್ತವಾಗಿರುವುದೋ? ನನಗೆ ಪೂರ್ತಿ ಕರುಣೆಯುಕ್ತವಾಗಿಯೇ ಕಾಣುತ್ತದೆ. ಯಾಕೆಂದರೆ, ಸಾವಿನಲ್ಲೂ ಜೀವವು ಇದ್ದೇ ಇದೆ. ಅಸತ್ಯದಲ್ಲೂ ಸತ್ಯವೇ ಉಳಿಯುತ್ತದೆ. ಕತ್ತಲಿನಲ್ಲೂ ಬೆಳಕು ಪುನಃ ಬರುತ್ತದೆ. ಆದ್ದರಿಂದ ದೇವರು ಜೀವ, ಸತ್ಯ, ಬೆಳಕು ಎಂತ ನಾನು ಭಾವಿಸುತ್ತೇನೆ. ಅವನು ಕರುಣಾಳು, ಅತ್ಯಂತ ಗುಣಯುಕ್ತನು

ಬುದ್ಧಿಗೆ ಗೋಚರನಾಗುವವನಾದರೂ ಬರೇ ಬುದ್ಧಿಗೆ ತೃಪ್ತಿಯನ್ನುಂಟುಮಾಡಿದರೆ ಅವನು ದೇವರಲ್ಲ, ದೇವರು ದೇವರೆನಿಸಿಕೊಳ್ಳಬೇಕಾದರೆ ಹೃದಯವನ್ನು ಆಕ್ರಮಿಸಿ ಬದಲಾಯಿಸಬೇಕು. ಅವನು ಭಕ್ತನ ಅತಿ ಅಲ್ಪ ಕಾರ್ಯದಲ್ಲೂ ಕಾಣಿಸಿಕೊಳ್ಳಬೇಕು. ಇದು ಪಂಚೇಂದ್ರಿಯಗಳ ಮೂಲಕ ಸಾಕ್ಷಾತ್ಕಾರ ಮಾಡಿಕೊಂಡರೆ ಸಾಧ್ಯವಾಗುವುದಿಲ್ಲ. ಪಂಚೇಂದ್ರಿಯಗಳಿಂದಲೂ ಬೇರೆಯಾಗಿ ಸಾಕ್ಷಾತ್ಕಾರವಾಗಬೇಕು. ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳು ನಿಜವಾಗಿ ತೋರಬಹುದು. ಆದರೆ ಅನೇಕ ವೇಳೆ ಅಂಥಾ ಇಂದ್ರಿಯ ಗೋಚರವಾದ ವಿಷಯಗಳು ಮೋಸಕರವಾದವು. ಇಂದ್ರಿಯಗಳಿಂದ ಬೇರೆಯಾಗಿ ಆಗುವ ಸಾಕ್ಷಾತ್ಕಾರವು ನಿಜವಾದ ಸಾಕ್ಷಾತ್ಕಾರವು. ಅಂಥಾ ಸಾಕ್ಷಾತ್ಕಾರವು ಹೊರಗಿನ ರುಜುವಾತಿಗೆ ಒಳಗಾಗುವುದಿಲ್ಲ. ಅದರ ಸಾಕ್ಷಾತ್ಕಾರವಾದವನ ಗುಣ ನಡತೆಗಳು ಬದಲಾಗುವುದರಿಂದ ರುಜುವಾತಾಗುತ್ತದೆ.

ಎಲ್ಲಾ ದೇಶದಲ್ಲೂ ಎಲ್ಲಾ ಕಾಲದಲ್ಲೂ ಬಲ್ಲವರಾದ ಅನಂತ ಪುರುಷರ ಮತ್ತು ಋಷಿಗಳ ಅನುಭವವೇ ಇದಕ್ಕೆ ಸಾಕ್ಷಿ. ಈ ರುಜುವಾತನ್ನು ತಿರಸ್ಕರಿಸುವದೆಂದರೆ ತನ್ನನ್ನು ತಾನೇ ಇಲ್ಲವೆಂಬ ಹಾಗೆ.

[illegible] ಶ್ರದ್ಧೆ [illegible] ದೇವರ [illegible] ಸಂಕಲ್ಪದಿಂದ ಶ್ರದ್ಧೆಯನ್ನು [illegible]

ಕಾರಣ ಕೊಟ್ಟು ಶ್ರದ್ಧೆಗೆ [illegible] ಇಲ್ಲವೆಂತ ಒಪ್ಪುತ್ತೇನೆ. ಶ್ರದ್ಧೆಯು [illegible] ರಿದ್ದು, ಅಸಾಧ್ಯವನ್ನು ಸಾಧಿಸಲು ಪ್ರಯತ್ನಿಸಬೇಡ ಎಂತ ಮಾತ್ರ ಹೇಳಿಯೇನು. ಸೃಷ್ಟಿಯಲ್ಲಿ ಕೆಡುಕುಗಳಿರುವುದಕ್ಕೆ ಕಾರಣ ಕೊಡಲಾರೆನು. ಅದನ್ನು ಕೊಡಲು ಪ್ರಯತ್ನಿಸುವುದೆಂದರೆ ದೇವರಿಗೆ ಸಮಾನನೆಂತ ಹೇಳಿಕೊಳ್ಳಬೇಕಾಗುತ್ತದೆ. ಕೆಡಕುಗಳು ಇವೆಯೆಂತ ಮಾತ್ರ ತಿಳಿದುಕೊಳ್ಳುವಷ್ಟು ನಮ್ರತೆ ನನಗಿದೆ. ಪ್ರಪಂಚದಲ್ಲಿ ಕೆಡುಕುಗಳನ್ನು ಇರಲು ಬಿಟ್ಟದ್ದಕ್ಕಾಗಿಯೇ ದೇವರು ಶಾಂತನೆಂತ ನಾನು ಹೇಳುವುದಾಗಿದೆ. ದೇವರಿಗೆ ತನ್ನಲ್ಲಿ ಕೇಡುಗಳಿಲ್ಲ. ಕೇಡುಗಳಿದ್ದರೆ ಅವುಗಳನ್ನು ಅವನೇ ಉಂಟು ಮಾಡಿದ್ದು. ಆದರೂ ಅವುಗಳ ಸಂಪರ್ಕ ಅವನಿಗೆ ಇಲ್ಲ.

ಜೀವವನ್ನು ಕಳಕೊಂಡೇನೆಂತ ಸಹ ಎಣಿಸದೆ ಕೇಡಿನೊಂದಿಗೆ ಹೋರಾಡಲು ತಯಾರಾಗದಿದ್ದರೆ ದೇವರನ್ನು ನೋಡಲಾರೆನೆಂತ ನನಗೆ ಗೊತ್ತಿದೆ. ನನ್ನ ನಮ್ರತೆ ಮತ್ತು ಅತಿ ಸ್ವಲ್ಪ ಅನುಭವದಿಂದ ಈ ನಂಬಿಕೆಯು ಘಟ್ಟಿಯಾಗುತ್ತಲಿದೆ. ಪರಿಶುದ್ಧನಾಗಲು ಎಷ್ಟೆಷ್ಟು ನಾನು ಪ್ರಯತ್ನಿಸುತ್ತೇನೋ ಅಷ್ಟಷ್ಟು ನಾನು ದೇವರ ಸಮೀಪವಾಗುತ್ತೇನೆಂತ ನನಗೆ ತೋರುತ್ತದೆ. ನನ್ನ ಶ್ರದ್ಧೆಯು ತೋರಿಕೆಯಲ್ಲದಿರುವಾಗ, ನನ್ನ ಶ್ರದ್ಧೆಯು ಹಿಮಾಲಯದಂತೆ ಅಚಲವಾದಾಗ, ಹಿಮಾಲಯದ ಶಿಖರದಲ್ಲಿರುವ ಹಿಮದಂತೆ ಸ್ವಚ್ಛವಾದಾಗ ನಾನು ದೇವರಿಗೆ ಎಷ್ಟೊಂದು ಸಮೀಪವಾದೇನು?

ಸ್ವದೇಶೀ ಕೈಗಾರಿಕೆಗಳ ಕೈಪಿಡಿ.

ಹುಬ್ಬಳ್ಳಿಯಲ್ಲಾಗುವ ಅಖಿಲ ಭಾರತೀಯ ಸ್ವದೇಶಿ ಪ್ರದರ್ಶನದ ಡೈರೆಕ್ಟರಾದ ಡಾ. ಹರ್ಡಿಕರರು ಈ ಕೆಳಗಿನಂತೆ ಪ್ರಕಟಿಸುತ್ತಾರೆ.

ಹಿಂದೂಸ್ಥಾನದ ಮೇಲೆ ಸ್ವದೇಶಿ ವ್ರತವೆಂಬ ಒಂದು ದೊಡ್ಡ ತೆರೆಯು ಬಂದಂತಾಗಿದೆ ಮತ್ತು ಈ ಸ್ವದೇಶಿ ವ್ರತದಿಂದಲೇ ದೇಶಕ್ಕೆ ಪೂರ್ವ ಸ್ವಾತಂತ್ರ್ಯವು ದೊರೆಯುವದೆಂಬುದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ಸ್ವದೇಶಿ ಉದ್ಯೋಗಗಳಿಗೆ ಸಹಾಯ ಮಾಡುವದಕ್ಕಾಗಿ ಮತ್ತು ಕಾಂಗ್ರೆಸ್ಸಿನ ನಿಯಮಗಳ ಪ್ರಕಾರ ಸ್ವದೇಶಿವಾದವುಗಳೆಂದು ಬರುದು ಹೊಂದಿದ ಉದ್ಯೋಗಗಳ ಪರಿಚಯವನ್ನು ಜನರಿಗೆ ಮಾಡಿಕೊಡುವದಕ್ಕಾಗಿ ಹಿಂದೂಸ್ಥಾನದಲ್ಲಿಯ ಸರ್ವ ಉದ್ಯೋಗಸ್ಥರನ್ನು ಮತ್ತು ಉದ್ಯೋಗಗಳನ್ನು ಒಳಗೊಂಡ ಒಂದು ಕೈಪಿಡಿಯನ್ನು ಸಿದ್ಧಪಡಿಸಿ ಜನರ ಮುಂದೆ ಇಡಬೇಕೆಂದು ನಾವು ನಿರ್ಧರಿಸಿದ್ದೇವೆ. ಈ ಸಂಬಂಧವಾಗಿ ಸಿದ್ಧಪಡಿಸಿದ ಪ್ರಶ್ನೆ ಮಾಲೆಯನ್ನು ಈಗಾಗಲೇ ಎಲ್ಲ ಕಡೆಗೆ ಕಳುಹಿಸಿದ್ದೇವೆ. ಆದ್ದರಿಂದ ಎಲ್ಲ ಉದ್ಯೋಗಸ್ಥರು ಈ ಸುಸಂಧಿಯನ್ನು ಕಳೆದುಕೊಳ್ಳದೆ ಹುಬ್ಬಳ್ಳಿಯಲ್ಲಿರುವ ಅಖಿಲ ಭಾರತೀಯ ಸ್ವದೇಶೀ ಪ್ರದರ್ಶನದ ಕಾರ್ಯದರ್ಶಿಗಳಿಂದ ಈ ಪ್ರಶ್ನೆ ಮಾಲೆಯನ್ನು ತರಿಸಿಕೊಂಡು ಅದರಲ್ಲಿ ಕೇಳಿದ ಸಂಗತಿಗಳನ್ನು ತುಂಬಿ ಕಳುಹಿಸುವುದರಿಂದ ತಮ್ಮ ಹಿತವನ್ನು ಮಾಡಿಕೊಳ್ಳುವದಲ್ಲದೆ ತದ್ವಾರಾ ದೇಶ ಸೇವೆಯನ್ನು ಮಾಡಲು ಸಹಾಯ ಮಾಡಬೇಕಾಗಿ ಬಿನ್ನವಿಸುತ್ತೇವೆ. ಈ ಕೈಪಿಡಿಯ ಕಾರ್ಯಕ್ಕಾಗಿ ಸಮಯವು ಬಹಳ ಸ್ವಲ್ಪ ಮಾತ್ರ ಇರುವುದರಿಂದ ಎಲ್ಲಾ ಉದ್ಯೋಗಸ್ಥರು ಸದರಿ ಕಾರ್ಯದರ್ಶಿಗಳೊಡನೆ ವಿಳಂಬ ಮಾಡದೆ ಪತ್ರವ್ಯವಹಾರ ಮಾಡಬೇಕಾಗಿ ವಿನಂತಿ ಇದೆ. [ನಾ. ಸು. ಹರ್ಡಿಕರ್

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಈ ಕಷ್ಟ ಕಾಲದಲ್ಲಿ ಹೊಸ ತೆರಿಗೆಯೇ!

ಅಯ್ಯಾ,

ತಮಗಳ ತಾರೀಕು 9—10—31 ರ ಪತ್ರಿಕೆಯಲ್ಲಿ ಸಹಕಾರಿ ಸಂಘಗಳಿಗೆ ಹೊಸ ತೆರಿಗೆಯನ್ನು ವಿಧಿಸಲು ರಿಟ್ರೆಂಚ್‌ಮೆಂಟ್ ಕಮಿಟಿಯವರು ಸಿಫಾರಸ್ ಮಾಡಿದನ್ನು ಸರ್ಕಾರದವರು ಅಂಗೀಕರಿಸಿರುವರಾಗಿ ಓದಿದೆನು. ಬಡ ಜನರಿಂದ ನಡಿಸಲ್ಪಡುತ್ತಿರುವ ಸಹಕಾರಿ ಸಂಘಗಳಿಗೆ ವಿಧಿಸಿರುವ ತೆರಿಗೆಯ ವಿಷಯ ಒಂದು ಚಿಕ್ಕ ಲೇಖನವನ್ನು ಬರೆಯಲು ತಮಗಳ ಪತ್ರಿಕೆಯಲ್ಲಿ ಎಡೆಕೊಡಬೇಕಾಗಿ ಪ್ರಾರ್ಥನೆ.

ಕೊಡಗಿನ ಸಹಕಾರಿ ಸಂಘಗಳ ಮೆಂಬರುಗಳು ಶೇಕಡ 75 ರಷ್ಟು ಬಡವರೇ ಆಗಿ ಇರುತ್ತಾರೆ. ಈ ಬಡ ಮೆಂಬರುಗಳು ಖಾಸಗಿ ಧನಿಕರಲ್ಲಿ ಸಾಲಮಾಡಿ ನಮಗಳ ಅನೇಕ ಸ್ಥಿರ ಚರ ಆಸ್ತಿಗಳನ್ನು ಕಳಕೊಂಡು ಸಹಕಾರ ಸಂಘದಿಂದಲಾದರು ನಮಗಳ ಜೀವನದ ಅಭಿವೃದ್ಧಿ ನಡೆಸಬಹುದೆಂದು ಸಂಘಗಳಿಗೆ ಮೆಂಬರಾಗಿ ಸೇರಿ ಅದರಿಂದ ಸಾಲ ಪಡೆದಿರುತ್ತಾರೆ.

ಕಳೆದ ವರ್ಷದ ಆರ್ಥಿಕ ಸ್ಥಿತಿ ಎಂದರೆ ರೈತರು ಬೆಳೆಯುವ ಭತ್ತ, ಕಾಫಿ, ಯಾಲಕ್ಕಿ, ಕಿತ್ತಳೆ ವಗೈರೆ ಜಿನಸುಗಳಿಗೆ ಧಾರಣೆಯು ಇಲ್ಲದೆ ಸರಕಾರ ಕಂದಾಯ ಪಾವತಿ ಮಾಡಲು ಶಕ್ತಿಯಿಲ್ಲ ಹಣವಿಲ್ಲದೆ ಕಳೆದ ಜೂನ್ ಆಖೈರು ವರೆಗೆ ಕ್ರಮವಿಲ್ಲದ ಪಾವತಿ ಮಾಡಿರುತ್ತಾರೆ. ಕಂದಾಯ ಪಾವತಿ ಮಾಡುವುದೇ ಕಷ್ಟವಾಗಿದ್ದ ಬಡ ರೈತರಿಗೆ ಸಂಘದ ಸಾಲ ನಿವಾರಣೆಯನ್ನು ಮಾಡುವದು ಬಹಳ ಕಷ್ಟವಾಯಿತು.

ಹೊಂದಿಕೊಂಡ ಸಾಲವನ್ನು ಮರುಪಾವತಿ ಮಾಡುವುದು ಕಷ್ಟವಿಲ್ಲವಾಗಿ ಕೆಲವರು ಯೋಚಿಸಬಹುದು! ಈ ವರ್ಷದ ಹೀನ ಸ್ಥಿತಿಯಿಂದ ಸಾಲವು ದೊಡ್ಡ ಪರ್ವತವಾಗಿರುತ್ತದೆ. ಹಲವರು ಸಾಲವನ್ನು ಮರುಪಾವತಿ ಮಾಡಲು ಶಕ್ತಿ ಇಲ್ಲದಿದ್ದರೆ ಸಾಲವನ್ನು ಮಾಡಬಾರದಾಗಿ ಹೇಳಬಹುದು. ಸಾಲವಿಲ್ಲದೆ ರೈತರ ಜೀವನವೇ ನಡೆಯುವದಿಲ್ಲ. ಜಿನಸುಗಳಿಗೆ ಧಾರಣೆಯು ಇದ್ದದರಿಂದ ಸಾಲವನ್ನು ಮರುಪಾವತಿ ಮಾಡಲು ಭಯವಿಲ್ಲದೆ ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸಲು ಮೆಂಬರುಗಳು ಸಂಘಗಳಲ್ಲಿ ಹೆಚ್ಚು ಹೆಚ್ಚಾಗಿ ಸಾಲ ತೆಗೆಯುತ್ತಾ ಬಂದರು. ಧಾರಣೆಯು ಕಡಿಮೆಯಾದುದರಿಂದ ವ್ಯವಸಾಯದ ಉತ್ಪತ್ತಿಯಿಂದ ಹೆಚ್ಚಿನ ಲಾಭ ಪಡೆಯುವ ಬದಲು ಸಾಲದ ಗುಂಡಿಯಲ್ಲಿ ಬಿದ್ದಾಡಲು ಪ್ರವೇಶಿಸಿದರು.

ಈ ವರ್ಷದ ಆರ್ಥಿಕ ಸ್ಥಿತಿಯಿಂದ ಸಹಕಾರಿ ಸಂಘಗಳಲ್ಲಿ ಶೇಕಡ 25 ರಷ್ಟು ಪಾವ ವ್ಯವಹಾರ ನಡೆದಿರಬಹುದು. ಶೇಕಡ 25 ರಷ್ಟು ಮೆಂಬರುಗಳು ತಮಗಳ ಜೀವನಾಧಾರವಾದ ಸ್ಥಿರ ಆಸ್ತಿಯನ್ನು ಕಾಪಾಡಿಕೊಳ್ಳಲು ತಮಗಳಲ್ಲಿರುವ ಚಿನ್ನದ ಆಭರಣವನ್ನು ಅಡವುಕೊಟ್ಟು ಯಾ ದ್ವಿಗುಣ ಬಡ್ಡಿ ಕೊಡುವದಾಗಿ ಪತ್ರ ಬರೆದುಕೊಟ್ಟು ಖಾಸಗಿ ಧನಿಕರಿಂದ ಸಾಲ ಮಾಡಿ ಸಂಘದ ಸಾಲ ಮರುಪಾವತಿ ಮಾಡಿರುತ್ತಾರೆ. ಮುಂದೆ ಎಷ್ಟೋ ಮೆಂಬರುಗಳ ಸ್ಥಿರ ಚರ ಆಸ್ತಿಯು ಪರಾಧೀನವಾಗುವ ಸಂಭವವಿರುತ್ತದೆ. ಬಡ ರೈತರ ಗೋಳು ಕೇಳುವವರೇ ಇಲ್ಲ.

ಸಂಘಗಳಿಂದ ಮೆಂಬರುಗಳಿಗೆ ಮೊದಲು ತೆಗೆದ ಸಾಲ ಮರುಪಾವತಿಯಾಗದೆ ಹೊಸ ಸಾಲ ಸಿಕ್ಕುವದಿಲ್ಲ. ಸಂಘಗಳು ಬ್ಯಾಂಕಿನ ಹಳೇ ಸಾಲದ ಕಂತಿನ ಹಣ ಪಾವತಿ ಮಾಡದೆ ಹೊಸ ಸಾಲ ಬ್ಯಾಂಕಿನವರು ಕೊಡುವದಿಲ್ಲ. ಈ ಸಂದರ್ಭಗಳಿಂದ ಮೆಂಬರುಗಳು ಖಾಸಗಿ ಧನಿಕರಲ್ಲಿ ಕೈಯೊಡ್ಡಬೇಕಾಯಿತು.

ರೈತರಿಗೆ ಎರಡು ಕಡೆಯಿಂದ ಸಾಲವಾಗಿ ನರಳುತ್ತಿರುವಾಗ ಕೊಡಗಿನ ರಿಟ್ರೆಂಚ್‌ಮೆಂಟ್ ಕಮಿಟಿಯವರು ಸಂಘಕ್ಕೆ ಹೊಸ ತೆರಿಗೆ ಎಂದರೆ ಸ್ಟಾಂಪು (ಛಾಪಕಾಗದ.) ರಿಜಿಸ್ಟರ್ ಫೀಜು ಅರ್ಧ ಕೊಡುವಂತೆ ಸಿಫಾರಸ್ ಮಾಡಿರುವದು ದುಃಖಕರವಾದ ವಿಷಯವಾಗಿರುತ್ತದೆ. ಕಮಿಟಿಯವರು ಸರಕಾರದ ಖರ್ಚು ಕಡಿಮೆ ಮಾಡುವ ಬದಲಿಗೆ ಉತ್ಪತ್ತಿಯನ್ನು ಹೆಚ್ಚಿಸಿ ಬಡ ರೈತರಿಗೆ ಹೊಸ ತೆರಿಗೆಯನ್ನು ಹೊರಿಸಿದ್ದು ನೋಡಿದರೆ ಅವರು ಬಡ ರೈತರ ಕಷ್ಟವನ್ನು ಸ್ವಲ್ಪವೂ ಗಮನಿಸಿದಂತೆ ಕಾಣುವುದಿಲ್ಲ.

ಈ ತಿಂಗಳ ಪ್ರಾರಂಭದಿಂದಲೇ ಸಹಕಾರಿ ಸಂಘಗಳಿಗೆ ಜಾರಿಗೆ ಬರಲು ಸಂಘಗಳ ಮೇಲಧಿಕಾರಿಯಾದ ಫೆಡರೇಶನ್ನಿನವರ ಒಪ್ಪಿಗೆಯಾಗಿದೆಯೋ, ರಿಜಿಸ್ಟ್ರಾರರವರ ಸಿಫಾರಸು ಇದೆಯೊ ಎಂಬದು ತಿಳಿಯಲಿಲ್ಲ. ಸಂಘಗಳಿಗೆ ರೂಲ್ಸ್ ತಿದ್ದುಪಡಿಯಾದದ್ದು ಸಹ ತಿಳಿಯಬಂದಿರುವದಿಲ್ಲ.

ಸಂಘಗಳು ಈ ಹೊಸ ತೆರಿಗೆಯನ್ನು ತೆರುವದಕ್ಕೆ ಮುಂಚೆ, ಕೊಡಗಿನ ಎಲ್ಲಾ ಸಹಕಾರಿ ಮೆಂಬರುಗಳ ಒಂದು ಕಾನ್ಫರೆನ್ಸನ್ನು ನಡೆಸಬೇಕಾಗಿ ಫೆಡರೇಶನ್ನಿನ ಪ್ರಸಿಡೆಂಟರನ್ನು ಮತ್ತು ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಸಾಹೇಬರವರನ್ನು ಕೇಳಿಕೊಳ್ಳುತ್ತೇನೆ.

"ಬಡ ಸಹಕಾರಿ ಮೆಂಬರು"

ಕೊಡಗಿನವರ ಮದುವೆಯಲ್ಲಿ ಮಾಡತಕ್ಕ ತಿದ್ದುಪಡಿ.

ಮಹನೀಯರೆ,

ನಾವು ನಮಗಳ ಮದುವೆಯನ್ನು ಒಂದೇ ದಿವಸದಲ್ಲಿ ಮುಗಿಸಲು ಪ್ರಾರಂಭ ಮಾಡಿದರೆ, ಅನೇಕ ಜನರು ಸಾಲ ಮಾಡದೆ ಮತ್ತು ಯಾವ ತರದ ಕಷ್ಟ ನಷ್ಟಗಳಿಗೆ ಗುರಿಯಾಗದೆ ಸುಲಭ ರೀತಿಯಲ್ಲಿ ಜೀವನವನ್ನು ಕಳೆದುಕೊಂಡು ಹೋಗಬಹುದು. ಬಡತನವು ಖಂಡಿತವಾಗಿಯೂ ಕಮ್ಮಿಯಾಗುವದು.

ಪೂರ್ವ ಕಾಲದಲ್ಲಿ ಯಾದರೋ, ಅನೇಕ ತರದ ಧಾನ್ಯಗಳು ಚೆನ್ನಾಗಿ ಬೆಳೆಯುತ್ತಿದ್ದವು ವ್ಯಾಪಾರವು ಚೆನ್ನಾಗಿ ನಡೆಯುತ್ತಿತ್ತು. ದುಡ್ಡು ಕಾಸಿಗೆ ಯಾವದೊಂದು ತೊಂದರೆ ಇಲ್ಲದೆ ಇರುತ್ತಿತ್ತು. ಖರ್ಚು ಬಹಳ ಕಡಿಮೆಯಾಗುತ್ತಿತ್ತು, ಆದುದರಿಂದ ಅವರು ಮದುವೆಯನ್ನು ಎರಡು, ಮೂರು ದಿವಸ ಇಟ್ಟುಕೊಂಡು ಬಹಳ ಸಂತೋಷದಿಂದ ಕಾಲ ಕಳೆಯುತ್ತಿದ್ದರು. ಆದರೆ ಈಗ ನಮ್ಮ ಇಡೀ ಹಿಂದೂಸ್ಥಾನವನ್ನು ತೆಗೆದುಕೊಂಡರೆ, ಹಲವರು ಬಡವರಾಗಿ ಹೋಗಿದ್ದಾರೆ. ಖರ್ಚು ಹೆಚ್ಚಾಗಿದೆ. ಯಾವ ತರದ ಬೆಳೆಯೂ ಚೆನ್ನಾಗಿ ಬೆಳೆಯುವುದಿಲ್ಲ ಮತ್ತು ವ್ಯಾಪಾರವು ಚೆನ್ನಾಗಿ ನಡೆಯುವುದಿಲ್ಲ ನೌಕರಿ ಸಿಗುವುದಿಲ್ಲ. ಹೀಗೆಲ್ಲಾ ಆಗಿ ಕಾಲವು ಕೆಟ್ಟು ಹೋಗಿರುತ್ತದೆ. ಅನೇಕರು ಬಡತನದಿಂದ ನರಳುತ್ತಾರೆ. ಇಂಥಾ ಸಮಯದಲ್ಲಿ ನಾವು ಮಿತವ್ಯಯದಿಂದ ಜೀವನ ಮಾಡದೆ ಇದ್ದರೆ ಬಹಳ ತರದ ಕಷ್ಟ ನಷ್ಟಗಳಿಗೆ ಗುರಿಯಾಗಬೇಕಾಗುತ್ತದೆ.

ಒಂದೇ ದಿನದಲ್ಲಿ ಮದುವೆಯನ್ನು ಹೇಗೆ ಮಾಡಬಹುದು? ಊರು ಕೂಡುವ ಪದ್ಧತಿಯನ್ನು ನಿಲ್ಲಿಸುವುದು. ಮುಹೂರ್ತದ ದಿವಸ ಊರವರಿಗೂ, ನೆಂಟರಿಷ್ಟರಿಗೂ ಒಂದು ಒಳ್ಳೆ ಊಟವನ್ನು ಕೊಟ್ಟು ಅವರನ್ನು ಮರ್ಯಾದೆ ಪೂರ್ವಕ ಬಿಡು

ರನ್ನು ಮದುವೆ ಜೊತೆಯಲ್ಲಿ ಕರೆದುಕೊಂಡು ಹೋಗಲಿಕ್ಕೆ ತ ಡೆಸುಕೊಳ್ಳುವುದು. ಹೆಣ್ಣಿನ ಮನೆ ದೂರವಿದ್ದಲ್ಲಿ ಮೂಹೂರ್ತ ಮುಗಿದು ಜನರಿಗೆ ಊಟ ಉಪಚಾರ ಕೊಟ್ಟು ಒಡನೆಯೇ ಹೊರಡುವುದು. ನಂತರ ಅದೇ ದಿವಸ ಹೆಣ್ಣನ್ನು ಕರೆದುಕೊಂಡು ಬಂದು ಪುನಹ ಮನೆಯವರಿಗೂ ನೆಂಟರಿಷ್ಟರಿಗೂ ಒಂದು ಊಟವನ್ನು ಕೊಡುವುದು. ಹೀಗೆ ಗಂಡಿನ ಮನೆಯಲ್ಲಿ ಎರಡು ಊಟ, ಹೆಣ್ಣಿನ ಮನೆಯಲ್ಲಿ ಎರಡು ಊಟದಿಂದ ಮದುವೆಯನ್ನು ತೀರಿಸುವುದು. ಈ ರೀತಿ ಸುಧಾರಿಸಿದ ಮದುವೆ ಮಾಡುವುದರಿಂದ, ಎರಡು ಮೂರು ದಿನ ನಿದ್ದೆ ಕೆಡುವುದೂ, ಎರಡು ಮೂರು ದಿವಸಕ್ಕೆ ಹಿಂದೆ ಮಾಡಿದ ಕೊಳೆತ ಮಾಂಸವನ್ನು ತಿನ್ನುವುದೂ, ಕಾಯಿಲೆ ಬೀಳುವುದೂ, ಇದೆಲ್ಲಾ ನಿಂತು ಸುಲಭ ರೀತಿಯಲ್ಲಿ ಹೆಚ್ಚು ಖರ್ಚಿಲ್ಲದೆ ಮದುವೆಯನ್ನು ತೀರಿಸಬಹುದು.

ಅಲ್ಲತೆ, ಸಂಗಡ ಮಂಗಲತ್ ಪಂದಿಯುರಚಿ ಪಿಂಞ ಕ ಳ್ಳ ಕೂಟುವಾನಗೊಂಡ್ ಪೆರ್ ಕೇಡ್ ಉಂಡ್. ಪಂದಿ ರ ತಿಂದಿ ಎನ್ನಕೇಂಡ್ ಚೆನ್ನಂಗ್ ಆಲೋಚನೆ ಮಾಡಿ. ಇ ದ್‌ನಚ್ಚಳ್ ಗಲೀಜ್ ಬಂತು ಪಿಂಞಾತೊಂಡೂ ಇಲ್ಲೆ. ಇಂ ಥಾನ ಮನುಷ್ಯನಾನವು ಎನ್ನನೆ ತಿಂಬ್! ಇದನ ತಿಂದವಂಡ ಬುದ್ಧಿ ಮಂದ ಆಪ ಎಣುವಾಂಗ್ ಸಂಶಯ ಒಂದೂ ಇಲ್ಲೆ, ಪಿಂಞ ಇಲ್ಲತ್ ರೋಗ ಎಲ್ಲಾ ಬಪ್ಪ. ಆನಗೊಂಡ್ ಇದ್‌ನ ದೂರ ಮಾಡಂಡು. ಕಳ್ಳನ ಗೊಂಡ್ ಎಚ್ಚಕ್ ಕೇಟ್ ಆವಾಂದ್ ನಾನ್ ಇಲ್ಲಿ ವರ್ಣಿಚಿಂಡಗೊಂಡ್ ಇಲ್ಲ. ಇಪ್ ಎಲ್ಲಾಕೂ ಗೊತ್ತುಂಡ್. ಆನಗಂಡ್ ಇದ್‌ನೋ ... ಟುವಕ್ಕಾಗ. ಯರ್ಚ ಕೂಟತೇ ಮಂಗಲ ಕಪಿ ಪಲ್ ಎಲ್ಲಾಂಗಿಂಜೂ ನಲ್ಲದ್. ಇದ್ ಸಾಧ್ಯ ಇಲ್ಲೇಂಗಿ ಕೂಟ ಯರ್ಚ ಕೂಟ್‌ಚೇಂಗ್ಯೂ ಚಿಂತೆ ಇಲ್ಲೆ.

ಕೆಲವು ಜನರು ನಮ್ಮ ಪದ್ಧತಿಯನ್ನು ಹಾಳುಮಾಡ ತ್ತಾರೆಂದು ಹೇಳಬಹುದು. ಇಂಥಾ ಪದ್ಧತಿಯು ಎಲ್ಲಿಂದ ಬಂತು? ಎಂದು ನಾನು ಅವರನ್ನು ಕೇಳುತ್ತೇನೆ. ಪದ್ಧತಿಯು ಜನರು ಮಾಡಿಕೊಂಡದ್ದೋ, ಅಥವಾ ದೇವರು ಮಾಡಿಟ್ಟದ್ದೋ? ಹೀಗಿರುವಾಗ್ಯೆ ನಾವು ಏಕೆ ನಮ್ಮ ಅನುಕೂಲತೆಗೆ ಸರಿಯಾಗಿ ಪದ್ಧತಿ ಮಾಡಿಕೊಳ್ಳಬಾರದು.

ಅಲ್ಲದೆ, ನಮ್ಮ ಮದುವೆಯಲ್ಲಿ ಜನರನ್ನು ಅತ್ಯಂತ ಬಡತನಕ್ಕೆ ತರುವಂಥ ಒಂದು ಕೆಟ್ಟ ಪದ್ಧತಿ ಇದೆ. ಅದು ಯಾವುದೆಂದರೆ, ಮದುವೆಯಲ್ಲಿ ಪೆಟ್ಟಿಗೆ ನೋಡುವುದು. ಹುಡುಗಿಯ ಪೆಟ್ಟಿಗೆಯನ್ನು ನೋಡಿ ಅವಳ ಸ್ಥಿತಿಯನ್ನು ಅಂದಾಜು ಮಾಡುವುದು. ಹುಡುಗಿಯು ಬೇಕಾದಷ್ಟು ಬಿಟ್ಟು, ಕಂಬಿ ಸೀರೆ ಮತ್ತು ಬಂಗಾರ ನಗನಾಣ್ಯ ತಂದರೆ ಅವಳು ಚೆನ್ನಾಗಿ ಬಾಳಿಕೆ ಬಂದಿದ್ದಾಳೆ, ಅವಳ ಕಡೆಯವರು ಐಶ್ವರ್ಯವಂತರು ಎಂದು ತಿಳಿದುಕೊಳ್ಳುತ್ತಾರೆ. ನಂತರ ಅವರಿಗೆ ಹೆಚ್ಚಿನ ಬೆಲೆ ಕೊಡುತ್ತಾರೆ. ಅದರೆ, 'ಪೆಟ್ಟಿಗೆ ನೋಡುತ್ತಾರೆ, ತನ್ನ ಮಾನ ಹೋಗುತ್ತದೆಂದು ಹುಡುಗಿಯ ತಂದೆಯು ಹೇರಳವಾಗಿ ಬಟ್ಟೆಗಳ ಅಂಗಡಿಯಿಂದ ಸಾಲ ಮಾಡಿ ತಂದು ಪೆಟ್ಟಿಗೆಯನ್ನು ತುಂಬಿಸಿದ್ದು ಪೆಟ್ಟಿಗೆ ನೋಡುವವರಿಗೆ ತಿಳಿಯುವುದಿಲ್ಲ. ಹೀಗೆ ಬಟ್ಟೆಗೆ ಮಾಡುವ ಸಾಲವು ತನ್ನ ಮಕ್ಕಳ ಮಕ್ಕಳ ಕಾಲಕ್ಕೆ ತೀರದೆ ಇರುವುದುಂಟು.

ತನ್ನ ಕೈಯಲ್ಲಿ ಆಗದಿದ್ದರೆ ಸಾಲ ಮಾಡಿ ಪೆಟ್ಟಿಗೆ ಏಕೆ ತುಂಬಿಸುವುದು? ಇದಕ್ಕೆಲ್ಲಾ ಪೆಟ್ಟಿಗೆ ನೋಡುವ ಪದ್ಧತಿಯೇ ಕಾರಣವಲ್ಲವೇ? ಆದುದರಿಂದ ಇಂಥಾ ಕೆಟ್ಟ ಪದ್ಧತಿಯನ್ನು ನಿಲ್ಲಿಸಬೇಕು.

ನಮ್ಮಲ್ಲಿ ಮದುವೆ ಹುಡುಗಿಯರಿಗೆ ಬಟ್ಟೆ ತೆಗೆಯುವ ವಿಧಾನವು ಒಳ್ಳೆಯದಲ್ಲ. ಅದು ಹೇಗೆಂದರೆ, ಅನೇಕ ತರದ ಬಿಟ್ಟು, ಕಂಬಿ, ಜರಿ ಸೀರೆಗಳನ್ನು, ನೆಂಟರು ಇಷ್ಟರು ದಾನವಾಗಿ ಒಂದೊಂದು ಸೀರೆಗೆ ಕೊಟ್ಟು, ತೆಗೆದು ಪೆಟ್ಟಿಗೆ ತುಂಬಿಸುವುದು. ಇಂಥಾ ಸೀರೆಗಳು ಯಾವ ಪ್ರಯೋಜನಕ್ಕೂ ಬರುವುದಿಲ್ಲವೆಂದು ಅವರು ಯೋಚಿಸುವುದಿಲ್ಲ. ಅಂಥಾ ಸೀರೆಗಳನ್ನು ಮನೆಯಲ್ಲಿ ನಿತ್ಯ ಉಡಲು ಆಗದ್ದರಿಂದ ಅವನ್ನು ಪೆಟ್ಟಿಗೆಯಲ್ಲಿಯೇ ಇಟ್ಟು ಹುಳ ತಿನ್ನಿಸಿ ಹಾಳು ಮಾಡುತ್ತಾರೆ. ಅಂಥಾ ಹೆಚ್ಚು ಕ್ರಯದ ಪರದೇಶೀ ಸೀರೆಯನ್ನು ಹಾಕುವುದಕ್ಕಿಂತ ಕಡಿಮೆ ತರದ ಖಾದಿ ಅಥವಾ ಸ್ವದೇಶೀ ಸೀರೆಗಳನ್ನು ಹೆಚ್ಚು ಕೊಂಡುಕೊಂಡರೆ, ಯಾವಾಗಲೂ ಉಡಲಿಕ್ಕೆ ಆಗುವುದು. ಅದು ಅಲ್ಲದೆ ಸ್ವದೇಶೀ ಬಟ್ಟೆ ಕೊಂಡುಕೊಂಡದ್ದರಿಂದ ದೇಶ ಸೇವೆ ಮಾಡಿದಂತಾಗುವುದು.

ಒಂದು ವರ್ಷದ ಹಿಂದೆ ನಮ್ಮ ಕೊಡಗರ ಪೈಕಿ ಒಬ್ಬ ರಾಯರು ವೀರಾಜಪೇಟೆಯಲ್ಲಿ ಅವರ ಮದುವೆಯನ್ನು ಒಂದೇ ದಿನದಲ್ಲಿ ನಡಿಸಿ, ಜನರಿಗೆ ಇನ್ನಾದರೂ ತಿಳಿಯಲಿ ಎಂದು ತೋರಿಸಿದರು. ಇವರು ಮೊದಲು ಸುಧಾರಿಸಿದ ಮದುವೆ ಮಾಡಿ ತೋರಿಸಿದ್ದರಿಂದ ತಿಳುವಳಿಕೆ ಕಮ್ಮಿಯಾದವರು ಅವರ ಉದ್ದೇಶವನ್ನು ತಿಳಿದುಕೊಳ್ಳದೆ, ಅವರಿಗೆ ಇಲ್ಲ ಸಲ್ಲದ ಆರೋಪಣೆ ಹೊರಿಸಿದಲ್ಲದೆ ಅವರ ಮದುವೆಗೂ ಕೂಡ ಕೆಲವರು ಹೋಗಲಿಲ್ಲವಂತೆ! ಅವರು ಯಾತಕ್ಕೋಸ್ಕರ ಆ ರೀತಿ ಮದುವೆ ಮಾಡಿ ತೋರಿಸಿದರು? ಇತರ ಹಿತಕ್ಕಾಗಿಯೂ ದುಷ್ಟ ಬಡತನವನ್ನು ನಿಲ್ಲಿಸಲಿಕ್ಕಾಗಿಯೂ ಮಾಡಿ ತೋರಿಸಿದರಲ್ಲವೇ.

ಕೊಲಂಬಸನು ಹಿಂದೂಸ್ಥಾನಕ್ಕೆ 'ಗುಡ್ ಹೋಪ್' ಗಾಗಿ ಸಮುದ್ರ ಮಾರ್ಗವನ್ನು ಕಂಡು ಹಿಡಿಯಲು ಪ್ರಯತ್ನಿಸುವಾಗ ಅನೇಕರು ಅವನಿಂದ ಆಗುವುದಿಲ್ಲ, ಅವನಿಗೆ ಹುಚ್ಚು ಎಂದು ಹೀಯಾಳಿಸಿ ಕೊಡಗಿದರೂ ಅವನು ಕೇಳದೆ ಹಡಗವನ್ನು ಕಟ್ಟಿ ಕೆಲವು ಜನರ ಸಹಾಯದಿಂದ ಪ್ರಯತ್ನ ಪಟ್ಟು ಅನೇಕ ಕಷ್ಟಗಳಿಗೆ ಈಡಾಗಿ ಹಿಂದೂಸ್ಥಾನಕ್ಕೆ ಸಮುದ್ರ ಮಾರ್ಗವನ್ನು ಕಂಡು ಹಿಡಿದನು. ಅದೇ ರೀತಿ ಸುಧಾರಿಸಿದ ಮದುವೆಯನ್ನು ಜಾರಿಗೆ ತರಲು ಅನೇಕ ಕಷ್ಟ ಕಂಡರೂ ಪ್ರತಿ ಒಬ್ಬನು ತನ್ನ ಮಕ್ಕಳ ಅವರವರ ಮದುವೆಯನ್ನು ಒಂದೇ ದಿನದಲ್ಲಿ ತೀರಿಸಿ ಬಡತನವನ್ನು ಹೋಗಲಾಡಿಸಬೇಕೆಂದು ಕೋರಿಕೊಳ್ಳುತ್ತೇನೆ.

ಯಂ. ಎ. ಪೂವಯ್ಯ.

26-15



ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪಿಸಲ್ಪಟ್ಟದ್ದು 1897)

ಹಿಂದೂಸ್ಥಾನದಲ್ಲಿ ಪ್ರಾಯಶ್ಚಿತ್ತವೂ ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ... ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು —
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು —
152-3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

52-6

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಬಂಗಾರದ ನಿಬ್ಬು ಹಾಕಿದ ಖಾತ್ರಿಯಾದ ಬಂದೋಬಸ್ತು ಆದ ಫೌಂಟೆನ್ ಪೆನ್‌ಗಳು.

ವರ್ಲ್ಡ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ. 3 0 0
„ „ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 3 0
„ „ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3 8 0
„ „ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮಾರ್ಬಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3 14 0
„ „ ಮಾರ್ಬಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4 2 0
„ ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಟ್ರಾನ್ಸ್ ಕಲರ್ ಫೌಂಟನ್‌ಪೆನ್ 1ಕ್ಕೆ	5 8 0
ಬಿಗ್ ಸ್ಟ್ರೈಟ್ ಫೌಂಟನ್‌ಪೆನ್ 1ಕ್ಕೆ	10 8 0
ಶೆಫರ್ಡ್ ಪೆನ್ 1ಕ್ಕೆ	11 6 0, & 20 10 0
ಸ್ವಾನ್ ರೋವರ್ ಫೌಂಟನ್‌ಪೆನ್ 1ಕ್ಕೆ	3 8 0, & 3 12
ಸ್ವಾನ್ ಫೌಂಟನ್ ಪೆನ್ 1ಕ್ಕೆ	6 4 0, & 6 12
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ	8 ? 0, & 8 10 0

ಗ್ಲೋಬ್ ಟ್ರಿಂಕ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3 0 0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2 2
ಲಿಗಲಿಯೂ ಅಲಾರಮ್ ಟೈಂಪೀಸ್ 1ಕ್ಕೆ	5 9 0 & 6 15 0
ಲಿಗಲಿಯೂ ಕ್ವಾಡ್ರನ್ ಅಲಾರಮ್ ಟೈಂಪೀಸ್ 1ಕ್ಕೆ	7 2 0
ಲಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲುಳ್ಳದು 1ಕ್ಕೆ	8 1? 0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9 6 0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ರೇಡಿಯಂ ಸಣ್ಣ ಟೈಂಪೀಸ್ 1ಕ್ಕೆ	1? ? ?
ಖಾತ್ರಿಯೂ ಬಂದೋಬಸ್ತು ಆದ ಪಾಕೆಟ್ ವಾಚ್ 1ಕ್ಕೆ	5 1? ?
ಟ್ಯಾಕ್ಸಿ ನಮೂನೆಯಲ್ಲಿ ಎಚ್. ಎಸ್. ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	1? 1
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್ಮೆಂಟ್ ನಾನಾತರದ ರಿಸ್ಟ್ ವಾಚ್ 1ಕ್ಕೆ	5 4 0, 7 3 0, 10 0 0 & 12 8 0



ಇಲ್ಲಿ ನಮೂದಿಸಿದ ನಮೂನೆ ಅಂದವಾದ ಟ್ಯಾಕ್ಸಿ ಪಾಕೆಟ್ ವಾಚ್ 1ಕ್ಕೆ 3-6-6 ಪ್ಯಾಕಿಂಗ್ ಪೋಸ್ಟೇಜ್ ಬೇರೆ ಆಗುವುದು.

ಮನಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52-15

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೂಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೆ ಹಣಕಾಗಿ ಸಾಲಕೊಡಕತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.	ಮನೆಯಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಖು 1-7-1931

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಸಣ್ಣ ಕೂಸುಗಳಿಂದ ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52-42 ಗಿರಿಗಾಂವ, ಮುಂಬಯಿ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ... ರಶೀತಿ ಪುಸ್ತಕಗಳು ಕೊಡಲಾಗಿದೆ. ... ಅವರಿಗೆ ... ಚಂದಾವನ್ನು ... ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಏಜೆಂಟರುಗಳು,

ಉತ್ತರ ಕೊಡಗಿಗೆ—ಮ. ... ಅಪ್ಪಯ್ಯನವರು,

ದಕ್ಷಿಣ ಕೊಡಗಿಗೆ—ಮ. ಸೋಮೆಯಂಡ ಅಚ್ಚಯ್ಯನವರು,

ಮರನಾಡು—ಮ. ಕೇಕಿರ ಅಕ್ಕಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು, (ಐಮಂಗಲ.)

ಸೋಮವಾರಪೇಟೆ—ಎಮ್. ಆರ್. ವೆಂಕಪ್ಪಯ್ಯನವರು.

ಶ್ರೀಮಂಗಲನಾಡು—ಮ. ಅಜ್ಜಮಾಡ ಮಾದಪ್ಪನವರು.

ಗೋಣಿಕೊಪ್ಪಲು—ಮ. ... ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮ. ಬಸಂತ ಮಾದಪ್ಪನವರು,

ಪೊನ್ನಂಪೇಟೆನಾಡು—ಮ. ಪಿ. ಬಿ. ಮುದ್ದಪ್ಪಯ್ಯನವರು.

ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತಿ—ಮ. ಬಿ. ಮಾದಪ್ಪಯ್ಯನವರು,

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್,

ಮಡಿಕೇರಿ,

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ

ಬಂಡವಾಳವು ಸೇರಿದ್ದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊತ್ತವು 1,78,322 ಜನರಿಗೆ 38ಕೋಟಿ ರೂ

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟರ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡೆಸಲ್ಪಟ್ಟಿದ್ದು ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಂಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ [52-

ಮಲೇರಿಯಾಕ್ಕೆ ಮಲೇರಿಯಾನ

ಕೊಡಗಿನ ಗುಡುಗುಡು ಎಂಬ ಚಳಿಜ್ವರಕ್ಕೂ, ಹುಡುಹುಡು ಬರುವ ಜ್ವರಕ್ಕೂ, ಗಟ್ಟಿಯಾದ ಜ್ವರಗೆಡ್ಡೆಗೂ ಗುಣಕರವಾದ ವು ಯಾವದೆಂದು ಕೇಳಿರಿ ಇಗೋ ರಾಜಮದ್ದು ಮಲೇರಿಯಾನ ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗೆಡ್ಡೆಯನ್ನು ಬಾಕಿಯಿಲ್ಲದಂತೆ ಬಿಡುತ್ತದೆಂದು ಸ್ಥಿರ ನಂಬಿ. ಕ್ರಯ ಬಾಟ್ಲಿಗೆ 1-8 ½ ಡಜನ್ 8-8-0. 1 ಡಜನ್ 16-8-0.

ಕಂಪೌಂಡು ಸಿರಪು ಬ್ಲಟ.

ಗುರುಗುರು ಉಬ್ಬಸ ನೇವಸದ ರೋಗದಿಂದ ಕಫ ಕೆಮ್ಮು ಘ ಗಟ್ಟಿಯಾಗಿ ಎಳದಾಟ, ಎದೆ ನೋವು ... ಯುವುದಕ್ಕೆ ... ಸಂಕಷ್ಟದಿಂದ ನರಳುವ ರೋಗಿಯು ಕಡೆ ಮಾಗಿ ಕಂಪೌಂಡು ಸಿರಪು ಬ್ಲಟ ಎಂಬದನ್ನು ಕಳ್ಳದ ಕರಿಸಿ ಕುಡಿಯಿರಿ. ಕ್ರಯ ಬಾಟ್ಲಿಗೆ ರೂ. 3-8-0.

ಕಂಪೌಂಡು ಸಿರಪು ಬಸಲೀನ:—ಶ್ವಾಸಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿಕೊಂಡರೆ ... ಉಂಟಾಗುವ ತುಂಬಾ ವ್ಯಸನಗಳು, ಕೆಮ್ಮು, ಎದೆನೋವು, ರಕ್ತ ಬೆರೆತ ಕಫ, ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ರೋಗ ಮುಂದರಿಯದಂತೆ ಶಾಶ್ವತ ಆರೋಗ್ಯ ಕೊಡುವುದು. ಕ್ರಯ ಬಾಟ್ಲಿಗೆ ರೂ 3-8-0.

ಕಂಪೌಂಡು ಸಿರಪು ಸೆಬೀನ ಸೇಪಿಯ:—ಹೆಂಗಸರ ಮೂತ್ರದ್ವಾರದಿಂದಲೂ, ಗರ್ಭದ್ವಾರದಿಂದಲೂ ಹರಿಯುವ ಬಿಳೀ ಸೆರಗೆಂಬ ರೋಗದಿಂದ ಸೊಂಟನೋವು, ಕೈಕಾಲು ಬಚ್ಚಲು, ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸಿ ಬಲಪಡಿಸುವುದು. ಕ್ರಯ ಬಾಟ್ಲಿಗೆ ರೂ. 3-8-0.

ಕಂಪೌಂಡು ಸಿರಪು ಮೆಸಿಫೂಲ:—ಪ್ರಮೇಹವೆಂಬ ಗುಪ್ತರೋಗವನ್ನು ಶಮನಗೊಂಡು, ಮೂತ್ರ ಬಿಂದು ಬಿಂದುಗಳಾಗಿ ಉದ್ಭವಿಸುವ ತುಂಬಾ ವ್ಯಸನಗಳು, ... ರೋಗಗಳನ್ನು ಈ ಬಲವಾದ ಸಿರಪು ಸಂಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು. ಕ್ರಯ ಬಾಟ್ಲಿಗೆ ರೂ. 3-8-0.

ಶುದ್ಧ ಟಿಸ್ಯಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ... ವರೆಗೆ ಓದಿಕೊಂಡು ಬರೆಯತಕ್ಕದ್ದು. ಪರೀಕ್ಷಿಸಿ ಕೊಡುವ ದೃಷ್ಟಾಂತಗಳೂ, ... ನ್ಯಾಯವಾದ ಕ್ರಯಕ್ಕೆ ದೊರೆಯುತ್ತವೆ.

ಆರೋಗ್ಯಭಾಗ್ಯದ ಕೀಲಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

52-51 **Malariana Co.,** Hampankatta No. 14. Mangalore.

ವಿಳಾಸ:—ಮಲೇರಿಯಾನ ಕಂಪೆನಿ, ಹಂಪನಕಟ್ಟೆ, ನಂಬರ್ 14, ಮಂಗಳೂರು ಪೋಸ್ಟು

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಸ್ಪೆಷಲ್ ಒಟ್ಟು ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮಾ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ ಮೂಲಕ ಕಳುಹಿಸಲಾಗುವುದು.

ಮೇನೇಜರ್,

"ಕೊಡಗು" ಆಫೀಸು,

ಮಡಿಕೇರಿ.

Printed & published by P. I. Belliappa at "Kodagu" Press Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಪುಟ ೧೧ | ಮಡಿಕೇರಿ, ಸನ್ ೧೯೩೧ನೇ ಇಸವಿ ಅಕ್ಟೋಬರ್ ... ಶುಕ್ರವಾರ. | ಸಂಚಿಕೆ ೩೩

Telegrams — "Precious"

V. Subramaniah Jeweller.

DIAMAND MERCHANT GOLD & SILVER SMITH.

Deals in all :-
SPORTS CUPS in all prices
MEADALS in up-to date patterns
CASKETS in elegant styles

Nos. 2 & 3, Kuppumuthu st
TIRUVATESWARANPE
Post Box 423, Triplicane P. O
MADRAS.

52—50

GOOLAMHUSAIN ALLIBHOY & SONS
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.
24—7



ಕಷಾಯ

22—25

ಕೊಡಗು.

ಸನ್ ೧೯೩೧ನೇ ಇಸವಿ

ಅಕ್ಟೋಬರ್ ತಾ ೩೦ನೇ ಶುಕ್ರವಾರ.

ದುಂಡುಮೇಜು ಪರಿಷತ್ತಿನ ಅಂತ್ಯವೋ?

ಲಂಡನಿನಲ್ಲಿ ಈಗ ಸುಮಾರು ಒಂದೂವರೆ ತಿಂಗಳಿಂದ ನಡೆಯುತ್ತಿರುವ ದುಂಡು ಮೇಜು ಪರಿಷತ್ತಿನ ನಡವಳಿಕೆಯಲ್ಲಿ ಕಳೆದ ವಾರದಿಂದ ಒಂದು ವಿಶೇಷ ತರದ ಬದಲಾವಣೆ ಆದಂತೆ ಕಂಡು ಬರುತ್ತದೆ. ಈ ಪರಿಷತ್ತಿನವರು ಮುಖ್ಯ ವಿಷಯಗಳನ್ನು ಆಲೋಚಿಸಿ ಅಭಿಪ್ರಾಯ ಕೊಡಲು ನೇಮಿಸಿರುವ ಬೇರೆ ಬೇರೆ ಉಪ ಕಮಿಟಿಗಳ ಮೀಟಿಂಗುಗಳು ಇಷ್ಟರ ವರೆಗೆ ನಡೆದಿರುವವೇ ಹೊರತು, ಪರಿಷತ್ತಿನ ಎಲ್ಲಾ ಮೆಂಬರುಗಳ ಜನರಲ್ ಮೀಟಿಂಗು ಇನ್ನೂ ಪ್ರಾರಂಭವಾಗಿರುವುದಿಲ್ಲ. ಅಷ್ಟು ಮಾತ್ರವಲ್ಲ, ಉಪ ಕಮಿಟಿಗಳ ಕೆಲಸಗಳು ಯಾವೂ ಸಂಪೂರ್ಣವಾಗಿರುವುದಿಲ್ಲ. ಇಷ್ಟರಲ್ಲೇ ಪರಿಷತ್ತು ಬೇಗನೆ ಅಂತ್ಯ ಮಾಡಲ್ಪಡುವದೆಂಬ ವರ್ತಮಾನ ಹುಟ್ಟಿ ಹಲವರಿಗೆ ಆಶ್ಚರ್ಯವನ್ನೂ, ವ್ಯಸನವನ್ನೂ ಉಂಟು ಮಾಡಿದೆ.

ಬ್ರಿಟನಿನಲ್ಲಿ ಈ ತಿಂಗಳ ಅಂತ್ಯದಲ್ಲಿ ಅಧಿಕಾರಕ್ಕೆ ಬರುವ ಹೊಸ ಸರ್ಕಾರದವರು ದುಂಡು ಮೇಜು ಪರಿಷತ್ತನ್ನು ನವಂಬರ್ ಮಧ್ಯದೊಳಗೆ ಅಂತ್ಯ ಮಾಡುವರೆಂತಲೂ, ಆದಕಾರಣ ಪರಿಷತ್ತಿನ ಹಿಂದೀಯ ಮೆಂಬರುಗಳು ಹಲವರು ನವಂಬರು ೧೮ರೊಳಗೆ ಇಂಡಿಯಾಕ್ಕೆ ಹೊರಡಲು ಹಡಗಿನಲ್ಲಿ ಟಿಕೇಟುಗಳನ್ನು ತೆಗೆದುಕೊಂಡಿರುವರೆಂತಲೂ ಇಂಗ್ಲೆಂಡಿನ "ಡೈಲಿ ಹೆರಾಲ್ಡ್" ಪತ್ರಿಕೆಯಲ್ಲಿ ಈ ತಾ. 22ರಲ್ಲಿ ಪ್ರಕಟವಾಗಿತ್ತು. ಈ ವರೆಗೆ ದುಂಡು ಮೇಜು ಪರಿಷತ್ತಿನ ಕಮಿಟಿಗಳಲ್ಲಿ ಚರ್ಚಿಸಲ್ಪಟ್ಟಿರುವ ವಿಷಯಗಳನ್ನು ಕುರಿತು ಹೊಸ ಮಂತ್ರಿ ಮಂಡಳಿಯು ತೀರ್ಮಾನಗಳನ್ನು ಮಾಡಿ, ಉಳಿದ ಸಂಗತಿಗಳನ್ನು ಚರ್ಚಿಸುವ ಬಗ್ಗೆ ಇಂಡಿಯಾದಲ್ಲಿ ದುಂಡು ಮೇಜು ಪರಿಷತ್ತಿನ ಮೀಟಿಂಗು ಸೇರಿಸಲ್ಪಡಬಹುದೆಂದೂ ವರ್ತಮಾನ ಹುಟ್ಟಿತು. ಇದರಿಂದ ಇಂಡಿಯಾದಲ್ಲಿ ಮಾತ್ರವಲ್ಲ, ಇಂಗ್ಲೆಂಡಿನಲ್ಲಿಯೂ ಹಿಂದೀ ಮುಖಂಡರುಗಳು ಕೋಲಾಹಲವೆಬ್ಬಿಸಿದವು.

ಆದರೆ ಒಂದೆರಡು ದಿವಸಗಳಲ್ಲಿಯೇ ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಸರ್ ಸ್ಯಾಮುವೆಲ್ ಹೋರ್‌ರವರು ಮತ್ತು ಪ್ರಧಾನ ಮಂತ್ರಿಯಾದ ಮಿ. ರಾಮ್ಸೆ ಮೆಕ್ಡೊನಾಲ್ಡ್‌ರವರು 'ಡೈಲಿ ಹೆರಾಲ್ಡ್' ಪತ್ರಿಕೆಯಲ್ಲಿ ಪ್ರಕಟವಾದ ವರ್ತಮಾನವು "ನಿಜವಲ್ಲವೆಂತಲೂ, ದುಂಡು ಮೇಜು ಪರಿಷತ್ತನ್ನು ಅಂತ್ಯಮಾಡುವ ಯೋಚನೆಯನ್ನು ಸರ್ಕಾರದವರು ಮಾಡಿರುವುದಿಲ್ಲವೆಂತಲೂ, ಪರಿಷತ್ತಿನಿಂದ ಪ್ರಯೋಜನಕರವಾದ ಕೆಲಸವನ್ನು ಮಾಡಬಹುದಾದ ವರೆಗೆ ಅದನ್ನು ನಡಿಸಲಾಗುವದೆಂತಲೂ ಪ್ರಕಟಿಸಿದರು. ಆದರೂ ಕೂಡ ಸದರಿ ಪತ್ರಿಕೆಯು ತಾನು ಮೊದಲು ಪ್ರಕಟಿಸಿದ ವರ್ತಮಾನದಲ್ಲಿ ತುಂಬಾ ನಿಜಾಂಶವಿದೆಯೆಂತಲೂ, ಒಳಗಿನ ಗುಟ್ಟನ್ನು ಬಹಿರಂಗ ಪಡಿಸಿದ್ದರಿಂದ ಅಧಿಕಾರಿಗಳು ಸಿಟ್ಟುಗೊಂಡಿರುವರೆಂತಲೂ ಮುಂತಾಗಿ ಪುನಹ ಪ್ರಕಟಿಸಿದೆ.

ಇದರ ಸತ್ಯವು ಹೇಗಿದೆ ಎಂದು ಪರಿಷತ್ತಿನ ಸ್ಥಳದಿಂದ ಆರು ಸಾವಿರ ಮೈಲು ದೂರದಲ್ಲಿರುವ ನಮಗೆ ಹೇಳಲು ಸಾಧ್ಯವಿಲ್ಲ. ಆದರೆ 'ಬೆಂಕಿ ಇಲ್ಲದೆ ಹೊಗೆ ಹೊರಡಲಿಕ್ಕಿಲ್ಲ' ವೆಂಬ ನಾಣ್ಣುಡಿಯನ್ನು ಈ ಸಂದರ್ಭ ನೆನಪಿಗೆ ತಂದುಕೊಳ್ಳಬೇಕಾಗಿದೆ. ದುಂಡು ಮೇಜು ಪರಿಷತ್ತಿನ ಚರ್ಚೆಗಳು ದಿನೇ ದಿನೇ ಬ್ರಿಟಿಷ್ ಸರ್ಕಾರವನ್ನು ಕಠಿಣ ಸ್ಥಿತಿಗೆ ತರುತ್ತಲಿದೆ. ಇಂಡಿಯಾವು ಸಂಪೂರ್ಣ ಸ್ವಾತಂತ್ರ್ಯದಿಂದಲ್ಲದೆ ಬೇರೆ ಯಾವದರಿಂದಲೂ ತೃಪ್ತಿಯಾಗಲಾರದೆಂದು ಮಹಾತ್ಮ ಗಾಂಧಿಯವರು ಹಗಲಿರುಳು ಬ್ರಿಟಿಷ್ ಜನ ಸಮುದಾಯದ ಮನಸ್ಸಿಗೆ ಮುಟ್ಟುವಂತೆ ಮಾಡುತ್ತಿರುವದೂ, ಮಹಾತ್ಮರಿಗೆ ಬ್ರಿಟನ್ನಿನಲ್ಲಿ ಮಾತ್ರವಲ್ಲ ಯೂರೋಪಿಯನ್ ಮತ್ತು ಅಮೇರಿಕಾ ದೇಶಗಳಲ್ಲಿ ದಿನೇ ದಿನೇ ಪ್ರಾಮುಖ್ಯತೆಯು ಹೆಚ್ಚುತ್ತಿರುವುದೂ ಬ್ರಿಟಿಷ್ ರಾಜಕೀಯ ಪಟುಗಳನ್ನು ವಿಸ್ಮಯಗೊಳಿಸಿರುವುದಲ್ಲದೆ ಹಿಂದೀ ಸ್ವಾತಂತ್ರ್ಯ ವಿರೋಧಿಗಳನ್ನು ದಂಗುಬಡಿಸಿದೆಯೆಂಬುದರಲ್ಲಿ ಸಂಶಯವಿಲ್ಲ. ಮಹಾತ್ಮರನ್ನು ಇನ್ನೂ ಕೆಲವು ಸಮಯ ಬ್ರಿಟನ್ನಿನಲ್ಲಿ ಇರಲು ಬಿಟ್ಟರೆ ಅವರ ಆತ್ಮ ಶಕ್ತಿಯ ಪ್ರಭೆಯಿಂದ ಅವರ ವಿರೋಧಿಗಳನ್ನೂ ಕೂಡ ತಮ್ಮ ವಶಮಾಡಿಕೊಳ್ಳುವರೆಂಬ ಭಯವು ಈಗಾಗಲೇ ಬ್ರಿಟಿಷರಲ್ಲಿ ಕೆಲವರಿಗೆ ಹುಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಆದುದರಿಂದ ಗಾಂಧಿಯವರನ್ನು ಆಗುವಷ್ಟು ಬೇಗನೆ ಇಂಡಿಯಾಕ್ಕೆ ವಾಪಸು ಕಳುಹಿಸಿಬಿಡಬೇಕೆಂಬ ಅಭಿಲಾಷೆಯು ಬ್ರಿಟಿಷ್ ಸರ್ಕಾರದವರಿಗೆ ಹುಟ್ಟಿದೆಯೆಂಬ ವರ್ತಮಾನವು ಸಂಪೂರ್ಣ ನಿಜವಲ್ಲವೆಂದು ಹೇಳುವುದು ಸುಲಭ ಸಾಧ್ಯವಿಲ್ಲ. ಮುಂದೆ ಅಧಿಕಾರಕ್ಕೆ ಬರಲು ಹೆಚ್ಚಿನ ಸಂಭವವಿರುವ 'ನ್ಯಾಶನಲ್' ಸರ್ಕಾರದ ಪಾರ್ಟಿಯವರ ಮುಂದಿನ ವರ್ತನೆಯು ಈಗಲೇ ಬಹಿರಂಗವಾದರೆ ಈಗ ನಡೆಯುತ್ತಿರುವ ಚುನಾವಣೆಯಲ್ಲಿ ತಮಗೇನಾದರೂ ದೋಷವುಂಟಾಗಬಹುದೆಂಬ ಕಾರಣದಿಂದಲೂ, ದುಂಡು ಮೇಜು ಪರಿಷತ್ತನ್ನು ಥಟ್ಟನೆ ನಿಲ್ಲಿಸಿಬಿಡುವುದರ ವಾರ್ತೆಯಿಂದ ಇಂಡಿಯಾದಲ್ಲಿ ಉಂಟಾಗಬಹುದಾದ ದೊಡ್ಡ ಅತೃಪ್ತಿ ಮತ್ತು ಅಸಮಾಧಾನದ ತೆರೆಯನ್ನು ಶಮನ ಮಾಡುವ ಉದ್ದಿಶ್ಯದಿಂದಲೂ ಬ್ರಿಟಿಷ್ ಪ್ರಮುಖರು ಮೇಲಿನ ವರ್ತಮಾನವನ್ನು ತತ್ಕಾಲ ಅಲ್ಲಗಳೆದಿರಬೇಕೆಂದರೆ ತಪ್ಪಾಗಲಾರದು.

ಅಲ್ಪ ಸಂಖ್ಯಾತರ ಸಮಸ್ಯೆಯು ತೀರ್ಮಾನಿಸಲ್ಪಡದೆ ಇರುವುದರಿಂದ ಹಿಂದೂಸ್ಥಾನದ ಆಡಳಿತ ರಚನೆಯ ಕಾರ್ಯವನ್ನು ಮುಂದರಿಸಲು ಅಂದರೆ ಇಂಡಿಯಾಕ್ಕೆ ಸ್ವಾತಂತ್ರ್ಯ ಸರ್ಕಾರ ಕೊಡಲು ಆಗುವುದಿಲ್ಲವೆಂಬ ಸೂಚನೆಯನ್ನು ಪ್ರಧಾನ ಮಂತ್ರಿಯವರು ಈ ಮೊದಲೇ ಮಾಡಿರುವರು. ಅಲ್ಪ ಸಂಖ್ಯಾತರ ಪ್ರಶ್ನೆಯನ್ನು ತೀರ್ಮಾನಿಸಲು ಅಡ್ಡಿಯಾಗಿರುವುದು ಬ್ರಿಟಿಷ್ ಸರ್ಕಾರದವರೇ ಎಂದೂ, ಇಂಡಿಯಕ್ಕೆ ಸ್ವಾತಂತ್ರ್ಯ ದೊರೆತ ತಕ್ಷಣವೇ ಈ ಸಮಸ್ಯೆಯು ಸುಲಭದಲ್ಲೇ ಬಗೆಹರಿಯುವದೆಂದೂ ಮಹಾತ್ಮ ಗಾಂಧಿಯವರು ಬ್ರಿಟಿಷ್ ಸರ್ಕಾರದ ಮೇಲೆಯೇ ಸದರಿ ಸಮಸ್ಯೆಯ ಅಪಜಯದ ಜವಾಬ್ದಾರಿಯನ್ನು ಹೊರಿಸಿರುವರು. ಇದು ಬ್ರಿಟಿಷ್ ಧುರೀಣರ ಮನಸನ್ನು ಒಳಗಿಂದೊಳಗೆ ಕುಕ್ಕುತ್ತಿರಬಹುದು.

ಮಹಾತ್ಮರು ಈ ಮೊದಲೇ ಹೇಳಿರುವಂತೆ ಬ್ರಿಟಿಷರು ಇಂಡಿಯಾದ ಆಡಳಿತದ ಜವಾಬ್ದಾರಿಯನ್ನು ಹಿಂದೀಯರಿಗೆ ವರ್ಗಾಯಿಸಲು ತಯಾರಾಗಿಲ್ಲದೆ ಹೋದರೆ ಮುಖ್ಯ ಸಂಗತಿಗಳ ಚರ್ಚೆಗೆ ಬರುವಾಗ ಪರಿಷತ್ತು ಮುರಿಯಬಹುದು ಎಂಬದು ಈ ಜಾಡಿಗೆ ಬರುವಂತೆ ತೋರುತ್ತಿದೆ. ಬ್ರಿಟಿಷ್ ಸರ್ಕಾರದವರು ದುಂಡು ಮೇಜು ಪರಿಷತ್ತಿನಲ್ಲಿ ಇಷ್ಟರ ವರೆಗೆ ಏನೊಂದೂ ಮುಖ್ಯ ತೀರ್ಮಾನವನ್ನು ಮಾಡದೆ ಕಾಲಯಾಪನೆ ಮಾಡುತ್ತಾ ಇದ್ದು, ಈಗ ಥಟ್ಟನೆ ಅದನ್ನು ಅಂತ್ಯಗೊಳಿಸಿದ್ದೇ ಆದರೆ ಇಂಡಿಯಾದಲ್ಲಿ ಅದರ ಪರಿಣಾಮವು ಏನು ಆಗಬಹುದೆಂಬುದು ಹೇಳಿ ಸ್ಪಷ್ಟೀಕರಿಸಬೇಕಾಗಿರುವುದಿಲ್ಲ. ಮಹಾತ್ಮರು ಸೂಚಿಸಿದಂತೆ ಅಹಿಂಸಾ ತತ್ವದ ಯುದ್ಧವನ್ನು ಕಾಂಗ್ರೆಸ್ಸಿನವರು ಕೈಕೊಳ್ಳದೆ ಇರರು. ಇದರಿಂದ ಇಂಡಿಯಕ್ಕೂ, ಬ್ರಿಟನ್ನಿಗೂ ಉಂಟಾಗಬಹುದಾದ ಕಷ್ಟ ಅವಸ್ಥೆಗಳನ್ನು ಬ್ರಿಟಿಷ್ ಸರ್ಕಾರದವರು ಮನಸ್ಸಿಗೆ ತಂದುಕೊಂಡು ಪರಿಷತ್ತನ್ನು ಜಯಪ್ರದವಾಗಿ ಮಾಡಲು ಯತ್ನಿಸಬೇಕಾಗಿ ನಂಬುತ್ತೇವೆ.

ಆಡಳಿತದ ಮತ್ತು ನ್ಯಾಯತೀರ್ಪಿನ ಅಧಿಕಾರಗಳ ಪ್ರತ್ಯೇಕಿಸುವಿಕೆ.

ಕಳೆದ ಕೌನ್ಸಿಲ್ ಮೀಟಿಂಗಿನಲ್ಲಿ ಆಡಳಿತದ ಮತ್ತು ನ್ಯಾಯತೀರ್ಪಿನ ಅಧಿಕಾರಗಳನ್ನು ಕೂಡಲೇ ಪ್ರತ್ಯೇಕಿಸಬೇಕೆಂಬ ಠರಾವು ಒಂದು ಚರ್ಚಿಸಲ್ಪಟ್ಟು ಬಹುಮತದಿಂದ ಸೋತು ಹೋಯಿತು. ನ್ಯಾಯತೀರ್ಪಿನ ಅಧಿಕಾರಗಳೂ, ಆಡಳಿತದ ಅಧಿಕಾರಗಳೂ ಒಬ್ಬನಲ್ಲೇ ಇದ್ದರೆ ಅದರಿಂದ ಪ್ರಜಾಜನರಿಗೆ ಅನಾನುಕೂಲವಿದೆಯೆಂಬುದು ನಿರ್ವಿವಾದದ ಮಾತು. ನಾವು ಅನೇಕ ಸಾರಿ ಈ ವಿಷಯವನ್ನು ಕುರಿತು ಬರೆದಿದ್ದೇವೆ. ಕೊಡಗು ಕೌನ್ಸಿಲಿನಲ್ಲಿ ಸಹ ಈ ಮೊದಲೇ ಈ ವಿಷಯು ಚರ್ಚಿಸಲ್ಪಟ್ಟಿದೆ. ಒಟ್ಟು ಹಿಂದೂಸ್ಥಾನದಲ್ಲೂ ಈ ಕೊರತೆ ಇದೆ. ಅದನ್ನು ಹೋಗಲಾಡಿಸಬೇಕೆಂತ ಬಹು ಕಾಲದಿಂದ ಚಳವಳ ನಡೆಯುತ್ತಲಿದೆ.

ಆದರೆ ಈ ಸಾರಿಯ ಕೌನ್ಸಿಲ್ ಚರ್ಚೆಯಲ್ಲಿ ಈ ಕೊರತೆಯನ್ನು ಹೋಗಲಾಡಿಸಲು ಕೊಡಲ್ಪಟ್ಟ ಸಲಹೆಗಳು ತೃಪ್ತಿಕರವಾದವುಗಳಲ್ಲ. ಕಮಿಶನರಲ್ಲಿರುವ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜಿಯವರ ಅಧಿಕಾರಗಳನ್ನು ತೆಗೆದು, ಈ ನ್ಯಾಯತೀರ್ಪಿನ ಅಧಿಕಾರಕ್ಕೆ ಬೇರೆ ಒಬ್ಬರನ್ನು ನೇಮಿಸಿಕೊಳ್ಳಬೇಕೆಂದೇ ಮುಖ್ಯವಾದ ಸಲಹೆಯಾಗಿತ್ತು. ಈಗ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಪೊಲೀಸ್ ಮತ್ತು ರೆವೆನ್ಯೂ ಅಧಿಕಾರಗಳು ಇರುವುದರಿಂದ ಅವರ ಮ್ಯಾಜಿಸ್ಟ್ರೇಟರ ನ್ಯಾಯತೀರ್ಪಿನ ಅಧಿಕಾರವು ದುರುಪಯೋಗವಾಗುತ್ತಲಿದೆಯೆಂಬುದು ಠರಾವನ್ನು ಚರ್ಚೆಗೆ ತಂದವರ ಮುಖ್ಯ ಆಕ್ಷೇಪಣೆಯಾಗಿತ್ತು. ಆದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಕಮಿಶನರಿಗೆ ನೋಡಬೇಕೆಂತ ಇವರು ಹೇಳುವುದಾದರೆ ಕಮಿಶನರಲ್ಲಿ ಇದು ಅಧಿಕಾರಗಳೂ ಸೇರಿಕೊಳ್ಳುವುದಿಲ್ಲವೇ? ಪ್ರತ್ಯೇಕ ಡಿಸ್ಟ್ರಿಕ್ಟ್ ಜಡ್ಜಿಗೆ ಸಾಕಷ್ಟು ಕೆಲಸವಿರುವುದಿಲ್ಲ, ಕೇಸುದಾರರಿಗೆ ಅಪ್ಪೀಲಿನ ಅನುಕೂಲ ತಪ್ಪುತ್ತದೆ, ಒಬ್ಬನೇ ಕೆಲಸ [illegible] ಬಿಡುಗಡೆಯಾಗುವ ವರೆಗೆ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜಿಯಾಗಿ ಇರಬೇಕಾಗುತ್ತದೆ, ಒಂದೇ ಸ್ಥಳದಲ್ಲಿ ಒಬ್ಬ ಅಧಿಕಾರಿಯು ಬಹು ಕಾಲ ಇರುವುದರಿಂದ ಅನುಕೂಲವಿಲ್ಲದೆ ಇದೆಯೆಂಬ ಇತ್ಯಾದಿ ಕಾರಣಗಳನ್ನು ಕೊಟ್ಟು ಈಗಲೇ ಪ್ರತ್ಯೇಕ ಡಿಸ್ಟ್ರಿಕ್ಟ್ ಜಡ್ಜಿಯನ್ನು ನೇಮಿಸು[illegible]ತಲಪ್ಪನ್ನು ನಾವು ಖಂಡಿಸಿರುತ್ತೇವೆ.

ಠರಾವನ್ನು ತಂದವರು ಮಾಡಿದ ಒಂದೆರಡು ವಾದಗಳಿಂದ, ಈ ವರೆಗೆ ಕೊಡಗು ಪ್ರತ್ಯೇಕವಾಗಿಯೇ ಇದ್ದು [illegible] ಆಗಿನ ಅಫೀಸರುಗಳೆಲ್ಲಾ ಕೊಡಗಿನವರೇ ಆಗಿದ್ದು ಕೊಡಗಿನಲ್ಲೇ ಎಂದೆಂದೂ ಅಧಿಕಾರ ನಡಿಸುತ್ತಿರಬೇಕು ಎಂತ [illegible] ಮಾಡುವ ಪಂಗಡದವರಿಗೂ ಸಹ ತಮ್ಮ ವಾದದಲ್ಲಿ ನ್ಯಾಯವಿದೆಯೋ ಎಂಬ ಸಂಶಯ ಹುಟ್ಟಿದಂತೆ ಕಾಣುತ್ತದೆ. ಇದು ಶುಭ ಚಿಹ್ನೆಯೇ ಸರಿ. ಠರಾವು ತಂದವರು [illegible] ಭಾಷಣದಲ್ಲಿ—ಕೊಡಗಿನ ಗಜೆಟೆಡ್ ಉದ್ಯೋಗಸ್ಥರು ಕೊಡಗಿನಿಂದ ಹೊರಗೆ ವರ್ಗಾಯಿಸಲ್ಪಡಬೇಕೆಂದು ಇಲ್ಲಿಯ ಕೌನ್ಸಿಲಿನಲ್ಲಿ ರಾಷ್ಟ್ರೀಯ ಪಕ್ಷದವರು ಈ ಮೊದಲು ವಾದಿಸಿದ್ದರು; ಆಗ ಆ ಠರಾವನ್ನು ವಿರೋಧಿಸಿದ್ದು ಯುಕ್ತವೋ ಎಂಬ ಸಂಶಯವು ಹುಟ್ಟಿದೆಯೆಂತ ಸೂಚಿಸಿದರು. ಒಂದೇ ಅಧಿಕಾರಿಯಲ್ಲಿ ಆಡಳಿತ ಮತ್ತು ನ್ಯಾಯ ತೀರ್ಪಿನ ಅಧಿಕಾರಗಳು ಸೇರಿಕೊಂಡು, ಒಂದೇ ಕಡೆಯಲ್ಲಿ ಬಹು ಕಾಲವಿದ್ದ[illegible]ನರಿಗೆ ಹಾನಿಯಿದೆಯೆಂತ ಈ ಠರಾವು ತಂದವರ ಗುಂಪಿನ[illegible]ಗಳಾದರೂ ತಿಳುವಳಿಕೆ ಬಂದದ್ದು ಅವರು ಕಕ್ಷಿ ಗುಂಪಿನ ಬೆಳಕಿಗೆ ಬಂದಂತಾಗಿದೆ. ಅಧಿಕಾರಗಳನ್ನು ನಡಿಸುತ್ತಿರುವ ವ್ಯಕ್ತಿಗಳ ಅನುಕೂಲವನ್ನು ಬಿಟ್ಟು, ಸಾಧಾರಣ ಸಮುದಾಯ ಜನರ ಅನುಕೂಲವನ್ನು ನೋಡಿದರೆ ಗಜೆಟೆಡ್ ಉದ್ಯೋಗಸ್ಥರು 3 ಯೂ 5 ವರ್ಷಗಳಿಗೊಂದಾವರ್ತಿ ವರ್ಗವಾಗುವುದು ಬಹಳ ಅವಶ್ಯ. ಹಾಗೆ ವರ್ಗವಾಗುತ್ತಿದ್ದರೆ ಒಬ್ಬನಲ್ಲೇ ಆಡಳಿತ ಮತ್ತು ನ್ಯಾಯ ತೀರ್ಪಿನ ಸ್ಥಾನಗಳು ಅಡಕವಾಗಿರುವುದರ ಕೇಡುಕು ಕಡಿಮೆಯಾಗುತ್ತದೆಯೆಂಬುದರಲ್ಲಿ ಸಂಶಯವಿಲ್ಲ.

ಈ ಠರಾವಿನ ಮೇಲೆ ಮಾಡಿದ ವಾದದಲ್ಲಿ ಠರಾವನ್ನು ತಂದವರು ಸೂಚಿಸಿದ ಇನ್ನೊಂದು ವಿಷಯವೇನೆಂದರೆ—ನ್ಯಾಯ ತೀರ್ಪಿನ ಮತ್ತು ಆಡಳಿತದ ಅಧಿಕಾರಗಳು ಬೇರ್ಪಡಿಸಲ್ಪಡುವದರಿಂದ ಕೊಡಗನ್ನು ಮದ್ರಾಸಿಗೆ [illegible] ನಡೆಸಬೇಕಾಗುತ್ತದೆಯೆಂತ ಹೇಳಿದರು. ಕೊಡಗು ಪ್ರತ್ಯೇಕವಾಗಿರುವಷ್ಟು ಕಾಲ ಕೊಡಗಿನ ಸರ್ಕಾರ ಉತ್ಪತ್ತಿ[illegible]ಗಣನೆಗೆ ತೆಗೆದುಕೊಂಡರೆ ಕೊಡಗಿನಲ್ಲಿ ಆಡಳಿತದ ಮತ್ತು ನ್ಯಾಯ ತೀರ್ಪಿನ ಅಧಿಕಾರಗಳನ್ನು ಬೇರ್ಪಡಿಸುವುದು ಅಸಾಧ್ಯವಾಗಬಹುದು. ಕೊಡಗು ಪ್ರತ್ಯೇಕವಾಗಿರಬೇಕೆಂಬ ಮನೋಭಾವವು ಸಾಧ್ಯವಾಗಬೇಕಾದರೆ ಅಧಿಕಾರಗಳ ಮಿಶ್ರಣವಾದ ಕೆಲವು ಅನಾನುಕೂಲಗಳನ್ನು ಅನುಭವಿಸಲೇ ಬೇಕು. ಆದರೆ ಜನರಿಗೆ ತೊಂದರೆಗಳುಂಟಾಗದ ಆಡಳಿತ ರಚನೆಯು ಬೇಕಾದರೆ ದೊಡ್ಡ ಪ್ರಾಂತ್ಯದೊಡನೆ ಸೇರಿಕೊಳ್ಳುವುದು ಉತ್ತಮ.

ಈ ಅಭಿಪ್ರಾಯಕ್ಕೆ ವಿರೋಧವಿದ್ದ ಪಾರ್ಟಿಯವರಿಗೆ ಕೊಡಗು ಈ ವರೆಗೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಲು ವಿರೋಧಿಸಿದ್ದು ತಪ್ಪಾಯಿತೆಂತ ಈಗಾದರೂ ತೋರಿದ್ದು ಸಮಾಧಾನಕರವಾಗಿದೆ. ಆದರಿಂದ ಕೊಡಗಿನ ರಾಜಕೀಯ ಭವಿಷ್ಯತ್ತನ್ನು ಸುಲಭದಲ್ಲಿ ನಿರ್ಣಯಿಸಿಕೊಳ್ಳಬಹುದು. ಅಧಿಕಾರಿಗಳ ವ್ಯಕ್ತಿಗಳಿಗೆ ಸಹಾಯ ಮಾಡುವುದನ್ನೂ, ಮಾಡಿಯೇ ತೀರಬೇಕೆಂಬ ಬಳಕೆಯನ್ನೂ ದೇಶದ ಭವಿಷ್ಯತ್ತನ್ನು ನಿರ್ಣಯಿಸಿಕೊಳ್ಳುವಾಗ ಮನಸಿಗೆ ತಂದುಕೊಳ್ಳಲಾಗದು. ಅಧಿಕಾರಿ ವ್ಯಕ್ತಿಗಳ ದಯ ದೊರಕುತ್ತದೆಯೆಂಬುದು ರಾಜಕೀಯ ವಿಚಾರದಲ್ಲಿ [illegible]ವುದರಿಂದಲೇ ದೇಶದ ಜನಸಮುದಾಯದ ಹಿತದ ದೃಷ್ಟಿಯಿಂದ ಯೋಚಿಸುವುದು ಸಾಧ್ಯವಿಲ್ಲ.

ಠರಾವಿನ ಚರ್ಚೆಯಲ್ಲಿ ಕೊಟ್ಟ ಈ ಮೇಲ್ಕಂಡ ಕಾರಣಗಳು ಠರಾವಿನ ಸಮರ್ಥನೆಗೆ ಮಾತ್ರವಾಗಿರದೆ, ಆ ಠರಾವು ತಂದವರು ಸೇರಿದ ಗುಂಪಿನವರ ಮನೋಭಾವದ ಪ್ರತ್ಯಕ್ಷ ಚಿಹ್ನೆಯಾಗಿದ್ದರೆ ದೇಶದ ಕಲ್ಯಾಣವು ಶೀಘ್ರದಲ್ಲೇ ಬರುವುದು.

ಮಹಾತ್ಮ ಗಾಂಧಿಯವರ 'ವಿಶ್ವಸು.'

(ಇಂಗ್ಲೆಂಡಿನ ಪ್ರಸಿದ್ಧ ಪತ್ರಿಕಾ ಬರವಣಿಗೆಗಾರಳಾದ ಲೇಡಿ ಡ್ರಮಂಡ್ ಹೇ ಎಂಬವರು ಬರೆದ ಲೇಖನ)

ಪೂರ್ವ ದೇಶದ ರಾಜಕೀಯ ಬೋಧಕರಾದ ಮತ್ತು, ಇಂಡಿಯಾದ ಜಾರ್ಜ ವಾಶಿಂಗ್ಟನ್ ಆಗಲಿಕ್ಕಿರುವ ಮಹಾತ್ಮ ಗಾಂಧಿಯವರು ಈಗ ನಮ್ಮ ಸಂಗಡ ಲಂಡನಿನಲ್ಲಿದ್ದಾರೆ. ಅವರು ಅತ್ಯಂತ ಸಾದಾ ಮನುಷ್ಯರಾಗಿದ್ದರೂ ಈಗಿನ ರೌಂಡ್ ಟೇಬಲ್ ಕಾನ್‌ಫರೆನ್ಸಿನಲ್ಲಿ ಎಲ್ಲರ ನೋಟವನ್ನು ಸೆಳೆಕೊಂಡ ಮಹನೀಯರಾಗಿದ್ದಾರೆ.

ಬರೇ ಒಂದು ಮುಂಡು ಮತ್ತು ಒಂದು ಶಾಲು ಮಾತ್ರ ಉಡುವವನಾಗಿರುವ, ಅವರ ಪ್ರವಾಸದ ಸಾಮಾನುಗಳನ್ನೆಲ್ಲಾ ಒಂದು ಚಿಕ್ಕ ಪೆಟ್ಟಿಗೆಯಲ್ಲಿ ಇಟ್ಟುಕೊಂಡಿರುವ, ತನ್ನ ದೇಶದ ಮನೆ ಕಸಬನ್ನು ಸೂಚಿಸುವ ಕೈನೂಲಿನ ರಾಟೆಯನ್ನೂ ಸಂಗಡಲೇ ತಂದಿರುವ ಗಾಂಧಿಯವರು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಒಂದು ಕತ್ತೆಯ ಮೇಲೆ ಜೆರುಸಲೇಮಿಗೆ ಸಾದಾ ರೀತಿಯಲ್ಲಿ ಬಂದ ಯೇಸು ಕ್ರಿಸ್ತನಂತೆ ಬಂದಿದ್ದಾರೆ. ಸಾಧಾರಣ ಸಂಪೂರ್ಣ ನಗ್ನನಾಗಿರುವ, ಬಿಳಿ ಹಿಲ್ಲದ ಮೈಬಣ್ಣವಿರುವ, ಕನ್ನಡಕ ಧರಿಸಿರುವ, ಅತಿನ ಹಾಲೇ ಆಹಾರವಾಗಿರುವ ಈ ಚಿಕ್ಕ ಮನುಷ್ಯನ ಮೇಲೆ ನಮ್ಮ ದೇಶದ ಕೆಲವು ಪತ್ರಿಕೆಗಳು ಮತ್ತು ಹಲವರಿಂದ ಭಾಷಣಕಾರರು ಮಾಡುತ್ತಿರುವ ಕಠಿಣ ತರದ ಆಕ್ಷೇಪಣೆಗಳು ಆ ಪುರಾತನ ಕಾಲದ ಜೆರುಸಲೇಮಿನಲ್ಲಿ ಸಹ ಕೇಳಿಸಿತು. ರೋಮನ್ ರಾಜ್ಯದ ಭಕ್ತಿಗಾಗಿ ಆವಶ್ಯಪಡ್ಡ ಯೇಸು ಕ್ರಿಸ್ತನ ಮೇಲೆ ಬೈಗಳು ಸುಳ್ಳು ಆರೋಪಗಳು, ಅಂತ್ಯದಲ್ಲಿ ಯೇಸು ಕ್ರಿಸ್ತನನ್ನು ಶಿಲುಬೆಗೆ ಏರಿಸಿದವು. ಅದರಿಂದ ಕ್ರಿಸ್ತನ ಧರ್ಮವೂ, ಮತವೂ ನಾಶವಾಗುವುದರ ಬದಲು ಅದೇ ಆತನ ಧರ್ಮಕ್ಕೆ ಸಹಾಯವಾಯಿತು. ಗಾಂಧಿಯವರು ಎರಡನೇ ಯೇಸುಕ್ರಿಸ್ತನಾಗಿದ್ದಾನೆಂತ ನಾನು ಹೇಳುತ್ತೇನೆಂತಲ್ಲ. ಆದರೆ ಈಗಿನ ಪ್ರಪಂಚದ ನಡುವೆಯಲ್ಲಿ ಕ್ರಿಸ್ತನನ್ನು ಇವರಷ್ಟು ಹೋಲುವವರು ಬೇರೆ ಯಾರೂ ಇಲ್ಲ. ಇವರಿಗೆ ಸ್ವಾರ್ಥವೆಂಬುದು ಇಲ್ಲವೇ ಇಲ್ಲ, ಏನು ಆಸ್ತಿಯೇನೂ ಇಲ್ಲ, ಬೇಕೆಂತ ಆಶಿಸುವುದೂ ಇಲ್ಲ. ಬಹಳ ನಿಯಮ ಜೀವನ ನಡಿಸುತ್ತಾರೆ. ಕಮಾಶಿಗಾಗಿಯೂ ಗಿ, ಆಹಾರಕ್ಕಾಗಿಯಾಗಲೀ ಜೀವ ನಾಶ ಮಾಡುವುದಿಲ್ಲ. ತನ್ನ ದೇಶಕ್ಕಾಗಿಯೂ, ಹಿಂಬಾಲಕರಿಗಾಗಿಯೂ ತನ್ನ ಜೀವವನ್ನೇ ಒಪ್ಪಿಸಲು ಯಾವಾಗಲೂ ತಯಾರಾಗಿದ್ದಾರೆ. ಗಾಂಧಿಯವರನ್ನು ಕಾರಣವಿಲ್ಲದೆ ಹಿಂದೂಸ್ಥಾನದ 'ರಾಜಕೀಯ ಯೇಸುಕ್ರಿಸ್ತ' ನೆಂತ ಹೇಳುವುದಿಲ್ಲ.

ಹಾಗಾದರೆ ಆಟದಲ್ಲೂ, ರಾಜಕೀಯ ಕಾರ್ಯಗಳಲ್ಲೂ ನ್ಯಾಯಕ್ಕೂ, ನೀತಿಗೂ ಬೇರೆ ರಾಜ್ಯಗಳಿಗಿಂತ ಪ್ರಖ್ಯಾತಿಯಾದ ಬ್ರಿಟಿಷ್ ರಾಜ್ಯವು ಗಾಂಧಿಯವರಿಗೂ ಈ ಗುಣಗಳನ್ನು ಪ್ರದರ್ಶಿಸಲಿ ತಿಳುವಳಿಕೆ ಇಲ್ಲದಿರುವಿಕೆ, ದ್ವೇಷ ಅಥವಾ ತಾವೇ ಮೇಲು ಎಂಬ ಭಾವನೆ, ನಮ್ಮ ಭವಿಷ್ಯತ್ತಿನ ಮತ್ತು ಈಗಿನ ಕ್ಷೇಮವನ್ನು ನಮಗೆ ಕಾಣದಂತೆ ಮಾಡದಿರಲಿ. ರಾಮಭೂಮಿಯ ದೇಶವು ಕಪ್ಪಾಗಿದ್ದರೂ, ಮೈತುಂಬಾ ಬಟ್ಟೆ ಧರಿಸದೆ ಇದ್ದರೂ ರಾಯಭಾರಿಗೆ ತೋರಿಸುವ ಆತಿಥ್ಯ ಮತ್ತು ಗೌರವದಲ್ಲಿ ಪಶ್ಚಿಮ ದೇಶವು ಪೌರಾತ್ಯ ದೇಶಕ್ಕಿಂತ ಹಿಂದೆ ಬಿಲ್ಲವೆನ್ನಿಸಿಕೊಳ್ಳಬೇಕ.

ನಮ್ಮನ್ನು ನಾವೇ ಮೋಸಗೊಳಿಸಿಕೊಂಡರೆ ಪ್ರಯೋಜನವಿಲ್ಲ. ಫ್ರೆಂಚ್ ಸಾಮ್ರಾಜ್ಯವಾದ ಫ್ರಾಂಕೈ ನಾವು ಎಷ್ಟು ಶುಷ್ಕ ದೃಷ್ಟಿಯಿಂದ ನೋಡುತ್ತಿದ್ದೇವೆ. ಆದರೆ ಈಗ ಅದೇ ಫ್ರಾಂಕೆನಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಎಷ್ಟು ಹಾನಿ ಬರಬಹುದೆಂತ ವಾಚಕರಿಗೆ ತಿಳಿಯದ್ದಿಲ್ಲ. ಪ್ರಪಂಚದಲ್ಲಿ ... ಬೇರೆ ಯಾರಿಗೂ ಇಲ್ಲ. ಹಿಂದೂಸ್ಥಾನದ 32 00 00,000 ಜನಸಂಖ್ಯೆಯ ಶೇಕಡ ಎಷ್ಟು ಭಾಗ ಇವರನ್ನು ನಂಬಿದ್ದಾರೆ. ಇವರಿಗಾಗಿ ಪ್ರಾಣವನ್ನು ಕೊಡಲು ಸಿದ್ಧರೆಂತ ಯಾರಿಗೂ ಹೇಳಲಿಕ್ಕೆ ಸಾಧ್ಯವಿಲ್ಲ. ಹಿಂದೂಸ್ಥಾನದಲ್ಲಿ ಎಷ್ಟೋ ಜಾತಿ ಮತಗಳಿದ್ದರೂ ಹಿಂದೂಸ್ಥಾನದ ಧ್ಯೇಯವು ಇವರ ಮೂಲಕ ಕೇಳಲ್ಪಡುವಷ್ಟು ಬೇರೆ ಯಾರಿಂದಲೂ ಇಲ್ಲವೆಂಬುದು ಸರ್ವಸಾಧಾರಣ ಮಾತೆಂತ ಹೇಳಬಹುದು. ಇವರ ಶಕ್ತಿಯನ್ನು ಅಲ್ಲಗಳೆಯುವದರಿಂದಲೂ, ಇವರ ಶಕ್ತಿಯು ಕಡಿಮೆ ಯಾಗುತ್ತಿದೆಯೆಂತ ನಾವು ನಂಬಲು ಪ್ರಯತ್ನಿಸುವದರಿಂದಲೂ, ಹಿಂದೂಸ್ಥಾನವು ಸ್ವರಾಜ್ಯಕ್ಕೆ ಅರ್ಹವಾಗಿರಲೀ, ಇಲ್ಲದಿರಲಿ ಹಿಂದೂಸ್ಥಾನಕ್ಕೆ ಸ್ವರಾಜ್ಯ ಸಿಕ್ಕಲಾರದೆಂತ ಹೇಳುವುದರಿಂದಲೂ ಏನೂ ಪ್ರಯೋಜನವಿಲ್ಲ. ಸ್ಪೈಯಿನ್ ರಾಜ್ಯದ ಈಗ ಸ್ವತಂತ್ರ ರಾಜ್ಯಗಳಾಗಿರುವ ವಸಾಹತುಗಳು ಸ್ವರಾಜ್ಯಕ್ಕೆ ಅರ್ಹವೆಂತ ಸ್ಪೈಯಿನ್ ರಾಜ್ಯವು ಒಪ್ಪಿಕೊಳ್ಳುವ ವರೆಗೆ ಸ್ವರಾಜ್ಯ ಸ್ಥಾಪನೆಗೆ ಕಾದಿದ್ದರೆ, ಈಗಲೂ ಸ್ಪೈಯಿನ್ ಚಕ್ರಾಧಿಪತ್ಯದಷ್ಟು ದೊಡ್ಡ ಚಕ್ರಾಧಿಪತ್ಯವು ಬೇರೊಂದೂ ಇರುತ್ತಿರಲಿಲ್ಲ. ಅಮೇರಿಕಾದ ಯುನೈಟೆಡ್ ಸ್ಟೇಟ್ಸ್ ಈಗಲೂ ಇಂಗ್ಲಿಷರ ವಸಾಹತು ಅಥವಾ ಸಾಮಂತ ರಾಜ್ಯವಾಗಿರುತ್ತಿತ್ತು. ಫ್ರೆಂಚ್ ಫ್ರಾಂಕೆನಂತೆ 'ಶಪ್ಪಾಗಿಯೂ,' ಅಲ್ಪವಾಗಿಯೂ ಇರುವ ಗಾಂಧಿಯವರು ದುಂಡು ಮೇಜು ಸಭೆಯಲ್ಲಿ ಹಿಂದೂಸ್ಥಾನದ ರಾಯಭಾರಿಯಾಗಿರುತ್ತಾರೆ. ಮುಂದಿನ ಕಾಲಗಳಲ್ಲಿ ಬೇರೆ ಯಾವ ಬ್ರಿಟಿಷ್ ಯಾ ಹಿಂದೀ ಪ್ರತಿನಿಧಿಗಿಂತ ಹೆಚ್ಚಾಗಿ ಇವರ ಮೇಲೆಯೇ ಪ್ರಪಂಚದ ದೃಷ್ಟಿಯು ಬೀಳುತ್ತದೆ.

ಸಾರ್ವಜನಿಕ ಕೆಲಸ ಮಾಡುವ ಮನುಷ್ಯನ ಧ್ಯೇಯವನ್ನಾಗಲೀ, ಕಾರ್ಯವನ್ನಾಗಲೀ ಅರಿತುಕೊಳ್ಳಬೇಕೆನ್ನುವುದಕ್ಕಿಂತ ಹೆಚ್ಚಾಗಿ ಆತನ ಜೀವನ, ಖಾಸಗಿ ಜೀವನದ ರೀತಿ, ಚರ್ಯೆಗಳನ್ನು ತಿಳಿಯಲು ಜನರು ದಾಹಿಸುತ್ತಾರೆ. ಅಪೇಕ್ಷಿಸುವದರಿಂದ "ರಜಪುತಾನಾ' ಹಡಗದಲ್ಲಿ ಗಾಂಧಿಯವರು ಹೇಗೆ ಕಾಲ ಕಳೆಯುತ್ತಿದ್ದಾರೆಂಬುದು ತಂತಿ ಇಲ್ಲದ ಪತ್ರಗಳ ಮೂಲಕ ತಿಳಿಯುತ್ತಿತ್ತು. ಫಸ್ಟ ಕ್ಲಾಸನ್ನು ಬಿಟ್ಟದ್ದೂ ಅಲ್ಲದೆ ಬೇರೆ ಕ್ಲಾಸ್ ಇಲ್ಲದ್ದರಿಂದ ಸೆಕೆಂಡ್ ಕ್ಲಾಸಿನಲ್ಲಿ ಪ್ರಯಾಣ ಮಾಡಿದರೆಂತಲೂ, ಅವರ ದೇಶದ ಜನರು ಸಾಧಾರಣವಾಗಿ ಉಡುವ ಉಡುಪನ್ನೇ ಉಟ್ಟು ಬರುತ್ತಾರೆಂತಲೂ, ಇಂಥಾ ದಸ್ತು ಒದಗಾಯಿಸಲು ಅನುಕೂಲವಾಗುವಂತೆ ಹೆಚ್ಚು ಜೊತೆ ತೆಗೆದುಕೊಂಡಿದ್ದಾರೆಂತಲೂ, ಆಡಿನ ಹಾಲನ್ನು ಸಂಗಡಲೇ ತೆಗೆದುಕೊಂಡಿದ್ದಾರೆಂತಲೂ, ಮಕ್ಕಳೊಂದಿಗೆ ಶಾಲೆಬಿಟ್ಟು ಬಂದ ಹುಡುಗನಂತೆ ಆಡುತ್ತಿದ್ದಾರೆಂತಲೂ, ಬರೇ ಹಲಿಗೆಯ ಮೇಲೆ ಮಲಗುತ್ತಿದ್ದಾರೆಂತಲೂ ತಿಳಿಯುತ್ತಿತ್ತು.

ಬ್ರಿಟನ್ನಿನ ಮತ್ತು ಅಮೇರಿಕಾದ ಪತ್ರಿಕೆಗಳ ಪ್ರತಿನಿಧಿಗಳು ಸಂಗಡಲೇ ಪ್ರಯಾಣ ಮಾಡಿದರು. ಒಟ್ಟು ಪ್ರಪಂಚದ ದೃಷ್ಟಿಯೆಲ್ಲಾ ಇವರ ಕಡೆಗೆ ತಿರುಗಿದೆಯೆಂತ ಇವರು ಒಪ್ಪುತ್ತಾರೆ. "ಸಮಯ ಸ್ವಲ್ಪ, ಸಮಯ ಓಡುತ್ತಿದೆ' ಎಂಬ ಇತ್ಯಾದಿ ಪಾಶ್ಚಿಮಾತ್ಯ ಹೇಳಿಕೆಗಳಿಗೆ ವಿರೋಧವಾಗಿ ಇವರು ಸದಾ ಅನಂತದಾಗಿಯೆಂತ ನಂಬುವವರಾಗಿದ್ದಾರೆ. ಪಾಶ್ಚಾತ್ಯರಲ್ಲಿ ಎಂದಾದರೂ ಧರ್ಮದ ಉತ್ಸಾಹ ಹೆಚ್ಚಿದಾಗ ತೋರಿಬರುವ ತ್ಯಾಗ ಬುದ್ಧಿಯು ಇವರಲ್ಲಿ ನಿರಂತರವಾಗಿದೆ.

ರಾಜಕೀಯ ಕಾರ್ಯದಲ್ಲಿ ಅದ್ವಿತೀಯರಾದ ಇವರು ಬೊಂಬಾಯಿಂದ ಹೊರಡುವಾಗ 'ನಾನು ದೇಶಕ್ಕೆ ವಿರೋಧವಾದ ಕೆಲಸ ಮಾಡಿದೆನೆಂತ ನಿಮಗೆ ತೋರಿದರೆ ನನ್ನ ಮೇಲೆ ಕೈಮಾಡಿ, ನನ್ನ ಜೀವವನ್ನೇ ತೆಗೆದರೂ ಸಹ ಅದು ಹಿಂಸಾಮಾರ್ಗವೆಂತ ನಾನು ಊಹಿಸಲಿಕ್ಕಿಲ್ಲ' ವೆಂತ ಹೇಳಿದರು.

ಎರಡು ಸಾವಿರ ವರ್ಷಗಳ ಕೆಳಗೆ ಅವರು ಏನು ಮಾಡುತ್ತಿದ್ದಾರೆಂತ ಅವರಿಗೆ ತಿಳಿಯದ್ದರಿಂದ ಅವರನ್ನು ಕ್ಷಮಿಸಿ' ಎಂತ ಹೇಳಿದ ಪ್ರತಿಧ್ವನಿಯಂತೆ ಕೇಳಿಸುತ್ತದೆ.

ಪ್ರೊ ಫೆ ಸ ರ್ ಎ ಡಿ ಸ ನ್.

ಈ ಹದಿನೆಂಟನೆ ತಾ|| ಬೆಳಿಗ್ಗೆ ೩ ಗಂಟೆ ೨೪ ನಿಮಿಷಕ್ಕೆ ಜಗದ್ವಿಖ್ಯಾತ ನಿರ್ಮಾಣಕರಾದ ಥಾಮಸ್ ಅಲ್ವ ಎಡಿಸನ್‌ರವರು ಕಾಲವಾದರು. ಇವರು ಹುಟ್ಟಿದ್ದು ಅಮೇರಿಕಾ ದೇಶದ ಓಹಿಯೋ ಸಂಸ್ಥಾನಕ್ಕೆ ಸೇರಿದ ಮಿಲಾನ್ ಪಟ್ಟಣದಲ್ಲಿ, ೧೮೪೭ ನೇ ಇಸವಿ ಫೆಬ್ರವರಿ ೧೧ ರಲ್ಲಿ.

ಈತನು ಕಡು ಬಡವ. ವಿದ್ಯಾಭ್ಯಾಸ ಕೊಡ ಮಾಡಲು ಶಕ್ತಿ ಇಲ್ಲದೆ ಶಾಲೆಗೆ ಸೇರಿದ ಮೂರು ತಿಂಗಳೊಳಗಾಗಿ ಬಿಡಬೇಕಾಯಿತು.

೧೨ನೇ ವರ್ಷದಲ್ಲಿ ಈತನು ರೈಲ್ವೆ ಸ್ಟೇಶನ್‌ಗಳಲ್ಲಿ ವೃತ್ತಾಂತ ಪತ್ರಿಕೆಗಳನ್ನು ಮಾರುತ್ತಿದ್ದನು. ೧೫ನೇ ವರ್ಷದಿಂದಲೂ ಟೆಲಿಗ್ರಾಫ್ ಕಂಪೆನಿಯ ಆಪರೇಟರಾದನು.

ಟೆಲಿಗ್ರಾಫ್ ಕಂಪೆನಿಯಲ್ಲಿ ಕೆಲಸ ಮಾಡಿದ ಈತನಿಗೆ ಅದಕ್ಕೆ ಸಂಬಂಧಪಟ್ಟ ವಿದ್ಯುಚ್ಛಕ್ತಿಯ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ತುಂಬಾ ಅಭಿರುಚಿಯುಂಟಾಯಿತು.

ಆನಂತರ ತನ್ನ ೨೧ನೇ ವಯಸ್ಸಿನಲ್ಲಿ 'ಎಲೆಕ್ಟ್ರಿಕಲ್ ವೋಟ್ ರಿಕಾರ್ಡರ' ಎಂಬ ವಿಧಾನವನ್ನು ಪೇಟೆಂಟ ಮಾಡಿಸಿದನು. ೧೮೭೭ನೇ ಇಸವಿಯಲ್ಲಿ, ಚಪ್ಪಟೆ ಕಪ್ಪಿನ ಅಡುಬಿನ ಗುಂಡಿಗಳಿಂದ ಬಂದ ಸಾಧನವನ್ನು ಶಬ್ದವನ್ನು ಮಾಡಿ ಮಾತನಾಡಲು ಸಹಕಾರಿಯಾಗುವ ಟೆಲಿಫೋನ್ ವಿಧಾನವನ್ನು ಸುಲಭ ಮಾಡಿದನು.

ಅಲ್ಲಿಂದೀಚೆಗೆ ೧೦ ವರ್ಷಗಳ ಕಾಲ ವಿದ್ಯುಚ್ಛಕ್ತಿಯ ತಯಾರಿಕೆ ಮತ್ತು ದೂರಕ್ಕೆ ಆ ಶಕ್ತಿಯನ್ನು ಕಳುಹಿಸುವಿಕೆ ಮುಂತಾದ ವಿಧಾನಗಳನ್ನು ಕಂಡುಹಿಡಿದು ಕ್ರಮಪಡಿಸಿದನು. "ಮೂರು ತಂತಿ ವಿಧಾನ ವನ್ನು ಕಂಡು ಹಿಡಿದವನೂ ಈತನೇ. ವಿದ್ಯುಚ್ಛಕ್ತಿ ರೈಲು, ಸಿನಿಮಾ ಕ್ಯಾಮರಾ, ಸಿನಿಮಾ ತೋರಿಸುವ ಯಂತ್ರ, ಟೆಲಿಗ್ರಾಫ್ ಆಫೀಸಿನ ಗುಂಪು, ಕ್ವಾಡ್ರುಪಲ್, ಸೆಕ್ಸ್ಟುಪಲ್ ಮುಂತಾದ ಜಗದ್ವಿಖ್ಯಾತ ತಯಾರಿಗಳೂ ಈತನವೆ.

ಎಲ್ಲಕ್ಕಿಂತಲೂ ಹೆಚ್ಚಾಗಿ ಎಲ್ಲರಿಗೂ ಆನಂದದಾಯಕವಾಗಿರುವ ಗ್ರಾಮೋಫೋನ್ ಯಂತ್ರವನ್ನು ಕಂಡುಹಿಡಿದ ಮಹನೀಯನೂ ಈತನೆ. ಎಲೆಕ್ಟ್ರಿಕ್ ಬಲ್ಬುಗಳನ್ನು ಕಂಡು ಹಿಡಿದು ಲೋಕೋಪಕಾರ ಮಾಡಿದವನೂ ಈತನೆ.

ಈತನು ಗ್ರಾಮೋಫೋನ್ ತಯಾರು ಮಾಡಲು ಉಪಯೋಗಿಸಿದ ಸಾಮಾನುಗಳನ್ನು ನೆಲದ ಮೇಲೆ ಹರಡಲು ೨ ಎಕರೆ ಜಮೀನು ಬೇಕಾಗುತ್ತಿತ್ತಂತೆ.

ಈತನ ತಪಶ್ಶಕ್ತಿಯು ಅಮೋಘವಾದುದು. ಆದರೆ ತಪಸ್ಸಿಗೆ ಕುಳಿತಾಗ ಚಿಂತಿಸುತ್ತಿದ್ದ ವಿಚಾರವು ಬರೇ ಪ್ರಕೃತಿ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಚಾರಗಳು. ಆ ರೀತಿ ಇವನು ಎಷ್ಟೋ ದಿನಗಳ ವರೆಗೆ ಬಾಹ್ಯ ವಿಮುಖನಾಗಿ ಕುಳಿತಿರುತ್ತಿದ್ದನಂತೆ. ಆಗ ಯಾರಾದರೂ ಸಮೀಪದಿಂದ ಗುಂಡು ಹಾರಿಸಿದರೂ ವಿಮುಖನಾಗುತ್ತಿರಲಿಲ್ಲವಂತೆ. ಈ ರೀತಿ ಅವನ ಯೋಜನೆಯ ಕಾಲದಲ್ಲಿ ಅವನಿಗೆ ತಿಂಡಿ ತೀರ್ಥಗಳನ್ನು ಅವನ ಸೇವಕನು ಸದಾ ಸಿದ್ಧವಾಗಿಯೇ ಇಟ್ಟುಕೊಂಡು ಕಾದಿರುತ್ತಿದ್ದನು. ಅವನಿಗೆ ಪ್ರಜ್ಞೆ ಬಂದಾಗ ತಿಂಡಿ ಕೊಡುತ್ತಿದ್ದನು. ಈ ರೀತಿ ಎಷ್ಟೋ ದಿನಗಳು ಉಪವಾಸವಾಗಿಯೇ ಇರುತ್ತಿದ್ದನಂತೆ. ತಪಸ್ಸಿನಲ್ಲಿ ಇಂತಹ ನಿಶ್ಚಲ ಬುದ್ಧಿ ಇದ್ದದ್ದರಿಂದಲೇ ಅಸಾಧ್ಯ ಸಾಧ್ಯವಾದ ನಿರ್ಮಾಣಗಳನ್ನು ರಚಿಸಿದ್ದು. ಈತನು ಈಚೆಗೆ ಕೆಲವು ವರ್ಷಗಳಿಂದ ಕಿವುಡನಾಗಿದ್ದನು. ಆದರೂ ತನ್ನ ವಿಜ್ಞಾನ ಶಾಸ್ತ್ರ ಸಂಶೋಧನ ಕಾರ್ಯಗಳನ್ನು ಮಾತ್ರ ಬಿಟ್ಟಿರಲಿಲ್ಲ. ಈತನು ನಿಸ್ಸಂದೇಹವಾಗಿ ಪ್ರಪಂಚದ ಮಹಾಪುರುಷರಲ್ಲೊಬ್ಬನು. ನ್ಯೂಯಾರ್ಕ್ ನಗರವು ಈ ೨೧ನೇ ತಾ|| ರಾತ್ರಿ ೮ ಘಂಟೆಗೆ ಒಂದು ನಿಮಿಷ ಕತ್ತಲಲ್ಲಿದ್ದು (ದೀಪಗಳೆಲ್ಲವನ್ನೂ ಆರಿಸಿ) ತಮ್ಮ ವಿಷಾದವನ್ನು ತೋರ್ಪಡಿಸಿದ್ದಲ್ಲದೆ ಆತನಲ್ಲಿಟ್ಟಿದ್ದ ಗೌರವವನ್ನು ಪ್ರದರ್ಶಿಸಿತು.

ಈತನಿಗೆ ೮೪ ವರುಷ ವಯಸ್ಸಾಗಿದ್ದಿತು.

'ಸ್ವ ಮ'

ನಾವು ಪರದೇಶೀ ಸಕ್ಕರೆಯನ್ನು ಏಕೆ ಬಹಿಷ್ಕರಿಸಬೇಕು?

ಕಾರಣಗಳು

೧ ಬಟ್ಟೆ, ಕಬ್ಬಿಣ ಸಾಮಾನು ಮತ್ತು ಯಂತ್ರ ಇವುಗಳ ತರುವಾಯ ಸಕ್ಕರೆಯೆ ಎಲ್ಲಕ್ಕೂ ದೊಡ್ಡ ಆಯಾತವು (ಬರುವ ಮಾಲು)

೨ ಹೋದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ೧೫ ರಿಂದ ೧೭ ಕೋಟಿ ರೂಪಾಯಿಯ ಸಕ್ಕರೆಯು ಹೊರಗಿನಿಂದ ಬಂದಿದೆ.

೩ ಹಿಂದೂಸ್ಥಾನವು ತನಗೆ ಬೇಕಾದ ಎಲ್ಲ ಸಕ್ಕರೆಯನ್ನು ಇಲ್ಲಿ ತಯಾರು ಮಾಡಿ ಪೂರೈಸಿಕೊಳ್ಳಬಹುದು.

೪ ಪರದೇಶೀ ಸಕ್ಕರೆಯು ಶುದ್ಧವಿಲ್ಲದಿರುವ ಕಾರಣ ನಮ್ಮ ಧರ್ಮಭಾವನೆಗಳಿಗೆ ಘಾತಕವಾಗುವದು.

೫ ಈಗ ೪೦—೫೦ ವರ್ಷಗಳ ಹಿಂದೆ ನಮಗೆ ಬೇಕಾದ ಎಲ್ಲಾ ಸಕ್ಕರೆಯು ಇಲ್ಲಿಯೇ ತಯಾರಾಗುತ್ತಿತ್ತು.

೬ ೧೯೨೭,೧೯೨೮,೧೯೨೯ ಈ ಮೂರು ವರ್ಷಗಳಲ್ಲಿ ಅನುಕ್ರಮವಾಗಿ ೧೬, ೧೫, ೧೧ ಕೋಟಿ ರೂಪಾಯಿಯ ಪರದೇಶೀ ಸಕ್ಕರೆಯು ನಮ್ಮಲ್ಲಿ ಬಂದಿದೆ. ಇಷ್ಟು ದುಡ್ಡು ಅಪ್ಪಟ ಪರದೇಶಕ್ಕೆ ಹೋದಂತಾಯಿತು.

೭ ಬಹುತರ ಎಲ್ಲ ಸಕ್ಕರೆಯು ಯುನಾಯಿಟೆಡ್ ಕಿಂಗಡಮ್ (ಇಂಗ್ಲೆಂಡು, ಸ್ಕಾಟಲೆಂಡವೇಲ್ಸ) ಚೀನ ಮತ್ತು ಜಾವಾ ದೇಶಗಳಿಂದ ಬರುವುದು.

೮ ಬಂಗಾಲ ಪ್ರಾಂತವು ಎಲ್ಲಕ್ಕೂ ಹೆಚ್ಚು ಸಕ್ಕರೆಯನ್ನು ತಿನ್ನುವದು. ೯ ಬಳಿಕ ಮುಂಬಯಿ ಮತ್ತು ಸಿಂಧ. ಗಣಪತಿ ಪೂಜೆ ಮತ್ತು ದೀಪಾವಳಿಯ ಕಾಲಕ್ಕೆ ಎಲ್ಲಕ್ಕೂ ಹೆಚ್ಚು ಸಕ್ಕರೆ ವ್ಯಾಪಾರವಾಗುವದು.

ಪರದೇಶೀ ಸಕ್ಕರೆಯನ್ನು ಪೂರ್ಣ ಬಹಿಷ್ಕರಿಸಿ ಇನ್ನು ಹಿಂದೂಸ್ಥಾನದಲ್ಲಿ ಹೆಚ್ಚು ಸಕ್ಕರೆಮಾಡುವದು ಸಾಧ್ಯವೋ?

ಹಿಂದೂಸ್ಥಾನದಲ್ಲಿ ಸಕ್ಕರೆ.

ಸದ್ಯಕ್ಕೆ ೧೦ ಲಕ್ಷ ಟನ್ನಿಗಿಂತ ಹೆಚ್ಚು ಸಕ್ಕರೆಯು ಪರದೇಶದಿಂದ ಬರುತ್ತಿರುವದು. ಹಿಂದೂಸ್ಥಾನದಲ್ಲಿ ೧ ಲಕ್ಷ ಟನ್ನ ಮಾತ್ರ ಆಗುತ್ತಿರುವದು. ಈಗಿದ್ದಂಥ ೨೯೦ ಸಕ್ಕರೆಯ ಕಾರಖಾನೆಗಳನ್ನು ಹೊಸದಾಗಿ ತೆರೆದರೆ ನಮಗೆ ಬೇಕಾದಷ್ಟು ಸಕ್ಕರೆಯು ಪೂರೈಸುವದು. ಅಷ್ಟು ಕಾರಖಾನೆಗಳು ಹೊರಡಲಿಕ್ಕೆ ೨೯೫ ಲಕ್ಷ ರೂಪಾಯಿ ಬೇಕಾಗುವವು. ಈ ಹಣವನ್ನು ದೊರಕಿಸುವ ರೀತಿಯನ್ನು ಟಾರಿಫ್ ಬೋರ್ಡಿನವರು ಸೂಚಿಸಿರುವರು. ಹೊರಗಿನಿಂದ ಬರುವ ಮಾಲ ಒಂದಕ್ಕೆ ಒಂದು ರೂಪಾಯಿ ಜಕಾತಿ ಹಾಕಿದರೆ ೬ ವರ್ಷದಲ್ಲಿ ಅಷ್ಟು ಹಣವು ಕೂಡುವದು ಮತ್ತು ನಮ್ಮಲ್ಲಿಯ ಸಕ್ಕರೆಯ ಉದ್ಯೋಗದ ಉದ್ಧಾರವಾಗುವದು. ಸುಮಾರು ೩ ಲಕ್ಷ ಜನರ ಆ ಉದ್ಯೋಗದಿಂದ ಹೊಟ್ಟೆ ತುಂಬಿಕೊಳ್ಳಬಹುದು.

ಆದ ಇದನ್ನೆಲ್ಲ ಸರಕಾರದವರು ಕಿವಿಯಲ್ಲಿ ಹಾಕಿಕೊಳ್ಳದ ಹೊರತು ಆಗದ ಮಾತಲ್ಲ. ವ್ಯಾಪಾರವು ಹೆಚ್ಚು ಬೆಳೆಯ ಬೇಕಾದರೆ ರೈಲ್ವೆ ದರಗಳಲ್ಲಿಯೂ ಸಧಾರಣೆಯಾಗಲಿಕ್ಕೆ ಬೇಕು. ಅನುಕೂಲತೆ ... ಪರದೇಶಗಳಲ್ಲಿ ಹುಟ್ಟುವಳಿಗೆ ಬೇಕಾದ ಬಂದರದ ೧೦ನೇ ಪಾಲು ರೈಲ್ವೆಗೆ ಬೇಕಾದರೆ ಬಹಳವಾಯಿತೆನ್ನುವರು. ಆದರೆ ಹಿಂದೂಸ್ಥಾನದಲ್ಲಿ ಮಾಲು ಹೊರಗೆ ಹೋಗಲಿಕ್ಕೆ ಅನುಕೂಲವಾಗುವ ರೈಲ್ವೆ ದರಗಳು ಇಡಲ್ಪಟ್ಟಿವೆ! ೧೯೨೨ರಲ್ಲಿ ವಿಶೇಷ ಸಹಾಯ ಕಲಕತ್ತೆಯ ನಡುವೆ ರೈಲ್ವೆ ದರಗಳು ಹುಟ್ಟುವಳಿಯ ಖರ್ಚಿನ ೬ ಪಾಲಿನಷ್ಟಿದ್ದವು. ಅವು ಈಗ ಮೂರು ಪಾಲಿಗಿಂತ ಹೆಚ್ಚು ಇವೆ. ಕರಾಚಿ, ಕಲಕತ್ತೆಯ ನಡುವಿನ ರೈಲ್ವೆ ದರಗಳು ಇದೇ ರೀತಿ ಹೆಚ್ಚಾಗಿರುವವು.

ಇದೆಲ್ಲ ಬದಲಾಗಲಿಕ್ಕೆ ಹಿಂದೂಸ್ಥಾನ ಸರಕಾರವು ಹಿಂದೀಯರಿಂದ ನಡೆಸಲ್ಪಡಲಿಕ್ಕೆ ಬೇಕು. ಅನ್ಯ ಮಾರ್ಗವಿಲ್ಲ.

ಹಾಗೆ ಸರಕಾರವು ನಮ್ಮ ಕೈಯಲ್ಲಿ ಬರುವ ವರೆಗೆ ಸ್ವಸ್ಥ ಕೂಡಬೇಕೇನು? ಇಲ್ಲ, ಸರ್ವಥಾ ಇಲ್ಲ. ಸರಕಾರವನ್ನು ಕೈವಶ ಮಾಡಿಕೊಳ್ಳುವ ಯತ್ನವನ್ನು ಅಹೋರಾತ್ರ ಮಾಡಬೇಕು. ಅಷ್ಟರಲ್ಲಿ ಪರದೇಶಿ ಸಕ್ಕರೆಗೆ ಸಂಪೂರ್ಣ ಬಹಿಷ್ಕಾರ ಹಾಕಿ, ಸ್ವದೇಶಿ ಸಕ್ಕರೆಯನ್ನೇ ಕೊಳ್ಳಬೇಕು. ಅದು ದೊರೆಯದಿದ್ದರೆ ಬೆಲ್ಲದಿಂದ ಕೆಲಸವನ್ನು ಒಪ್ಪಿಸಬೇಕು.

ಅರ್ವತೊಕ್ಲು ಗೌಡ ಮಹನೀಯರ ತೀರ್ಮಾನಗಳು.

ತಾ. 27—10—31ರಲ್ಲು ಮಡಿಕೇರಿ ನಾಡು ಅರ್ವತೊಕ್ಲು ಗ್ರಾಮದ ಗೌಡ ಮಹನೀಯರು ಸೇರಿ ಮಿ. ಪೂಜಾರಿರ ಪೂವ್ವಯ್ಯನವರ ಅಧ್ಯಕ್ಷತೆಯಲ್ಲು ಈ ಕೆಳಗಿನ ವಿಷಯಗಳನ್ನು ಕುರಿತು ಮೀಟಿಂಗ್ ನಡಿಸಿ ತೀರ್ಮಾನಿಸಿದರ ವಿವರ

1. **ನೆರೆದ ಹೊಸಿಗೆಯ ವಿಷಯ:**—ಕನ್ನಿಕೆಯು ಮೈನೆರೆದ ಹೊಲೆಯನ್ನು ಮಾತ್ರ ಈ ಮೊದಲು ನಮ್ಮ ಗೌಡ ಜಾತಿಯಲ್ಲು ಜಾರಿ ಇದ್ದಂತೆ, ಮೈ ನೆರೆದಂದಿನಿಂದ 7 ದಿನಗಳ ಕಳೆದನಂತರ ಯಾವದಾದರೂ ಒಂದು ದಿನ ಇಬ್ಬರು ಮಾವರು ನೀರುಮನೆ ಅಕ್ಕಂದಿಯರನ್ನು ಬರಮಾಡಿಸಿಕೊಂಡು ಮಡಿವಾಳನನ್ನು (ಅಗಸ) ಕರಿಸಿಕೊಂಡು ಗಂಗೆ ಪೂಜೆಯಿಂದ ಮೈನೆರೆದ ಹೊಲೆಯನ್ನು ನಿವರ್ತಿ ಮಾಡುವದು. ಆ ಒಗ್ಗೆ ಈ ಮೊದಲು ಮಾಡುತ್ತಿದ್ದ ನೆರೆದ ಹೊಸಿಗೆಯನ್ನು ಇನ್ನು ಮುಂದೆ ಮಾಡದೆ ನಿಲ್ಲಿಸಿಬಿಡುವದು. ಅಲ್ಲದೆ ಮೈನೆರೆದ ಕನ್ಯೆಗೆ ಗ್ರಾಮಸ್ಥರು ಮತ್ತು ನೆಂಟರಿಷ್ಟರು ಈ ಮೊದಲು ತರುತಿದ್ದ ಮರ್ಯಾದೆಯನ್ನು ಇನ್ನು ಮುಂದೆ ತಾರದೆ ನಿಲ್ಲಿಸಿಬಿಡುವದು.

2. **ದೀಪಾವಳಿಯ ವಿಷಯ:**—ಇದು ನಮ್ಮ ಗೌಡ ಜಾತಿ ಪದ್ಧತಿಯಾಗಿರದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಗೌಡ ಜಾತಿಯ ಮಹನೀಯರು ಒಲೇ ಆ ದೇಶ ಪದ್ಧತಿಯಾಗಿ ಆಚರಿಸಿಕೊಂಡಿರಲು, ಆ ಪದ್ಧತಿಯ ಕುರುಹನ್ನೇ ನಾವು ಇಲ್ಲಿ ಕೊಡಗು ಜಿಲ್ಲೆಯಲ್ಲಿ ಆಚರಿಸುವಂತೆ ತೋರುವದರಿಂದಲೂ, ಹಾಗೆ ಆಚರಿಸುವುದಾದರ ನಾವು ಇಲ್ಲಿ ಆಚರಿಸುವ ರೀತಿಯು ದಕ್ಷಿಣ ಕನ್ನಡ ಜಿಲ್ಲೆಯ ರೀತಿಗಿಂತ ವ್ಯತಿರಿಕ್ತವಾಗಿ ಇರುವುದರಿಂದಲೂ ಮತ್ತು ಇದು ನಮ್ಮ ಗೌಡ ಜಾತಿ ಅಲ್ಲವಲ್ಲದೆ ಒಲೇ ಒಂದು ಖರ್ಚಿನ ಬಾಬಾಗಿರುವದರಿಂದಲೂ ಇನ್ನು ಮುಂದೆ ಈ ದೀಪಾವಳಿಯನ್ನು ಮಾಡಬಾರದ.

3. **ವಿವಾಹದ ವಿಷಯ:**—ಕನ್ನಿಕೆಯನ್ನು ಧಾರೆ ಮಾಡಿ ಕೊಡುವಾಗ ವಧುವಿನ ಮನೆ ಚಪ್ಪರದಲ್ಲಿ ನಡಿಯುವ ಮುಹೂರ್ತಕ್ಕೆ ವಧುವಿನ ಕುಡೆ ಕಾಯಿಗಳು ವಧುವಿಗೆ ಧರಿಸುವ ಶೃಂಗರಿಸಿರುವ ಉಡುಪನ್ನು ವರನಿಗೆ ಧಾರೆ ಎರೆದು ಕೊಡುವಾಗ ಬಿಚ್ಚಿ ಒದರಾಯಿಸಿ ವರನು ತರುವ ದಾರೆ ಸೀರೆ ಮುಂತಾದ ಉಡುಪನ್ನು ತೊಡಿಸುವದು ಶಾಸ್ತ್ರಕ್ಕೆ ವಿರೋಧವಾಗಿ ತೋರುವದರಿಂದ ಇನ್ನು ಮುಂದೆ ವಧು ಉಡುಪನ್ನು ತರುವ ಪದ್ಧತಿಯನ್ನು ನಿಲ್ಲಿಸಿಬಿಡುವದು. ವಧುವಿಗೆ ತಂದೆ ತಾಯಿಗಳಿಂದ ಶೃಂಗರಿಸಲ್ಪಟ್ಟ ಉಡುಪಿನಿಂದಲೇ ವಧುವನ್ನು ಧಾರೆ ಎರೆದು ಕೊಡುವದು.

(2) ಚಿನ್ನ ಭಂಗಾರ ತರುವ ಆಭರಣ ಆದರೆ ತಾಳಿ ಒಂದು ವಿನಹ ಇತರ ಆಭರಣಗಳನ್ನು ಚಿನ್ನ ಭಂಗಾರವಾಗಿ ತರುವ ಪದ್ಧತಿಯನ್ನು ಇನ್ನು ಮುಂದೆ ವಧೂವರರ ತಂದೆ ತಾಯಿಗಳ ಅನುಕೂಲ ಮೇರೆ ತರುವದು ಯಾ ತಾರದೆ ಇರುವದು ಅವರವರ ಇಷ್ಟಕ್ಕೆ ಬಿಟ್ಟಿದೆ.

(3) ವೀಳ್ಯ ಶಾಸ್ತ್ರ ಮಾಡುವಾಗ ರಚಿಸುವ ಬಿಡುವ ಕೆಂಪು ವೀಳ್ಯವೂ ಬೆಳ್ಳಿ ಚಿನ್ನ ಭಂಗಾರದ ವೀಳ್ಯವೂ, ವೀಳ್ಯ ಶಾಸ್ತ್ರ ಮಾಡದೆ ಇರುವ ಸಂದರ್ಭಗಳಲ್ಲು ಆ ನೆಲುವಾಗಿ ಮಾಡುವ ಕೆಂಪು ಮತ್ತು ಚಿನ್ನ ಭಂಗಾರದ ವೀಳ್ಯಗಳನ್ನು ಚಪ್ಪರದಡಿಯಲ್ಲಿ ರಚಿಸುವದು ಅನಾವಶ್ಯವಾದ ಪದ್ಧತಿಯಾಗಿರುವುದರಿಂದ ಇನ್ನು ಮುಂದೆ ಆ ವೀಳ್ಯಗಳನ್ನು ಚಪ್ಪರದಡಿಯಲ್ಲಿ ರಚಿಸುವದು ನಿಲ್ಲಿಸತಕ್ಕದ್ದು.

(4) ವಧುವನ್ನು ಧಾರೆ ಎರೆದು ವರನ ಮನೆಗೆ ಕರಕೊಂಡು ಹೋದ ಮರುದಿನ ನಡೆಯುವ ನಾಗೋಲೆ ಶಾಸ್ತ್ರವನ್ನು ನಮ್ಮ ಗ್ರಾಮದಲ್ಲು ಇನ್ನು ಮುಂದೆ ಮಾಡಬಾರದಾಗಿ ತೀರ್ಮಾನಿಸಿದೆ.

4. ಇನ್ನು ಮುಂದೆ ಮದುವೆ ಮುಂಜಿ, ತಿಥಿ ಕರ್ಮಾಂತರ, ಶುಭಾಶುಭ ಕಾರ್ಯಗಳಲ್ಲಿ ಸೇಂದಿ ಸಾರಾಯಿ ಮುಂತಾದ ನಿಷಾ ಪದಾರ್ಥಗಳನ್ನು ಸೇರಿಸುವದನ್ನು, ಸೇಂದಿ ಮರಗಳನ್ನು ಗುತ್ತಿಗೆ ಕೊಡುವದನ್ನೂ ಮನ್ನ ಪಡಿಸಿದೆ ಮತ್ತು ಅದನ್ನು ಇನ್ನು ಮುಂದೆ ಯಾರೂ ಸೇವಿಸಬಾರದಾಗಿ ಕಟ್ಟು ತೀರ್ಮಾನಿಸಿದೆ.

ಈ ಮೇಲ್ಕಂಡ ಎಲ್ಲಾ ವಿಷಯಗಳು ಅನಾವಶ್ಯವಾದ ಮತ್ತು ದುಂದುಗಾರಿಕೆಯ ಖರ್ಚಿನ ವಿಷಯಗಳಾದುದರಿಂದ ಅವುಗಳನ್ನು ನಾವು ಈ ದಿನದಿಂದಲೇ ಬಾಕಿ ಮಾಡಿರುತ್ತೇವೆ.

ಪಿ. ಪೂವ್ವಯ್ಯ.
(ಅಧ್ಯಕ್ಷ)

ಅರಿಶಿನ.

ಸಂಸ್ಕೃತ—ಹರಿದ್ರಾ.
ಹಿಂದಿ—ಹಲ್ದಿ.
ಕನ್ನಡ—ಅರಿಶಿನ.
ತೆಲುಗು—ಪಸುಪು.
ಇಂಗ್ಲೀಷು—Turmeric.

ಅರಿಶಿನವು ಸಾಮಾನ್ಯವಾಗಿ ಎಲ್ಲರೂ ಪ್ರತಿನಿತ್ಯವೂ ಉಪಯೋಗಿಸತಕ್ಕ ಪದಾರ್ಥವಾಗಿಯೂ, ಮಂಗಳದ್ರವ್ಯವಾಗಿಯೂ ಇರುತ್ತದೆ. ಸ್ವಾಭಾವಿಕವಾಗಿ ಇದರ ಬಣ್ಣವು ಹೊಂಬಣ್ಣವಾಗಿರುವುದು. ಇದರ ಲೇಪನದಿಂದ ಚರ್ಮಕ್ಕೆ ಹಾನಿ ಉಂಟಾಗದಂತೆ ಚರ್ಮಗತದೋಷಗಳೆಲ್ಲಾ ಪರಿಹಾರವಾಗಿ ಮೈಯೂ ಹೊಂಬಣ್ಣದಂತೆ ಬೆಳಗುವುದು. ಅರಿಶಿನವು ಚರ್ಮಕ್ಕೆ ಒಳ್ಳೇ ಕಾಂತಿಯನ್ನುಂಟುಮಾಡುವುದಲ್ಲದೆ ಕಜ್ಜಿ ಮೊದಲಾದ ಚರ್ಮರೋಗಗಳನ್ನು ನಾಶಮಾಡುತ್ತದೆ. ಅರಿಶಿನವು ಒಳ್ಳೇ ಸೌಭಾಗ್ಯವನ್ನು ಕೊಡುವುದೆಂದು ಸ್ತ್ರೀಯರು ಕೈಗೆ ಕಂಕಣವಾಗಿ ಕಟ್ಟುವರು. ಅನುಭವಸಿದ್ಧವಾದ ಈ ಪದಾರ್ಥವನ್ನು ಆಹಾರದಲ್ಲಿ ಉಪಯೋಗಿಸುತಾ ಬಂದರೆ ಆರೋಗ್ಯವೃದ್ಧಿಯಾಗುವುದು.

ಹಲ್ಲು ನೋವಿಗೆ—ಅರಿಶಿನದ ಕೊಂಬನ್ನು ಸ್ವಲ್ಪ ಸುಟ್ಟು ಅಗಿದರೆ ಹಲ್ಲು ನೋವು ನಿಲ್ಲುತ್ತದೆ.

ಕೆಮ್ಮಿಗೆ—ಅರಿಶಿನದ ಬೇರನ್ನು ಸುಟ್ಟು ಬೆಲ್ಲ ಸೇರಿಸಿ ತಿನ್ನುತ್ತಾ ಬಂದರೆ ಕೆಮ್ಮು ಕಮ್ಮಿಯಾಗುವುದು.

ಕಣ್ಣಿನರೋಗಕ್ಕೆ—ಅರಿಶಿನದ ಬೇರನ್ನು ನೀರಿನಲ್ಲಿ ಕೇಡು ಇದರ ತೊಟ್ಟನ್ನು ಕಣ್ಣಿಗೆ ಹಚ್ಚುತ್ತಾ ಬಂದರೆ ಕಣ್ಣಿನ ರೋಗಗಳು ವಾಸಿಯುವವು.

ವ್ರಣಗಳಿಗೆ—ಅರಿಶಿನವನ್ನು ಅರೆದು ಕಟ್ಟಿದರೂ ಅಥವಾ ಅರಿಶಿನವನ್ನು ನೀರಿನಲ್ಲಿ ಕದಡಿ ಕಟ್ಟಿದರೂ ಗಡ್ಡೆಗಳೂ, ವ್ರಣಗಳೂ, ದುಷ್ಟ ವ್ರಣಗಳೂ ಪರಿಹಾರವಾಗುವವು.

ಚೇಳು ಕಡಿತಕ್ಕೆ—ಚೇಳು ಕಚ್ಚಿದ ಜಾಗದಲ್ಲಿ ಅರಿಶಿನದ ಬೇರನ್ನು ಸುಟ್ಟು ಹೊಗೆಯನ್ನು ಕೊಟ್ಟರೆ ಚೇಳಿನ ವಿಷವು ಗುಣವಾಗುತ್ತದೆ.

ಹಸಿ ಅರಿಶಿನವನ್ನು ಅರೆದು ತಲೆಗೆ ಹಚ್ಚಿದರೆ ತಲೆಬಾರ, ತಲೆತಿರುಗು ಗುಣವಾಗುವುದು.

ಅಪಸ್ಮಾರಕ್ಕೆ—ಒಣ ಅರಿಶಿನದ ಕೊಂಬನ್ನು ಸುಟ್ಟು ಮೂಗಿ ನೋಡಿದರೆ ಅಪಸ್ಮಾರದ ಮೂರ್ಛೆಯು ತಗ್ಗುವುದು.

ಕಿವಿಯಲ್ಲಿ ಕೀವು ಸೋರುವುದಕ್ಕೆ—ಒಂದು ಭಾಗ ಅರಿಶಿನವನ್ನು ಇಪ್ಪತ್ತು ಭಾಗ ಪಟಿಕ ಎರಡನ್ನೂ ಚೂರ್ಣಮಾಡಿ ಕಲಸಿ ಒಂದು ಚಿಟಿಕೆಯಷ್ಟು ಕಿವಿಗೆ ಬೀಳುವ ಹಾಗೆ ಊದಿದರೆ ಬಹುಕಾಲದಿಂದಿರುವ ರಸಿಕೆ, ಕೀವು ಸೋರುವುದನ್ನು ಕಟ್ಟುತ್ತದೆ.

ಉಗುರು ಸುತ್ತಿಗೆ—ನೀರಿನಲ್ಲಿ ಅರಿಶಿನವನ್ನು, ಸುಣ್ಣವನ್ನೂ ಸೇರಿಸಿ ಕಟ್ಟಿದರೆ ಉಗುರು ಸುತ್ತು ನೋವಾದುವು ಕಮ್ಮಿಯಾಗುವುದು. ಆದರೆ ಈ ಕಟ್ಟನ್ನು ನೀರಿನಿಂದ ತೋಯಿಸುತ್ತಿರಬೇಕು.

ಇದಲ್ಲದೆ ಅರಿಶಿನವನ್ನು ಕಟ್ಟಿದರೂ, ನೀರಿನಲ್ಲಿ ಕದಡಿ ಸುರಿದರೂ ವ್ರಣಗಳಲ್ಲಿರುವ ಹುಳುಗಳು ಸಾಯುವುವು. ಪಿತ್ತ ಕೋಶದಲ್ಲಿನ ವ್ರಣಗಳನ್ನು ಮಾಯಿಸುವುದಲ್ಲದೆ ಕೋಶವನ್ನು ಶುದ್ಧಿಯೂ ಪಡಿಸುತ್ತದೆ.

ಅರಿಶಿನದ ಹೊಗೆಯನ್ನಾಗಲೀ, ಅರಿಶಿನ ಹಾಕಿದ ಬಿಸಿ ನೀರಿನ ಆವಿಯನ್ನಾಗಲೀ ಸ್ವೀಕರಿಸಿದರೆ ಕಮ್ಮು, ಶೀತ, ತಲೆಭಾರಗಳು ಗುಣವಾಗುವುವು. ಅರಿಶಿನದ ಕಷಾಯದಿಂದ ಕಣ್ಣನ್ನು ತೊಳೆದುಕೊಂಡು ಅಥವಾ ಅರಿಶಿನದ ಬಟ್ಟೆಯನ್ನು ಕಣ್ಣಿನ ಮೇಲೆ ಹಾಕಿಕೊಂಡರೂ ಅಥವಾ ಅದರಿಂದ ಕಣ್ಣನ್ನು ಒರೆಸಿಕೊಳ್ಳುತ್ತಿದ್ದರೂ, ಕೆಂಪು ಕಣ್ಣು ಸಮಾಧಾನಕ್ಕೆ ಬರುವುದು.

ಒಟ್ಟಿನಲ್ಲಿ ಅರಿಶಿನವು ಇಂತಹ ಅಮೂಲ್ಯಗುಣವಿಶಿಷ್ಟವಾಗಿರುವುದರಿಂದಲೇ ಶುಭಕಾರ್ಯಗಳಲ್ಲೂ, ದೇವತಾ ಪೂಜಾದಿಗಳಲ್ಲೂ, ದೈನಂದಿನದ ಆಹಾರಪದಾರ್ಥಗಳಲ್ಲೂ ವಿಶೇಷವಾಗಿ ಉಪಯೋಗಿಸುವರು. ಆದುದರಿಂದ ಆರೋಗ್ಯಕಾಮಿಗಳೆಲ್ಲರೂ ಅರಿಶಿನದ ಉಪಯೋಗ ವಿಧಾನವನ್ನು ಚೆನ್ನಾಗಿ ಅರಿತು ಬಳಸುತ್ತಾ ಬಂದರೆ ಕೆಮ್ಮು, ಶೀತ, ನೆಗಡಿ, ಜ್ವರಾದಿಗಳಿಗೆ ಈ ಶ್ರೇಷ್ಠ ಪದಾರ್ಥವು ಪ್ರತಿಬಂಧಕವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. "ಸದ್ವೈದ್ಯ."

ಪೋಲೀಸರೂ, ರಾಜಕೀಯ ಎದುರುವಾದಿಗಳೂ.

ಲೂಧಿಯಾನದ ಧನಿಕನೊಬ್ಬನು ಅತಿ ಕಡೆ ಮೈಯಲ್ಲೆಲ್ಲ ಗಾಯ ಹೊಂದಿದ್ದು, ಅಲ್ಲಿನ ಮೇಜಿಸ್ಟ್ರೇಟರ ಮೇಲೂ, ಇಬ್ಬರು ಪೋಲೀಸ್ ಆಫೀಸರರ ಮೇಲೂ ಇಂತಹ ಘಾತವನ್ನು ತನಗುಂಟುಮಾಡಿದುದಕ್ಕಾಗಿ ಸಬ್ ಜಡ್ಜರಲ್ಲಿ ಮೊಕದ್ದಮ್ಮೆ ಹೂಡಿದನು. ಈ ಆಫೀಸರರು ತಪ್ಪಿತಸ್ಥರೆಂದು ತೀರ್ಮಾನವಾಗಿ ಧನಿಕನಿಗೆ ಪರಿಹಾರ ದ್ರವ್ಯವಾಗಿ ೩೦೧ ರೂ ಕೊಡುವಂತೆ ತೀರ್ಮಾನವಾಯಿತು. ಜಡ್ಜರು ತಮ್ಮ ತೀರ್ಮಾನದಲ್ಲಿ,—"ಯಾರ ಚಟುವಟಿಕೆಗಳು ತಮಗೆ ಆಕ್ಷೇಪಕರವೆಂದು ಮಾಡಿಕೊಂಡರೋ ಅಂಥವರನ್ನು ಶಿಕ್ಷಿಸುವ ಬಗೆಗೆ ಪೋಲೀಸರು ಒಂದು ಕಾರಣ ಪಡೆಯುವ ಹಾಗೆ 'ಅಮನ್ ಸಭೆ' ಎಂಬುದೊಂದು ಪಾಳ್ಯವು ನಿರ್ಮಿತವಾಯಿತೆಂದು ತೋರುತ್ತದೆ. ಈ ಸಭೆಯವರಲ್ಲಿ ಎಷ್ಟೋ ಮಂದಿಯ ಜೀವನ ಚರಿತ್ರೆಯನ್ನು ನೋಡಿದರೆ ಇವರು ಅಷ್ಟೊಂದು ಶಾಂತಿ ಪ್ರಿಯರೆಂದು ಹೇಳಲು ಬರುವುದಿಲ್ಲ. ಆಫೀಸರುಗಳಿಂದ ರಾಜಕೀಯ ಮೊಕದ್ದಮ್ಮೆಗಳಲ್ಲಿ ತಾವು ಸಹಾಯ ಮಾಡಿದುದಕ್ಕಾಗಿ ಸರ್ಟಿಫಿಕೇಟುಗಳನ್ನು ಪಡೆಯಬೇಕೆಂದು ಆತುರ ಪಡೆದವರೇ ಹೆಚ್ಚಾಗಿ ಈ ಸಭೆಗೆ ಸೇರಿದವರೆನ್ನಬಹುದು. ಎದುರುವಾದಿಗಳು ಇವರನ್ನು ಪೋಲೀಸು ಆಶ್ರಿತರೆಂದು ಕರೆದಿರುವರು. ಇದರಲ್ಲಿ ಬಹು ಮಂದಿಗೆ ಸನದುಗಳು ದೊರೆತಿವೆ. ಇವರನ್ನು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರೊಡನೆ ಕೂಡಿಸಿ ಫೋಟೋ ತೆಗೆಸಲಾಗಿದೆ" ಎಂದೂ ಟೀಕಿಸಿರುವರು.

ವೀರಾಜಪೇಟೆ ಮೀಟಿಂಗು.

ತಾ. 28—10—31ರಲ್ಲಿ ಮಿ॥ ಮಂಡೆಯಂಡ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ರಿಟೈರ್ಡ್ ಮುನ್ಸೀಫರಾದ ಮಿ. ಕೊರವಂಡ ಮುತ್ತಣ್ಣನವರನ್ನು ಸತ್ಕರಿಸುವ ಬಗ್ಗೆ ಏರ್ಪಾಡು ಮಾಡಿದ ಮೀಟಿಂಗಿನ ಪ್ರೊಸೀಡಿಂಗ್ಸ್.

1 ಅಧ್ಯಕ್ಷರು ಮೀಟಿಂಗಿನ ವಿಷಯಗಳನ್ನು ವಿವರಿಸಿದ ನಂತರ 45 ಮಹನೀಯರು ಸ್ವಾಗತದ ಏರ್ಪಾಡಿಗಾಗಿ ಕಮಿಟಿ ಮೆಂಬರುಗಳಾಗಿ ಚುನಾಯಿಸಲ್ಪಟ್ಟರು. ಅವರ ಪೈಕಿ ಮಿ॥ ಗಳಾದ ಸಿ. ಯಮ್ ಉತ್ತಯ್ಯನವರು ಅಧ್ಯಕ್ಷರಾಗಿಯೂ, ಮಾಡೇಮಂಡ ಸೋಮಯ್ಯನವರು ಟ್ರೆಜರರಾಗಿಯೂ, ಕಾತಂಡ ಗಣಪತಿಯವರು ಜಾಯಿಂಟ್ ಸೆಕ್ರೆಟರಿಯಾಗಿಯೂ ಮತ್ತು ಕೆ. ಪಿ. ಚಿಣ್ಣಪ್ಪನವರು ಸೆಕ್ರೆಟರಿಯಾಗಿಯೂ ಆರಿಸಲ್ಪಟ್ಟರು.

2. ಪಬ್ಲಿಕ್ ಜನರಿಂದ ಅವರವರ ಶಕ್ತ್ಯಾನುಸಾರ ಚಂದಾ ಹಣ ವಸೂಲು ಮಾಡುವಂತೆಯೂ, ಗ್ರಾಮವಾರು ಪಟ್ಟಿ ಕಳುಹಿಸುವಂತೆಯೂ, ಪ್ರಿಂಟಿಂಗ್ ವಗೈರೆ ಕೆಲಸಗಳನ್ನು ಸೆಕ್ರೆಟರಿಯವರು ಮಾಡಿಸುವಂತೆಯೂ ತೀರ್ಮಾನವಾಯಿತು.

3 ಸ್ವಾಗತ ಕಮಿಟಿಯ ಮೀಟಿಂಗೊಂದನ್ನು ಈ ನವಂಬರ್ ತಾರೀಕು 11ಕ್ಕೆ ವೀರಾಜಪೇಟೆಯಲ್ಲಿ ಮಧ್ಯಾಹ್ನ ಎರಡು ಗಂಟೆಗೆ ನಡಿಸುವಂತೆ ಏರ್ಪಾಡು ಮಾಡಲಾಯಿತು. ದಿನ ಕಮಿಟಿ ಮೆಂಬರುಗಳೆಲ್ಲಾ ಹಾಜರಾಗುವಂತೆ ಸೆಕ್ರೆಟರಿಯವರು ತಿಳಿಸಬೇಕೆಂದು ತೀರ್ಮಾನವಾಯಿತು. ಅಲ್ಲದೆ ಈಗ ನೇಮಕವಾದ ಕಮಿಟಿಗೆ ಅವಶ್ಯಬಿದ್ದಲ್ಲಿ ಪುನಹ ಹೆಚ್ಚಿಗೆ ಕಮಿಟಿ ಮೆಂಬರುಗಳನ್ನು ನೇಮಿಸುವುದಕ್ಕೂ, ಸ್ವಾಗತದ ಮುಂದಿನ ಎಲ್ಲಾ ಏರ್ಪಾಡು ಮಾಡಲಿಕ್ಕೂ ಅಧಿಕಾರ ಕೊಡಲಾಯಿತು.

ಮಂಡೆಯಂಡ ಕುಟ್ಟಪ್ಪ.
(ಅಧ್ಯಕ್ಷರು.)

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೋ ಸಂಸ್ಥೆ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಟ್ಟಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ, ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಜೋಕೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3 ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದಂತರಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಬೋನಸ್ ಕೊಡುವುದು, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೋ ಮೊಬಲಗನ್ನು ಲಾಭ ಸಹಿತ ವಾಪತಿಕೊಡುವುದರಲ್ಲಿ ಹೆಸರುಗೊಂಡಿದೆ.

4 ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಇಂದು ಭಾಗಿಗಳಾಗಿರಿ; ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವರ್ಗ್ಗದವರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ಹಲವಾರು ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಯಾರೂ ಕಳಕೊಳ್ಳಬಾರದು

ಆಫೀಸು—
ಟಿಂಬರ್ ಯಾರ್ಡ್,
ಮಡಿಕೇರಿ. (26—3)

ಬಿ. ಎಸ್. ಐಯ್ಯಪ್ಪ
ಕೊಡಗು ಚೀಫ್ ಏಜೆಂಟ್.

ವರ್ತಮಾನ ಸಂಗ್ರಹ.

ಒಳ ದೇಶ.

ಈ ತಾ 22 ರಲ್ಲಿ ಅಮ್ಮತ್ತಿ—ವೀರರಾಜಪೇಟೆ—ನಾಪೋಕ್ಲು ನಾಡುಗಳಲ್ಲಿ ನಡೆದ ಕೌನ್ಸಿಲು ಉಪಚುನಾವಣೆಯಲ್ಲಿ ಮೆ. ಅಪ್ಪಾರಂಡ ಬಿ ಚಂಗಪ್ಪನವರು ಜಯಶೀಲರಾದರು

ಪೊನ್ನಂಪೇಟೆ ಕುಶಾಲಪುರದಲ್ಲಿಯೂ, ಕೋಟೂರಲ್ಲಿಯೂ, ವೀರರಾಜಪೇಟೆಯಲ್ಲಿಯೂ ಮತ್ತು ಮಡಿಕೇರಿಯಲ್ಲಿಯೂ ಮಾಸಿಕ ಧ್ವಜಾಭಿವಂದನೆಯು ಈ ತಾ 25 ನೇ ಆದಿತ್ಯವಾರ ಬೆಳಿಗ್ಗೆ ನಡಿಸಲ್ಪಟ್ಟಿತೆಂದು ತಿಳಿಯಬರುತ್ತದೆ

ಈ ತಾ. 2? ರಲ್ಲಿ ನಡೆಯಬೇಕಾಗಿದ್ದ "ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ಕೋರಂ ಇಲ್ಲದೆ ಬಾಕಿ ಮಾಡಲಾಯಿತು. ಆದರೆ ಈ ತಾ. 27 ರಲ್ಲಿ ಅವರ ಮೀಟಿಂಗೊಂದು ಮಡಿಕೇರಿಯಲ್ಲಿರುವ ಕಂಪೆನಿಯ ಆಫೀಸಿನಲ್ಲಿ ನಡೆಯಿತು.

ಮಡಿಕೇರಿಯಲ್ಲಿ ಈ ವಾರದಲ್ಲಿ ನೇಟಿವ್ ಕಾಫಿಗೆ ಖಂಡಿ ಒಂದರ 200 ರೂಪಾಯಿಂದ 205 ರೂ ಪೆಂಗಡ, ಪಾರ್ಚ್‍ಮೆಂಟಿಗೆ ಹಂಡ್ರೆಡ್ವೈಟಿಗೆ ಮಂಗಳೂರಲ್ಲಿ ಕೊಡುವ ಕರಾರಿನಿಂದ 52 ರೂ ವರದಲ್ಲಿಯೂ ಸಾಟಿಯಾಗಿದೆಯಾಗಿ ತಿಳಿಯ ಬರುತ್ತದೆ.

ನವಂಬರು ತಾ 22 ರಲ್ಲಿ ಮಡಿಕೇರಿಯಲ್ಲಿ ನಡಿಸುವಂತೆ ನಿಶ್ಚಯಿಸಿದ್ದ 'ಕೊಡಗು' ಕಂಪನಿಯ ಶೇರುದಾರರ ಜನರಲ್ ಮೀಟಿಂಗನ್ನು ನವಂಬರು ತಾ. 22 ರ ಬದಲು ತಾ 21 ರಲ್ಲಿ ನಡಿಸುವಂತೆ ಡೈರೆಕ್ಟರುಗಳು ತಮ್ಮ ಈ ತಾ 27 ರ ಮೀಟಿಂಗಿನಲ್ಲಿ ಒದಲಾಯಿಸಿರುವರು

ಪೊನ್ನಂಪೇಟೆಯಲ್ಲಿ ಬರುವ ನವಂಬರು ತಾ 13ರಿಂದ 15ರ ವರೆಗೆ ಆಗುವ ಗಣಪತಿ ಮಹೋತ್ಸವದ ಸಂಬಂಧ ಪೂಜೆ ಉತ್ಸವಾದಿಗಳೂ, ಗೋಪ್ರದರ್ಶನವೂ, ದನಗಳ ಮಾರಾಟವೂ ನಡೆಯುವವೆಂತಲೂ, ಗೋ ಪ್ರದರ್ಶನವು ಆ ತಾ 13ರಲ್ಲಿ ತೆರೆಯಲ್ಪಟ್ಟು, ತಾ 15ರಲ್ಲಿ ಮುಕ್ತಾಯಮಾಡಲ್ಪಡುವದೆಂತಲೂ ತಿಳಿಯುತ್ತೇವೆ.

ಗ್ರಾಮಫೋನುಗಳಿಗೆ ಕನ್ನಡ ಹಾಡುಗಳನ್ನು ಕೊಟ್ಟು ಪ್ರಸಿದ್ಧಿಗೆ ಬಂದಿರುವ ಶ್ರೀಮತಿ ಉಡುಪಿ ಲಕ್ಷ್ಮೀಭಾಯಿಯವರು ಕಳೆದ ವಾರ ಮಡಿಕೇರಿಗೆ ಬಂದಿದ್ದು, ಈ ತಾ 24 ಸಾಯಂಕಾಲ ಜಮಿಾನ್ದಾರರ ಸಂಘದ ಹಾಲ್‍ನಲ್ಲಿ ಸಂಗೀತ ಕಚೇರಿಯನ್ನು ನಡಿಸಿದರು ಕಿಕ್ಕಿರಿದು ನೆರೆದಿದ್ದ ಜನರು ಅವರ ಇಂಪಾದ ಗಾನವನ್ನು ಕೇಳಿ ಆನಂದಪಟ್ಟರು.

ನಂಜರಾಜಪಟ್ಟಣನಾಡಿನ ಉಲುಗಲಿ ಗ್ರಾಮದ ಮೆ. ಬಾಲಪ್ಪನ ಪೂವಯ್ಯನವರು ಅಲ್ಲಿಯ ಸುತ್ತುಮುತ್ತಲಿನ ಜನರ ದನಕರುಗಳನ್ನು ಹಿಡಿದು ತುಂಬಾ ನಷ್ಟವುಂಟುಮಾಡುತ್ತಿದ್ದ ಒಂದು ಹುಲಿಯನ್ನು ಕಳೆದ ವಾರ ಗುಂಡು ಹೊಡೆದು ಕೊಂದರೆಂತಲೂ, ಈ ಮೊದಲು ಅವರು ಎರಡು ದೊಡ್ಡ ಹುಲಿಗಳನ್ನು ಗುಂಡು ಹೊಡೆದಿರುವರೆಂತಲೂ ಒಬ್ಬರು ತಿಳಿಸಿರುತ್ತಾರೆ

ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ ರಾಮಸ್ವಾಮಿ ಅಯ್ಯರವರು ನವಂಬರು 1ರಿಂದ ಮಡಿಕೇರಿಯಿಂದ ಫ್ರೇಜರ್‍ಪೇಟೆಗೆ ವರ್ಗಾಯಿಸಲ್ಪಟ್ಟಿರುವರೆಂತಲೂ, ಫ್ರೇಜರ್‍ಪೇಟೆಯಲ್ಲಿ ಸಬ್ ಅ ಸರ್ಜನರಾಗಿದ್ದ ಮೆ ನಾರಾಯಣರವರು ಕೆಲಸದಿಂದ ಬಿಡುಗಡೆ ಮಾಡಲ್ಪಟ್ಟಿರುವರೆಂತಲೂ ಮತ್ತು ಮೆ ಬಸಪ್ಪಾಜಿ ಬಿ ರಂಗಪ್ಪನವರು ಮಡಿಕೇರಿ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಲ್ಪಟ್ಟಿರುವರೆಂತಲೂ ತಿಳಿಯಬರುತ್ತದೆ

ಕಳೆದ ಸೆಪ್ಟೆಂಬರು ತಿಂಗಳಲ್ಲಿ ನಡೆದ ಬಿ ಎ ಪರೀಕ್ಷೆಯಲ್ಲಿ ಮೆ. ಗಳಾದ ಕುಟ್ಟಂಡ ಎ ತಿಮ್ಮಯ್ಯನವರ, ಚೆಟ್ರುಂಡ ಕ ಅಪ್ಪಣ್ಣನವರು, ಫ್ರಾನ್ಸಿಸ್ ಡಿಸೋಜರವರು ಮತ್ತು ಚೇರಂಡ ಪಿ ಭೀಮಯ್ಯನವರು ಪೂರೈಸಿಯೂ, ಮೆ ಕೋಟೆರ ಎಂ ನಂಜುಂಡನವರು 3 ನೇ ಭಾಗದಲ್ಲಿಯೂ, ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಮೆ. ಗಳಾದ ನಾಪನೆರಂಡ ಎಂ ಕರುಂಬಯ್ಯನವರು, ಕೂರಪಂಡ ಸಿ ಅಚ್ಚಯ್ಯನವರು, ಮೂಗೆರ ಎಸ್. ಪೊನ್ನಪ್ಪನವರು ಮತ್ತು ಕಾತಂಡ ಎಂ. ಚಂಗಪ್ಪನವರು ಪೂರೈಸಿಯೂ, ಮೆ. ಪೆಮ್ಮಂಡ ಬಿ ಮುತ್ತಣ್ಣನವರು 1ನೇ ಭಾಗದಲ್ಲೂ, ಮೆ. ಕೋರೆರ ಎಂ. ಕುಶಾಲಪ್ಪನವರು 2 ನೇ ಭಾಗದಲ್ಲೂ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ. ಇವರೆಲ್ಲರಿಗೂ ನಮ್ಮ ಅಭಿನಂದನೆಗಳಿವೆ

ಅಖಿಲ ಕೊಡಗು ಉಪಾಧ್ಯಾಯರುಗಳ ಸಂಘದ ವಾರ್ಷಿಕ ಸಮ್ಮೇಳನವು ಬರುವ ನವಂಬರು ತಾ 8 ಮತ್ತು 9ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಹಾಲ್‍ನಲ್ಲಿ ಶಾಲಾ ಇನ್ಸ್‌ಪೆಕ್ಟರಾದ ಮೆ. ಯಫ್ ಯಫ್. ಸಿ ಎಡ್‍ಮಂಡ್ಸ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿಯೂ, ಈ ಸಂಬಂಧ ನವಂಬರು ತಾ 7ರಲ್ಲಿ ಕೊಡಗು ಉಪಾಧ್ಯಾಯರುಗಳ ಸಹಕಾರಿ ಸೊಸೈಟಿಯ ಮಹಾ ಸಭೆಯು ಸಹಕಾರಿ ಸಂಘಗಳ ರಿಜಿಸ್ಟ್ರಾರಾದ ಮೆ ಎಂ ಪಿ ಮಂದಣ್ಣನವರ ಅಧ್ಯಕ್ಷತೆಯಲ್ಲಿಯೂ, ಕೊಡಗು ವಿದ್ಯಾ ಇಲಾಖೆಯ ಉದ್ಯೋಗಸ್ಥರ ಸಹಕಾರಿ ಸಂಘದ ಮಹಾ ಸಭೆಯು ರಾ ಬಾ ಪಟ್ಟಮಾಡ ದೇವಯ್ಯನವರ ಅಧ್ಯಕ್ಷತೆಯಲ್ಲಿಯೂ ಸೇರುವುದಾಗಿಯೂ, ತಾ. 8ರಲ್ಲಿ ಆಟೋಟಗಳೂ, ವಸ್ತು ಪ್ರದರ್ಶನ, ನಾಟಕ ವಗೈರೆ ಆಗುವವೆಂತಲೂ ತಿಳಿಯ ಬರುತ್ತದೆ.

'ಕೋಲಾರ ಪತ್ರಿಕೆ' ಪತ್ರಿಕೆಯು ಪ್ರಿಂಟಾಗುತ್ತಿದ್ದ ಪ್ರೆಸ್ಸು ಮೆ [illegible] ಗಿ, ಪ್ರೆಸ್ಸನ್ನು ತನಗೆ ಮೆ ನಂಜಪ್ಪನವರು ಮತ್ತು ಮೆ ಪಿ ಬಿ. ಎಮ್ಮಯ್ಯನವರು ಮಾರಿರುವರಾಗಿಯೂ ನಂಜಪ್ಪನವರಿಗೆ ಅದನ್ನು ಮಾರಲು ಹಕ್ಕಿಲ್ಲವಾಗಿಯೂ, ತಾನು ಕೇಳಲು ಹೋದರೆ ಪುಂಡಾಗಬಹುದಾಗಿಯೂ, ಅದ್ದರಿಂದ ಕ್ರಿಮಿನಲ್ ಪ್ರೋಸೀಜರ್ ಕೋಡು 145ನೇ ಸೆಕ್ಷನ್ ಮೇರೆ ವಿಚಾರ ಮಾಡಿ ಪ್ರೆಸ್ಸನ್ನು ತನ್ನ ಸ್ವಾಧೀನಕ್ಕೆ ಕೊಡಿಸಿಕೊಡಬೇಕೆಂತ ಮೆ ಬಲ್ಲಚಂಡ ಬೆಳ್ಯಪ್ಪನವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಅರ್ಜಿ ಮಾಡಿದ್ದರಲ್ಲಿ, ಪ್ರೆಸ್ಸನ್ನು ಮಾರಿದ್ದು ಸಿಜವಲ್ಲವೆಂತ ಮೆ ನಂಜಪ್ಪನವರು ವಾದಿಸಿದರು ಉಭಯತರ ಸಾಕ್ಷಿ ವಿಚಾರ ಮಾಡಿ ತಾ 28ರಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಜಡ್ಜ್‌ಮೆಂಟ್ ಮಾಡಿರುತ್ತಾರೆ ಪ್ರೆಸ್ಸನ್ನು ಮಾರಿದ್ದು ನಿಜವೋ, ಅಲ್ಲವೋ ಎಂಬದು ಸ್ಪಷ್ಟವಾಗಿ ರುಜುವಾತ ವಾಗದ್ದರಿಂದ ಪ್ರೆಸ್ಸಿಗೆ ಯಾರು ಹಕ್ಕುದಾರರೆಂಬದು ಸಿವಿಲ್ ಕೋರ್ಟಿನಲ್ಲಿ ಇತ್ಯರ್ಥವಾಗುವವರೆಗೆ ಪ್ರೆಸ್ಸನ್ನು ಜಪ್ತಿ ಮಾಡಿ ಇಡಬೇಕಾಗಿ ತೀರ್ಮಾನ ಮಾಡಿರುತ್ತಾರೆ.

ಹಿಂದೂ ದೇಶ.

ಹಂಗಾಮಿಯಾಗಿ ನೇಮಿಸಲ್ಪಟ್ಟಿದ್ದ ಸರ್ ಸಿ ಪಿ ರಾಮಸ್ವಾಮಿ ಅಯ್ಯರವರು ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನ ಲಾ ಮೆಂಬರುತನದ ಚಾರ್ಜನ್ನು ಹೊಸದಾಗಿ ನೇಮಕವಾದ ಸರ್ ಬಿ ಎಲ್ ಮಿತ್ರರವರಿಗೆ ವಹಿಸಿಕೊಟ್ಟರು.

ಸ ಯ. ಹಾಸನ [illegible] ದ [illegible] ಕನ್ನಡ ಸಾಹಿತ್ಯದ ಏಳಿಗೆಗೋಸ್ಕರ ಇದ್ದ ಎಸ್ಟೇಟನ್ನು ಮಾರಲು ಟ ಟಿ ಕೆ ಸನ್ಸ್ ಕಂಪೆನಿಯವರು ರೂ 5000, ಶ್ರೀಕಂಠರಾವ ಮುಂಡರಗಿಯವರು ರೂ 2000 ಮತ್ತು ಎಸ ಮ. ಧರ್ಮದರ್ಶಿಗಳು ರೂ 1000 ಮೆ. ಮ [illegible] ರಿಗೆ ಕಳುಹಿಸಿರುವರು. ಒಡಲಿಗೆ ದಾನಮಾಡುವ ಮತ್ತು ದೇಶದ ಸೇವೆ ಮಾಡುವ ಧನಿಕರಿಗೆ ಇದೊಂದು ಉತ್ತಮವಾದ ಉದಾಹರಣೆಯಾಗಿದೆ.

ಈ ತಾ 28 ರ ಮಧ್ಯಾಹ್ನ ಬಂಗಾಳದ ಢಕ್ಕಾ ಎಂಬಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಮಿ. ಎಲ್ ಜಿ ಡರ್ನೋ ಎಂಬವರು ತನ್ನ ಆಫೀಸಿನಿಂದ ವಾಸದ ಮನೆಗೆ ಹೋಗುತ್ತಿದ್ದಾಗ್ಯೆ ದಾರಿಯಲ್ಲಿ ಒಂದು ಬೀಸ ಅಂಗಡಿಯ ಮುಂದೆ ತನ್ನ ಮೋಟಾರು ಕಾರನ್ನು ನಿಲ್ಲಿಸಿದರು ತಕ್ಷಣವೇ ಹುಡುಗನು ಅವರ ಕಡೆಗೆ ಗುಂಡು ಹಾರಿಸಿದನು ಅವರ ಮುಖಕ್ಕೂ, ಕಿವಿಯ ಮೇಲ್ಭಾಗಕ್ಕೂ ಗುಂಡು ಗಾಯ ತಗಲಿವೆ ಗುಂಡು ಹೊಡೆದ ಹುಡುಗನನ್ನು ಹಿಡಿಯಲು ಪ್ರಯತ್ನಿಸಿದರು. ಆದರೆ ಅವನು ಸಿಕ್ಕಲಿಲ್ಲ

ಉಕ್ಕಿನ ಸಾಮಾನುಗಳಿಗೆ ಸುಂಕ ಕಟ್ಟುವುದು 1927 ರಲ್ಲಿ ಮಾಡಿದ ಉಕ್ಕು ಸಂರಕ್ಷಣೆ ಶಕ್ತಿಗೆ ವಿರೋಧವಾದ ಕಾರಣ, ಈಗ ಇಂಡಿಯಾ ಸರ್ಕಾರವು ಉಕ್ಕಿನ ಸಾಮಾನುಗಳ ಮೇಲೆ ಶೇಕಡ 25 ರಷ್ಟು ಹೆಚ್ಚು ತೆರಿಗೆ ಹಾಕಲು ತರುವ ಮಸೂದೆಯನ್ನು ಅಸೆಂಬ್ಲಿಯಲ್ಲಿ ಚರ್ಚೆಗೆ ಬಿಡಬಾರದೆಂದು ಅಸೆಂಬ್ಲಿಯ ಅಧ್ಯಕ್ಷರಾದ ಸರ್ ಇಬ್ರಾಹಿಂ ರಹಿಮತುಲ್ಲಾರವರ ಮೇಲೆ 'ಇಂಜಕ್ಷನ್' ಮಾಡಬೇಕೆಂದು ಬೊಂಬಾಯಿಯ ಕಬ್ಬಿಣ ವ್ಯಾಪಾರಿಗಳ ಸಂಘದ ತೀರ್ಮಾನದ ಮೇರೆ ಸದರಿ ಸಂಘದ ಸೇಠ್ ಮೂಲ್ಜಿ ಹರಿದಾಸರವರು ಬೊಂಬಾಯಿ ಹೈಕೋರ್ಟಿನಲ್ಲಿ ಕೇಸು ದಾಖಲು ಮಾಡಿರುವರು

ಕಾಂಗ್ರೆಸ್ ವರ್ಕಿಂಗ್ ಕಮಿಟಿ [illegible] 1 ತಾ 27 ರಲ್ಲಿ ಡಿಲ್ಲಿಯಲ್ಲಿ ಪ್ರಾರಂಭವಾಗಿದೆ ತಾ 7 ನೇ [illegible] 28 ರಲ್ಲಿ ಸಂಯುಕ್ತ ಪ್ರಾಂತ್ಯದ ಮಹಾಸಭೆಯ [illegible] ಬಗ್ಗೆ ವಿಷಯ ಚರ್ಚೆ ನಡೆದು, ಎರಡನೆಯ ರೌಂಡ್ ಟೇಬಲ್ [illegible] ಯ ಪರಿಸ್ಥಿತಿಯನ್ನು ಕುರಿತು ಮೆ. ಪಟೇಲರು [illegible] ತೀರ್ಮಾನವನ್ನು ಅಂಗೀಕರಿಸಿದರು [illegible] ರ ಫೈನಾನ್ಸ್ ಬಿಲ್ಲಿನ ತತ್ವವನ್ನು ಖಂಡಿಸಿಯೂ, [illegible] ಸಂಕಟವನ್ನು ಹೆಚ್ಚಿಸಿದನ್ನು ವಿರೋಧಿಸುವ ಠರಾವು ಪಾಸು ಮಾಡಿದರು ಪ್ರಾಂತ್ಯಗಳ ಕಾಂಗ್ರೆಸ್ ಕಮಿಟಿಗಳ ಚುನಾವಣೆಯು ಕಳೆದು ಕೆಲವು ತಿಂಗಳುಗಳು ಮಾತ್ರ ಆಗಿರುವದರಿಂದ ಹೊಸ ಚುನಾವಣೆಯನ್ನು ಈಗಲೇ ಮಾಡುವ ಅವಶ್ಯವಿಲ್ಲವೆಂತಲೂ, ಆದರೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೆಂಬರುಗಳನ್ನು ಬರುವ ಜನವರಿ ಆಖೈರೊಳಗೆ ಪ್ರಾಂತೀಕ ಕಮಿಟಿಗಳು ಚುನಾಯಿಸಬೇಕೆಂತಲೂ ತೀರ್ಮಾನಿಸಿದರು

ವಿದೇಶ.

ಹಿಂದೂ ಮುಸಲ್ಮಾನರ ಸಮಸ್ಯೆಯನ್ನು ತೀರ್ಮಾನಿಸಲು ಮಹಾತ್ಮ ಗಾಂಧಿಯವರ ಮತ್ತು ಆಗಾಖಾನ್‍ರವರ ಉಸ್ತುವಾರಿ ಮೇಲೆ, ಅವರಿಬ್ಬರಿಂದ ನೇಮಿಸಲ್ಪಡುವ ಪಂಚಾಯಿತರು ಯಾಯ ಪ್ರಾಂತ್ಯದಲ್ಲಿ ತೀರ್ಮಾನಕ್ಕೆ ಬರುವಂತೆ ಮಾಡಿಕೊಳ್ಳುವಂತೆ ಮಾಡುವುದು ಉತ್ತಮವೆಂದು ಅಸೆಂಬ್ಲಿಯ ಮಾಜಿ ಅಧ್ಯಕ್ಷ ಶ್ರೀ ವಿ ಜೆ ಪಟೇಲರವರು ಆಗಾಖಾನರಿಗೆ ಸೂಚಿಸಿರುವರೆಂತಲೂ, ಆಗಾಖಾನರು ಈ ಸೂಚನೆಯನ್ನು ಮುಸಲ್ಮಾನ ಡೆಲಿಗೇಟುಗಳೊಂದಿಗೆ ಆಲೋಚಿಸುತ್ತಿರುವರೆಂತಲೂ ವರ್ತಮಾನವಿದೆ

ದುಂಡುಮೇಜಿನ ಪರಿಷತ್ತಿನ ಉಪಕಮಿಟಿಗಳ ಮೀಟಿಂಗುಗಳಲ್ಲಿ ಈ ವಾರ ವಿಶೇಷ ಚರ್ಚೆಗಳೇನೂ ನಡೆದಿರುವುದಿಲ್ಲ. ಫೆಡರಲ್ ಸ್ಟ್ರಕ್ಚರ್ ಕಮಿಟಿಯಲ್ಲಿ—ಸಾಂಸ್ಥಾನಿಕರೊಳಗೆ ನ್ಯಾಯವಿಧಾಯಕ ಸಭೆಗಳಿಗೂ ಇರುವ ಸಂಬಂಧದ ಚರ್ಚೆಯು [illegible] ಅಭ್ಯಾಸದ ಪರವಾಗಿ ಸರ್ ಮಹಮ್ಮದ್ ಶಾಫಿಯವರು ಅಲ್ಪ ಸಂಖ್ಯಾತರ ಸಮಸ್ಯೆಯನ್ನು ತೀರ್ಮಾನಿಸಿದೆ ಇಂಥಾ ಮುಖ್ಯ ಸಂಗತಿಗಳನ್ನು ಚರ್ಚಿಸಕೂಡದೆಂದು ಆಕ್ಷೇಪ ಮಾಡಿದರು ಇಂಥಾ ಅಡತಡೆಯು ಈ ಪರಿಷತ್ತೀ ಮುರಿಯುವ ಸಂಭವವಾಗಬಹುದೆಂಬ ಹೆದರಿಕೆ ಇದೆ

ಬ್ರಿಟಿಷ್ ಪಾರ್ಲಿಮೆಂಟಿನ ಜನರಲ್ ಚುನಾವಣೆಯು ಈ ತಾ 27 ರಲ್ಲಿ ನಡೆಯಿತು ಎಲ್ಲಾ ಸ್ಥಾನಗಳ ಓಟಿನ ಲೆಕ್ಕವು ಇನ್ನೂ ಆಗಿರುವುದಿಲ್ಲ ಪ್ರಥಮ ದಿವಸ ಲೆಕ್ಕ ಮಾಡಿದ್ದರಲ್ಲಿ 222 ಕನ್‍ಸರ್ವೇಟಿವ್‍ಗಳೂ 4 ನೇಶನಲ್ ಲೇಬರ್ ಮೆಂಬರುಗಳೂ, 37 ನೇಶನಲ್ ಲಿಬರಲ್‍ಗಳೂ, ಅಂತು 263 ನೇಶನಲಿಸ್ಟ್ ಮೆಂಬರುಗಳೂ 23 ಲೇಬರ್ ಮೆಂಬರುಗಳೂ, 2 ಇಂಡಿಪೆಂಡೆಂಟರೂ ಅಂತು 25 ವಿರೋಧ ಪಕ್ಷದವರೂ ಜಯಶೀಲರಾಗಿರುವರು ನೇಶನಲ್ ಸರಕಾರದ ಪಕ್ಷದವರಿಗೆ ಅದರಲ್ಲೂ ಕನ್‍ಸರ್ವೇಟಿವ್‍ಗಳಿಗೆ ದೊಡ್ಡ ಬಹುಮತ ಸಿಕ್ಕುವಂತಿದೆ ಲೇಬರ್ ಪಕ್ಷದವರಿಗೆ ದೊಡ್ಡ ಸೋಲುಪೆಂದೇ ತೋರುತ್ತದೆ ಲೇಬರ್ ಪಕ್ಷದ ಮುಂದಾಳಾದ ಮೆ ಆರ್ತರ್ ಹೆಂಡರ್‍ಸನ್‍ರವರೇ ಮುಂತಾದ ಕೆಲವು ಪ್ರಮುಖರು ಸೋಲಿಸಲ್ಪಟ್ಟಿರುವರು

ಮಿಷನರವರ ಜಮಾಬಂದಿಯ ಕಾರ್ಯಕ್ರಮ ಪಟ್ಟಿ.

ನವಂಬರು ತಿಂಗಳಲ್ಲಿ.

ನವಂಬರು ತಾ 16 ರಲ್ಲಿ ಕ್ರಿಂಮಂಗಲ ನಾಡ ಕಛೇರಿ ಇನ್ಸ್‌ಪೆಕ್ಷನ್ ಮತ್ತು ಸದರಿ ನಾಡಿನ ಜಮಾಬಂದಿ ತಾ 17 ರಲ್ಲಿ ಕಾಫಿ ತೋಟಗಳ ಇನ್ಸ್‌ಪೆಕ್ಷನ್ ತಾ 18 ರಲ್ಲಿ ಮಡಿಕೇರಿಯಲ್ಲಿ ಕಾಫಿ ಬಾಗದ ಇನ್ಸ್‌ಪೆಕ್ಷನ್ ಮತ್ತು ಪೊನ್ನಂಪೇಟೆಗೆ ವಾಪಸು ತಾ 19 ರಲ್ಲಿ ಪೊನ್ನಂಪೇಟೆ ನಾಡ ಕಛೇರಿ ಇನ್ಸ್‌ಪೆಕ್ಷನ್ ಮತ್ತು ಸದರಿ ನಾಡಿನ ಜಮಾಬಂದಿ ತಾ 20 ರಲ್ಲಿ ಮೆ. ಕೆ ಜೋಸೆಫ್‍ರವರ ಕಾಫಿ ತೋಟದ ಮತ್ತು ದೇವಸೂರು ನಾಲೆಯ ಇನ್ಸ್‌ಪೆಕ್ಷನ್ ತಾ 21 ರಲ್ಲಿ ಬಾಳೆಲೆ ನಾಲೆಯ ಮತ್ತು ರುದ್ರಗುಪ್ಪೆ ಕೆರೆಗಳ ತೋಟದ ಇನ್ಸ್‌ಪೆಕ್ಷನ್

ಡಿಸೆಂಬರು ತಿಂಗಳಲ್ಲಿ

ಡಿಸೆಂಬರು ತಾ 14 ರಲ್ಲಿ ವೀರರಾಜಪೇಟೆ ನಾಡ ಕಛೇರಿ ಇನ್ಸ್‌ಪೆಕ್ಷನ್ ಮತ್ತು ಸದರಿ ನಾಡಿನ ಜಮಾಬಂದಿ ತಾ 15 16 ಮತ್ತು 17 ರಲ್ಲಿ ವೀರರಾಜಪೇಟೆ ಮತ್ತು ನಾಪೋಕ್ಲು ನಾಡುಗಳ ಕಾಫಿ ತೋಟಗಳ ಇನ್ಸ್‌ಪೆಕ್ಷನ್ ತಾ 18 ರಲ್ಲಿ ಅಮ್ಮತ್ತಿ ನಾಡ ಕಛೇರಿ ಇನ್ಸ್‌ಪೆಕ್ಷನ್ ಮತ್ತು ಸದರಿ ನಾಡಿನ ಜಮಾಬಂದಿ ತಾ 19 20 ಮತ್ತು 21 ರಲ್ಲಿ ಕಾಫಿ ತೋಟಗಳ ಇನ್ಸ್‌ಪೆಕ್ಷನ್

ಜನವರಿ ತಿಂಗಳಲ್ಲಿ

ಜನವರಿ ತಾ 11 ರಲ್ಲಿ ನಾಪೋಕ್ಲು ನಾಡ ಕಛೇರಿ ಇನ್ಸ್‌ಪೆಕ್ಷನ್ ಮತ್ತು ಸದರಿ ನಾಡಿನ ಜಮಾಬಂದಿ ತಾ 12 13 ಮತ್ತು 14 ರಲ್ಲಿ ಕಾಫಿ ಬಾಗಗಳ ಇನ್ಸ್‌ಪೆಕ್ಷನ್

ಎಲ್ ಜಿ ಮೆಕ್ಫೈಲ್

ತಾ 22—10—31 (ಕಮಿಷನರು)

ಸ್ವೀಕಾರ.

1 ಮಂಗಳೂರಿನ ಸ್ವದೇಶಾಭಿಮಾನಿ ಪತ್ರಿಕೆಯ ರಜತೋತ್ಸವ (25ನೇ ವರ್ಷದ) ಸಂಚಿಕೆಯನ್ನು ಮಂದನಾ ಪೂರ್ವಕ ಸ್ವೀಕರಿಸುತ್ತೇವೆ ಪ್ರಸಿದ್ಧ ಬರಹಗಾರರ ಹಲವು ಲೇಖನಗಳಿಂದ ಕೂಡಿ, ಒಳ್ಳೆ ಚಿತ್ರಗಳಿಂದಲೂ ಅಲಂಕೃತವಾಗಿ ರಂಜಿಸುವ ಈ ಸಂಚಿಕೆಯು ಎಲ್ಲರಿಂದಲೂ ಓದಲು ಯೋಗ್ಯವಾಗಿದೆ ಬರೇ ಶಿಕ್ಷಕರನ್ನು ಕಟಿನ ಕನ್ನಡ ಪತ್ರಿಕಾ ಸಾಹಿತ್ಯದಲ್ಲಿ ಬಹಳ ಕಾಲ ಬಾಳಿ [illegible] ತಿರುಕ್ಕುವನ್ನು [illegible] ನಾಟಿ ಯು [illegible] ಸ್ವದೇಶಾಭಿಮಾನಿ ನಮ್ಮ ಹೃತ್ಪೂರ್ವಕ ಅಭಿನಂದನೆಗಳಿವೆ

2 ಮೆ ನಾರಾಯಣ ರಾಮಕೃಷ್ಣರ "Coorg and the Coorgs" (ಕೊಡಗು ಮತ್ತು ಕೊಡಗರು) ಎಂಬ ಇಂಗ್ಲಿಷ್ ಪುಸ್ತಕವು ನಮ್ಮ ಕೈಸೇರಿದೆ ಇದನ್ನು ವಿಮರ್ಶಿಸಲು ಸ್ಥಳವಿಲ್ಲದೆ ಇನ್ನೊಂದು ಸಲ ಪತ್ರಿಕೆಯ ಮುಖಾಂತರ ವಿಮರ್ಶಿಸುವೆವು

WANTED.

[illegible] to the Coorg [illegible] School [illegible] teacher in the [illegible] Training [illegible] Teachers Cadre on Rs 40—2—60—1—70 [illegible] with effect from 13—1—1932 [illegible] Graduates or [illegible] graduates preferred Training essential [illegible] as second language is essential [illegible] will be preferred Only natives of Coorg need apply Applications giving qualifications age, experience in teaching and particulars as to place of birth and [illegible] should reach the undersigned not later than 15th November 1931

F Edmonds

Inspector of Schools

Coorg and Bangalore

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಈ ತಾ. 27ರಲ್ಲಿ ನು ಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು. ಕಮಿಷನರವರು ಅಧ್ಯಕ್ಷರಾಗಿದ್ದರು. 20 ಮೆಂಬರುಗಳ ಪೈಕಿ 17 ಮೆಂಬರುಗಳು ಹಾಜರಿದ್ದರು

ಈ ಕೆಳಗಿನ ವಿಷಯಗಳನ್ನು ಚರ್ಚಿಸಿ, ತೀರ್ಮಾನಿಸಿದರು.

1. ವ್ಯವಸಾಯಗಾರರಿಗೆ ವ್ಯವಸಾಯವಲ್ಲದೆ ವ್ಯಾಪಾರ ಮುಂತಾದ ಬೇರೆ ವೃತ್ತಿಯಿಂದ ಬರುವ ಉತ್ಪತ್ತಿಗೆ ತೆರಿಗೆ ಹಾಕಲು ಅನುಕೂಲವಾಗುವಂತೆ ಕೊಡಗು ಡಿಸ್ಟ್ರಿಕ್ಟ್ ಬೋರ್ಡ್ ರೆಗ್ಯುಲೇಶನಿನ 2, 3 ಮತ್ತು 6ನೇ ಸೆಕ್ಷನುಗಳು ಬದಲಾಯಿಸಲ್ಪಟ್ಟವು.

2. ಈ ಕೆಳಗಿನ ಕೆಲಸಗಳಿಗೆ ಎಗ್ಸಿಕ್ಯುಟಿವ್ ಇಂಜಿನಿಯರವರ ಕೋರಿಕೆ ಮೇರೆ ಹಣ ಮಂಜೂರು ಮಾಡಲಾಯಿತು.

(1) ಸಿದ್ದಾಪುರದ ಆಸ್ಪತ್ರೆಯ ಕಟ್ಟಡವನ್ನು ಬದಲಾಯಿಸಲು ಮತ್ತು ದುರಸ್ತು ಮಾಡಲು ರೂ. 1170.

(2) ಸಿದ್ದಾಪುರದಲ್ಲಿ ದನಗಳ ಅಂಗಡಿ ಕಟ್ಟಲಿಕ್ಕೆ ರೂ. 1746.

(3) ಸಿದ್ದಾಪುರದ ಮಾರ್ಕೆಟು ರೋಡುಗಳ ಮತ್ತು ಕಟ್ಟಡಗಳ ದುರಸ್ತಿಗೆ ರೂ. 710.

(4) ಸಿದ್ದಾಪುರದಲ್ಲಿ 6 ಅಡಿ ಅಗಲದ ಬಾವಿಯನ್ನು ಪುನಹ ಕಟ್ಟಿಸಲಿಕ್ಕೆ ರೂ. 250.

(5) ಸುಂಟಿಕೊಪ್ಪದಲ್ಲಿ ಒಂದು ಮಾರ್ಕೆಟು ಅಂಗಡಿಯನ್ನು ಕಟ್ಟಿಸಲಿಕ್ಕೆ ರೂ. 2250.

(6) ಸುಂಟಿಕೊಪ್ಪದ ಮಾರ್ಕೆಟು ಅಂಗಡಿಗಳ ದುರಸ್ತಿಗೆ ರೂ. 1359.

7. ಹೊಸಕೋಟೆಯಲ್ಲಿ ಬಾವಿಯನ್ನು ಪುನಹ ಕಟ್ಟಿಸಲಿಕ್ಕೆ ರೂ. 1357.

(8) ಮೇಲಿನ ಕೆಲಸಗಳನ್ನು ನಡಿಸಲು ಡಿ. ಪಿ. ಡಬ್ಲ್ಯು. ಯವರಿಗೆ ಕೊಡುವ ಚಾರ್ಜು ರೂ. 1960.

ಒಟ್ಟು—ರೂ 10,802.

3. ಕಮಿಷನರವರ ಪತ್ರವನ್ನು ಚರ್ಚಿಸಿ, ಗೋಣಿಕೊಪ್ಪಲು ದನಗಳ ಪ್ರದರ್ಶನಕ್ಕೆ ಈ ವರ್ಷ ರೂ. 100 ಬೋರ್ಡಿನಿಂದ ಕೊಡುವಂತೆಯೂ, ಸದರಿ ಪ್ರದರ್ಶನವನ್ನು ಬೋರ್ಡಿನ ವರೇ ನಡಿಸುವ ವಿಷಯ ಬರುವ ವರ್ಷ ಆಲೋಚಿಸುವಂತೆಯೂ ತೀರ್ಮಾನಿಸಲಾಯಿತು.

4. ಎಗ್ಸಿಕ್ಯುಟಿವ್ ಇಂಜಿನಿಯರವರ ಪತ್ರದ ಮೇರೆ ಮಾರ್ನಾಡು ಶಾಲೆಯ ಕಟ್ಟಡವನ್ನು ಬದಲಾಯಿಸುವ ವಿಷಯ ಮುಂದೂಡು ಹಾಕಲಾಯಿತು.

5. ಕೈಲ ಮತ್ತು ಬಾಡಗ ಗ್ರಾಮಸ್ಥರ ಅರ್ಜಿಯ ಮೇರೆ ಕುಟ್ಟ—ಹೇಮಾಡು ರಸ್ತೆಯನ್ನು ಬೋರ್ಡಿನವರು ವಹಿಸಿಕೊಳ್ಳುವಂತೆ ನಿಶ್ಚೈಸಲಾಯಿತು.

6. ಅಸಿಸ್ಟೆಂಟ್ ಕಮಿಷನರವರ ಪತ್ರದ ಮೇರೆ ಶಿಶಿಮುಟಿಯಲ್ಲಿ ಒಂದು ಬಾವಿಯನ್ನು ತೋಡಿಸಲು ಹಣ ಮಂಜೂರು ಮಾಡಲಾಯಿತು.

7. ಉತ್ತರ ಕೊಡಗು ಸುಬೇದಾರರು ಮಾರ್ನಾಡು ಪೇಟೆಯ ರಸ್ತೆಯಲ್ಲಿ ಹೆಚ್ಚಿಗೆ 2 ದೀಪಗಳನ್ನು ಇಡಬೇಕೆಂದು ಬರೆದ ಕಾಗದದ ಮೇರೆ ಒಂದು ದೀಪವನ್ನು ಮಾತ್ರ ಇಡಲು ಮಂಜೂರಾಯಿತು.

8. ಪೊನ್ನಂಪೇಟೆಯಲ್ಲಿ ಕುಡಿಯುವ ನೀರಿನ ಕೆರೆಗೆ ಒಬ್ಬ ಕಾವಲುಗಾರನನ್ನು ಇಡಬೇಕೆಂಬ ಅಸಿಸ್ಟೆಂಟ್ ಕಮಿಷನರವರ ಪತ್ರವನ್ನು ಚರ್ಚಿಸಿ, ಅಲ್ಲಿ ಪಂಚಾಯತರು ಬೇಗನೆ ನೇಮಿಸಲ್ಪಡುವ ಕಾರಣ ಈ ವಿಷಯ ಅವರಿಗೆ ಬಿಡುವಂತೆ ತೀರ್ಮಾನಿಸಲಾಯಿತು.

9. ಸಿದ್ದೇಶ್ವರ ಗದ್ದಿಗೆ ಟೋಲ್‌ಗೇಟ್ ಕಂಟ್ರಾಕ್ಟನ್ನು ತನ್ನ ತಮ್ಮ ಸೋಮಪ್ಪನು 1929—30ರು ತೆಗೆದಲ್ಲಿ ಕೊಂಡದ್ದರ ಬಾಬ್ತು ರೂ. 573 ಪೈಕಿ ರೂ. 173 ವಜ ಕೊಡಬೇಕೆಂದು ಎ. ಮಂದಪ್ಪನವರು ಬರಕೊಂಡ ಅರ್ಜಿ ಮಂಜೂರು ಮಾಡಲಾಯಿತು.

10. ಶಿಶಿಮುಟಿ—ಅಂಮಣಬಾಣೆ ರಸ್ತೆಯನ್ನು ಬೋರ್ಡಿನವರು ವಹಿಸಿಕೊಳ್ಳಬೇಕೆಂತಲೂ, ತಾವು ಅದರ ವಾರ್ಷಿಕ ರಿಪೇರಿ ಖರ್ಚಿನಲ್ಲಿ ಮೂರರ ಒಂದು ಭಾಗ (150 ರೂ ಗೆ ಮೀರದೆ) ಕೊಡುತ್ತೇವೆಯೆಂತಲೂ ಚೀಫ್ ಫಾರೆಸ್ಟ್ ಆಫೀಸರು ಬರೆದ ಪತ್ರವನ್ನು ಓದಿ, ಅದಕ್ಕೆ ಒಪ್ಪಲಾಯಿತು.

11. ಅಸಿಸ್ಟೆಂಟ್ ಕಮಿಷನರವರ ಸಿಫಾರಸ್ಸು ಮೇರೆ ನಿಲುವಾಗಿಲು ಟೋಲ್‌ಗೇಟ್ ಕಂಟ್ರಾಕ್ಟರಿಗೆ 50 ರೂ ವಜ ಕೊಡಲಾಯಿತು.

12. ತಾಲೂಕು ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರವರ ಪತ್ರದ ಮೇರೆ ಬಿರುನಾಣಿ ಶಾಲೆಯ ಹೊಸ ಕಟ್ಟಡಕ್ಕೆ ಹೆಚ್ಚಿಗೆ ರೂ. 200 ಮಂಜೂರು ಮಾಡಲಾಯಿತು.

13. ಶನಿವಾರಸಂತೆಯಲ್ಲಿ ಈಗಿನ ಹುಡುಗರ ಶಾಲೆಯನ್ನು ನೆಯಿಗೆಯ ಶಾಲೆಯಾಗಿಯೂ, ನೆಯಿಗೆಯ ಶಾಲೆಯನ್ನು ಹುಡುಗರ ಶಾಲೆಯಾಗಿಯೂ ಮಾಡಲು ಸುಮಾರು ರೂ. 150 ಖರ್ಚಾಗುವದೆಂದು ಎಗ್ಸಿಕ್ಯುಟಿವ್ ಇಂಜಿನಿಯರು ಮಾಡಿದ ಅಂದಾಜು ಮಂಜೂರು ಮಾಡಲಾಯಿತು

14. ಮಡಿಕೇರಿ ಶಾಲೆಗೆ ಸ್ಕೂಲು ಫೈನಲಾಗಿ ತರಬೇತಾದ ಹೆಚ್ಚಿಗೆ ಇಬ್ಬರು ಉಪಾಧ್ಯಾಯರುಗಳನ್ನು ಕೊಡಬೇಕೆಂಬ ಮಿ. ಕೆ. ಯಸ್. ಸಂಜೀವಪ್ಪನವರ ಠರಾವು ಚರ್ಚಿಸಲ್ಪಟ್ಟು ಹೆಚ್ಚಿಗೆ ಒಬ್ಬ ಉಪಾಧ್ಯಾಯನನ್ನು ನೇಮಿಸುವ [illegible] ರಾಯಿತು.

15. ಶ್ರೀಮಂಗಲನಾಡಿನ ಬೀರುಗ ಖಾಸಗಿ ಶಾಲೆಯನ್ನು ಬೋರ್ಡಿನವರು ವಹಿಸಿಕೊಳ್ಳಬೇಕೆಂಬ ಮಿ. ಕೆ. ಯಸ್. ಸಂಜಪ್ಪನವರು ಸೂಚನೆಯನ್ನು ಆಲೋಚಿಸಿ, 1931ನೇ ಏಪ್ರಿಲ್ 1ರಿಂದ ಸದರಿ ಶಾಲೆಗೆ ಮಾಸಿಕ ರೂ. 15 ಬೋರ್ಡಿನಿಂದ ಗ್ರಾಂಟು ಕೊಡುವಂತೆ ತೀರ್ಮಾನಿಸಲಾಯಿತು.

16. ಮಡಿಕೇರಿ ಶಾಲೆಯ ಬೋರ್ಡಿಂಗ್ ಕಟ್ಟಡವನ್ನು ಬದಲಾಯಿಸಲಿಕ್ಕೂ, ಅದಕ್ಕೆ ಅವಶ್ಯವಿರುವ ಸಾಮಾನುಗಳಿಗಾಗಿಯೂ ರೂ. 2000 ಕೊಡಬೇಕೆಂಬ ಮಿ. ಕೆ. ಯಸ್. ಸಂಜಪ್ಪನವರ ಠರಾವನ್ನು ಚರ್ಚಿಸಿ, ಡಿ. ಪಿ. ಡಬ್ಲ್ಯು. ಇಲಾಖೆಯವರು ಈ ಕಟ್ಟಡವನ್ನು ಇನ್‌ಸ್ಪೆಕ್ಷನ್ ಮಾಡಿ ರಿಪೋರ್ಟನ್ನು ಬರುವ ಮೀಟಿಂಗಿನ ಮುಂದಿಡಬೇಕೆಂದು ನಿಶ್ಚೈಸಲಾಯಿತು.

17. ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತೆಯಲ್ಲಿರುವ ಎಲ್ಲಾ ಹಯರ್ ಎಲಿಮೆಂಟರಿ ಶಾಲೆಗಳ ಹೆಡ್ ಮಾಸ್ಟರುಗಳಿಗೆ ಮಾಸಿಕ ರೂ. 5 ಎಲೋವೆನ್ಸ್ ಕೊಡಬೇಕೆಂದು ಮಿ. ಕೆ. ಯಸ್. ಸಂಜಪ್ಪನವರು ಸೂಚಿಸಿದ ಠರಾವನ್ನು ಅನುಮೋದಿಸುವವರು ಯಾರೂ ಇಲ್ಲದ್ದರಿಂದ ಅದು ಬಿದ್ದು ಹೋಯಿತು.

18. ಕಾಯಿಲಸ್ಥರು ತಮ್ಮ ಆಹಾರಕ್ಕೆ ಸ್ವಂತ ಏರ್ಪಾಡು ಮಾಡಿಕೊಂಡು ಚಿಕಿತ್ಸೆಗಾಗಿ ಮಲಗಲು ಮಾತ್ರ ಶ್ರೀಮಂಗಲ ಆಸ್ಪತ್ರೆಯಲ್ಲಿ ಹಕ್ಕು ಹಾಸಿಗೆಗಳನ್ನು ಇಡುವ ಏರ್ಪಾಡು ಮಾಡಬೇಕೆಂಬ ಮಿ. ಕೆ. ಯಸ್. ಸಂಜಪ್ಪನವರ ಠರಾವು ಪಾಸಾಗಲಿಲ್ಲ.

19. ಮಿ. ಅಮ್ಮಾಟ ಮಾದಪ್ಪನವರ ಸೂಚನೆ ಮೇರೆ ನಲ್ಲೂರು ಲೋಕಲ್‌ಫಂಡ್ ರಸ್ತೆಯಿಂದ ಬೆಸಗೂರಿಗೆ ಗಾಡಿ ಹೋಗುವ ರಸ್ತೆ ಮಾಡಲು ಮಂಜೂರು ಮಾಡಲಾಯಿತು.

20. ಚನ್ನಯ್ಯನ ಕೋಟೆಯಲ್ಲಿ ಪಂಚಮರಿಗೆ ಕುಡಿಯುವ ನೀರಿಗಾಗಿ ಒಂದು ಕೆರೆಯನ್ನು ತೋಡಿಸಬೇಕೆಂದು ಮಿ. ಎ. ಪಿ. ಕಾರ್ಯಪ್ಪನವರು ಸೂಚಿಸಿದ ಠರಾವು ಪಾಸಾಯಿತು

21. ವರ್ಷವೆಲ್ಲಾ ವಹಿವಾಟು ನಡೆಯಲು ಅನುಕೂಲವಾಗುವಂತೆ ನಲ್ವತ್ತೊಕ್ಲು—ಹಾತೂರು ರಸ್ತೆಯ ಅಡ್ಡ ಇರುವ ತೋಡಿಗೆ ಸೇತುವೆ ಕಟ್ಟಲು ರೂ. 500 ಮಂಜೂರು ಮಾಡಬೇಕೆಂದು ಮಿ. ಎ. ಪಿ. ಕಾರ್ಯಪ್ಪನವರು ಸೂಚಿಸಿದರು. ಈ ಸೇತುವೆ ಕಟ್ಟಲು ಖರ್ಚು ಎಷ್ಟಾಗುವದೆಂದು ಅಂದಾಜು ಮಾಡಿ ಇನ್ನೊಂದು ಮೀಟಿಂಗಿನ ಮುಂದಿಡುವಂತೆ ನಿಶ್ಚೈಸಲಾಯಿತು.

22. ಕಣ್ಣಂಗಾಲದಲ್ಲಿ ಒಂದು ಶಾಲೆ ಕಟ್ಟುವದಕ್ಕಾಗಿ ರೂ. 500 ಕೊಡಬೇಕೆಂಬ ಮಿ. ಎ. ಪಿ. ಕಾರ್ಯಪ್ಪನವರ ಠರಾವು ಚರ್ಚಿಸಲ್ಪಟ್ಟು, ಈ ವಿಷಯ ಬಜಟ್ಟಿಗೆ ಬರುವ ಮೀಟಿಂಗಿನಲ್ಲಿ ಆಲೋಚಿಸುವಂತೆ ತೀರ್ಮಾನಿಸಲಾಯಿತು.

23. ನಾಪೋಕ್ಲು ಆಸ್ಪತ್ರೆಯಲ್ಲಿ ಕಾಯಿಲಸ್ಥರನ್ನು ಇಡಲು ಆರು ಹಾಸಿಗೆಗಳ ಏರ್ಪಾಡು ಮಾಡಬೇಕೆಂದು ಮಿ. ಬಿ. ಮಾಚಯ್ಯನವರು ಸೂಚಿಸಿದ ಠರಾವನ್ನು ಚರ್ಚಿಸಿ ಬೋರ್ಡಿನಲ್ಲಿ ಹಣವು ದೊರೆತ ಕೂಡಲೇ ಈ ಕೆಲಸವನ್ನು ಕೈಕೊಳ್ಳುವಂತೆ ತೀರ್ಮಾನಿಸಲಾಯಿತು.

24. ನಾಪೋಕ್ಲು—ಭಾಗಮಂಡಲ ರಸ್ತೆಯನ್ನು ಡಿ. ಪಿ. ಡಬ್ಲ್ಯು. ಇಲಾಖೆಯವರ ಸ್ವಾಧೀನಕ್ಕೆ ವರ್ಗಾಯಿಸಬೇಕೆಂಬ ಮಿ. ಬಿ. ಮಾಚಯ್ಯನವರ ಠರಾವು ಪಾಸಾಗಲಿಲ್ಲ.

25. ಬಲಮುರಿಯಿಂದ ಪಾರಾಣೆಗೆ ಹೋಗುವ ರಸ್ತೆಯಲ್ಲಿರುವ ಬೈಪೊಳೆಗೆ ಸಣ್ಣದೊಂದು ಸೇತುವೆ ಕಟ್ಟಲು ರೂ. 100 ಮಂಜೂರು ಮಾಡಬೇಕೆಂದು ಮಿ. ಬಿ. ಮಾಚಯ್ಯನವರು ಸೂಚಿಸಿದರು. ಅಲ್ಲಿಯ ಗ್ರಾಮಸ್ಥರು ಅರ್ಜಿಯಲ್ಲಿ ಹೇಳಿರುವಂತೆ ಹೊಳೆಯ ಎರಡು ಕಡೆ ರಸ್ತೆಯನ್ನು ಎತ್ತರವಾದ ಮಟ್ಟಕ್ಕೆ ತಂದರೆ ಈ ಸೂಚನೆಯಂತೆ ಹಣ ಮಂಜೂರು ಮಾಡಬಹುದೆಂದು ನಿಶ್ಚೈಸಲಾಯಿತು.

26 (1) ಕುಂದಳ್ಳಿ ಗ್ರಾಮದಿಂದ ಮೈಸೂರು ಪ್ರಾಂತ್ಯದ ಗಡಿಗೂ, (2) ಹಳ್ಳಿಕಟ್ಟೆಯಿಂದ ಮೈಸೂರು ಗಡಿಗೂ ಮತ್ತು (3) ಅಬ್ಬೂರು ಕಟ್ಟೆಯಿಂದ ಹಿರೇಕರ ಫಾರೆಸ್ಟು ರಸ್ತೆಯ ವರೆಗೂ ಗ್ರಾಮಾಂತರ ರಸ್ತೆ ಮಾಡಿಸಬೇಕೆಂದು ಮಿ. ಚೌಡ್ಲು ಕಾಳಪ್ಪನವರು ಸೂಚಿಸಿದರು. ಈ ವಿಷಯ ಚರ್ಚೆ ನಡೆದು ಕಮಿಷನರವರು ಅನುಮೋದಿಸುವಂತೆ ಒಪ್ಪಲಾಯಿತು.

27. ಹಂಡ್ಲಿಯಿಂದ ಮಣಗಳ್ಳಿ ವರೆಗೆ ಗ್ರಾಮಾಂತರ ರಸ್ತೆ (ಅಂದಾಜು ಚಾರ್ಜು ರೂ 75) ಮಾಡಿಸಬೇಕೆಂದು ಮಿ. ಪುಷ್ಪಣ್ಣನವರು ಸೂಚಿಸಿದರು. ಇದನ್ನೂ ಅನುಮೋದಿಸುವಂತೆ ತೀರ್ಮಾನಿಸಲಾಯಿತು.

28. ಚಿಕ್ಕತೊಂಡೂರು ಖಾಸಗಿ ಶಾಲೆಗೆ ಒಬ್ಬ ಉಪಾಧ್ಯಾಯನನ್ನು ಬೋರ್ಡಿನವರು ನೇಮಿಸಬೇಕೆಂಬ ಮಿ. ಪುಷ್ಪಣ್ಣನವರ ಠರಾವು ಮಂಜೂರಾಗಲಿಲ್ಲ.

29. 1930—31ನೇ ವರ್ಷದಲ್ಲಿ ಡಿ. ಪಿ. ಡಬ್ಲ್ಯು. ಇಲಾಖೆಯವರು ಮಾಡಿಸಿದ ಕೆಲಸಕ್ಕೆ ಮಂಜೂರು ಮಾಡಿದ್ದ ಹಣದ ಅದಲು ಬದಲುಗಳನ್ನು ಮಂಜೂರು ಮಾಡಬೇಕೆಂದು ಎಗ್ಸಿಕ್ಯುಟಿವ್ ಇಂಜಿನೀಯರವರು ಬರೆದ ಪತ್ರಕ್ಕೆ ಒಪ್ಪಿಗೆಯನ್ನೀಯಲಾಯಿತು

30. ಕಳತೋಡಲಿಯಲ್ಲಿರುವ ಡೋಣಿ ಕಡವನ್ನು ಸಂತೆ ಪೂರಕ್ಕೆ ವರ್ಗಾಯಿಸಬೇಕೆಂಬ ಠರಾವನ್ನು ಮಿ. ಹೆಚ್. ಪುಷ್ಪಣ್ಣನವರು ವಾಪಸು ತೆಗೆದುಕೊಂಡರು.

31. ಸರಕಾರಿ ಇಲಾಖೆಗಳಲ್ಲಿ ಪ್ರಯಾಣದ ಬತ್ತವನ್ನು ಶೇಕಡ 10ರಷ್ಟು ಕಡಿಮೆ ಮಾಡಿರುವಂತೆ ಬೋರ್ಡಿನಲ್ಲಿಯೂ ಕಡಿಮೆ ಮಾಡಲು ತೀರ್ಮಾನವಾಯಿತು.

32. ಪ್ರಾಂತೀಯ ಸರ್ಕಾರದವರು ಕೊಟ್ಟಿರುವ ರೂ. 5000 ಸ್ಪೆಶಲ್ ಗ್ರಾಂಟನ್ನು ಗ್ರಾಮಾಂತರಗಳಲ್ಲಿ ಬಾವಿಗಳನ್ನು ತೋಡಿಸಲು ಉಪಯೋಗಿಸುವಂತೆ ನಿಶ್ಚೈಸಲಾಯಿತು.

33. ಬಂಬೂರು—ಸೋಮವಾರ ರಸ್ತೆಗೆ ಸ್ಪೆಶಲ್ ರಿಪೇರಿಗಾಗಿ ರೂ. 220 ಮಂಜೂರು ಮಾಡಲಾಯಿತು.

34. ಮಿ. ಅಮ್ಮಾಟ ಮಾದಪ್ಪನವರು, ಅಮ್ಮತ್ತಿ ಗೋಣಿಕೊಪ್ಪಲು ರಸ್ತೆಯಲ್ಲಿ ಹೊಸೂರು ಬಳಿ ಎರಡು ಸಣ್ಣ ಸೇತುವೆಗಳನ್ನು ಕಟ್ಟಿಸಬೇಕೆಂದು ಸೂಚಿಸಿದರು. ಒಂದು ಸಣ್ಣ ಸೇತುವೆಯು ಕಟ್ಟಿಯಾಗಿದೆಯಾದ ಕಾರಣ, ಇನ್ನೊಂದಾದ ಕಾರಣ ಸೇತುವೆ ಕಟ್ಟಲು ಬೇಕಾದ ಹಣದ ಅಂದಾಜು ಮಾಡುವಂತೆ ನಿಶ್ಚಯವಾಯಿತು.

35. ತಿರಂಗಾಲ ಶಾಲೆಗೆ ಹೆಚ್ಚಿಗೆ ಒಬ್ಬ ಉಪಾಧ್ಯಾಯರನ್ನು ನೇಮಿಸಬೇಕೆಂಬ ಮಿ. ಯಸ್. ಯನ್. ರಾಮಶೆಟ್ಟಿಯವರ ಠರಾವು, ಅವರು ಹಾಜರು ಇಲ್ಲದ್ದರಿಂದ ಚರ್ಚಿಸಲ್ಪಡದೆ ಬಾಕಿ ಇಡಲಾಯಿತು.

36. ಭಾಗಮಂಡಲದಲ್ಲಿ ಆಯುರ್ವೇದ ಆಸ್ಪತ್ರೆಯನ್ನು ಸ್ಥಾಪಿಸುವ ವಿಷಯ ಬರುವ ಬಜೆಟ್ ಮೀಟಿಂಗಿನಲ್ಲಿ ಚರ್ಚಿಸುವಂತೆ ತೀರ್ಮಾನಿಸಲಾಯಿತು.

37. ಹೆಬ್ಬಾಲೆಯ ಹೊಸ ಶಾಲೆ ಕಟ್ಟಡಕ್ಕೆ ಜಾಗವನ್ನು ಕ್ರಯವಿಲ್ಲದೆ ಮಾಫಿಯಾಗಿ ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

38. ಮಡಿಕೇರಿ ಎಲಿಪೇಟೆಯಿಂದ ಬಂಬೂರು ರಸ್ತೆಗೆ ಸೇರುವ ಕಾಲುದಾರಿಯನ್ನು ರಿಪೇರಿ ಮಾಡಲು ರೂ. 100 ಮಂಜೂರು ಮಾಡಲಾಯಿತು.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಅಧಿಕಾರಿಗಳು ಇದಕ್ಕೆ ಉತ್ತರ ಕೊಡುವರೇ?

ಆಯ್ಯಾ,

ಈ ತಾ. 8 ರಲ್ಲಿ ನಡೆದ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲು ಮೀಟಿಂಗಿನಲ್ಲಿ ಹಾಜರಿದ್ದವರ ಪೈಕಿ ನಾನೊಬ್ಬನಾಗಿದ್ದೇನೆ. ಕೌನ್ಸಿಲಿನ ಕಳೆದ ಮೀಟಿಂಗು ನಡೆದು 6 ತಿಂಗಳ ಮೇಲಾಗಿದ್ದರೂ, ಚರ್ಚಿಸಲು ಹೆಚ್ಚು ವಿಷಯಗಳಿಲ್ಲದೆ ಈ ಮೀಟಿಂಗು ಒಂದೇ ದಿನದಲ್ಲಿ ತೀರಿಹೋದುದರ ಮೇಲೆ ನಾನು ತಿಳಿಸುವ ಅವಶ್ಯ ಕಾಣುವುದಿಲ್ಲ. ಇದರಿಂದ ಕೌನ್ಸಿಲು ಮೆಂಬರುಗಳು ಎಷ್ಟರ ಮಟ್ಟಿಗೆ ದೇಶದ ವಿಷಯ ಆಲೋಚಿಸುತ್ತಿದ್ದಾರೆಂಬುದು ವಿಷದವಾಗುತ್ತದೆ. ಅದು ಹಾಗಿರಲಿ

ಮೀಟಿಂಗಿನ ಪ್ರಾರಂಭದಲ್ಲಿ ಮೆಂಬರುಗಳು ಮೊದಲು ಕಳುಹಿಸಿದ್ದ ಕೆಲವು ಪ್ರಶ್ನೆಗಳಿಗೆ ಉತ್ತರಗಳು ಕೊಡಲ್ಪಟ್ಟವು. ಸದರಿ ಜವಾಬುಗಳ ಒಂದು ಪ್ರತಿಯು ನನಗೆ ದೊರೆಯಿತು. ಅದನ್ನು ವಿರಾಮ ಕಾಲದಲ್ಲಿ ಓದಿ ನೋಡಿದಲ್ಲಿ ನನಗೆ ಆಶ್ಚರ್ಯವು ಉಂಟಾಯಿತು. ಯಾಕೆಂದರೆ, ಜನರ ಪ್ರತಿನಿಧಿಗಳು ಕೇಳುವ ಸಾರ್ವಜನಿಕ ಪ್ರಯೋಜನಾರ್ಥವಾದ ಪ್ರಶ್ನೆಗಳಿಗೆ ಸರಕಾರಿ ಅಧಿಕಾರಿಗಳು ಸತ್ಯವಾದ ಜವಾಬುಗಳನ್ನೇ ಕೌನ್ಸಿಲಿನಲ್ಲಿ ಕೊಡುತ್ತಾರೆಂದು ನಾನು ಬೇರೆ ಎಲ್ಲರ ಹಾಗೆಯೇ ನಂಬಿದ್ದೆನು. ಆದರೆ ಈ ಸಾರಿಯ ಮೀಟಿಂಗಿನಲ್ಲಿ ಕೊಟ್ಟ ಜವಾಬುಗಳಲ್ಲಿ ಒಂದನ್ನು ನೋಡಿ ನನ್ನ ಆ ಧಾ ನಂಬಿಕೆಯು ಪೂರ್ಣ ಕೆಡಲು ಅವಕಾಶ ದೊರೆತಿದೆ. ಹೇಗಾದರೂ ಕಾರಣವೇನೆಂದು ಜನಸಾಮಾನ್ಯರಿಗೆ ವಿವರಿಸಲು ಪತ್ರಿಕೆಯಲ್ಲಿ ಸ್ವಲ್ಪ ಸ್ಥಳ ಕೊಡಬೇಕೆಂದು ಪತ್ರಿಕಾ ಕರ್ತರನ್ನು ಬೇಡಿಕೊಳ್ಳುವವನಾಗಿದ್ದೇನೆ.

ಮಡಿಕೇರಿ ಕಾನ್ವೆಂಟು ಹೈಸ್ಕೂಲಿನಲ್ಲಿ ಎಷ್ಟು ಮಂದಿ ಉಪಾಧ್ಯಾಯರುಗಳಿರುವರು, ಪುರುಷರೆಷ್ಟು, ಸ್ತ್ರೀಯರೆಷ್ಟು, ಅವರ ಯೋಗ್ಯತೆಗಳೇನು ಎಂದು ಮುಂತಾಗಿ ಕೇಳಿದ ಒಂದು ಪ್ರಶ್ನೆಗೆ—ಸದರಿ ಶಾಲೆಯಲ್ಲಿ 13 ಉಪಾಧ್ಯಾಯರುಗಳಿರುವರು, ಅವರ ಪೈಕಿ 11 ಸ್ತ್ರೀಯರು ಮತ್ತು ಇಬ್ಬರು ಗಂಡಸರು; ಈ ಇಬ್ಬರು ಗಂಡಸರು ಉಪಾಧ್ಯಾಯರುಗಳಲ್ಲಿ ಒಬ್ಬರು ಬಿ. ಎ. ಪಾಸಾಗಿರುವರು; ಇನ್ನೊಬ್ಬರು ಇಂಟರ್ ಮೀಡಿಯೇಟ್ (ಟ್ರೈನಿಂಗ್) ಆಗಿರುವರು, ಎಂದು ಮೊದಲಾಗಿ ಉತ್ತರ ಕೊಡಲಾಗಿದೆ. ಕಾನ್ವೆಂಟಿನಲ್ಲಿ ಇಬ್ಬರು ಗಂಡಸು ಉಪಾಧ್ಯಾಯರುಗಳಿರುವುದೂ ನಿಜ, ಅವರಲ್ಲಿ ಒಬ್ಬರು ಬಿ. ಎ. ಪಾಸಾಗಿರುವುದೂ ನಿಜ. ಆದರೆ ನನಗೆ ತಿಳಿದ ಮಟ್ಟಿಗೆ ಇನ್ನೊಬ್ಬರು ಬರೇ ಸ್ಕೂಲ್ ಫೈನಲ್‌ನವರಾಗಿ, ಟ್ರೈನಿಂಗ್ ಆದವರಾಗಿರುವರು. ಹೀಗಿರುವಲ್ಲಿ ಅವರು ಇಂಟರ್ ಮೀಡಿಯೇಟ್ ಆದವರೆಂದು ನಿಜವಲ್ಲದ ಜವಾಬು ಕೊಡಲು ಕಾರಣವೇನೆಂದು ಗೊತ್ತಾಗುವುದಿಲ್ಲ. ಈ ನಿಜವಲ್ಲದ ವಿಷಯವನ್ನು ಸದರಿ ಶಾಲೆಯ ಹೆಡ್ ಮಿಸ್ಟ್ರೆಸ್‌ರವರು ಹೇಗೆ ಶಾಲಾ ಇನ್‌ಸ್ಪೆಕ್ಟರವರಿಗೆ ತಿಳಿಸಿದರು, ವಿದ್ಯಾ ಇಲಾಖೆಯ ಮೆಂಬರು ಇದನ್ನು ಹೇಗೆ ಕೌನ್ಸಿಲಿನ ಮುಂದಿಟ್ಟರು ಎಂಬುದು ಆಶ್ಚರ್ಯವಲ್ಲವೇ? ಇಂಥಾ ನಿಜವಲ್ಲದ ಸಂಗತಿಗಳು ಕೌನ್ಸಿಲಿನ ಪ್ರೊಸೀಡಿಂಗ್ಸಿನಲ್ಲಿ ಕಂಡುಬರುವದಾದರೆ ಸದರಿ ಪ್ರೊಸೀಡಿಂಗ್ಸಿನ ಮೇಲೆ ಯಾರಿಗೆ ತಾನೇ ವಿಶ್ವಾಸವಿರುವುದು, ಮಾತ್ರವಲ್ಲ ದೊಡ್ಡ ಜವಾಬ್ದಾರಿ ಅಧಿಕಾರಿಗಳ ಮಾತಿಗೆ ಜನರು ಹೇಗೆ ತಾನೇ ಬೆಲೆ ಕೊಡುವರು? ಆದುದರಿಂದ ಇದರ ನಿಜ ಸಂಗತಿಯನ್ನು ಚೀಫ್ ಕಮಿಷನರವರಾಗಲೀ, ಕಮಿಷನರವರಾಗಲೀ ವಿಚಾರಿಸಿ, ಕೌನ್ಸಿಲಿನಲ್ಲಿ ಕೊಟ್ಟ ಉತ್ತರವು ನಿಜವಲ್ಲವಾದರೆ, ಅಂಥ ನಿಜವಲ್ಲದ ಜವಾಬು ಕೊಡಲು ಕಾರಣವೇನು, ಅದಕ್ಕೆ ಜವಾಬ್ದಾರರು ಯಾರು ಎಂಬೀ ಮೊದಲಾದ

...ಯಗಳನ್ನು ತನಿಖೆ ಮಾಡಿ, ನಿಜ ಸಂಗತಿಯನ್ನು ಬಹಿರಂಗಪಡಿಸಬೇಕಾಗಿ ಕೋರುತ್ತೇನೆ. ಇದು ಅಷ್ಟು ಮಹತ್ವದ್ದಲ್ಲವೆಂದು ಅಧಿಕಾರಿಗಳು ವಿಚಾರಿಸದೆ ಸುಮ್ಮನಾದರೆ, ಸಂಗತಿಗಳಿಂದ ದೊಡ್ಡ ಸಂಗತಿಗಳಿಗೂ, 'ನಿಜವಲ್ಲದ ...ಕ್ಕೆ' ಹುಟ್ಟಿ ಸರ್ಕಾರದ ಮೇಲೆ ಜನರಿಗಿರುವ ನಂಬಿಕೆಯು ಕಡಿಮೆಯಾಗುವುದೆಂಬುದರಲ್ಲಿ ಸಂಶಯವಿಲ್ಲ.

"ಸತ್ಯವಾದಿ"

ದಿವಂಗತ ನಡಿಕೇರಿಯಂಡ ಚಿಣ್ಣಪ್ಪನವರು

ಸಂಪಾದಕರೇ,

ಮಿ. ನಡಿಕೇರಿಯಂಡ ಚಿಣ್ಣಪ್ಪನವರ ಅಕಾಲ ಮರಣವು ಅವರ ಕುಟುಂಬವನ್ನು ಕಠಿಣವಾದ ವ್ಯಸನ ಸಾಗರದಲ್ಲಿ ಮುಳುಗಿಸಿರಬಹುದು. ಈ ವ್ಯಸನದಲ್ಲಿ ಕೊಡಗು ದೇಶಸ್ಥರು, ಅದರಲ್ಲಿಯೂ ಮುಖ್ಯವಾಗಿ ಕೊಡವ ಜನಾಂಗದವರು ಭಾಗಿಗಳಾಗಿರುವರೆಂದರೆ, ಅದಕ್ಕೆ ಯಾರೂ ತರ್ಕಿಸಲಾರರು. ಏತಕ್ಕೆಂದರೆ, ಇವರು ಎರಡು ವಿಧದಲ್ಲಿ ಕೊಡಗಿನವರ ಕೃತಜ್ಞತೆಗೆ ಪಾತ್ರರಾಗಿದ್ದರು.

ಒಂದನೆಯದು—ಇವರು ಕೈಕೊಂಡಿದ್ದ ಜೀವನ ವೃತ್ತಿ ಪೋಲೀಸ್ ನೌಕರಿಯನ್ನು ಮಹಿಸ್ತ್ರೇಟರು, ತನ್ನ ಉದ್ಯೋಗವನ್ನು ಬಹು ನಿಷ್ಪಕ್ಷಪಾತದಿಂದ ನಿರ್ವಹಿಸಿದರು. ಸರ್ಕಾರಿ ನೌಕರರ ನಡವಳಿಕೆಯನ್ನು ಚರ್ಚಿಸುವಾಗ್ಯೆ ಇಲಾಖೆ ಮುಖ್ಯಾಧಿಕಾರಿಗಳ ನಟಿ ಫಿಕೇಟುಗಳಿಗಿಂತಲೂ ಹಳ್ಳಿ ಜನಗಳ ಅಭಿಪ್ರಾಯವೇ ಪ್ರಾಮುಖ್ಯವಾದುದೆಂದು ನನ್ನ ... ಅದರಲ್ಲೂ ಪೋಲೀಸ್ ಅಧಿಕಾರಿಗಳ ಗುಣ ನಡತೆಗಳನ್ನು ಕುರಿತು ಮಾತಾಡುವಾಗ್ಯೆ, ಮುಖ್ಯವಾಗಿ ನಾವು ಹಳ್ಳಿ ರೈತನ ಅಭಿಪ್ರಾಯವನ್ನೇ ತೆಗೆದುಕೊಳ್ಳಬೇಕಾಗಿದೆ. ಹಾಗೆ ಹೇಳುವುದಾದರೆ, ಇವರು ಇವರ ಜೀವಮಾನದ ಹೆಚ್ಚಿನ ಸಮಯ ಕೆಲಸ ಮಾಡಿದಂತ ವೀರರಾಜಪೇಟೆಯ ಸುತ್ತು ಮುತ್ತಿನ ಗ್ರಾಮಸ್ಥರ ಪೈಕಿ ಯಾರೊಬ್ಬನೂ ಎಂದಾದರೂ ಇವರು ಪಕ್ಷಪಾತಿಸಿ ಮಾತಾಡುತ್ತಾರೆಂದಾಗಲೀ, ಲಂಚ ತೆಗೆಯುತ್ತಾರೆಂದಾಗಲೀ ಹೇಳಿದ್ದು ನಾನು ಕೇಳಿರುವುದಿಲ್ಲ.

ಇವರು ತನ್ನ ನೌಕರಿಯನ್ನು ಎಷ್ಟು ಉತ್ಸಾಹದಿಂದಲೂ, ರಾಜಭಕ್ತಿಯಿಂದಲೂ ನಡೆಸುತ್ತಿದ್ದರೆಂದರೆ, ಅದು ಇತರ ದೇಶಸ್ಥರಲ್ಲೂ, ನೆಂಟರಿಷ್ಟರಲ್ಲೂ (ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ) ಇವರ ವಿಷಯ ಒಂದು ತರದ ಅಸಹ್ಯಭಾವನೆಯನ್ನು ಹುಟ್ಟಿಸುವಂತಿತ್ತು. ಆದುದರಿಂದ ಇವರ ಮೇಲಿನ ಉತ್ಸಾಹವನ್ನೂ, ನಡವಳಿಕೆಯನ್ನೂ ದೂಷಿಸುತ್ತಿದ್ದರಾದರೂ, ಇವರ ನಿಷ್ಪಕ್ಷಪಾತ ಗುಣವನ್ನು ಎಲ್ಲರೂ ಹೊಗಳುತ್ತಿದ್ದರು. ಈ ರೀತಿಯಲ್ಲಿ ತನ್ನ ಉದ್ಯೋಗವನ್ನು ಪಕ್ಷಪಾತವಿಲ್ಲದೆ ನಡೆಸಿ, ಇವರು ದೇಶಸ್ಥರ ಕೃತಜ್ಞತೆಯನ್ನು ಸಂಪಾದಿಸಿದ್ದರು.

ಕೊಡವರ, ಅವರಲ್ಲೂ ಮುಖ್ಯವಾಗಿ ಇನ್ನು ಮುಂದಕ್ಕೆ ಬರಲಿರುವ ಜನಾಂಗದವರ ಕೃತಜ್ಞತೆಯನ್ನು ಇವರು ತನ್ನ ಶಾಶ್ವತ ಕೀರ್ತಿಸ್ಥಾಪಕವಾದ 'ಪಟ್ಟೋಲೆ ಪಳಮೆ" ಯಿಂದ ಸಂಪಾದಿಸಿರುವರು. ಕೊಡಗ ದೇಶದ ಪ್ರಾಮುಖ್ಯ ವಸ್ತುಗಳಲ್ಲಿ ಈ ಪುಸ್ತಕವು ಒಂದೆಂದರೆ ಹೆಚ್ಚಾಗಲಾರದು. ಒಮ್ಮೆ ಪುರಾತನವೂ, ಶಾಸ್ತ್ರೀಯಯುಕ್ತವೂ ಆದ, ನಮ್ಮ ಜನಾಂಗದ ಸ್ವತಂತ್ರ, ಸಾಮಾಜಿಕ, ಧಾರ್ಮಿಕ ಕಟ್ಟುಕಟ್ಟಳೆಗಳು, ಇಂಗ್ಲಿಷ್ ವಿದ್ಯೆಯ ಪರಿಣಾಮದಿಂದ ಕ್ರಮಕ್ರಮವಾಗಿ ಮಾರ್ಪಡುತ್ತಾ ಅಳಿದು ಹೋಗುತ್ತಿದ್ದ ಸಮಯದಲ್ಲಿ, ಇವರು "ಬಿಕ್ಕಿ ಪೋಸ ಒಕ್ಕಳ ತಂಡ್‌ಟ್ ಕಡ್‌ತಿರೋ ಅಜ್ಜಯ್ಯ" ಎಂಬ ಹಾಗೆ, ಏನೊಂದು ಸ್ವಾಧಿಕಾರವಿಲ್ಲದೆ, ತನಗೆ ತನ್ನ ಉದ್ಯೋಗದ ಸಲುವಾಗಿ ಎಷ್ಟೋ ಕೆಲಸಗಳಿದ್ದಾಗ್ಯೂ ಸಹ, ನಾನಾ ಕಡೆ ಸುತ್ತಿ, ಮುದುಕ ಮುದುಕಿಯರ ಕುಂಟು ಶಲೆಗಳಲ್ಲಿ ಸಂಪೂರ್ಣ ಮರೆಯದೆ ನಿಲುಕಿದ್ದ, ಸಾಮಗ್ರಿಗಳನ್ನು ಆಚರಿಸಿ ಅವುಗಳನ್ನೆಲ್ಲಾ ಶಾಶ್ವತವಾದ ಪುಸ್ತಕರೂಪದಲ್ಲಿರಿಸಿದರು. ಈ ಪುಸ್ತಕದ ಸಲುವಾಗಿ ಅವರು ತಮ್ಮ ಉದ್ಯೋಗದಲ್ಲಿ ಮುಂದುವರಿಯುವ ದಾರಿಯನ್ನು ಸಹ ಸ್ವಲ್ಪ ಮಟ್ಟಿಗೆ ಕಳಕೊಂಡರಂತೆ. "ಈ ಕೃತಿಯು ಚರಿತ್ರಾದೃಷ್ಟಿಯಿಂದ ಕೇವಲ ಬೆಲೆಯುಳ್ಳದ್ದಲ್ಲ. ಯಾಕೆಂದರೆ ಅದರಲ್ಲಿ ಹೊಸ ವಿಷಯವೇನೂ ಇಲ್ಲ" ಎಂಬದಾಗಿ ಕೆಲವರು ತರ್ಕಿಸಬಹುದು. ಆದರೆ ಇದು ನಮ್ಮ ಆಚಾರ ವಿಚಾರಗಳ ಒಂದು ಭಂಡಾರವೆಂಬುದನ್ನು ಎಲ್ಲರೂ ಒಪ್ಪಬೇಕಾಗಿದೆ. ನಮ್ಮ ಪೂರ್ವಜರ ನಡವಳಿಕೆ ಪದ್ಧತಿಗಳನ್ನು ಅರಿತುಕೊಳ್ಳಲು ಸರಿಯಾದ ಎಡೆಯಿಲ್ಲದೆ, ನಾವೆಲ್ಲಾ ಕಷ್ಟಪಡುತ್ತಿದ್ದಾಗ ಇವರು ನಮ್ಮ ತೊಂದರೆಯನ್ನೇ ಅಲ್ಲ, ಇನ್ನು ಮುಂದಕ್ಕೆ ಬರುವ ಜನಾಂಗಕ್ಕೆಲ್ಲಾ ಆಧಾರವಾಗುವಂತೆ, ನಮ್ಮ ಜನಾಂಗದ ಸೇವೆ ಮಾಡಿದ ಚಿಣ್ಣಪ್ಪನವರ ಈ ಕೆಲಸವನ್ನು ಎಷ್ಟು ಹೊಗಳಿದರೂ ಕಡಮೆಯೆಂದೇ ಹೇಳಬೇಕು.

ಇವರ ಎರಡನೆಯ ಪುಸ್ತಕವಾದ 'ಭಗವತ್ಗೀತೆಯು' ಛಂದ ಲಕ್ಷಣಗಳನ್ನು ಸಂಪೂರ್ಣ ಅನುಸರಿಸಿಲ್ಲವಾದರೂ, ಅಷ್ಟು ವಿಶಾಲವಾಗಿರುವ ನಮ್ಮ ಭಾಷೆಯಲ್ಲಿ ಅಷ್ಟು ಗೂಢಾರ್ಥಗರ್ಭಿತವಾಗಿ ಅವತರಿಸುವ ಕೃತಿಯೆಂದೆನ್ನಿಸಿಕೊಂಡಿರುವ ಗೀತೆಯನ್ನು ಪದ್ಯರೂಪದಲ್ಲಿ ಬರೆದದ್ದು ನೋಡಿದರೆ ಇವರಿಗೆ ಕೊಡಗು ಭಾಷೆಯಲ್ಲಿ ಎಂತಹ ಸ್ವಾಧೀನವೂ, ಸಾಮರ್ಥ್ಯವೂ ಇತ್ತೆಂಬುವುದು ವೇದ್ಯವಾಗುತ್ತೆ. ಇವರು ನಮ್ಮ ಜನರ ಪ್ರಯೋಜನಾರ್ಥವಾಗಿ ಗೀತೆಯನ್ನು ಬರೆದವರಾದರೂ ಇವರಿಗೆ ದೇವರ ಆರಾಧನೆಯಲ್ಲಿ ನಂಬಿಕೆ ಇರಲಿಲ್ಲವಂತೆ!

ಕೊಡಗು ದೇಶದ ಸೇವೆಯನ್ನು ಮಾಡಿದವರ ಪೈಕಿ ಇವರಿಬ್ಬರೆಂದೇ ಹೇಳಬೇಕು. ಅವರು ಸರಕಾರಿ ಉದ್ಯೋಗದಲ್ಲಿದ್ದರೂ ತನ್ನ ದೇಶವನ್ನೂ, ಜನಾಂಗವನ್ನೂ ಮರೆಯದೆ ಕೈಲಾಗುವ ಸೇವೆಯನ್ನು ಮಾಡಿರುವರು. ಇವರ ಸೇವೆಯ ಫಲವು ಪ್ರತಿಯೊಬ್ಬನಿಂದಲೂ ಅನುಭವಿಸತಕ್ಕಂತದ್ದಾಗಿದೆ.

ತಮ್ಮ ಜೀವನದಲ್ಲಿ ಅನೇಕ ಎಡರು ತೊಡರುಗಳನ್ನನುಭವಿಸಿದರಾದರೂ ದಿವಂಗತ ಚಿಣ್ಣಪ್ಪನವರು ಎಷ್ಟರ ರಾಜದ್ರೋಹಿಯಾಗದೆ ತನ್ನ ಕರ್ತವ್ಯವನ್ನು ಮನಃಪೂರ್ವಕವಾಗಿ ನಿರ್ವಹಿಸಿ, ತನ್ನ ಅಕ್ಕಪಕ್ಕದವರೂ ನೆರೆಯವರು ತನ್ನ ಯೋಗ್ಯತೆಯನ್ನು ಒಪ್ಪಿಕೊಳ್ಳುವಂತೆ ಮಾಡಿದರು.

ಇವರು ಕೆಲವು ದಿವಸ ರಜೆಯಲ್ಲಿದ್ದಾಗ್ಯೆ ತನ್ನ ಗ್ರಾಮಾಭಿವೃದ್ಧಿಗೆ ಮಾಡಿದ ಕೆಲಸಗಳು ಇವರಿಗಿದ್ದ ದೇಶಸೇವೆಯ ಉತ್ಸಾಹವನ್ನೂ, ತೋರಿಸುತ್ತದೆ. ....

. ...

ಮ.ದರಾಸು. ಪಿ. ಡಿ. ಅಯ್ಯಪ್ಪ.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಜೋಕರ್ ವರ್ಗ! ಜೀವನ್ ವರ್ಗ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು.—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು.—
152–3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

52–9

ಎಂ. ಎಸ್. ಶಿದ್ದಪ್ಪ ಬ್ರದರ್ಸ್.
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಸೆಟ್ ಬಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ...ಯುಳ್ಳ ಫೌಂಟೆನ್ ಪೆನ್‌ಗಳು.

ಮಂಡರ್ ಫೌಂಟನ್ ಪೆನ್ 1ಕ್ಕೆ ರೂ. 3 0 0
" ಬಿಗ್ ಬ್ಯಾರೆಲ್ ಪೆನ್ 1ಕ್ಕೆ 3 3 0
" ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ 3 8 0
" ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್
ಮೊಡಲ್ ಕಲರ್ ಫೌಂಟನ್ ಪೆನ್ 1ಕ್ಕೆ 3 14 0
" ಮೊಡಲ್ ಕಲರ್ ಸ್ಕ್ರೂ ಕ್ಯಾಪ್
ಫೌಂಟನ್ ಪೆನ್ 1ಕ್ಕೆ 4 2 0
" ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ
ಬ್ರವುನ್ ಕಲರ್ ಫೌಂಟನ್ ಪೆನ್ 1ಕ್ಕೆ 5 8 0
ಬಿಗ್ ಸ್ಟಾರ್ ಫೌಂಟನ್ ಪೆನ್ 1ಕ್ಕೆ 10 8 0
... ಪೆನ್ 1ಕ್ಕೆ 14 6 0, & 20 10 0
...ಪೆನ್ 1ಕ್ಕೆ 3 8 0, & 3 12
... ಫೌಂಟನ್ ಪೆನ್ 1ಕ್ಕೆ 6 4 0, & 6 12 0
...ಫೌಂಟನ್ ಪೆನ್ 1ಕ್ಕೆ 8 ... & 8 10 0

ಟೈಂ ಪೀಸ್‌ಗಳು.
ಸ್ಕ್ವೇರ್ ಆಗುವ ಸಣ್ಣ ಟೈಂಪೀಸ್ 1ಕ್ಕೆ 3 6 0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ 2 2 0
ಲಿಗರಿಯನ್ ಆಕಾರ ಟೈಂಪೀಸ್ 1ಕ್ಕೆ 6 9 0, & 6 15 0
ಲಿಗರಿಯನ್ ಸಣ್ಣ ... ಆಕಾರ ಟೈಂಪೀಸ್ 1ಕ್ಕೆ 7 2 0
ಲಿಗರಿಯನ್ ಆಕಾರ ಸಣ್ಣ ಟೈಂಪೀಸ್ ರೇಡಿಯಂ
ಡೈಲಿನದು 1ಕ್ಕೆ 8 1 0
ಬಿಗ್‌ಬೆನ್ ಆಕಾರ ಟೈಂಪೀಸ್ 1ಕ್ಕೆ 9 6 0
ಬಿಗ್‌ಬೆನ್ ಆಕಾರ ಸ್ಟ್ಯಾಂಡ್ ಇರತಕ್ಕ ...
ಸದ ಟೈಂಪೀಸ್ 1ಕ್ಕೆ 13 4 0
ಖಾತ್ರಿಯ ... ಇನ ಪಾಕೆಟ್
ವಾಚ್ 1ಕ್ಕೆ 5 10 0
... ನಮೂನೆಯಲ್ಲಿ ಎಷ್ಟು ... ಕಂಪನಿ ...
ಪಾಕೆಟ್ ವಾಚ್ 1ಕ್ಕೆ 12 4 0
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್ಮೆಂಟ್ ... ...
ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 & 12 8



ಇಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್‌ಕ್ಲಾಕ್ 1ಕ್ಕೆ 3–6–0 ಪೋಸ್ಟೇಜು ಪ್ರತ್ಯೇಕ.

... ಕೇಟಲಾಗ್ ... ಎಂ. ಎಸ್. ಶಿದ್ದಪ್ಪ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

..–16

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮಾಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು,	ಟ್ರೆಜರರ್
ಕೇಟೋಳಿರ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್,	ಸವರ

ಸೆಕ್ರೆಟರಿ

ಯನ್. ವೆಂಕಪ್ಪಯ್ಯನವರು, ಬಿ. ಎ., ಬಿ. ಎಲ್.

ತಾರೀಖು 1-7-1931

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಪಡೆದಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟಿಂತ ವಿಶೇಷ ಕಮ್ಮಿ ಖರ್ಚಿನಲ್ಲಿಯೇ ನಡೆಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ **ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.**

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರಾ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52-36

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52-43 ಗಿರಿಗಾಂವ, ಮುಂಬಯಿ.

ಮಲೇರಿಯಾ

ಮಲೇರಿಯಾನ

ಕೊಡಗಿನ ಗುಡುಗುಡು ಎಂಬ ಚಳಿ ಜ್ವರಕ್ಕೂ ಸುಡುಸುಡುವಂಥ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗೆಡ್ಡೆಗೂ ಗುಣಕರವಾದ ಮದ್ದು ಇದೆಂದು ತಿಳಿಯಿರಿ. ಇಗೋ ರಾಮಬಾಣವಾದ ಮಲೇರಿಯಾನವೇ ಸಂಪೂರ್ಣ ಜ್ವರವನ್ನು ಗುಣಪಡಿಸಿ ಗೆಡ್ಡೆಯನ್ನು ಬುಡಸಹಿತ ಕರಗಿಸಿ ಬಿಡುತ್ತದೆಂದು ಸ್ಥಿರ ನಂಬಿ. ಕ್ರಯ. ಬಾಟ್ಲಿಗೆ 1-8-0 ½ ಡಜನ್ 8-8-0, 1 ಡಜನ್ 16-8-0.

ಕಂಪೌಂಡು ಸಿರಪು ಬ್ಲಟ.

ಗುರುಗುರು ಉಬ್ಬಸ ಶ್ವಾಸದ ರೋಗದಿಂದ ಕಠಿಣ ಕೆಮ್ಮು ಕಫ ಗಟ್ಟಿಯಾಗಿ ಎಳದಾಟ ಎದೆ ಮತ್ತು ಪಾರ್ಶ್ವನೋವು ಶ್ವಾಸ ತಗಿಯುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು, ಈ ಮದ್ದಾಗಿ ಕಂಪೌಂಡು ಸಿರಪು ಬ್ಲಟ ಎಂಬದನ್ನು ತಕ್ಷಣ ತಂದು ಕುಡಿಯಲಿ ಕ್ರಯ ಬಾಟ್ಲಿಗೆ ರೂ. 3-8-0.

ಕಂಪೌಂಡು ಸಿರಪು ಬಸಲೀನ: —ಶ್ವಾಸಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿಕೊಂಡರೆ ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು ಕೆಮ್ಮು ಎದೆನೋವು ರಕ್ತ ವಿರತ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ರೋಗವು ಮುಂದರಿಯದಂತೆ ಕಾಪಾಡಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3-8-0.

ಕಂಪೌಂಡು ಸಿರಪು ಸೆಬೀನ ಸೇಪಿಯ:—ಹೆಂಗಸರ ಮೂತ್ರದ್ವಾರದಿಂದಲೂ, ಗರ್ಭದ್ವಾರದಿಂದಲೂ ಹರಿಯುವ ಬಿಳೀ ಸೆರಗು ಎಂಬ ರೋಗದಿಂದ ಸೊಂಟನೋವು ಕೈಕಾಲು ಬಚ್ಚಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಗೊಳಿಸಿ ಬಲಪಡಿಸುವುದು ಕ್ರಯ ಬಾಟ್ಲಿಗೆ ರೂ. 3-8-0.

ಕಂಪೌಂಡು ಸಿರಪು ಪೆಸಿಫೂಡ:— ಪ್ರಮೇಹವೆಂಬ ಗುಪ್ತರೋಗವನ್ನು ಪಡಕೊಂಡು, ಮೂತ್ರ ಬಿಂದು ಬಿಂದುಗಳಾಗಿ ಉರಿದ್ವಾರದೊಳಗೆ ಹುಣ್ಣು ವ್ರಣಗಳು ದುರ್ಗಂಧ ಕೂಡಿದ ಹಳದಿ ಬಣ್ಣದ ರೇಸಿಗೆ ಇತ್ಯಾದಿ ಕಠಿಣ ತರದ ರೋಗವನ್ನು ಈ ಬಲವಾದ ಸಿರಪು ಸಂಪೂರ್ಣ ಗುಣಪಡಿಸಿ ಆರೋಗ್ಯ ಕೊಡುವುದು **ಕ್ರಯ ಬಾಟ್ಲಿಗೆ ರೂ** 3-8-0.

ಶುದ್ಧ ಟಿಕ್ಯಮದ್ದುಗಳೂ ಹೋಮ್ಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಪುಟ 3 —ರ ವರೆಗೆ ಓದಿಕೊಂಡು ಬರೆಯುತಕ್ಕದ್ದು ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಬಸಲಿಗೆ ಇಡತಕ್ಕ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಬರೀದಿಗೆ ದೊರೆಯುತ್ತವೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

52-52 **Malariana Co.,** Hampankatta No 14 Mangalore

ವಿಳಾಸ —ಮಲೇರಿಯಾನ ಕಂಪೆನಿ, ಹಂಪನಕಟ್ಟೆ, ಇಗರ್ಜಿಬಳಿ, 14, ಮಂಗಳೂರು, ಪೋಸ್ಟು

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇರೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಹಮಯಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೆ· ಚೌರಿರ ಪೂವಯ್ಯನವರು,

ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಚ್ಚಯ್ಯನವರು,

ಮರೆನಾಡು—ಮೆ. ಕೇಕಿರ ಅಚ್ಚಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು (ಖಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು,

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.

ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಪ್ಪಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ ಜಿ. ಮಾದಪ್ಪಯ್ಯನವರು

ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಪೂಣಚ್ಚಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,

"ಕೊಡಗು" ಲಿಮಿಟೆಡ್,

ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್,

"ಕೊಡಗು" ಆಫೀಸು,

ಮಡಿಕೇರಿ.

Printed & published by P. I Belliappa at "Kodagu" Press Mercara for "Kodagu" Ltd.

If not delivered please return to "KODAGU" OFFICE MERCARA

ಕೊಡಗು.

ಸತ್ಯೇನ ಧೂತದಯುಯಃ ವಿದ್ಯಾ ಶೀಲ ಪ್ರಯತ್ನತಾ | ಏಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೧೧	ಮಡಿಕೇರಿ, ಸನ್ ೧೯೩೧ನೇ ಇಸವಿ ನವಂಬರ್ ತಾರೀಕು ೬ನೇ ಶುಕ್ರವಾರ.	ಸಂಚಿಕೆ ೩೩

Telegrams — "Precious"

V. Subramaniar Jeweller,

Telephone — 3145

DIAMAND MERCHANT GOLD & SILVER SMITH.

Deals in all:—
SPORTS CUPS in all pieces
MEADALS in up to date patterns
CASKETS in elegant styles

Nos 2 & 3, Kuppu muthu st
IRUVATESWARANPET,
Post Box 423, Triplicane P. O.,
MADRAS.

Deals in all:—
GEM-SET JEWELS, set with Diamonds Rubies etc.,
GOLD ARTICLES of all patterns
SILVER WARE in latest style.

52–51



ಕಾಗದ ಬರೆದರೆ ಊಗಿನ ಕ್ಯಾಟಲಾಗು ಮಾಫಿಯಾಗಿ ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುತ್ತವೆ.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.
51–8

ಕಟುಕಷಾಯ ಮಲೇರಿಯ ಜ್ವರಕ್ಕೆ:—ಇದು ಇಂಗ್ಲೀಷ್ ಮತ್ತು [illegible] ಗುಣವಾಗದಿರುವ ಮಲೇರಿಯ ಜ್ವರ [illegible] ದಿನದ ಜ್ವರ 3–4 ದಿವಸಕ್ಕೊಮ್ಮೆ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು [illegible] ದೋಷದಿಂದ ಬರುವ ಜ್ವರಗಳಿಗೆ [illegible] ಗುಣಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0, 3ಕ್ಕೆ ರೂ 4–0–0, 6ಕ್ಕೆ ರೂ 7–8–0 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ [illegible] ಹೋಗುವುದು, ಮೂತ್ರಕೋಶದ ಉರಿ [illegible] ಮೂತ್ರನಾಳದಲ್ಲಿ [illegible] ಮೂತ್ರ ನಾಳದಿಂದ [illegible] ಸುರಿಯುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, [illegible] ಮೂತ್ರ ಬರುವುದು, [illegible] ದೇಹದಲ್ಲಿ ಉರಿ [illegible] ನಾಳದಲ್ಲಿ [illegible] 1, 3 6ಕ್ಕೆ ರೂ 1–4–0 3–8–0 [illegible]

ರೋಮನಾಶಿನಿ:—ಈ ಪುಡಿಯನ್ನು ನೀರಿನಲ್ಲಿ ಕಲಸಿ [illegible] ರೋಮವಿರುವ ಭಾಗಕ್ಕೆ ಹಚ್ಚಲು ರೋಮವು [illegible] 1ಕ್ಕೆ, 6ಅಕ್ಕೆ, 3 ಡಬ್ಬಗಳಿಗೆ ರೂ 1 [illegible] 3–3–0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಉರಿ, ಕಣ್ಣುರಿ, [illegible] ನೋವು, [illegible] ಬಾರದಿರುವುದು, [illegible] ಕೂದಲನ್ನು [illegible] ಕೂದಲಿಗೆ [illegible] ಬೆಲೆ ಸೀಸೆಗೆ ರೂ 1, 3 ಸೀಸೆಗೆ 2–10–0 [illegible] ಸೀಸೆಗೆ ರೂ 2, 3 ಸೀಸೆಗಳಿಗೆ 5–8–0

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು

–26 ಕಟುಕಾಗು ಕಡಾ ಹೋಟೆಲ್

ಬಾಲಾರ್ಕಮಧು.

ನಿಮ್ಮ ಮಕ್ಕಳ [illegible] ಬಾಲಾರ್ಕ ಮಧುವನ್ನು [illegible]



[illegible] ಬಲವೂ ಬರುವವು [illegible] ಮಧುರವಾಗಿದೆ [illegible] ಮಕ್ಕಳು [illegible]

ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ,
(ಮೈಸೂರು ಸಂಸ್ಥಾನ)

52–4

ಕೊಡಗು.

ಸನ್ ೧೯೩೧ನೇ ಇಸವಿ

ನವಂಬರ್ ತಾ ೬ನೇ ಶುಕ್ರವಾರ.

ಕೊಡಗಿನಲ್ಲಿ ಸಹಕಾರಿ ಚಳವಳ.

ಕೊಡಗಿನಲ್ಲಿ ಸಹಕಾರಿ ಸಂಘಗಳ ಚಟುವಟಿಕೆಯು ಇರಬೇಕಾದಂತೆ ಇಲ್ಲವೆಂಬ ಕಾರಣದಿಂದ ಅದನ್ನು ಹೇಗೆ ದುರಸ್ತುಪಡಿಸಬೇಕೆಂಬುದನ್ನು ಯೋಚಿಸುವ ಬಗ್ಗೆ ಕೊಡಗಿನ ಫೆಡರೇಶನಿನವರು ಮತ್ತು ಸಹಕಾರಿಸಂಘಗಳ ರಜಿಸ್ಟ್ರಾರವರು ಫೆಡರೇಶನಿನ ಕಾರ್ಯಕಾರಿ ಮಂಡಲಿಯವರನ್ನು, ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳನ್ನು ಸೇರಿಸಿ ತಾ. 31—10—31ರಲ್ಲಿ ಮಡಿಕೇರಿಯಲ್ಲಿ ಒಂದು ಮೀಟಿಂಗು ಮಾಡಿದರು. ಸಹಕಾರಿ ಇಲಾಖೆಯ ಅಧಿಕಾರಿಗಳಲ್ಲದೂ ಹಾಜರಿದ್ದರು. ಸಹಕಾರ ಇಲಾಖೆಯ ಅಧಿಕಾರಿಗಳೂ, ಅಧಿಕಾರಿಗಳಲ್ಲದ ಸಹಕಾರಿಗಳೂ ಜಗಿಂದಾಗ್ಯೆ ಸಹಕಾರ ಚಳವಳದ ಸ್ಥಿತಿಯನ್ನು ವಿಮರ್ಶಿಸಿ ಮುಂದಿನ ಅಭಿವೃದ್ಧಿಗೆ ಸಲಹೆಗಳನ್ನು ಯೋಚಿಸುವದು ಯುಕ್ತವಾಗಿದೆ.

ಕೊಡಗಿನ ಅನೇಕ ಸಂಘಗಳು ತೃಪ್ತಿಕರವಾಗಿ ಕೆಲಸ ಮಾಡದರಿಂದ ಸಿ. ಡಿ. ಕ್ಲಾಸ್‌ಗಳಿಗೆ ಸೇರಿಸಲ್ಪಟ್ಟಿವೆ. ಅಂಥಾ ಸಂಘಗಳನ್ನು ಎರಡು ಮೂರನ್ನು ಒಟ್ಟುಗೂಡಿಸಿ ಒಂದೊಂದು ಸಂಘವಾಗಿ ಮಾಡಬಹುದೋ ಎಂಬದು ಚರ್ಚೆಯಾದ ವಿಷಯಗಳಲ್ಲಿ ಒಂದಾಗಿತ್ತು ಎಂತ ತಿಳಿಯುತ್ತೇವೆ. ಸಂಘಗಳ ಕಮಿಟಿ ಮೆಂಬರುಗಳಾಗಲು ಯೋಗ್ಯರಾದವರು ಸಂಘಗಳಲ್ಲಿ ಸಿಕ್ಕುವುದಿಲ್ಲ. ಸಂಘದ ಕಮಿಟಿಯವರೇ ಸಾಲ ತೆಗೆದುಕೊಂಡೂ ಇರುತ್ತಾರೆ. ಹೀಗಿರುವಾಗ ಆಡಳಿತವು ಸುಸ್ಥಿತಿಯಲ್ಲಿ ನಡೆ ಎಂಬ ಇತ್ಯಾದಿ ಕಾರಣಗಳಿಂದ ಸಂಘಗಳನ್ನು ಒಟ್ಟುಗೂಡಿಸುವ ಯೋಚನೆ ನಡೆದಿದ್ದಾಗಿದೆ. ಈಗ ಒಟ್ಟು ಪ್ರಪಂಚದಲ್ಲೇ ಆರ್ಥಿಕ ಸ್ಥಿತಿಯು ಹೀನವಾಗಿರುವಾಗ್ಯೆ ಕೊಡಗಿನ ಸಹಕಾರಿ ಸಂಘಗಳು ಸಾಲದ ವಸೂಲಿಯಲ್ಲಿ ಹಿಂದೆ ಬಿದ್ದಿರುವುದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ ಈ ವರ್ಷದ ಅಥವಾ ಹಿಂದೆ ಮೂರು ನಾಲ್ಕು ವರ್ಷಗಳ ಸಂಘಗಳ ಸ್ಥಿತಿಯನ್ನು ನೋಡಿ, 'ಗ್ರಾಮಕ್ಕೊಂದು ಸಂಘ, ಸಂಘಕ್ಕೊಂದು ಗ್ರಾಮ' ಎಂಬ ಅನುಕೂಲ್ಯವಾದ ಸಹಕಾರಿ ತತ್ವಕ್ಕೆ ವಿರೋಧವಾಗಿ ಗ್ರಾಮಕ್ಕೊಂದು ಇರುವ ಸಂಘಗಳನ್ನು 2, 3 ಗ್ರಾಮಗಳಿಗೊಂದು ಸಂಘವನ್ನು ಮಾಡುವ ಯೋಚನೆಯನ್ನು ಮಾಡುವುದು ಯುಕ್ತವಲ್ಲ. ಹಾಗೆಂತಲೇ ಮೊನ್ನೆ ನಡೆದ ಮೀಟಿಂಗಿನಲ್ಲಿ ತೀರ್ಮಾನವಾದದ್ದು ತೃಪ್ತಿಕರ.

ಗ್ರಾಮ ಗ್ರಾಮಗಳಿಗೆ ಸಂಘಗಳಿರುವುದಾದರೆ ಸಂಘಗಳ ಆಡಳಿತ ನಡಿಸಲು ಸರಿಯಾದ ಜನರು ದೊರೆಯುವುದು ಕಷ್ಟವಾಗಿದೆ ಎಂಬ ಆಕ್ಷೇಪಣೆಯನ್ನು ಎಲ್ಲಾ ಸಂಘಗಳು ಮನಸಿಗೆ ತೆಗೆದುಕೊಳ್ಳಬೇಕು. ಕೊಡಗಿನ ಹೆಚ್ಚಿನ ಸಂಘಗಳಲ್ಲಿ ಆಡಳಿತ ನಡಿಸಲು ಆರ್ಹರಾದವರಿಲ್ಲವೆಂಬದನ್ನು ಒಪ್ಪಲಾಗುವುದಿಲ್ಲ. ಆರ್ಹರಾದ ಕಮಿಟಿ ಮೆಂಬರುಗಳು ದೊರಕದಿರುವ ಸಂಘಗಳು ನಾಲ್ಕಾರು ಇರಬಹುದು. ಹೆಚ್ಚಿನ ಸಂಘಗಳಲ್ಲಿ ಯೋಗ್ಯ ಕಮಿಟಿ ಮೆಂಬರುಗಳಿಲ್ಲದೆ ಕೆಲಸವು ಸುಸಾಂಗವಾಗಿರುವುದಿಲ್ಲ. ಮೆಂಬರುಗಳು ಬೆಳೆಯುವ ಉತ್ಪತ್ತಿಗೆ ಬೆಲೆ ದೊರೆಯದಿರುವುದೇ ಮುಖ್ಯ ಕಾರಣ. ಸಂಘಗಳ ಕಮಿಟಿ ಮೆಂಬರುಗಳೂ ಮತ್ತು ಮೆಂಬರುಗಳೂ ಸಹ ತಮ್ಮ ತಮ್ಮ ಕರ್ತವ್ಯವನ್ನು ಮಾಡಬೇಕಾದಂತೆ ನಡಿಸಿರುವುದಿಲ್ಲ. ಕೊಡಗಿನ ಗ್ರಾಮಗಳಲ್ಲಿ ಸಣ್ಣ ಸಣ್ಣ ಪಟ್ಟಿನ ಸಂಘಗಳ ಆಡಳಿತ ನಡಿಸಲು ಆರ್ಹರು ಇಲ್ಲವೆಂಬ ಆಕ್ಷೇಪಣೆಯನ್ನು ಸಂಘಗಳ ಮೆಂಬರುಗಳು ಹೋಗಲಾಡಿಸಿಕೊಳ್ಳಬೇಕು.

ಸಂಘಗಳಿಂದ ಬ್ಯಾಂಕಿಗೆ ಸಲ್ಲಬೇಕಾದ ವಾಯಿದೆ ಮೀರಿದ ಸಾಲಗಳಿಗೆ ಹೆಚ್ಚಿನ ವಾಯಿದೆ ಕೊಡಬೇಕೋ ಎಂಬದು ಇನ್ನೊಂದು ಚರ್ಚಿಸಲ್ಪಟ್ಟ ವಿಷಯ. ಯೂನಿಯನ್ನಿನವರೂ, ಬ್ಯಾಂಕಿನ ಡೈರೆಕ್ಟರುಗಳೂ ಇಂಥಾ ಸಂಘಗಳ ಸ್ಥಿತಿಯನ್ನು ಪರಿಶೋಧಿಸಿ ಈ ಕೋರಿಕೆಯ ಮೇಲೆ ಶಿಫಾರಸ್ಸು ಮಾಡಬೇಕೆಂದು ತೀರ್ಮಾನವಾಯಿತೆಂದು ತಿಳಿಯುತ್ತೇವೆ. ದವಸ ಧಾನ್ಯಗಳ ಬೆಲೆ ಬಿದ್ದಿರುವ ಈ ವರ್ಷದಲ್ಲಿ ಸುಮಾರು 25,000 ರೂ. ಮಾತ್ರ ವಾಯಿದೆ ಎರಡು ಅಷ್ಟೊಂದು ಆಶ್ಚರ್ಯವಲ್ಲ. ಈ ವರ್ಷ ಬರಬೇಕಾಗಿದ್ದ ಕಂತು ಮೊಬಲಗು ಸುಮಾರು 1,10,000 ರೂ. ಆಗಿತ್ತು. ಅನೇಕ ಸಂಘಗಳು ತಮ್ಮ ತಮ್ಮ ಕಂತನ್ನು ಪೂರ್ತಿಯಾಗಿ ಕಟ್ಟಿರುವಾಗ ಕೆಲವು ಮಾತ್ರ ಹಿಂದೆ ಬಿದ್ದಿರುವುದು ನೋಡಿದರೆ ದವಸಕ್ಕೆ ಬೆಲೆ ಇಲ್ಲದಿರುವುದು ಒಂದೇ ಕಾರಣವಲ್ಲವೆಂದು ಸ್ಪಷ್ಟವಾಗುತ್ತದೆ. ಮೆಂಬರುಗಳಿಂದ ವಸೂಲಾಗಬೇಕಾದ ಕಂತನ್ನು ವಸೂಲು ಮಾಡಲು ಕಮಿಟಿ ಮೆಂಬರುಗಳು ತೆಗೆದುಕೊಳ್ಳಬೇಕಾದ ತೊಂದರೆ ತೆಗೆದುಕೊಂಡಿದ್ದಾರೋ ಎಂಬ ಇತ್ಯಾದಿ ಸಂಗತಿಗಳನ್ನು ಆಲೋಚಿಸಲು ತೀರ್ಮಾನಿಸಿದ್ದು ಯುಕ್ತವಾಗಿದೆ.

ಫೆಡರೇಶನಿನಲ್ಲಿ ಜಮೆಯಾಗುವ ಸುಪರ್‌ವಿಜನ್ ಫಂಡಿನಿಂದ ಯೂನಿಯನ್‌ಗಳ ಕೆಲಸಕ್ಕಾಗಿ ಹಣ ಸಹಾಯ ಕೊಡಬೇಕೆಂತ ಆದ ತೀರ್ಮಾನವು ಇನ್ನೊಂದು ಬಗೆ. ಮಧ್ಯವರ್ತಿ ಸಂಸ್ಥೆಯಾಗಿರುವ ಫೆಡರೇಶನಿನವರು ಮೂಲ ಸಂಘಗಳ ಮೇಲ್ವಿಚಾರದ ಕೆಲಸವನ್ನು ತೃಪ್ತಿಕರವಾಗಿ ನಡಿಸಲು ಸಾಧ್ಯವಿಲ್ಲ. ಅದಕ್ಕಾಗಿಯೇ ಸಣ್ಣ ಸಣ್ಣ ಸಂಘಗಳ ಮೇಲ್ವಿಚಾರಕ್ಕಾಗಿಯೂ ಯೂನಿಯನ್‌ಗಳಿರುವುದು. ಅಂಥಾ ಕೆಲಸವು ತೃಪ್ತಿಕರವಾಗಿ ನಡಿಯಬೇಕಾದರೆ ಯೂನಿಯನ್ ಕಮಿಟಿ ಮೆಂಬರುಗಳಿಗೆ ಪ್ರಯಾಣದ ಖರ್ಚನ್ನಾದರೂ ಕೊಡಬೇಕು. ಈ ಬಗ್ಗೆ ಯೂನಿಯನ್ನಿಗೆ ಹಣವನ್ನು ಒದಗಿಸಿಕೊಡಬೇಕಾದದ್ದು ಫೆಡರೇಶನಿನ ಕರ್ತವ್ಯವಾಗಿದೆ.

ಮಾರಾಟದ ಮತ್ತು ಕೊಂಡುಕೊಳ್ಳುವ ಸಹಕಾರಿ ಸ್ಟೋರುಗಳ ಮೇಲ್ವಿಚಾರಕ್ಕಾಗಿಯೇ ಒಬ್ಬ ಸುಪರ್‌ವೈಜರನ್ನು ನೇಮಿಸಬೇಕೆಂಬದು ಇನ್ನೊಂದು ತೀರ್ಮಾನ. ಸಹಕಾರಿ ಚಳವಳವು ಬರೇ ಹಣ ಸಾಲ ಒದಗಿಸಿಕೊಡುವುದಕ್ಕೆ ಮಾತ್ರ ವ್ಯಾಪಿಸಿದರೆ ಸಾಲದು. ರೈತರು ಬೆಳಿಸುವ ದವಸ ಧಾನ್ಯಗಳ ಮಾರಾಟಕ್ಕೂ ಮತ್ತು ರೈತರಿಗೆ ಬೇಕಾದ ಸಾಮಾನುಗಳನ್ನು ಸುಲಭ ದರದಲ್ಲಿ ಕೊಂಡುಕೊಳ್ಳಲಿಕ್ಕೂ ಸಹಕಾರಿ ತತ್ವವನ್ನು ಉಪಯೋಗಿಸಿಕೊಳ್ಳಬೇಕಾದದ್ದು ಬಹಳ ಅವಶ್ಯ. ಇತ್ತೀಚೆಗೆ ಕೊಡಗಿನಲ್ಲಿ ಇಂಥಾ ಸಹಕಾರಿ ಸ್ಟೋರುಗಳು ಹೆಚ್ಚುತ್ತಲಿವೆ. ಆದರೆ ಇಂಥಾ ಸಂಸ್ಥೆಗಳ ಕಾರ್ಯವು ಪ್ರಮಾಣಿಕವಾಗಿ ನಡಿಸಲ್ಪಡಲು ಶಕ್ತ ಜನರು ಮುಂದೆ ಬರುವುದು ಕಷ್ಟ. ಆದ್ದರಿಂದ ಇಂಥಾ ಸಂಸ್ಥೆಗಳನ್ನು ಸರಕಾರಿ ಇಲಾಖೆಯವರೂ, ಫೆಡರೇಶನಿನವರೂ ಜಾಗರೂಕತೆಯಿಂದ ಮೇಲ್ವಿಚಾರ ನಡಿಸಬೇಕು. ಆದ್ದರಿಂದ ಒಬ್ಬ ಅನುಭವಸ್ಥ ಸುಪರ್‌ವೈಜರನ್ನು ಇದೇ ಕೆಲಸಕ್ಕೆ ನೇಮಿಸಬೇಕೆಂತ ಮಾಡಿದ ತೀರ್ಮಾನವು ಅವಶ್ಯವಾದದ್ದು.

ಬದಲಾವಣೆ ನಿಜವಾದದ್ದೋ?

ಕಳೆದ ಎರಡು ವಾರಗಳಲ್ಲಿ ದುಂಡು ಮೇಜು ಪರಿಷತ್ತನ್ನು ಕುರಿತು ಲಂಡನ್ನಿನಿಂದ ಬಂದ ವರ್ತಮಾನಗಳಿಂದ ರಾಜಕೀಯ ವಾತಾವರಣವು ಕಪ್ಪಾದ ಮೋಡಗಳಿಂದ ಕವಿದುಕೊಂಡಿದ್ದಂತೆ ತೋರುತ್ತಿತ್ತು. ಆದರೆ ಈ ವಾರದ ವಾರ್ತೆಯು ಸ್ವಲ್ಪಮಟ್ಟಿಗೆ ನಿರಾಶೆಯನ್ನು ಕಡಿಮೆ ಮಾಡುವಂಥಾದ್ದಾಗಿದೆ. ಕಳೆದ ವಾರ ಬ್ರಿಟಿಷ್ ಪಾರ್ಲಿಮೆಂಟಿನ ಜನರಲ್ ಚುನಾವಣೆಯ ಗಲಿಬಿಲಿಯು ಬ್ರಿಟನಲ್ಲಿ ಹೇಗೆ ಜೋರಾಗಿತ್ತೋ ಹಾಗೆಯೇ ಹೊಸ ಸರಕಾರವು ಅಧಿಕಾರಕ್ಕೆ ಬಂದೊಡನೆ ದುಂಡು ಮೇಜು ಪರಿಷತ್ತು ಅಂತ್ಯ ಗೊಳಿಸಲ್ಪಡುವದೆಂಬ ವರ್ತಮಾನವು ಹಿಂದೀಯರ ಮನಸ್ಸಿನಲ್ಲಿ ಗಲಿಬಿಲಿಯನ್ನು ಹುಟ್ಟಿಸಿತ್ತು. ಆದರೆ ಈ ವಾರ, ಕಳೆದ ಚುನಾವಣೆಯಲ್ಲಿ ನೇಶನಲ್ ಸರ್ಕಾರದ ಪಕ್ಷವೇ ಬಹುಮತದಿಂದ ಜಯವನ್ನು ಹೊಂದಿರುವದೆಂಬ ವಾರ್ತೆಯೊಂದಿಗೆ, ದುಂಡು ಮೇಜು ಪರಿಷತ್ತನ್ನು ಮುಂದುವರಿಸಲಾಗುವದೆಂಬ ಸುದ್ದಿಯೂ ಬಂದಿದೆ

'ಕಳೆದ ದುಂಡು ಮೇಜು ಪರಿಷತ್ತಿನಲ್ಲಿ ಪ್ರಾರಂಭವಾದ ಕಾರ್ಯವನ್ನೇ ಇನ್ನು ಮುಂದಕ್ಕೂ ಮುಂದರಿಸಬೇಕಲ್ಲದೆ, ಇಂಡಿಯಾ, ಬ್ರಿಟನ್ ಮತ್ತು ಬ್ರಿಟಿಷ್ ಸಾಮ್ರಾಜ್ಯಕ್ಕೆ ಪ್ರಯೋಜನವಾಗುವಂಥ ಮತ್ತು ಜಾಯಮಾನ ಆಗುವಂಥ ತೀರ್ಮಾನಕ್ಕೆ ಬರು[illegible] ಸ್ಥಿರಪಡಿಸಬೇಕೆಂತಲೂ' ಪ್ರಧಾನ ಮಂತ್ರಿಯವರು ವೈಸರಾಯರವರಿಗೆ ತಂತಿವಾರ್ತೆ ಕಳುಹಿಸಿದ್ದಾರೆ. ಇದಲ್ಲದೆ ಮಿ. ವೆಜ್ಜ್‌ವುಡ್ ಬೆನ್‌ರವರು ಹಿಂದೂಸ್ಥಾನದ ಸಮಸ್ಯೆಯನ್ನು ಕುರಿತು ಈಗ ಧೀರ್ಘಾಲೋಚನೆ ಮಾಡುತ್ತಿರುವರೆಂತಲೂ, ದುಂಡು ಮೇಜು ಪರಿಷತ್ತಿನ ಪ್ರಾಮುಖ್ಯ ಮೆಂಬರುಗಳಾದ ಮಹಾತ್ಮ ಗಾಂಧಿ, ತೇಜ್ ಬಹದ್ದೂರ್ ಸಪ್ರು, ಆಗಾ ಖಾನ್, ಲಾರ್ಡ್ ಇರ್ವಿನ್ ಮತ್ತು ಸರ್ ಸ್ಯಾಮುವೆಲ್ ಹೋರ್ ಮೊದಲಾದವರನ್ನು ಕಂಡು ಸಂಭಾಷಣೆ ನಡಿಸಿರುವರೆಂತಲೂ ತಿಳಿಯಬರುತ್ತದೆ. ಚುನಾವಣೆಯ ಗಲಾಟೆಯಿಂದಲೋ ಅಥವಾ ಇಂಡಿಯಾದ ಸಮಸ್ಯೆಯು ಅಷ್ಟೊಂದು ಪ್ರಾಮುಖ್ಯವಾದದಲ್ಲವೆಂತಲೋ ಮಂತ್ರಿಯವರು ಕೆಲವು ದಿವಸದ ವರೆಗೆ ದುಂಡು ಮೇಜು ಪರಿಷತ್ತಿನ ಕಡೆ ತಿರುಗಿ ನೋಡಲಿಲ್ಲ. ಅವರು ಈಗ ಪುನಹ ಸರ್ಕಾರವೆಂಬಿಗೆ ಆರಿಸಲ್ಪಟ್ಟು ಮಂತ್ರಿ ಮಂಡಲಿಯನ್ನು ರಚಿಸುವ ಜವಾಬ್ದಾರಿಯನ್ನೂ, ಮುಂದಿನ ಸರ್ಕಾರವನ್ನು ನಡಿಸುವ ಭಾರವನ್ನೂ ಹೊತ್ತುಕೊಳ್ಳಬೇಕಾಗಿರುವದರಿಂದ ಆಡಳಿತದಲ್ಲಿ ಮುಖ್ಯ[illegible]ಕ್ಕೆ ಜುಚ್ಚುತ್ತಿರುವ ಹಿಂದೂಸ್ಥಾನದ ಸಮಸ್ಯೆಯನ್ನು ಪರಿಹಾರ ಮಾಡಲು ಸುಲಭ ಸಾಧ್ಯವಲ್ಲವೆಂದು ಅವರಿಗೆ [illegible] ಬಹುದು.

ಫೆಡರಲ್ ಸ್ಟ್ರಕ್ಚರ್ ಕಮಿಟಿಯವರು ಈ ವರೆಗಿನ ಚರ್ಚೆಯನ್ನು ಕುರಿತು ಅದರ ಅಧ್ಯಕ್ಷರಾದ [illegible] ಶ್ಯಾಂಕಿಯವರು ತಯಾರಿಸಿದ ವರದಿಯನ್ನು ಈಗ ಸಭೆಯವರು ಆಲೋಚಿಸುತ್ತಿರುವರು. ಇದರಲ್ಲಿ [illegible] (ಫೆಡರಲ್) ನ್ಯಾಯವಿಧಾಯಕ ಸಭೆಗಳ ರಚನೆ, [illegible] ಮುಂತಾದ ವಿಷಯಗಳೂ, ಫೆಡರಲ್, ಫೈನಾನ್ಸ್, [illegible]ಡರಲ್ ಕೋರ್ಟು ಮೊದಲಾದ ಸಂಗತಿಗಳೂ [illegible] ಕಾಂಗ್ರೆಸ್ಸಿನ ಪ್ರತಿನಿಧಿಯಾದ ಮಹಾತ್ಮ ಗಾಂಧಿಯ[illegible] ವರದಿಯ ಶಿಫಾರಸ್ಸುಗಳಲ್ಲಿ ಕೆಲವನ್ನು ವಿರೋಧಿಸಿ[illegible]ಯ ಕೊಟ್ಟಿರುವರು. ಆದರೆ ಇವು ಅಷ್ಟೊಂದು ಮ[illegible]ದ ವಿಷಯಗಳಲ್ಲದ್ದರಿಂದ ಪರಿಷತ್ತಿನ ಜಯವೂ, [illegible] ಇವುಗಳಿಂದ ಗೊತ್ತಾಗುವುದಿಲ್ಲ. ಪ್ರಾಮುಖ್ಯ[illegible]ವಾದ ಸೈನ್ಯ, ಪರದೇಶಗಳ ಸಂಬಂಧ ಮತ್ತು ಆರ್ಥಿ[illegible]ಕೆಗಳನ್ನು ಇನ್ನೂ ಮುಟ್ಟಿರುವುದಿಲ್ಲ. ಇವುಗಳನ್ನು[illegible]ತು ಬರುವ ವಾರ ಚರ್ಚೆಯು ನಡೆಯುವುದೆಂತಲೂ[illegible] ಮಂತ್ರಿಯವರು ಸರಕಾರದ ಅಭಿಪ್ರಾಯವನ್ನು ಬಹಿ[illegible]ಸುವರೆಂತಲೂ ವರ್ತಮಾನವಿದೆ. ಇದು ನಿಜವಾದ[illegible]ತ್ತಿನ ಫಲಿತಾಂಶವು ಆಗ್ಗೆ ಗೊತ್ತಾಗುವದು. [illegible] ಪ್ರಾರಂಭದಿಂದಲೇ ಒತ್ತಿ ಹೇಳುತ್ತಿರುವಂತೆ, ಹಿಂದಿ[illegible] ಆಡಳಿತದಲ್ಲಿ ಸ್ವಾತಂತ್ರ್ಯವನ್ನು ಬ್ರಿಟಿಷರು ಎಷ್ಟರ [illegible] ಬಿಟ್ಟು ಕೊಡ ತಕ್ಕವೆಂಬದನ್ನು ಸರಕಾರದವರು ತಿಳಿ[illegible]ಹ ಪರಿಷತ್ತಿನ ಕಾರ್ಯವನ್ನು ಮುಂದರಿಸುವುದು ನಿ[illegible] ಜನವೆಂಬ ವಿಷಯದಲ್ಲಿ ಸಂಶಯವೇನೂ ಇಲ್ಲ. ಈ [illegible]ಲ್ಲಿ ಇಷ್ಟರ ವರೆಗೆ ಮೌನವನ್ನು ತಾಳಿದ್ದ ಬ್ರಿಟಿಷ್ ಸ[illegible]ರದವರು ಈಗ ತಮ್ಮ ಅಭಿಪ್ರಾಯವನ್ನು ಸೂಚಿಸಲು [illegible] ಮಾನಿಸಿರುವರೆಂಬದು ಶುಭ ವಾರ್ತೆಯೇ ಸರಿ. ಆದ[illegible] ವಾರ್ತೆಯು ನಿಜವಾದದ್ದೋ ಎಂಬ ಸಂಶಯಕ್ಕೆ ಎಡೆ[illegible]ದಿಲ್ಲ. ಇಷ್ಟರ ವರೆಗಿನಂತೆ ಬ್ರಿಟಿಷ್ ಮುಖ್ಯ ಅಧಿ[illegible]ಗಳು ದಿನ ಸೂಚಿತ್ತಾ ಬರದೆ, ಇಂಡಿಯಾಕ್ಕೆ ಎಷ್ಟರ ಮ[illegible] ಸ್ವಾತಂತ್ರ್ಯ ಕೊಡಲು ತಯಾರಿರುವರೆಂಬದನ್ನು ಬೇಗನೆ [illegible]ಸಿದ್ದೇ ಆದರೆ ಮುಂದಿನ ಯಾವ ಕಾರ್ಯಕ್ಕೂ ಅನು[illegible]ವಾಗುವುದು. ಬ್ರಿಟಿಷರು ಸ್ವಾತಂತ್ರ್ಯವನ್ನು ಕೊಡದಿದ್ದರೆ ಅದನ್ನು ತೆಗೆದುಕೊಳ್ಳಲು ಎಂಥಾ ಕಷ್ಟ ನಷ್ಟಗಳಾದರೂ ಅನುಭವಿಸಲು ಸೊಂಟಗಟ್ಟಿ ನಿಂತಿರುವ ಹಿಂದೂಸ್ಥಾನಕ್ಕೆ ತನ್ನ ಮುಂದಿನ ಕಾರ್ಯಕ್ರಮವನ್ನು ಯೋಚಿಸಲು ಬೇಗನೆ ಅವಕಾಶ ಮಾಡಿಕೊಟ್ಟಂತಾಗುವುದು

ಡಾಕ್ಟರ್ ಸೈಯ್ಯದ್ ಮಹಮ್ಮದರು

ಒಂದು ಭಾಷಣದಲ್ಲಿ ಹೇಳಿರುವುದೇನೆಂದರೆ.

ಕಾಂಗ್ರೆಸಿನ ಹೋರಾಟವು ಶೀಘ್ರದಲ್ಲೇ ಪ್ರಾರಂಭವಾಗುವಂತಿದೆ. ದುಂಡು ಮೇಜು ಪರಿಷತ್ತು ಸಂಪೂರ್ಣವಾಗಿ ನಿಷ್ಫಲವಾಗುವಂತಿದೆ. ಬ್ರಿಟಿಷ್ ಸರ್ಕಾರವು ಅಡಿದಂತೆ [illegible]ಸುತ್ತದೋ ಎಂಬ ಸಂಶಯವು ಬಲವಾಗುವಂತಿದೆ. [illegible]ಭದಿಂದಲೇ ಲಂಡನಿನಲ್ಲಿ ಒಗ್ಗಟ್ಟಿಗೆ ಬರಲು ಸಾಧ್ಯವಿಲ್ಲ[illegible] ಒಬ್ಬರಿಗೊಬ್ಬರಿಗೆ ವ್ಯತಿರಿಕ್ತವಾದ ಅಭಿಪ್ರಾಯವಿರುವವರನ್ನು ಲಂಡನಿನಲ್ಲಿ ಒಟ್ಟುಗೂಡಿಸುವ ಏರ್ಪಾಡು ನಡಿದಿದೆ. [illegible]ಭಿದ ಹುಟ್ಟಬೇಕೆಂತಲೇ ಪ್ರತಿನಿಧಿಗಳನ್ನು ಸರ್ಕಾರವು ಆರಿಸಿರುವಂತೆ ತೋರುತ್ತದೆ.

ಪುನಹ ಹೋರಾಟವು ಪ್ರಾರಂಭವಾದರೆ ಸಫಲವಾಗದು ಎಂಬದಕ್ಕೆ ಏನೂ ಕಾರಣವಿಲ್ಲ. ಬ್ರಿಟಿಷ್ ಸಾಮ್ರಾಜ್ಯವು ಬಹಳ ಬಲವಾದ ಸಾಮ್ರಾಜ್ಯವೇನೋ ಹೌದು. ಆದರೆ ಸ್ವಾತಂತ್ರ್ಯವನ್ನು ಸಂಪಾದಿಸಲು [illegible] ಸಂಕಲ್ಪ ಮಾಡಿದ ಜನಾಂಗಕ್ಕೆ ಎದುರಾಗಲು ಬ್ರಿಟಿಷ್ ಸಾಮ್ರಾಜ್ಯಕ್ಕಾದರೂ ಬಲವಿಲ್ಲ. ಅದೂ ಅಲ್ಲದೆ ಬ್ರಿಟಿಷ್ ಸಾಮ್ರಾಜ್ಯದ ಇಳಿತವು ಪ್ರಾರಂಭವಾದಂತೆ ತೋರುತ್ತದೆ. [illegible]ದರ ಅಧಿಕ ರಚನೆಯು ಕೆಟ್ಟಂತೆ ಕಂಡು ಬರುತ್ತದೆ. 19[illegible]ರಿಂದ 1927ರ ವರೆಗೆ ಪ್ರಪಂಚದ ಬೇರೆ ಭಾಗಗಳಿಂದ ಹೊ[illegible] ಹೋಗುವ ವ್ಯಾಪಾರ ಸಾಮಾನುಗಳು ಶೇಕಡ 18ರಷ್ಟು [illegible]ಚ್ಚಾಗಿರುವಾಗ ಇಂಗ್ಲೆಂಡಿನಿಂದ ಹೊರಗೆ ಹೋಗುವ [illegible] ಮಾನು ಶೇಕಡ 21ರಷ್ಟು ಕಡಿಮೆಯಾಗಿದೆ. ರಾಜಕೀಯ [illegible]ಷಯದಲ್ಲಿ ಇಂಗ್ಲೆಂಡಿಗೆ ಇದ್ದ ಹೆಸರೆಲ್ಲ ಹೊರಟು ಹೋಗಿದೆ. [illegible] ಇರುವ ಸ್ವಾಭಾವಿಕ ಉತ್ಪತ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದರಲ್ಲಿಯೂ, ಸಮುದ್ರಯಾನದಲ್ಲಿಯೂ ಇಂಗ್ಲೆಂಡ್ ಅಮೇರಿಕಾದ ಮುಂದೆ ನಿಲ್ಲಲು [illegible] ಇಲ್ಲದಾಗಿದೆ. ಆದರೆ ಮುಂದಿನ ಸಾಲಿನಲ್ಲಿ ಗಳೀ, [illegible] ಸಾಲಿನಲ್ಲಿಗಳೀ ಇಂಗ್ಲಿಷರು ಕಡೆವರೆಗೂ ಹೋರಾಡ[illegible]ರುವರಲ್ಲ. ಎದುರು ಪಕ್ಷದವರೂ ತಮ್ಮಂತೆಯೇ [illegible] ದುಡಿ ಹೋರಾಡುವವರೆಂತ ತಿಳಿದ ವಿನಹ ಇಂಗ್ಲಿಷರು [illegible] ಕೊಡರು. ಹಿಂದೂಸ್ಥಾನವು ಸ್ವರಾಜ್ಯ ಸಂಪಾದನೆಗೆ ಮಾಡುವ ದೃಢ ಸಂಕಲ್ಪವು ಬ್ರಿಟಿಷರಿಗೆ ಇನ್ನೂ ತಿಳಿದಿರುವಂತೆ ಕಾಣುವುದಿಲ್ಲ.

(೩ನೇ ಪುಟದಲ್ಲಿ ಮುಂದುವರಿದಿದೆ.)

"ಗಾಂಧಿ ಮಾವ"

(ಶ್ರೀಯುತ ಮಹದೇವ ದೇಸಾಯರು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬರೆದುದರ ಅನುವಾದ)

ಗಾಂಧೀಜೀಯವರು ಈಗ ಲಂಡನ್ ನಗರದಲ್ಲಿ ಬಿಡಾರ ಮಾಡಿಕೊಂಡಿರುವ 'ಬೋ' ಎಂಬ ಭಾಗದಲ್ಲಿರುವ ಸಣ್ಣ ಮಕ್ಕಳಿಂದ ಸಂಪಾದಿಸಿಕೊಂಡಿರುವ ಹೆಸರು. ಈ ಹೆಸರನ್ನು ಹೇಗೆ ಸಂಪಾದಿಸಿಕೊಂಡರೆಂಬುವುದನ್ನೂ ಮತ್ತು ಈ ಸಣ್ಣ ಮಕ್ಕಳೊಡನೆ ಗಾಂಧಿಜೀಯವರ ಸ್ನೇಹವು ಹೇಗೆ ಬೆಳೆಯಿತೆಂಬುವುದನ್ನೂ ಇಲ್ಲಿ ಸಂಕ್ಷೇಪವಾಗಿ ವಿವರಿಸುತ್ತೇನೆ. ಗಾಂಧಿಜೀಯವರಿಗೆ 'ಗಾಂಧಿ ಮಾವ' ಎಂಬ ಪ್ರೀತಿಯ ಹೆಸರನ್ನು ಕೊಟ್ಟಿರುವ ಮಗುವಿಗೆ ಮೂರೇ ವರ್ಷ ವಯಸ್ಸು! ಕಿಂಗ್ಸ್ಲೀ ಹಾಲ್‌ಗೆ ಸೇರಿದ 'ಮಕ್ಕಳ ಮನೆ' ಯಲ್ಲಿರುವ ಈ ಮಗು. ಗಾಂಧಿಯವರನ್ನು ನೋಡಿದಂದಿನಿಂದ ಆ ಮಕ್ಕಳ ಕನಸು ಮನಸುಗಳಲ್ಲೆಲ್ಲಾ ಆತನೇ ಸುಳಿದಾಡುತ್ತಿದ್ದಾನೆ.

"ಅವನ್ಯಾಕೆ ಗಾಂಧಿ ತಿನ್ನುವುದೇನು? ಅವನು ಬೋಳುಗ ನ್ನೇಕೆ ಹಾಕಿಕೊಳ್ಳುವುದಿಲ್ಲವೊ?" ಇಂಥವೇ ಅನೇಕಾನೇಕ ಪ್ರಶ್ನೆಗಳು.

ಒಂದು ದಿನ ತಾಯಿಯು ಹೇಳಿದಳು:—

'ನೋಡು, ನೀನು 'ಗಾಂಧಿ' ಯೆನ್ನಬಾರದು ಅವರನ್ನು ಮಿಸ್ಟರ್ ಗಾಂಧಿ' ಎಂದು ಕರೆಯಬೇಕು, ತಿಳಿಯಿತೇ? ಗಾಂಧೀಯವರು ಸತ್ಪುರುಷರೆಂಬುವುದನ್ನು ನೀನು ಬಲ್ಲೆಯಷ್ಟೆ?' ಕೂಡಲೇ ಮಗುವು ತನ್ನ ತಪ್ಪನ್ನು ತಿದ್ದಿಕೊಂಡು ಹೇಳಿತು. ಹಾಗಾದರೆ ನನ್ನದು ತಪ್ಪಾಯಿತಮ್ಮ; ಆತನನ್ನು 'ಗಾಂಧಿ ಮಾವ' ಎಂದು ಕರೆಯುತ್ತೇನೆ." ಕಡೆಗೆ ಈ ಹೆಸರೇ ನಿಶ್ಚಿತ. ಸಣ್ಣ ಪುಟ್ಟ ಮಕ್ಕಳೆಲ್ಲಾ ಗಾಂಧಿಜೀಯವರು ಹುಟ್ಟಿದ ಹಬ್ಬದ ದಿನ ತಮ್ಮ 'ಪ್ರೀತಿಯ ಗಾಂಧಿ ಮಾವನಿಗೆ' ಬಹುಮಾನಗಳನ್ನು ಕಳುಹಿಸಿದರು. ಆಟದ ಸಾಮಾನುಗಳು, ಮಿಠಾಯಿಯೇ ಬಹುಮಾನಗಳು. ಅಲ್ಲದೆ ಆತನನ್ನು ತಮ್ಮ ಆಟಪಾಟಗಳಲ್ಲಿ ಭಾಗಿಯಾಗಲು ಆಹ್ವಾನ ಬೇರೆ ಹೋಯಿತು.

ಮನೆಯಲ್ಲಿ ತಂದೆ ತಾಯಿಗಳಿಗಂತೂ ಈ ಮಕ್ಕಳಿಂದ ಹಳ ಕಾಟ; ಇದಕ್ಕೆ ಗಾಂಧಿಜೀಯೇ ಕಾರಣ. ನಾಲ್ಕು ವರ್ಷದ ಹೆಣ್ಣು ಹುಡುಗಿಯೊಬ್ಬಳು, ಗಾಂಧಿಜೀಯವರು ಒಂದು ದಿನ ಮಕ್ಕಳಿಗೆ ಹೇಳಿದ ಬುದ್ಧಿಯ ಮಾತನ್ನು ನೆನಪಿನಲ್ಲಿಟ್ಟುಕೊಂಡು, ಪ್ರತಿದಿನವೂ ಬೆಳಗ್ಗೆ ಎದ್ದೊಡನೆಯೇ ತನ್ನ ತಂದೆಯು ಮಲಗಿರುವಲ್ಲಿಗೆ ಹೋಗಿ, ಆತನನ್ನು ಕೈಯಿಂದ ಹೊಡೆದು ಎಬ್ಬಿಸುತ್ತದೆ. ಮತ್ತೆ ತಂದೆಗೆ ಬೋಧೆ ಬೇರೆ. "ನೋಡು, ನಾನು ಹೊಡೆದೆನೆಂದು ನೀನು ನನ್ನನ್ನು ತಿರುಗಿ ಹೊಡೆಯಬೇಡ. ಗಾಂಧಿಯವರು ಮೊನ್ನೆ ಹೇಳಲಿಲ್ಲವೇ ನಮಗೆಲ್ಲಾ; ಯಾರಾದರೂ ನಿಮ್ಮನ್ನು ಹೊಡೆದರೆ ಅವರನ್ನು ತಿರುಗಿ ಹೊಡೆಯಬಾರದೆಂದು.' ಇದನ್ನು ಗಾಂಧಿಜೀಯವರ ಮುಂದೆ ಹೇಳಿಕೊಂಡು ಆ ಹುಡುಗಿಯ ತಂದೆಯು ಸಂತೋಷಪಡುವನು.

ಹೀಗೆ ತಂದೆ ತಾಯಿಗಳಿಗೆ ತೊಂದರೆ ಕೊಡುವ ಮಕ್ಕಳು ಎಷ್ಟೋ ಮಂದಿ. ಗಾಂಧಿಜೀಯವರು ಬೆಳಗಿನ ಝಾವ 'ವಾಕಿಂಗ್' ಹೋಗುವಾಗ ಅವರನ್ನು ನೋಡಿ "ಗುಡ್ ಮಾರ್ನಿಂಗ್" ಮಾಡಲು ಅಷ್ಟು ಹೊತ್ತಿಗೇ ತಮ್ಮ ತಾಯಿ ತಂದೆಯವರನ್ನು ಈ ಮಕ್ಕಳು ಎಬ್ಬಿಸಬೇಕೆಂತೆ ಹಿಂದಿನ ರಾತ್ರಿ ಹೇಳುವರು; ಬೇಗ ಎದ್ದು ಅನುಭವವಿಲ್ಲದ ದೊಡ್ಡವರಿಗೆ ಇದು ಒಂದು ಪೇಚಾಟ. ತಾವು ದೊಡ್ಡವರಾದ ಮೇಲೂ ಈ ಮಕ್ಕಳು ತಮ್ಮ ತಂದೆ ತಾಯಿಯರು ತಾವು ಹೇಳಿದಂತೆ ಕೇಳುವ ಹಾಗೆ ಮಾಡಿಸುವ ಧೈರ್ಯಶಾಲಿಗಳಾಗುವರೆಂದೇ ನನ್ನ ಭಾವನೆ.

ಉದಾಹರಣೆಗಾಗಿ, ಸುಮಾರು ಹತ್ತು ವರ್ಷಗಳ ಸಣ್ಣ ಹುಡುಗಿಯು ಗಾಂಧಿಜೀಯವರ ಹುಟ್ಟಿದ ಹಬ್ಬದ ದಿನ ಬರೆದ ವಾಕ್ಯರಚನೆಯನ್ನು ನೋಡಿದರೆ, ನಿಮಗೆ ತಿಳಿಯಬಹುದು.

"ಸಯಿಂಟ್ ಫ್ರಾನ್ಸಿಸ್ (ದೊಡ್ಡ ಕ್ರಿಸ್ತ ಸಾಧು ಮಹಾತ್ಮ) ನೂ, ಗಾಂಧಿಯೂ, ಎಲ್ಲಾ ವಿಷಯಗಳಲ್ಲಿಯೂ ಒಂದೇ ಸಮನಾದವರು. ಇಬ್ಬರೂ ಪ್ರಕೃತಿಯನ್ನು (ಅಂದರೆ ಮಕ್ಕಳು, ಪಕ್ಷಿಗಳು, ಹೂಗಳು ಮುಂತಾದುವು) ಪ್ರೀತಿಸುವರು. ಸೆಯಿಂಟ್ ಫ್ರಾನ್ಸಿಸನು ಈ ಭೂಮಿಯ ಮೇಲೆ ಇದ್ದಾಗ ಒಂದು ಮಡಿ ಪಂಚೆಯನ್ನು ಮಾತ್ರ ಉಡುತ್ತಿದ್ದನು, ಗಾಂಧಿಯೂ ಹಾಗೆಯೇ.

ಇವರಿಬ್ಬರೂ ಸಾಹುಕಾರರಾದ ವರ್ತಕರ ಮಕ್ಕಳು. ಒಂದು ದಿನ ರಾತ್ರಿ, ಸೆಯಿಂಟ್ ಫ್ರಾನ್ಸಿಸನು ತನ್ನ ಅನುಯಾಯಿಗಳೊಡನೆ ಸುಖ ಭೋಜನ ಮಾಡುತ್ತಿದ್ದಾಗ ಅತಿ ಬಡವರಾದ ಇಟಲಿಯನರ ನೆನಪು ಬಂದಿತು. ಒಡನೆಯೇ ಹೊರಗೆ ಓಡಿ ಹೋಗಿ, ತನ್ನ ಬೆಲೆ ಬಾಳುವ ಬಟ್ಟೆಗಳನ್ನೂ, ಹಣವನ್ನೂ ಬಡಜನರಿಗೆ ದಾನ ಮಾಡಿ, ತಾನು ಹರಕು ಬಟ್ಟೆಗಳನ್ನು ತೊಟ್ಟನು. ಗಾಂಧಿಯವರಂತೆಯೇ.

ಫ್ರಾನ್ಸಿಸ್ ಮತ್ತು ತನ್ನ ಅನುಚರರೊಡಗೂಡಿ ಹೊರಟನು. ಮರದ ಬಿತದಲ್ಲಿಯೇ ಮನೆ ಮಾಡಿಕೊಂಡರು. ಗಾಂಧಿಯೂ ಅಷ್ಟೇ. ತನ್ನ ಸುಖ ಜೀವನವನ್ನೆಲ್ಲಾ ಹಿಂದೂಸ್ಥಾನದ ಬಡ ಜನರ ಸಲುವಾಗಿ ಬಿಟ್ಟು ಕೊಟ್ಟನು.

ಗಾಂಧಿಯವರ ಜನರು ಆತನು ಇಲ್ಲಿಗೆ (ಲಂಡನ್ ನಗರಕ್ಕೆ) ಬರಲು ಬರೀ ಮಡಿ ಪಂಚೆಯೊಂದನ್ನು ಮಾತ್ರ ಕೊಟ್ಟು ಕಳುಹಿಸಿದರು. ಕಿಂಗ್ಸ್ಲೀ ಹಾಲ್‌ಗೆ ಹೋಗುವ ಮನುಗಲೆಲ್ಲಾ ಆತನು ಹೇಳಿದನು—'ನನಗೆ ಒಳ್ಳೆಯ ಬಟ್ಟೆಯನ್ನು ಕೊಳ್ಳಲು ಹಣವಿಲ್ಲವೆಂದು;

ಪ್ರತಿ ಸೋಮವಾರವೂ ಆತನು ಮೌನ ವ್ರತವನ್ನು ಧರಿಸುತ್ತಾನೆ. ಅವರ ಸುತ ಪದ್ಧತಿಯಂತೆ ಆಟದ ಬೊಂಬೆಗಳು, ಮೇಣದ ಬತ್ತಿಗಳು ಮತ್ತು ಮಿಠಾಯಿ ಇವುಗಳನ್ನು ಆತನು ಹುಟ್ಟಿದ ಹಬ್ಬದ ದಿನ ಬಹುಮಾನವಾಗಿ ಕಳುಹಿಸಿದ್ದರು.

ಆತನ ಆಹಾರವೇನೆಂದರೆ, ಆಡಿನ ಹಾಲು ಮತ್ತು ಹಣ್ಣು ಹಂಪಲು!!"

ಹತ್ತು ವರ್ಷ ವಯಸ್ಸಿನ ಹುಡುಗನೊಬ್ಬನ ಪ್ರಬಂಧವನ್ನು ಈ ಕೆಳಗೆ ಕೊಟ್ಟಿರುತ್ತೇನೆ. ತಪ್ಪು ನೆಪ್ಪುಗಳನ್ನು ತಿದ್ದದೆ ಆ ಹುಡುಗನು ಬರೆದಂತೆಯೇ ಇದೆ.

"ಮಿಸ್ಟರ್ ಗಾಂಧಿಯು ಹಿಂದೂ ದೇಶದವನು. ಆತನು ೧೮೮೦ ರಲ್ಲಿ ಲಂಡನಿನಲ್ಲಿ ಲಾಯರ್ ಪರೀಕ್ಷೆಗೆ ಓದುತ್ತಿದ್ದನು. ಇದನ್ನು ಬಿಟ್ಟು ತನ್ನ ದೇಶವನ್ನು ಉತ್ತಮ ಸ್ಥಿತಿಗೆ ತರಲು ಯತ್ನಿಸುತ್ತಿದ್ದಾನೆ.

ಈಗ ಇಂಗ್ಲೆಂಡಿಗೆ ಹಿಂದೂಸ್ಥಾನದ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳಲು ಬಂದಿದ್ದಾನೆ. ತನ್ನ ದೇಶದ ವ್ಯಾಪಾರವನ್ನು ಹಿಂದಕ್ಕೆ ಸಂಪಾದಿಸಿಕೊಳ್ಳಲು ಯತ್ನಿಸುತ್ತಿದ್ದಾನೆ. ಹೊಲೆಯರನ್ನು ತಮ್ಮ ಗುಡಿಗಳೊಳಗೆ ಬಿಡಬೇಕೆಂದು ಬ್ರಾಹ್ಮಣರನ್ನು ಬಲಾತ್ಕರಿಸುತ್ತಿದ್ದಾನೆ. ಅವರ ದೇಶದಲ್ಲಿ ಸುಮಾರು ೬೦ ಲಕ್ಷ ಜನ ಹೊಲೆಯರಿದ್ದಾರೆ. ಅವರಿಗೆ ಒಂದು ಹೊತ್ತಿನ ಊಟ ಸಿಕ್ಕುವುದೇ ಕಷ್ಟ. ಆತನು ತನ್ನ ಸರ್ವಸ್ವವನ್ನೂ ಬಿಟ್ಟು ಒಬ್ಬ ಬಡ ಮನುಷ್ಯನಂತೆ ಆಗಿದ್ದಾನೆ. ಆದ್ದರಿಂದಲೇ ಆತನು ಸಣ್ಣ ಪಂಚೆಯೊಂದನ್ನು ಉಡುವುದು.

ಆತನ ಆಹಾರ ಆಡಿನ ಹಾಲು, ಹಣ್ಣು ಹಂಪಲು ಇಷ್ಟೆ. ಆತನು ಮಾಂಸವನ್ನಾಗಲೀ, ಮೀನನ್ನಾಗಲೀ ತಿನ್ನುವುದಿಲ್ಲ ಏಕೆಂದರೆ ಪ್ರಾಣಿ ಹಿಂಸೆ ಮಾಡಬಾರದೆಂದು. ಗಾಂಧಿಯು ಇಂಡಿಯಾ ದೇಶದ ಕ್ರಿಸ್ತನು.

ಗಾಂಧಿಯು ತನ್ನ ಹತ್ತಿಯನ್ನು ತಾನೇ ನೂಲುವನು. ಆತನು ಇಂಗ್ಲೆಂಡಿನಲ್ಲಿಯೂ, ದಿನಕ್ಕೆ ಒಂದು ಘಂಟೆಯ ಕಾಲ ನೂಲುತ್ತಾನೆ; ಆಸ್ಪತ್ರೆಯಲ್ಲಿದ್ದಾಗಲೂ ಹಾಗೆಯೇ. ಲ್ಯಾಂಕಾಷೈರಿನ ಹತ್ತಿ ಮಿಲ್ಲುಗಳಿಗೆ ಹೋಗಿ ಈಗತಾನೇ ಹಿಂದಿರುಗಿದ್ದಾನೆ.

ಆತನು, ಭಾನುವಾರ ಸಾಯಂಕಾಲ ಏಳರಿಂದ ಹಿಡಿದು ಸೋಮವಾರ ಸಾಯಂಕಾಲ ಏಳರವರೆಗೂ ದೇವರನ್ನು ಪ್ರಾರ್ಥನೆ ಮಾಡುತ್ತಾನೆ. ನಾವು ಯಾರಾದರೂ ಮಾತನಾಡಿಸಿದರೆ ಮಾತನಾಡುವುದಿಲ್ಲ. ಆತನು ಒಂದು ಸಲ ನಮ್ಮ ಮನೆಗೆ ಬಂದಿದ್ದ. ನಮ್ಮ ತಾಯಿಯು ಬಟ್ಟೆಯನ್ನು ಇಸ್ತ್ರಿ ಮಾಡುತ್ತಿದ್ದಳು. ನಮ್ಮ ತಾಯಿಯು ಆ ಕೆಲಸವನ್ನು ನಿಲ್ಲಿಸಲು—ಆತನು ಹೇಳಿದನು "ನಿಲ್ಲಿಸಬೇಡ; ಈ ಕೆಲಸವನ್ನು ಎಷ್ಟೋ ಸಲ ನಾನೇ ಮಾಡಿರುವೆನು" ಎಂದು. ಗಾಂಧಿಯೊಡನೆ ನಾನು 'ಷೇಕ್ ಹ್ಯಾಂಡ್' ಮಾಡಿದ್ದೇನೆ. 'ಹಲೋ' ಅಥವಾ 'ಗುಡ್‌ಬೈ' ಎನ್ನುವುದಕ್ಕೆ ಹಿಂದುಗಳ ಮಾತಿನಲ್ಲಿ 'ನಮಸ್ತೆ' (ನಮಸ್ಕಾರ) ಎನ್ನುತ್ತಾರೆ."

ಡಬ್ಲ್ಯೂ. ಎ. ಎ ನೇವಿಲ್,
೨೧, ಉಂಗ್ಲಿಂಗ್ ರೋಡು.
ಬೋ, ಲಂಡನ್—ತಾ|| ೩೦—೯—೩೧.

ಈ ಪುಟ್ಟ ಮಕ್ಕಳು ಹೇಳಿರುವ ಮಾತುಗಳು ಎಷ್ಟು ನಿಜ, ಎಷ್ಟು ಬೆಲೆಯುಳ್ಳವು! ಇದರೊಂದಿಗೆ ದೊಡ್ಡ ದೊಡ್ಡ ಪತ್ರಿಕಾಕರ್ತರುಗಳ ಪ್ರತಿನಿಧಿಗಳು ಕಲ್ಪಿಸಿ ಬರೆಯುವ 'ಕಥೆ' ಗಳನ್ನು ಓದಿ ನೋಡಿದರೆ, ಆ 'ಕಥೆ'ಗಳು ಎಷ್ಟು ಅಸತ್ಯಕರವಾಗಿ ಕಾಣುವುವು! ಇದೆಲ್ಲಾ ಆ ಮಕ್ಕಳ ಉಪಾಧ್ಯಾಯರು ಹೇಳಿಕೊಟ್ಟ ಪಾಠಗಳ ಮತ್ತು ಗಾಂಧಿಜೀಯವರನ್ನು ಆ ಮಕ್ಕಳು ಸ್ವತಃ ನೋಡಿದ ಪರಿಣಾಮವೂ ಆಗಿರುತ್ತದೆ.

ಇಂಗ್ಲೆಂಡಿನ ಭಾವೀ ಜನಾಂಗದ ನಾಯಕರುಗಳೇ ಮಕ್ಕಳು. ಗಾಂಧಿಜೀಯವರು, ಇಂಗ್ಲೆಂಡನ್ನು ಬಿಟ್ಟು ಹೊರಡುವ ಮುನ್ನ, ಇನ್ನೂ ಅನೇಕ ಮಂದಿ ಇಂತಹ ಮಕ್ಕಳು ಗಾಂಧಿಜೀಯನ್ನು ನೋಡುವರು. ಈ ಮಕ್ಕಳೇ ಮುಂದೆ ದೊಡ್ಡವರಾಗಿ ನಮ್ಮೊಡನೆ ವ್ಯವಹಾರ ನಡೆಸುವವರು. ಈಗಿರುವ ಜನರೊಡನೆ ಹೋರಾಡುವುದಕ್ಕಿಂತಲೂ ಈ ಮುಂದಿನ ಜನಾಂಗದೊಡನೆ ಹೋರಾಡುವುದು ಬಹಳ ಸುಲಭವೆಂದು ನನಗೆ ತೋರುತ್ತದೆ.

"ವಿ. ಕ"

ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ವಿನಂತಿ.

ಅಸ್ಪೃಶ್ಯರಿಗೆ ದೇವಾಲಯ ಪ್ರವೇಶವನ್ನು ಮಾಡಬಿಡಿರಿ.

(ಅ. ಭಾ. ರಾಷ್ಟ್ರೀಯ ಮಹಾಸಭೆಯ ಅಸ್ಪೃಶ್ಯತಾ ನಿವಾರಣಾ ಸಮಿತಿಯ ಅಪ್ಪಣೆ ಮೇರೆಗೆ)

ಅ. ಭಾ. ರಾಷ್ಟ್ರೀಯ ಮಹಾಸಭೆಯವರು ಕಳೆದೆಂಟು ವರ್ಷದಿಂದ ಈ ಅಸ್ಪೃಶ್ಯತಾ ನಿವಾರಣೆಯ ವಿಷಯವನ್ನು ಒಂದು ಉಪಮಂಡಲಕ್ಕೆ ಒಪ್ಪಿಸಿದ್ದರು. ಉಪಮಂಡಲದವರ ಕೆಲಸ ಮಾಡುತ್ತಿರುವಾಗಲೇ ಕಳೆದ ಸತ್ಯಾಗ್ರಹ ಚಳವಳಿಯು ಪ್ರಾರಂಭವಾಗಿ ಒಂದು ವರ್ಷದ ವರೆಗೆ ಸ್ಪೃಶ್ಯಾಸ್ಪೃಶ್ಯ ಮುಂತಾದ ಎಲ್ಲ ಭಾವನೆಯೂ ಸಂಪೂರ್ಣವಾಗಿ ಅಳಿದು ಹೋಗಿತ್ತು. ಸತ್ಯಾಗ್ರಹವು ನಿಲ್ಲುತ್ತಲೇ ಆ ಉಪಮಂಡಲದವರು ಪುನಃ ಕಾರ್ಯವನ್ನಾರಂಭಿಸಬೇಕೆಂದು ರಾಷ್ಟ್ರೀಯ ಮಹಾಸಭೆಯವರು ಅಪ್ಪಣೆಯನ್ನಿತ್ತಿರುವರು. ಅದರಂತೆ ನಾವು ಆ ಕಾರ್ಯವನ್ನು ಪ್ರಾರಂಭಿಸಿದ್ದೇವೆ.

ನಾವು ಅಸ್ಪೃಶ್ಯರೆಂದು ತಿಳಿಯುತ್ತ ಬಂದ ಜನರು ನಮ್ಮ ಧರ್ಮದವರೇ ಆಗಿದ್ದು, ನಮ್ಮ ದೇಶದವರೂ, ವಂಶಪರಂಪರಾಗತವಾಗಿ ನಮ್ಮ ಜನಾಂಗದ ಸೇವೆ ಮಾಡುತ್ತ ಬಂದವರೂ ಆಗಿರುವರೆಂಬುದು ನಿಮಗೆ ತಿಳಿದ ವಿಷಯವೇ. ಹೀಗೆ ಎಲ್ಲ ರೀತಿಯಿಂದಲೂ ಅವರು ನಮ್ಮವರೇ ಆಗಿರುವರು. ಆದ್ದರಿಂದ ಅವರನ್ನು ನಮ್ಮ ಬಂಧುಗಳೆಂದು ತಿಳಿದು ಅವರ ಕೂಡ ನಡೆದುಕೊಳ್ಳುವದು ನಮ್ಮ ಪವಿತ್ರ ಕರ್ತವ್ಯ ಅಥವಾ ಧರ್ಮವಾಗಿದೆ. ಸೃಷ್ಟಿಯಲ್ಲಿಯ ಎಲ್ಲ ವಸ್ತುಗಳಲ್ಲಿಯೂ ದೇವರಿರುವನೆಂದು ನಮ್ಮ ವೇದಾಂತದ ಉಪದೇಶವಾಗಿದೆ. ನಮ್ಮ ಋಷಿಗಳೂ, ಮಹಾತ್ಮರೂ ಇದೇ ತತ್ವವನ್ನು ಸಾರುತ್ತ ಬಂದಿರುವರು. ಮಹಾತ್ಮಾ ಗಾಂಧಿಯವರು ಇದಕ್ಕೂ ಮುಂದೆ ಹೋಗಿ 'ಅಸ್ಪೃಶ್ಯನೆಂದರೆ ನನಗೆ ದೇವತಾ ಮನುಷ್ಯನು ನಾವು ಮಾತ್ರ ದುರ್ಜನರು. ಯಾಕೆಂದರೆ ಅಸ್ಪೃಶ್ಯರು ನಮ್ಮ ಸ್ವಾಸ್ಥ್ಯ ಹಾಗೂ ಸ್ವಚ್ಛತೆಗಾಗಿ ಯಾವಾಗಲೂ ದುಡಿದು ತಮ್ಮ ಕೈಗಳನ್ನು ಮಲಿನಗೊಳಿಸುತ್ತಿದ್ದರೂ ನಾವು ಮಾತ್ರ ಅವರನ್ನು ತುಚ್ಛೀಕರಿಸುವದರಲ್ಲಿಯೇ ಆನಂದ ಪಡುತ್ತೇವೆ." ಎಂದು ಹೇಳುತ್ತಾರೆ. (ಯಂಗ್ ಇಂಡಿಯಾ ೯—೮—೧೯೩೧) ಧರ್ಮದ ಹೆಸರಿನಿಂದ ನಡೆಯುವ ಈ ದುಷ್ಟ ಪದ್ಧತಿಗೆ ನಾವು ಗುಲಾಮರಾಗಿದ್ದೇವೆ. ಅದು ಧರ್ಮವೆಂದು ತಿಳಿಸಿ ಹೋಗಿ ಅದರಲ್ಲಿ ಸುಧಾರಣೆ ಮಾಡಲು ನಾವು ಪ್ರಯತ್ನ ಮಾಡುವದಿಲ್ಲ. ಆದರೆ ಹೀಗೆ ತಟಸ್ಥರಾಗಿರುವದು ಇನ್ನು ಮಾತ್ರ ಸಾಧ್ಯವಿಲ್ಲ. ಇಡೀ ಜಗತ್ತು ನಮ್ಮ ಧರ್ಮದ ಉದಾತ್ತ ತತ್ವಗಳನ್ನು ವಿಚಾರ ಮಾಡುತ್ತಿರುವದರಿಂದ ಅಸ್ಪೃಶ್ಯತೆಯು ಅವರಿಗೆ ನಮ್ಮ ಧರ್ಮದಲ್ಲಿಯ ಒಂದು ಹೇಯವಾದ ಕುಂದೆಂದು ತೋರುತ್ತಿದೆ. ಇಂಥ ಕುಂದನ್ನು ಕೂಡಲೇ ನಿವಾರಿಸುವದು ನಮ್ಮ ಪ್ರಥಮ ಹಾಗೂ ಶ್ರೇಷ್ಠ ಕರ್ತವ್ಯವಾಗಿದೆ.

ನಮ್ಮ ಧರ್ಮದ ತತ್ವಜ್ಞಾನದಲ್ಲಿ ಈ ರೂಢಿಗೆ ಸ್ವಲ್ಪವೂ ಆಧಾರವಿಲ್ಲ. ಆಗಾಗ ಬದಲಾಗುತ್ತಿರುವ ಸ್ಮೃತಿಗಳಲ್ಲಿಯಾದರೂ ಇದಕ್ಕೆ ಆಧಾರವು ದೊರೆಯಲಾರದು. ಆಧಾರವಿದ್ದರೂ ಸರಿಯೇ ಇಲ್ಲದಿದ್ದರೂ ಸರಿಯೆ, ನ್ಯಾಯ ಅಥವಾ ಮನುಷ್ಯತ್ವದ ಕಲ್ಪನೆಗಳಿಗೆ ವಿರುದ್ಧವಾದದ್ದು ಅಧರ್ಮವೇ ಸರಿ. ಇಂಥ ಅಮಾನುಷ ಹಾಗೂ ಅನ್ಯಾಯವಾದ ರೂಢಿಯನ್ನು ನಾಶಗೊಳಿಸುವದು ನಮ್ಮ ಮುಖ್ಯ ಧರ್ಮವು.

ಆದ್ದರಿಂದ ಇದು ವರೆಗೆ ಮಾಡಿದ ಪಾಪಕ್ಕಾಗಿ ನಾವು ಪಶ್ಚಾತ್ತಾಪ ಪಟ್ಟು ಅಸ್ಪೃಶ್ಯರೆಂದೆನಿಸಿಕೊಳ್ಳುವವರನ್ನು ನಮ್ಮ ಹತ್ತಿರಕ್ಕೆ ಕರೆಯುವದು ಈಗ ನಮ್ಮ ಕರ್ತವ್ಯವಾಗಿದೆ. ಮನುಷ್ಯತ್ವ, ನ್ಯಾಯ, ಜನಾಂಗ ಹಾಗೂ ರಾಷ್ಟ್ರದ ದೃಷ್ಟಿಯಿಂದ, ಸ್ವಲ್ಪ ಮುಂದಿನ ಧೋರಣದಿಂದ ವಿಚಾರ ಮಾಡಿದರೆ ನಮ್ಮ ಮಾರ್ಗವು ನಿಚ್ಚಳವಾಗುವದು.

ಇವೆಲ್ಲ ಕಾರಣಗಳ ಸಲುವಾಗಿ ದೇವಾಲಯ ಪ್ರವೇಶದಲ್ಲಿ ಸ್ಪೃಶ್ಯ ಹಿಂದುಗಳಿಗಿರುವಷ್ಟು ಅಧಿಕಾರ ಹಾಗೂ ಅನುಕೂಲಗಳನ್ನು ಅಸ್ಪೃಶ್ಯರೆನಿಸಿಕೊಳ್ಳುವವರಿಗಾದರೂ ನೀವು ಕೊಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ಇದರಿಂದ ನಮ್ಮ ಧರ್ಮದ ವಿಷಯವಾಗಿ ಜಗತ್ತಿಗಿರುವ ಆದರವನ್ನು ನೀವು ಹೆಚ್ಚಿಸುವಿರಿ. ನಮ್ಮ ಜನಾಂಗದ ಅವನತಿಯನ್ನು ನಿಲ್ಲಿಸುವಿರಿ. ರಾಷ್ಟ್ರವನ್ನು ಬಲಗೊಳಿಸುವಿರಿ. ನಮ್ಮ ರಾಜಕೀಯ ಪ್ರಯತ್ನಗಳಿಗೆ ಪುಷ್ಟಿ ಕೊಡುವಿರಿ. ಹಾಗೂ ತಾವು ನಮ್ಮ ಸ್ವಾತಂತ್ರ್ಯದ ಮೋಕ್ಷದ ದಾರಿಯಲ್ಲಿ ಇನ್ನೊಂದು ಮೆಟ್ಟಿಲವನ್ನು ಹತ್ತುವಿರಿ.

ಕಾಯದೇ ರಚನೆಗಾಗಿ ಕಾಯದೆ ನಿಮಗೆ ಕೆಲವರು ಹೇಳಬಹುದು. ಮನುಷ್ಯನ ನಲುವಾಗಿ ಕಾಯದೆಯೇ ಹೊರತು ಕಾಯದೆಯ ಸಲುವಾಗಿ ಮನುಷ್ಯನಲ್ಲವೆಂಬುವನ್ನು ನಾವು ನೆನಪಿನಲ್ಲಿಡಬೇಕು. ರೂಢಿಯಿಂದ ಕಾಯದೆಗಳಾಗಿವೆ. ರೂಢಿ ಒಮ್ಮೆ ಬದಲಿಸುವ ನಿರ್ಧಾರ ಮಾಡಿದರೆ ಕಾಯದೆಯೂ ಬದಲಾಗುವದು. ನ್ಯಾಯ ಮಾರ್ಗದಿಂದ ಈ ಕಾಯದೆಯನ್ನು ಬದಲಿಸುವ ಪ್ರಸಂಗ ಬಂದರೂ ನೀವು ಸಹಾಯ ಮಾಡ ಬಾರದೆ?

ಧರ್ಮಶಾಸ್ತ್ರಿಗಳೂ ಪಂಡಿತರೂ ವಿವೇಕಾನಂದರಂಥವರೂ, ... ರಂತಹ ಮಹನೀಯರೂ ... ಶ್ರೀ ರಾನಡೆ, ಗೋಖಲೆ ... ತಿಲಕರಂಥವರೂ ಅಸ್ಪೃಶ್ಯತಾ ನಿವಾರಣೆಯ ... ಅಸ್ಪೃಶ್ಯತೆಯು ... ತಮ್ಮ ಅಭಿಪ್ರಾಯವನ್ನು ಹೇಳಿರುವರು. ಅಸ್ಪೃಶ್ಯತೆಯನ್ನು ನಾವು ಮನುಷ್ಯತ್ವ ಹಾಗೂ ನ್ಯಾಯದ ವಿರುದ್ಧ ನಾವು ಪಾಪವನ್ನು ಮಾಡಿದ್ದೇವೆ. ಅದರ ಫಲವನ್ನಾದರೂ ಈಗ ಉಣ್ಣುತ್ತಿದ್ದೇವೆ. ಹಿಂದೂ ಜನಾಂಗದ ಅತ್ಯಮಿತವ ವೃಷ್ಟಿಯಿಂದಲೂ ಅಸ್ಪೃಶ್ಯತೆಯು ನಮಗೆ ಹೇಳಲಾರದಷ್ಟು ಕೇಡನ್ನು ಮಾಡಿದೆ. ನಮ್ಮ ಸಾವಿರಾರು ಬಾಂಧವರು ಸ್ವಧರ್ಮವನ್ನು ತೊರೆದು ನಮ್ಮ ವೈರಿಗಳಾಗಿದ್ದಾರೆ. ಹೊಸ ಯುಗದ ಸಮತಾಭಾವನೆಯಿಂದ ಸ್ಫೂರ್ತಿಗೊಂಡ ಲಕ್ಷಾವಧಿ ಬಾಂಧವರು ನಮ್ಮ ವಿರುದ್ಧ ಹಲ್ಲು ಕಡಿಯುತ್ತಿದ್ದಾರೆ. ಅಸ್ಪೃಶ್ಯತೆಯ ಈ ಅನ್ಯಾಯವನ್ನು ಇನ್ನು ಮೇಲೆ ಹಾಗೆಯೇ ನಡೆಸುವದು ಅಶಕ್ಯವಾಗಿದೆ. ಸ್ವಲ್ಪ ವಿಚಾರಾಲೋಚನೆಯಿಂದ ನಾಳೆ ಬರಬೇಕಾಗುವುದನ್ನು ಈ ದಿನವೇ ನಾವು ಗ್ರಹಿಸಿದರೆ ಆಶಂಕಲಹ

ಗಾಢತಾಂತರವು ಕೊಲಗುವವು ಅಲ್ಲದೆ ಹೆಚ್ಚಿಗೆ ಉತ್ಕೃಷ್ಟವಾದ ಭಾವನೆಗಳಿಂದ ನಮ್ಮ ಹೃದಯವು ಪರಿಪೂರ್ಣವಾಗುವವು.

ನಮ್ಮ ರಾಜಕೀಯ ಪ್ರತಿಪಕ್ಷಗಳು ಈ ಸಾಮಾಜಿಕ ಕೊರತೆಯನ್ನು ತಮಗೆ ಅನುಕೂಲವಾಗುವಂತೆ ಇನ್ನೂ ದೊಡ್ಡದಾಗಿ ಮಾಡಿ ಉಪಯೋಗಿಸುವರೆಂಬುದನ್ನು ನಾವು ಮರೆಯಕೂಡದು. ಆದ್ದರಿಂದಲೇ ಕಾಂಗ್ರೆಸ್ಸಿನಲ್ಲಿಯ ಮುಸಲ್ಮಾನ, ಕ್ರಿಸ್ತ, ಪಾರ್ಸೀ ಮುಂತಾದ ಬೇರೆ ಧರ್ಮದ ಮುಂದಾಳುಗಳು ಸಹ ಅಸ್ಪೃಶ್ಯತಾ ನಿವಾರಣೆಯನ್ನು ಕೂಡಲೇ ಮಾಡಬೇಕೆಂದು ಹೇಳುತ್ತಾರೆ.

ನೀವು ನಮ್ಮ ಸನಾತನ ಧರ್ಮದ ಆಧಾರಸ್ತಂಭಗಳಾಗಿರುವಿರಿ. ಹಿಂದೂ ಸಮಾಜದ ಮುಂದಾಳುಗಳೂ ಆಗಿರುವಿರಿ. ನಮ್ಮ ಜನಾಂಗ ಹಾಗೂ ದೇಶದ ಹಿತವು ತಮಗೆ ತಿಳಿಯದಿರದು. ಆದ್ದರಿಂದ ನಮ್ಮ ಧರ್ಮವನ್ನು ಹೆಸರಿನಲ್ಲಿ ಮಾತ್ರವಲ್ಲದೆ, ನಿಜವಾಗಿಯೂ ಸನಾತನ (ಎಂದಿಗೂ ಅಚ್ಚಳಿಯದ) ವಾಗಿ ಮಾಡುವ ಪವಿತ್ರ ಕಾರ್ಯದಲ್ಲಿ ಅಂದರೆ ಸದ್ಯಕ್ಕೆ ರೂಢವಾಗಿರುವ ಅನ್ಯಾಯದ ಅಸ್ಪೃಶ್ಯತೆಯನ್ನು ಕಳೆಯುವ ವಿಷಯದಲ್ಲಿ ತಾವು ಉದಾರ ಬುದ್ಧಿಯಿಂದ ಸಹಾಯ ಮಾಡಬೇಕೆಂದು ನಾನು ಬಯಸಿದ್ದೇನೆ.

ಗಣೇಶ ಗೋವಿಂದ ಶಾರಬಾನೀಸ.

ಕಾರ್ಯದರ್ಶಿ

ಅಸ್ಪೃಶ್ಯತಾ ನಿವಾರಣಾ ಶಾಖೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಧಾರವಾಡ

ಡಾಕ್ಟರ್ ಸಯ್ಯದ್ ಮಹಮ್ಮದ್‌ರವರ ಭಾಷಣ.

(೭ನೇ ಪುಟದಿಂದ ಮುಂದುವರಿದದ್ದು)

ಲಂಡನಿನಲ್ಲಿ ಕೋಮುವಾರು ಸಮಸ್ಯೆಗೆ ಬಹಳ ಪ್ರಾಶಸ್ತ್ಯ ಕೊಡಲಾಗಿದೆ. ಮುಸಲ್ಮಾನರ ಪ್ರತಿನಿಧಿಗಳೆನಿಸಿಕೊಂಡವರ ಉದ್ದೇಶವೇನೆಂಬುದರಲ್ಲಿ ಏನಾದರೂ ಸಂಶಯವಿದ್ದರೆ, ಡಾಕ್ಟರ್ ಶಾಫಾತ್ ಅಹಮದ್ ಖಾನರು ಯುರೋಪಿಯನರಿಗೆ ಹಿಂದೂಸ್ಥಾನದಲ್ಲಿ ವ್ಯಾಪಾರ ಮಾಡಲು ಭದ್ರತೆಗಳು ಬೇಕೆಂತ ಮುಸಲ್ಮಾನರು ಕೇಳುತ್ತಾರೆನ್ನುವಾಗ ಪ್ರತಿನಿಧಿಗಳೆನಿಸಿಕೊಂಡವರ ಉದ್ದೇಶವು ಸ್ಪಷ್ಟವಾಯಿತು. ಇದು ಮುಸಲ್ಮಾನರ ಹೊಸ ತರಹವಾಗಿದೆ. ಹಿಂದೂಸ್ಥಾನದಲ್ಲಿ ಬ್ರಿಟಿಷರ ವ್ಯಾಪಾರದಿಂದ ಮುಸಲ್ಮಾನರಿಗೆ ತಟ್ಟಿದಷ್ಟು ಹಾನಿ ಬೇರೆ ಯಾರಿಗೂ ತಟ್ಟಲಿಲ್ಲ. ಹಿಂದೂ ಜನರ ಕೈಗಾರಿಕೆಗಿಂತ ಹೆಚ್ಚಾಗಿ ಮುಸಲ್ಮಾನರ ಕೈಗಾರಿಕೆಗಳು ಬ್ರಿಟಿಷರ ವ್ಯಾಪಾರದಿಂದ ಹಾಳಾಯಿತು. ಕಳೆದ ಖಾನೆಸುಮಾರಿಯಲ್ಲಿ ಸಂಯುಕ್ತ ಪ್ರಾಂತ್ಯದಲ್ಲಿ ಬೇರೆ ಜಾತಿಯವರಿಗಿಂತ ಕೈಗಾರಿಕೆ ಕಸಬಿನ ಮುಸಲ್ಮಾನರು ಮೂರರಷ್ಟು ಹೆಚ್ಚಿದ್ದಾರೆ. ಆದ್ದರಿಂದ ಬ್ರಿಟಿಷ್ ವ್ಯಾಪಾರವು ಪ್ರಬಲವಾಗಿಯೇ ಇದ್ದರೆ ಮುಸಲ್ಮಾನರಿಗೇನೇ ಹೆಚ್ಚಿಗೆ ಹಾನಿಯಾಗುವುದು ಎನ್ನುವುದರಲ್ಲಿ ಸಂಶಯವಿಲ್ಲ.

ಡಾಕ್ಟರ್ ಶಾಫಾತ್ ಅಹಮದ್ ಖಾನರಂಥವರು ಲಂಡನಿಗೆ ಹೋದದ್ದು ಜನಾಂಗದ ಯಾ ಮುಸಲ್ಮಾನರ ಪ್ರತಿನಿಧಿಯಾಗಿಲ್ಲ. ಆಳರಸರಿಗೆ ಒತ್ತಾಸೆ ಕೊಡುವ ಸಣ್ಣ ಗುಂಪಿನವರಾಗಿ ಹೋದರು. ಈ ಗುಂಪಿಗೆ ಬ್ರಿಟಿಷರು ಅರಬಸ್ಥಾನವನ್ನು ತಮ್ಮ ಅಧೀನಕ್ಕೆ ತಂದುಕೊಳ್ಳಲು ಮಾಡುವ ಪ್ರಯತ್ನವು ತಿಳಿದಂತೆ ತೋರುವುದಿಲ್ಲ. ಅರಬಸ್ಥಾನವನ್ನು ಇಂಗ್ಲೆಂಡಿನವರು ಸ್ವಾಧೀನಪಡಿಸಿಕೊಳ್ಳಲು ಮಾಡುವ ಪ್ರಯತ್ನವು ಕಲೀಫಿನ್ ಎಲ್ಲಿ ಉತ್ಪತ್ತಿಯಾಗುವ ಪ್ರಾಂತ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಮಾತ್ರವಲ್ಲ. ಹಿಂದೂಸ್ಥಾನದ 8 ಕೋಟಿ ಮುಸಲ್ಮಾನರ ಮನಸ್ಸನ್ನು ಆಕರ್ಷಿಸಲು ಸಹ ಆಗಿದೆ. ಮುಸಲ್ಮಾನ್ ಸಮುದಾಯಕ್ಕೆ ಪ್ರಯೋಜನವಾಗುವ ಎಲ್ಲವನ್ನು ಕಾಂಗ್ರೆಸಿನವರು ಈಗಾಗಲೇ ಕೊಟ್ಟಿರುತ್ತಾರೆ. ಪ್ರಜಾ ಜನರ ಮೂಲ ಹಕ್ಕುಗಳ ಸಂಬಂಧವಾದ ಕಾಂಗ್ರೆಸಿನ ಠರಾವು ಬಡವರ ಪ್ರಯೋಜನಕ್ಕಾಗಿಯೇ ಆಗಿದೆ. ಮುಸಲ್ಮಾನರಿಗಿಂತ ಬಡವರು ಹಿಂದೂಸ್ಥಾನದಲ್ಲಿ ಬೇರೆ ಯಾರು ಇದ್ದಾರೆ?

ಕೋಮುವಾರು ಭೇದಭಾವ ಬಾಹ್ಯವನ್ನು ಎಲ್ಲಿ ಕಂಡರೂ ನಾಶಪಡಿಸಬೇಕೆಂತ ಹೇಳಿ ಉಪನ್ಯಾಸವನ್ನು ಮುಗಿಸಿದರು.

ಇಂಗ್ಲಿಷ್ ಚಕ್ರವರ್ತಿಯವರ ಅರಮನೆಯಲ್ಲಿ ಹಿಂದೂಸ್ಥಾನದ ಕೂಗು.

ಮಿ ಹೆಚ್ ಯನ್. ಬ್ರೈಲ್ಸ್‌ಫರ್ಡರು ಬರೆದಿರುವುದೇನೆಂದರೆ:—

ಕಡೆಗೂ ಹಿಂದೂಸ್ಥಾನವು ಲಂಡನಿಗೆ ಬಂದಿದೆ. ನಿಜವಾದ ಹಿಂದೂಸ್ಥಾನವು ನೆಲದ ಮೇಲೆ ಕೂರುವ ಹಿಂದೂಸ್ಥಾನವು ನಮ್ಮ ಮುಂದೆಗೆ ಹಿಡಿದಿದೆ, ಒರೇ ಖದ್ದರನ್ನು ಧರಿಸಿರುವ ಹಿಂದೂಸ್ಥಾನವು, ಪಾರ್ಲಿಮೆಂಟಿನ ಕೊಠಡಿಯಲ್ಲಿ ಪ್ರಾರ್ಥನೆಯನ್ನು ನಡೆಸುವ ಹಿಂದೂಸ್ಥಾನವು ಲಂಡನಿಗೆ ಬಂದಿದೆ.

ಮಿ. ಗಾಂಧಿಯವರು ದುಂಡು ಮೇಜು ಪರಿಷತ್ತಿಗೆ ಬಂದಿರುವುದರಿಂದ ಅದರ ಭೂಷಣವೇ ಹೆಚ್ಚಾಗಿದೆ ಮತ್ತು ಪ್ರತಿನಿಧಿ ಎನಿಸಿಕೊಳ್ಳಲು ಹೆಚ್ಚು ಅರ್ಹತೆಯುಳ್ಳದ್ದಾಗಿದೆ. ಕಳೆದ ವರ್ಷ ರಾಜರುಗಳೂ, ಭೂಮಾಲೀಕರೂ, ಲಾಯರುಗಳೂ ಇದ್ದರು. ಹಳ್ಳಿಗಳಲ್ಲಿ ಕೆಲಸ ಮಾಡುವ ಕೂಲಿಕಾರರ ಪರವಾಗಿ ಮಾತನಾಡುವ ಇಬ್ಬರು ಸಹ ಇದ್ದರು. ಆದರೆ ಕಾಯಕಷ್ಟ ಮಾಡುವ ಜನರಲ್ಲಿ ಹೆಚ್ಚಿನ ಕೂಲಿಕಾರರು ಬಹಳ ಸ್ವಲ್ಪ ಭಾಗವಾಗಿದ್ದಾರೆ. ಗಾಂಧಿಯವರ ಬರುವಿಕೆಯಿಂದ ಹಿಂದೂಸ್ಥಾನದ ಗ್ರಾಮಗಳಿಗೆ ಬಾಯಿ ಬಂದಂತಾಯಿತು. ನಾವು ಈ ವರೆಗೆ ಕೇಳದ ಸಂಗತಿಗಳನ್ನು ಗ್ರಾಮಗಳ ಪ್ರತಿನಿಧಿಯಿಂದ ಕೇಳುತ್ತೇವೆ. ಎಷ್ಟೋ ಸಾಧು ಸನ್ಯಾಸಿಯಂತೆ ಕಂಡರೂ ಈ ಗ್ರಾಮವಾಸಿಗಳ ಪ್ರತಿನಿಧಿಗೆ ನಗುವೂ ಇದೆ, ಸಂತೋಷವೂ ಇದೆ. ಸಹಾನುಭೂತಿ, ದಯೆ ಹುಟ್ಟುವಂತೆ ಮಾತನಾಡಿದರೂ ಬುದ್ಧಿ ಚಟುವಟಿಕೆ, ಮುಂದಾಲೋಚನೆಯೂ ಇದೆ. ಈ ಪ್ರತಿನಿಧಿಯು ಬಹಳ ಇತರಿಗೆ ನಿಧಾನವಾಗಿ ಮಾತನಾಡುವರು. ವಾಗ್ಮಿಗಳ ಭಾಷಣಕಾರರ ಉಪಾಯಗಳೊಂದೂ ಇಲ್ಲ. ಮಿ. ಗಾಂಧಿಯವರು ದೊಡ್ಡ ಉತ್ಸಾಹ ಭರಿತವಾದ ಕೂಟಕ್ಕೆ ಭಾಷಣ ಕೊಡುವುದು. ಖೈಪಿಸ್ಟಿಗೆ ಡಿಕ್ಟೇಶನ್ ಹೇಳುವಂತೆ ಕಾಣುತ್ತದಷ್ಟೆ.

ಅವರ ರೀತಿಯು ವಿಶೇಷ ತರದ ನಮ್ರತೆಯುಳ್ಳದ್ದಾಗಿದೆ. ಆದರೆ ಅಂಥಾ ಮಾತುಗಳ ಹಿಂದೆ ಬಲವಾದ ಮನಸ್ಸಾಕ್ಷಿಯ ಬೆಂಬಲವಿದೆ. ಮನಸ್ಸಾಕ್ಷಿಯು ಹೇಳಿತೆಂದಾದರೆ ಎಷ್ಟರ ವರೆಗಾದರೂ ಎದುರಿಸದೆ ಬಿಡರು.

ತಾನು ಸಂಭಾಷಿಸುವ ಇಂಗ್ಲಿಷ್ ಮನುಷ್ಯನು ನಂಬಿಕೆಗೂ, ಸ್ನೇಹಕ್ಕೂ ಅರ್ಹನೆಂತ ಅವರಿಗೆ ತೋರಿದರೆ ಅಂಥವರೊಂದಿಗೆ ಚರ್ಚಿಸುವಾಗ ಬಹಳ ಸರಳವಾದ ಮಾತುಗಳನ್ನೇ ಆಡುತ್ತಾರೆಂತಲೂ, ಅಂಥವರು ನಂಬಿಕೆಗೆ ಅರ್ಹರಲ್ಲವೆಂತ ಅವರಿಗೆ ತೋರಿದಾಗ ಮಾತ್ರ ಅಸಾಧ್ಯವಾದ ಕಠಿಣ ತಂದ ಶರತುಗಳನ್ನು ಹೇಳುತ್ತಾರೆಂತಲೂ ನನ್ನ ಅಭಿಪ್ರಾಯ.

ಅವರೊಂದಿಗೆ ರಾಜಿ ಮಾಡಿಕೊಳ್ಳಬೇಕಾದರೆ ಸಂಪೂರ್ಣವಾಗಿ ಪ್ರಮಾಣಿಕರಾಗಿರಬೇಕು. ಹೀಗೆ ಮಾಡುವುದರಿಂದ ಪ್ರಯೋಜನವಿದೆಯೋ? ಖಂಡಿತವಾಗಿಯೂ ಹೀಗೆ ವರ್ತಿಸಬೇಕೆಂತ ನನ್ನ ಮತ.

ಅವರ ಪಾರ್ಟಿಯಾದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನಷ್ಟು ಬಲವಿರುವ ಸಂಸ್ಥೆ ಹಿಂದೂಸ್ಥಾನದಲ್ಲಿ ಬೇರೊಂದು ಇಲ್ಲ. ಮಾಡರೇಟ್ ಪಕ್ಷದವರು, ಬುದ್ಧಿವಂತರಾದ ವ್ಯಾಪಾರಿಗಳು ಮತ್ತು ಲಾಯರುಗಳು. ಇವರ ಸಂಖ್ಯೆ ಬಹಳ ಕಡಿಮೆ. ಮಿ. ಗಾಂಧಿಯವರ ಬೆನ್ನ ಹಿಂದೆ ಜನಸಮುದಾಯವೇ ಇದೆ. ಅವರು ಗಾಂಧಿಯವರಲ್ಲಿ ಧಾರ್ಮಿಕ ಭಕ್ತಿಯುಳ್ಳವರಾಗಿದ್ದಾರೆ. ಗಾಂಧಿಯವರ ಹೇಳಿಕೆ ಮೇರೆಗೆ ಕಳೆದ ವರ್ಷ ಜನಸಮುದಾಯದಿಂದ 60,000 ಜನರು ಜೈಲಿಗೆ ಹೋದರು. ಒಟ್ಟು ಪಟ್ಟಣಗಳೇ ಅವರು ಅಪೇಕ್ಷಿಸಿದರೆ ಕೆಲಸವನ್ನೆಲ್ಲಾ ನಿಲ್ಲಿಸಿಬಿಡುತ್ತಿದ್ದವು. ಒಂದು ಅಂಗಡಿಯಾದರೂ ತೆರೆಯದೆ, ಒಂದು ಕಾರ್ಖಾನೆಯಾದರೂ ಕೆಲಸ ಮಾಡದ ವೇಳೆಗಳಿಗಾಗಿ ನಾನು ತಿರುಗಿದ್ದೇನೆ.

ಗ್ರಾಮ ಗ್ರಾಮಗಳೇ ಪಾಲಿಯದದ್ದು ನೋಡಿದ್ದೇನೆ. ಸರಕಾರ ಕಂದಾಯ ಕೊಡಲು ಇನ್ಕಾರ ಮಾಡಿ ಪೋಲೀಸಿನವರ ಹಿಡಿತಕ್ಕೆ ಸಿಕ್ಕದಂತೆ ಬೇರೆ ಊರುಗಳಿಗೆ ಹೋಗಿಬಿಟ್ಟಿದ್ದರು. ಬ್ರಿಟಿಷ್ ಸಾಮಾನು ಯಾವುದನ್ನೂ ಕೊಂಡುಕೊಳ್ಳರು. ಸಾರಾಯಿ ಅಂಗಡಿಗಳ ಮುಂದೆ ಪಿಕೆಟ್ ಮಾಡಿ ಅಂಗಡಿಗಳು ಮುಚ್ಚಿ ಹೋಗಿ ಸರಕಾರದ ಖರ್ಚಿಗೆ ಲಂಡನಿನಲ್ಲಿ ಸಾಲ ಎತ್ತಬೇಕಾಯಿತು. ಜನರ ಒಗ್ಗಟ್ಟಿನ ವಿಷಯದಲ್ಲಿ ಸಂಶಯಪಡಬೇಕಾದುದಿಲ್ಲ. ಕಣ್ಣಿನಿಂದ ನೋಡಬಹುದು. ಎಲ್ಲರೂ ಬಿಳಿ ಗಾಂಧಿ ಟೊಪ್ಪಿಯನ್ನೇ ಧರಿಸಿದ ಗ್ರಾಮಗಳನ್ನು ನಾನು ನೋಡಿದ್ದೇನೆ. ಈಗ ನಾವು ಹಿಂದೀಯರನ್ನು ತೃಪ್ತಿಪಡಿಸದೆ ಹೋದರೆ ಪುನಃ ಪ್ರಾರಂಭವಾಗುವ ಹೋರಾಟವು ಬಹಳ ಬಲವಾಗುತ್ತದೆ. ಅದನ್ನು ತಡೆಯಲು ಸಾಧ್ಯವಾಗಲಾರದು. ಈಗಿನ ಪ್ರಾಪಂಚಿಕ ಸ್ಥಿತಿಯಿಂದ ಕೃಷಿ ಉತ್ಪತ್ತಿಗಳಿಗೆ ಬೆಲೆ ಇಲ್ಲದಿರುವುದರಿಂದ ಇನ್ನು ಪ್ರಾರಂಭವಾಗುವ ಹೋರಾಟವು ಸಾಮಾಜಿಕ ಕ್ರಾಂತಿ ರೂಪವನ್ನೇ ತಾಳಬಹುದು.

ದುಂಡು ಮೇಜು ಪರಿಷತ್ತಿನಲ್ಲಿ ಚರ್ಚೆಯಾಗುತ್ತಿರುವ ವಿಷಯಗಳನ್ನು ನೋಡುವ. ಹಿಂದೂಸ್ಥಾನದ ರಾಜರುಗಳು ಸಹ ಸೇರುವ ಸಂಯುಕ್ತ ರಾಜ್ಯವಾಗುವ ಧ್ಯವರ್ತಿ ಸರಕಾರದಲ್ಲೂ, ಪ್ರಾಂತ್ಯಗಳಲ್ಲೂ ಮಂತ್ರಿಗಳೇ ಕೌನ್ಸಿಲುಗಳಿಗೆ ಜವಾಬು ಮಾಡಬೇಕು. ವರ್ಷಗಳನಂತರ ಪುನಃ ಅರ್ಧ ಶತ್ರು ಹಮರ್ದ ಸ್ಥಿತಿ ದಿಲ್ಲಿಯಿಂದ ರಾಜ್ಯಭಾರ ನಡಿಸುತ್ತದೆ. ಪ್ರಾಂತ್ಯದ ಮಂತ್ರಿಗಳ ಆಡಳಿತವೇ. ಈ ಬದಲಾವಣೆಯಿಂದ ಸ್ಥಾನದ ಆತ್ಮಗೌರವವು ಎಷ್ಟೋ ಹೆಚ್ಚುತ್ತದೆ. ಜಯಿಸಲ್ಪಟ್ಟ ಜನರೆಂತಲೂ, ಪರಕೀಯರಿಂದ ಆಳಲ್ಪಡುವ ಜನರೆಂತಲೂ ಹಿಂದೀಯರು ಎಣಿಸಿಕೊಳ್ಳುವುದಿಲ್ಲ.

ಕೆಲವು ಕಾಲದ ವರೆಗೆ ಮಾತ್ರ ಕೆಲವು ಭದ್ರತೆಗಳು. ಸೈನ್ಯ, ಪರ ರಾಷ್ಟ್ರ ಸಂಬಂಧ, ಹೊರಗಿನ ಸಾಲ, ನಾಣ್ಯ ಚಲಾವಣೆ ಇತ್ಯಾದಿ ಕೆಲವು ವಿಷಯಗಳು ವೈಸರಾಯರಲ್ಲೇ ಉಳಿದಿರಬೇಕೆನ್ನುತ್ತಾರೆ. ಆದಾಯ ವೆಚ್ಚದ ಹಕ್ಕು ಹಿಂದೀಯರಿಗೆ ಸಿಕ್ಕಿದ ವಿನಹ ಗ್ರಾಮವಾಸಿಗಳ ಬಡತನವನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಕೋಟಿಗಟ್ಟಲೆ ಜನರು ಅರ್ಧ ಹೊಟ್ಟೆಯಲ್ಲಿ ಜೀವಿಸುತ್ತಾರೆಂಬುದರಲ್ಲಿ ಸಂಶಯವಿಲ್ಲ. ದಿನಕ್ಕೆ 2½ ಪೆನ್ಸ್ ಸಂಪಾದಿಸುತ್ತಾರೆ. ವರ್ಷದಲ್ಲಿ 4 ತಿಂಗಳು ಕೆಲಸವಿಲ್ಲದಿದ್ದರೆ ಸ್ಥಿತಿ ಹೇಗಿದ್ದೀತು. ನಾನು ನೋಡದೆ ಇರುವ ಮಕ್ಕಳಿರುವ ಗ್ರಾಮಗಳನ್ನು ನೋಡಿದ್ದೇನೆ. ಶೇಕಡ 37½ರಿಂದ 75ರ ವರೆಗೆ ಬಡ್ಡಿ ತೆರುವ ಸಾಲಕ್ಕೆ ಒಳಗಾಗಿದ್ದಾರೆ. ವರ್ಷಕ್ಕೆ ಎರಡಾವರ್ತಿ ಕಾಲರಾ ಮಲೇರಿಯಾಕ್ಕೆ ತುತ್ತಾಗುತ್ತಾರೆ. 100ರಲ್ಲಿ 72 ಜನರು ಓದು ಬರಹ ತಿಳಿಯದು. ಆದರೂ ಒಟ್ಟು ಸರಕಾರದ ಉತ್ಪತ್ತಿಯಲ್ಲಿ ಬರೇ ಶೇಕಡ ಎಂಟರಷ್ಟು ಮಾತ್ರ ವಿದ್ಯಾಭ್ಯಾಸ, ಆರೋಗ್ಯ ಮುಂತಾದ ಸಾಮಾಜಿಕ ವಿಷಯಗಳಿಗೆ ಖರ್ಚಾಗುತ್ತದೆ. ಮಿಲಿಟರಿಗೆ ಶೇಕಡ 26ರಷ್ಟು ಖರ್ಚಾಗುತ್ತದೆ. ತೆರಿಗೆ ಕೊಡಲಾಗದಿರುವ ಗ್ರಾಮದವರ ಮೇಲೆ ಮಿಲಿಟರಿ ಖರ್ಚು ಬಿದ್ದಿದೆ. ಬಿಳೇ ಸಿಪಾಯಿ ಮತ್ತು ಇತರ ಸರಕಾರಿ ನೌಕರರ ಸಂಬಳದ ಹೊರೆಯನ್ನು ತಪ್ಪಿಸಿದ ವಿನಹ ಗ್ರಾಮಗಳ ಕಷ್ಟವನ್ನು ನಿವಾರಿಸಲಾಗದು. ಸ್ವರಾಜ್ಯ ಕೊಡುವ ನಿಜವಾದ ಮನಸಿದ್ದರೆ ಬಿಳಿ ಸೈನ್ಯದ ಅವಶ್ಯಕತೆಯೇ...

COORG FOREST DEPARTMENT
SOUTH DIVISION

Timber Sale Notice

Mercara, the 22nd October 1931

Tenders are invited for the purchase of about 11000 c ft of 'A' class Teak, 7000 ... class Teak, 110009 c ft of Matti, 5700 c ft of Nandi which are anticipated to be available ... 1931—32 fellings and 1589 c ft of B ... 1930—31 fellings The timber will be delivered at the Hunsur Depot as it becomes ready commencing from about the 1st week of December 1931 in the case of Teak, Matti and Nandi ... s available for immediate delivery

Tenders should reach the Divisional Forest Officer South Coorg, on or before 11th November 1931 Further particulars will be furnished on application

1—



16—14

ಎಂಪೈರ್ ಆಫ್ ಇಂಡಿಯಾ ಲೈಫ್ ಅಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು —
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು —
52—3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

52—10

ವರ್ತಮಾನ ಸಂಗ್ರಹ.

ಒಳದೇಶ.

ಈ ವಾರ ಮಡಿಕೇರಿಯಲ್ಲಿ ಮೋಡ ಕವಿದುಕೊಂಡಿದ್ದು 1.7 ಇಂಚು ಮಳೆಯೂ ಬಿತ್ತು.

ಕಳೆದ ವಾರ ಗೋಣಿಕೊಪ್ಪಲು ಮತ್ತು ಶ್ರೀಮಂಗಲದಲ್ಲಿ ಪ್ಲೇಗು ಇಲಿಗಳು ಸತ್ತವೆಂದು ತಿಳಿಯಬರುತ್ತದೆ.

ಮ॥ ನಿಡ್ಯಮಲೆ ಸೋಮಣ್ಣನವರು ಬಿ. ಎಲ್. ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿಯಲು ಸಂತೋಷಪಡುತ್ತೇವೆ.

ಕಳೆದ ಸೆಪ್ಟೆಂಬರು ತಿಂಗಳಲ್ಲಿ ಕೊಡಗಿನಲ್ಲಿ 390 ಮರಣಗಳೂ, 357 ಜನನಗಳೂ ಸಂಭವಿಸಿವೆಯೆಂದು ಪ್ರಕಟವಾಗಿದೆ.

ಕಳೆದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಮ॥ ಮುತ್ತರಂಡ ಸಿ. ಅಪ್ಪಚ್ಚನವರೂ ತೇರ್ಗಡೆ ಹೊಂದಿರುವರೆಂದು ತಿಳಿಯ ಬರುತ್ತದೆ.

ವೀರಾಜಪೇಟೆ ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷರಾಗಿ ಮ॥ ಟಿ ಆರ್. ತಿರುವೆಂಗಡ ಪಿಳ್ಳೆಯವರೂ, ಉಪ ಅಧ್ಯಕ್ಷರಾಗಿ ಮ॥ ಎ ಕೆ. ಕೃಷ್ಣಯ್ಯನವರೂ ಚುನಾಯಿಸಲ್ಪಟ್ಟಿರುವರು

ವೀರಾಜಪೇಟೆ ಮುನ್ಸೀಫರಾದ ಮ॥ ಯಸ್ ಮುದ್ದಪ್ಪ ಬಿ ಎ, ಬಿ ಎಲ್, ರವರಿಗೆ ಕಳೆದ ತಾ 15ರಿಂದ ಸೆಕೆಂಡ್ ಕ್ಲಾಸ್ ಮೇಜಿಸ್ಟ್ರೇಟರ (ಕ್ರಿಮಿನಲ್) ಅಧಿಕಾರವು ಕೊಡಲಾಗಿದೆ.

ವೀರಾಜಪೇಟೆ ಮುನ್ಸಿಪಲ್ ಕೌನ್ಸಿಲಿನಲ್ಲಿ ಕೊಡಗರ ಪರವಾಗಿ ಖಾಲಿ ಇರುವ ಒಂದು ಸ್ಥಳಕ್ಕೆ ಮ॥ ಕೆ. ಸ ... ನವರು ಮತ್ತು ಮ॥ ಪಿ. ಎ ನಂಜಪ್ಪನವರು ಉಮೇದುವಾರರಾಗಿ ಅರ್ಜಿ ಹಾಕಿರುವರೆಂದು ತಿಳಿಯ ಬರುತ್ತದೆ.

ಇಂಡಿಯಾದ ಮಲೇರಿಯಲ್ ಸರ್ವೆಯ ಆಕ್ಟಿಂಗ್ ಡೈರೆಕ್ಟರಾಗಿರುವ ಮೇಜರ್ ಜಿ. ಕವೆಲ್, ಐ. ಎಂ ಯಸ್. ರವರು ಕಸೌಲಿಯಿಂದ ಕಳೆದ ತಾ. 26 ರಲ್ಲಿ ಮಡಿಕೇರಿಗೆ ಬಂದು, ತಾ. 29 ರಲ್ಲಿ ವಾಪಸು ಹೋದರೆಂದು ತಿಳಿಯುತ್ತೇವೆ

ಉತ್ತರ ಕೊಡಗು ತಾಲೋಕಿನ ರಾಗೋಡಿನಲ್ಲಿರುವ ದನಗಳ ದೊಡ್ಡಿಯು ಈ ತಾ. 14ರಿಂದ ಮುಚ್ಚಲ್ಪಡುವದೆಂದೂ, ಶನಿವಾರಸಂತೆ ಹೋಬಳಿಯ ... ಾಗಿಸಹಳ್ಳಿಯಲ್ಲಿ ಈ ತಾ. 15ರಿಂದ ಒಂದು ದೊಡ್ಡಿಯು ತೆರೆಯಲ್ಪಡುವದೆಂದೂ ಗಜೆಟಿನಲ್ಲಿ ಪ್ರಕಟವಾಗಿದೆ.

ಬೆಪ್ಪುನಾಡ ಕನಂಗಮುರೂರು ಗ್ರಾಮದಲ್ಲಿ ಕೆಲುಗು ಒಣಜೆಗರ ಒಬ್ಬ ಹುಡುಗನಿಗೆ ಈ ತಾ 5 ರಲ್ಲಿ ಮಧ್ಯಾಹ್ನದ ವೇಳೆ 2 ಗಂಟೆ ಸಮಯದಲ್ಲಿ ಗದ್ದೆಯ ಬಳಿ ಮಿಂಚು ಹೊಡೆದು, ಶರೀರದ ಅರ್ಧ ಭಾಗ ಬೆಂದು ಹೋಗಿ, ಕೂಡಲೆ ಮೃತನಾದನೆಂದು ವರ್ತಮಾನ.

ಕಳೆದ ತಿಂಗಳ 14ರಲ್ಲಿ ಒಂದು ತಿಂಗಳು ಕಠಿಣ ಸಜೆಗೆ ಗುರಿ ಮಾಡಲ್ಪಟ್ಟು, ಮಡಿಕೇರಿ ಜೈಲಿನಲ್ಲಿದ್ದ ಜೇನು ಕುರುಬರ ಮುತ್ತನು ತಾ. 25-10-'31ರಲ್ಲಿ ಮಡಿಕೇರಿ ಕೋಟೆಯ ಕಕ್ಕಸನ್ನು ತ ಚಿ ಮಾಡುತ್ತಿದ್ದಾಗ್ಯೆ ತಪ್ಪಿಸಿಕೊಂಡು ಓಡಿ ಹೋದವನು ಇನ್ನೂ ಸಿಕ್ಕಿರುವುದಿಲ್ಲವೆಂದು ತಿಳಿಯುತ್ತೇವೆ.

ದುಂಡು ಮೇಜು ಪರಿಷತ್ತಿನ ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಅಧ್ಯಕ್ಷರಾದ ಲಾರ್ಡ್ ಶ್ಯಾಂಕಿಯವರು ತಯಾರಿಸಿದ ವರದಿಯಲ್ಲಿ ಫೆಡರಲ್ ... ನ್ಯಾಯ ವಿಧಾಯಕ ಸಭೆಗಳಲ್ಲಿಯೂ ಕೊಡಗಿಗೆ ಒಂದೊಂದು ಪ್ರತಿನಿಧಿಯನ್ನು ಕೊಡಬೇಕೆಂದು ಸಿಫಾರಸು ಮಾಡಲಾಗಿದೆಯೆಂದು ತಿಳಿಯ ಬರುತ್ತದೆ

ರಿಟ್ರೆಂಚ್‌ಮೆಂಟ್ ಕಮಿಟಿ ಮೀಟಿಂಗೊಂದು ಈ ತಾ 3 ರಲ್ಲಿ ಮಡಿಕೇರಿಯಲ್ಲಿ ನಡೆಯಿತು ಈ ಕಮಿಟಿ ಸಭೆಯು ಈಗಿನ ಉದ್ಯೋಗಸ್ಥರ ಸಂಬಳವನ್ನು ಕಡಿಮೆ ಮಾಡು ... ವಿಷಯ ... ಇಂಡಿಯಾ ಸರಕಾರದವರು ಮಾಡುವ ತೀರ್ಮಾನವನ್ನು ... ಯುತ್ತಿರುವರೆಂತಲೂ ಬಾಕಿ ಎಲ್ಲಾ ವಿಷಯಗಳಲ್ಲಿ ... ಸಿಫಾರಸ್ಸುಗಳನ್ನು ಒಪ್ಪಿರುವರೆಂತಲೂ ವರ್ತಮಾನ

ಶನಿವಾರಸಂತೆ ಹೋಬಳಿ ... ಸಹಕಾರ ಸೊಸೈಟಿಯ ಅಧ್ಯಕ್ಷರೂ, ಸಹಕಾರ ಯೂನಿಯನ್ನಿನ ... ರಾಗಿದ್ದ ಕೆರೆಹಳ್ಳಿ ಮಾಜಿ ಶಾನಭೋಗರಾದ ವಿ. ... ಪ್ಪನವರು ತಾ. 24-10-'31 ರಲ್ಲಿ ತೀರಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ. ಇವರ ಮರಣಕ್ಕಾಗಿ ಸಹಕಾರ ಯೂನಿಯನ್ನಿನವರು ವ್ಯಸನ ಸೂಚಕ ಠರಾವನ್ನು ಪಾಸುಮಾಡಿದರೆಂದು ತಿಳಿಸಿರುತ್ತಾರೆ.

ಜೇನಿನ ಗೂಡನ್ನು ಹಾಳುಮಾಡದೆ ಅದರಿಂದ ಜೇನನ್ನು ತೆಗೆಯುವ ಯಂತ್ರವೊಂದಿದೆ. (ಹನಿ ಎಕ್ಸ್‌ಟ್ರಾಕ್ಟರ್) ಇದರಿಂದನ್ನು ಅಮೇರಿಕಾ ದೇಶದಿಂದ ತರಿಸಬೇಕಾದರೆ 100 ರೂಪಾಯಿಗಿಂತ ಹೆಚ್ಚು ಕ್ರಯವಾಗುತ್ತೆ. ಇಂತಹ ಯಂತ್ರವೊಂದನ್ನು ಪೊನ್ನಂಪೇಟೆ ಕಾರ್ಖಾನೆಯ ... ಶಿಂಭೋಪಾಸನೆಂದುದೆಯುವರು ಬಹು ದೈತರೂ ಕೂಡ ... ಮಾಡುಯ ... ಕಮ್ಮಿ ಬೆಲೆಗೆ ಮಾಡಿಸಿ, ವ್ಯವಸಾಯ ವಸ್ತು ಪ್ರದರ್ಶನದಲ್ಲಿ ತೋರಿಸಿದರು. ವ್ಯವಸಾಯ ಸಂಚಾಲಕರು ಈ ಯಂತ್ರವನ್ನು ಪರೀಕ್ಷಿಸಿ ಈ ಕೆಲಸಕ್ಕೆ ಮೆಚ್ಚಿ, ಬಹುಮಾನವಾಗಿ ಒಂದು ಬೆಳ್ಳಿಯ ಮೆಡಲನ್ನು ಅವರಿಗೆ ... ಕೊಟ್ಟಿರುವರೆಂದು ತಿಳಿಯಲು ಸಂತೋಷಪಡುತ್ತೇವೆ.

ಹಿಂದೂದೇಶ.

ಕಳೆದ ವಾರ ವಿಶಾಖಪಟ್ಟಣ ಡಿಸ್ಟ್ರಿಕ್ಟಿನಲ್ಲಿ ಜೋರಾದ ಮಳೆ ಬಿದ್ದು ನೆರೆ ಬಂದು ತುಂಬಾ ನಷ್ಟವುಂಟಾಗಿದೆಯಲ್ಲದೆ 200 ಜನರು ಪ್ರಾಣವನ್ನು ಕಳಕೊಂಡರು.

ಹೈದರಾಬಾದು ಸಂಸ್ಥಾನದ ನೈಜಾಮರ ಹಿರೇಮಗ (ಯುವರಾಜ)ರಾದ ಸಾಹಿಬ ಝಾದಾ ಅಝಂಜಾರವರಿಗೂ, ತುರ್ಕಿಸ್ಥಾನದ ಮಾಜಿ ಕಾಲಿಫರವರ 22 ವರ್ಷ ಪ್ರಾಯದ ಮಗಳಿಗೂ ಲಗ್ನ ಬೆಳಸಲು ಪತ್ರವ್ಯವಹಾರಗಳು ನಡೆಯುತ್ತಿವೆಯಂತೆ.

ಈ ತಾ. 3 ರಲ್ಲಿ ಕಲ್ಕತ್ತಾದಲ್ಲಿ ಮ॥ ಸುಭಾಷ್ ಚಂದ್ರಬೋಸ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಮೀಟಿಂಗು ನಡೆದು, ಕಳೆದ ವಾರ ಬಂಗಾಳದಲ್ಲಿ ಇಬ್ಬರು ಯೂರೋಪಿಯನರಿಗೆ ಗುಂಡು ಹೊಡೆದ ಹಿಂಸಾತ್ಮಕ ಕೃತ್ಯಗಳನ್ನು ಖಂಡಿಸಿ ಠರಾವು ಪಾಸು ಮಾಡಿದರು.

ಬರುವ ಮಾರ್ಚಿಯಲ್ಲಿ ಪೂನಾದಲ್ಲಿ ನಡೆಯಲಿಕ್ಕಿರುವ ಕಾಂಗ್ರೆಸ್ ಮಹಾಸಭೆಯ ಅಧ್ಯಕ್ಷ ಪದವಿಗೆ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯವರು ಗಾಂಧಿಜಿ, ಮ॥ ಪುರುಷೋತ್ತಮದಾಸ್ ಟಾಂಡನ್, ಮ॥ ಬಿ ರಾಜೇಂದ್ರ ಪ್ರಸಾದ್, ಮ॥ ಸಿ. ರಾಜಗೋಪಾಲಚಾರ್ಯರ್, ಮತ್ತು ವಿ. ಸ. ಸ್ ಪೆರಿನ್ ಕ್ಯಾಪ್ಟನ್‌ರವರ ಹೆಸರುಗಳನ್ನು ಶಿಫಾರಸು ಮಾಡಿರುವರು.

ಪೇಶಾವರದಲ್ಲಿ ಖಿಲಾಫತ್ ಸ್ವಯಂ ಸೇವಕರು ವೇಶ್ಯಾ ಗೃಹಗಳ ಮುಂದೆ ನಿಂತು ಪಿಕೆಟ್ ಮಾಡುತ್ತಿರುವುದರಿಂದ ಅಲ್ಲಿ ವೇಶ್ಯರಿಗೆ ಉತ್ಪತ್ತಿ ಬಹು ಕಡಿಮೆಯಾಗಿ ತೊಂದರೆಗೆ ಬಿದ್ದಿರುವರು. ಅವರಲ್ಲಿ ಅನೇಕರು ಮುಂದಿ ಪಟ್ಟಣವನ್ನೇ ಬಿಟ್ಟಿರುವರು. ವೇಶ್ಯರ ಮನೆಗಳನ್ನು ಪಟ್ಟಣದ ಹೊರಗೆ ಸಾಗಿಸಬೇಕೆಂಬ ಠರಾವು ಅಲ್ಲಿಯ ಮುನ್ಸಿಪಲ್ ಕೌನ್ಸಿಲಿನಲ್ಲಿ ಚರ್ಚಿಸಲ್ಪಡಲಿಕ್ಕಿದೆ

ಕಾಶ್ಮೀರದ ಮುಸಲ್ಮಾನರ ಹಕ್ಕು ಬಾಧ್ಯತೆಗಳ ವಿಷಯ ಚಳವಳಿಯೆಬ್ಬಿಸಿ ದೊಂಬಿಗಾರರನ್ನು ಬಗ್ಗಿಸಲು ಬ್ರಿಟಿಷ್ ಪ್ರಾಂತ್ಯದಿಂದ ಅಲ್ಲಿಗೆ ಹೋದ ಮುಸಲ್ಮಾನರ ಜಾಠಾದವರಿಗೂ, ಅಲ್ಲಿಯ ಹಿಂದೂಗಳಿಗೂ ಜಗಳವುಂಟಾಗಿ ನಾಲ್ಕು ಜನರು ಮರಣ ಹೊಂದಿದರು. ಈ ಗಲಾಟೆಯನ್ನು ಅಡಗಿಸಲಿಕ್ಕಾಗಿ ಕಾಶ್ಮೀರಕ್ಕೆ ಬ್ರಿಟಿಷ್ ಸೈನಿಕರು ಕಳುಹಿಸಲ್ಪಟ್ಟಿರುವರು

ಮಲಬಾರಿನ ಗುರುವಾಯೂರಿನಲ್ಲಿ ಅಸ್ಪೃಶ್ಯರನ್ನು ದೇವಸ್ಥಾನದೊಳಗೆ ಹೋಗಲು ಬಿಡುವಂತೆ ಮಾಡಲು ಸತ್ಯಾಗ್ರಹ ಪ್ರಾರಂಭಿಸಲ್ಪಟ್ಟಿದೆ ಇದಕ್ಕಾಗಿ ಕಣ್ಣನೂರಿನಿಂದ ಅಸ್ಪೃಶ್ಯ ಸ್ವಯಂಸೇವಕರು ಕೆಲವರು ಕಾಲ್ನಡೆಯಲ್ಲಿ ಮೆರವಣಿಗೆ ನಡಿಸಿ ಗುರುವಾಯೂರಿಗೆ ಹೋದರು. ಪೋಲೀಸಿನವರು ಅಲ್ಲಿಯ ದೇವಸ್ಥಾನದ ಸುತ್ತು ಮುಳ್ಳು ತಂತಿಯ ಬೇಲಿ ಹಾಕಿ, ಆಯುಧ ಪಾಣಿಗಳಾಗಿ ಪಹರೆ ನಿಂತಿರುವರಂತೆ!

ಮಹಾತ್ಮ ಗಾಂಧಿಯವರು ಬರುವ ಜನವರಿ ತಾರೀಖಿನಲ್ಲಿ ಬಿಡುಗಡೆ ಹೊಂದುವರೆಂದು. ಹಿಂದಿನ ವರ್ಷ ... ಪರ್ವತ ಶಿಖರದಿಂದ ಭವಿಷ್ಯ ನುಡಿದ ಶ್ರೀ ಶಾಂತಿ ವಿಜಯ ಸ್ವಾಮಿಗಳವರು 'ಇದೇ ನವಂಬರ್ ತಾ. ೧೪ರಿಂದ ಶಾಂತಿ ಸ್ಥಾಪನೆಯಾಗುವದೆಂದೂ, ಇಂಡಿಯಕ್ಕೆ ಇಷ್ಟ ಸಿದ್ಧಿಯಲ್ಲಿ ಕೇಳಿದ ಹಿಂದಿನ ಆಕಾಂಕ್ಷೆಗಳು ಪೂರೈಸಲ್ಪಡುವವೆಂದೂ, ಗಳೆಯದಲ್ಲಿ ಮಹಾ ಯುದ್ಧವೊಂದು ನಡೆಯುವುದೆಂದೂ' ಈಗ ಮತ್ತೊಮ್ಮೆ ಭವಿಷ್ಯದ್ವಾಣಿಯನ್ನಾಡಿರುತ್ತಾರೆ

"ಈಗಿನ ಲಾ ಕಾಲೇಜುಗಳಲ್ಲಿ ... ರು ರಾಜನೀತಿಯನ್ನೂ ಅಲ್ಲ, ಬಾಣಸವನ್ನೂ ಅಲ್ಲ ... ಸತ್ವವನ್ನಾಗಿದೆ ಇಂಗ್ಲೀಷು ವಿದ್ಯಾಭ್ಯಾಸ ಮಾಡುವಾಗಲೇ ದಾಸನಾಗಲು ಬೇಕಾದಷ್ಟು ಅನುಭವ ಸಿಕ್ಕುತ್ತೆ. ನಾನು ... ಕಾಲೇಜಿಗೆ ಹೋಗಿ ಕಷ್ಟ ಅನುಭವಕ್ಕೆ ಒಪ್ಪ ... ದ ಕಾರಣ ಬಂಗಾಳ ಪ್ರಾಂತ್ಯದ ಅಲ್ಲಿಕೆಯ ಅಧಿಕಾರವು ನನಗೆ ದೊರಕದೆ ಹಾಸು ಮೊಟ್ಟ ಮೊದಲು ಲಾ ಕಾಲೇಜು. ... ಮುಚ್ಚಿ ... ಎಂದು ಸರ್ ಪ್ರಫುಲ್ಲ ಚಂದ್ರ ... ರವರು ಕಲ್ಕತ್ತದಲ್ಲಿ ನಡೆದ ಒಂದು ಸಭೆಯಲ್ಲಿ ಹೇಳಿದರು.

ತಾರೀಖು ... ರಲ್ಲಿ ಕಲ್ಕತ್ತಾ ಯೂರೋಪಿಯನ್ ಸಂಘದ ಅಧ್ಯಕ್ಷರಾದ ಮಿ ... ವಿಲ್ಲಿಯರ್ಸ್‌ರವರು ಕ್ಲೈವ್ ಬಿಲ್ಡಿಂಗ್ಸ್‌ಯ ತಮ್ಮ ಆಫೀಸಿನಲ್ಲಿ ಕುಳಿತು ಬಂಗಾಳದಲ್ಲಿನ ಹಿಂಸಾ ಚಳವಳವನ್ನು ದುರಿಸಲು ಏರ್ಪಟ್ಟ 'ರಾಜ ಭಕ್ತರ ಚಳವಳ' (Royalist movement) ವಿಷಯವಾಗಿ ಕೆಲಸಮಾಡನೆ ಮಾತಾಡುತ್ತಿದ್ದಾಗಲೇ ಒಬ್ಬ ಯುವಕನು ಪ್ರವೇಶಿಸಿ ಪಿಸ್ತೊಲು ಹೊಡೆದನು. ವಿಲ್ಲಿಯರ್ಸ್‌ರವರಿಗೆ ಕಿಬ್ಬೊಟ್ಟೆಗೆ ಕೊಂಚ ಪೆಟ್ಟು ತಗಲಿದೆ; ಆಸ್ಪತ್ರೆಯಲ್ಲಿರುವರು. ಹೊಡೆದವನು ... ಲವಾಸ ಗುಪ್ತನೆಂಬವನೆಂದೂ, ಮಿಡ್ನಾಪುರದಲ್ಲಿ ಡಿ ಮೇಜಿಸ್ಟ್ರೇಟ್ ಪೆಡ್ಡಿಯವರನ್ನು ಕೊಂದವನು ಇವನೇ ಎಂದೂ, ಕಲ್ಕತ್ತಾ ಯೂರೋಪಿಯನ್ ಸಂಘದ ಮೇಲೆ ಸೇಡು ತೀರಿಸುವ ಪ್ರತಿಜ್ಞಾ ಪತ್ರವು ಅವನ ಬಾಗಿ ಕಿಸೆಯಲ್ಲಿತ್ತೆಂದೂ, ಅವನನ್ನು ಕೈದು ಮಾಡಲಾಗಿದೆಯೆಂದೂ ತಿಳಿದು ಬರುತ್ತದೆ.

ವಿದೇಶ.

ಮಹಾತ್ಮ ಗಾಂಧಿಯವರು ಈ ತಾ. 3 ರಲ್ಲಿ ... ಗಂಟೆವರೆಗೆ ಬ್ರಿಟನ್ನಿನ ಮುಖ್ಯ ಮಂತ್ರಿಯಾದ ಮಿ. ರಾಮ್ಸೆ ಮೆಕ್ಡಾನಾಲ್ಡ್‌ರವರೊಂದಿಗೆ ಇಂಡಿಯದ ಸಮಸ್ಯೆಯನ್ನು ಕುರಿತು ಸಂಭಾಷಣೆ ನಡಿಸಿದರು. ಈ ಸಂಭಾಷಣೆಯಿಂದ ತನಗೆ ತೃಪ್ತಿಯಾಗಲೀ, ಅತೃಪ್ತಿಯಾಗಲೀ ಉಂಟಾಗಿರುವುದಿಲ್ಲವೆಂದು ಮಹಾತ್ಮರು ಹೇಳಿರುವರು.

ಇರುವೆಗಳನ್ನು ಕುರಿತು ಒಬ್ಬ ಪ್ರೊಫೆಸರರು ಹೇಳಿರುವರೇನೆಂದರೆ— ಇರುವೆಗಳು ಸುಮಾರು 3,00,00,00,000 ವರ್ಷಗಳಿಂದ ಭೂಮಿಯ ಮೇಲೆ ವಾಸವಾಗಿವೆ. ಅವುಗಳಲ್ಲಿ ಸುಮಾರು 40,000 ಜಾತಿಗಳಿವೆ. ಅವುಗಳ ಜೀವನವು ಮನುಷ್ಯರ ಜೀವನವನ್ನು ಹೋಲುತ್ತದೆ. ಅವು ಸಾವಿರಾರು ಒಟ್ಟಿಗೆ ಇದ್ದರೂ ಅವುಗಳಲ್ಲಿ ಗಂಡ ಹೆಂಡರುಗಳೆಂಬ ಭೇದವಿದೆಯಲ್ಲದೆ ಸರ್ವ ವ್ಯವಸ್ಥೆಯೂ ಕೂಡ ಇದೆ!

ಬ್ರಿಟನ್ನಿನ ಹೊಸ ಪಾರ್ಲಿಮೆಂಟಿನ ಪ್ರಥಮ ಮೀಟಿಂಗು ಈ ತಾ 3 ರಲ್ಲಿ ಸೇರಿತು. ಕ್ಯಾಪ್ಟನ್ ಫಿಟ್ಸ್‌ರಾಯ್‌ರವರು ಮರಳಿ ಪಾರ್ಲಿಮೆಂಟಿನ ಅಧ್ಯಕ್ಷರಾಗಿ (ಸ್ಪೀಕರ್) ಆರಿಸಲ್ಪಟ್ಟರು. ಲೇಬರ್ ಪಾರ್ಟಿಯ ಮೊದಲಿನ ಅಧ್ಯಕ್ಷರಾದ ಮಿ. ಆರ್ಥರ್ ಹೆಂಡರ್ಸನ್‌ರವರು ಚುನಾವಣೆಯಲ್ಲಿ ಸೋತು ಹೋದದ್ದರಿಂದ ಮಿ. ಜಾರ್ಜ್ ಲ್ಯಾನ್ಸ್‌ಬರಿಯವರು ಪಾರ್ಲಿಮೆಂಟಿನ ಲೇಬರ್ ಪಾರ್ಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಬ್ರಿಟನ್ನಿನ ಹಳೇ ಸರಕಾರದ ಪ್ರಧಾನ ಮಂತ್ರಿಯಾದ ಮಿ. ಮೆಕ್ಡಾನಾಲ್ಡ್‌ರವರು ಹೊಸ ಸರಕಾರದ ಮಂತ್ರಿ ಮಂಡಲಿಯನ್ನು ಏರ್ಪಡಿಸಲು ಪ್ರಯತ್ನಿಸುತ್ತಿದ್ದಾರೆ. ಹೊಸ ಸರಕಾರದಲ್ಲಿ ಕನ್‌ಸರ್ವೇಟಿವ್ ಪಾರ್ಟಿಯವರೇ ದೊಡ್ಡ ಬಹುಮತದಲ್ಲಿರುವುದರಿಂದ ಲೇಬರ್ ಪಾರ್ಟಿಗೆ ಸೇರಿದ ಮಿ. ಮೆಕ್ಡಾನಾಲ್ಡ್‌ರವರಿಗೆ ಮಂತ್ರಿಗಳನ್ನು ಆರಿಸುವುದರಲ್ಲಿ ಈಗಾಗಲೇ ತೊಂದರೆಗಳುಂಟಾಗುತ್ತಿವೆ ಮುಂದೆ ಏನಾಗಲಿಕ್ಕಿದೆ ನೋಡಬೇಕು!

ನೋಟೀಸು.

1931ನೇ ಇಸವಿ ನವಂಬರ್ ತಾರೀಖು 21ನೇ ಶನಿವಾರ ದಿನ ಮಧ್ಯಾಹ್ನ 2 ಗಂಟೆಗೆ ಮಡಿಕೇರಿಯಲ್ಲಿ ಐಪೊನ್ನಾಟರ ಸಂಘದ ಹಾಲ್‌ನಲ್ಲಿ ಶೇರುದಾರರ ಮಹಾ ಸಭೆಯು (ಜನರಲ್ ಮೀಟಿಂಗು) ಸೇರುವದೆಂದು ಈ ಮೂಲಕ ತಿಳಿಸಲಾಗಿದೆ

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ.

1 1930—1931ನೇ ವರ್ಷದ ಆಡಳಿತ ವರದಿಯನ್ನೂ ಅದೇ ವರ್ಷದ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟು ಲಾಭ ನಷ್ಟಗಳ ಪಟ್ಟಿಗಳನ್ನೂ, ಮತ್ತು ಆಡಿಟರರ ಸರ್ಟಿಫಿಕೇಟನ್ನೂ ಮಹಾ ಸಭೆಯ ಮುಂದೆ ಇರಿಸುವುದು.

2 ಆಡಿಟರನ್ನು ನೇಮಿಸುವಿಕೆ.

3 1930—1931ನೇ ವರ್ಷಕ್ಕೆ ಆಡಿಟರರಿಗೆ ಕೊಡಬೇಕಾದ ಫೀಜು ನಿಷ್ಕರ್ಷೆ ಮಾಡುವಿಕೆ.

4 ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ

"ಕೊಡಗು" ಲಿಮಿಟೆಡ್, ಸಿ. ಯಮ್ ವೆಂಕಪ್ಪಯ್ಯ,
ಮಡಿಕೇರಿ, ತಾ 4.11.31 (ಕಾರ್ಯದರ್ಶಿ.)

"COORG AND THE COORGS"
By P. M. Muthanna,

With a preface By T. E. V. Raghavan B. A. (Hon) Pallachi.

This book with numerous illustrations traces briefly the origin of the Coorgs their manners and customs and gives an account of the history of the last R... the connection between E I C. Govt and Coorg and describes briefly the political history

Price. Cloth bound Rs. 1 4 -
Card Board Rs. 1/-

Supplied by:-

Co-operative Stores, Mercara, Coorg.

Emporium, Siddapur, "

Coorg Pharmacy, Virajapet, "

WANTED.

For the Central High School, Mercara, a teacher in the Secondary Grade Teacher's Cadre on Rs 41-2-61-1-7 per mensem, with effect from 13-1-1932 Intermediates or graduates preferred Training essential Kanarese as second language is essential and a science man will be preferred. Only natives of Coorg need apply Applications giving qualifications, age, experience in teaching and particulars as to place of birth and residence should reach the undersigned not later than 15th November 1931

F Edmonds
Inspector of Schools
Coorg and Bangalore

2—2.

ಮಹಾತ್ಮರುಗಳಂಥ ಮಾತುಗಳು.

ವಿವೇಕವಿಲ್ಲದವನು ತನ್ನನ್ನು ತಾನೇ ದೊಡ್ಡವನಾಗಿ ಭಾವಿಸಿಕೊಳ್ಳುತ್ತಾನೆ. ನಾನು ಅದನ್ನು ಮಾಡಿದೆನು, ಇದನ್ನು ಮಾಡಿದೆನು, ಎಂದು ಧಾಂಬಿಕನಾಗಿ ಹೇಳಿಕೊಳ್ಳುತ್ತಾನೆ. ಆದರೆ ಜ್ಞಾನವಂತನೋ, ಈಶ್ವರನು ಒಬ್ಬನೇ ದೊಡ್ಡವನೆಂದೂ ಸಕಲ ಕಾರ್ಯಗಳು ಅವನಿಂದಲೇ ನಡೆಸಲ್ಪಡುತ್ತವೆಂದೂ ತಿಳಿದುಕೊಳ್ಳುವನು.

ನೀನು ನಿನ್ನ ಜೀವಿತದ ಕಾಲವನ್ನು ಸರಿಪಡಿಸಿಕೊಳ್ಳಬೇಕೆಂದರೆ, ನಿನ್ನ ಬುದ್ಧಿಯನ್ನೂ, ಅನುಭವ ಜ್ಞಾನವನ್ನೂ, ಸರಿಯಾದ ಮಾರ್ಗದಲ್ಲಿ ಬಹು ಎಚ್ಚರಿಕೆಯಿಂದ ಉಪಯೋಗಿಸು.

ನೀನು ಜ್ಞಾನವಂತನಾಗಿರುವದು ಶ್ರೇಷ್ಠವೇ ಸರಿ? ಆದರೆ, ಆ ಜ್ಞಾನವನ್ನು ಇತರರು ಹೊಂದಲು ನೀನು ಪ್ರಯತ್ನಿಸಬೇಕು. ಶರೀರವನ್ನು ಪೋಷಿಸುವುದಕ್ಕಿಂತಲೂ, ಜೀವಾತ್ಮಗಳನ್ನು ಪೋಷಿಸುವದು ಶ್ಲಾಘ್ಯವಾದುದು. 'ಜನಗಳ ಸೇವೆಯೇ ಜನಾರ್ಧನನ ಸೇವೆಯು'

ಲೋಕವು ಅನೇಕ ವಿಧವು. ಲೋಕದಲ್ಲಿ ಅವಿವೇಕಿಗಳು, ವಿವೇಕಿಗಳು ಎಂಬ ಎರಡು ತರದವರು ಉಂಟು. ಇವರುಗಳನ್ನು ನೀನು ತಿಳಿದಿರುವದು ಬಹು ಅವಶ್ಯವು.

ಲೋಕದಲ್ಲಿ ಸತ್ಯವು, ಅಸತ್ಯವು ವ್ಯಾಪಿಸಿರುವದು. ಸರಿಯೇ. ಆದರೆ ನಿನ್ನ ಬುದ್ಧಿಯನ್ನು ಸರಿಪಡಿಸಿ ನಿನ್ನ ಮಾರ್ಗದಲ್ಲಿ ನಡೆಯುವದು.

ಒಬ್ಬರಿಗೊಬ್ಬರು ಸ್ನೇಹವಾಗಿರುವದು, ವಿರೋಧವಾಗಿರುವದು, ಸಹಜವೇ. ಒಬ್ಬನು ನಿನ್ನನ್ನು ಕೋಪಿಸಿದರೆ, ಅವನು ನಿನ್ನ ವಿರೋಧಿ ಎಂದು ತಿಳಿಯಬೇಡ. ಕೋಪವು ಮೂರ್ಖತನವು. ವಿವೇಕವಿಲ್ಲದವರು ಕೋಪಗೊಳ್ಳುತ್ತಾರೆ. ಜ್ಞಾನಿಗಳು ಕೋಪವು ಎಂಥದೆಂದು ತಿಳಿಯರು. ಕೋಪಗೊಂಡವನ ವಿಷಯದಲ್ಲಿ ನೀನು ಮರುಗುವದು.

ಯಾವ ಕೆಲಸ ಮಾಡಿದರೂ, ಫಲವನ್ನು ಬಯಸಿ ಮಾಡಬೇಡ, ಕರ್ತವ್ಯವನ್ನು ಮಾಡಿದರೆ ಫಲವು ತಾನಾಗಿಯೇ ಬರುತ್ತದೆ.

ನಿಶ್ಚಯವಾದ ಒಂದು ನನವನ್ನು ನಿನ್ನ ಜೀವಿತ ಕಾಲದಲ್ಲಿ ಸ್ಥಾಪಿಸಿಕೊ. ಆ ನೆನಪು ಕೈಸೇರುವ ವರೆಗೂ ಅದನ್ನು ಬಿಡದೆ ಹಟದಿಂದ ನೀನು ಪ್ರಯತ್ನಿಸಬೇಕು. ಸಾಧಿಸಿಯೇ ತೀರುತ್ತೇನೆ, ಎಂಬ ತೀರ್ಮಾನ ನಿನಗೆ ಇರುವುದಾದರೆ, ಅಸಾಧ್ಯವಾದ ಕಾರ್ಯವು ಲೋಕದಲ್ಲಿ ಒಂದೂ ಇಲ್ಲವು.

[ಕಷ್ಟ] ಕಷ್ಟಪಡದೆ ಯಾವ ದೊಡ್ಡ ಕಾರ್ಯವನ್ನು ಒಬ್ಬನು ಸಾಧಿಸಲಾರನು. ತಪ್ಪುವದು, ಮಹತ್ತಾದ ವಿಘ್ನಗಳು, ಲೋಕಾಪವಾದಗಳು ಸಹಜವಾಗಿರುತ್ತವೆ. ಆದರೆ ನಿನ್ನ ಇಷ್ಟಪೂರ್ತಿ ಮಾಡಿಕೊಳ್ಳಬೇಕಾದರೆ ಇವುಗಳಿಗೆಲ್ಲ ಭಯಪಡಬೇಡ. ಧೈರ್ಯವಂತನೇ ಬಲವಂತನು.'

ತಿಳಿವು, ಬಲವು ಒಬ್ಬೊಬ್ಬನಿಗೂ ಇದೆ. ವಿವೇಕವೆಂಬುವುದು ಯಾವುದು? ಸರಿಯಾದ ಮುಂದು ಯೋಚನೆಯಿಂದ ಬೇಸರವಿಲ್ಲದೆ ಒಂದೇ ಹಟದಿಂದ ಮಾಡುವುದೇ ವಿವೇಕವು.

ಜೀವಿಯ ಕಾಲವೋ ಬಹು ಸೂಕ್ಷ್ಮವಾಗಿದೆ. ಆದ್ದರಿಂದ ಒಂದು ನಿಮಿಷವನ್ನು ಕೂಡ ವ್ಯರ್ಥಪಡಿಸದೆ ಉಪಯೋಗಕರವಾಗಿ ನಿಯೋಗಿಸು.

ಒಬ್ಬ ಮನುಷ್ಯನ ಯೋಗ್ಯತೆಯನ್ನು ಅವನು ಸಂಪಾದಿಸುವ ಐಶ್ವರ್ಯದಿಂದ ಆತನ ವ್ಯಸನಾಯದಿಂದ ಕಂಡು ತೀರ್ಮಾನಿಸುವದು ಶುದ್ಧ ಮೂರ್ಖತನವು.

ಲೋಕದಲ್ಲಿ ಇತರರು ಮೆಚ್ಚಲು ಯಾವ ಕೆಲಸವನ್ನು ಮಾಡಬೇಡವು. ಲೋಕವು ಬಹು ವಿಧವು. ನಿನ್ನ ಕರ್ತವ್ಯವನ್ನು ನೀನು ಮಾಡು.

'ನ. ಕ.'

ಸರಸ್ವತಿ ಪೂಜೆ.

ಕಳೆದ ತಾ 24ರಲ್ಲಿ ಮಡಿಕೇರಿ ಸೆಂಟ್ರಲ್ ಸ್ಕೂಲಿನ ವಿದ್ಯಾರ್ಥಿಗಳು ಸದರಿ ಶಾಲೆಯ ಹಾಲಿನಲ್ಲಿ ಮಾಡಿದ ಸರಸ್ವತಿ ಪೂಜೆಯ ಸಮಯದಲ್ಲಿ ಸದರಿ ಪೂಜೆಯನ್ನು ಕುರಿತು ಮೆ. ಬಿ ಶಾಮಣ್ಣನವರು ಮಾಡಿದ ಭಾಷಣದ ಸಾರಾಂಶ.—

ಈ ಸರಸ್ವತಿ ಪೂಜೆಯು ಸಪ್ತಮಿ ದಿನದಲ್ಲಿ ಮಾಡುವ ಒಂದು ವ್ರತ ಪೂಜೆಯಾಗಿರುವದು.

ಚೈತ್ರ ಶುಕ್ಲ ಸಪ್ತಮಿ ದಿನ ಗಂಗಾ ಪೂಜೆಯು, ಶ್ರಾವಣ ಕೃಷ್ಣ ಸಪ್ತಮಿ ದಿನ ಶೀತಲಾ ವ್ರತ, ಭಾದ್ರಪದ ಶುಕ್ಲ ಪಕ್ಷ ಸಪ್ತಮಿ ದಿನ ಮುಕ್ತಾಭರಣ ವ್ರತ, ಆಶ್ವೀಜ ಶುಕ್ಲ ಸಪ್ತಮಿಯಲ್ಲಿ ಸರಸ್ವತಿ ಪೂಜೆ ನಡಸಬೇಕೆಂಬುದು ಪೂರ್ವಿಕರು ವಿಧಿಸುತ್ತಾರೆ.

ಅದರಂತೆ ಪ್ರತಿ ಸಂವತ್ಸರದಲ್ಲಿಯೂ ಈ ಭಾರತ ಭೂಮಿಯಲ್ಲಿ ನಡಿಸುತ್ತಾ ಇವೆ. ಈ ಪೂಜೆಯನ್ನು ಆ ದಿನ ನಡಿಸಲು ಗಸ್ತರಿಂದ ಈ ದಿನ ನೆರವೇರಿಸಲು ಈ ಶಾಲಾ ವಿದ್ಯಾರ್ಥಿಗಳು ನಿಶ್ಚೈಸಿದ್ದು ಶ್ಲಾಘನೀಯವು.

ಯಾಕೆ ಸರಸ್ವತಿ ಪೂಜೆ ಮಾಡಬೇಕು, ಸರಸ್ವತಿ ಎಂದರೆ ಏನು, ಎಂಬದನ್ನು ತಿಳಿಯಬೇಕಾದದ್ದು. ಸರಸ್ವತಿ ಎಂಬ ಶಬ್ದವು [illegible]

ಎಂಬದರಿಂದ ಸರಸ್ವತಿ ಎಂಬದು ಆಗಿರುತ್ತೆ. ಇಂಥಾ ಸರಸ್ವತಿ ದೇವಿಯು ವಾಗಧಿದೇವತೆಯಾಗಿರುವಳು.

ಆದ್ದರಿಂದ ನಮಗಳ ಮಾರ್ಗವನ್ನು ಶುದ್ಧಪಡಿಸಿ ವಿದ್ಯಾವಂತರಾಗಬೇಕಾದರೆ ಸರಸ್ವತಿಯ ಅನುಗ್ರಹವನ್ನು ಸಂಪಾದಿಸಿಕೊಳ್ಳದೇ ಆಗುವುದಿಲ್ಲ. ಆದ್ದರಿಂದ ಅವಳ ಸ್ಮರಣೆ ಮಾಡುತ್ತಾ ಅವಳ ಸೇವೆಯಲ್ಲಿ ನಿರತರಾಗಬೇಕು. ಅವಳ ಅನುಗ್ರಹಕ್ಕೆ ಪಾತ್ರರಾಗಬೇಕಾದರೆ ಪ್ರತಿಯೊಬ್ಬ ಬಾಲಕನು ಯಮ ನಿಯಮಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಆಚರಣೆಯಲ್ಲಿಟ್ಟುಕೊಳ್ಳಬೇಕು

ಹಾಗಾದರೆ ಯಮ ನಿಯಮಗಳೆಂದರೆ ಏನು?

ಯಾವ ಪ್ರಾಣಿಗೂ ಹಿಂಸೆ ಮಾಡದಿರುವದು, ಯಾವಾಗಲೂ ಸುಳ್ಳು ಹೇಳದೆ ನಿಜವನ್ನೇ ಹೇಳುವುದು, ಇತರರ ವಸ್ತುಗಳನ್ನು ಅಪಹರಿಸದೇ ಇರುವದು, ಯಾವಾಗಲೂ ತ್ರಿಕರಣ ಶುದ್ಧಿಯಿಂದ ಇರುವದು, ಲೋಭ ಮಾಡದೇ ಇರುವದು.

ಈ ಐದು ನಿಯಮಗಳಿಗೆ ಯಮ ಎಂದು ಹೆಸರು

ಯಾವಾಗಲೂ ಶುದ್ಧವಾಗಿರುವದು, ಇದ್ದುದರಲ್ಲಿ ತೃಪ್ತಿಪಡುವದು, ಜಪತಪಾದಿಗಳನ್ನು ಮಾಡುವದು, ಶಾಸ್ತ್ರಗಳನ್ನು ತಿಳಿಯುವದು, ದೇವರಲ್ಲಿ ನಿಜವಾದ ಭಕ್ತಿ.

ಈ ಐದು ನಿಯಮಗಳಿಗೆ ನಿಯಮ ಎಂದು ಹೆಸರು ಈ ಹತ್ತು ತತ್ವಗಳನ್ನು ಅಭ್ಯಾಸ ಮಾಡಿ ಆಚರಣೆಯಲ್ಲಿ ತರುವ ವಿದ್ಯಾರ್ಥಿಗಳು ವಿದ್ಯಾವಂತರಾಗಿ ಸುಖದಿಂದ ಬಾಳುವರು. ಸುಖದಿಂದ ಬಾಳುವಿಕೆಯೇ ಪ್ರತಿಯೊಬ್ಬ ಮಾನವನ ಲಕ್ಷ್ಯವಾಗಿರುತ್ತೆ.

ಮಾತೇವ ರಕ್ಷತಿ ಪಿತೇವ ಹಿತೇ ನಿಯುಙ್ಕ್ತೇ ಕಾಂತೇವ ಚಾಭಿರಮಯತ್ಯಪನೀಯ ಖೇದಮ್ । ಕೀರ್ತಿಂ ಚ ದಿಕ್ಷು ವಿತನೋತಿ ತನೋತಿ ಲಕ್ಷ್ಮೀಂ ಕಿಂ ಕಿಂ ನ ಸಾಧಯತಿ ಕಲ್ಪಲತೇವ ವಿದ್ಯಾ ॥

ತಾಯಿಯಂತೆ ಕಾಪಾಡುವದು, ತಂದೆಯಂತೆ ಯುಕ್ತಾಯುಕ್ತ ಕಾರ್ಯಗಳನ್ನು ತಿಳಿಸಿ ಕೊಡುವದು ಪತ್ನಿಯಂತೆ ಸಕಷ್ಟವನ್ನು ನಿವಾರಣೆ ಮಾಡಿ ಸಂತೋಷವನ್ನುಂಟು ಮಾಡುವದು, ಸತ್ಕೀರ್ತಿಯನ್ನು ವಿಸ್ತರಿಸುವುದು ಸಂಪತ್ತನ್ನು ಹೆಚ್ಚಿಸುವದು ವಿದ್ಯೆಗೆ ಕಲ್ಪವೃಕ್ಷದಂತೆ ಯಾವ ಯಾವ ಫಲವನ್ನು ಕೊಡಿಸಲು ಆಗದೇ ಇರುವದು? ಸಕಲ ಸಂಪತ್ತನ್ನುಂಟು ಮಾಡುವ ವಿದ್ಯೆಯನ್ನು ಯಾರು ತಾನೇ ಕಲಿಯದೆ ಇರುವರು? ಅಂಥಾ ವಿದ್ಯಾವಂತರಾಗಬೇಕಾದರೆ ಗುರು ಕಟಾಕ್ಷವಿನಹ ಆಗಲಾರದು.

ಶ್ವೇತಾಶ್ವತರ ಉಪನಿಷತ್ತಿನಲ್ಲಿ— ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ । ಪ್ರಕಾಶಂತೇ ಮಹಾತ್ಮನ ಇತಿ ॥ ದೇವರಲ್ಲಿ ಎಷ್ಟು ಭಕ್ತಿ ಇರಬೇಕೋ ಅಷ್ಟೇ ಭಕ್ತಿ ಗುರುವಿನಲ್ಲಿದ್ದರೇನೇ ಐಹಿಕ ಆಮುಷ್ಮಿಕ ವಿದ್ಯೆಗಳಲ್ಲಿ ಪಾರಂಗತರಾಗುವರು ಎಂದು ಹೇಳಿರುವದರಿಂದ

ಬಾಲಕರು ಪ್ರಥಮತಃ ಗುರು ಕೃಪಾ ಕಟಾಕ್ಷ ಪಾತ್ರರಾಗಿ ಸರಸ್ವತಿಯ ಅನುಗ್ರಹವನ್ನು ಸಂಪಾದಿಸಲು ಪ್ರಯತ್ನ ಪಡಬೇಕೆಂಬದನ್ನು ಬಾಲಕರ ಹೃದಯದಲ್ಲಿ ನೆಲೆಗೊಳ್ಳುವಂತೆ ಮಾಡುವದೇ ನನ್ನ ಉದ್ದೇಶವಾಗಿರುವದು

ಪುಸ್ತಕಗಳನ್ನು ಸಪ್ತಮಿ ದಿನ ಮೂಲಾ ನಕ್ಷತ್ರದಲ್ಲಿ ಆವಾಹನೆ ಮಾಡಿ ಶ್ರವಣ ನಕ್ಷತ್ರದಲ್ಲಿ ವಿಸರ್ಜನೆ ಮಾಡಿ ವಿಜಯ ದಶಮಿ ದಿನ ಗುರು ಮುಖೇನ ಅಕ್ಷರಾಭ್ಯಾಸ ಮಾಡುವದು ನಮ್ಮ ಸನಾತನ ಧರ್ಮವಾಗಿರುತ್ತೆ. ಈ ಬಾಲಕರು ಸರಸ್ವತಿ ಪೂಜೆಯನ್ನು ಮಾಡಿ ಸರಸ್ವತಿ ದೇವಿಯು ಪ್ರಸನ್ನಳಾಗಿ ಇವರ ಮೇಲೆ ಗುರು ಕಟಾಕ್ಷ ಆಗುವಂತೆ ಆಶೀರ್ವದಿಸಲಿ ಎಂದು ನಾನು ಸರಸ್ವತಿ ದೇವಿಯನ್ನು ಪ್ರಾರ್ಥಿಸುವೆನು.

ನಮನಾಪವತು । ಸಹನೌ ಭುನಕ್ತು । ಸಹವೀರ್ಯಂ ಕರವಾವಹೈ । ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥

ಅವನು ನಮ್ಮಿಬ್ಬರನ್ನು ಕಾಪಾಡಲಿ ನಮ್ಮಿಬ್ಬರಿಗೂ ಕೂಡಿ ಉಪಭೋಗಗಳನ್ನು ಕೊಡಲಿ. ಇಬ್ಬರೂ ಕೂಡಿ ವೀರ್ಯವನ್ನು ದೊರಕಿಸುವ. ನಮ್ಮ ಅಧ್ಯಯನವು ತೇಜಸ್ವಿಯಾದದ್ದಾಗಲಿ ನಮ್ಮೊಳಗೆ ದ್ವೇಷವಿಲ್ಲದಿರಲಿ

ಸೆಂಟ್ರಲ್ ಬ್ಯಾಂಕ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರಗಳ ಮೀಟಿಂಗು ತಾರೀಕು 31—10—31ರಲ್ಲು ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಬ್ಯಾಂಕಿನ ಅಧ್ಯಕ್ಷರಾದ ರಾವ್ ಬಹದ್ದೂರ್ ಕೆ. ಚಂಗಪ್ಪನವರು ಅನಾರೋಗ್ಯದ ನಿಮಿತ್ತದಿಂದ ಗೈರಹಾಜರು ಆದುದರಿಂದ ರಾವ್ ಬಹದ್ದೂರ್ ಪಟ್ಟಮಾಡ ದೇವಯ್ಯನವರನ್ನು ಆ ದಿನ ಮೀಟಿಂಗಿಗೆ ಅಧ್ಯಕ್ಷರನ್ನಾಗಿ ಆರಿಸಲಾಯಿತು. 10 ಡೈರೆಕ್ಟರುಗಳು ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ಸೆಪ್ಟಂಬರ್ ತಿಂಗಳ ಜಮ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. 1929—30 ಮತ್ತು 1930—31ನೇ ಸಂವತ್ಸರಗಳ ವಾರ್ಷಿಕ [illegible]

4. ಶಾಂತಿನಾಡು ನಾಡು ಕೋ-ಆಪರೇಟಿವ್ ಸೊಸೈಟಿಗೆ 2000 ರೂಪಾಯಿ ಸಾಲ ಮಂಜೂರಾಯಿತು

5. ಹಳ್ಳಿಗಟ್ಟು, ಚಿಕ್ಕ ಭಂಡಾರ, ಕೊಡವೂರು ವ [illegible] ಬೇಗರು ಸೊಸೈಟಿಗಳ ಕಾಲ ಮೀರಿದ ಸಾಲಕ್ಕೆ [illegible] ಕೊಡಬೇಕಾಗಿ ಬರಕೊಂಡ ಅರ್ಜಿಗಳನ್ನು ಓದಲಾಯಿತು.

ವಾಯಿದೆ ಕೊಡಲು ಆಗುವುದಿಲ್ಲವಾಗಿ ತೀರ್ಮಾನವಾಯಿತು.

6. ಸೊಸೈಟಿಗಳಿಂದ ಸೆಂಟ್ರಲ್ ಬ್ಯಾಂಕಿಗೆ [illegible] ವಾಪತಿ ಮಾಡಿದ ಮತ್ತು ಇನ್ನು ಮುಂದೆ ವಾಪತಿ ಮಾಡುವ ರಿಜರ್ವ್ ಫಂಡು (ಕ್ಷೇಮನಿಧಿ) ಡಿಪಾಜಿಟ್ಟಿಗೆ 100ಕ್ಕೆ [illegible] ರೂಪಾಯಿ ದರದಲ್ಲಿ ಬಡ್ಡಿ ಕೊಡತಕ್ಕದೆಂತ ತೀರ್ಮಾನವಾಯಿತು

7. ಸೆಂಟ್ರಲ್ ಬ್ಯಾಂಕಿನ ರಿಜರ್ವ್ ಫಂಡಿನ (ಕ್ಷೇಮನಿಧಿಯ) ಪೈಕಿ 5000 ರೂಪಾಯಿಯನ್ನು ಪೋಸ್ಟಾಫೀಸಿನ ಮೂಲಕ ಸರಕಾರದಲ್ಲೂ 100ಕ್ಕೆ 6½ ರೂಪಾಯಿ [illegible] ಬಡ್ಡಿಯಲ್ಲಿ ಡಿಪಾಜಿಟ್ಟು ಮಾಡಿ ಅದರ ದಾಖಲೆಗಳನ್ನು ಕಂಟ್ರೋಲರ್ ಜನರಲ್‌ರವರ ವಶದಲ್ಲಿಡಬೇಕಾಗಿಯೂ, [illegible] ಇಟ್ಟರೆ ಸದರಿ ಡಿಪಾಜಿಟ್ಟಿನ ಮೇಲೆ ಇನ್‌ಕಂ ಟ್ಯಾಕ್ಸ್ [illegible] ಯಾಗಿರತಕ್ಕದಾಗಿಯೂ ತೀರ್ಮಾನವಾಯಿತು

8. ಪ್ರತಿ ವರ್ಷವೂ ಜನವರಿಯಿಂದ ಜೂನ್ ತಿಂಗಳವರೆಗೆ ಸೆಂಟ್ರಲ್ ಬ್ಯಾಂಕಿನ ಹಣವು ಕೈಯಲ್ಲಿ ಜಾಸ್ತಿ [illegible] ವುದರಿಂದ ಅವುಗಳನ್ನು ಮೇಲ್ಕಂಡ ಅವಧಿಗೆ ಡಿಪಾಜಿಟ್ಟು ಇಟ್ಟುಕೊಳ್ಳುವ ಬಾಬಿನಲ್ಲಿ ಎಲ್ಲಾ ಬ್ಯಾಂಕುಗಳಿಗೆ ಬರೆದು ದರಗಳನ್ನು ಕೇಳಬೇಕಾಗಿ ತೀರ್ಮಾನವಾಯಿತು

9. ಸೆಂಟ್ರಲ್ ಬ್ಯಾಂಕಿಗೆ ಸೊಸೈಟಿಗಳಿಂದ ಕಳುಹಿಸುವ ಹಣವನ್ನು ನಾಡು ಕಚೇರಿಗಳ ಮತ್ತು ಖಜಾನೆಗಳ ಮೂಲಕ ಹೊಂದಿಕೊಳ್ಳುವುದು ಸೊಸೈಟಿಗಳಿಗೆ ಬಹಳ ಅನುಕೂಲವಾಗುವ ಕಾರಣ ಈ ವಿಷಯದಲ್ಲಿ ಸರಕಾರದವರಿಗೆ ಬರೆಯಬೇಕಾಗಿ ತೀರ್ಮಾನವಾಯಿತು.

10. ಮೆಂಬರುಗಳು ಸೊಸೈಟಿಗಳಿಗೆ ಬರೆದುಕೊಡುವ ರಾರುಗಳಿಗೆ ಸ್ಟಾಂಪು ಡ್ಯೂಟಿ ಹಾಕಿದ್ದು ತುಂಬಾ ಕಷ್ಟವಾಗಿ ಕಂಡು ಬರುವುದರಿಂದ ಈಗಿನ ಈ ಕಷ್ಟ ಕಾಲದಲ್ಲಿ ರೂಲನ್ನು ಜಾರಿಗೆ ತರಕೂಡದಾಗಿ ಸರಕಾರಕ್ಕೆ ಬರೆದುಕೊಳ್ಳುವಂತೆ ತೀರ್ಮಾನವಾಯಿತು.

ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗು ಬರಕಾಸ್ತಾಯಿತು.

ಪಿ. ದೇವಯ್ಯ,
(ಅಧ್ಯಕ್ಷರು)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಕರ್ತರು ಜವಾಬ್ದಾರರಲ್ಲ. ಸಂ.]

ಮಿತವ್ಯಯ

ಮಹಾಶಯರೆ,

ಕೊಡವರ ಮದುವೆ, ತಿತಿ ಮೊದಲಾದ ಶುಭಾಶುಭ ಕಾರ್ಯಗಳಲ್ಲಿ ಮೊದಲಿನ ದಿನ ನಿತ್ಯದ ಖರ್ಚನ್ನು ಕಡಮೆ ಮಾಡಬೇಕೆಂಬುದು ಅತಿ ಅವಶ್ಯವಾದ ಸಂಗತಿ. ಆದರೆ ನೇಕ ಮಹಾಶಯರು ಮದುವೆಗಳಲ್ಲಿ ಖರ್ಚು ಹಾಗೆ ಕಡಿಮೆ ಮಾಡಬೇಕು, ಹೀಗೆ ಕಮ್ಮಿ ಮಾಡಬೇಕು, ಎಂಬುದಾಗಿ ಪತ್ರಿಕೆಗಳಲ್ಲಿ ಪ್ರಕಟಪಡಿಸಿ ಬಿಟ್ಟರೆ ತಮ್ಮ ಕರ್ತವ್ಯವು ಪರಿಪೂರ್ಣವಾಯಿತೆಂಬುದಾಗಿ ಭಾವಿಸಿದಂತೆ ಕಾಣುತ್ತದೆ. ಪತ್ರಿಕೆಗಳಲ್ಲಿ ಪ್ರಕಟಿಸುವದು ಸುಲಭ, ಹಾಗೆಯೇ ಆಚರಣೆಗೆ ತರಲು ಪ್ರಯತ್ನಪಡಬೇಕಾಗಿದೆ.

ನಮ್ಮ ಜನಾಂಗವು ದಿನ ದಿನವೂ ಬಡತನದಲ್ಲಿ ಮುಳುಗುತ್ತಿರುವುದರಿಂದ, ಬಡತನವನ್ನು ನಿವಾರಣೆ ಮಾಡಬೇಕೆಂದೂ ನಿಜವಾಗಿಯೂ ತಮಗಳ ಹೃದಯವನ್ನು ಹೇಳುತ್ತಿದ್ದ ಪಕ್ಷದಲ್ಲಿ, ದಯಮಾಡಿ ಯಾವ ಯಾವ ರೀತಿಯಲ್ಲಿ ಮಿತ ಸಂಬಂಧದ ಖರ್ಚನ್ನು ಕಮ್ಮಿ ಮಾಡಬಹುದಾಗಿ ತಮಗೆ ತೋರುವುದೋ ಅದನ್ನು ತಮ್ಮ ತಮ್ಮ ಗ್ರಾಮಗಳಲ್ಲೇ ತೊಡಗಿ ಪುರೋಹಿತರ, ಗುರುಗಳ ಭಾವ ನಮಗಿಲ್ಲದೆ ಇರುವದರಿಂದ ಈಗಿನ ಕಾಲಾವಸ್ಥೆಗೆ ಸರಿಯಾಗಿ ನಮ್ಮ ನಡವಳಿಕೆ ಮತ್ತು ಖರ್ಚನ್ನು ಸರಿಪಡಿಸಲು ಯಾವ ಅಭ್ಯಂತರವೂ ಇಲ್ಲ. ನಾಯಿ ಗ್ರಾಮದವರನ್ನು ಸಭೆ ಸೇರಿಸಿ ಒಪ್ಪಿಸಿಕೊಳ್ಳಬೇಕಾದ್ದೇ ಈ ಕಾರ್ಯವನ್ನು ನೆರವೇರಿಸಲು ಹೆಚ್ಚಿನ ತೊಂದರೆಯೇನೂ ಇಲ್ಲದಿದ್ದರೂ ಫಲ ಮಾತ್ರ ಬಹು ಹೆಚ್ಚಿನದು, ವ್ಯರ್ಥವಲ್ಲ ಸ್ಥಿರವಾದದ್ದು.

ಉದಾರ ಮನಸ್ಸಿನ ದೇಶಾಭಿಮಾನಿಗಳು ತಮ್ಮ ತಮ್ಮ ಗ್ರಾಮಗಳಲ್ಲಿ ನಡಸಿ ಈ ಕಾರ್ಯವನ್ನು ಕೈಕೊಂಡು ಮಾಡಿದ ತೀರ್ಮಾನಗಳನ್ನು ಪತ್ರಿಕೆಗಳ ಮೂಲಕ ತಿಳಿಸುತ್ತಾ ಬಂದು ಇತರ ಗ್ರಾಮದವರಿಗೂ ತಮ್ಮ ಉದಾಹರಣೆಯನ್ನು ಅನುಸರಿಸಲು ಅನುಕೂಲ ಪಡಿಸಬೇಕಾಗಿ ಕೋರುವ.

ಎ. ಸಿ. ಪೂಣಚ್ಚ.

ರೈತರ ಗೋಳು.

ಅಯ್ಯಾ,

ಈ ವರ್ಷ ರೈತರ ಕಷ್ಟವನ್ನು ವರ್ಣಿಸಲು ಅಸಾಧ್ಯವಾಗಿದೆ ಎಂಬುದು ನಿಮಗೆ ತಿಳಿಯದ್ದಲ್ಲ. ಇದನ್ನು ಸ್ವಲ್ಪ ಮಟ್ಟಿಗಾದರೂ ಪರಿಹರಿಸಲು ನನ್ನ ಈ ಕೆಳಗಿನ ಸಲಹೆಗೆ ಸರ್ಕಾರದವರು ಗಮನ ಕೊಡುವರೇ? ಕೊಡಗಿನ ರೈತರು ಬೆಳೆಸುವ ಧಾನ್ಯಗಳಿಗೆಲ್ಲಾ ಈ ವರ್ಷವೇ ಅರ್ಧಕರ್ಧ ಕ್ರಯವು ಕಡಿಮೆಯಾಗಿ ಕಂದಾಯವನ್ನೂ ತಕಾವಿ ಸಾಲವನ್ನೂ ಮತ್ತು ಸಹಕಾರ ಸಂಘದ ಸಾಲವನ್ನೂ ಕೊಡಲು ಅವರಿಗುಂಟಾದ ತೊಂದರೆಗಳನ್ನು ಹೇಳಿ ಪೂರೈಸಲು ಸಾಧ್ಯವಿಲ್ಲ. ವರ್ಷದಲ್ಲಿ ಭತ್ತ ವಗೈರೆಯ ಬೆಲೆಯು ಜಾಸ್ತಿಗಿರುವ ಈ ಸಮಯದಲ್ಲಿಯೇ ಗಾಡಿಗೆ ಬರೇ 35ರಿಂದ 45 ರೂ. ವರೆಗೆ ಮಾತ್ರವಿದೆ. ಇದನ್ನು ನೋಡಿದರೆ ಬರುವ ಬೇಸಿಗೆಯಲ್ಲಿ ಗಾಡಿಗೆ ರೂ. 30ಕ್ಕಿಂತ ಇಳಿದು ಹೋಗುತ್ತದೋ ಎಂಬ ಭಯವಿದೆ. ಹೀಗಾದರೆ ರೈತರ ಪಾಡೇನು? ರೈತರು ಅನುಕೂಲದಲ್ಲಿದ್ದಾಗ್ಯೆ ಅವರಿಂದ ಎಲ್ಲಾ ತರದ ತೆರಿಗೆಗಳನ್ನು ಒಂದು ಕಾಸೂ ಬಿಡದೆ ವಸೂಲಿ ಮಾಡುತ್ತಿದ್ದ ಸರ್ಕಾರದವರು ಈಗ ಅವರ ಸಹಾಯಕ್ಕೆ ಬರುವರೇ? ಬರುವ ವರ್ಷ ಭತ್ತ ವಗೈರೆ ರೈತರ ಉತ್ಪತ್ತಿಯ ಬೆಲೆಯು ಕೇಳದ ಎಷ್ಟರ ಮಟ್ಟಿಗೆ ಕಡಿಮೆಯಾಗುತ್ತೆನ್ನೇ, ಅಷ್ಟರ ಮಟ್ಟಿಗೆ ಮಾತ್ರ ಕಂದಾಯವನ್ನು ವಸೂಲಿ ಮಾಡಿ, ಬಾಕಿಯುದನ್ನು ಮಾಫಿ ಬಿಡಬೇಕು. ಅಲ್ಲದೆ ತಕಾವಿ ಸಾಲಗಳಿಗೆ ಈಗ ಕೊಟ್ಟಿರುವ ಕಂತುಗಳನ್ನು ಎರಡರಷ್ಟು ಹೆಚ್ಚಿಸಬೇಕು. ಹೀಗೆ ಮಾಡಿದರೆ ಮಾತ್ರ ರೈತರಿಗೆ ಈಗ ಸಂಭವಿಸಿರುವ ಕಠಿಣ ಸ್ಥಿತಿಯಿಂದ ಪಾರಾಗಿ ಮುಂದೆಯೂ ದರೂ ಸರ್ಕಾರದ ತೆರಿಗೆಗಳನ್ನು ಕೊಡಲು ಬದುಕುವರು. ಇಲ್ಲವಾದರೆ ಅವರ ಗತಿ ಏನಾಗುವದೆಂದು ನಾನು ಹೇಳಬೇಕಾಗಿಲ್ಲ. ಈಗಿನ ಸರ್ಕಾರವು ಪ್ರಜೆಗಳ ಹಿತವನ್ನು ಕಾಪಾಡುವ ಸರ್ಕಾರವೋ, ಅಲ್ಲವೋ ಎಂಬುವುದು ಈಗ ಗೊತ್ತಾಗುವುದು.

"ಒಬ್ಬ ರೈತ"

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯುವರನ್ನುವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಕಡಿಮೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3 ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲಿ ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಆಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ವಾಪತಿಕೊಡುವುದರಲ್ಲಿ ಹೆಸರುಗೊಂಡಿದೆ

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಾದರೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಇಂದು ಭಾಗಿಗಳಾಗಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರೆರಿಗೆ ವಿಶೇಷವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು

ಆಫೀಸು—
ಜಂಪರ್ ಸ್ಟ್ರೀಟ್,
ಮಡಿಕೇರಿ. (26—4)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಸಹಕಾರಿ ಸಾಲಕ್ಕೆ ಜಮ್ಮ ಭೂಮಿ ಹರಾಜು.

ಅಯ್ಯಾ,

ಸಹಕಾರಿ ಸಂಘದ ಸಾಲಕ್ಕೆ ಸ್ವಾಧೀನ ಮೊದಲೂ ಹೊಂದಿರುವ ಜಮ್ಮ ಭೂಮಿಯನ್ನು ಗಿರವಿ ಕೊಡುವುದು ಸಹಕಾರಿ ಚಳವಳವನ್ನು ಅಭಿವೃದ್ಧಿಗೊಳಿಸಬೇಕೆಂಬುದಕ್ಕಲ್ಲದೆ, ಜಮ್ಮದ ಭೂಮಿಯನ್ನು ಕಳಕೊಳ್ಳಲೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಸಾಲ ತೆಗೆದುಕೊಳ್ಳುವವನಿಗೆ ಬೇರೆ ಯಾವ ತರದ ಸೊತ್ತೂ ಇಲ್ಲದೆ ಅದರಿಂದ ಸಾಲ ವಾಪಸು ಪಡೆಯಲು ಅಸಾಧ್ಯವಾದೀತೆಂಬ ಸಂದರ್ಭದಲ್ಲಿ ಮಾತ್ರ ಜಮ್ಮದ ಭೂಮಿಯನ್ನು ಗಿರವಿ ತೆಗೆದುಕೊಳ್ಳತಕ್ಕದ್ದಾಗಿದೆ. ಆದುದರಿಂದ ಸಹಕಾರಿ ಸಂಘದ ಸಾಲವನ್ನು ವಾಪಸು ಪಡೆಯಲು ಬೇರೆ ಎಲ್ಲಾ ಉಪಾಯಗಳನ್ನು ಸಾಧಿಸಿ, ಸಫಲವಾಗದಿದ್ದರೆ ಮಾತ್ರ ಗಿರವಿಯ ಜಮ್ಮ ಭೂಮಿಯನ್ನು ಹರಾಜಿಗೆ ತರತಕ್ಕದ್ದಾಗಿದೆ. ಹಾಗೆ ಹರಾಜಿಗೆ ತಂದರೂ ಕೂಡ ಸಾಲದ ಮೊಬಲಗಿಗೆ ಎಷ್ಟು ಅವಶ್ಯವಿದೆಯೋ ಅಷ್ಟು ಭೂಮಿಯನ್ನು ಮಾತ್ರ ಹರಾಜು ಮಾಡಬೇಕಲ್ಲದೆ ಹೆಚ್ಚಿಗೆ ಮಾಡಿದರೆ ಅದು ಜಮ್ಮ ಭೂಮಿಯ ಗಿರವಿಯ ಉದ್ದೇಶಕ್ಕೆ ವಿರೋಧ ಮಾಡಿದಂತಾಗುವುದಲ್ಲದೆ ಗಿರವಿ ಕೊಡಲು ಕೊಟ್ಟ ರಿಯಾಯಿತಿಯನ್ನು ದುರುಪಯೋಗಪಡಿಸಿದಂತಾಗುವುದು.

ಹೀಗೆ ಸಾಲದ ಮೊಬಲಗಿಗೆ [illegible] ಹೆಚ್ಚು ಭೂ[illegible] ಹರಾಜು ಮಾಡಿದ ಉದಾಹರಣೆಗಳು ಹಲವು ಇವೆ. ಇವುಗಳಲ್ಲಿ ಒಂದನ್ನು ವಾಚಕರ ಮುಂದಿಡುವುದರ್[illegible] ಕಳೆದ ತಾ 28ರಲ್ಲಿ ವೀರಾಜಪೇಟೆ ತಾಲೂಕಿನ [illegible] ಗ್ರಾಮದ [illegible] ಹರಾಜಾದ ಭೂಮಿಯ ಉದಾಹರಣೆಯನ್ನು ಇಲ್ಲಿ ತಿಳಿಸಬಹುದು. ಸದರಿ ದಿನ [illegible] ಗ್ರಾಮದ ಸೋಮಯ್ಯನ [illegible] ಎಕರೆ 15 ಸೆಂಟ್ಸ್ ಜಮ್ಮ ಭೂಮಿಯ [illegible] ಸೇರಿದ 14 [illegible] ಜಮ್ಮದ ಬಾಣೆಯೂ ರೂ 1430ಕ್ಕೆ ಹರಾಜು ಮಾಡಲ್ಪಟ್ಟಿತು. ಆ [illegible] ಗ್ರಾಮದ ಸಹಕಾರಿ ಸಂಘದವರು ಮಾಡಿಸಿದ್ದ ಡಿಕ್ರಿ ಮೊಬಲಗು ರೂ. 663 [illegible] ಡಿಕ್ರಿ ಹಣಕ್ಕೆ ತಕ್ಕಷ್ಟು ಭೂಮಿಯನ್ನು ಮಾತ್ರ ಹರಾಜು ಮಾಡಿಸಲು ನಡೆಸಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದವು. ಈ ಸಂಬಂಧ ಮೇಲಧಿಕಾರಿಗಳಿಗೆ ಅರ್ಜಿ ಬರೆದುಕೊಳ್ಳಲಾಗಿದೆಯಂತೆ.

ಇದೊಂದು ಉದಾಹರಣೆ ಮಾತ್ರವಾಗಿದೆ. ಇಂಥಾ ಸಂದರ್ಭಗಳು ಹಲವು ನಡೆದಿವೆ. ಹೀಗೆ ಮಾಡಿದರೆ ಕ್ರಮೇಣ ಜಮ್ಮ ಭೂಮಿ ಎಲ್ಲವೂ ಸಾಗಿನ ಕರಗಳಿಗೆ ಇಳಿದು ಹೋಗುವುದರಲ್ಲಿ ಸಂಶಯವಿಲ್ಲ. ಆದಕಾರಣ ಅಧಿಕಾರಿಗಳು ಇನ್ನು ಮುಂದೆ ಇಂಥಾದ್ದಕ್ಕೆ ಎಡೆ ಕೊಡದಂತೆ ಮಾಡಬೇಕಲ್ಲದೆ, ಸಹಕಾರಿ ಸಂಘಗಳ ಅಧ್ಯಕ್ಷರುಗಳು ಹರಾಜಿನ ಸಮಯದಲ್ಲಿ ಹಾಜರಿದ್ದು ಸಾಲಕ್ಕೆ ಸಾಕಷ್ಟು ಭೂಮಿಯನ್ನು ಮಾತ್ರ ಹರಾಜು ಮಾಡುವಂತೆ ನೋಡಿಕೊಳ್ಳಬೇಕೆಂದು ನನ್ನ ಕೋರಿಕೆಯಾಗಿದೆ.

"ಜಮ್ಮ ಹಿಡುವಳಿದಾರ

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತಾ ಆದ ಫೌಂಟನ್ ಪೆನ್‌ಗಳು.

ಪರ್ಲ್ಸ್ ಪಂಚರ್ ಫೌಂಟನ್‌ಪೆನ್ 1ಕ್ಕೆ	ರೂ.	3 0 0
" " ಬಿಗ್ ಬ್ಯಾರೆಲ್ ಪೆನ್ 1ಕ್ಕೆ		3 3 0
" " ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ		3 8 0
" " ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡರ್ ಕಲರ್ ಫೌಂಟನ್‌ಪೆನ್ 1ಕ್ಕೆ		3 14 0
" " ಮೊಸಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ		4 2 0
" " ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರವ್ರನ್ ಕಲರ್ ಫೌಂಟನ್‌ಪೆನ್ 1ಕ್ಕೆ		5 8 0
ಬಿಗ್ ಸ್ವಾಟ್ ಫೌಂಟನ್‌ಪೆನ್ 1ಕ್ಕೆ		10 8 0
ಪಾರ್ಕರ್ ಪೆನ್ 1ಕ್ಕೆ		14 6 0, & 20 10 0
ವ್ಯಾಕ್‌ಟರ್ ಫೌಂಟನ್‌ಪೆನ್ 1ಕ್ಕೆ		3 8 0, & 3 12
ಸ್ವಾನ್ ಫೌಂಟನ್ ಪೆನ್ 1ಕ್ಕೆ		6 4 0, & 6 12 0
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ		8 2 0, & 8 10 0

ಟೈಂ ಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3 6 0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2 2 0
ಲಿಗಲಿಯೂ ಆಕಾರದ ಟೈಂಪೀಸ್ 1ಕ್ಕೆ	6 9 0, & 6 15 0
ಲಿಗಲಿಯೂ ಸಣ್ಣಸೈಜಿನ ಆಕಾರದ ಟೈಂಪೀಸ್ 1ಕ್ಕೆ	7 2 0
ಲಿಗಲಿಯೂ ಆಕಾರದ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8 10 0
ಬಿಗ್‌ಬೆನ್ ಆಕಾರದ ಟೈಂಪೀಸ್ 1ಕ್ಕೆ	9 0 0
ಬಿಗ್‌ಬೆನ್ ಆಕಾರದ [illegible] ಯಾದ ಟೈಂಪೀಸ್ 1ಕ್ಕೆ	13 1 0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ	5 10 0
ಟಿಟೋ ನಮೂನೆಯಲ್ಲಿ ಎಬ್ರಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12 1 0
ನಿಕ್ಕಲ್ ಕೇಸ್ ಸಿಲಿಂಡರ್ ಮುವಮೆಂಟ್ ಸಾಧಾರಣ ಕರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12 9 0



ಇಲ್ಲಿ ನಮೂದಿ[illegible] ನವ ನಮೂನೆ ಆದ [illegible] ವಾದ ಜೇಬು [illegible] ಗೆ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಆಗುವುದು.

(ಮುಫಿಸಲ್ ಆರ್ಡರ್ ಕಳುಹಿಸುವವರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
[illegible] ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—20

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೆಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಮಾತ್ರವೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ಪ್ರಕಾರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ನರ್ಸರಿಕ್ಯಾಂಪಾವರ್ತಿ ಕೋಆಪರೇಟಿವ್ ಇನಿಸ್ಪೆಕ್ಟರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಡೈರೆಕ್ಟರ್
ಕೋದಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1931

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.
ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52-44 ಗಿರಿಗಾಂವ, ಮುಂಬಯಿ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ತೀರ್ಮಾನಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೆ. ಚೆಂಬಾಂಡ ಮಾದಯ್ಯನವರು,

ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಪ್ಪಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಟಾಡಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು,

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು,

ಗೋಣಿಕೊಪ್ಪಲು—ಮೆ. ಒಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು, ಮತ್ತು, ಅರಮಣಮಾಡ ಪಿ. ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಪಿ. ಮಾದಪ್ಪಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,332 ಜನರಿಗೆ 38 ಕೋಟಿ ರೂ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4 ರಕ್ಕಿಂತ ವಿಶೇಷ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾ. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುನಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ನೈರೋಬಿ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಿಂಗಪ್ಪೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಿಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ

ಮಲೇರಿಯಾಕ್ಕೆ ಮಲೇರಿಯಾನ

ಕೊಡಗಿನ ಗುಡುಗುಡು ಎಂಬ ಚಳಿ ಜ್ವರಕ್ಕೂ, ಹುಡುಹುಡುಕು ಬರುವ ಜ್ವರಕ್ಕೂ, ಗಟ್ಟಿಯಾದ ಜ್ವರಗಳಿಗೂ ಗುಣಕರವಾದ ಮದ್ದು. ಯಾವುದೊಂದು ವಿಷಕಾರಕ ವಸ್ತುಗಳಿಲ್ಲದ ಮಲೇರಿಯಾನ ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗೆಡ್ಡೆಯನ್ನು ಕರಗಿಸುವಂತೆ ಬರುತ್ತದೆ. ಕ್ರಯ ಬಾಟ್ಲಿಗೆ 1-4, ½ ಡಜನ್ 8-4-0. 1 ಡಜನ್ 16-8-0.

ಕಂಪೌಂಡು ಸಿರಪ್ಪು ಬ್ಲಟ್.

ಗುಹ್ಯರೋಗ ಉಬ್ಬಸ ಸೇವಕರ ರೋಗದಿಂದ ಕಡಿಮೆ ಕೆಮ್ಮು ಗಟ್ಟಿಯಾಗಿ ಎಳೆದಾಟ ಎದೆ ನೋವು ಪಾರ್ಶ್ವನೋವು ಇತ್ಯಾದಿ ರೋಗಗಳಿಗೆ ಅತಿ ಸಂತಸ್ಪದಿಂದ ನರಳುವ ರೋಗಿಯು ಕಡೆ ಮದ್ದಾಗಿ ಕಂಪೌಂಡು ಸಿರಪ್ಪು ಬ್ಲಟ್ ಎಂಬದನ್ನು ತಕ್ಷಣ ತರಿಸಿ ಕುಡಿಯಲಿ ಕ್ರಯ ಬಾಟ್ಲಿಗೆ ರೂ. 3-8-0.

ಕಂಪೌಂಡು ಸಿರಪ್ಪು ಬಸಲೀನ:—ವ್ಯಾಸಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪ್ಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿಕೊಂಡರೆ ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು, ಕೆಮ್ಮು, ಎದೆನೋವು, ರಕ್ತ ಬೆರತ ಕಫ, ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ರೋಗವು ಮುಂದರಿಯದಂತೆ ಕಾಪಾಡಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3-8-0.

ಕಂಪೌಂಡು ಸಿರಪ್ಪು ಪೆಪ್ಸಿನ ಪೇಪಿಯ:—ಹೆಂಗಸರ ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ಬಿಳೀ ಸೆರಗು ಎಂಬ ರೋಗದಿಂದ ಸೊಂಟನೋವು, ಕೈಕಾಲು ಬಚ್ಚಲು, ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸಿ ಬಲಪಡಿಸುವುದು. ಕ್ರಯ ಬಾಟ್ಲಿಗೆ ರೂ. 3-8-0.

ಕಂಪೌಂಡು ಸಿರಪ್ಪು ಪೆಸಿಫೂಲ:—ಪ್ರಮೇಹವೆಂಬ ಗುಹ್ಯರೋಗವನ್ನು ಪಡೆಕೊಂಡು, ಮೂತ್ರ ಬಿಂದು ಬಿಂದುಗಳಾಗಿ ಉರಿದ್ವಾರದೊಳಗೆ ಹುಣ್ಣು ವ್ರಣಗಳು, ಮರ್ಮಗಳಿಗೆ ಕೊಡಿವ ಹರಡಿ ಬಂದವ ರೋಗಗಳಿಗೆ ಇತ್ಯಾದಿ ಕಠಿಣ ತರದ ರೋಗವನ್ನು ಈ ಬಲವಾದ ಸಿರಪ್ಪು ಸಂಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ. 3-8-0.

ಶುದ್ಧ ಟಿಕ್ಚರುಗಳೂ ಹೋಮ್ಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಫಾರ್ಮಿನ ನಕಲನ್ನು ತರಿಸಿಕೊಂಡು ಬರೆದು ಕಳುಹಿಸಬೇಕು. ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಬಸಲಿಗೆ ಇತರಕ್ಕೆ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯಕ್ಕೆ ದೊರೆಯುತ್ತವೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

2-1 **Malariana Co,**
Hampankatta No 14 Mangalore.

ವಿಳಾಸ.—ಮಲೇರಿಯಾನ ಕಂಪೆನಿ,
ಹಂಪನಕಟ್ಟೆ ನಂಬ್ರ 14, ಮಂಗಳೂರು, ಪೋಸ್ಟು

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬನಾಗಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮಾ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೆಕ್ಯೂರ್ ಕೇಸರ್ ಖರಾರು ಫಾರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

Printed & published by P. I. Belliappa at "Kodagu" Press Mercara for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ಶೀಲ ಪ್ರಯತ್ನತಾ । ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೧೧ ‖ ಮಡಿಕೇರಿ, ಸನ್ ೧೯೩೧ನೇ ಇಸವಿ ನವೆಂಬರ್ ತಾರೀಕು ೧೩ನೇ ಶುಕ್ರವಾರ. | ಸಂಚಿಕೆ ೨೪

Telegrams: Telephone –

V. Subramaniaier Jeweller,

DIAMAND MERCHANT' GOLD & SILVER SMITH.

Deals in all:–
SPORTS CUPS in all prices
MEDALS in up to date patterns
CASKETS in elegant styles

Nos. 2 & 3, Kuppumuthu st,
TIRUVATESWARANPET,
Post Box 423, Triplicane P. O.,
MADRAS.

Deals in all:–
GEM SET JEWELS set with Diamonds, Rubies etc.
GOLD ARTICLES of all patterns
SILVER WARE in latest style.

52-52



ಕೋವಿಗಳು, ಕತ್ತಿಗಳು, ಬಚೇಗಳು, ಕೋಟೆಗಳು, ಶಸ್ತ್ರಗಳು, ಮದ್ದು ಗುಂಡು ಬೇರೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
24-9 210 Abdul Rehman Street, BOMBAY.

ಬಾಲಾರ್ಕಮಧು.

ಈ ಮದ್ದಿನ ... ಮಧು ...



... ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.
53-34

ಕಟು ಕಷಾಯ ಮತ್ತು ... ರತ್ನ ... 1—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಮತಿ ಪ್ರಕಾಶ ರತ್ನ ಕಷಾಯ

ಚಂದನಾಸವ:— ...

ಕೋಮುನಾಸಿಕ:— ... 1 ... 3—8—0

ಮನೋಲ್ಲಾಸಿನಿ ತೈಲ:— ... ರೂ 1, 3 ... 10—0 ... 3, 3 ... 5—8—0

52-27 ಶೀಘ್ರವಾಗಿ ... ವಿಳಾಸ—ಮನೋಲ್ಲಾಸಿನಿ ... 9 ಮಂಗಳೂರು

ಕೊಡಗು.

ಸನ್ ೧೯೩೧ನೇ ಇಸವಿ

ನವಂಬರ್ ತಾ. ೧೩ನೇ ಶುಕ್ರವಾರ.

ಹೊಸ ಪಾರ್ಲಿಮೆಂಟು.

ಬ್ರಿಟನ್ನಿನ ಪಾರ್ಲಿಮೆಂಟಿನ ಜನರಲ್ ಚುನಾವಣೆಯು ಕಳೆದ ತಿಂಗಳ 27 ರಲ್ಲಿ ನಡೆಯಿತು. ನೇಶನಲ್ ಸರ್ಕಾರದ ಹಾಗೂ ಕನ್‌ಸರ್ವೇಟಿವ್ ಪಕ್ಷದವರಿಗೆ ದೊಡ್ಡ ಜಯವಾಯಿತು. ಕಳೆದ ಪಾರ್ಲಿಮೆಂಟಿನಲ್ಲಿ 288 ಲೇಬರ್ ಪಕ್ಷದ ಮೆಂಬರುಗಳೂ, 266 ಕನ್‌ಸರ್ವೇಟಿವ್ ಮೆಂಬರುಗಳೂ ಮತ್ತು 61 ಲಿಬರಲ್ ಮೆಂಬರುಗಳೂ ಇದ್ದರು. ಆದರೆ ಈಗಿನ ಹೊಸ ಸಭೆಯಲ್ಲಿ 554 ನೇಶನಲ್ ಸರ್ಕಾರದ ಪಕ್ಷದವರೂ, ಬರೇ 50 ಲೇಬರ್ ಪಕ್ಷದವರೂ ಇರುವರು. ನೇಶನಲ್ ಸರ್ಕಾರದ ಪಕ್ಷದವರಲ್ಲಿ 473 ಕನ್‌ಸರ್ವೇಟಿವ್ ಮೆಂಬರುಗಳಾಗಿರುವರು. ಇದರಿಂದ ನೇಶನಲ್ ಸರ್ಕಾರ ಪಕ್ಷದವರು ಸರ್ಕಾರ ನಡಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿರುವರಾದರೂ, ನಿಜವಾದ ಅಧಿಕಾರವು ಕನ್‌ಸರ್ವೇಟಿವ್ ಪಕ್ಷದವರಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ.

ಕಳೆದ ಸರ್ಕಾರದ ಮಂತ್ರಿ ಮಂಡಳಿಯಲ್ಲಿ ಬರೇ 10 ಮಂತ್ರಿಗಳಿದ್ದರು. ಆದರೆ ಈಗಿನ ಹೊಸ ಮಂಡಳಿಯಲ್ಲಿ ಮಂತ್ರಿಗಳ ಸಂಖ್ಯೆಯು 20ಕ್ಕೆ ಏರಿಸಲ್ಪಟ್ಟಿದೆ. ಅದರಲ್ಲಿ 11 ಜನರು ಕನ್‌ಸರ್ವೇಟಿವ್‌ಗಳೂ, 5 ಲಿಬರಲ್‌ಗಳೂ ಮತ್ತು 4 ನೇಶನಲ್ ಲೇಬರ್ ಪಕ್ಷದವರೂ ಆಗಿರುವರು. ಮಂತ್ರಿ ಮಂಡಳಿಯಲ್ಲಿ ಅರ್ಧಕ್ಕಿಂತ ಹೆಚ್ಚು ಕನ್‌ಸರ್ವೇಟಿವ್‌ಗಳೇ ಇರುವರು. ಇದರಿಂದ ಆಡಳಿತವು ಯಾವ ಪಕ್ಷದ ಮೇರೆ ನಡಿಸಲ್ಪಡುವದೆಂದು ಗೊತ್ತಾಗುವುದು.

ಈ ಚುನಾವಣೆಯಲ್ಲಿ ಲೇಬರ್ ಪಕ್ಷದವರಿಗೆ ದೊಡ್ಡ ಅಪಜಯವಾಯಿತು. ಕಳೆದ ಚುನಾವಣೆಯಲ್ಲಿ ಬಹುಮತವನ್ನು ಪಡೆದು ಅಧಿಕಾರಕ್ಕೆ ಬಂದಿದ್ದ ಲೇಬರ್ ಪಕ್ಷಕ್ಕೆ ಪ್ರಜಾ ಪ್ರಭುತ್ವವು ದಿನೇ ದಿನೇ ವೃದ್ಧಿಗೊಳ್ಳುತ್ತಾ ಬರುತ್ತಿರುವ ಈ ಸಮಯದಲ್ಲಿ ಇಂಥಾ ಅಪಜಯವು ಸಂಭವಿಸುವದೆಂದು ಯಾರೂ ಯೋಚಿಸಿರಲಿಲ್ಲ. ದೇಶದ ಆರ್ಥಿಕ ಹೀನ ಸ್ಥಿತಿಯೂ, ಅದನ್ನು ಸರಿಪಡಿಸಲು ಎಲ್ಲಾ ಪಾರ್ಟಿಗಳಿಂದ ಕೂಡಿದ ನೇಶನಲ್ ಸರ್ಕಾರಿ ಪಾರ್ಟಿಯವರಿಂದಲೇ ಸಾಧ್ಯವೆಂಬ ಭಾವನೆಯು ಜನಸಮುದಾಯದಲ್ಲಿ ಹಬ್ಬಿದ್ದದ್ದೂ ಚುನಾವಣೆಯ ಈ ತರಹದ ಫಲಿತಾಂಶಕ್ಕೆ ಕಾರಣಗಳಾದರೂ ಲೇಬರ್ ಪಾರ್ಟಿಯಲ್ಲಿ ಒಡಕುಗಳು ಉಂಟಾದದ್ದು ಮತ್ತೊಂದು ಕಾರಣವೆಂಬುವುದರಲ್ಲಿ ಸಂಶಯವಿಲ್ಲ. ಲೇಬರ್ ಪಾರ್ಟಿಯನ್ನು ಸ್ಥಾಪಿಸಿದವರಲ್ಲಿ ಒಬ್ಬ ಮುಖಂಡರಾದ ಮತ್ತು ಕಳೆದ ಸರ್ಕಾರದಲ್ಲಿ ಆ ಪಾರ್ಟಿಯ ಮುಂದಾಳಾಗಿದ್ದ ಮಿ. ಮೆಕ್ಡೊನಾಲ್ಡರವರೇ ಅವರ ಪಾರ್ಟಿಯ ಹೆಚ್ಚಿನವರನ್ನು ಬಿಟ್ಟು ನೇಶನಲ್ ಸರ್ಕಾರದ ಕಡೆ ಸೇರಿದ್ದು ಜನರ ಮನಸ್ಸನ್ನು ಬಹಳ ಮಟ್ಟಿಗೆ ಕಳವಳಗೊಳಿಸಿತು. ಮಿ. ಮೆಕ್ಡೊನಾಲ್ಡರವರು ಸರ್ಕಾರ ಬದಲಾದರೂ ತನ್ನ ಪ್ರಧಾನ ಮಂತ್ರಿ ಪದವಿಯನ್ನು ಉಳಿಸಿಕೊಳ್ಳಲೋಸುಗ ಹೀಗೆ ಮಾಡಿದರೆಂದು ಹಲವರ ಅಭಿಪ್ರಾಯ. ಹೇಗೂ ಹಲವು ಮೂರು ಪಾರ್ಟಿಗಳಿಂದ ಕೂಡಿದ ನೇಶನಲ್ ಸರ್ಕಾರದ ಪಕ್ಷವನ್ನು ಉಪಯೋಗಿಸಿಕೊಂಡು ಕನ್‌ಸರ್ವೇಟಿವ್ ಪಕ್ಷದವರು ದೊಡ್ಡ ಜಯವನ್ನು ಪಡೆದಿರುವರು. ಈಗಿನ ಸರ್ಕಾರವು ಪಾರ್ಟಿ ತತ್ವಗಳಿಂದ ಕೂಡಿದ್ದಲ್ಲವೆಂದು ಅವರು ಎಷ್ಟು ಹೇಳಿಕೊಂಡರೂ, ಅದರಲ್ಲಿಯ ಬಹುಮತ ಮೆಂಬರುಗಳ ತತ್ವದಂತೆ ಸರ್ಕಾರವು ನಡಿಸಲ್ಪಡುವದೆಂಬುವುದರಲ್ಲಿ ಸಂದೇಹವಿಲ್ಲ.

ಹೊಸ ಪಾರ್ಲಿಮೆಂಟಿನಿಂದ ಹಿಂದೂಸ್ಥಾನದ ಸ್ವಾತಂತ್ರ್ಯ ಹೋರಾಟಕ್ಕೆ ಉಂಟಾಗುವ ಪರಿಣಾಮವೇನೆಂದು ಯೋಚಿಸಬೇಕಾಗಿದೆ. ಕಳೆದ ಚುನಾವಣೆಯಲ್ಲಿ ಯಾವ ಪಾರ್ಟಿಯವರೂ ಹಿಂದೂಸ್ಥಾನದ ವಿಷಯ ಏನೊಂದೂ ಮಾತನ್ನು ವೋಟರುಗಳಿಗೆ ಹೇಳಿರುವುದಿಲ್ಲ. ಇದರಿಂದ ಇಂಡಿಯಾದ ಮಟ್ಟಿಗೆ ಎಲ್ಲಾ ಪಾರ್ಟಿಗಳ ತತ್ವಗಳು ಒಂದೇ ಎಂದೂ, ಈ ವಿಷಯದಲ್ಲಿ ಅವರು ವೋಟರುಗಳನ್ನು ಕೇಳದೆ ಹೇಗೆ ಬೇಕಾದರೂ ವರ್ತಿಸಬಹುದೆಂದೂ ವಿಶದವಾಗುತ್ತದೆ. ಆದರೂ ಕೂಡ ಲೇಬರ್ ಪಾರ್ಟಿಯವರಲ್ಲಿ ಹಿಂದೂಸ್ಥಾನದ ಸ್ವರಾಜ್ಯ ಹೋರಾಟದ ಕಡೆ ಸಹಾನುಭೂತಿ ಉಳ್ಳವರು ಕೆಲವರು ಇರುವರು. ಇದರಿಂದ ಲೇಬರ್ ಪಾರ್ಟಿಯ ಸೋಲು ಇಂಡಿಯಾಕ್ಕೆ ನಷ್ಟವೆಂದೇ ಹೇಳಬಹುದು. ಆದರೆ ಲೇಬರ್ ಪಕ್ಷದವರು ಅಧಿಕಾರದಲ್ಲಿದ್ದಾಗ್ಯೂ ಹಿಂದೂಸ್ಥಾನಕ್ಕೆ ಸಹಾನುಭೂತಿಯನ್ನು ತೋರಿಸುವಂಥ ಭಾಷೆಗಳನ್ನು ಕೊಟ್ಟಿದ್ದರೂ ಅವುಗಳನ್ನು ನಡಿಸಿ ಕೊಡಲಾರದೆ ಹಿಂದೀಯರನ್ನು ನಿರಾಶೆಗೊಳಿಸುತ್ತಾ ಬಂದರು. ಈಗಲಾದರೋ ಇಂಡಿಯಾದ ಸ್ವಾತಂತ್ರ್ಯಕ್ಕೆ ವಿರೋಧಿಸುತ್ತಿದ್ದಂಥ ಕನ್‌ಸರ್ವೇಟಿವ್ ಪಕ್ಷದವರು ಅಧಿಕಾರಕ್ಕೆ ಬಂದಿರುವದರಿಂದ ಅವರು ಇಂಡಿಯಾದ ವಿಷಯ ಖಂಡ ತುಂಡು ಮಾತುಗಳನ್ನಾಡುವರು. ಹಿಂದೀಯರಿಗೆ ಬ್ರಿಟಿಷರಿಂದ ಏನು ದೊರೆಯುವದೆಂಬುದು ಸ್ಪಷ್ಟವಾಗಿ ಗೊತ್ತಾಗುವುದು. ಅದು ತೃಪ್ತಿಕರವಲ್ಲವಾದರೆ ತಮ್ಮ ಸ್ವಾತಂತ್ರ್ಯವನ್ನು ಪಡೆಯಲು ಆಗುವಷ್ಟು ಬೇಗನೆ ತಮ್ಮ ಚಳವಳವನ್ನು ನಡಿಸುವರು. ಈ ದೃಷ್ಟಿಯಿಂದ ಕನ್‌ಸರ್ವೇಟಿವ್‌ಗಳ ಜಯವು ಇಂಡಿಯಾಕ್ಕೆ ಲಾಭಕರವೆಂದು ಹೇಳಬಹುದು.

ಉಪಾಧ್ಯಾಯರುಗಳ ಸಮ್ಮೇಳನ.

ಅಖಿಲ ಕೊಡಗಿನ ಉಪಾಧ್ಯಾಯರುಗಳ ಸಮ್ಮೇಳನವು ಈ ತಾ 7ರಿಂದ 9ರ ವರೆಗೆ ಮಡಿಕೇರಿಯಲ್ಲಿ ನಡೆಯಿತು. ಶಾಲಾ ಇನ್ಸ್‌ಪೆಕ್ಟರಾದ ಮಿ. ಯಫ್. ಎಡ್‌ಮಂಡ್ಸ್‌ರವರು ಅಧ್ಯಕ್ಷರಾಗಿದ್ದರು. ಪ್ರಥಮ ದಿನ ವಿದ್ಯಾ ಇಲಾಖೆಯ ಸಹಕಾರ ಸಂಸ್ಥೆಗಳ ವಾರ್ಷಿಕ ಸಭೆಗಳು ನಡಿಸಲ್ಪಟ್ಟವು. ಇವುಗಳ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ. ಉಪಾಧ್ಯಾಯರುಗಳೆಲ್ಲರೂ ಒಂದು ಕಡೆ ಸೇರಿದ್ದ ಈ ಸಮಯದಲ್ಲೇ ಸಹಕಾರ ಸಂಸ್ಥೆಗಳ ಮಹಾ ಸಭೆಗಳನ್ನು ನಡಿಸಿದ್ದು ಯುಕ್ತವಾಗಿದೆ. ಅದಕ್ಕಾಗಿ ಪ್ರತ್ಯೇಕ ಸೇರುವ ಖರ್ಚನ್ನೂ, ಸಮಯವನ್ನೂ ಉಳಿಸಿದಂತಾಯಿತು. ಖರ್ಚಿನ ಬಗ್ಗೆ ಇಲ್ಲಿ ಒಂದು ಸೂಚನೆ ಮಾಡುವುದು ಅವಶ್ಯವೆಂದು ತೋರುತ್ತದೆ. ವಾಡಿಕೆಯಾಗಿ ಇಂಥಾ ಸಮ್ಮೇಳನಗಳು ದೇಶದ ಮುಖ್ಯ ಮುಖ್ಯ ಸ್ಥಳಗಳಲ್ಲಿ ನಡೆಯುವುದಾಗಿದೆ. ಆದುದರಿಂದ ಮುಖ್ಯ ಸ್ಥಳಗಳಲ್ಲಿ ಹೆಚ್ಚಿನ ಸಂಬಳ ದೊರೆಯುವ ಉಪಾಧ್ಯಾಯರುಗಳಿಗೆ ಸಮ್ಮೇಳನಗಳಿಗೆ ಹೋಗಲು ಪ್ರಯಾಣದ ಖರ್ಚು ಕಡಿಮೆಯಾಗುತ್ತದೆ. ಗ್ರಾಮಾಂತರಗಳಲ್ಲಿರುವ ಕಡಿಮೆ ಸಂಬಳದ ಟೀಚರುಗಳು ತಮ್ಮ ಕೈಯಿಂದ ಹೆಚ್ಚು ಖರ್ಚು ಮಾಡಿಕೊಂಡು ಇಂಥಾ ಸಭೆಗಳಿಗೆ ಬರಬೇಕಾಗುತ್ತದೆ. ಎಲ್ಲಾ ಉಪಾಧ್ಯಾಯರುಗಳು ಬರಬೇಕೆಂಬ ನಿರ್ಬಂಧವಿರುವುದರಿಂದ ಮೀಟಿಂಗಿಗೆ ಬಾರದೆ ಇರಲು ಸಾಧ್ಯವಿಲ್ಲ. ಆದುದರಿಂದ ದೂರದ ಮೂಲೆಗಳಲ್ಲಿರುವ ಬಡ ಉಪಾಧ್ಯಾಯರುಗಳು ಮನಸ್ಸಿರಲಿ, ಇಲ್ಲದಿರಲಿ ಖರ್ಚು ಮಾಡಲೇ ಬೇಕಾಗುತ್ತದೆ. ಅದರ ಬದಲು ಉಪಾಧ್ಯಾಯರುಗಳ ಸಂಘದಿಂದಲೇ ಎಲ್ಲರ ಪ್ರಯಾಣದ ಭತ್ಯವನ್ನು ಕೊಡುವಂತೆ ಏರ್ಪಾಡು ಮಾಡಿದರೆ ಸದರಿ ಖರ್ಚಿನ ಹೊರೆಯು ಎಲ್ಲರ ಮೇಲೆ (ಸಂಬಳದ ದಾಮಾಶಾಯಿ ಮೇರೆ) ಬಿದ್ದಂತಾಗುವುದು. ಇದಕ್ಕೆ ಬೇಕಾದ ನೆರವನ್ನು ಸಂಘದ ಬೇರೆ ಖರ್ಚಿನ ಹಣದಿಂದ ಜಮಾಯಿಸಿಕೊಳ್ಳಬಹುದು.

ವಸ್ತು ಪ್ರದರ್ಶನವು ತಕ್ಕ ಮಟ್ಟಿಗೆ ಚೆನ್ನಾಗಿ ನಡೆಯಿತೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ಪ್ರದರ್ಶನದಲ್ಲಿ ಸುಮಾರು 650 ವಸ್ತುಗಳು ಪ್ರದರ್ಶಿಸಲ್ಪಟ್ಟಿದ್ದವು. ಅವುಗಳಲ್ಲಿ ಒಂದು ಭಾಗವು ಪಬ್ಲಿಕಿನವರದಾಗಿತ್ತು. ಚಿತ್ರಲೇಖನಗಳು ಮತ್ತು ಮರಗೆಲಸದ ಕೆಲವು ಸಾಮಾನುಗಳು ನೋಡಲು ಯೋಗ್ಯವಾಗಿದ್ದವು. ಇಂಥಾ ಪ್ರದರ್ಶನಗಳಿಂದ ಎಲ್ಲಾ ತರಹದ ಕೈಗಾರಿಕೆಗಳಿಗೆ ತುಂಬಾ ಉತ್ತೇಜನ ದೊರಕುತ್ತದೆಂಬುದರಲ್ಲಿ ಸಂದೇಹವಿಲ್ಲ.

ಸಮ್ಮೇಳನದ ವಾಡಿಕೆಯ ಕಾರ್ಯಗಳು ಎಂದಿನಂತೆ ನಡೆದವು. ಆದರೆ ಇದನ್ನು ನಡೆಸುವುದರಲ್ಲಿ ಅಲ್ಪ ಸ್ವಲ್ಪ ದೂರುಗಳಿಗೆ ಎಡೆಯಿತ್ತೆಂದೂ ತಿಳಿಯಬರುತ್ತದೆ. ಈ ವಿಷಯ ಸಂಬಂಧಪಟ್ಟವರು ವಿಚಾರಿಸಿ ಮುಂದಕ್ಕೆ ಅಂಥಾವುಗಳಿಗೆ ಎಡೆ ಇಲ್ಲದಂತೆ ಮಾಡುವುದು ಉತ್ತಮ.

ತಾ. 8ರ ರಾತ್ರಿ ಅಭಿನಯಿಸಲ್ಪಟ್ಟ ಇಂಗ್ಲಿಷು ಮತ್ತು ಕನ್ನಡ ನಾಟಕಗಳ ವಿಷಯ ಹೆಚ್ಚಿಗೆ ಬರೆಯಬೇಕಾದರೂ ಅವುಗಳು ನೆರೆದಿದ್ದ ಸಭಿಕರಿಗೆ ತೃಪ್ತಿಯನ್ನುಂಟು ಮಾಡಲಿಲ್ಲವೆಂದೇ ಹಲವರ ಅಭಿಪ್ರಾಯ. ಇದಕ್ಕೆ ಸಾಕಷ್ಟು ತರಬೇತು ಮಾಡದೆ ಇದ್ದದ್ದೋ ಅಥವಾ ಏರ್ಪಾಡುಗಳು ಸರಿಯಾಗಿ ಮಾಡಲ್ಪಡದದ್ದೋ ಕಾರಣವೆಂದು ತಿಳಿಯದು. ವಿಚಾರಿಸಿ ಮುಂದಕ್ಕೆ ತಿದ್ದುಪಡಿ ಮಾಡಿಕೊಳ್ಳುವಂಥ ವಿಷಯಗಳಲ್ಲಿ ಇದೊಂದಾಗಿದೆ.

ಪಟ್ಟಣದ ಹೊರಗಿನಿಂದ ಬಂದಿದ್ದ ಉಪಾಧ್ಯಾಯರುಗಳಿಗೆ ಮಾಡಿದ್ದ ಊಟದ ಏರ್ಪಾಡು ಅತೃಪ್ತಿಕರವಾಗಿತ್ತೆಂದು ತಿಳಿಯುತ್ತೇವೆ. ಬರೇ ಸುಮಾರು ಮುನ್ನೂರು ಜನರಿಗೆ 3 ದಿವಸಗಳ ಊಟದ ವ್ಯವಸ್ಥೆ ಮಾಡುವುದು, ಅದರಲ್ಲೂ, ಮಡಿಕೇರಿಯಂಥ ಪಟ್ಟಣದಲ್ಲಿ, ಬಹು ಕಷ್ಟದ ಕೆಲಸವೇನೂ ಅಲ್ಲ. ಕಳೆದ ಸಾರಿ ವೀರಾಜಪೇಟೆಯಲ್ಲಿ ನಡೆದ ಸಮ್ಮೇಳನದ ಊಟದ ಏರ್ಪಾಡು ಚೆನ್ನಾಗಿತ್ತೆಂದು ತಿಳಿಯುತ್ತೇವೆ. ಹಾಗೆಯೇ ಇಲ್ಲಿಯ ಸ್ವಾಗತ ಮಂಡಳಿಯವರು ಸ್ವಲ್ಪ ಕೊಂದರೆ ತೆಗೆದುಕೊಂಡಿದ್ದರೆ ಅದು ಹೊಸ್ಸೆಯದೇನೂ ಆಗುತ್ತಿರಲಿಲ್ಲ. 'ನಾವು ಮುಖ್ಯ ಪಟ್ಟಣದ ಉಪಾಧ್ಯಾಯರುಗಳು, ಹೇಗೆ ಮಾಡಿದರೂ ಸರಿ ಹೋಗುತ್ತೆ' ಎಂಬ ಭಾವನೆಯಿಂದ ಹೀಗಾಯಿತೋ ಏನೋ ತಿಳಿಯದು. ಜನ ಸ್ವಲ್ಪದಾಯುದವರೇ ಅನುಕೂಲಗಳು ಕಡಿಮೆಯಾಗಿರುವ ಹಳ್ಳಿಗಳಲ್ಲೂ ಕೂಡ ಊಟದ ಇದಕ್ಕಿಂತ ಎಷ್ಟೋ ದೊಡ್ಡದಾದ ಏರ್ಪಾಡುಗಳನ್ನು ಸರಿಯಾಗಿ ನಡಿಸಿರುವಲ್ಲಿ ಸುಶಿಕ್ಷಿತರೂ ಮುಂದಿನ ಜನಾಂಗವನ್ನು ತರಬೇತು ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಎಲ್ಲದಕ್ಕೂ ಅನುಕೂಲವಿರುವ ಸ್ಥಳದಲ್ಲೇ ಯೋಗ್ಯವಾದ ಏರ್ಪಾಡು ಮಾಡಲು ಆಗಲಿಲ್ಲವೆಂಬುದು ವ್ಯಸನದ ಸಂಗತಿಯಾಗಿದೆ. ಇಂಥಾ ವಿಷಯಗಳಲ್ಲಿ ಉಪಾಧ್ಯಾಯರುಗಳು 'ನೆರೆಯುವರಿಗೆ ಒಂದು ಮಾದರಿ'ಯಾಗಿರಬೇಕು.

ಇಂಥಾ ಸಮ್ಮೇಳನಗಳಿಂದ ತುಂಬಾ ಪ್ರಯೋಜನವುಂಟೆಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಅವುಗಳಿಗೆ ಯೋಗ್ಯವಾದ ಏರ್ಪಾಡುಗಳನ್ನು ಮಾಡಿಕೊಂಡು ಎಲ್ಲರೂ ಸರಿಸಮಾನತ್ವ ಭಾವದಿಂದ ವರ್ತಿಸಿ, ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಬೆಳೆಸಲು ಪ್ರಯತ್ನಿಸದೆ ಹೋದರೆ, ಇಂಥಾ ಸಮ್ಮೇಳನಗಳ ಉದ್ದೇಶವನ್ನೇ ಸೋಲಿಸಿದಂತಾಗುವುದು.

ಅಖಿಲ ಕೊಡಗು ಉಪಾಧ್ಯಾಯರ ಸಮ್ಮೇಳನ

ಈ ಸಮ್ಮೇಳನದ ಹಲವು ಚಟುವಟಿಕೆಗಳು ಮಡಿಕೇರಿ ಹೈಸ್ಕೂಲಿನಲ್ಲಿ ತಾ 7ರಿಂದ 10ರ ವರೆಗೆ ವಿಜೃಂಭಣೆಯಿಂದ ಜರಗಿದವು. ಕೊಡಗಿನ ನಾನಾ ಶಾಲೆಗಳಿಂದ ಉಪಾಧ್ಯಾಯರು ನೆರೆದಿದ್ದರು. ತಾ. 7ರಲ್ಲು ಉಪಾಧ್ಯಾಯರ ಸ್ಟೋರ್ಸ್ ಮತ್ತು ಪತ್ತಿನ ಸಂಘದ ಕಾರ್ಯಗಳು ನಡೆದವು. ಸ್ಟೋರ್ಸ್‌ನ ಸಭೆಗೆ ರಿಜಿಸ್ಟ್ರಾರರಾದ ಮಿ. ಯಂ. ಯಸ್. ಮಂದಣ್ಣನವರು ಮತ್ತು ಪತ್ತಿನ ಸಂಘದ ಸಭೆಗೆ ರಾ. ಬಾ. ಪಟ್ಟಮಾಡದ ದೇವಯ್ಯನವರು ಅಧ್ಯಕ್ಷರುಗಳಾಗಿದ್ದರು.

ತಾ. 8ರಲ್ಲಿ ಪಂಥದಾಟಗಳು ನಡೆದವು. ಮಧ್ಯಾಹ್ನದ ವೇಳೆ ನಾರ್ಮಲ್ ಶಾಲೆಯ ಹುಡುಗರ ಸೊಗಸಾದ ಡ್ರಿಲ್ಲು 'ಕವಾಟ'ವು ನಡೆದನಂತರ ಸ್ವಾಗತ ಮಂಡಲಿಯ ಅಧ್ಯಕ್ಷರಾದ ಮಿ. ಬಿ ಯಸ್ ಕುಶಾಲಪ್ಪನವರ ಮತ್ತು ಸಮ್ಮೇಳನ ಅಧ್ಯಕ್ಷರಾದ ಮಿ. ಯಫ್. ಎಡ್‌ಮಂಡ್ಸ್‌ರವರ ಭಾಷಣಗಳು ಆದವು. ಅದೇ ಸಮಯದಲ್ಲಿ ಪಂಥದಾಟಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳು ಹಂಚಲ್ಪಟ್ಟವು. ಚಾಂಪ್ಯನ್‌ಶಿಪ್ ಕಪ್ಪು ಕಳೆದ ವರ್ಷ ಇದೇ ಕಪ್ಪನ್ನು ಗೆದ್ದಿದ್ದ ಮ ರಾ. ಮಾಳೇಟಿರ ಅಪ್ಪಯ್ಯನವರಿಗೆ ಸಿಕ್ಕಿತು.

ಈ ವರ್ಷದ ಪ್ರದರ್ಶನವು ಆದಷ್ಟು ಅಚ್ಚುಕಟ್ಟಾಗಿ ಏರ್ಪಡಿಸಲ್ಪಟ್ಟಿತ್ತು. ಪಬ್ಲಿಕಿಗೆ ಒಂದು ಭಾಗವೂ, ಸ್ಕೂಲುಗಳಿಗೆ ಒಂದು ಭಾಗವೂ ಏರ್ಪಡಿತ್ತು. ಪಬ್ಲಿಕಿನ ಭಾಗಕ್ಕೆ ಹಲವು ಮಹನೀಯರು ಹಲವು ಅಮೂಲ್ಯವಾದ ಮತ್ತು ಕಲೆಗೆ ಸಂಬಂಧಪಟ್ಟ ವಸ್ತುಗಳನ್ನು ಕಳುಹಿಸಿಕೊಟ್ಟಿದ್ದರು. ಇವುಗಳಲ್ಲಿ ಕಲೆಗಾರರಾದ ಮಿ. ಬಿ. ಸಿ. ಪೊನ್ನಪ್ಪನವರ, ಮಿಸೆಸ್ ಜಿ. ಗಣೇಶರಾವ್ ಮತ್ತು ಕಾನ್ವೆಂಟಿನ ಹಳೇ ವಿದ್ಯಾರ್ಥಿನಿಯರು ಇವರುಗಳ ವಸ್ತುಗಳು ಹೆಚ್ಚಿನ ಮೆಚ್ಚಿಕೆಯನ್ನು ಸಂಪಾದಿಸಿದವು.

ಸ್ಕೂಲ್ ಸೆಕ್ಷನಿನಲ್ಲಿ ಸಾಮಾನ್ಯವಾಗಿ ಶಿಕ್ಷಣ ಸಂಬಂಧವಾದ ಎಲ್ಲಾ ತರದ ವಸ್ತುಗಳು ಪ್ರದರ್ಶಿಸಲ್ಪಟ್ಟಿದ್ದವು. ಇದರಲ್ಲಿಯೂ ಕಾನ್ವೆಂಟಿನ ಮಕ್ಕಳ ಪದಾರ್ಥಗಳೇ ಉತ್ತಮವಾಗಿದ್ದುವು. ಚಿತ್ರಲೇಖನ ಸಂಬಂಧವಾದ ಅನೇಕ ವಸ್ತುಗಳು ಮಡಿಕೇರಿ ಹೈಸ್ಕೂಲು ಮತ್ತು ವೀರಾಜಪೇಟೆ ಹೈಸ್ಕೂಲುಗಳಿಂದ ಬಂದಿದ್ದವು. ಮರಗೆಲಸದ ಕುರಿತು ಮಡಿಕೇರಿ ಬಡಗಿ ಶಾಲೆಯಿಂದ ಬಂದಿದ್ದ ಕುರ್ಚಿ ಮೇಜುಗಳೂ ಚಮತ್ಕಾರವಾದ ಒಂದು ಪೆಟ್ಟಿಗೆಯೂ ಇದ್ದವು. ವೀರಾಜಪೇಟೆ ಬಡಗಿ ಶಾಲೆಯು ವಿಶೇಷ ತರದ ಒಂದು ಮೇಜವನ್ನು ಕಳುಹಿತ್ತು. ವ್ಯವಸಾಯಿಕ ಉಪಕರಣಗಳೂ, ನೇಜಿಯಿಂದ ತಯಾರಿಸಿದ ವಸ್ತುಗಳೂ ಸೊಗಸಾಗಿದ್ದುವು. ಪ್ರದರ್ಶನವನ್ನು ನೋಡಲಿಕ್ಕೆ ಬಹು ಜನರು ಬಂದಿದ್ದರು. ಪ್ರದರ್ಶನದಲ್ಲಿ ಸುಮಾರು 650 ವಸ್ತುಗಳು ಇದ್ದವು.

ತಾ 8ರ ರಾತ್ರಿ ಒಂದು ಇಂಗ್ಲಿಷ್ ನಾಟಕವೂ, ಒಂದು ಕನ್ನಡ ನಾಟಕವೂ ಅಭಿನಯಿಸಲ್ಪಟ್ಟವು. ನಾಟಕಾಭಿನಯವು ಚೆನ್ನಾಗಿತ್ತೆಂದು ತಿಳಿದು ಬರುತ್ತದೆ. ಮಿ ಬಿ. ಎಸ್ ಕುಶಾಲಪ್ಪನವರ ಅಭಿನಯವು ಉತ್ತಮವಾಗಿತ್ತೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು.

ತಾ 9ರಲ್ಲಿ ಪಾಠ ಪ್ರವಚನಗಳೂ, ಭಾಷಣಗಳೂ ನಡೆದುವು. ಮೈಸೂರು ಮಹಾರಾಜ ಕಾಲೇಜಿನ ಲೆಕ್ಚರರಾದ ಮಿ. ಎನ್. ಕಸ್ತೂರಿ ಬಿ. ಎ, ಬಿ ಎಲ್. ಇವರು ಚರಿತ್ರೆಯ ಕುರಿತು ಕೊಟ್ಟ ಭಾಷಣವು ಸ್ವಾರಸ್ಯವಾಗಿದ್ದಿತು. ಅಂತ್ಯದಲ್ಲಿ ಅಧ್ಯಕ್ಷರು ಸಮ್ಮೇಳನದ ಅನೇಕ ಚಟುವಟಿಕೆಗಳನ್ನು ಕುರಿತು ಮಾತಾಡಿದ ನಂತರ ಸಭೆಯು ಕೊನೆಗೊಂಡಿತು.

ಯಂ. ಯನ್. ಕುಟ್ಟಪ್ಪ,
(ಕಾರ್ಯದರ್ಶಿ.)

ಫೆಡರೇಶನ್ ಮತ್ತು ಸೆಂಟ್ರಲ್ ಬ್ಯಾಂಕಿನ ಸಂಯುಕ್ತ ಮೀಟಿಂಗು.

ತಾರೀಕು 31—10—31 ರಲ್ಲಿ ಫೆಡರೇಶನ್ ಆಫೀಸಿನಲ್ಲಿ ನಡೆದ ಫೆಡರೇಶನ್ ಎಗ್ಸಿಕ್ಯುಟಿವ್ ಕಮಿಟಿಯವರ ಮತ್ತು ಸೆಂಟ್ರಲ್ ಬ್ಯಾಂಕ್ ಡೈರೆಕ್ಟರುಗಳ ಮೀಟಿಂಗಿನ ಪ್ರೊಸೀಡಿಂಗ್ಸ್:—

ಈ ಕೆಳಗಿನ 17 ಮೆಂಬರುಗಳು ಹಾಜರಿದ್ದರು. ಮೆ. ಗಳಾದ ರಾ ಬಾ ಪಿ. ದೇವಯ್ಯನವರು, ಯಂ. ಯಂ. ಚೆಕ್ಕಪ್ಪನವರು, ಕೆ. ಪಿ ಚಿಣ್ಣಪ್ಪನವರು, ಪಾಂಡಂಡ ಮುತ್ತಣ್ಣನವರು, ಚಾರೀರ ಅಪ್ಪಯ್ಯನವರು, ಬಡುವಂಡ ಗಣಪತಿಯವರು, ಕೋಡಿರ ತಮ್ಮಯ್ಯನವರು, ಸಿ. ಯನ್. ಮೆಂಕಪ್ಪಯ್ಯನವರು ಬಿ. ಎ, ಬಿ. ಎಲ್, ಯಸ್. ಎನ್. ರಾಮಶೆಟ್ಟಿ, ನಡಿಕೇರಿಯಂಡ ಸೋಮಯ್ಯನವರು ಯಂ. ಎಲ್. ಸಿ., ಐಸಂಡ ಕಾರ್ಯಪ್ಪನವರು, ಕೊಗಂಡ ಗಣಪತಿಯವರು ಯಂ. ಎಲ್ ಸಿ., ಮುಂಡಾಂಡಿರ ದೇವಯ್ಯನವರು, ಬಿದ್ದಂಡ ಸುಬ್ಬಯ್ಯನವರು, ಯಂ. ಶಿದ್ದಲಿಂಗಪ್ಪನವರು, ಹೆಚ್. ಹೊನ್ನಪ್ಪನವರು, ಎ ಸಿ ಸುಬ್ಬಯ್ಯನವರು, ಯಂ ಎ, ಬಿ ಎಲ್. ಸಹಕಾರಿ ಸಂಘಗಳ ರಿಜಿಸ್ಟ್ರಾರವರು ಮತ್ತು ಎಲ್ಲಾ ಸಹಕಾರಿ ಇನ್ಸ್‌ಪೆಕ್ಟರುಗಳೂ ಹಾಜರಿದ್ದರು.

1 ಈ ದಿನದ ಮೀಟಿಂಗಿಗೆ ರಾ|| ಬಾ|| ಪಿ ದೇವಯ್ಯನವರನ್ನು ಸರ್ವಸಮ್ಮತದಿಂದ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

2. ಆಯಾಯ ಸಂಘದ ಕಾರ್ಯನಿರ್ವಾಹಕ ಕಮಿಟಿ ಮೆಂಬರುಗಳು ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮತ್ತು ಯೂನಿಯನ್ ಮೆಂಬರುಗಳ ಸಹಾಯದಿಂದ ತಮ್ಮಲ್ಲಿ ಹೆಸರಿಕೊಂಡ ಮೆಂಬರುಗಳ ಸಾಲ ಮೂಲಗಳನ್ನು ಚೆನ್ನಾಗಿ ಪರಿಶೀಲಿಸಿ, ಅಂಥಾ ಬಾಕಿದಾರರ ಮರುಪಾವತಿಯ ಯೋಗ್ಯತೆಗನುಗುಣವಾಗಿ ಮುಂದಿನ ಕಂತುಗಳನ್ನು ನಿರ್ಣಯಿಸಬೇಕಾಗಿಯೂ, ಸೆಂಟ್ರಲ್ ಬ್ಯಾಂಕಿನವರು ಆಯಾಯ ಸಂಘದ ಮರುಪಾವತಿಯ ಯೋಗ್ಯತೆಯನ್ನು ಕಂಡು ಹಿಡಿದು ಕಂತುಗಳನ್ನು ನಿರ್ಣಯಿಸಬೇಕಾಗಿಯೂ, ಈ ವಿಷಯದಲ್ಲಿ ಫೆಡರೇಶನ್ನಿನವರು ಯೂನಿಯನ್ ಮೂಲಕ ಎಲ್ಲಾ ಸಂಘಗಳಲ್ಲಿಯೂ ಜನರಲ್ ಮೀಟಿಂಗು ಮಾಡಿ, ತಕ್ಕ ಏರ್ಪಾಡು ಮಾಡಬೇಕಾಗಿಯೂ ತೀರ್ಮಾನಿಸಲಾಯಿತು.

3 ಕಮಿಟಿ ಮೆಂಬರುತನಕ್ಕೆ ಯೋಗ್ಯರಾದವರು ಸಿಕ್ಕದೆ ಇರುವ ಸಂಘಗಳನ್ನು ಒಟ್ಟು ಗೂಡಿಸುವ ವಿಷಯ ಚರ್ಚಿಸಲಾಗಿ ಸದ್ಯಕ್ಕೆ ಅವಶ್ಯವಿಲ್ಲವೆಂದು ಬಾಕಿ ಮಾಡಲಾಯಿತ.

4 ಪ್ರತಿ ಯೂನಿಯನ್ ತನ್ನ ಕರ್ತವ್ಯವನ್ನು ಸರಿಯಾಗಿ ನಡಿಸಲು ಯೂನಿಯನ್‌ಗಳಿಗೆ ಧನ ಸಹಾಯ ಮಾಡಬೇಕೆಂದೂ, ಅವಶ್ಯವಿರುವ ಮೊಬಲಗಿಗೆ ಯೂನಿಯನ್ನಿನವರು ತಮ್ಮ ವರ್ಷದ ಬಡ್ಜೆಟ್ಟನ್ನು ಕಳುಹಿಸಿ ಕೊಟ್ಟ ಮೇಲೆ ಆಲೋಚಿಸಲಾಗುವುದೆಂದೂ ತೀರ್ಮಾನಿಸಲಾಯಿತು.

5 ಸಹಕಾರಿ ಸ್ಟೋರುಗಳಿಗೆ ಪ್ರತ್ಯೇಕ ಒಬ್ಬ ಚೆನ್ನಾಗಿ ಕೆಲಸ ಮಾಡುವ ಸುಪರ್‌ವೈಸರನ್ನು ನೇಮಕ ಮಾಡುವಂತೆ ತೀರ್ಮಾನಿಸಲಾಯಿತು.

6. ಮೆಂಬರುಗಳಿಗೆ ಸಹಕಾರ ತತ್ವಗಳನ್ನು ಮ್ಯಾಜಿಕ್ ಲ್ಯಾಂಟರ್ನ್ ಮತ್ತು ಸಹಕಾರ ನಾಟಕಗಳ ಮೂಲಕ ಬೋಧಿಸಬೇಕಾಗಿಯೂ ಮತ್ತು ಸದರಿ ಉದ್ದೇಶಕ್ಕಾಗಿ ರೂ. 100 ರ ಮ್ಯಾಜಿಕ್ ಲ್ಯಾಂಟರ್ನ್, ಸ್ಲೈಡುಗಳನ್ನು ತರಿಸುವಂತೆಯೂ ತೀರ್ಮಾನಿಸಲಾಯಿತು

7 ಸುಪರ್‌ವೈಸರುಗಳ ಮತ್ತು ಯೂನಿಯನ್ನಿನವರ ಕೆಲಸಗಳನ್ನು ಊರ್ಜಿತ ಸ್ಥಿತಿಗೆ ತರಲು ಒಂದು ಎಗ್ಸಿಕ್ಯುಟಿವ್ ಸ್ಟಾಫನ್ನು ಏರ್ಪಡಿಸಬೇಕೆಂದೂ, ಈ ವಿಷಯದಲ್ಲಿ ಬಡ್ಜೆಟ್ಟನ್ನು ನೋಡಿ ಫೆಡರೇಶನ್ ಜನರಲ್‌ಬಾಡಿ ಮೀಟಿಂಗಿನಲ್ಲಿ ತೀರ್ಮಾನಿಸುವಂತೆಯೂ ನಿಶ್ಚಯಿಸಲಾಯಿತು.

8. ಎಲ್ಲಾ ಸ್ಥಳೀಯ ಕಾನ್‌ಫರೆನ್ಸ್‌ಗಳಿಗೆ ರಿಜಿಸ್ಟ್ರಾರವರು, ಫೆಡರೇಶನ್ನಿನವರು ಮತ್ತು ಸೆಂಟ್ರಲ್ ಬ್ಯಾಂಕಿನವರು ಹೋಗಬೇಕಾಗಿ ಕೇಳಿಕೊಳ್ಳುವಂತೆಯೂ, ಮುಂದಾಗಿಯೇ ಫೆಡರೇಶನ್ನಿನವರ ಅನುಕೂಲತೆಯನ್ನು ತಿಳಿದು ಸದರಿ ಕಾನ್‌ಫರೆನ್ಸ್ ಅಥವಾ ಜನರಲ್‌ಬಾಡಿ ಮೀಟಿಂಗು ಏರ್ಪಡಿಸುವಂತೆಯೂ ತೀರ್ಮಾನಿಸಲಾಯಿತು.

9. ತ್ರಿಫ್ಟ್ ಸರ್ಟಿಫಿಕೇಟ್‌ಗಳನ್ನು ಜಾರಿಗೆ ತರುವ ವಿಷಯ ಚರ್ಚಿಸಲಾಗಿ ಸದ್ಯಕ್ಕೆ ಅವಶ್ಯವಿಲ್ಲವೆಂದು ತೀರ್ಮಾನಿಸಲಾಯಿತು

10 ಅಮಲ್‌ಜಾರಿ ವಾರೆಂಟುಗಳನ್ನು ಜಾರಿ ಮಾಡತಕ್ಕ ಅಧಿಕಾರವನ್ನು ಸುಪರ್‌ವೈಸರುಗಳಿಗೆ ಕೊಡತಕ್ಕ ವಿಷಯ ಸದ್ಯಕ್ಕೆ ಅವಶ್ಯವಿಲ್ಲವೆಂದು ತೀರ್ಮಾನಿಸಲಾಯಿತು

11. ರೂ. 100 ರಿಂದ 200 ವರೆಗೆ ಸಾಲಗಳನ್ನು ಸಂಘಗಳು ಮೆಂಬರುಗಳಿಗೆ ಬಟವಾಡೆ ಮಾಡಬೇಕಾದರೆ ಫೆಡರೇಶನ್ನಿನವರ ಯಾ ಯೂನಿಯನ್ನಿನವರ ಮಂಜೂರಾತಿಯನ್ನು ಪಡಕೊಳ್ಳಬೇಕೆಂಬ ವಿಷಯ ಚರ್ಚಿಸಲಾಗಿ ಅವಶ್ಯವಿಲ್ಲವೆಂದು ಬಾಕಿ ಮಾಡಲಾಯಿತ.

12 ಒಂದು ಸಂಘದಿಂದ ಆದರೆ ಮಿತ ಯಾ ಅಮಿತ ಬಾಧ್ಯತೆಯ ಸಂಘದಿಂದ ಸಾಲ ಹೊಂದಿಕೊಂಡ ಮೆಂಬರನು ಇನ್ನೊಂದು ಸಂಘದಿಂದ ಸಾಲ ಹೊಂದಿಕೊಳ್ಳಕೂಡದಾಗಿ ತೀರ್ಮಾನಿಸಲಾಯಿತು ಮತ್ತು ಈ ವಿಷಯದಲ್ಲಿ ಸಂಘಗಳಿಗೆ ಸರ್ಕ್ಯುಲಾರ್‌ಗಳನ್ನು ಕಳುಹಿಸುವಂತೆ ರಿಜಿಸ್ಟ್ರಾರವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

13. ಇನ್ನು ಮುಂದಕ್ಕೆ ಯೂನಿಯನ್‌ಗಳಿಂದ ಮತ್ತು ಸಂಘಗಳಿಂದ ಫೆಡರೇಶನ್ನಿಗೆ ಕರೆಸ್‌ಪಾಂಡೆನ್ಸ್ ಯಾವ ರೀತಿಯಲ್ಲಿ ಆಗಬೇಕೆಂಬುದನ್ನು ತಾರೀಕು 18—4—31 ರಲ್ಲಿ ನಡೆದ ಫೆಡರೇಶನ್ನಿನ ಜನರಲ್ ಮೀಟಿಂಗಿನ ರೆಸಲೂಶನ್ ನಂಬ್ರ 15 ಕ್ಕನುಗುಣವಾಗಿ ರಿಜಿಸ್ಟ್ರಾರವರು ತಕ್ಕ ಸರ್ಕ್ಯುಲಾರ್ ಕಳುಹಿಸಬೇಕಾಗಿ ಕೇಳಿಕೊಳ್ಳಲಾಯಿತು.

14. ಅಧ್ಯಕ್ಷರಿಗೆ ವಂದನೆಯಿಂದ ಮೀಟಿಂಗು ಬರಕಾಸ್ತು ಮಾಡಲಾಯಿತು.

ಪಿ ದೇವಯ್ಯ,
(ಅಧ್ಯಕ್ಷ.)

ವ್ಯಾ ಪಾ ರಿ ಲ ಕ್ಷ ಣ.

ವ್ಯಾಪಾರ ಮಾಡಲು ಇಷ್ಟಪಡುವವರು ತಮಗೆ ಯಾವುದರಲ್ಲಿ ವಿಶೇಷ ಅನುಭವವಿದೆಯೋ ಎಂಬುವದನ್ನು ಗಮನಿಸಬೇಕು. ಆ ವಿಷಯವಾಗಿ ಒಬ್ಬ ವ್ಯಾಪಾರಿಯೊಂದಿಗೆ ಸಹಕರಿಸಿ ಮಾಹಿತಿ ಪಡೆಯುವದು ಬಹು ಒಳ್ಳೆಯದು.

ವ್ಯಾಪಾರ ವಿಷಯವನ್ನು ತಿಳಿದುಕೊಳ್ಳುವದಕ್ಕೆ ಅನುಭವವೇ ದೊಡ್ಡದು. ತನ್ನ ಅನುಭವವನ್ನು ವೃದ್ಧಿಪಡಿಸಿಕೊಳ್ಳುವ, ವಿಶಾಲಪಡಿಸಿಕೊಳ್ಳುವ ವರ್ತಮಾನ ಪತ್ರಗಳನ್ನು ಅವಶ್ಯ ಓದಬೇಕು.

ಒಂದು ಕಾರ್ಯವನ್ನು ಆರಂಭಿಸುವುದಕ್ಕೆ ಮೊದಲು ಅದನ್ನು ಕುರಿತು ದೀರ್ಘವಾಗಿ ಆಲೋಚಿಸಬೇಕು. ವೃಥಾ ಮನೋರಾಜ್ಯ ಮಾಡುವುದರಿಂದ ಫಲ ಪಡೆಯುವುದು ಸ್ವಪ್ನ ಕಂಡಂತೆ ಆಗುವುದು.

ತನ್ನ ಯೋಜನೆಯನ್ನು ಇತರರಿಗೂ ತಿಳಿಸಿ ಅವರುಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕು. ವ್ಯಾಪಾರಿಗಳು ಅನೇಕ ವಿಷಯಗಳನ್ನು ಗಮನಿಸಬೇಕಾಗಿರುವುದರಿಂದ ಅವರು ಆಗಾಗ್ಗೆ ಅವಶ್ಯಕವಾಗಿ ಮಾಡಬೇಕಾದ ಕಾರ್ಯಗಳನ್ನು ಡೈರಿ (ದಿನಚರಿ) ಬುಕ್ಕಿನಲ್ಲಿ ಬರೆದಿಟ್ಟು ಆ ಮೇರೆಗೆ ಕಾರ್ಯಗಳನ್ನು ಮಾಡುವುದು ಒಳ್ಳೆಯದು

ವ್ಯಾಪಾರಿಯು ತನ್ನ ಮಕ್ಕಳು ಒಳ್ಳೇ ವ್ಯಾಪಾರಿಗಳಾಗಬೇಕೆಂದು ಅಭಿಪ್ರಾಯಪಡುವುದಾದರೆ ಅವರು ತನ್ನ ಮಕ್ಕಳನ್ನು ಇತರ ವ್ಯಾಪಾರಿಗಳ ಕೈಕೆಳಗೆ ಕಲಸಕ್ಕೆ ಹಚ್ಚಬೇಕು ಇದರಿಂದ ಅವರುಗಳು ವ್ಯಾಪಾರದಲ್ಲಿರುವ ಲಾಭ ನಷ್ಟಗಳನ್ನೂ, ಇನ್ನೂ ಅನೇಕ ಅವಶ್ಯ ತಿಳಿಯಬೇಕಾದ ವಿಷಯಗಳನ್ನೂ ತಿಳಿದು ಒಳ್ಳೇ ಅನುಭವಶಾಲಿಗಳಾಗುತ್ತಾರೆ

ಯಾವ ಕೆಲಸ ಮಾಡುವವರೂ ಸಂಪತ್ತಿಗೆ ಲಕ್ಷಣವಾದ ಶಾಂತಿ ಎಂಬ ದೈವಿಕ ಗುಣವನ್ನು ತಾಳಬೇಕು. ಅವರು ಯಾವಾಗಲೂ ಸಂತೋಷ ಮುಖದಿಂದ ಕಾಣಿಸಬೇಕು. ತಮ್ಮಲ್ಲಿಗೆ ಬರುವವರುಗಳಲ್ಲಿ ವಿಶ್ವಾಸದಿಂದ ಮಾತನಾಡಿ ಅವರುಗಳಿಗೆ ತೃಪ್ತಿಕರವಾಗಿ ನಡೆಸುಕೊಳ್ಳಬೇಕ ಯಾವ ಕೆಲಸದಲ್ಲಿಯೂ ಕೋಪವಂತರಾಗಬಾರದು. ಹಾಗೆ ಕೋಪಗೊಳ್ಳುವದರಿಂದ ತಮ್ಮ ಕಾರ್ಯಗಳಿಗೆ ತಾವೇ ವಿಘ್ನಕಾರಿಗಳಾಗುತ್ತಾರೆ. ಅಂಥವರಲ್ಲಿಗೆ ಬರಲು ಯಾರೂ ಇಷ್ಟಪಡರು ಮನಸ್ಸಿಗೆ ಇಂಪಾಗಿ ಮಾತನಾಡಿ ತೃಪ್ತಿಮಾಡುವ ಶಕ್ತಿ ಪ್ರತಿಯೊಬ್ಬ ವ್ಯಾಪಾರಿಗೆ ಇರಬೇಕಾದ್ದು ಆವಶ್ಯಕವು ಮಾಡುವ ಕಾರ್ಯಗಳಲ್ಲಿ ಲಾಭ ಬಂದ ಕಾಲದಲ್ಲಿ ಸಂತೋಷಪಡುವುದ, ನಷ್ಟ ಬಂದ ಕಾಲದಲ್ಲಿ ಅಧೈರ್ಯಪಡುವುದು ಇವುಗಳು ಪ್ರಾಜ್ಞ ವರ್ತಕನಿಗೆ ಭೂಷಣವಲ್ಲವು. ಲಾಭ ನಷ್ಟಗಳನ್ನು ಸಮವಾಗಿ ಭಾವಿಸಬೇಕು. ಇಂಥಾ ಮನೋಧೈರ್ಯವಿಲ್ಲದವರು ಯಾವ ವಿಧವಾದ ಕೆಲಸವನ್ನೂ ಮಾಡದಿರುವುದು ಬಹು ಒಳ್ಳೆಯದು.

ಒಂದು ಕೆಲಸವನ್ನು ಮಾಡುವಾಗ್ಗೆ ತಮ್ಮ ಪೂರ್ಣ ಮನವನ್ನು ಅದರಲ್ಲಿ ಚಲ್ಲಿಸಬೇಕು. ಒಂದು ಕೆಲಸ ಮಾಡುತ್ತ ಮತ್ತೊಂದು ಕೆಲಸವನ್ನು ಮಾಡಲು ಪ್ರಕ್ರಮಿಸಬಾರದು. ಇದರಿಂದ ಎರಡರಲ್ಲಿಯೂ ಸರಿಯಾದ ಫಲವಿಲ್ಲದೆ ಹೋಗುತ್ತದೆ. ಇದರ ಮೇಲೆ ಒಂದು ಕೆಲಸದಲ್ಲಿ ನಷ್ಟವಿರುವ ಕಾಲದಲ್ಲಿ ಅದನ್ನು ಬಿಟ್ಟು ಬೇರೆ ಕೆಲಸವನ್ನು ಆರಂಭಿಸಿದರೆ ಮೊದಲು ಮಾಡಿದ ಕೆಲಸದಲ್ಲಿ ಲಾಭವಾಗುವ ಸಮಯವು ಎದುರು ನೋಡದೆ ಹೋಗಿಬಿಡುವದು.

ಆದ್ದರಿಂದ ಚೆನ್ನಾಗಿ ಆಲೋಚಿಸಿ ಆರಂಭಿಸಿದ ಕೆಲಸದಲ್ಲಿಯೇ ಪೂರ್ಣ ಗಮನವಿಟ್ಟು ನಡಿಸಿಕೊಂಡು ಬಂದರೆ ಕಡೆಯಲ್ಲಿ ತಮ್ಮ ಮನೋಭಿಲಾಷೆ ಕೈಗೂಡುವದು ನಿಶ್ಚಯ.

ಮಧುರೆ, ರಾಮೇಶ್ವರ ಮಾರ್ಗದಲ್ಲಿ ದೇವಕೋಟೆ ಎಂಬ ಒಂದು ಊರು ಇದೆ. ಇಲ್ಲಿ ಬಡ್ಡಿಗೆ ಹಣ ಕೊಟ್ಟು ತೆಗೆಯುವದೇ ಒಂದು ವ್ಯಾಪಾರವಾಗಿಟ್ಟುಕೊಂಡ, ನಾಟುಕೋಟೆಶೆಟ್ಟಿಗಳು ಎಂಬ ಒಂದು ವರ್ಗದವರು ಇರುವರು. ಇವರಲ್ಲಿ ಅನೇಕರು ಲಕ್ಷಾಧಿಪತಿ ಮತ್ತು ಕೋಟೀಶ್ವರರುಗಳಾಗಿರುತ್ತಾರೆ. ಎಂಥ ಕೋಟೀಶ್ವರನಾದರೂ ಸರಿಯೇ ತನ್ನ ಮಗನನ್ನು ಒಬ್ಬ ವ್ಯಾಪಾರಿಯ ಬಳಿ ಅಲ್ಪ ಪಗಾರಕ್ಕೆ ಕಳುಹಿಸುತ್ತಾನೆ. ಹುಡುಗನು ಅಲ್ಪ ಪಗಾರದಿಂದ ದೊಡ್ಡ ಪಗಾರವಂತನಾಗಿ ಯಜಮಾನನ ಕಾರ್ಯಗಳನ್ನೆಲ್ಲ ತಾನು ನಡಿಸುವಂತೆ ಅನುಭವ ಪಡೆಯ ಸಾಹಸಿಯಾಗುತ್ತಾನೆ.

ಆಗ್ಗೆ ತಂದೆಯು, ಮಗನನ್ನು ಕೆಲಸದಿಂದ ಬಿಡಿಸಿ ಒಂದು ಸಣ್ಣ ಅಂಗಡಿಯನ್ನು ಹಾಕಿಕೊಡುತ್ತಾನೆ ಹುಡುಗನು ತನ್ನ ಬುದ್ಧಿ ಚಾತುರ್ಯಗಳಿಂದ ಕ್ರಮ ಕ್ರಮವಾಗಿ ವೃದ್ಧಿಗೊಂಡು ಒಂದು ದೊಡ್ಡ ಅಂಗಡಿಗೆ ಧನಿಯಾಗುತ್ತಾನೆ. ಇದಲ್ಲವೆ, ಬದುಕತಕ್ಕ ವ್ಯಾಪಾರಿಗಳ ಯುಕ್ತಿಯು.

" ಸುಬೋಧ. "

ಕಾಂಗ್ರೆಸ್ ಮಹಾಸಭೆಯ ಕಾರ್ಯಕಾರೀ ಮಂಡಳಿಯ ನಿರ್ಣಯಗಳು.

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರಿ ಮಂಡಳಿಯ ಸಭೆಯು ಮಂಗಳವಾರ ತಾ. ೨೭—೧೦—೩೧ ನೇ ದಿನ ದಿಲ್ಲಿಯಲ್ಲಿ ಸರದಾರ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಶೇಟ್ ಜಮುನಾಲಾಲ ಬಜಾಜರ ಹೊರತು ಹಿಂದೂಸ್ಥಾನದಲ್ಲಿದ್ದ ಸಭಾಸದರೆಲ್ಲರೂ ಹಾಜರು ಇದ್ದರು ಸಭೆಯವರು ಮಾಡಿದ ಠರಾವುಗಳ ಮುಖ್ಯಾಂಶವು ಕೆಳಗಿನಂತಿದೆ.

(೧) ಬೇರೆ ಬೇರೆ ಪ್ರಾಂತಗಳಲ್ಲಿಯ ತಾಲೂಕು, ಜಿಲ್ಲೆಗಳ ಯಾ ಪ್ರಾಂತೀಯ ಕಾಂಗ್ರೆಸ್ ಕಮಿಟಿಗಳ ಚುನಾವಣೆಯಾಗಿ ಬಹಳ ದಿವಸಗಳಾಗಿದ್ದರಿಂದ ಈಗ ಪುನಹ ಚುನಾವಣೆ ಮಾಡುವ ಅವಶ್ಯಕತೆಯಿಲ್ಲ ಯಾವಾಗ ಚುನಾವಣೆ ಮಾಡಬೇಕೆಂಬುದು ನಂತರ ಪ್ರಸಿದ್ಧ ಮಾಡಲಾಗುವದು ಆದರೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಚುನಾವಣೆಯು ಮಾತ್ರ ೧೯೩೨ನೇ ಇಸವಿಯ ಜನವರಿ ೧೫ರೊಳಗಾಗಿ ಆಗತಕ್ಕದ್ದು.

(೨) ರುಪಾಯಿಗಳಿಗೆ ಬಂಗಾರದ ಕೂಡ ಇದ್ದ ಸಂಬಂಧವನ್ನು ಕಡಿದು ಹಾಕಿ, ಪೌಂಡ ಗಳ ಕೂಡ ಅದರ ವ್ಯವಹಾರ ನಡೆಸುವಂತೆ ಬ್ರಿಟಿಷ್ ಸರ್ಕಾರದವರು ಸ್ವೀಕರಿಸಿದ ಧೋರಣದಲ್ಲಿ ಇಂಗ್ಲಿಷರ ಕೇವಲ ಸ್ವಾರ್ಥವಿದ್ದು ಇದರಿಂದ ಅವರ ವ್ಯಾಪಾರ ಬೆಳೆಯಲು ಅನುಕೂಲವಾಗಿದೆ ಈ ಧೋರಣದಿಂದ ರಿಝರ್ವ್ ಬ್ಯಾಂಕು ಸ್ಥಾಪಿಸಲು ಅಡಚಣೆ ಬರುವುದರಿಂದ ಈ ಸಭೆಯವರು ಅದನ್ನು ತೀವ್ರ ನಿಷೇಧಿಸುತ್ತಾರೆ ಈ ಸ್ವಾರ್ಥಪರ ಧೋರಣದ ಜವಾಬ್ದಾರಿಯೆಲ್ಲವೂ ಸರಕಾರದ ಮೇಲಿದೆ ಮತ್ತು ಇಂಗ್ಲೆಂಡಿನ ಕೂಡ ಆರ್ಥಿಕ ಒಪ್ಪಂದ ಮಾಡಿಕೊಳ್ಳುವ ಸಮಯವು ಪ್ರಾಪ್ತವಾದಾಗ ಅವರು ಈ ಧೋರಣದಿಂದ ಹಿಂದುಸ್ಥಾನದ ಮೇಲೆ ಆಗುವ ಪರಿಣಾಮದ ವಿಚಾರವನ್ನು ಅವಶ್ಯವಾಗಿ ಮಾಡಲಾಗುವದು. ಮತ್ತು ಆಗ ಇಂಗ್ಲೆಂಡಿನವರು ಈ ಹಾನಿಯನ್ನು ಭರ್ತಿ ಮಾಡಿ ಕೊಡಬೇಕಾಗುವದು.

(೩) ಹಿಂದುಸ್ಥಾನ ಸರ್ಕಾರದ ಆದಾಯ ವ್ಯಯದಲ್ಲಿ ಕಡಿಮೆಯಾದದನ್ನು ಭರ್ತಿ ಮಾಡುವುದಕ್ಕಾಗಿ ಜನರ ಮೇಲೆ ಹೇರಬೇಕೆಂಬ ಹೊಸ ಕರದ ಯೋಜನೆಯಿಂದ ಬ್ರಿಟಿಷ್ ಸರ್ಕಾರಕ್ಕೆ ಇರುವ ಅಧಿಕಾರವನ್ನು ಹಿಂದೀ ಜನತೆಯ ಕೈಯಲ್ಲಿ ಕೊಡುವುದು ಎಷ್ಟೊಂದು ಅವಶ್ಯಕವಿರುವುದು ಸ್ಪಷ್ಟವಾಗಿ ಸಿದ್ಧವಾಗುತ್ತದೆ ಅಲ್ಲದೆ ಉಪ್ಪಿನ ಮೇಲೆ ಹೇರಿದ ಹೊಸ ಕರದಿಂದಾಗಲೂ ದಿಲ್ಲಿ ಒಪ್ಪಂದಕ್ಕೆ ಪೂರ್ಣ ವಿರೋಧ ಮಾಡಿದಂತಾಗಿದೆ. ಯಾಕೆಂದರೆ, ಆ ಒಪ್ಪಂದದ ಕರಾರಿನಲ್ಲಿ ಬಡ ಜನರ ಗೋಳು ಮುಗಿಯುವ ಈ ಕರವನ್ನು ಕಡಿಮೆ ಮಾಡಬೇಕೆಂದು ನಿರ್ಧಾರ್ಯವಾಗಿದ್ದಿತು.

(೪) ಚಿತಗಾಂಗ ನಗರ ಮತ್ತು ಹಳ್ಳಿಯಲ್ಲಿ ತಾ ೩೧ನೇ ಆಗಸ್ಟದ ದಿನ ಸಂಭವಿಸಿದ ದೊಂಬಿಯ ವಿಚಾರಣೆ ಮಾಡುವುದಕ್ಕಾಗಿ ನೇಮಿಸಿದ ಮಿ॥ ಸೆನಗುಪ್ತ ಸಭಾಸದ ಮಂಡಳದವರಿಯ ಮೇಲಿಂದ ಆ ಪ್ರಕರಣದಲ್ಲಿ ಪೊಲೀಸು ಮತ್ತು ಮೆಜಿಸ್ಟ್ರೇಟರು ಮತ್ತು ಬಿನ್ ಸರಕಾರಿ ಯೂರೋಪಿಯನ್ ಜನರ ಜನತೆಯಲ್ಲಿ ಅಂಜಿಕೆಯನ್ನು ಹುಟ್ಟಿಸುವುದಕ್ಕಾಗಿ ಕೆಲವು ಜನರ ಸಹಾಯದಿಂದ ಆ ದೊಂಬಿಯನ್ನು ಮಾಡಿಸಿದರೆಂದು ಆ ಕಾರ್ಯಕಾರೀ ಮಂಡಳದ ಮತವಿದೆ ಆದುದರಿಂದ ಈ ಸಭೆಯವರು ಇದನ್ನು ತೀವ್ರವಾಗಿ ನಿಷೇಧಿಸುತ್ತಾರೆ ಈ ದೊಂಬಿಗೆ ಜಾತಿ ಜಾತಿಗಳಲ್ಲಿ ಸಂಭವಿಸುವ ದೊಂಬಿಯ ಸ್ವರೂಪ ಕೊಡಬೇಕೆಂದು ಪ್ರಯತ್ನ ಮಾಡಲ್ಪಟ್ಟದ್ದರೂ ಆ ಸ್ವರೂಪವು ಪ್ರಾಪ್ತವಾಗದ್ದಕ್ಕಾಗಿ ಕಮಿಟಿ ಆನಂದಪಡುತ್ತದೆ ಇವರಿಂದ ಜನರಿಗೆ ಸಂಭವಿಸಿದ ನಷ್ಟವನ್ನು ಭರ್ತಿ ಮಾಡಿಕೊಡುವ ಮತ್ತು ಅಪರಾಧಿಗಳನ್ನು ಚೆನ್ನಾಗಿ ಶಿಕ್ಷಿಸುವ ವ್ಯವಸ್ಥೆಯನ್ನು ಬಂಗಾಳ ಸರಕಾರದವರು ಮಾಡಬೇಕೆಂದು ಕಮಿಟಿಯ ಅಭಿಪ್ರಾಯವಿ.

(೫) ಹಿಜಲಿ ತುರುಂಗದಲ್ಲಿ ೨ಂ ರಾಜಕೀಯ ಸೆರೆಯಾಳುಗಳಿಗೆ ಗುಂಡು ತಗಲಿ ಅವರಿಗೆ ಮರಣ ಸಂಭವಿಸಿದಕ್ಕಾಗಿ ಕಮಿಟಿಯವರಿಗೆ ವಿಷಾದವೆನಿಸುತ್ತದೆ. ಸರ್ಕಾರದವರು ನೇಮಿಸಿದ ಕಮಿಟಿಯವರ ವರದಿಯು ಪ್ರಸಿದ್ಧವಾಗುವ ಮೊದಲು ಈ ಬಗ್ಗೆ ನಿಶ್ಚಿತ ಮತವನ್ನು ಕೊಡದಿದ್ದರೂ ಜನತೆಯು ವಿಷಯವನ್ನು ಕೇಳದೆ ವಿಚಾರಣೆ ಮಾಡದೆ, ಯಾವ ರಾಜಕೀಯ ಕೈದಿಗಳನ್ನು ತುರುಂಗದಲ್ಲಿ ಕೂಡಿ ಇಟ್ಟರೋ ಆ ಕೈದಿಗಳ ಜೀವಿತದ ಹಾಗೂ ಸುರಕ್ಷಿತತೆಯ ಹೊಣೆಯು ಸರ್ಕಾರದ ಮೇಲಿದ್ದುದರಿಂದ ಈ ಅತ್ಯಾಚಾರಕ್ಕಾಗಿ ಅಪರಾಧಿಗಳೆಂದು ನಿರ್ಣಯಿಸಲ್ಪಟ್ಟವರಿಗೆ ಶಾಸನ ಮಾಡುವದೇ ಸರ್ಕಾರದ ಮುಖ್ಯ ಕರ್ತವ್ಯವೆಂದು ಈ ಕಾರ್ಯಕಾರಿ ಮಂಡಳದ ಅಭಿಪ್ರಾಯವಿದೆ.

(೬) ಅಲಹಾಬಾದ್ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ, ಮತ್ತು ಸಂಯುಕ್ತ ಪ್ರಾಂತ್ಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಎಲ್ಲ ಕೇಳಿಕೆಯನ್ನು ಕಾರ್ಯಕಾರೀ ಮಂಡಲವು ಕೇಳಿಕೊಂಡಿದ್ದಾರೆ. ಇದರಿಂದ ಕಳೆದ 5 ತಿಂಗಳುಗಳಲ್ಲಿ ಕಂದಾ ಪಾಗೂ ಗೇಣಿ ಪತ್ತೆ ವಸೂಲಿ ಮಾಡುವಾಗ ನಡೆದ ಅನ್ಯಾಯವಾದ ಪ್ರಕ್ರಿಯೆಗಳ ಸ್ವಂತ ಮೇಲೆ ಸುಲಭವೇ ಮಾಡಲಾಗುತ್ತದೆಂದು ಕಂಡುಬಂದಿದೆ. ಇದರಿಂದ ಮಂದಗಳವರಿಗೆ ಕಡಿತೆಸಿರುತ್ತದೆ. ಈ ವಿಷಯದಲ್ಲಿ ಸತ್ಯಾಗ್ರಹ ಪ್ರಾರಂಭ ಮಾಡಬೇಕೋ ಬೇಡವೋ ವಿಚಾರವನ್ನು ಸಂಯುಕ್ತ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಮಾಡತಕ್ಕದ್ದು. ಹೀಗೆ ವಿಚಾರ ಮಾಡುವಾಗ ದಿಲ್ಲಿ ಕರಾರುಗಳನ್ನು ಲಕ್ಷ್ಯದಲ್ಲಿಡಬೇಕು. ಮತ್ತು ಸತ್ಯಾಗ್ರಹ ಹೂಡುವದನ್ನು ಈ ಪ್ರಶ್ನೆಯು ಮಹತ್ವದ್ದಾಗಿದೆಂದು ಕಮಿಟಿಯವರ ಅಭಿಪ್ರಾಯವಾದರೆ ಸರ್ದಾರ್ ವಲ್ಲಭಭಾಯಿಯವರು ಸ್ವತಃ ಈ ಪ್ರಶ್ನೆಯ ವಿಚಾರ ಮಾಡಿ ಯೋಗ್ಯ ತೋರಿದ ಅಪ್ಪಣೆ ಕೊಡತಕ್ಕದ್ದು. ಈ ಎಲ್ಲಾ ಅಧಿಕಾರವನ್ನು ಅಧ್ಯಕ್ಷ ವಲ್ಲಭಭಾಯಿಯವರಿಗೆ ಕೊಡಲಾಗಿದೆ.

ಕೊಡಗು ಉಪಾಧ್ಯಾಯರ ಸಹಕಾರ ಸ್ಟೋರ್ಸಿನ ವಾರ್ಷಿಕ ಜನರಲ್ ಮೀಟಿಂಗು.

ಈ ಸ್ಟೋರ್ಸಿನ ಜನರಲ್ ಮೀಟಿಂಗು ಈ ವರ್ಷ ಮಡಿಕೇರಿ ಹೈಸ್ಕೂಲಿನಲ್ಲಿ ತಾ. 7—11—1931ರಲ್ಲಿ ನಡೆಯಿತು. ಸಹಕಾರ ಸಂಘಗಳ ರಿಜಿಸ್ಟ್ರಾರವರಾದ ಮೆ. ಯಂ. ಯಸ್ ಮಂದಣ್ಣನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಅನೇಕ ಮಹಾಶಯರುಗಳು ಹಾಜರಿದ್ದುದಲ್ಲದೆ, ರಿಟಯರ್ಡ್ ರಿಜಿಸ್ಟ್ರಾರವರಾದ ಮೆ. ಕೆ. ಎಸ್. ಸುಬ್ಬಯ್ಯನವರೂ ಫೆಡರೇಶನ್ ಪ್ರೆಸಿಡೆಂಟರೂ ಮತ್ತು ಸೆಕ್ರೆಟರಿಯವರೂ ಹಾಜರಿದ್ದರು.

1. ಗತ ವರ್ಷದಲ್ಲಿ ಸ್ವರ್ಗಸ್ಥರಾದ ಯಂ ಎ. ತಿಮ್ಮಪ್ಪಯ್ಯನವರ ಮತ್ತು ಒಡಿಗಸ ಮುದ್ದಯ್ಯನವರ ಮರಣವನ್ನು ಕುರಿತು ವ್ಯಸನ ಸೂಚಕ ಪತ್ರವನ್ನು ಅವರ ಕುಟುಂಬಕ್ಕೆ ಬರೆಯುವದೆಂದು ತೀರ್ಮಾನವಾಯಿತು.

2. ಕಳೆದ ಜನರಲ್ ಮೀಟಿಂಗಿನ ವರದಿಯನ್ನು ಓದಿ ಒಪ್ಪಲಾಯಿತು.

3 ಗತವರ್ಷದ ಆಡಿಟ್ ರಿಪೋರ್ಟನ್ನು ಓದಿ ಒಪ್ಪಲಾಯಿತು.

4. ಗತ ವರ್ಷದ ವ್ಯವಹಾರ ಕುರಿತು ಸೆಕ್ರೆಟರಿಯವರು ಓದಿದ ರಿಪೋರ್ಟ್ ಮಂಜೂರು ಮಾಡಲಾಯಿತು.

5. ಬೈಲಾ 18ನ್ನು (a) ಯಾಗಿ ತೆಗೆದುಕೊಂಡು (b) ಯಾಗಿ ಈ ಕೆಳಗಿನದನ್ನು ಸೇರಿಸುವದು—'ಅಲ್ಲದೆ ಸಾಮಾನುಗಳನ್ನು ತರಿಸುವ ಬಗ್ಗೆ ಸಂಘಾಯಿತರ 3 ಜನರುಳ್ಳ ಒಂದು ಪರ್ಚೇಸಿಂಗ್ ಕಮಿಟಿ ಇರತಕ್ಕದ್ದು. ಇವರು ಸ್ಟೋರ್ಸ್ ಕೊಂಡುಕೊಳ್ಳಬೇಕೆಂದು ಗುಮಾಸ್ತನು ಬರೆದಿರುವ ಸಾಮಾನುಗಳ ಪಟ್ಟಿಯನ್ನು ಮಂಜೂರು ಮಾಡುವದು, ಸೆಕ್ರೆಟರಿಯವರು ತರಿಸಿದ ಸಾಮಾನುಗಳ ಕ್ರಯವನ್ನು ನಿಷ್ಕರ್ಷಿಸುವದು' ಮತ್ತು ಬೈಲಾ 20ರಲ್ಲಿ ಅಧ್ಯಕ್ಷನನ್ನಾಗಲೀ, 3 ಜನರುಳ್ಳ ಪರ್ಚೇಸಿಂಗ್ ಕಮಿಟಿಯಾಗಿಯೂ ಎಂಬುದನ್ನು ಸೇರಿಸುವುದು ಎಂದು ಸರ್ವಸಮ್ಮತದಿಂದ ಪಾಸಾಯಿತು.

6. ಕಾಮನ್ ಗುಡ್ ಫಂಡಿನಿಂದ ಮಹಾ ಸಭೆಯ ಖರ್ಚು 25 ರೂ. ಮಂಜೂರು ಮಾಡಲಾಯಿತು.

7. ಕನ್ಸರ್ನಿಂದ (ಕೆ. ಯಸ್. ನಂಗಿಂಗರಾಯರಿಂದ) ಒಟ್ಟಾರೆ 200 ರೂ. ಸೆಕ್ಯೂರಿಟಿ ತೆಗೆದುಕೊಳ್ಳುವುದೆಂದು ತೀರ್ಮಾನಿಸಲಾಯಿತು

8. ಸ್ಟೋರಿನ ಉಪಯೋಗದ ಬಗ್ಗೆ ಕಟ್ಟಡವನ್ನು ರಿಜರ್ವ್ ಫಂಡಿನಿಂದ ತೆಗೆದುಕೊಳ್ಳುವದೆಂಬ ಠರಾವನ್ನು ಕುರಿತು ರಿಜಿಸ್ಟ್ರಾರವರು ತನಗೆ ಬರಕೊಂಡಲ್ಲು ಅಧಿಕಾರಿಗಳಿಗೆ ಬರೆದು ಆರ್ಡರು ತರಿಸುತ್ತೇನೆಂದು ಹೇಳಿದರು.

೯. ಸ್ಟೋರಿನ ಕಾಮನ್ ಗುಡ್ ಫಂಡಿನಿಂದ ಕೊಡಗಿನ ಶಾಲೆಗಳಿಂದ ಉಪಾಧ್ಯಾಯರ ಕಾನ್‌ಫರೆನ್ಸಿಗೆ ಬರುವ ಹುಡುಗರ ಪ್ರದರ್ಶನಗಳಿಗೆ 15 ರೂಪಾಯಿಯೂ, ಹುಡುಗಿಯರ ಪ್ರದರ್ಶನಗಳಿಗೆ 10 ರೂಪಾಯಿಯೂ ಕೊಡಬೇಕೆಂಬುದು ಬಹುಮತದಿಂದ ಪಾಸಾಯಿತು.

10 ಆ ಗುಮಾಸ್ತರ ಸಂಬಳವನ್ನು ಕುರಿತು (ಕೆ. ಯಂ ಮ. ಕೃಷ್ಣ ಅವರಿಗೆ ಬರುವ ಏಪ್ರಿಲ್ 1ರಿಂದ ತಿಂಗಳು ಒಂದರ ? ರೂ. ಸಂಬಳ ಕೊಡುವದೆಂದು ತೀರ್ಮಾನವಾಯಿತು.

11 ಗತ ವರ್ಷದಲ್ಲಿ ಮುತುವರ್ಜಿಕೆಯಿಂದ ಕೆಲಸ ಮಾಡಿದ ಗುಮಾಸ್ತರು ಕೆ ಯಸ್ ನರಸಿಂಗರಾಯರಿಗೆ 120 ರೂ ಬೋನಸ್ಸು ಕೊಡುವದೆಂದು ತೀರ್ಮಾನವಾಯಿತು

12 ಗತ ವರ್ಷದಲ್ಲಿ ಕೆಲಸ ಮಾಡಿದ ಸೆಕ್ರೆಟರಿಯವರಿಗೆ 10 ರೂ ಬೋನಸ್ಸು ಕೊಡುವುದೆಂದು ತೀರ್ಮಾನವಾಯಿತು

13. ಬೈಲಾ 30ರಲ್ಲಿ (b) ಯನ್ನು (c) ಯಾಗಿ ಮಾಡಿ (b) ಯಾಗಿ ಇದನ್ನು ಸೇರಿಸುವುದು. 'ಆದಾಯದಲ್ಲಿ ಶೇಕಡ 10ಕ್ಕೆ ಮೀರದೆ ಶಾಲೆಗಳ ಕೊಂಡು ಕೊಂಡ ಸಾಮಾನುಗಳ ಮೇಲೆ ರಿಬೇಟ್ ಕೊಡುವುದು ಮಂಜೂರಾಯಿತು.

14 ಈ ಕೆಳಗಿನವರನ್ನು ಕಮಿಟಿಯವರಾಗಿ ಮುಂದಿನ ವರ್ಷಕ್ಕೆ ಚುನಾಯಿಸಲಾಯಿತು.

1. ಮೆ ಗಣಪತಿ ಪಿ ಯಂ. ಬೆಳ್ಳಪ್ಪ ಬಿ ಯಂ ಕಾರ್ಯಪ್ಪ, 3 ಪಿ ಯನ್ ಪೇಮಯ್ಯ, 4 ಪಿಟ್. ಯನ್ ಸುಬ್ಬಯ್ಯ.

15. ಮುಂದಿನ ವರ್ಷಕ್ಕೆ ಮೆ ಪಿ. ಕೆ ಉತ್ತಯ್ಯನವರೇ ಪ್ರೆಸಿಡೆಂಟರಾಗಿರತಕ್ಕದೆಂದು ತೀರ್ಮಾನವಾಯಿತು

16. ಗೌರವ ಕಾರ್ಯದರ್ಶಿಯವರಾಗಿ ಮೆ. ಯಂ. ಯಸ್ ಮಾದಪ್ಪನವರನ್ನು ಚುನಾಯಿಸಲಾಯಿತು

17 ಸ್ಟೋರ್ಸನ್ನು ಬೆಂಕಿಯ ಅನಾಹುತಕ್ಕೆ ಈಡಾಗದಂತೆ ಮಾಡುವುದಕ್ಕಾಗಿ ಇನ್ಷೂರ್ ಮಾಡಬೇಕೆಂದು ತೀರ್ಮಾನವಾಯಿತು.

18. ಮೆಂಬರುಗಳಿಗೂ, ಏಜಂಟರುಗಳಿಗೂ ಕಳೆದ ಎರಡು ವರ್ಷದ ಕಮಿಷನ್ ಶೇಕಡ 3—2—0ರಂತೆ ಕೊಡಬೇಕೆಂದೂ ತೀರ್ಮಾನವಾಯಿತು

19 ಸ್ಟೋರ್ಸಿನ ಪರ ಪ್ರತಿನಿಧಿಯಾಗಿ ಸೆಂಟ್ರಲ್ ಬ್ಯಾಂಕಿಗೆ ಪ್ರೆಸಿಡೆಂಟರನ್ನು ಚುನಾಯಿಸಲಾಯಿತು

20 ಸ್ಟೋರ್ಸ್ ಕೂಡಲೇ ಫೆಡರೇಶನಿಗೆ ಸೇರಬೇಕೆಂದು ತೀರ್ಮಾನವಾಯಿತು.

21 ಫೆಡರೇಶನಿಗೆ ಕೊಡುವಂಥ ಸುಪರ್‌ವಿಜನ್ ಫಂಡು ಯಾವ ವರ್ಷದಲ್ಲೂ 100 ರೂ. ಗೆ ಹೆಚ್ಚಾಗಬಾರದೆಂದು ತೀರ್ಮಾನವಾಯಿತು.

22. ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘದ ಅಭಿವೃದ್ಧಿಯನ್ನೂ, ಮೆಂಬರುಗಳ ಉತ್ಸಾಹವನ್ನೂ ನೋಡಿ, ಮುಂದಕ್ಕೂ ಹೀಗೆಯೇ ಉತ್ಸಾಹದಿಂದ ಕೆಲಸ ಮಾಡಬೇಕೆಂದೂ, ಉಪಾಧ್ಯಾಯರು ಇಂಥಾ ಕೆಲಸಗಳಲ್ಲಿ ತೊಂದರೆ ತೆಗೆದುಕೊಳ್ಳುವುದನ್ನೂ ನೋಡಿ ಬಹಳ ಸಂತೋಷವಾಗಿರುವುದೆಂದೂ ಮುಂತಾಗಿ ಮಾತನಾಡಿದರು.

ಅನಂತರ ಪ್ರೆಸಿಡೆಂಟರು ಅಧ್ಯಕ್ಷರಿಗೂ, ಸಭೆಯವರಿಗೂ ವಂದಿಸಿ ಸಭೆಯನ್ನು ಬರಕಾಸ್ತು ಮಾಡಿದರು.

ಯಂ. ಯಸ್. ಮಂದಣ್ಣ,
(ಅಧ್ಯಕ್ಷರು.)

ಕೊಡಗಿಗಾಗಿ

ಕರ್ನಾಟಕ ಸೇವಾದಲದ ಶಿಕ್ಷಣ ಶಿಬಿರವು.

ತರುಣ ಬಾಂಧವರೇ, ಮುಂದೆ ಬನ್ನಿರಿ.

೧. ರಾಷ್ಟ್ರೀಯ ಸಭೆಯ ಕಾರ್ಯವು ಸುಸಂಘಟಿತವಾಗಿಯೂ, ಕಾರ್ಯಕ್ರಮವಾಗಿಯೂ ಜರುಗಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು, ಶಿಕ್ಷಣ ಹೊಂದಿ ಕಾಂಗ್ರೆಸ್ಸಿನ ಮಾನ್ಯತಾ ಪತ್ರಗಳನ್ನು ಪಡೆದ ಸ್ವಯಂ ಸೈನಿಕರಿಂದಲೇ ಕಾಂಗ್ರೆಸ್ಸಿನ ಹೊಣೆಗಾರಿಕೆಯ ಕಾರ್ಯವನ್ನು ಮಾಡಿಸಬೇಕೆಂದು ನಿರ್ಧರಿಸಿದೆ. ಆದಕಾರಣವೇ ಡಿಸೆಂಬರ್ ತಿಂಗಳ ಕೊನೆಯ ಒಳಗಾಗಿ ಹಿಂದೂಸ್ಥಾನೀ ಸೇವಾದಲವು ಶಿಕ್ಷಣ ಕೊಟ್ಟು ಇಡೀ ಹಿಂದೂಸ್ಥಾನದಲ್ಲಿ ೬೦೦೦ ಜನ ಮಾನ್ಯತಾ ಪತ್ರಗಳನ್ನು ಹೊಂದಿದ ಸ್ವಯಂ ಸೇವಕರನ್ನು ಸಿದ್ಧಪಡಿಸಬೇಕೆಂದು ಕಟ್ಟಪ್ಪಣೆಯನ್ನಿತ್ತಿದೆ. ಅದರಲ್ಲಿ ಕರ್ನಾಟಕದ ಪಾಲಿಗೆ ೫೦೦ ಜನರು ಬಂದಿದೆ.

೨ ಕೊಡಗಿನ ತರುಣರಿಗೆ ಶಿಕ್ಷಣ ಪಡೆಯಲು ಅನುಕೂಲವಾಗಬೇಕೆಂದು ಕೊಡಗಿನಲ್ಲಿಯೇ ಅನುಕೂಲವಾದ ಮಧ್ಯವರ್ತಿ ಸ್ಥಳದಲ್ಲಿ ಒಂದು ಶಿಕ್ಷಣ ಶಿಬಿರವನ್ನು ತೆರೆಯುವುದು ನಿಶ್ಚಯಿಸಲ್ಪಟ್ಟಿದೆ ಶಿಬಿರವು ಡಿಸೆಂಬರು ತಿಂಗಳ ೧ನೇ ತಾರೀಖಿಗೆ ಪ್ರಾರಂಭವಾಗುವುದು ಇದೇ ರೀತಿಯಾಗಿ ಕರ್ನಾಟಕದ ಇತರ ಭಾಗಗಳಲ್ಲಿಯೂ ಶಿಬಿರಗಳು ಪ್ರಾರಂಭವಾಗಿವೆ.

೩ ಕೊಡಗಿನ ವೀರ ಬಾಂಧವರೇ, ರಾಷ್ಟ್ರೀಯ ಈ ಕರೆಗೆ ತರುಣರೆಲ್ಲರೂ ಮುಂದೆ ಬಂದು ತಮ್ಮ ಸಾಹಸಗಳನ್ನು ತೋರಿಸಲು ಇದೇ ಒಳ್ಳೇ ಸಮಯ. ರಣಶೂರರಾದ ನೀವು ಮನಸ್ಸು ಮಾಡಿದರೆ, ಕರ್ನಾಟಕ ದಲಕ್ಕೆ ಬೇಕಾದ ೫೦೦ ಜನರನ್ನು ಕೊಡಗು ಪ್ರಾಂತ್ಯ ಒಂದೇ ಕೊಡಬಹುದು. ಕರ್ನಾಟಕ ದಲವು ಕೊಡಗಿನ ಮೇಲೆಯೇ ಹೆಚ್ಚು ವಿಶ್ವಾಸವನ್ನಿಟ್ಟಿದೆ. ನಿಮ್ಮ ಶಕ್ತಿ, ಸಾಹಸ, ತ್ಯಾಗಬುದ್ಧಿಗಳು ಭಾರತದ ಸ್ವಾತಂತ್ರ್ಯವನ್ನು ಫಲಿಸುವವೆಂದು ಆಶಾದೃಷ್ಟಿಯಿಂದ ಕರ್ನಾಟಕವು ನಿಮ್ಮ ಕಡೆಗೆ ನೋಡುತ್ತಿದೆ ಎಂಬುದನ್ನು ಮರೆಯಬೇಡಿರಿ.

ಆದ್ದರಿಂದ ಕೊಡಗಿನ ತರುಣರೆಲ್ಲರೂ, ಮುಂದೆ ಬಂದು ಶಿಕ್ಷಣ ಪಡೆದು ಸೈನಿಕನ ಯೋಗ್ಯತಾ ಪತ್ರಗಳನ್ನು ದೊರಕಿಸಬೇಕೆಂದೂ, ಕೊಡಗಿನ ಜನಾಂಗವೆಲ್ಲವೂ ಈ ಕಾರ್ಯಕ್ಕೆ ತನು ಮನ ಧನಗಳಿಂದ ಸಹಾಯ ಮಾಡಬೇಕೆಂದೂ ಬಯಸುವ,

ತಮ್ಮ ಸೇವಕ

ತಾ ೧೩—೧೧—೩೧.

ಬುರ್ಲಿ ಬಿಂದುಮಾಧವ,
ಸ. ಕಾರ್ಯದರ್ಶಿ,
ಕರ್ನಾಟಕ ಸೇವಾದಲ

ಸೂಚನೆ:—ಶಿಬಿರವನ್ನು ಸೇರಬಿಚ್ಛಿಸುವವರೆಲ್ಲರೂ ನಿಕ ನಿಯಮಗಳ ವಿಷಯವಾಗಿಯೂ, ಶಿಬಿರದ ವಿಷಯವಾಗಿಯೂ ಶ್ರೀ. ಪಿ. ಬಿ. ಬೆಳ್ಯಪ್ಪ, ಸಂಪಾದಕ "ಕೊಡಗು" ವರೊಡನೆ ಪತ್ರ ವ್ಯವಹಾರ ಮಾಡಬೇಕು ವಿಜ್ಞಾಪನ ಪತ್ರಗಳನ್ನೂ ಅವರಿಗೆ ಕಳುಹಿಸಬೇಕು. ಸ್ಥಳವನ್ನು ಅವರು ನಿಶ್ಚೈಸುವರು.

ವೀರರಾಜಪೇಟೆ ಮೀಟಿಂಗು.

ರಿಟೈರ್ಡ್ ಮುನಸೀಫರಾದ ಮೆ. ಕೊರವಂಡ ಮುತ್ತಣ್ಣನವರನ್ನು ಸತ್ಕರಿಸುವ ಬಗ್ಗೆ ದಕ್ಷಿಣ ಕೊಡಗಿನ ಮಹಾಜನರ ಪರವಾಗಿ ಮೆ. ಅಬ್ದುಲ್ ಗಫೂರ್‌ಖಾನ್ ಖೈಸ್ಲೀಯವರ ಅಧ್ಯಕ್ಷತೆಯಲ್ಲಿ ವೀರರಾಜಪೇಟೆಯಲ್ಲಿ ಆದ ಸ್ವಾಗತ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್:—

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಲಾಯಿತು.

2. ಅಧ್ಯಕ್ಷರು, ವೀರರಾಜಪೇಟೆಯಲ್ಲಿ ಕೊಡಗ, ಕೊಂಗೇತರ ಎಂಬ ಭೇಧ ಭಾವವನ್ನು ಹೆಚ್ಚಿಸುವುದಕ್ಕಾಗಿ ಕೆಲವರು ಮಾಡುತ್ತಿರುವ ಕೆಲವರ ಕೃತ್ಯಗಳನ್ನು ಖಂಡಿಸಿ ಮಾತಾಡಿ ಅಲ್ಲದೆ ಮೆ. ಮುತ್ತಣ್ಣನವರಿಗೆ ಎಲ್ಲರೂ ಕೂಡಿ ಒಂದೇ ಬಗೆಯ ಸತ್ಕಾರ ಕೂಟವನ್ನು ಮಾಡಿಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತೆಂದು ಹೇಳಿದರು

3. ಪ್ರಿಂಟಾದ ಚಂದಾ ಪಟ್ಟಿಯನ್ನು ಓದಿ ಮಂಜೂರು ಮಾಡಲಾಯಿತು.

4 ಈ ಪಟ್ಟಿಯನ್ನು ಪ್ರತಿ ಗ್ರಾಮಕ್ಕೆ ಕೊಟ್ಟು, ಚಂದಾ ಹಣ ವಸೂಲ್ಮಾಡಲಿಕ್ಕಾಗಿ, ಎಲ್ಲಾ ಗ್ರಾಮಗಳಲ್ಲಿಯ ಕಮಿಟಿ ಮೆಂಬರುಗಳನ್ನು ನೇಮಕ ಮಾಡಲಾಯಿತು.

5. ವಸೂಲಾದ ಹಣವನ್ನು ಪೂರ್ತಿಯಾಗಿ ಎಲ್ಲಾ ಗ್ರಾಮ ಕಮಿಟಿ ಮೆಂಬರುಗಳು ತಾರೀಕು 9—12—31 ರೊಳಗೆ ಟ್ರೆಜರರ್ ಮೆ ಮಂಡೇಪಂಡ ಸೋಮಯ್ಯನವರಿಗೆ ಕಳುಹಿಸುವಂತೆಯೂ, ಸದರಿ ದಿನ ಸ್ವಾಗತ ಕಮಿಟಿಯವರ ಮೀಟಿಂಗ್ ಏರ್ಪಡಿಸುವಂತೆಯೂ, ವಸೂಲಾದ ಹಣದ ಲೆಕ್ಕವನ್ನು ನೋಡಿ ಸತ್ಕಾರದ ಮುಂದಿನ ಏರ್ಪಾಡು ಮತ್ತು ದಿನವನ್ನು ನಿರ್ಣಯ ಮಾಡುವಂತೆಯೂ, ಈ ದಿನ ನೇಮಕ ಮಾಡಿದ ಎಲ್ಲಾ ಕಮಿಟಿಯವರಿಗೆ ಮೀಟಿಂಗ್ ದಿನವನ್ನು ನೋಟೀಸ ಮೂಲಕ ತಿಳಿಸುವಂತೆಯೂ ತೀರ್ಮಾನವಾಯಿತು.

ಅಧ್ಯಕ್ಷರಿಗೆ ವಂದನೆಯಿಂದ ಮೀಟಿಂಗ್ ಮುಕ್ತಾಯವಾಯಿತು.

11—11—31,
ವೀರರಾಜಪೇಟೆ,

ಅಬ್ದುಲ್ ಗಫೂರ್‌ಖಾನ್ ಖೈಸ್ಲಿ,
ಅಧ್ಯಕ್ಷರು.

1—1.



COORG FOREST DEPARTMENT,
SOUTH DIVISION.

NOTICE.

Mercara, the 6th November 1931.

It is hereby notified for general information that materials such as timber, tiles etc. of the buildings dismantled at Sollekolly and Urti will be sold in public auction at Virajpet on 18—11—31.

For further particulars, please apply to the Kutumpole Range Officer, Makut, South Coorg.

1—1

ವರ್ತಮಾನ ಸಂಗ್ರಹ.

ಒಳದೇಶ.

ಈ ವಾರವೂ ಮಳೆಯಿಲ್ಲದೆ ಇರಲಿಲ್ಲ. ಮೋಡವು ಕವಿದುಕೊಂಡಿದ್ದು ಮಧ್ಯ ಮಧ್ಯ ಒಂದೊಂದು ಮಳೆಯು ಬಿದ್ದಿದೆ.

ಚೀಫ್ ಕಮಿಷನರವರು ಈ ತಾ 8 ರಲ್ಲಿ ಬೆಂಗಳೂರಿನಿಂದ ಮಡಿಕೇರಿ ಬಂದಿರುವರು. ಇವರು ಇಲ್ಲಿ ಕೆಲವು ದಿವಸಗಳಿದ್ದು ವಾಪಸು ಹೋಗುವರೆಂದು ವರ್ತಮಾನ.

ಕೊಡಗು ಕಾಫಿ ಪ್ಲಾಂಟರುಗಳ ಸಹಕಾರ ಸಂಘದ ಜನರಲ್ ಮೀಟಿಂಗು ಈ ತಾ. 22 ನೇ ಆದಿತ್ಯವಾರ ಮಡಿಕೇರಿಯಲ್ಲಿ ಸಂಘದ ಆಫೀಸಿನಲ್ಲಿ ನಡೆಯುವದೆಂದು ಅದರ ಸೆಕ್ರೆಟರಿಯವರು ತಿಳಿಸುತ್ತಾರೆ.

ಈ ವಾರದಲ್ಲಿ ಪಾರ್ಚಮೆಂಟ್ ಕಾಫಿ ಹಂಡ್ರೆಡ್ ವೈಟಿಗೆ 51—6—0 ರೂಪಾಯಿಯಲ್ಲಿಯೂ, ನೇಟಿವ್ ಕಾಫಿ ಮಡಿಕೇರಿ ಖಂಡಿಗೆ 201—8—0 ರೂಪಾಯಿ ಯಲ್ಲಿಯೂ ವ್ಯಾಪಾರವಾಗಿದೆಯೆಂದು ತಿಳಿಯಬರುತ್ತದೆ.

ಧಾರವಾಡದ ಶ್ರೀಯುತ ಬಿಂದುಮಾಧವ ಬುರ್ಲಿಯವರು ಸೇವಾದಳದ ಸೈನಿಕರನ್ನು ತರಬೇತು ಮಾಡುವ ವಿಷಯ ಆಲೋಚಿಸಲು ತಾ 12 ರಲ್ಲಿ ಮಡಿಕೇರಿಗೆ ಬಂದು ಮರುದಿನ ಮೈಸೂರು ಮಾರ್ಗವಾಗಿ ವಾಪಸು ಹೋದರು.

ಕಿಗ್ಗಟ್ಟುನಾಡು, ಕ್ರಾಪ್ ಲೋನ್, ಸೇಲ್ ಮತ್ತು ಸಪ್ಲೈ ಸಂಘದ ಮಹಾಸಭೆಯು ಕಳೆದ ವಾರ ಪೊನ್ನಂಪೇಟೆಯಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರ ವಿವರವು ಬರುವ ವಾರ ಪ್ರಕಟಿಸಲಾಗುವುದು.

ಮ. ಚೇಯಂಡಮೊನಂಡ ಭೀಮಯ್ಯನವರು ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದೂ ಮತ್ತು ಮ. ಸಿದ್ದಮಲೆ ಸೋಮಣ್ಣನವರು ಬಿ ಎಲ್. ಪರೀಕ್ಷೆಯಲ್ಲಿ ಎರಡನೇ ತರಗತಿಯಲ್ಲಿ ಪಾಸಾಗಿರುವರೆಂದೂ ತಿಳಿದು ಸಂತೋಷಪಡುತ್ತೇವೆ

ಕಳೆದ ಘೋರ ಯುದ್ಧವು ನಿಂತು ಶಾಂತಿಯು ಸ್ಥಾಪಿಸಲ್ಪಟ್ಟ 'ಆರ್ಮಿಸ್ಟಿಸ್' ದಿನವನ್ನು ಆಚರಿಸುವ ಬಗ್ಗೆ ಈ ತಾ. 11 ರಲ್ಲಿ ಬೆಳಗ್ಗೆ 11 ಗಂಟೆಗೆ 2 ಮಿನಿಟುಗಳ ವರೆಗೆ ಪಬ್ಲಿಕ್ ವ್ಯವಹಾರಗಳನ್ನು ನಿಲ್ಲಿಸುವಂತೆ ಏರ್ಪಾಡು ಮಾಡಿದಲ್ಲದೆ, ಸರ್ಕಾರಿ ಆಫೀಸುಗಳೆಲ್ಲವು ಆ ದಿನ 1½ ಗಂಟೆ ವರೆಗೆ ಮುಚ್ಚಲ್ಪಟ್ಟಿದ್ದವು.

ಅಖಿಲ ಕೊಡಗು ಉಪಾಧ್ಯಾಯರುಗಳ ಸಮ್ಮೇಳನವು ಈ ತಾ. 7 ರಿಂದ 9 ರ ವರೆಗೆ ಮಡಿಕೇರಿ ಹೈಸ್ಕೂಲು ಹಾಲ್‌ನಲ್ಲಿ ಶಾಲಾ ಇನ್‌ಸ್ಪೆಕ್ಟರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂಬಂಧ ವಿದ್ಯಾ ಇಲಾಖೆಯ ಸಹಕಾರ ಸಂಸ್ಥೆಗಳ ವಾರ್ಷಿಕ ಸಭೆಗಳೂ ತಾ. 7 ರಲ್ಲಿ ನಡೆಸಲ್ಪಟ್ಟವು. ಇವುಗಳ ಪ್ರೋಸೀಡಿಂಗ್ಸ್ ಇನ್ನೊಂದು ಕಡೆ ಪ್ರಕಟವಾಗಿವೆ.

ಕೊಡ್ಲಿಪೇಟೆ ಒಳ ಬೋಯಿ ಸಣ್ಣ ಎಂಗ್ಗ ಎಂಬವನನ್ನು ಹೊಡೆದು ಕೊಂದದ್ದಕ್ಕಾಗಿ ಬಿಲ್ಲವರ ಸೋಮ ಮತ್ತು ಒಲಗ್ಗ ಸಣ್ಣ ಎಂಬವರಿಗೆ ಸೆಶನ್ ಜಡ್ಜಿಯವರಲ್ಲಿ ಒಂದೊಂದು ವರ್ಷ ಸಜವಾಗಿದ್ದದ್ದು ಬೆಂಗಳೂರಿಗೆ ಅಪ್ಪೀಲಾಗಿ ಬಳಗ್ಗೆ ಸಣ್ಣನ ಸಜ ಮಾತ್ರ 6 ತಿಂಗಳಿಗೆ ಇಳಿಸಲ್ಪಟ್ಟಿತು. ಅದೇ ಖೂನಿ ಕೇಸಿಗೆ ಸಂಬಂಧಪಟ್ಟ ಇಬ್ಬರು ಅಪರಾಧಿಗಳು ಫರಾರಿಯಾಗಿದ್ದವರ ಪೈಕಿ ಒಬ್ಬನು ಪತ್ತಾದನು ಇನ್ನೊಬ್ಬ ಬಿಲ್ಲನ ಈಶ್ವರನೆಂಬವನು ಈಚೆಗೆ ಪತ್ತೆಯಾಗಿ ಅವನ ಮೇಲೆ ಮಡಿಕೇರಿ ಸಬ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರ ನಡೆಯುತ್ತಲಿದೆ.

ಹಿಂದೂದೇಶ.

ಬಂಗಾಳದ ಹೊಸ ಆರ್ಡಿನೇನ್ಸಿನ ಮೇರೆ ಅಲ್ಲಿ ಈಗಾಗಲೇ ಹಲವರು ದಸ್ತಗಿರಿ ಮಾಡಲ್ಪಟ್ಟಿರುವರು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕೌನ್ಸಿಲಿನ ಮೀಟಿಂಗೊಂದು ಈ ತಾ. 22ರಲ್ಲಿ ಧಾರವಾಡದಲ್ಲಿ ನಡೆಯುವುದು.

ಪಂಜಾಬು ವಿದ್ಯಾರ್ಥಿಗಳ 4ನೇ ಕಾನ್‌ಫರೆನ್ಸು ಕಳೆದ ತಾ. 31 ರಲ್ಲಿ ಲಾಹೋರಿನಲ್ಲಿ ನಡೆಯಿತು. ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಅಧ್ಯಕ್ಷರಾಗಿದ್ದರು.

ಮಹಾತ್ಮ ಗಾಂಧಿಯವರು ತಮ್ಮ ಯೂರೋಪಿಯನ್ ಪ್ರವಾಸವನ್ನು ಮುಗಿಸಿರುವರು. ಅವರು ಒಂದು ವಾರದ ವರೆಗೆ ಜಿನೇವಾದಲ್ಲಿದ್ದು ಈ ತಿಂಗಳ ಅಖೈರಿನಲ್ಲಿ ಇಂಡಿಯಾಕ್ಕೆ ಹೊರಡುವರೆಂದು ವರ್ತಮಾನ.

ಹಿಂದೂಸ್ಥಾನದ ಪರಿಸ್ಥಿತಿಯು ದಿನೇ ದಿನೇ ಕೆಡುತ್ತಾ ಬರುತ್ತಿರುವುದರಿಂದ ಮಹಾತ್ಮ ಗಾಂಧಿಯವರು ಕೂಡಲೆ ಇಂಡಿಯಾಕ್ಕೆ ಹಿಂತಿರುಗಿ ಬರಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಅವರಿಗೆ ತಂತಿ ವಾರ್ತೆ ಕಳುಹಿಸಿರುವರು.

ಡಾಕ್ಟರ್ ಅನ್ಸಾರಿಯವರು ಕಾಯಿಲೆಯಿಂದಿದ್ದಾರೆ. ಇವರ ಆರೋಗ್ಯವು ಉತ್ತಮವಾಗಲೆಂದು ಆಶಿಸಿ ಲಂಡನಿನಿಂದ ಮಹಾತ್ಮ ಗಾಂಧಿಯವರು, ಸರ್ ಸಪ್ರು, ಪಂಡಿತ ಮಾಳವೀಯ, ಸರೋಜಿನಿ ದೇವಿ ಮತ್ತು ರಂಗಸ್ವಾಮಿ ಅಯ್ಯಂಗಾರರವರು ತಂತಿವಾರ್ತೆ ಕಳುಹಿಸಿರುವರು.

ಕಲ್ಕತ್ತದಲ್ಲಿ ಯಾವನೋ ತರುಣನ ಪಿಸ್ತೋಲಿನಿಂದ ಪೆಟ್ಟು ಹೊಂದಿದ ಮಿ. ವಿಲಿಯರ್ಸರವರು ಇಂಥ ಹಿಂಸಾಕೃತ್ಯಗಳಿಗೆ ಕೆಲವು ಧುರೀಣರೇ ಪ್ರೇರಕರೆಂದೂ, ಸರ್ಕಾರವು ಇನ್ನೂ ತನ್ನ ಕೈಯನ್ನು ಸಡಿಲು ಬಿಟ್ಟಿರುವುದೊಂದು ಮುಖ್ಯ ಕಾರಣವೆಂದೂ ಲಂಡನಿನ ಪ್ರಾಯುಕ್ತ ಪತ್ರಿಕೆಯೊಂದಕ್ಕೆ ತಂತಿ ಬಿಟ್ಟಿರುತ್ತಾರೆ.

ಇಷ್ಟರ ವರೆಗೆ ಮದ್ರಾಸು ಪ್ರಾಂತ್ಯದಲ್ಲಿ ಕಂದಾಯವನ್ನು ಮೂರು ಕಂತುಗಳಲ್ಲಿ ವಸೂಲಿ ಮಾಡುತ್ತಿದ್ದರು. ಈಗಿನ ಆರ್ಥಿಕ ಹೀನಸ್ಥಿತಿಗಾಗಿ ಇನ್ನು ಆರು ಕಂತುಗಳಲ್ಲಿ ವಸೂಲಿಮಾಡಬೇಕೆಂದು ಅಲ್ಲಿಯ ಕೌನ್ಸಿಲಿನಲ್ಲಿ ಠರಾವು ಪಾಸಾಗಿದೆ. ಸರ್ಕಾರದವರು ಅದನ್ನು ಜಾರಿಗೆ ತರುವರೋ ಎಂದು ನೋಡಬೇಕಾಗಿದೆ.

ಧಾರವಾಡಕ್ಕೆ ಇಟಲಿಯಿಂದ ವಿಶೇಷ ಮನುಷ್ಯನೊಬ್ಬನು ಬಂದಿರುವನೆಂದೂ, ಅವನು ಬಹಿರಂಗವಾಗಿ ಘೋರ ವಿಷವುಳ್ಳ ಹಾವುಗಳನ್ನು ಹಿಡಿದು, ಹಲ್ಲುಗಳಿಂದ ಕಚ್ಚಿ, ಅದರ ರಕ್ತವನ್ನು ಕುಡಿದು ತೋರಿಸುತ್ತಾನೆಂದೂ, ಇದನ್ನು ನೋಡಲಿಕ್ಕಾಗಿ ಅವನನ್ನು ಪ್ರತಿ ದಿನವೂ ಸಾವಿರಾರು ಜನರು ಮುತ್ತಿಕೊಳ್ಳುತ್ತಾರೆಂತಲೂ ವರ್ತಮಾನ

ರೌಂಡ್ ಟೇಬಲ್ ಸಭಾ ಪ್ರತಿನಿಧಿಗಳಾಗಿ ಲಂಡನಿಗೆ ಹೋಗಿರುವ ದರ್ಭಾಂಗ ಮಹಾ ರಾಜರಾದ ಕಾಮೇಶ್ವರ ಸಿಂಗ್‌ರವರ 1,50,000 ರೂಪಾಯಿಗಳ ಬೆಲೆಬಾಳುವ ಸವರತ್ನಾಭರಣಗಳು ಕಳುವಾಗಿರುತ್ತವೆ ಈ ಆಭರಣಗಳು ದರ್ಭಾಂಗ ಸಂಸ್ಥಾನದ ಸ್ವತ್ತಾಗಿರದೆ ಸ್ವಂತವಾಗಿದ್ದುವೆಂದೂ, ಇದನ್ನು ಕಂಡುಹಿಡಿಯಲು ಸ್ಕಾಟ್ಲೆಂಡ್ ಪೋಲೀಸಿನವರಿಗೆ ತಾವು ತಿಳಿಸಿರುವುದರ ಮೇಲೆ ಅವರು ಹುಡುಕುತ್ತಿದ್ದಾರೆಂದೂ, ನಗನ್ನು ತಂದು ಕೊಡುವವರಿಗೆ ಬಹುಮಾನವ ಕೊಡ ಬೇಕೆಂದು ಈ ವರೆಗೆ ಹೇಳಿಲ್ಲವೆಂದು ಪತ್ರಿಕಾ ಲೇಖಕನಿಗೆ ತಿಳಿಸಿರುತ್ತಾರೆ

ಪ್ರಾಂತೀಯ ಸ್ವಾತಂತ್ರ್ಯ ಸರ್ಕಾರವನ್ನು ಈಗ ಕೊಟ್ಟು, ಜವಾಬ್ದಾರಿ ಮಧ್ಯವರ್ತಿ ಸರ್ಕಾರದ ವಿಷಯ ನಂತರ ಯೋಚಿಸಲಾಗುವದೆಂದು ಹೊರಟಿದ್ದ ಸುದ್ದಿಯನ್ನು ಕುರಿತು ಮಹಾತ್ಮ ಗಾಂಧಿಯವರೇ ಮೊದಲಾದ ದುಂಡು ಮೇಜಿನ 29 ಪ್ರಾಮುಖ್ಯ ಮೆಂಬರುಗಳು ಅತೃಪ್ತಿಯನ್ನು ಸೂಚಿಸಿ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದರು. ಕಳೆದ ಜನವರಿಯಲ್ಲಿ ಸರ್ಕಾರದವರು ಮಾಡಿದ ಪ್ರಕಟಣೆಯ ತತ್ವವನ್ನು ಎಂದಿಗೂ ಬದಲಾಯಿಸಲಾಗುವುದಿಲ್ಲವೆಂತಲೂ, ಅದು ಎಲ್ಲಾ ಪಾರ್ಟಿಗಳ ಒಪ್ಪಂದವಾದುದರಿಂದ ಅದರಂತೆಯೇ ನಡಿಸಲ್ಪಡುವದೆಂದೂ ಪುನಹ ಸರ್ಕಾರದವರಿಂದ ಬಹಿರಂಗಪಡಿಸಲಾಗಿದೆ.

ಕಳೆದ ಆಗೋಸ್ತು ತಿಂಗಳಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು, ಮಹಾತ್ಮ ಗಾಂಧಿಯವರು ದುಂಡು ಮೇಜು ಪರಿಷತ್ತಿಗೆ ಹೋಗ ಕೂಡದೆಂದು ತೀರ್ಮಾನಿಸಿದಾಗ ವೈಸರಾಯರು ಕಲ್ಕತ್ತಾಕ್ಕೆ ಹೋಗಿದ್ದಾಗ್ಯೂ ಸರ್ ಜಾರ್ಜ್ ರೈನಿಯವರ ಅಧ್ಯಕ್ಷತೆಯಲ್ಲಿ ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲಿನವರಲ್ಲಿ ಕೆಲವರು ಮಹಾತ್ಮರನ್ನು ಮಂಡಲಿಗೆ ಗಡೀಪಾರು ಮಾಡಬೇಕೆಂದು ಯುಕ್ತಿ ಹಿಡಿದರೆಂತಲೂ. ಅದನ್ನು ಕೇಳಿ ವೈಸರಾಯರು ಕೂಡಲೆ ಡೆಲ್ಲಿಗೆ ಹಿಂತಿರುಗಿ ಮಹಾತ್ಮರನ್ನು ಲಂಡನಿಗೆ 'ಗಡೀಪಾರು' ಮಾಡಿದರೆಂದೂ ಹೊರಟಿರುವ ವರ್ತಮಾನವು ನಿಜವೋ ಎಂದು ಸಂಬಂಧಪಟ್ಟವರು ತಿಳಿಸಬೇಕೆಂದು 'ಹಿಂದು' ಪತ್ರಿಕೆಗೆ ಒಬ್ಬರು ಬರೆದಿದ್ದಾರೆ

ವಿದೇಶ.

ಬ್ರಿಟನ್ನಿನ ಹೊಸ ಪಾರ್ಲಿಮೆಂಟಿನಲ್ಲಿ 14 ಸ್ತ್ರೀಯರು ಮೆಂಬರುಗಳಾಗಿರುವರು. ಅವರಲ್ಲಿ ಲಗ್ನವಾಗದ ಕುಮಾರಿಯರೇ ಹೆಚ್ಚು.

ಬ್ರಿಟನಿನ ಪ್ರಧಾನ ಮಂತ್ರಿಯವರು ಇಂಡಿಯಾದ ಸಮಸ್ಯೆಯನ್ನು ಕುರಿತು ದೀರ್ಘಾಲೋಚನೆ ಮಾಡುತ್ತಿರುವರೆಂತಲೂ, ಈ ಸಂಬಂಧ ಮಂತ್ರಿ ಮಂಡಳಿಯ ಮೀಟಿಂಗುಗಳು ನಡಿಸಲ್ಪಡುವವೆಂದೂ ವರ್ತಮಾನವಿದೆ.

ಮಂಚೂರಿಯದಲ್ಲಿ ಚೈನಾದವರಿಗೂ, ಜಪಾನಿನವರಿಗೂ ಯುದ್ಧವು ಜೋರಾಗಿ ನಡೆಯುತ್ತಿದೆ. ಮಂಚೂರಿಯಾದ ತಕರಾರಿನ ಸಂಬಂಧ ಜನಾಂಗಗಳ ಕೂಟದ ತೀರ್ಮಾನಕ್ಕೆ ಜಪಾನಿನವರು ಒಪ್ಪದ್ದರಿಂದ ಯುದ್ಧವು ಪ್ರಾರಂಭವಾದದ್ದಾಗಿದೆ ರಷ್ಯಾದ ಸರ್ಕಾರದವರು ಇದಕ್ಕೆ ಕೈ ಹಾಕುವರೆಂಬ ಸುದ್ದಿಯೂ ಇದೆ.

ಸುಪ್ರಸಿದ್ಧ ಕವಿಗಳೂ, ತತ್ವಜ್ಞಾನಿಗಳೂ ಆದ ಜಾರ್ಜ್ ಬರ್ನಾಡ್ ಶಾ ರವರು ಪಾರ್ಲಿಮೆಂಟಿನ ಹೊಸ ಚುನಾವಣೆಯನ್ನು ಕುರಿತು ಹೇಳುವಾಗ್ಯೆ, "ಕನ್‌ಸರ್ವೇಟಿವ್ ಪಕ್ಷದವರು ಮಹಾತ್ಮ ಗಾಂಧಿಯವರನ್ನು ಬರೀ ಕೈಯಲ್ಲಿ ಇಂಡಿಯಾಕ್ಕೆ ಕಳುಹಿಸುವುದು ಮಾತ್ರವಲ್ಲ, ಅವರಿಗೆ ಗುಂಡು ಹೊಡೆಯಲಿಕ್ಕೂ ಹೇಸುವುದಿಲ್ಲ, ಅದು ಹಲವು ಕನ್‌ಸರ್ವೇಟಿವರಿಗೆ ಸಂತೋಷವಾದೀತು" ಎಂದು ಅಂದರು.

"ದುಂಡು ಮೇಜು ಪರಿಷತ್ತಿನ ನಡವಳಿಕೆಗಳು ಅಶಾಭಂಗವನ್ನುಂಟುಮಾಡುವವಾಗಿದ್ದರೂ, ಮಹಾತ್ಮರಿಗೆ ಬ್ರಿಟಿಷರು ಕೊಟ್ಟಂಥ ಸ್ವಾಗತವು ವಿಶೇಷತರದ್ದಾಗಿದೆ ಮಹಾತ್ಮರು ತಮ್ಮ ಭಾಷಣಗಳಿಂದ ಬ್ರಿಟಿಷ್ ಜನ ಸಮುದಾಯದ ಮನಸ್ಸನ್ನು ಆಕರ್ಷಿಸಿರುವರು. ಮುಖ್ಯವಾಗಿ ಅವರ ಲ್ಯಾಂಕಶಯರಿನ ಸಂದರ್ಶನವು ಆತ್ಮಶಕ್ತಿಯ ಜಯವನ್ನು ಚೆನ್ನಾಗಿ ಪ್ರದರ್ಶಿಸಿದೆ" ಎಂದು ಮಿ. ಸಿ. ಯಫ್ ಆಂಡ್ರೂಸ್‌ರವರ ಅಭಿಪ್ರಾಯ

ಟಿಬೇಟಿನ ವಿವಾಹ ಪದ್ಧತಿಯು ಬಹು ವಿಚಿತ್ರವಾಗಿದೆ. ಮೊದಲು ಹಿರೇ ಅಣ್ಣನು ಮದುವೆಯಾಗುವನು. ಅವನು ಕೆಲವು ತಿಂಗಳುಗಳ ವರೆಗೆ ಹೊಸ ವಧುವಿನೊಡನೆ ಸಂಸಾರ ಮಾಡಿದ ಮೇಲೆ ಅವಳು ಅವನ ತಮ್ಮಂದಿರ ಕಡೆ ನ ಮಂದಿರಕ್ಕೂ ಹೋಗಬೇಕು! ಇದಕ್ಕಿಂತಲೂ ವಿಚಿತ್ರ ಪದ್ಧತಿ ಇನ್ನೊಂದು ಇದೆ. ಒಬ್ಬ ವಿಧವೆಯು ಪುನರ್ವಿವಾಹವಾದರೆ ಅವಳ 2ನೇ ಗಂಡನು, ಅವಳಿಗೆ ಹೆಣ್ಣು ಮಗಳಿದ್ದರೆ ಅವಳಿಗೂ ಗಂಡನಾಗುವನು. ಅಂದರೆ ತಾಯಿಗೂ, ಮಗಳಿಗೂ ಒಂದೇ ಗಂಡ!!

ಹೊಸ ಪಾರ್ಲಿಮೆಂಟಿನ ಪ್ರಥಮ ಮೀಟಿಂಗು ಈ ತಾ. 10ರಲ್ಲಿ ಪ್ರಾರಂಭವಾಯಿತು. ಚಕ್ರವರ್ತಿಯವರು ಆ ದಿನ ಮಧ್ಯಾಹ್ನ ಒಂದು ಚಿಕ್ಕ ಭಾಷಣ ಮಾಡಿ ಪಾರ್ಲಿಮೆಂಟ್ ಸಭೆಯನ್ನು ತೆರೆದರು. ಈ ಸಭೆಯಲ್ಲಿ ಸರ್ಕಾರಕ್ಕೆ ವಿರೋಧ ಪಕ್ಷದವರಾದ ಲೇಬರ್ ಪಾರ್ಟಿಯ ಮುಂದಾಳಾದ ಮಿ. ಲ್ಯಾನ್ಸ್‌ಬರಿಯವರು ಸರ್ಕಾರದ ಪಕ್ಷದವರು ಕಳೆದ ಚುನಾವಣೆಯಲ್ಲಿ ಜನರನ್ನು ಮೋಸಗೊಳಿಸಿ, ಸುಳ್ಳು ಹೇಳಿ ಜಯವನ್ನು ಹೊಂದಿದರೆಂದು ಮುಂತಾಗಿ ಕಠಿಣ ತೆರನಾಗಿ ಖಂಡಿಸಿ ಭಾಷಣ ಮಾಡಿದರು

ಈ ತಾ 5ರಲ್ಲಿ ಬಕಿಂಗಾಂ ಅರಮನೆಯಲ್ಲಿ ಚಕ್ರವರ್ತಿ ದಂಪತಿಗಳು ದುಂಡು ಮೇಜು ಸಭೆಯ ಮೆಂಬರುಗಳಿಗೆ ಒಂದು ಔತಣವನ್ನು ಕೊಟ್ಟರು. ಸುಮಾರು 500 ಜನರು ಆಮಂತ್ರಿಸಲ್ಪಟ್ಟಿದ್ದರು. ಮಹಾತ್ಮ ಗಾಂಧಿಯವರು ತಮ್ಮ ಪಾಡಿಯ ಉಡುಪಿನಲ್ಲಿಯೇ ಹೋಗಿದ್ದರು. ಕರೆಗೆ ವಿರೋಧವಿಲ್ಲ. ಚಕ್ರವರ್ತಿಯವರು ಮಹಾತ್ಮರೊಂದಿಗೆ 5 ಮಿನಿಟುಗಳ ವರೆಗೆ ಮಾತಾಡಿದರು. ಗಾಂಧಿಯವರು ಚಕ್ರವರ್ತಿಯವರನ್ನು 30 ವರ್ಷಗಳ ಹಿಂದೆ ದಕ್ಷಿಣ ಆಫ್ರಿಕದಲ್ಲಿ ಒಮ್ಮೆ ಭೇಟಿಮಾಡಿದ್ದರು. ನಂತರ ಇದೇ ಅವರನ್ನು ಕಂಡದ್ದು. ಔತಣದಲ್ಲಿ ಮಹಾತ್ಮರಿಗೆ ಒಳ್ಳೇ ಮರ್ಯಾದೆಯನ್ನು ಕೊಡಲಾಯಿತು.

ಮಹಾತ್ಮಗಾಂಧಿಯವರು ತಾ 10ರಲ್ಲಿ ಲಂಡನಿನಲ್ಲಿ ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಒಂದು ಭಾಷಣ ಕೊಟ್ಟರು. ಅವರ ಭಾಷಣ ಕೇಳಲು ಇಂಗ್ಲೆಂಡಿನಲ್ಲಿ ಸೇರಿದ ಸಭೆಗಳಲ್ಲಿ ಇದೇ ಅತ್ಯಂತ ದೊಡ್ಡ ಸಭೆ 'ಸತ್ಯ ಅಹಿಂಸೆಯ ಮಾರ್ಗದಿಂದ ನನಗೂ ಇಂಗ್ಲಿಷರಿಗೂ ದೊಡ್ಡ ಒಡಕು ಉಂಟಾಗಿದೆ. ದುಂಡು ಮೇಜು ಪರಿಷತ್ತಿನ ಕೈಲಿಂದ ಸಂಧಾನಗಳನ್ನು ನಡಿಸುವುದು ಸುಲಭ. ಸ್ವಾತಂತ್ರ್ಯವು ದೊರೆಯದೆ ಹೋದರೆ ಸತ್ಯಾಗ್ರಹವನ್ನು ಪುನಹ ಹೂಡಿ, ಒಂದು ವೇಳೆಯು ಪ್ರಾಣಗಳನ್ನಾದರೂ ಸಂತೋಷದಿಂದ ಅರ್ಪಿಸುವಂತೆ ನನ್ನ ದೇಶೀಯರನ್ನು ಕೇಳಿಕೊಳ್ಳುತ್ತೇನೆ' ಎಂದು ಅವರು ಹೇಳಿದರು.

NOTICE.

As it is impracticable to convey my gratitude individually by means of correspondence, I take this opportunity to express my heartfelt thanks through the medium of this paper for the numerous messages of condolences received from my friends and well-wishers in respect of the death of my beloved husband on the 6th November. I greatly appreciate the feeling in which they readily came forward to render me all assistance and I hope that my friends will consider this notice as a reply to their messages which have been a very great source of consolation to me.

MRS G HILLMAN.

Civil Hospital Mercara
14th November 1931.

ನೋಟೀಸು.

1931ನೇ ಇಸವಿ ನವಂಬರ್ ತಾರೀಖು 21ನೇ ಶನಿವಾರ ದಿನ ಮಧ್ಯಾಹ್ನ 2 ಗಂಟೆಗೆ ಮಡಿಕೇರಿಯಲ್ಲಿ ಬ್ಯಾಂಕಿನ ಸಂಘದ ಹಾಲಿನಲ್ಲಿ ಶೇರುದಾರರ ಮಹಾ ಸಭೆಯು (ಜನರಲ್ ಮೀಟಿಂಗು) ನಡೆಯುವದೆಂದು ಈ ಮೂಲಕ ತಿಳಿಸಲಾಗಿದೆ.

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ.

1 1930—1931ನೇ ವರ್ಷದ ಆಡಳಿತ ವರದಿಯನ್ನೂ, ಅದೇ ವರ್ಷದ ಆದಾಯ ವೆಚ್ಚ ಬ್ಯಾಲೆನ್ಸ್ ಶೀಟ್, ಲಾಭ ನಷ್ಟಗಳ ಪಟ್ಟಿಗಳನ್ನೂ, ಮತ್ತು ಆಡಿಟರವರ ಸರ್ಟಿಫಿಕೇಟನ್ನೂ ಸಹ ಸಭೆಯ ಮುಂದೆ ಇಡುವುದು.

2 ಆಡಿಟರನ್ನು ನೇಮಿಸುವಿಕೆ.

3. 1930—1931ನೇ ವರ್ಷಕ್ಕೆ ಆಡಿಟರವರಿಗೆ ಕೊಡಬೇಕಾದ ಫೀಜು ನಿಷ್ಕರ್ಷೆ ಮಾಡುವಿಕೆ.

4 ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ.

'ಕೊಡಗು' ಲಿಮಿಟೆಡ್, ಕೆ. ಯಮ್. ವೆಂಕಪ್ಪಯ್ಯ,
ಮಡಿಕೇರಿ, ತಾ 4-11-31. (ಕಾರ್ಯದರ್ಶಿಗಳು)

ಸ್ಯಾಂಕಿ ವರದಿಯ ಸಾರಾಂಶ.

ಫೆಡರಲ್ ಸ್ಟ್ರಕ್ಚರ್ ಕಮಿಟಿಯಲ್ಲಿ ಚರ್ಚೆ ನಡೆದ ವಿಷಯಗಳನ್ನು ಅದರ ಅಧ್ಯಕ್ಷರಾದ ಲಾರ್ಡ್ ಸ್ಯಾಂಕಿಯವರು ವರದಿ ಬರೆದು ಸದರಿ ಕಮಿಟಿಯ ಮುಂದಿಟ್ಟರು. ಅದರ ಮುಖ್ಯಾಂಶಗಳೇನೆಂದರೆ —

೧. ಸಂಯುಕ್ತ ಭಾರತದ ಕೇಂದ್ರದಲ್ಲಿ ಶ್ರೇಷ್ಠ, ಕನಿಷ್ಠ ಹೀಗೆ ಎರಡು ಶಾಸನ ಸಭೆಗಳಿರಬೇಕು. ಶ್ರೇಷ್ಠ ಸಭೆಯಲ್ಲಿ ೨೦೦ ಮಂದಿ, ಕನಿಷ್ಠ ಸಭೆಯಲ್ಲಿ ೩೦೦ ಮಂದಿ ಸದಸ್ಯರಿರಬೇಕು. ಶ್ರೇಷ್ಠ ಸಭೆಯಲ್ಲಿ ಶೇಕಡ ೪೦ ಸ್ಥಳಗಳೂ, ಕನಿಷ್ಠ ಸಭೆಯಲ್ಲಿ ಮೂರರಲ್ಲೊಂದಂಶ ಸ್ಥಳಗಳೂ ಸಂಸ್ಥಾನಗಳಿಗೆ ಕಾಯ್ದಿಡಬೇಕು.

೨. ಶ್ರೇಷ್ಠ ಸಭೆಗೆ ಪ್ರಾಂತೀಕ ಶಾಸನ ಸಭೆಗಳಿಂದ ಸದಸ್ಯರನ್ನು ಚುನಾಯಿಸತಕ್ಕದ್ದು. ಸಂಸ್ಥಾನಗಳಾದರೋ ತಮ್ಮ ಪ್ರತಿನಿಧಿಗಳನ್ನು ನೇಮಿಸತಕ್ಕದ್ದು.

೩. ಕನಿಷ್ಠ ಸಭೆಗೆ ಬ್ರಿಟಿಷ್ ಹಿಂದೂಸ್ಥಾನದ ಪ್ರತಿ ಪ್ರಾಂತ್ಯದವರೂ ಚುನಾಯಿಸಿ ಸದಸ್ಯರನ್ನು ಕಳುಹಿಸತಕ್ಕದ್ದು. ಸಂಸ್ಥಾನಗಳ ಪ್ರತಿನಿಧಿಗಳನ್ನು ಹೇಗೆ ಆರಿಸಿ ಕಳುಹಿಸಬೇಕೆಂಬುವುದನ್ನು ಸಂಸ್ಥಾನಗಳಿಗೆ ಬಿಡತಕ್ಕದ್ದು.

೪ ಶ್ರೇಷ್ಠ ಸಭೆಯ ೨೦೦ ಸ್ಥಾನಗಳ ವಿಭಾಗ.

(1) ಮುಂಬಯಿ, ಬಂಗಾಳ, ಸಂಯುಕ್ತ ಪ್ರಾಂತ್ಯ, ಪಂಜಾಬು, ಬಿಹಾರ, ಒರಿಸಾ ಮತ್ತು ಮಧ್ಯಪ್ರಾಂತ್ಯಗಳೊಂದೊಂದಕ್ಕೂ 17. (2) ಅಸ್ಸಾಮಿಗೆ 7 (3) ವಾಯುವ್ಯ ಪ್ರಾಂತ್ಯಕ್ಕೆ 2. (4) ದೆಹಲಿ, ಅಜ್ಮೀರ್, ಕೊಡಗು ಮತ್ತು ಬಲೂಚಿಸ್ಥಾನಗಳಿಗೆ ಒಂದೊಂದು.

೫. ಕನಿಷ್ಠ ಸಭೆಯ ೩೦೦ ಸ್ಥಾನಗಳ ವಿಭಾಗ (1) ಮುಂಬಯಿ, ಪಂಜಾಬು, ಬಿಹಾರ ಒರಿಸಾಗಳೊಂದೊಂದಕ್ಕೂ 26. (2) ಮದರಾಸು, ಬಂಗಾಳ ಮತ್ತು ಸಂಯುಕ್ತ ಪ್ರಾಂತ್ಯಗಳೊಂದೊಂದಕ್ಕು 32 (3) ಮಧ್ಯ ಪ್ರಾಂತ್ಯಕ್ಕೆ 12. (4) ಅಸ್ಸಾಮಿಗೆ 7. (5) ವಾಯುವ್ಯಪ್ರಾಂತ್ಯಕ್ಕೆ 3 (6) ೪ ಸಣ್ಣ ಪ್ರಾಂತ್ಯಗಳಿಗೊಂದೊಂದು.

೬. ಸಂಸ್ಥಾನಗಳಿಗೆ ಕಾಯ್ದಿಡಲ್ಪಡುವ ಸ್ಥಾನಗಳನ್ನು ಆಯಾ ಸಂಸ್ಥಾನಗಳು ಪಂಚಾಯಿತಿ ಮಾಡಿ ಹಂಚಿಕೊಳ್ಳತಕ್ಕದ್ದು. ೧೯೩೨ನೇ ಮಾರ್ಚಿಯೊಳಗಾಗಿ ಹಾಗೆ ಅವರು ಮಾಡದಿದ್ದರೆ ಅದರ ವಿಭಾಗಕ್ಕಾಗಿ ಒಂದು ಸ್ವತಂತ್ರ ಪಂಚಾಯಿತಿ ಏರ್ಪಡಿಸತಕ್ಕದ್ದು.

೭. ಶಾಸನಗಳನ್ನು ಮಾಡುವ ಮತ್ತು ಆದಾಯ ವ್ಯಯ ವಿಮರ್ಶೆಮಾಡುವ ಅಧಿಕಾರವು ಎರಡೂ ಸಭೆಗಳಿಗೂ ಸಮಾನವಾಗಿರತಕ್ಕದ್ದು. ಸಭೆಗಳೆರಡಕ್ಕೂ ಭಿನ್ನಾಭಿಪ್ರಾಯಬಿಟ್ಟಾಗ, ಒಟ್ಟಾಗಿ ಸೇರಿ ಬಹುಮತದಿಂದ ನಿರ್ಣಯಿಸತಕ್ಕದ್ದು.

೮. ಕೋಮುಗಳ ಪ್ರಾತಿನಿಧ್ಯ ವಿಚಾರ ನಿಷ್ಕರ್ಷೆಯನ್ನು 'ಮೈನಾರಿಟೀಸ್ ಕಮಿಟಿ' ಗೆ ಬಿಡಲಾಗಿದೆ.

೯. ಬಿಳಿಯ ಸ್ವಾಮ್ಯರು, ವಾಣಿಜ್ಯ, ಕೂಲಿಗಾರರು ಇವರಿಗೆ ವಿಶೇಷ ಪ್ರಾತಿನಿಧ್ಯವಿರತಕ್ಕದ್ದು.

೧೦. ಕನಿಷ್ಠ ಸಭೆಗೆ ನೇಮಿತ ಸದಸ್ಯರ ಪಾಲನೆಯೇ ಇರಬಾರದು. ಶ್ರೇಷ್ಠ ಸಭೆಗೆ ಮಾತ್ರ ಬ್ರಿಟಿಷ್ ಮಂತ್ರಿ ಮಂಡಲದವರು ಹಲವರನ್ನು ನೇಮಿಸಬಹುದು. ಗವರ್ನರ್ ಜನರಲ್‌ರವರು ಮೂವರು ನಾಲ್ವರನ್ನು ನೇಮಿಸಬಹುದು. ಯಾವ ಸಂದರ್ಭದಲ್ಲೂ ಅಧಿಕಾರಿಗಳು ನೇಮಕಕ್ಕೆ ಅರ್ಹರಲ್ಲ.

ಇದಲ್ಲದೆ ಲಾರ್ಡ್ ಸ್ಯಾಂಕಿಯವರು ಸುಪ್ರೀಂ ಕೋರ್ಟಿನ ರಚನೆಯೊಂದನ್ನು ಸಿದ್ಧಗೊಳಿಸಿರುವರು. ಅದರ ಮೇಲೂ ವಿಶೇಷ ಚರ್ಚೆಗಳಾದವು. ಸಂಸ್ಥಾನಗಳಿಗೂ ಈ ಸುಪ್ರೀಂ ಕೋರ್ಟಿಗೂ ಯಾವ ಸಂಬಂಧವೂ ಇರಕೂಡದೆಂದು ಸಂಸ್ಥಾನಗಳ ರಾಜರುಗಳ ಮತ್ತು ಅವರ ಪ್ರತಿನಿಧಿಗಳ ವಾದ

ಕೊಡಗು ವಿದ್ಯಾ ಇಲಾಖೆ ಉದ್ಯೋಗಸ್ಥರ ಮಿತಿಯುಳ್ಳ ಸಹಕಾರ ಲೇವಾದೇವಿ ಸಂಘದ ೬ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳು.

ಈ ಸಂಸ್ಥೆಯ 6ನೇ ವಾರ್ಷಿಕ ಮಹಾ ಸಭೆಯು ನವಂಬರ್ ತಾ. 7ನೇ ಶನಿವಾರ ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ೨॥ ಟಾ॥ ಪಟ್ಟಮಾಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಂಘದ ಗತಿಸಿದ ಮೆಂಬರುಗಳಾದ ಕೊಟ್ಟಂಗಡ ಮಾದಯ್ಯನವರು, ಯಂ ಎ. ತಿಮ್ಮಪ್ಪಯ್ಯನವರು ಮತ್ತು ಓಡಿಗಂಡ ಮುದ್ದಯ್ಯನವರ, ಇವರ ಕುರಿತು ವ್ಯಸನ ಸೂಚಿಸಲಾಯಿತು.

ಅನಂತರ ಕಮಿಟಿಯವರ ವಾರ್ಷಿಕ ವರದಿಯನ್ನು ಸೆಕ್ರೆಟರಿಯವರು ಓದಿದರು. ನಂತರ ಸಂಘದ ಸಾಧಾರಣ ಕೆಲಸಗಳ ಕುರಿತು ನಡವಳಿಕೆಯಾಯಿತು.

ಸಂಘವು ಜಿಲ್ಲಾ ಸಹಕಾರ ಫೆಡರೇಶನಿಗೆಸಂಯೋಗವಾಗಬೇಕು; ಆದರೆ ಮೇಲ್ಬಿಚಾರ ಫಂಡಿಗೆ ರೂ. 1 0 ಕೊಡಬೇಕಾಗುತ್ತದೆಯೇ ಹೊರತು ಹೆಚ್ಚಿನ ಹೊರೆಯನ್ನು ಹೊರಲಾರೆವೆಂದು ತೀರ್ಮಾನವಾಯಿತು. ಕ್ಷೇಮನಿಧಿಯ ಅರ್ಧವನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ಸಂಚಯಿಸಬೇಕೆಂದೂ, ಮೂರು ವರ್ಷಕ್ಕೆ ಮೊದಲೇ ಮೆಂಬರಾಗಿ ಈ ತಾಹಲು ವರೆಗೆ ಮೂರು ಸಾಲುಗಳನ್ನು ಪೂರ್ತಿ ಸಲ್ಲಿಸಿ ಕೊಡದವರಿಗೆ ತಕ್ಕ ನೋಟೀಸು ಕೊಟ್ಟು ಮತ್ತೂ ಬಾಕಿದಾರರಾದಲ್ಲಿ ಅವರ ಮೆಂಬರುತನವನ್ನು ವಜಾ ಮಾಡುವುದೆಂದೂ ತೀರ್ಮಾನವಾಯಿತು.

ಸಾಲದ ಮೇಲೆ ಎತ್ತಲ್ಪಡುವ ಬಡ್ಡಿಯನ್ನು ರೂಪಾಯಿ 9—6—0 ರಿಂದ ರೂ. 7—13—0 ಕ್ಕೆ ಇಳಿಸುವ ನಿಮಿತ್ತ, ಸಂಘವು ಹಣಕ್ಕೆ ಪರರ ಡಿಪಾಜಿಟ್ಟಿನ ಆಧಾರವಾಗಿರದಂತೆ ಮಾಡುವುದಕ್ಕಾಗಿ ಮಾಹೆಯಾನ ರೂ. 1 ರಂತೆ 20 ತಿಂಗಳಲ್ಲಿ ಈಗ ಇರುವ ಮೂರು ಶೇರುಗಳ ಜೊತೆಗೆ ಮತ್ತೆರಡು ಶೇರುಗಳನ್ನು ಕೊಂಡುಕೊಳ್ಳುವುದೆಂದು ಮಿ. ಎಂ. ಎ. ಮಾದಪ್ಪನವರು ತಂದಾವು ತರಲು ಬಹುಮತದಿಂದ ಮಂಜೂರಾಗಲಿಲ್ಲ.

ಇದರ ಕಾರ್ಯಕ್ರಮದ ನಂತರ ಮರಣ ನಿಧಿಯ ವಿಷಯಗಳನ್ನು ಚರ್ಚಿಸಲಾಯಿತು ಮರಣ ನಿಧಿಗೆ 35 ವರ್ಷ ಪ್ರಾಯಕ್ಕೆ ಮೀರಿದವರಿಗೆ ಮೆಂಬರುತನ ಮಂಜೂರು ಮಾಡಕೂಡದು ಎಂದು ತೀರ್ಮಾನವಾಯಿತು

ತದನಂತರ ಅಧ್ಯಕ್ಷರು—ಈ ಉಪಾಧ್ಯಾಯರ ಸಂಘವು ನಮ್ಮ ದೇಶಕ್ಕೆ ಮೊದಲಿಯ ಸಂಘವಾಗಿರಬೇಕು, ತಾವುಗಳೆಲ್ಲರೂ ಹೆಂಗಸು, ಗಂಡಸು, ಕೊಡಗ, ಬ್ರಾಹ್ಮಣ, ಪಂಚಮ ಇತ್ಯಾದಿ ಜಾತಿ ಭೇದಗಳಿಲ್ಲದೆ ಈ ರೀತಿ ಸಮ್ಮೇಳನಗಳನ್ನು ನಡಿಸುವುದು ನೋಡಿದರೆ ನನಗೆ ತುಂಬ ಸಂತೋಷಕರ ಸಂಘದಲ್ಲಿ ವ್ಯವಹಾರದಲ್ಲಿ ರಕ್ತ ರೂ 26,000 ದಲ್ಲಿ ರೂಪಾಯಿ 6000 ಮೆಂಬರೇತರರ ಡಿಪಾಜಿಟ್ಟು, ಮೆಂಬರೆಲ್ಲರೂ ಡಿಪಾಜಿಟ್ಟು ಇಡಲು ಯತ್ನಿಸಿದರೆ ಇತರರಿಂದ ಡಿಪಾಜಿಟ್ಟು ತೆಗೆಯುವ ಅವಶ್ಯವು ಕಮಿಟಿಗೆ ತೋರದೆ ಅವರು ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗುವುದು. ಸಂಘವು ಇನ್ನು ಮುಂದೂ ಅಭಿವೃದ್ಧಿಯಾಗಲೆಂದು ನಾನು ಹಾರೈಸುತ್ತೇನೆ ಎಂದು ಮೊದಲಾಗಿ ಭಾಷಣ ಮಾಡಿದರು.

ಆ ಮೇಲೆ ಪ್ರೆಸಿಡೆಂಟರು ಅಧ್ಯಕ್ಷರಿಗೂ, ಅತಿಥಿಗಳಿಗೂ, ಸಭಿಕರಿಗೂ ವಂದನೆಯನ್ನಿತ್ತ, ನಂತರ ಸಭೆಯು ಬರಖಾಸ್ತಾಯಿತು.

ಟಿ. ಯಂ. ಕಾರ್ಯಪ್ಪ,
(ಗೌ ಕಾರ್ಯದರ್ಶಿ)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಾಕರ್ತರು ಜವಾಬ್ದಾರರಲ್ಲ. ಸಂ]

ದಿವಂಗತ ಯನ್. ಚಿಣ್ಣಪ್ಪನವರು

ಅಯ್ಯಾ ಸಂಪಾದಕರೇ,

ತಮ್ಮ ಸೆಪ್ಟಂಬರು ತಾರೀಕು 18 ರ ಸಂಚಿಕೆಯಲ್ಲಿ ಮಿ. ನಡಿಕೇರಿಯಂಡ ಚಿಣ್ಣಪ್ಪನವರು ಶಿವಾಧೀನರಾದ ವರ್ತಮಾನವನ್ನು ನೋಡಿ ಅತ್ಯಂತ ವ್ಯಥೆ ಪಟ್ಟದಾಯಿತು. ಬಹುಶ್ರಮವಹಿಸಿ "ಪಟ್ಟೋಲೆ ಪಳಮೆ" ಯನ್ನೂ ಮತ್ತು ಕೊಡವ ಭಾಷೆಯ ಪದರೂಪದಲ್ಲಿ ಭಗವದ್ಗೀತೆಯನ್ನೂ ಸಹ, ತಾನು ಸರ್ಕಾರಿ ಉದ್ಯೋಗದಲ್ಲಿರುವಾಗಲೇ ಬರೆದು ಕೊಡವರ ಮುಂದಿಟ್ಟಂಥ ಇವರನ್ನು ಭಗವಂತನು ಇನ್ನು ಸ್ವಲ್ಪ ಕಾಲ ಜೀವಿತರಾಗಿ ಮಡಗಿದ್ದಿದ್ದರೆ, ತನ್ನ ಕೆಲಸದಿಂದ ನಿವೃತ್ತರಾದ ಮೇಲೆ ಇವರಿಂದ ಇನ್ನೂ ಹೆಚ್ಚಿನ ಉಪಕಾರವನ್ನು ಪಡೆಯುವ ಸಂದರ್ಭವು ಖಂಡಿತವಾಗಿಯೂ ನಮಗೆ ದೊರಕುತ್ತಿತ್ತೆಂಬುದು ಈ ಮೇಲಿನ ಉದಾಹರಣೆಯಿಂದಲೇ ಗೊತ್ತಾಗುವುದು. ಅದಂತಿರಲಿ. ಯಾರಾದರೂ ಸರಿಯೆ, ಜೀವಿತರಾಗಿರುವಾಗ್ಯೆ, ಎಲ್ಲರಿಂದಲೂ ಎಷ್ಟೇ ಕೆಟ್ಟವನೆನಿಸಿಕೊಂಡರೂ ಆಥವ ಕೆಟ್ಟ ಕೃತ್ಯಗಳನ್ನು ಮಾಡಿದ್ದರೂ ಮೃತ್ಯುವಿನ ಬಾಯಿಗೆ ತುತ್ತಾದ ಮೇಲೆ ಅಂಥವರ ಕೆಟ್ಟ ಆರೋಪಣೆಗಳನ್ನೆಲ್ಲಾ ಸಾಧ್ಯವಾದಷ್ಟು ಮಟ್ಟಿಗೆ ಬಚ್ಚಿ ಇಟ್ಟು ಒಳ್ಳೆಯ ಕಾರ್ಯ ಕಲಾಪಗಳನ್ನೆ ಎತ್ತಿ ಹೊಗಳುತ್ತಾ ಅನಾವಶ್ಯ ಬಿರುದುಗಳನ್ನು ಕೊಡುವುದು ಈ ಭೂಲೋಕದಲ್ಲಿ ಸ್ವಭಾವಿಕವಾದರೂ, ಶಿವಾಧೀನರಾದ ಮಿ. ಚಿಣ್ಣಪ್ಪನವರು, ಮುಖ್ಯವಾಗಿ ಕೊಡಗಿನ ಹೊಂದಾಟಿ ನಾನಾ ತರದ ಉದ್ಯೋಗಗಳನ್ನು ಕೈಕೊಂಡಿರುವ ಕೊಡವರಿಗೆ ತಮ್ಮ ಆಚಾರ ಪದ್ಧತಿಗಳನ್ನು ಚೆನ್ನಾಗಿ ಅನುಸರಿಸಲು ಸಹಾಯ ಮಾಡಲೋಸುಗ ಬರೆದಂಥ "ಪಟ್ಟೋಲೆ ಪಳಮೆ"ಯ ಆಧಾರದ ಮೇಲೆ ಅವರನ್ನು ಎಷ್ಟು ವಂದಿಸಿದೂ ಸ್ವಲ್ಪವೇ.

ಕೊಡಗು ದೇಶದಲ್ಲಿ ಇವರ ನಿಧನವು ಶೋಕವನ್ನುಂಟುಮಾಡದಿರದು ಇವರು ಮಾಡಿದಂಥ ಲಿಖಿತ ರೂಪದ ಸ್ವಚ್ಛನ ಸೇವೆಯನ್ನು ಕೈಕೊಂಡಿರುವವರು ಹರದಾಸ ಅಪ್ಪಚ್ಚಕವಿ ಮತ್ತು ಮಿ ನಾಡಂಡ ಮುತ್ತಣ್ಣನವರಲ್ಲದೆ ಬೇರೆ ಯಾರೂ ಕಾಣುವುದಿಲ್ಲ. ಆದುದರಿಂದ ಇವರ ಮರಣವು ದೊಡ್ಡ ನಷ್ಟವೆಂಬುದರಲ್ಲಿ ಸಂಶಯವಿಲ್ಲ ಇವರ ಆತ್ಮಕ್ಕೆ ಸಮಾಧಾನ ಶಾಂತಿಯುಂಟಾಗಲೆಂದು ಭಗವಂತನ್ನು ಪ್ರಾರ್ಥಿಸುತ್ತೇನೆ.

ಅಫ್ರಿಕ. ಸಿ. ಬಿ ತಿಮ್ಮಯ್ಯ

ಶಾಲಾ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರವರ ರಾಜಕೀಯ ಅಭಿಪ್ರಾಯ.

ಅಯ್ಯಾ,

ಕೊಡಗು ಶಾಲಾ ಮಾಸ್ತರುಗಳ ಸಮ್ಮೇಳನವು ಈ ವಾರ ನಡೆಯಿತು. ಅದರ ವೃತ್ತಾಂತವು ನಿಮ್ಮ ಅನುಕೂಲ ಪತ್ರದಲ್ಲಿ ಪ್ರಕಟವಾಗಬಹುದು. ಆದರೆ ಇಂಥಾ ಸಂಸ್ಥೆಗಳ ವರದಿಯು ಪತ್ರಿಕೆಗೆ ತಲುಪಬೇಕಾದರೆ ಕೆಲವು ದಿನಗಳಾಗಬಹುದು. ಆದ್ದರಿಂದ, ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ, ಶಾಲಾ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರಾದ ಮಿ. ಬಿದ್ದಂಡ ಕುಶಾಲಪ್ಪನವರು ದೇಶದ ರಾಜಕೀಯ ಭವಿಷ್ಯತ್ತಿನ ವಿಷಯದಲ್ಲಿ ಒಂದು ಅಮೂಲ್ಯವಾದ ಅಭಿಪ್ರಾಯವನ್ನು ಕೊಟ್ಟದನ್ನು ಆಗುವಷ್ಟು ಬೇಗನೆ ವಾಚಕರ ಮುಂದಿಡುವುದಕ್ಕೆ ಈ ಬಾತ್ಮಿಯನ್ನು ನಿಮಗೆ ಕಳುಹಿಸಿರುವುದಾಗಿದೆ

ನೀವು ಈ ಮೊದಲು ಸಂಪಾದಕೀಯ ಲೇಖನ ಬರೆದಿದ್ದಂತೆ ದೇಶದ ಅಭಿಪ್ರಾಯವು ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆನ್ನುವದರ ಕಡೆಗೆ ಪೂರ್ತಿಯಾಗಿ ತಿರುಗುತ್ತಿದೆ. ಕೆಲವು ರಾಜಕೀಯ ಕೆಲಸಗಾರರು ದೇಶವನ್ನು ಮದ್ರಾಸಿಗೆ ಸೇರಿಸಬೇಕೆನ್ನುತ್ತಿದ್ದಾಗ ಕೊಡವ ಸಭೆಯವರು ಮತ್ತು ಸರ್ಕಾರಿ ಅಧಿಕಾರದಲ್ಲಿದ್ದ ಹೆಚ್ಚಿನವರು ದೇಶವು ಪ್ರತ್ಯೇಕವಾಗಿ ಇರಬೇಕೆಂತ ಬಲವಾದಅಭಿಪ್ರಾಯವುಳ್ಳವರಾಗಿದ್ದರು ಮದ್ರಾಸಿಗೆ ಸೇರಿಸಬೇಕೆಂತ ಚಳವಳನಡಿಸುತ್ತಿದ್ದವರು ದೊಡ್ಡ ಪ್ರಾಂತ್ಯದೊಡನೆ ಸೇರಿಸಿದರೆ ದೇಶದ ವಿದ್ಯಾವಂತ ಯುವಕರು ದೊಡ್ಡ ಹುದ್ದೆಗಳಿಗೆ ಹಾ, ಹೈಕೋರ್ಟು ಜಡ್ಜಿ ಮತ್ತು ಗವರ್ನರ ಎಕ್ಸಿಕ್ಯುಟಿವ್ ಕೌನ್ಸಿಲ್ ಪದವಿಗೆ ಸಹ ಅವರವರ ಯೋಗ್ಯತಾನುಸಾರ ಹತ್ತಬಹುದು ಎಂತ ವಿವರಿಸುತ್ತಿದ್ದರು. ಅಂಥಾ ಅನುಕೂಲ ದೊರಕದಿದ್ದರೂ ಚಿಂತೆ ಇಲ್ಲ, ನಮ್ಮ ದೇಶದ ಅಧಿಕಾರವು, ನಮ್ಮ ದೇಶದವರ ಕೈಯ್ಯಲ್ಲೇ ಇದ್ದರೆ ಸಾಕೆಂದು ಅವರು ಮೋಶನಿಗೆ ವಿರೋಧಿಸುತ್ತಿದ್ದವರು ಅನ್ನುತ್ತಿದ್ದರು. ಅಷ್ಟು ಮಾತ್ರವಲ್ಲ, ದೇಶದ ಪ್ರಾಂತೀಕ ಗಜೆಟೆಡ್ ಉದ್ಯೋಗಗಳೆಲ್ಲಾ 'ನಮ್ಮವರಿಗೇ ಸಿಕ್ಕಿದರೆ ಸ್ವರಾಜ್ಯವೇ ಸಿಕ್ಕಿದಂತಾಯಿತು' ಹೇಳುವವರೂ ಇದ್ದರು ಈಗ ಅಧಿಕಾರಗಳೆಲ್ಲವೂ 'ನಮ್ಮವರ ಕೈಯ್ಯಲ್ಲೇ' ಬಂತು. ಈಗ ದೊಡ್ಡ ಸಂಪಾದನೆ ಮತ್ತು ದೊಡ್ಡ ಅಧಿಕಾರ ನಡಿಸುವ ಆಶೆ ಇರುವ ಉದ್ಯೋಗಸ್ಥರಿಗೆ ಕೊಡಗ ಮೇಲಕ್ಕೆ ಹತ್ತಲು ಮೆಟ್ಟು ತೋರದಿರುವಾಗ ಮದ್ರಾಸ ಕಡೆಗೆ ನೋಡತೊಡಗಿದ್ದಾರೆ. ಮಿ ಕುಶಾಲಪ್ಪನವರು ಸಹ ಕೊಡಗು ಮತ್ತು ಕೊಡಗಿನ ವಿದ್ಯಾ ಇಲಾಖೆಯು ಮದ್ರಾಸಿನಿಂದ ಬೇರ್ಪಟ್ಟಿರುವುದರಿಂದ ಕೊಡಗಿನ ಅಧಿಕಾರಿಗಳು ಇದ್ದಲ್ಲೇ ಇದ್ದು ಕೊಳೆಯಬೇಕಾಗಿದೆ ಎಂಬದನ್ನೇ ಕಾರಣವಾಗಿಟ್ಟುಕೊಂಡು ಮದ್ರಾಸಿಗೆ ಕೊಡಗನ್ನು ಸೇರಿಸಬೇಕೆಂತ ವಾದಿಸಿದರು ಬಾವಿ ಕಪ್ಪೆಯ ಮನೋಭಾವವನ್ನು ಬಿಟ್ಟು ದೊಡ್ಡ ಆಲೋಚನೆ ಮಾಡಿದ್ದಕ್ಕೆ ಇವರಿಗೆ ದೇಶದವರ ಪರವಾಗಿ ನನ್ನ ಧನ್ಯವಾದಗಳಿವೆ.

ಹಿಂದೂಸ್ಥಾನದ ರಾಜಕೀಯ ರಚನೆಯು ಯಾವ ತರವಿರಬೇಕೆಂಬುದು ಇನ್ನೂ ರೌಂಡ್ ಟೇಬಲ್ ಕಾನ್‌ಫರೆನ್ಸಿನಲ್ಲಿ ತೀರ್ಮಾನಕ್ಕೆ ಬಂದಿರುವುದಿಲ್ಲ. ಈಗಲಾದರೂ ಒಮ್ಮತದಿಂದ ಕೊಡಗಿನವರೆಲ್ಲರೂ ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂತ ಕೇಳಿಕೊಂಡರೆ ಶೀಘ್ರದಲ್ಲೇ ದೇಶದ ಕಲ್ಯಾಣವಾದೀತು. ಕೊಡಗಿನ ಭವಿಷ್ಯತ್ತಿನ ಮೇಲೆ ನಿಗ ಇರುವ ಮುಂದಾಳುಗಳು ಈ ಸುಸಮಯವನ್ನು ಕಳಕೊಳ್ಳಬಾರದ. ಕೊಡವ ಸಭೆಯ ಅಭಿಪ್ರಾಯವಿದ್ದ ಒಬ್ಬ ಕೌನ್ಸಿಲು ಮೆಂಬರರು ಕೌನ್ಸಿಲಿನಲ್ಲಿ ಮದ್ರಾಸ್ ಅಮಲ್ಗಮೇಶನಿಗೆ ಸಮ್ಮತಿಯನ್ನಿತ್ತರು ಉದ್ಯೋಗ ವರ್ಗಕ್ಕೆ ಸೇರಿದ ಮಿ ಕುಶಾಲಪ್ಪನವರು ಒಪ್ಪಿಗೆಯನ್ನಿತ್ತಿದ್ದಾರೆ ಆದ್ದರಿಂದ ಅಮಲ್ಗಮೇಶನ್ ಚಳವಳವನ್ನು ಪುನಃ ಇನ್ನೊಂದಾವರ್ತಿ ಹೂಡಿದರೆ ಈ ಚಳವಳಿಕ್ಕೆ ಒಮ್ಮತ ದೊರೆಕೀತೆಂತ ನಂಬುತ್ತೇನೆ ಇದು ಈಗ ಪ್ರಯತ್ನಿಸಬೇಕಾದ ವಿಷಯವಾಗಿದೆ.

"ದೂರದರ್ಶಿ

ಬೆಳ್ಳೂರು ಬೆಟ್ಟಚಿಕ್ಕ ದೇವತೆ

ಅಯ್ಯಾ,

ತಾರೀಕು 3—11—31ರಲ್ಲಿ ತಿಗ್ಗಟ್ಟುನಾಡು ತಾಲೂಕು ಬೆಳ್ಳೂರು ಗ್ರಾಮದ ಬೆಟ್ಟಚಿಕ್ಕ ದೇವತೆಯ ಉತ್ಸಾಹವು ನಾನಾವಿರಾರು ಜನರ ಸೇರುವಿಕೆಯಿಂದ ಬಹಳ ವಿಜೃಂಭಣೆಯಲ್ಲಿ ನಡೆಯಿತು ಈ ತಾಲೋಕು ಮಹನೀಯರಲ್ಲಿ ಕೆಲವರು ಈ ದೇವಸ್ಥಾನದಲ್ಲಿ ಪೂರ್ವದ ನಡವಳಿಕೆಯನ್ನೇ ಇಟ್ಟುಕೊಂಡು ಹೆಚ್ಚಿನ ದುಂದುಗಾರಿಕೆ ಖರ್ಚು ಮತ್ತು ಆಚಾರವನ್ನು ಈಗಿನ ಕಾಲಸ್ಥಿತಿಗತಿಗೆ ಸರಿಯಾಗಿ ಬದಲಾಯಿಸದಿದ್ದಲ್ಲಿ ದೇಶದ ಜನರಿಗೆ ಘೋರ ಕಷ್ಟ ನಷ್ಟವಾಗುತ್ತೆ ಎಂದು ಭಾವಿಸಿ, ಕೆಲವು ಜನ ಸ್ವಯಂ ಸೇವಕರನ್ನು ಕರೆಯಿಸಿಕೊಂಡು ಬಂದು ಮೀಟಿಂಗು ನಡಿಸಿದರು ಈ ಮೀಟಿಂಗು ಸದರಿ ದಿನ ರಾತ್ರಿ 10 ಗಂಟೆ ಸಮಯದಲ್ಲಿ ದೇವರು ಮಿಂದು ಬಂದ ಮೇಲೆ ನಡೆಯಿತು. ಸ್ವಯಂ ಸೇವಕರಾದ ಮಿ ಅಜ್ಜಮಾಡ ಮಾದಪ್ಪನವರು, ಮಿ ಸೋಮೆಯಂಡ ಅಚ್ಚಯ್ಯನವರು ಮತ್ತು ಸದರಿ ಊರಿನ ಮುಕ್ಕಾಟಿರ ಮುದ್ದಯ್ಯನವರು ಈ ದೇವಸ್ಥಾನದಲ್ಲಿಯ ನಡವಳಿಕೆಯಿಂದ ಈಗಿನ ಸ್ಥಿತಿಗತಿಯಲ್ಲಿ ಜನರಿಗುಂಟಾಗುವ ನಷ್ಟ ಕಷ್ಟಗಳನ್ನು ವಿವರಿಸಿ, ಇಡೀ ಕೊಡಗು ದೇಶದ ಎಲ್ಲಾ ಭಾಗಗಳಿಂದ ಬಂದು ಸೇರಿದ ಸಂಪೆಯ ಮಹನೀಯರಿಗೆಲ್ಲಾ ಭಾಷಣ ಮಾಡಿ, ಎಲ್ಲರೂ ಒಗ್ಗಟ್ಟಾಗಬೇಕಾಗಿಯೂ, ದೇವರಲ್ಲಿ ಮಾತನಾಡುವಾಗ ತೊಂದರೆ ಕೊಡದೆ ನಿತ್ಯವಾಗಿರಬೇಕಾಗಿ ಒಪ್ಪಿಗೆ ತೆಗೆದುಕೊಂಡರು ನಂತರ ಮೀಟಿಂಗು ಬರಖಾಸ್ತಾಯಿತು. ಸದರಿ ದಿನ ರಾತ್ರಿ 11 ಗಂಟೆಯಲ್ಲಿ ಮೈಸುಡಿದು ಬಂದ ದೈವಾನ್ ಚೀಕೆಯಲ್ಲಿ ಸ್ವಯಂ ಸೇವಕರಾದ ಮಿ. ಸೋಮೆಯಂಡ ಅಚ್ಚಯ್ಯನವರು ಮತ್ತು ಮಿ ಅಜ್ಜಮಾಡ ಮಾದಪ್ಪನವರು ಚರ್ಚಿಸಿ ಕೆಳಗಿನ ರೀತಿ ಇನ್ನು ಮುಂದೆ ವರ್ತಿಸುವುದೆಂದು ಒಪ್ಪಿಗೆ ತೆಗೆದುಕೊಂಡು ಅಲ್ಲಿಯೇ ಬರೆದು ದೈವಾನ್ ಮುಂದೆ ಓದಿ ಹೇಳಿದ ನಂತರ ಪ್ರಸಾದ ಪಡೆದು ಬೇರೆ ಮಹನೀಯರು ಮಾತನಾಡಲು ಎಡೆಕೊಡಲ್ಪಟ್ಟಿತು.

ಒಪ್ಪಿದ ಸಂಗತಿಗಳ ವಿವರ—

1. 10 ವರ್ಷಗಳಿಗೆ ಮೇಲ್ಪಟ್ಟ ನಾಲ್ಕು ಯಾ ಐದು ತಲೆಗಳಿಂದ ದೇವರಿಗೆ ಕೊಡಲಿಕ್ಕೆ ಇದ್ದ ಕೋಲೆಗಳನ್ನೆಲ್ಲಾ ಮಾಫಿ ಪೃತ್ಯಾಗಿ ಬಿಡಲಾಯಿತು.

2. 10 ವರ್ಷಗಳೊಳಗೆ ಇರುವ ಕೋಲೆಗಳನ್ನು ಜನರು ಪದ್ಧತಿ ಮೀರಿ ಬಡಿಸಿಕೊಂಡು ಹೋಗಬೇಕು.

3 ಒಂದಕ್ಕಿಂತ ಹೆಚ್ಚು ಕೋಲೆಗಳಿದ್ದರೆ ಈಗಿನ ನಡವಳಿಕೆ ಮೀರಿ ಸಾಮಾನುಗಳನ್ನು ಮತ್ತು ಬಾಡಾರ ಹಣವನ್ನು ಮಾತ್ರ ಕೊಡಬೇಕು. ಪ್ರತಿ ಕೋಲೆಗೆ ಇದ್ದ ಒಂದು ಕುಂಭ ಐವಾಜು 8ಕ್ಕೆ 2ರ ಮೇರೆ ತೀರ್ಮಾನವಾಗಿದೆ.

4. ತಪ್ಪು ಮಾಡಿದವನಿಗೆ ಮಾತ್ರ ಶಿಕ್ಷೆ ಕೊಡುವಂತೆಯೂ, ಈ ವರೆಗೆ ಇದ್ದ ಮೇರೆ ತಪ್ಪು ಮಾಡದ ಬೇರೆಯವರು ತನ್ನ ಯಾ ಫಲದ ದೃಷ್ಟಿಗೆ ಬಿದ್ದದರಿಂದ ತೊಂದರೆ ಕೊಟ್ಟವು ಎಂದು ಹೇಳಿ, ಕೊಡುವ ತೊಂದರೆಗಳನ್ನು ಇನ್ನು ಮುಂದೆ ಬಿಡುತ್ತೇನೆಂದು ತೀರ್ಮಾನವಾಗಿದೆ.

5. ಜಾಸ್ತಿ ಕೋಲೆಗಳಿದ್ದರೆ ಮೇಲೆ ಹೇಳಿದ ರೀತಿ ಪದ್ಧತಿ ನಡಿಸಿ ಕೋಲೆ ಹಿಡಿಯುವವರು ಒಂದು ಕೋಲೆ ಹೊಂದಿಕೊಂಡು ಹೋಗುವಾಗ ಬಾಕಿ ಕೋಲೆಗಳನ್ನೆಲ್ಲಾ ಅವನ ಹಿಂದೆಯೇ ಬಿಟ್ಟು ಏನೂ ತೊಂದರೆ ಇಲ್ಲದೆ ಮನೆಗೆ ತಲಪಿಸಿಕೊಡುವಂತೆ ಒಪ್ಪಿತು.

6 ಹರಿಕೆ ಅಥವಾ ಕೋಲೆಗಳನ್ನು ದೇವಸ್ಥಾನದಲ್ಲಿ ಒಂದು ಸಲ ಸಕ್ಕದ ರೀತಿಯಿಂದ ದೈವಾಸ್ ಮಂದಿ ತೀರಿಸಿ ಒಂದ ಮೇಲೆ ಪುನಹ ತೊಂದರೆ ಯಾವ ಬಾಬಿನಲ್ಲಿಯೂ ಕೊಡುವುದಿಲ್ಲವೆಂದು ಒಪ್ಪಿತು.

7. ಶಾಸ್ತ್ರ ಯಾ ಬೇರೆ ದೇವತೆಗಳನ್ನು ಕೇಳುವ ಪದ್ಧತಿ ಬಿಟ್ಟು ಈ ದೇವತೆಯನ್ನು ಕೇಳದಲ್ಲಿ ಸಕ್ಕವಿದ್ದಂತೆ ವಿವರಿಸಿ ಕೊಡಲು ಒಪ್ಪಿತು.

ಇದರಿಂದ ನಾವೇ ಮೂಢರು ಕೋರುದ್ದಲ್ಲವೇ? ಏಕೆಂದರೆ— ನಾವು ದೇವತೆಯಲ್ಲಿ ಸಂಕಷ್ಟ ಹೇಳಿಕೊಳ್ಳುವಾಗ "ಮಗುವೇ, ನಾನಾಗಿ ಬಂದಿಲ್ಲ, ನೀನು ಕರೆಯಿಸಿದರಿಂದ ಬಂದೆ. ಅದುಪರಿಂದ ನೀನು ಆದ ರೀತಿ ನಡಿಯದಿದ್ದರೆ ನಾನು ಬಿಡುವವಳಲ್ಲ' ಎಂದು ಹೇಳಿದ ಮಾತು ಅಲ್ಲಿ ನೆರೆದಿದ್ದವರಿಗೆಲ್ಲಾ ತಿಳಿದ ಸಂಗತಿಯಾಗಿರುತ್ತೆ. ಇದು ಗುರು ವಾಕ್ಯ. ಇದರಿಂದ ಇನ್ನಾದರೂ ಎಲ್ಲರೂ ಅಜ್ಞಾನ ಬಿಟ್ಟು ಆಶೆ ಎಂಬ ಮೋಹಕ್ಕೆ ಬೀಳದೆ ರಾಗ, ದ್ವೇಷ, ಮೋಹ, ಮದ, ಮತ್ಸರ, ಕಾಮ, ಕ್ರೋಧ ಲೋಭ ಎಂಬ ಅಷ್ಟ ವಿಕಾರಗಳಿಗೆ ಎಡೆ ಕೊಡದೆ ತನ್ನನ್ನು ತಾನು ನಿರಂತರ ತಿದ್ದಿಕೊಂಡು ಪಂಚಾಕ್ಷರಿ, ಅಷ್ಟಾಕ್ಷರಿ ಮೊದಲಾದ ಮಂತ್ರಗಳನ್ನು ತಕ್ಕ ಗುರುಗಳಿಂದ ಹೊಂದಿ ಮಂತ್ರಗಳ ಅರ್ಥ ಚೆನ್ನಾಗಿ ತಿಳಿದು ಮರಣ ಪರಿಯಂತ ಸಾಧಿಸುತಾ, ಬಂದರೆ ಮೇಲ್ಕಂಡಂತೆ ನಷ್ಟ ಕಷ್ಟಕ್ಕೆ ಬೀಳದೆ, ಇಹ ಪರ ಸುಖಗಳನ್ನು ಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ನಮ್ಮಲ್ಲಿ ಪರಸ್ಪರ ಪ್ರೀತಿ, ಒಗ್ಗಟ್ಟು ಇಲ್ಲದೆ ಇರುವದಕ್ಕೆ ಮಾಯೆ ಅಂದರೆ ಒಗ್ಗಟ್ಟು, ಪ್ರೀತಿಯ ನಾಶ ಕರ್ಮವೇ ಕಾರಣ ಎಂದು ಎಲ್ಲರೂ ಚೆನ್ನಾಗಿ ಯೋಚಿಸಿದರೆ ತಿಳಿಯುತ್ತೆ. ಮುಖ್ಯ ಸತ್ಯ ಹೇಳಲು ಕಲಿಯಬೇಕು. ಇದಕ್ಕಾಗಿಯೇ ರಾಮಕೃಷ್ಣ ಪರಮಹಂಸ ಮತ್ತು ಸಿದ್ಧಾರೂಢ ಸ್ವಾಮಿಗಳ ಮಠಗಳು ನಾನಾ ಸಾಧುಗಳಿಂದ ನಮ್ಮ ಮುಂದೆ ಏರ್ಪಡಿಸಲ್ಪಟ್ಟಿರುವುದು. ಇದಕ್ಕೆ ತಪ್ಪಿದರೆ ವಿಕಾರಗಳಿಗೆ ಎಡೆಯಾಗಿ ಮಾಯೆಯಲ್ಲಿ ಸಿಕ್ಕಿ ಮೇಲ್ಕಂಡ ರೀತಿಯಲ್ಲಿ ಕಷ್ಟಕ್ಕೆ ಬೀಳಬೇಕಾಗುವುದು.

"ಹಾಜರಿದ್ದವ"

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897)

ಹಿಂದೂಸ್ಥಾನದಲ್ಲಿ ಪ್ರಮುಖ್ಯವೂ, ಒಪ್ಪಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು— ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು— 152–3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

52—11

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೋ ಸಂಸ್ಥೆ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1 ಬಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಜೋತೆ ನಡಿದಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆ ಮಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3 ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಆಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೋ ಮೊಬಲಗನ್ನು ಲಾಭ ಸಹಿತ ವಾಪತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡಿಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಇಂದು ಭಾಗಿಗಳಾಗಿರಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವರ್ಗ್ಯರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು— ಟೆಂಪಲ್ ಸೈಡ್, ಮಡಿಕೇರಿ. (26—5)

ಬಿ. ಎಸ್. ಐಯ್ಯಪ್ಪ, ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟನ್ ಪೆನ್‌ಗಳು.

ಸೆಲ್ಫ್ ಫಿಲ್ಲರ್ ಫೌಂಟನ್ ಪೆನ್ 1ಕ್ಕೆ	ರೂ. 3	0	0	
" , ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0	
" ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0	
, ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡೆಲ್ ಕಲರ್ ಫೌಂಟನ್ ಪೆನ್ 1ಕ್ಕೆ	3	14	0	
" ಮಾರ್ಬಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4	2	0	
" ಸೆಲ್ಫ್ ಫಿಲ್ಲಿಂಗ್ ಮೊಡೆಲ್ ಅಥವ ಬ್ರವುನ್ ಕಲರ್ ಫೌಂಟನ್ ಪೆನ್ 1ಕ್ಕೆ	5	8	0	
ಬಿಗ್ ಸ್ವಾನ್ ಫೌಂಟನ್ ಪೆನ್ 1ಕ್ಕೆ	10	8	0	
ವಾಟರ್‌ಮನ್ ಪೆನ್ 1ಕ್ಕೆ	14 6 0, & 20	10	0	
ಕ್ಲಿಪ್ ಲರ್ ಫೌಂಟನ್ ಪೆನ್ 1ಕ್ಕೆ	3 8 0, & 3	12		
ಸ್ವಾನ್ ಫೌಂಟನ್ ಪೆನ್ 1ಕ್ಕೆ	6 4 0, & 6	12	0	
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ	8 2 0, & 3	10	0	

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್	1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್	1ಕ್ಕೆ	2	2	0
ಲಿಗಲಿಯಾ ಅಲಾರಂ ಟೈಂಪೀಸ್	1ಕ್ಕೆ	6 9 0, & 6	15	0
ಲಿಗಲಿಯಾ ಸ್ಪ್ರೈವ್‌ಜಿನ ಅಲಾರಂ ಟೈಂಪೀಸ್	1ಕ್ಕೆ	7	2	0
ಲಿಗಲಿಯಾ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು	1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್	1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇದಕ್ಕೆ ಬರೆ ಯಾದ ಟೈಂಪೀಸ್	1ಕ್ಕೆ	13	4	0
ಖಾತ್ರಿಯಾ ಬಂದೋಬಸ್ತಾದ ಪಾಕೆಟ್ ವಾಚ್	1ಕ್ಕೆ	5	10	0
ಇತಿಯೋ ನಮೂನೆಯಲ್ಲಿ ಎಬ್ರು ಹಾಸ್ಪ ಕಂಪೆನಿಯ ಪಾಕೆಟ್ ವಾಚ್	1ಕ್ಕೆ	12	4	0
ಸಿಕ್ಸರ್ ಕೇಸ್ ಸಿಲಿಂಡರ್ ಮೂವ್‌ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್	1ಕ್ಕೆ	5 4 0, 7 8 0, 10 0 0 & 12	9	0

ಇಲ್ಲಿ ನಮೂದಿಸಿರುವ ನಮೂನೆ ಚಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟು ಖರ್ಚು ಬೇರೆಯಾಗುತ್ತೆ.

ಮನಿಯಾರ್ಡರ್ ಕಳುಹಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—21

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಫ್ಲಾಟ್ಸ್, ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೆಯಿಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೊ. ಚೌರೀರ ಮಾದೈಯ್ಯನವರು,
ದಕ್ಷಿಣ ಕೊಡಗಿಗೆ—ಮ. ಸೋಮೆಯಂಡ ಅಚ್ಚಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮ. ಮಂಡೇಪಂಡ ಸೋಮೈಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎನ್. ಆರ್. ವೆಂಕಪ್ಪಯ್ಯನವರು,
ಶ್ರೀಮಂಗಲನಾಡು—ಮ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮ. ಚಮ್ಮಟ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮ. ಬಿನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಪ್ಪಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮ ಜಿ. ಮಾದಪ್ಪಯ್ಯನವರು,
ಸುಂಟಿಕೊಪ್ಪ—ಮ ಅಪ್ಪಚೆಟ್ಟೋಳಂಡ ಮಾಣ್ಯಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಆವಶ್ಯಕವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಕರಾರು ಫಾರಮುಗಳೂ, ಜನ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಅಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ಒಟ್ಟು ವಿಮೆ ... ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ,
ವಿಮೆದಾರರಿಗೆ ಕೊಟ್ಟದ್ದು—... ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಧನಬಲವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಶೇಷ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿ ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ನೈರೋಬಿ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾಂವ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

[52—

ಪ್ರತಿ ಜ್ವರಕ್ಕೆ ಮಲೇರಿಯಾನ

ಕೊಡಗಿನ ಗುಡುಗುಡು ಎಂಬ ಚಳಿ ಜ್ವರಕ್ಕೂ ಸುಮುಸುಮ ಬರುವ ಜ್ವರಕ್ಕೂ, ಗಟ್ಟಿಯಾದ ಜ್ವರಗಳಿಗೂ ಗುಣಕರವಾದ ಯಾವದೆಂದು ಕೇಳಿ? ಇಗೋ ರಾಜ ಮದ್ದು ಮಲೇರಿಯಾನ. ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗೆಡ್ಡೆಯನ್ನು ಬಾಕ್ಕಿಯಾಗದ ಹಾಗೆ ಬಿಡುತ್ತದೆಂದು ಸ್ಥಿರ ನಂಬಿ. ಕ್ರಯ ಬಾಟ್ಲಿಗೆ 1—, ½ ಡಜನ್ 8—8—0. 1 ಡಜನ್ 16—8—0.

ಕಂಪೌಂಡು ಸಿರಪ್ಪು ಬ್ಲಟಿ.

ಗುದುಗುರು ಬುಬ್ಬಿನ ಸೇವಿಸಿದ ರೋಗದಿಂದ ಕಣ್ಣು ಕೆಟ್ಟು ಕಫ ಗಟ್ಟಿಯಾಗಿ ಎಳದಾಟ ಎದೆ ಮತ್ತು ಪಾರ್ಶ್ವನೋವು ಕಾಣುತ್ತಿರುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು ಕಡೆಯಾಗಿ ಕಂಪೌಂಡು ಸಿರಪ್ಪು ಬ್ಲಟಿ ಎಂಬದನ್ನು ತಕ್ಷಣ ತರಿಸಿ ಕುಡಿಯಲಿ. ಕ್ರಯ ಬಾಟ್ಲಿಗೆ ರೂ. 3—8—0.

ಕಂಪೌಂಡು ಸಿರಪ್ಪು ಬಸಲೀನ:—ಶ್ವಾಸಕೋಶದ ಕ್ಷಯದಂಥ ರೋಗಕ್ಕೆ ಈ ಸಿರಪ್ಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿದರೆ ಶ್ವಾಸಕೋಶದಲ್ಲಿ ಉಂಟಾಗುವ ಹುಂಡು ವ್ರಣಗಳು, ಕೆಮ್ಮು ಎದೆನೋವು, ರಕ್ತ ಬೆರತ ಕಫ, ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ರೋಗವು ಮುಂದರಿಯದಂತೆ ಕಾಪಾಡಿ ಆರೋಗ್ಯ ಕೊಡುವುದು. ಕ್ರಯ ಬಾಟ್ಲಿಗೆ ರೂ 3—8—0.

ಕಂಪೌಂಡು ಸಿರಪ್ಪು ಸಬೀನ ಸೇಪಿಯ:—ಹೆಂಗಸರ ಮೂತ್ರದ್ವಾರದಿಂದಲೂ, ಗರ್ಭದ್ವಾರದಿಂದಲೂ ಹರಿಯುವ ಬಿಳೀ ಸೆರಗು ಎಂಬ ರೋಗದಿಂದ ಸೊಂಟನೋವು, ಕೈಕಾಲು ಬಿಚ್ಚಲು, ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸಿ ಬಲಪಡಿಸುವುದು. ಕ್ರಯ ಬಾಟ್ಲಿಗೆ ರೂ. 3—8—0.

ಕಂಪೌಂಡು ಸಿರಪ್ಪು ನೆಸಿಫೂಡ:—ಪ್ರಮೇಹದಂಥ ಗುಪ್ತರೋಗವನ್ನು ಪಡಕೊಂಡು, ಮೂತ್ರ ಬಿಂದು ಬಿಂದುಗಳಾಗಿ ಇಳಿದು ದ್ವಾರದೊಳಗೆ ಹುಂಡು ವ್ರಣಗಳು, ದುರ್ನಾತವೆ ಕೂಡಿದ ಹಳದಿ ಬಣ್ಣದ ರೇಗಿ ಇತ್ಯಾದಿ ಕಠಿಣ ತರದ ರೋಗವನ್ನು ಈ ಬಲವಾದ ಸಿರಪ್ಪು ಸಂಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು. ಕ್ರಯ ಬಾಟ್ಲಿಗೆ ರೂ. 3—8—0.

ಶುದ್ಧ ಟಿಕ್ಚ್ಯಮದ್ದುಗಳೂ ಹೋಮ್ಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಫಟ 3—5ರ ವರೆಗೆ ಓದಿಕೊಂಡು ಬರೆಯತಕ್ಕದ್ದು. ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಬಿಸಲಿಗೆ ಇಡತಕ್ಕ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯದಿಗೆ ದೊರೆಯುತ್ತವೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

52—2 **Malariana Co.,**
Hampankatta No. 14 Mangalore.

ವಿಳಾಸ:—ಮಲೇರಿಯಾನ ಕಂಪೆನಿ,
ಹಂಪನಕಟ್ಟೆ, ನಂಬ್ರ 14, ಮಂಗಳೂರು ಪೋಸ್ಟ್

ಸಣ್ಣ ಹುಡುಗರ ಸಲುವಾಗಿ

ದೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ದೋಂಗರೆ ಕಂಪೆನಿ,
52—45 ಗಿರಿಗಾಂವ್, ಮುಂಬಯಿ.

Printed & published by P. I. Belliappa at "Kodagu" Press Mercara for "Kodagu" Ltd.

If not delivered please return to "KODAGU" OFFICE MERCARA.

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

೧೧	ಮಡಿಕೇರಿ, ಸನ್ ೧೯೩೧ನೇ ಇಸವಿ ನವಂಬರ್ ತಾರೀಕು ೨೦ನೇ ಶುಕ್ರವಾರ.	ಸಂಚಿಕೆ ೪೫

V. Subramaniyer Jeweller.

DIAMOND MERCHANT, GOLD & SILVER SMITH.

Deals in all —
SPORTS CUPS in all prices
MEDALS in up to date patterns
CASKETS in elegant styles

Nos. 2 & 3 ... St.
TIRUVATESWARAPET
Post Box 4..., ... P. O.,
MADRAS.

Deals in all —
GEM SET JEWELS set with Diamonds Rubies etc.
GOLD ARTICLES of all patterns
SILVER WARE in latest style

52-1



ಬಂದೂಕುಗಳು, ತಮ್ಮ ಗಳು, ಬಟೀಗಳು, ಕೊಬಿಗಳು ...
... ಬಹು ಕಡಿಮೆ ದರದಲ್ಲಿ ದೊರೆಯುವವು

GOOLAMHUSAIN ALLIBHOY ...
Largest Importers of Firearms and Ammunition
Cheapest priced Firm in India.
...—10 210 Abdul Rehman Street, BOMBAY

ಬಾಲಾರ್ಕ ಮಧು.



ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.
52-45



52-28

ಕೊಡಗು.

ಸನ್ ೧೯೩೧ನೇ ಇಸವಿ

ನವಂಬರ್ ತಾ ೨೦ನೇ ಶುಕ್ರವಾರ.

ಟಪ್ಪಾಲು ಹಾಸಲು ಹೆಚ್ಚಿಸುವಿಕೆ.

ಸರ್ಕಾರದ ಎಲ್ಲಾ ಇಲಾಖೆಗಳಂತೆ ಪೋಸ್ಟಲ್ ಇಲಾಖೆಯಲ್ಲಿ ಉತ್ಪತ್ತಿ ಕಡಿಮೆಯಾಗಿ ಖರ್ಚು ಹೆಚ್ಚಾಗಿರುವ ಕಾರಣ, ಹೆಚ್ಚಾದ ಖರ್ಚನ್ನು ಕಡಿಮೆ ಯೂ ಭರ್ತಿ ಮಾಡುವ ಉದ್ದೇಶ್ಯ ಸಿಬ್ಬಂದಿ ಖೋತೆ ಮಾಡುವುದಲ್ಲದೆ ಟಪ್ಪಾಲು ಹಾಸಲನ್ನು ಹೆಚ್ಚಿಸುವ ಅಭಿಪ್ರಾಯವನ್ನು ಇಂಡಿಯಾ ಸರ್ಕಾರದವರು ಮಾಡಿರುವರು. ಬರುವ ಜನವರಿ 1 ರಿಂದ ಪೋಸ್ಟು ಕಾರ್ಡಿನ ಕ್ರಯವನ್ನು 6 ರಿಂದ 9 ಕಾಸಿಗೂ, ಕಾಗದದ ಸ್ಟ್ಯಾಂಪಿನ ಕ್ರಯವನ್ನು 1 ರಿಂದ 1¼ ಆಣೆಗೂ ಏರಿಸಬೇಕೆಂಬುದೇ ಅವರ ಸೂಚನೆಯಾಗಿದೆ. ಈ ಸೂಚನೆಯು ಈ ತಾ. 16 ರಲ್ಲಿ ಎಸೆಂಬ್ಲಿ ಸಭೆಯಲ್ಲಿ ಚರ್ಚಿಸಲ್ಪಟ್ಟಾಗ, ಈಗಿರುವ ದರವನ್ನು ಹೆಚ್ಚಿಸ ಕೂಡದೆಂಬ ಉಪಸೂಚನೆಯು ಬಹುಮತದಿಂದ ಪಾಸಾಯಿತೆಂದು ತಿಳಿಸಲು ಸಂತೋಷಪಡುತ್ತೇವೆ. ಈ ಉಪಸೂಚನೆಗೆ 63 ಜನರು ಪರವಾಗಿಯೂ, 16 ಜನರು ವಿರೋಧವಾಗಿಯೂ, ಆದರಲ್ಲಿ ಚುನಾಯಿತ ಇಂಡಿಯನ್ ಮೆಂಬರುಗಳಲ್ಲಿ 61 ಜನರು ಪರವಾಗಿಯೂ, ಸರ್ ಮಹಮ್ಮದ್ ಯಾಕೂಬ್‌ರೇ ಬೆಂಬಲಿಗರು ಮಾತ್ರ ವಿರೋಧವಾಗಿಯೂ ಓಟು ಕೊಟ್ಟದ್ದು ನೋಡಿದರೆ ಜನರ ಪ್ರತಿನಿಧಿಗಳು ಹಾಗೂ ದೇಶದ ಜನರು ಟಪ್ಪಾಲು ಹಾಸಲಿನ ದರವನ್ನು ಹೆಚ್ಚಿಸುವುದಕ್ಕೆ ಎಷ್ಟರ ಮಟ್ಟಿಗೆ ವಿರೋಧವಾಗಿದ್ದಾರೆಂಬುದು ವಿಷದವಾಗುತ್ತದೆ.

ಎಸೆಂಬ್ಲಿಯಲ್ಲಿ ಚರ್ಚೆ ನಡೆದಾಗ್ಯೂ, 'ಪೋಸ್ಟಲ್ ಇಲಾಖೆಯಲ್ಲಿ ಉತ್ಪತ್ತಿಗಿಂತ 132 ಲಕ್ಷ ರೂಪಾಯಿ ಖರ್ಚು ಹೆಚ್ಚಾಗಿದೆಯೆಂತಲೂ, 60 ಲಕ್ಷ ರೂಪಾಯಿ ವರೆಗೆ ಸಿಬ್ಬಂದಿ ಖೋತೆ ಮಾಡಲಾಗುವದೆಂದೂ, ಬಾಕಿ 72 ಲಕ್ಷ ರೂಪಾಯಿಯನ್ನು ಟಪ್ಪಾಲು ಹಾಸಲು ಹೆಚ್ಚಿಸುವದರಿಂದಲೇ ಭರ್ತಿ ಮಾಡಬೇಕೆಂತಲೂ, ಒಂದು ವರ್ಷದಲ್ಲಿ 536 ಮಿಲ್ಲಿಯ ಪೋಸ್ಟು ಕಾರ್ಡುಗಳು ಉಪಯೋಗಿಸಲ್ಪಟ್ಟಿರುವ ಕಾರಣ, ಸರಾಸರಿ ಲೆಕ್ಕ ತೆಗೆದುಕೊಂಡರೆ ಪ್ರಾಯಬಂದವರಲ್ಲಿ ಒಬ್ಬರಿಗೆ ವರ್ಷಕ್ಕೆ 3 ಕಾರ್ಡುಗಳಾಗುವುವೆಂತಲೂ, ಆದುದರಿಂದ ಒಬ್ಬನು ವರ್ಷಕ್ಕೆ 9 ಕಾಸು ಮಾತ್ರ ಹೆಚ್ಚು ಕೊಡಬೇಕಾಗುವುದು ದೊಡ್ಡ ಹೊರೆಯಲ್ಲವೆಂತಲೂ' ಮುಂತಾಗಿ ಸರ್ಕಾರಿ ಮೆಂಬರು ವಾದ ಮಾಡಿದರು.

ಈಗಿನ ದರವನ್ನು ಹೆಚ್ಚಿಸಕೂಡದೆಂಬ ಉಪ ಠರಾವಿನ ಸೂಚಕರು ಹೇಳಿದಂತೆ, 60 ವರ್ಷಗಳ ಹಿಂದೆ ಪೋಸ್ಟಲ್ ಇಲಾಖೆಯನ್ನು ಸ್ಥಾಪಿಸಿದಾಗ್ಯೂ ಇದು ಜನರ ಪ್ರಯೋಜನಾರ್ಥವಾಗಿ [illegible] ಈಗ ಅದನ್ನು ಉತ್ಪತ್ತಿ [illegible] ಉಪಯೋಗಿಸುವುದು ಎಂದೂ ಸರಿಯಲ್ಲ. ಪ್ರಾರಂಭದಲ್ಲಿ ಕಾರ್ಡಿಗೆ 3 ಕಾಸೂ, ಕಾಗದಕ್ಕೆ 6 ಕಾಸೂ ಇದ್ದದ್ದು 1922ರಲ್ಲಿ 6 ಕಾಸಿಗೂ, ಒಂದಾಣೆಗೂ ಏರಿಸಲ್ಪಟ್ಟಿತು. ಆಗಲೇ ಜನರಲ್ಲಿ ತುಂಬಾ ಅತೃಪ್ತಿಯುಂಟಾಯಿತು. ಅಲ್ಲದೆ ಪತ್ರವ್ಯವಹಾರ ನಡಿಸುವದು ಕಡಿಮೆಯಾಗಿ ಈ ಬಾಬಿನ ಉತ್ಪತ್ತಿಯೂ ಕಡಿಮೆಯಾಯಿತು. ಹಾಗೆಯೇ ಈಗಲೂ ದರವನ್ನು ಹೆಚ್ಚಿಸಿದರೆ ದೇಶದಲ್ಲಿ ಪತ್ರವ್ಯವಹಾರವು ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ. ಕಾಸಿಗೆ ಆಣೆಯಷ್ಟು ಆಣೆಗೆ ರೂಪಾಯಿಯಷ್ಟು ಬೆಲೆಯಾಗಿರುವ ಈ ಕಾಲದಲ್ಲಿ ಬಡ ಜನರು ಕಾರ್ಡಿಗೆ ಮುಕ್ಕಾಲಾಣೆಯನ್ನೂ, ಕಾಗದಕ್ಕೆ ಒಂದೂವರೆ ಆಣೆಯನ್ನೂ ಖರ್ಚು ಮಾಡಲಾರರು. ಅತ್ಯಗತ್ಯವಿದ್ದಲ್ಲಿ ದೇಶದ ಮೂಲೆ ಮೂಲೆಗಳಿಗೆ ಹೋಗುತ್ತಿರುವ ಬಸ್ಸುಗಳ ಮೂಲಕ ತಮ್ಮ ಕಾಗದ ಪತ್ರಗಳನ್ನು ಕಳುಹಿಸುವರು. ಇಲ್ಲವಾದರೂ ಸಾಧ್ಯವಾದಷ್ಟು ಪತ್ರವ್ಯವಹಾರ ನಡಿಸದೇ ಇರುವರು. ಆದುದರಿಂದ ಪೋಸ್ಟಲ್ ಇಲಾಖೆಯು ಉತ್ಪತ್ತಿಯು ಕಡಿಮೆಯಾಗದೆ ಇರಲಾರದು.

ದರವನ್ನು ಹೆಚ್ಚಿಸಲು ಸರ್ಕಾರದವರಿಗೆ ಉತ್ತೇಜನ ಕೊಟ್ಟ ಒಬ್ಬನೇ ಚುನಾಯಿತ ಮೆಂಬರಾದ ಸರ್ ಮಹಮ್ಮದ್ ಯಾಕೂಬರವರು, 'ಕಾಗದ ಬರೆಯುವ ಅಭ್ಯಾಸವು ಪಶ್ಚಿಮ ದೇಶದಿಂದ ಹಿಂದೂದೇಶಕ್ಕೆ ಬಂದ ಹಿಂದಿನ ಕಡೆ [illegible]; ಅದನ್ನು ಅದನ್ನು ಕಡಿಮೆ ಮಾಡಬೇಕಾದ ಕಾರಣ ದರವನ್ನು ಏರಿಸಬೇಕು.' ಮುಂತಾಗಿ ಹೇಳಿದರು. ಇದೊಂದು ವಿಶೇಷ ತರದ ಅಭಿಪ್ರಾಯವೇ ಸರಿ. ಜನರ ಕ್ಷೇಮಲಾಭಗಳನ್ನು ತಿಳಿಸಲು ಮಾತ್ರವಲ್ಲ, ವ್ಯಾಪಾರ ಮತ್ತು ಕೈಗಾರಿಕೆಯ ಅಭಿವೃದ್ಧಿಗೆ ಪತ್ರವ್ಯವಹಾರವು ಎಷ್ಟರ ಮಟ್ಟಿಗೆ ಸಹಕಾರಿಯಾಗಿದೆಯೆಂಬುದನ್ನು ತಿಳಿಯದ ಜನರು ಬಹು ಕಡಿಮೆ. ಇದುದರಿಂದ ಪೋಸ್ಟಾಫೀಸುಗಳ ಅನುಕೂಲವು ಪ್ರತಿಯೊಂದು ಹಳ್ಳಿಗೂ ತಲಪುವಂತೆ ಮಾಡಬೇಕಾದು. ದೇಶದ ಹಿತಚಿಂತಕರು ಕಾಗಿಳೊಳ್ಳುತ್ತಿರುವಲ್ಲಿ, ಪತ್ರ ಬರೆಯುವ ಅಭ್ಯಾಸವನ್ನೇ ಕಡಿಮೆ ಮಾಡಬೇಕೆಂದು ವಾದಿಸುವವರೂ ಜನರ ಪ್ರತಿನಿಧಿಯಾಗಿ ಎಸೆಂಬ್ಲಿಯ ಸಭೆಯಲ್ಲಿ ಇರುವುದು ಆಶ್ಚರ್ಯವಲ್ಲವೇ? ಅವರು ಸೂಚಿಸಿದಂತೆ ಕಾಗದಗಳನ್ನು ಬರೆಯುವುದನ್ನೇ ಜನರು ಕಡಿಮೆ ಮಾಡಿದರೆ ಟಪ್ಪಾಲು ಹಾಸಲಿನ ಉತ್ಪತ್ತಿಯು ಕಡಿಮೆಯಾಗುತ್ತದೆ. ಆಗ್ಯೆ ದರವನ್ನು ಹೆಚ್ಚಿಸಿದರ ಉದ್ದೇಶವನ್ನೇ ಸೋಲಿಸಿದಂತಾಗುತ್ತೆ.

ದೇಶದ ಆರ್ಥಿಕ ಸ್ಥಿತಿಯು ಬಹು ಹೀನಾವಸ್ಥೆಗೆ ಬಂದಿರುವ ಈ ಕಾಲದಲ್ಲಿ ಯಾವ ತರಹದ ಹೊಸ ತೆರಿಗೆಯನ್ನೂ ಜನರು ತೆರಲಾರರು. ಅಂಥಾದ್ದರಲ್ಲಿ ದೇಶದ ಜನರ ಪ್ರಯೋಜನಾರ್ಥವಾಗಿ ಸ್ಥಾಪಿಸಲ್ಪಟ್ಟಿರುವ ಪೋಸ್ಟಲ್ ಇಲಾಖೆಯನ್ನು ವ್ಯಾಪಾರದ ಸಂಸ್ಥೆಯಾಗಿ ಮಾಡಿಕೊಂಡು ಉತ್ಪತ್ತಿ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು ಎಂದೂ ಯೋಗ್ಯವಲ್ಲ. ಆದರೆ ಇಲಾಖೆಯಲ್ಲಿ ಉತ್ಪತ್ತಿಯು ಕಡಿಮೆಯಾಗಿದ್ದರೆ ಉತ್ಪತ್ತಿಗೆ ಸರಿಯಾಗಿ ಖರ್ಚನ್ನು ಖೋತೆ ಮಾಡಿಕೊಳ್ಳಬೇಕಲ್ಲದೆ ಟಪ್ಪಾಲು ಹಾಸಲನ್ನು ಹೆಚ್ಚಿಸುವುದು ಸರಿಯಲ್ಲ. ಟಪ್ಪಾಲು ದರವನ್ನು ಕಡಿಮೆ ಮಾಡಿದಷ್ಟೂ ಪತ್ರವ್ಯವಹಾರಗಳು ಹೆಚ್ಚಿ, ಕೈಗಾರಿಕೆ, ವ್ಯಾಪಾರ ಮುಂತಾದವುಗಳಿಗೆ ಉತ್ತೇಜನ ದೊರೆತ, ಸರ್ಕಾರದ ಉತ್ಪತ್ತಿಯು ಬೇರೆ ವಿಧಗಳಲ್ಲಿ ಹೆಚ್ಚಾಗುವುದು. ಆದುದರಿಂದ ಈ ವಿಷಯದಲ್ಲಿ ಎಸೆಂಬ್ಲಿಯ ತೀರ್ಮಾನವು ದೇಶಕ್ಕೆ ತುಂಬಾ ತೃಪ್ತಿಯನ್ನುಂಟುಮಾಡುವಂಥಾದ್ದಾಗಿದೆ. ಸರ್ಕಾರದವರು ಈ ತೀರ್ಮಾನದಂತೆ ನಡೆಯುವರಾಗಿ ಆಶಿಸುತ್ತೇವೆ

ಇನ್ನೊಂದು ಮೆಟ್ಟಲು.

ದುಂಡು ಮೇಜು ಪರಿಷತ್ತಿನಲ್ಲಿ.

ಬ್ರಿಟನ್ನಿನ ಹೊಸ ಪಾರ್ಲಿಮೆಂಟು ಸಭೆಯು ಸೇರಿ, ಕನ್ಸರ್ವೇಟಿವ್ ಪಕ್ಷದ ಬಹುಮತ [illegible] ಮಂತ್ರಿಮಂಡಳಿ ಸ್ಥಾಪಿಸಲ್ಪಟ್ಟಂದಿನಿಂದ ದುಂಡು ಮೇಜು ಪರಿಷತ್ತು ಬೇಗನೆ ಅಂತ್ಯವಾಗುವದೆಂದೂ, ಅದರಿಂದ ಇಂಡಿಯದವರ ಕೋರಿಕೆ ಯೊಂದೂ ನೆರವೇರಿಸಲ್ಪಡಲಾರದೆಂದೂ ಬಲವಾದ ವರ್ತಮಾನವು ಹುಟ್ಟಿತ್ತು. ಫೆಡರಲ್ ಸ್ಟ್ರಕ್ಚರ್ ಕಮಿಟಿಯಲ್ಲಿ ಈ ವರೆಗೆ ಚರ್ಚೆ ನಡೆದಿದ್ದ ವಿಷಯಗಳನ್ನೆಲ್ಲಾ ಸದರಿ ಕಮಿಟಿಯ ಅಧ್ಯಕ್ಷರಾದ ಲಾರ್ಡ್ ಸ್ಯಾಂಕಿ ಯವರು ರಿಪೋರ್ಟು ಬರೆದು ಕಮಿಟಿಯ ಮುಂದೆ ಇಟ್ಟರು. ಬಾಕಿ ಇರುವ ವಿಷಯಗಳನ್ನು ಚರ್ಚಿಸಲು ದುಂಡು ಮೇಜು ಪರಿಷತ್ತು ಕೆಲವು ಸಮಯದ ನಂತರ ಇಂಡಿಯಾದಲ್ಲಿ ಸೇರಿಸಲ್ಪಡುವದೆಂದೂ, ಈಗಕ್ಕೆ ಲಂಡನ್ ಕಾನ್‌ಫರೆನ್ಸು ಅಂತ್ಯಗೊಳಿಸಲ್ಪಡುವದೆಂದೂ ವರ್ತಮಾನವಾಯಿತು. ಸ್ವಲ್ಪ ದಿವಸಗಳ ನಂತರ ಇನ್ನೊಂದು ತರಹದ ವಾರ್ತೆಯು ಹುಟ್ಟಿತು. ಅಲ್ಪ ಸಂಖ್ಯಾತ ಕೋಮಿನವರ ಸಮಸ್ಯೆಯನ್ನು ತೀರ್ಮಾನಿಸಲು ನೇಮಿಸಲ್ಪಟ್ಟಿದ್ದ 'ಮೈನಾರಿಟೀಸ್' ಕಮಿಟಿಯ ಪ್ರಯತ್ನಗಳು ಅಸಫಲವಾಗದ್ದರಿಂದ ರಾಜಕೀಯ ರಚನೆಯ ಚರ್ಚೆಯನ್ನು ಮುಂದರಿಸಲಾಗ ವುದಿಲ್ಲವೆಂತಲೂ, ತತ್ಕಾಲ ಪ್ರಾಂತೀಯ ಸ್ವಾತಂತ್ರ್ಯ ನೀಡಿರುವನ್ನು ಕೊಟ್ಟು ಕೆಲವು ಸಮಯದ ನಂತರ ಮಧ್ಯವರ್ತಿ ಸರ್ಕಾರದಲ್ಲಿ ಜವಾಬ್ದಾರಿಯನ್ನು ಹಿಂದೀಯರಿಗೆ ವರ್ಗಾಯಿಸುವ ಆಲೋಚನೆ ನಡೆಯುತ್ತದೆಂತಲೂ, ಈ ಬಗ್ಗೆ ಫೆಡರಲ್ ಸ್ಟ್ರಕ್ಚರ್ ಕಮಿಟಿಯು, ನಂತರ ದುಂಡು ಮೇಜು ಪರಿಷತ್ತು ಮೀಟಿಂಗುಗಳು ಈ ವಾರ ನಡೆಸಲ್ಪಟ್ಟು, ಬೇಗನೆ ಅಂತ್ಯಗೊಳಿಸಲ್ಪಡುವವೆಂದೂ ಈ ವಾರ್ತೆ ಆಗಿತ್ತು. ಇದು ದುಂಡು ಮೇಜು ಪರಿಷತ್ತಿನಿಂದ ತುಂಬಾ ಪ್ರಯೋಜನವಾಗುವುದೆಂದು ಆಶಿಸಿದ್ದವರೆಲ್ಲರ ಮನಸ್ಸು ಬಹು ಮಟ್ಟಿಗೆ ಕುಗ್ಗಿ ಹೋಯಿತು. ಇದರ ಮುಂದಿನ ಪರಿಣಾಮದ ಭಯವು ಜನರ ಮನಸ್ಸಿನಲ್ಲಿ ಕಾಡಲಾರಂಭಿಸಿತು. ರಾಜಕೀಯ ವ್ಯಕ್ತಿಗಳ [illegible] ಕಮಿಟಿಯವರು ಎಲ್ಲವೂ ನಿರಾಶೆಯಾಗಿ [illegible].

'ಮೈನಾರಿಟೀಸ್' ಕಮಿಟಿಯ ಅಪಜಯವನ್ನು ಘೋಷಿಸಿ, ಅದನ್ನು ಮುಕ್ತಾಯಗೊಳಿಸುವ ಬಗ್ಗೆ ಸದರಿ ಕಮಿಟಿಯ ಮೀಟಿಂಗೊಂದು ಈ ತಾ 14 ರಲ್ಲಿ ನಡೆಯಿತು. ಅದರ ಅಧ್ಯಕ್ಷರಾದ ಪ್ರಧಾನ ಮಂತ್ರಿ ಮಿ ಮೆಕ್ಡೊನಾಲ್ಡರವರ, ಅಲ್ಪ ಸಂಖ್ಯಾತ ಕೋಮಿನವರ ಸಮಸ್ಯೆಯನ್ನು ಬಿಡಿಸದೆ ಹೋದ ಜವಾಬ್ದಾರಿಯನ್ನು ಹಿಂದೀ ಪ್ರತಿನಿಧಿಗಳ ಮೇಲೆಯೇ ಹೊರಿಸಿ, ಇದರಿಂದ ರಾಜಕೀಯ ರಚನೆ [illegible] ಮಾಡಲು ಅಸಾಧ್ಯವೆಂದು ಮುಂತಾಗಿ ಭಾಷಣ ಮಾಡಿದರು. ಇದನ್ನು ಕೇಳಿದ ಮಹಾತ್ಮ ಗಾಂಧಿಯವರು ಬಹು ಸ್ಫೂರ್ತಿದಾಯಕವಾದ ಜವಾಬಿನ ಭಾಷಣವನ್ನು ಮಾಡಿದರು. [illegible] ಇನ್ನೊಂದು ಕಡೆ ಪ್ರಕಟಿಸಲ್ಪಟ್ಟಿದೆ. ಮೈನಾರಿಟೀಸ್ ಕಮಿಟಿಯ ಅಪಜಯಕ್ಕೆ ಹೇಗೆ ಬ್ರಿಟಿಷರೇ ಕಾರಣವೆಂತಲೂ, ಈ ಕಾರಣ ದುಂಡು ಮೇಜು ಪರಿಷತ್ತನ್ನು ಅಂತ್ಯಗೊಳಿಸಿದರೆ ಬ್ರಿಟಿಷ್ ಸರ್ಕಾರದವರು ಈ ಮೊದಲು ಕೊಟ್ಟ ತಮ್ಮ ಭಾಷೆಯನ್ನು ಕಳೆದಂತಾಗುವದೆಂತಲೂ ಪೂರ್ಣ ಸ್ವಾತಂತ್ರ್ಯ ಪಡೆಯದೆ ಇಂಡಿಯಾವು ಎಂದೂ ತೃಪ್ತಿಗೊಳ್ಳಲಾರದೆಂತಲೂ ಮಹಾತ್ಮರು ಹಿಂದೀ ಜನಾಂಗದ ದೃಢ ನಿಶ್ಚಯವನ್ನು ಸೂಚಿಸಿದರು.

ನಂತರ ಈ ಪರಿಷತ್ತು ಇನ್ನೊಂದು ಮೆಟ್ಟಲಿಗೆ ಬಂದಂತಾಗಿದೆ. ಮಹಾತ್ಮರ ಮೇಲಿನ ಭಾಷಣದ ಫಲಿತಾಂಶವಾಗಿಯೋ ಏನೋ ಫೆಡರಲ್ 'ಸ್ಟ್ರಕ್ಚರ್' ಕಮಿಟಿಯನ್ನು ಮುಕ್ತಾಯಗೊಳಿಸುವುದರ ಬದಲು ಅದನ್ನು ಮುಂದರಿಸಿಯೂ, ಬಾಕಿ ಉಳಿದ ಪ್ರಾಮುಖ್ಯ ವಿಷಯಗಳಾದ ಪರದೇಶಗಳ ಸಂಬಂಧ, ಮಧ್ಯವರ್ತಿ ಸರ್ಕಾರದಲ್ಲಿ [illegible], ಹಿಂದೂದೇಶದ ಸಾಲದ ಜವಾಬ್ದಾರಿ ಮೊದಲಾದವುಗಳನ್ನು ಕುರಿತು ಚರ್ಚೆ ನಡೆಸುವಂತೆಯೂ [illegible] ನಿಶ್ಚಯಿಸಿರುವರು. 'ತಮ್ಮ ಹಕ್ಕು ಬಾಧ್ಯತೆಗಳನ್ನು [illegible] ನಂಥ ಅಡಳಿತ ರಚನೆಗೆ ಮಾತ್ರ ತಾವು ಒಪ್ಪಿಗೆಯನ್ನು ಕೊಡುವೆವು' ಎಂಬ ಶರತ್ತಿನ ಮೇರೆ ಮುಸಲ್ಮಾನ ಪ್ರತಿನಿಧಿಗಳು ಮುಂದಿನ ಚರ್ಚೆಯಲ್ಲಿ ಭಾಗಿಗಳಾಗುತ್ತೇವೆಂದರು. ಹಾಗೆಯೇ ಈ ತಾ 17ರಂದ ಫೆಡರಲ್ ಸ್ಟ್ರಕ್ಚರ್ ಕಮಿಟಿಯಲ್ಲಿ ಸೈನ್ಯದ ವಿಷಯ ಚರ್ಚೆಯು ಪ್ರಾರಂಭವಾಯಿತು. ಅಲ್ಲಿ ಮಹಾತ್ಮರು, ಸೈನ್ಯದ ಮೇಲೆ ಸಂಪೂರ್ಣ ಅಧಿಕಾರವನ್ನು ಹಿಂದೀಯರಿಗೆ ಕೊಡದೆ ಹೋದರೆ ಅದು ಜವಾಬ್ದಾರಿ ಸರ್ಕಾರವಾಗ ವುದಿಲ್ಲವೆಂತಲೂ, ಅಂಥಾ ಜವಾಬ್ದಾರಿ ಇಲ್ಲದ ಸರ್ಕಾರಕ್ಕೆ ಕಾಂಗ್ರೆಸಿನವರೆಂದಿಗೂ ಒಪ್ಪರೆಂತಲೂ, ಮೊದಲಾಗಿ ಮತ್ತೊಂದು ಪ್ರಾಮುಖ್ಯ ಭಾಷಣ ಮಾಡಿದರು. ಆದರೆ ಮುಸಲ್ಮಾನರು ಚರ್ಚೆಯಲ್ಲಿ ಭಾಗಿಗಳಾಗದೆ ಮೌನವನ್ನು ತಾಳಿದ್ದರು. ಮುಂದೆ ಏನಾಗುವುದೋ ಎಂದು ಹೇಳಲು ಸಾಧ್ಯವಿಲ್ಲ. ಬ್ರಿಟಿಷ್ [illegible]ಗಳು ದೂರ ದೃಷ್ಟಿಯಿಂದ ಈಗ ವರ್ತಿಸದೆ ಹೋದರೆ, ತೀರ್ಮಾನದ ಪರಿಣಾಮವನ್ನು ಬೇಗನೆ ಅರಿಯಬೇಕಾಗುವುದೆಂಬುದರಲ್ಲಿ ಸಂಶಯವಿಲ್ಲ.

ಅಲ್ಪ ಸಂಖ್ಯೆಯ ಕೋಮಿನವರ ಸಮಸ್ಯೆಯ ಕಮಿಟಿಯಲ್ಲಿ

ಮಹಾತ್ಮ ಗಾಂಧಿಯವರು ಮಾಡಿದ ಭಾಷಣ

ಈ ಕಮಿಟಿಯು ಕಟ್ಟಕಡೆಗೊಂದು ತಾ 13ರಲ್ಲಿ ಪ್ರಧಾನ ಮಂತ್ರಿಯವರಾದ ಮೆಕ್ಡೊನಾಲ್ಡರ ಅಧ್ಯಕ್ಷತೆಯಲ್ಲಿ ನಡೆದಿತು. [illegible] ರಾತ್ರಿ ಅಲ್ಪ ಸಂಖ್ಯೆ ಕೋಮಿನವರು [illegible] ಒಪ್ಪಂದಕ್ಕೆ ಬಂದಿದ್ದಾರೆಂತಲೂ ಒಪ್ಪಂದದ [illegible]ನ್ನು ತನಗೆ ತಿಳಿಸಿದ್ದಾರೆಂತಲೂ, ಈ ಒಪ್ಪಂದವು ಹಿಂದೂ ಜನ ಸಂಖ್ಯೆಯ ಸುಮಾರು ಶೇಕಡ 46ರಷ್ಟಕ್ಕೆ ಪ್ರಾತಿನಿಧ್ಯ [illegible]ವೆಂತಲೂ ಮಂತ್ರಿಯವರು ಹೇಳಿದರು.

ಈ ಅಲ್ಪ ಸಂಖ್ಯೆ ಕೋಮಿನವರ ಚರ್ಚೆಯಲ್ಲಿ [illegible] ಸೋಲಬೇಕೋ, ಬೇಡವೋ ಎಂಬ ಸಂದೇಹವಿತ್ತು, [illegible] ಸಹ ನಾಟಕೀಯವಾಯಿತು, ಅಲ್ಪ ಸಂಖ್ಯಾತ [illegible] [illegible] ಸೂಕ್ಷ್ಮವಾಗಿ [illegible] ಮಹಾತ್ಮರು ಈ ಕೆಳಗಿನ ಭಾಷಣ ಮಾಡಿದರು.

'ಮಂತ್ರಿಯವರ ಮೇಲೆ ನನಗೆ ಗೌರವವಿದ್ದರೂ, [illegible] ಸಮಸ್ಯೆಯು ತೀರದ ವಿನಹ ರಾಜಕೀಯ [illegible] ರಚನೆಯ ಕಾರ್ಯ ಮಾಡಲೇ ಕೂಡದೆಂತ ಅವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಈ ಕಮಿಟಿಯ ಪ್ರಾರಂಭದಲ್ಲಿ ನಾನು ಈ ಅಭಿಪ್ರಾಯ ಕೊಟ್ಟಿರುತ್ತೇನೆ [illegible] ಸಮಸ್ಯೆಗೆ ಕಳೆದ ವರ್ಷವೂ, ಈ ವರ್ಷವೂ ಬಹಳ ಪ್ರಾಮುಖ್ಯತೆ ಕೊಟ್ಟದ್ದರಿಂದ ಎಲ್ಲಾ ಕೋಮಿನವರೂ ತಮ್ಮ ಅಭಿಪ್ರಾಯಗಳನ್ನು ಬಹಳ ಬಲವಾಗಿ ಪ್ರತಿಪಾದಿಸ ಪ್ರಾರಂಭಿಸಿದರು. ಅವರು ಹಾಗೆ ಮಾಡದಿದ್ದರೆ ಸ್ವಭಾವಕ್ಕೆ ವಿರೋಧವಾಗುತ್ತಿತ್ತು. [illegible]

[illegible]

ಅಲ್ಪ ಸಂಖ್ಯೆ ಕೋಮಿನವರ ಸಮಸ್ಯೆಯನ್ನು ತೀರಿಸುವ ಮುಖ್ಯವಾದ ಜಗಿಂದಾಗ್ಯೂ [illegible] ರಾಜಿಯಿಂದ ತೀರಿಸಬೇಕೆಂಬ ಉದ್ದೇಶದಿಂದ [illegible] ನಂಬುತ್ತೇನೆ. ಆದರೆ ಹಾಗೆ ಅದನ್ನು [illegible] ಅದಕ್ಕೆ ಅತೀ ಪ್ರಾಮುಖ್ಯತೆ ಕೊಟ್ಟದ್ದರಿಂದ [illegible]ವನ್ನೇ ಹೀಗೆ ಪ್ರಾಮುಖ್ಯತೆ ಕೊಟ್ಟದ್ದು ಕೆಡಿಸಿತು. [illegible] ಉತ್ತೇಜನ ದೊರೆತದ್ದರಿಂದ ನಮ್ಮೊಳಗೆ ರಾಜಿಯಾಗಲು ಸಾಧ್ಯವಾಗಲಿಲ್ಲ. ಆದರೆ ಮುಖ್ಯ ವಿಷಯವು [illegible] ಸಂಖ್ಯಾ ಕೋಮಿನವರ ಸಮಸ್ಯೆಯಲ್ಲ; ರಾಜಕೀಯ ರಚನೆಯೇ ಪ್ರಾಮುಖ್ಯ ವಿಷಯ.

ರೌಂಡ್ ಟೇಬಲ್ ಕಾನ್‌ಫರೆನ್ಸನ್ನು ಏರ್ಪಡಿಸಿ [illegible] [illegible] ನಮ್ಮ ಕಸುಬುಗಳನ್ನೂ, ಮನೆಗಳನ್ನೂ ಬಿಟ್ಟು 6000 ಮೈಲು ಬಂದಿದ್ದು ಬರೀ ಅಲ್ಪ ಸಂಖ್ಯೆ ಕೋಮಿನವರ ಸಮಸ್ಯೆಯನ್ನು ತೀರಿಸಲಿಕ್ಕಲ್ಲವೆಂತ ನಾನು ನಂಬುತ್ತೇನೆ. ರಾಜಕೀಯ ರಚನೆಯನ್ನು ಮಾಡಲು ಭಾಗಿಗಳಾಗಿ [illegible] ಆಹ್ವಾನಿಸಿ ಸ್ವೀಕರಿಸಿ ನಿಮ್ಮ ದ್ವೀಪವನ್ನು [illegible] ಹಿಂದೂಸ್ಥಾನದ ಸ್ವಾತಂತ್ರ್ಯದ ಅಡಳಿತಕ್ಕೆ [illegible] ರಚಿಸಿದ್ದೀವೆ ಎಂಬ ತೃಪ್ತಿಯಿಂದ [illegible] ದಕ್ಕಾಗಿ ನಮ್ಮನ್ನು ಕರೆಸುವುದಾಗಿ ನೀವು ವಾಗ್ದಾನ ಮಾಡಿದ್ದೀರಿ. ಹಾಗೆ ನಾವು ತಯಾರಿಸಿದ ರಚನೆಗೆ ಪಾರ್ಲಿಮೆಂಟಿನ ಮುಂಜೂರಾತಿ ದೊರಕುವುದು ಮಾತ್ರ ಬಾಕಿ ಉಳಿದಿದೆ ಎಂದು ಹೇಳಿದ್ದೀರಿ. ಆದರೆ ಈಗ ಅಲ್ಪ ಸಂಖ್ಯೆ ಕೋಮಿನವರ ಸಮಸ್ಯೆಯನ್ನು ತೀರಿಸಲು ಸಾಧ್ಯವಾಗದ್ದರಿಂದ ರಾಜಕೀಯ ರಚನೆಯನ್ನೇ ತಯಾರಿಸುವುದಿಲ್ಲವೆಂತಲೂ, [illegible] ಎಲ್ಲಾ ಸೂತು ತೀರಿದ ನಂತರ ಸರ್ಕಾರದ ಉದ್ದೇಶವೇನೆಂಬುದನ್ನು ತಿಳಿಸುತ್ತೇವೆಂತಲೂ ಹೇಳುತ್ತೀರಿ.

(4ನೇ ಪುಟದಲ್ಲಿ ಮುಂದುವರಿದಿದೆ)

ಹೊಸ ರೀತಿಯಲ್ಲಿ ಜೇನು ಸಾಕುವುದು.

ಕೊಡಗಿನ ಅನೇಕ ಕಡೆಗಳಲ್ಲಿ ರೈತರು ಮಡಿಕೆಗಳಲ್ಲಿ ಜೇನು ಸಾಕುವರು. ಅಮೇರಿಕಾ, ಯುರೋಪ್ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ, ಮೇಣದ ಗೂಡುಗಳನ್ನು ಒಂದರ ಪಕ್ಕದಲ್ಲೊಂದು ಕಟ್ಟಲು, ಸಾಲಾಗಿ ಚೌಕಟ್ಟುಗಳಿರುವ ಮರದ ಪೆಟ್ಟಿಗೆಗಳಲ್ಲಿ ಸಾಕುತ್ತಿರುವರು. ಇಂತಹ ಪೆಟ್ಟಿಗೆಗಳಲ್ಲಿ ಜೇನು ಸಾಕುವುದರಿಂದ ಜೇನು ತೆಗೆಯುವ ಕಾಲದಲ್ಲಿ ಹುಳವೊಂದಾದರೂ ಸಾಯುವುದಿಲ್ಲ. ಮರಿಯೂ ಹಾಳಾಗುವುದಿಲ್ಲ. ಮಡಿಕೆಗಳಲ್ಲಿ ಸಾಕುವುದಕ್ಕಿಂತ ನಾಲ್ಕೈದರಷ್ಟು ಪಾಲು ಹೆಚ್ಚು ಜೇನು ಸಿಕ್ಕುವುದು. ಜೇನೂ ಬಹು ಶುದ್ಧ, ಹೆಚ್ಚು ಖರೀದಿಗೂ ದೊರೆಯುತ್ತೆ. ಎಲ್ಲಾ ಜಾಗಗಳಲ್ಲಿಯೂ ಪೆಟ್ಟಿಗೆ ಅನುಕೂಲವಾಗಿರುವುದರಿಂದ ಈ ಸುಧಾರಿಸಿದ ರೀತಿಯನ್ನು ಕಲಿತು ಜೇನು ಸಾಕಿ ಕೊಡಗಿನ ಜನರು ಹೆಚ್ಚಿನ ಲಾಭವನ್ನು ಪಡೆಯಬಹುದು. ಜೇನಿಗೆ ಗಿರಾಕಿ ದಿನ ದಿನಕ್ಕೆ ಹೆಚ್ಚುತ್ತಿದ್ದರೂ, ಹಳೇ ರೀತಿಯಲ್ಲಿ ತೆಗೆದ ಜೇನು ಕಲ್ಮಷ ಬೆರೆತು ಶುದ್ಧವಾಗಿರುವುದು ಅಸಾಧ್ಯ. ಇದರಿಂದ ಒಳ್ಳೇ ಬೆಲೆ ದೊರಕದೆಯೂ, ವ್ಯಾಪಾರವಾಗದೆಯೂ ರೈತರು ಈ ವ್ಯವಸಾಯದಲ್ಲಿ ಉತ್ಸಾಹರಹಿತರಾಗಿದ್ದಾರೆ. ಪೆಟ್ಟಿಗೆಗಳಲ್ಲಿ ಸಾಕಲು ಹಾಗೆ ಈ ವ್ಯವಸಾಯವನ್ನು ಅಭಿವೃದ್ಧಿಗೆ ತಂದರೆ, ಶುದ್ಧವಾದ ಜೇನಿಗೆ ಪರದೇಶದ ಗಿರಾಕಿ ಹೆಚ್ಚಿ ಪ್ರತಿವರ್ಷವೂ ಸುಲಭ ಶ್ರಮದಿಂದ ಈ ಉಪ ಸಂಪಾದನೆಯು ಉತ್ಸಾಹ ಕೊಡುವ ಕಾಲ ಬಂದೇ ಬರುತ್ತೆ.

ಪೆಟ್ಟಿಗೆಯಲ್ಲಿ ಸಾಕುವುದರಿಂದ ಇರತಕ್ಕಂತಹ ಮುಖ್ಯ ಪ್ರಯೋಜನಗಳನ್ನು ಈ ಕೆಳಗೆ ಕಾಣಿಸಿವೆ.

(1) ಪೆಟ್ಟಿಗೆಯಿಂದ ಮಡಿಕೆಗಿಂತಲೂ ನಾಲ್ಕೈದರಷ್ಟು ಪಾಲು ಹೆಚ್ಚು ಜೇನು ಸಿಕ್ಕುತ್ತೆ. ಯಾಕೆಂದರೆ:—

(2) ಜೇನು ತುಂಬಿರುವ ಮೇಣದ ಗೂಡುಗಳ ಸಹಿತ ಚೌಕಟ್ಟುಗಳನ್ನು ಒಂದು ಯಂತ್ರಕ್ಕೆ ಹಾಕಿ ತಿರುಗಿಸಿದರೆ ಜೇನೆಲ್ಲಾ ಉದುರಿ ಗೂಡುಗಳೊಂದಿಷ್ಟು ಹಾಳಾಗದೆ ಉಳಿಯುವವು. ಇವುಗಳನ್ನು ಪುನಃ ನೊಣಗಳಿರುವ ಪೆಟ್ಟಿಗೆಯೊಳಗೆ ಜೋಡಿಸಿದರೆ ಆ ಗೂಡುಗಳಲ್ಲೇ ಯಥಾ ಪ್ರಕಾರ ಜೇನು ಶೇಖರಿಸಲ್ಪಡುತ್ತೆ. ಹೀಗೆ ವರ್ಷಕ್ಕೆ ಐದಾರು ಸಲ ಒಂದೇ ಗೂಡಿನಿಂದ ಜೇನನ್ನು ಉದುರಿಸಿಕೊಳ್ಳಲೂ ಬಹುದು; ಗೂಡುಗಳನ್ನು ಕಮ್ಮಿ ಪಕ್ಷ ಎರಡು ವರ್ಷಗಳ ತನಕ ಹಾಳಾಗದಂತೆ ಇಟ್ಟುಕೊಳ್ಳಲೂ ಬಹುದು.

(3) ಒಮ್ಮೆ ತಯಾರು ಮಾಡಿದ ಮೇಣದ ಗೂಡುಗಳು ಖಾಲಿಯಾಗಿ, ಹಾಳಾಗದೆ ಸಿಕ್ಕುವುದರಿಂದ ಜೇನು ನೊಣಗಳಿಗೆ ತಮ್ಮ ಬೀಡುಗಳನ್ನು ಪದೇ ಪದೇ ಕಟ್ಟುವ ಕೆಲಸವೂ ತಪ್ಪಿ, ಸಮಯವನ್ನೂ, ಶಕ್ತಿಯನ್ನೂ ಜೇನು ಶೇಖರಿಸುವುದರಲ್ಲಿ ಕಳೆಯುವವು. ಅಲ್ಲದೆ—

(4) ಐದರಿಂದ ಹತ್ತು ಪೌಂಡು ಜೇನನ್ನು ತಿಂದರೇನೇ ಗೂಡು ಕಟ್ಟಲಿಕ್ಕೆ ಬೇಕಾಗುವ ಒಂದು ಪೌಂಡು ಮೇಣವನ್ನು ತಮ್ಮ ಶರೀರದಿಂದ ತಯಾರಿಸಲಿಕ್ಕೆ ಆಗುತ್ತದೆ. ಅವರ ಗೂಡುಗಳನ್ನು ಯಂತ್ರದ ಸಹಾಯದಿಂದ ಉಳಿಸುವುದರಿಂದ ಅದಕ್ಕಾಗಿ ತಿನ್ನುವ ಜೇನೆಲ್ಲಾ ಮನುಷ್ಯನಿಗೆ ಉಳಿಯಲಾಗುತ್ತೆ.

(5) ಪೆಟ್ಟಿಗೆಯಲ್ಲಿ ಜೇನು ಕೂಡಿಡುವುದಕ್ಕೂ, ಮರಿ ಸಾಕುವುದಕ್ಕೂ ಬೇರೆ ಬೇರೆ ಅಂತಸ್ತುಗಳಿರುವುದರಿಂದ ಮರಿಗಳು, ಹಿಟ್ಟು ತುಂಬಿರುವ ಅರೆಗಳನ್ನು ಕದಲಿಸದೆ ಬಿಟ್ಟು, ಜೇನಿರುವ ಅಂತಸ್ತಿನ ಚೌಕಟ್ಟುಗಳನ್ನೇ ಪ್ರತ್ಯೇಕವಾಗಿ ತೆಗೆದುಕೊಂಡು ಜೇನನ್ನು ಉದುರಿಸಿಕೊಳ್ಳಬಹುದು.

(6) ಮರಿಗಳೂ, ಹಿಟ್ಟೂ ಇರುವ ಅರೆಗಳನ್ನು ಕದಲಿಸದಿರುವುದರಿಂದ ನೊಣಗಳ ಸಂಖ್ಯೆಯೂ ತಡೆಯಿಲ್ಲದೆ ಹೆಚ್ಚಿ, ಪೆಟ್ಟಿಗೆಯಲ್ಲಿ ತುಂಬುವುದು. ನೊಣಗಳು ಹೆಚ್ಚಿದಂತೆಲ್ಲಾ ಇತರ ಅಂತಸ್ತುಗಳನ್ನು ಜೋಡಿಸಿ ಸ್ಥಳ ಅನುಕೂಲಪಡಿಸಿ ಕೊಡಬಹುದು. ಇದರಿಂದ ಮಡಿಕೆಯಲ್ಲಿಯಂತೆ ಸ್ಥಳ ಇಕ್ಕಟ್ಟಿನಿಂದ ಮರಿ ಹಾರಿಸುವುದು ಕಮ್ಮಿಯಾಗುತ್ತೆ.

(7) ಮೇಲೆ ಹೇಳಿದಂತೆ ನೊಣಗಳ ಸಂಖ್ಯೆಯು ಹೆಚ್ಚುವುದರಿಂದ ಸಕಾಲದಲ್ಲಿ ಅಂದರೆ ಜೇನಿಳಿಯುವ ಕಾಲದಲ್ಲಿ ಇವೆಲ್ಲಾ ದುಡಿದು ತುಂಬಾ ಜೇನನ್ನು ಕೂಡಿಸಿಡುವವು.

(8) ಪೆಟ್ಟಿಗೆಯಲ್ಲಿ ಸಾಕುವುದರಿಂದ ನೊಣಗಳನ್ನು ತಿನ್ನುವ ಕಣಜ, ಇರುವೆ, ಗೊದ್ದ, ಹಲ್ಲಿ ಮತ್ತು ವಿಶೇಷವಾಗಿ ಮೇಣದ ಗೂಡುಗಳನ್ನು ತಿನ್ನುವ ಪಾತರಿಯ ಉಪದ್ರವನ್ನು ಬಹು ಮಟ್ಟಿಗೆ ಕಮ್ಮಿ ಮಾಡಿಕೊಳ್ಳಬಹುದು.

(9) ಮೇಲೆ ಹೇಳಿದ ಶತ್ರುಗಳ ಬಾಧೆಯಿಂದ ತಪ್ಪುವುದರಿಂದ ಜೇನು ನೊಣಗಳು ಪೆಟ್ಟಿಗೆಯನ್ನು ಬಿಟ್ಟು ಹೋಗುವುದಿಲ್ಲ. ವರ್ಷ ವರ್ಷವೂ ಕಾಡಿನಲ್ಲಿ ಮಡಿಕೆಗಳನಿಟ್ಟು ಹಿಡಿಯುವ ಕೆಲಸವು ತಪ್ಪಿ ಹೋಗುತ್ತೆ.

(10) ಕಾಡಿನಲ್ಲಿ ಕೊಂಬೆಗಳಲ್ಲಿ ತೂಗಿಕೊಂಡಿರುವ ಅಥವಾ ಪೊಟ್ಟರೆಗಳಲ್ಲಾಗಲಿ, ಹುತ್ತಗಳಲ್ಲಾಗಲೀ ವಾಸಿಸುವ ಜೇನು ನೊಣಗಳನ್ನು ಹಿಡಿದು ಪೆಟ್ಟಿಗೆಗೆ ಸೇರಿಸಿಕೊಳ್ಳಲೂ ಬಹುದು.

(11) ಪೆಟ್ಟಿಗೆಗಳನ್ನು ಪರೀಕ್ಷಿಸಿಕೊಂಡಿದ್ದು, ಹೊಸ ತಾಯಿಹುಳ ಹೊರಟಾಗ ಹಿಂಡನ್ನು ಎರಡಾಗಿ ವಿಂಗಡಿಸಿ ಒಂದು ಹಿಂಡನ್ನು ಮತ್ತೊಂದು ಪೆಟ್ಟಿಗೆಗೂ ಸೇರಿಸಿಕೊಳ್ಳಬಹುದು.

(12) ಕಾಡಿನಲ್ಲಿ ದೊರಕುವ ಮೇಣದ ಗೂಡುಗಳನ್ನು ಪೆಟ್ಟಿಗೆಗಳಲ್ಲಿ ಚೌಕಟ್ಟುಗಳಿಗೆ ತಗಲಿಸಿ ಜೇನು ನೊಣಗಳಿಗೆ ಕೊಡಬಹುದು.

(13) ಪೆಟ್ಟಿಗೆಯಲ್ಲಿ ಸಾಕುವುದರಿಂದ ನೊಣಗಳನ್ನು ಹೊಗೆ ಕೊಟ್ಟು ಸುಡುವ, ಮರಿಗಳನ್ನು ಹಿಂಡಿ ಬಿಸಾಡುವ ಪಾಪಕೃತ್ಯಗಳಾಗದೆ ಪ್ರೀತಿಯಿಂದ ಸಾಕಿ ಸಲಹಿ, ನಾವೂ ಉಂಡು, ಅವುಗಳಿಗೂ ಕೊಟ್ಟಂತೆ ಆಗುತ್ತೆ.

(14) ಹೊಸ ರೀತಿಯಲ್ಲಿ ಜೇನು ಸಾಕುವುದು ಕೊಡಗಿನ ಜನರಿಗೆ ರೂಢಿಯಾದರೆ, "ಇಟಾಲಿಯನ್" ಎಂಬ ವಿದೇಶಿಯ ಜೇನು ನೊಣಗಳನ್ನು ಕ್ರಮೇಣ ಇಲ್ಲಿನ ಹವಕ್ಕೆ ಒಗ್ಗಿಸಿಕೊಳ್ಳಬಹುದು. ಇವಿರುವ ಪೆಟ್ಟಿಗೆಯಿಂದ ವರ್ಷಕ್ಕೆ 30 ಸೇರಿಗಿಂತ ಹೆಚ್ಚಾಗಿ ಜೇನು ಸಿಕ್ಕುವುದರಿಂದ **ವಿಶೇಷ ಲಾಭ!**

ಈ ನವೀನವಾದ, ಶ್ರೇಷ್ಠತರವಾದ, ಲಾಭಕರವಾದ ಮತ್ತು ಪಾಪಕೃತ್ಯಗಳಿಲ್ಲದ ಜೇನು ಸಾಕುವ ವಿಧಾನವನ್ನು ಕಲಿಯಿರಿ.

ಶ್ರೀ ಶಾರದಾಶ್ರಮ,
ಪೊನ್ನಂಪೇಟೆ, ಶಾಂಭವಾನಂದ.

ಮೂಸಿಕ ಧ್ವಜ ವಂದನೆಯಲ್ಲಿ

ಪ್ರಾಂತೀಕಪದ ಹಾಗೂ ಜಯಜಯಕಾರಗಳು.

ಕಾಂಗ್ರೆಸ್ ಕಾರ್ಯಕಾರಿ ಮಂಡಲದ ಅಭಿಪ್ರಾಯ.

ಕರ್ನಾಟಕದಲ್ಲಿಯ ಎಲ್ಲಾ ಕಾಂಗ್ರೆಸ್ ಸಮಾರಂಭಗಳಲ್ಲಿ ಇದು ವರೆಗೆ 'ಕರ್ನಾಟಕಾಂಬೆ ನೀ ಧನ್ಯೆ ಧನ್ಯೆ' ಎಂಬ ಪದವನ್ನೂ, 'ಕರ್ನಾಟಕ ಮಾತಾಕೀ ಜಯ್' ಎಂಬ ಜಯಕಾರವನ್ನೂ ಉಪಯೋಗಿಸುತ್ತಾ ಬಂದಿತ್ತು. ಈ ವಿಷಯದಲ್ಲಿ ಯಾವುದೇ ಒಂದು ನಿರ್ಬಂಧನವನ್ನೂ ಅ. ಭಾ. ಕಾಂಗ್ರೆಸ್ಸಿನವರು ಹಾಕಿದ್ದಿಲ್ಲ. ಆದರೆ ಹಿಂದೂಸ್ಥಾನೀ ಸೇವಾದಲವು ಕಾಂಗ್ರೆಸ್ಸಿನ ಸಂಪೂರ್ಣ ಅಧೀನಕ್ಕೊಳಪಟ್ಟ ಕೂಡಲೆ ಹಾಗೂ ಧ್ವಜವಂದನೆ ಮುಂತಾದ ಸಮಾರಂಭಗಳ ವ್ಯವಸ್ಥೆಯನ್ನು ಕಾಂಗ್ರೆಸ್ಸಿನವರು ಹಿಂ. ಸೇ. ದಲಕ್ಕೆ ಒಪ್ಪಿಸಿದ ಕೂಡಲೇ ಅಖಿಲ ಭಾರತೀಯ ಆಜ್ಞೆಗಾಗಿ ದಲದವರು ಮಾಡಿದ ವಿಧಾನಗಳನುಸರಿಸಿ ಮೂಸಿಕ ಧ್ವಜ ವಂದನೆಯ ಕಾಲದಲ್ಲಿ ಮೇಲ್ಕಂಡ ಪ್ರಾಂತೀಕ ಪದ ಹಾಗೂ ಜಯಕಾರಗಳನ್ನು ಅನ್ನಕೂಡದೆಂದಾಯಿತು. ಆದರೆ ನಮ್ಮ ಪ್ರಾಂತ್ಯದಲ್ಲಿ ಕರ್ನಾಟಕತ್ವದ ಭಾವನೆಯು ಬಲವಾಗಿರುವುದರಿಂದ ಕೊನೆಗೆ ಕರ್ನಾಟಕವು ರಾಜ್ಯಭಾರದಲ್ಲಿ ಪ್ರತ್ಯೇಕ ಪ್ರಾಂತ್ಯವಾಗುವ ವರೆಗಾದರೂ ಈ ಪದ ಹಾಗು ಜಯಕಾರಗಳನ್ನು ಅನ್ನಗೊಡಬೇಕೆಂದು ಕಾಂಗ್ರೆಸ್ ಕಾರ್ಯಕಾರೀ ಮಂಡಲಕ್ಕೆ ವಿನಂತಿ ಮಾಡಿಕೊಳ್ಳುವ ನಿರ್ಣಯವು ೨೭-೯—೩೧ಕ್ಕೆ ಅಂಕೋಲೆಯಲ್ಲಿ ಸೇರಿದ ಕ. ಪ್ರಾಂ. ಕಾಂ. ಕಮಿಟಿಯ ಅಧಿವೇಶನದಲ್ಲಿ ಸ್ವೀಕೃತವಾಯಿತು. ಕಾಂಗ್ರೆಸ್ ಕಾರ್ಯಕಾರಿ ಮಂಡಲದವರ ನಿರ್ಣಯವು ಬರುವ ವರೆಗೆ ಅವರು ಮೊದಲು ಹೇಳಿದ ಪದ್ಧತಿಯನ್ನು ಅನುಸರಿಸಬೇಕೆಂದು ಗೊತ್ತಾಗಿತ್ತು.

ಈ ಗೊತ್ತುವಳಿಯನ್ನು ನೋಡಿ ಅ. ಭಾ. ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಪಂಡಿತ ಜವಾಹರಲಾಲರು ಸಹಾನುಭೂತಿಯ ಪತ್ರವನ್ನು ಬರೆದು ಕಾಂ. ಕಾರ್ಯಕಾರಿ ಮಂಡಲದ ನಿರ್ಣಯವು ದೊರೆಯುವ ವರೆಗೆ ನಾವು ಬೇಕಾದರೆ ಆ ಪದ ಹಾಗೂ ಜಯಜಯಕಾರಗಳನ್ನು ಉಪಯೋಗಿಸಬಹುದೆಂದು ತಿಳಿಸಿದರು. ಈ ವಿಷಯವನ್ನು ಕ. ಪ್ರಾಂ. ಕಾಂ. ಕಮಿಟಿಯವರು ಕೂಡಲೆ ಜಿ. ಕಾಂ. ಕಮಿಟಿಗಳಿಗೆ ತಿಳಿಸಿದರು. ಆದರೆ ಮುಂದೆ ಅಕ್ಟೋಬರ ೧೧ನೇ ತಾ. ದಿನ ರಾಷ್ಟ್ರೀಯ ಸಭಾಪತಿಗಳಾದ ಸರ್ದಾರ್ ವಲ್ಲಭ ಭಾಯಿಯವರಿಂದಲೂ, ೧೪ನೇ ತಾರೀಖು ದಿನ ಪುನಹ ಪಂಡಿತ ಜವಾಹರಲಾಲರಿಂದಲೂ ಈ ವಿಷಯವಾಗಿ ಪತ್ರಗಳು ಬಂದವು. ಮೂಸಿಕ ಧ್ವಜವಂದನೆಯಂಥ ಅಖಿಲ ಭಾರತೀಯ ಸಮಾರಂಭಗಳಲ್ಲಿ ಈ ಪ್ರಾಂತೀಕ ಹಾಡು ಅಥವಾ ಜಯಕಾರಗಳನ್ನು ಉಪಯೋಗಿಸುವುದು ಉಚಿತವಲ್ಲವೆಂದೂ, ಉಳಿದ ಸಮಾರಂಭಗಳಲ್ಲಿ ಅವುಗಳನ್ನು ಉಪಯೋಗಿಸಬಹುದೆಂದೂ ಕಾರಣಗಳನ್ನು ಹೇಳಿ ಆ ಪತ್ರಗಳಲ್ಲಿ ಅವರು ಬರೆದಿದ್ದರು. ಅವರು ಬರೆದ ಪತ್ರದ ಪ್ರತಿಗಳನ್ನು ಜಿ. ಕಾಂ. ಕಮಿಟಿಗಳಿಗೆ ಕಳುಹಿ ಈ ವಿಷಯವನ್ನು ಪುನಹ ಕ. ಪ್ರಾಂ. ಕಮಿಟಿಯಲ್ಲಿ ವಿಚಾರ ಮಾಡಬೇಕಾಗಬಹುದಾದ್ದರಿಂದ ತಮ್ಮ ಅಭಿಪ್ರಾಯವನ್ನು ತಿಳಿಸಲು ಅವರಿಗೆ ವಿನಂತಿ ಮಾಡಿಕೊಳ್ಳಲಾಗಿತ್ತು.

ಕೊನೆಗೆ ಕಾಂಗ್ರೆಸ್ ಕಾರ್ಯಕಾರಿ ಮಂಡಲದಲ್ಲಿ ಈ ವಿಷಯದ ವಿಚಾರವಾದ ಮೇಲೆ ಇದೇ ೬ನೇ ನವಂಬರ್ ದಿನ ಪಂ. ಜವಾಹರಲಾಲರು ಒಂದು ಪತ್ರವನ್ನು ಬರೆದಿರುವರು.

ಅದರಲ್ಲಿ ಅವರು ಹೇಳುವುದೇನೆಂದರೆ:— 'ಕಾಂಗ್ರೆಸ್ ಕಾರ್ಯಕಾರೀ ಮಂಡಲದವರು ಪ್ರಾಂತೀಕ ಪದ ಹಾಗೂ ಜಯಕಾರದ ವಿಷಯದ ಬಗ್ಗೆ ನಿಮ್ಮ ಗೊತ್ತುವಳಿಯ ಬಗ್ಗೆ ವಿಚಾರ ಮಾಡಿದರು. ಈ ವಿಷಯವಾಗಿ ಮಂಡಲದಲ್ಲಿ ಪ್ರತ್ಯೇಕವಾದ ನಿರ್ಣಯವಾಗದಿದ್ದರೂ ಮಂಡಲದ ಅಭಿಪ್ರಾಯವನ್ನು ನಿಮಗೆ ತಿಳಿಸಲು ನನಗೆ ಅಪ್ಪಣೆ ಮಾಡಿದ್ದಾರೆ. ಪ್ರಾಂತೀಕ ಹಾಡು ಹಾಗೂ ಜಯಕಾರಗಳು ಅವಶ್ಯವೆಂದು ಅವರಿಗೆ ತೋರದಿದ್ದರೂ ಅವುಗಳನ್ನು ನಿಲ್ಲಿಸಲೇಬೇಕೆಂದು ಅವರ ಅಭಿಲಾಷೆ ಇಲ್ಲ. ವಿಶೇಷತಃ ಕರ್ನಾಟಕವು ತವರು ಹಂಚಿ ಹೋದ ಪ್ರಾಂತ್ಯವಾದದ್ದರಿಂದ ಅಲ್ಲಿ ಇವಕ್ಕೆ ಸ್ವಲ್ಪ ಆಸ್ಪದ ಉಂಟೆಂದೂ ಅವರ ಅಭಿಪ್ರಾಯವಿದೆ. ಆದ್ದರಿಂದ ಮಿಕ್ಕ ಯಾವುದೇ ಸಮಾರಂಭಗಳಲ್ಲಿ ನೀವು ಪ್ರಾಂತೀಕ ಹಾಗೂ ಜಯಕಾರ ಅನ್ನಬಹುದು. ಆದರೆ ಯಾವುದೊಂದು ಸಮಾರಂಭವು ಅಖಿಲ ಭಾರತೀಯ ಸಮಾರಂಭವೆಂದು ನಿರ್ದೇಶಿಸಲ್ಪಟ್ಟರೆ ಹಾಗೂ ಆ ಸಮಾರಂಭಕ್ಕಾಗಿ ಕೆಲವೊಂದು ಕಾರ್ಯಕ್ರಮವು ವಿಧಿಸಲಾಗಿದ್ದರೆ ಆ ಕಾರ್ಯಕ್ರಮವನ್ನು ಮಾತ್ರ ದೇಶದಲ್ಲಿ ಎಲ್ಲಿಯೂ ಬದಲು ಮಾಡತಕ್ಕದ್ದಲ್ಲ. ಮೂಸಿಕ ಧ್ವಜ ವಂದನೆಯು ಇಂಥಾ ಅಖಿಲ ಭಾರತೀಯ ಸಮಾರಂಭವಾದ್ದರಿಂದ ಆ ಸಮಯದಲ್ಲಿ ಎಲ್ಲ ಸ್ಥಳಗಳಲ್ಲಿಯೂ ಒಂದೇ ಕಾರ್ಯಕ್ರಮವಿರಬೇಕು. ಈ ಸಮಾರಂಭವು ಕೇವಲ ಕೆಲವು ಮಿನಿಟುಗಳ ವರೆಗೆ ನಡೆಯುತ್ತದೆ. ಹಾಗೂ ಇಷ್ಟು ಸ್ವಲ್ಪ ಅವಧಿಯ ವರೆಗೆ ಕೂಡ ನಾವು ದೇಶದಲ್ಲೆಲ್ಲ ಒಂದೇ ಪದ್ಧತಿಯನ್ನನುಸರಿಸದಿದ್ದರೆ ಅದು ನಮ್ಮ ರಾಷ್ಟ್ರೀಯತ್ವಕ್ಕೆ ಕುಂದಾಗದೆ ಇರದು. ಆದ್ದರಿಂದ ಈ ಮೂಸಿಕ ಧ್ವಜ ವಂದನೆಯ ಕಾಲಕ್ಕೆ ನೀವು ನಿಮ್ಮ ಪ್ರಾಂತೀಕ ಹಾಡು ಹಾಗೂ ಜಯಕಾರಗಳನ್ನು ಅನ್ನಕೂಡದು. ಈ ಸಮಾರಂಭದಲ್ಲಿ ನಿಮ್ಮ ಪ್ರಾಂತೀಯ ಭಾವನೆ ಇರಕೂಡದು.

'ಪ್ರಾಂತೀಕ ಭಾಷೆಯಲ್ಲಿಯೇ ಧ್ವಜವಂದನೆಯ ಮುಂತಾದ ಹಾಡುಗಳನ್ನು ನೀವು ಬೇಕಾದರೆ ಹಾಡಬಹುದೆಂದು ಕಾರ್ಯಕಾರೀ ಮಂಡಲದ ಅಭಿಪ್ರಾಯವಿದೆ. ಅದರಂತೆ 'ವಂದೆ ಮಾತರಂ' ಮತ್ತು 'ಝಂಡಾ ಊಂಚಾ' ಹಾಡುಗಳನ್ನು ನೀವು ನಿಮ್ಮ ಭಾಷೆಯಲ್ಲಿಯೇ ರಚಿಸಿ ಅಂದರೆ ಅಡ್ಡಿ ಇಲ್ಲ. ಆದರೆ ರಾಗ ತಾಳಗಳು ಮಾತ್ರ ಈಗಿದ್ದ ಆ ರಾಷ್ಟ್ರ ಪದ್ಯಗಳಲ್ಲಿ ಇರುವಂತೆಯೇ ಇರತಕ್ಕದ್ದು. ಅಖಿಲ ಭಾರತೀಯ ಸಮಾರಂಭದಲ್ಲಿ ಪ್ರಾಂತ್ಯದ ಗೌರವಕ್ಕೆ ಸ್ಥಾನವಿಲ್ಲವೆಂದೇ ಕಾರ್ಯಕಾರಿ ಮಂಡಲದ ಅಭಿಪ್ರಾಯವು"

ಈ ವಿಷಯದ ವಿಚಾರವನ್ನಾದರೂ ಇದೇ ೨೯ನೇ ತಾ.ಗೆ ಸೇರುವ ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಕಾರಿ ಮಂಡಲದವರು ಮಾಡುವರು.

ರಾ. ಶ್ರೀ. ಮುಕ್ತೇಶ್ವರ,
ಧಾರವಾಡ, ಪ್ರಧಾನ ಕಾರ್ಯದರ್ಶಿ,
೧೧—೧೧—೩೧, ಕ. ಪ್ರಾಂ. ಕಾಂ. ಕಮಿಟಿ.

ಮೂಲ ತತ್ವಗಳು.

('ಯಂಗ್ ಇಂಡಿಯಾ' ದಿಂದ)

ಕಳೆದ ಕೆಲವು ದಿವಸಗಳಲ್ಲಿ ಮಹಾತ್ಮ ಗಾಂಧಿಯವರು ಈಗಿನ ಎಲ್ಲಾ ಪ್ರಾಮುಖ್ಯ ವಿಷಯಗಳನ್ನು ಕುರಿತು ಲಂಡನ್ನಿನ ಇತರ ಬೇರೆ ಸ್ಥಳಗಳ ಒಂದಲ್ಲ ಒಂದು ಮೀಟಿಂಗಿನಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು. ಅವರು ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ ಕೊಟ್ಟ ಅಭಿಪ್ರಾಯವನ್ನು ಅವರ ಮಾತಿನಲ್ಲಿಯೇ ಇಲ್ಲಿ ಕೊಡಲಾಗಿದೆ. ಇದನ್ನು ಅವರು ಬಲವಾಗಿ ಹಿಡಿದು ಯಾವ ಸಂದರ್ಭದಲ್ಲೂ ಒಂದಿಷ್ಟು ಹಿಂಜರಿಯಲಾರದ ತತ್ವವೆಂದು ಭಾವಿಸಿಕೊಳ್ಳಬಹುದು.

ಪ್ರಶ್ನೆ—ಬ್ರಿಟಿಷರು ಹಿಂದೂಸ್ಥಾನವನ್ನು ಬಿಟ್ಟು ಹೋದರೆ ಇಂತಹದ ಹಲವು ಕೋಮುಗಳು ತಮ್ಮ ತಮ್ಮೊಳಗೆ ಜೋರಾಗಿ ಬಡಿದಾಡಿಕೊಳ್ಳುವ ಭಯವು ನಿಮಗೆ ತೋರುವುದಿಲ್ಲವೇ?

ಉತ್ತರ—ಬ್ರಿಟಿಷ್ ಆಡಳಿತವನ್ನು ನಾನು ಒಂದು ಕೋಲಿಗೆ ಹೋಲಿಸಿದ್ದೇನೆ ಮತ್ತು ಆ ಕೋಲನ್ನು ತೆಗೆದು ಬಿಟ್ಟಾಕ್ಷಣ ವಿಭಾಗಿಸಲ್ಪಟ್ಟ ಭಾಗಗಳು ಒಂದಾಗುವವು. ಆದರೆ ನಾವು ಹೊಡೆದಾಡಿಕೊಳ್ಳುತ್ತಾ ಇದ್ದರೂ ಅದು ಅಸ್ವಾಭಾವಿಕವೆಂದು ನಾನು ಯೋಚಿಸುತ್ತೇನೆ. ಕಾವಲನ್ನು ಕಾಯುವವನು ಕಡಕು ಮನಸ್ಸಿನವನಾಗಿ ಪೆಟ್ಟಿಲ್ಲದಿದ್ದರೆ ಅಷ್ಟೇ ಕಟ್ಟುವನು. ಆದುದರಿಂದ ನಾವು ಒಬ್ಬರನ್ನೊಬ್ಬರು ಕುತ್ತಿಗೆ ಹಿಸುಕುವುದನ್ನು ನಮ್ಮ ಮೇಲೆ ಬಲಾತ್ಕಾರದಿಂದ ನಡೆಸುತ್ತಿರುವ ಪರದೇಶೀ ಆಡಳಿತವು ಮಾತ್ರ ತಡೆಯುತ್ತಿದೆಯೆಂಬ ಈ ಆಡಳಿತವನ್ನು ಎಷ್ಟು ಬೇಗನೆ ಹೋಗಲಾಡಿಸಿದರೆ ಅಷ್ಟು ಒಳ್ಳೇಯದು. ಕೆಲವು ಸಮಯದ ವರೆಗೆ ನಾವು ಜಗಳವಾಡಬೇಕಾಗುವುದು, ಆದರೆ ಕಡೇಗೆ ನಾವು ಚೆನ್ನಾಗಿ ಒಗ್ಗಟ್ಟಾಗುವೆವು.

ಪ್ರ. ದುಂಡು ಮೇಜು ಪರಿಷತ್ತಿನಲ್ಲಿ ಜನರ ಚುನಾಯಿತ ಪ್ರತಿನಿಧಿಗಳಿದ್ದರೆ ನೀವೆಲ್ಲರೂ ಕೂಡಲೆ ಒಗ್ಗಟ್ಟಾಗುತ್ತಿದ್ದಿರೆಂದು ನಿಮಗೆ ನಂಬಿಗೆ ಇದೆಯೋ?

ಉ. ನನಗೆ ಸಂಪೂರ್ಣ ನಂಬಿಗೆ ಇದೆ. ಆಗ ನಾವು ಬಹುಮತದ ತೀರ್ಮಾನದಂತೆ ನಡೆಯಬೇಕಿತ್ತು. ಅದು ಡೆಲಿಗೇಟರುಗಳ ತಪ್ಪಲ್ಲ; ಅವರಿಗೆ ಜವಾಬ್ದಾರಿ ಇಲ್ಲದಿರುವದರಿಂದಾಗಿದೆ. ಇವರೇ ಚುನಾಯಿತರಾದ ಪಕ್ಷ ಬೇರೆ ರೀತಿಯಲ್ಲಿ ವರ್ತಿಸುವರು.

ಮಹಾತ್ಮ ಗಾಂಧಿಯವರು ಮಾಡಿದ ಭಾಷಣ.

(2ನೇ ಪುಟದಿಂದ ಮುಂದುವರಿದುದು)

ಈ ತರಹದಲ್ಲಿ ಎಷ್ಟೋ ಗದ್ದಲದಿಂದ ತುಂಬಾ ಜನರ ಮನಸ್ಸಿನಲ್ಲಿ ಎಷ್ಟೋ ಆಶೆಯನ್ನು ಹುಟ್ಟಿಸಿ ಕೂಡಿಸಿದ ರೌಂಡ್ ಟೇಬಲ್ ಕಾನ್ಫರೆನ್ಸ್ ಈ ರೀತಿ ಅಖೈರಾಗುವುದು ನಾಚಿಕೆಗೇಡೇ ಸರಿ ಎಂತ ನನಗೆ ತೋರುತ್ತದೆ.

ಅಲ್ಪ ಸಂಖ್ಯೆ ಕೋಮಿನವರು ತಮ್ಮೊಳಗೆ ಮಾಡಿಕೊಂಡ ಒಪ್ಪಂದದ ಸಂಬಂಧವಾಗಿ ನನಗೆ ಸರ್ ಹೆಚ್ ಕಾರ್‌ರವರು ಕೊಟ್ಟ ಶ್ಲಾಘನೆಗೆ ಅವರಿಗೆ ನಾನು ವಂದಿಸುತ್ತೇನೆ. ಆದರೆ ಅಲ್ಪ ಸಂಖ್ಯೆ ಕೋಮಿನವರು ತಮ್ಮೊಳಗೆ ಮಾಡಿಕೊಂಡ ಒಪ್ಪಂದಕ್ಕೆ ಹಾಗೆ ಮಾಡಿಕೊಂಡವರ ಮನಸ್ಸಿನಲ್ಲಿ ಉಂಟಾಗಿರುವ ತೃಪ್ತಿಯನ್ನು ನಾನು ಕೆಡಿಸಬೇಕೆಂತ ಇಚ್ಛೆ ಪಡುವುದಿಲ್ಲ. ಆದರೆ ಅವರ ತೃಪ್ತಿ ಹೇಗಿದೆಯೆಂದರೆ ಸತ್ತ ಮೃಗದ ದೇಹದ ಮುಂದೆ ಕಾದು ಕೂತಿರುವವರಂತೆ ಇದೆ.

ಬ್ರಿಟಿಷ್ ಸರ್ಕಾರಕ್ಕೂ, ಅಲ್ಪ ಸಂಖ್ಯೆ ಕೋಮಿನವರ ಪ್ರತಿನಿಧಿಗಳೆನಿಸಿಕೊಂಡವರಿಗೂ, ಪ್ರಪಂಚಕ್ಕೂ ಹಿಂದೂಸ್ಥಾನದ ಪ್ರಮುಖ ರಾಜಕೀಯ ಸಂಸ್ಥೆಯ ಪ್ರತಿನಿಧಿಯಾಗಿ ನಾನು ಏನು ತಿಳಿಸಬೇಕಾಗಿದೆಯೆಂದರೆ ಇವರು ಮಾಡಿಕೊಂಡಿರುವ ಒಪ್ಪಂದವು ಪ್ರಜಾ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಮಾಡಿದ್ದಲ್ಲ. ಅಳರಸರ ಸಂಗಡ ಅಧಿಕಾರವನ್ನು ಹಂಚಿಕೊಳ್ಳಲು ಮಾಡಿಕೊಂಡ ಏರ್ಪಾಡಾಗಿದೆಯೆಂತ ಹೇಳಬೇಕಾಗಿದೆ. ಅದೇ ಅವರ ಉದ್ದೇಶವಾಗಿದೆ. ಅದೇ ಉದ್ದೇಶವಾಗಿದ್ದರೆ ಅವರಿಗೆ ಒಳ್ಳೆಯದಾಗಲಿ ಎಂತ ಹರಸಿ, ಕಾಂಗ್ರೆಸು ಅದರಿಂದ ಅಲಕ್ಷ್ಯಾಗಿರುತ್ತದೆ. ಸ್ವಾತಂತ್ರ್ಯದ ಮತ್ತು ಪ್ರಜಾ ಜವಾಬ್ದಾರಿ ಆಡಳಿತ ಕ್ರಮದ ಬಲವಾದ ಮರ ಬೆಳೆಯಲು ಎಡೆ ಇಲ್ಲದ ರಚನೆಗೆ ಒತ್ತಾಸೆ ಕೊಡುವ ಬದಲು ಕಾಂಗ್ರೆಸು ಎಷ್ಟು ವರ್ಷಗಳ ವರೆಗಾದರೂ ಸಹ ಕಾಡಿನಲ್ಲಿ ಅಲೆದಾಡುವುದೇ ಲೇಸೆಂತ ಭಾವಿಸುತ್ತದೆ.

ಸರ್ ಹೆಚ್. ಕಾರ್‌ರವರು ತಾವು ಮಾಡಿರುವ ರಚನೆಯು ಹಂಗಾಮಿಯಾಗಿದೆಯೆಂತಲೂ, ಇದರಿಂದ ರಾಷ್ಟ್ರೀಯ ತತ್ವಕ್ಕೆ ಏನೂ ಕೆಡುಕಿಲ್ಲವೆಂತಲೂ, ಹತ್ತು ವರ್ಷಗಳ ನಂತರ ನಾವೆಲ್ಲರೂ ಅನ್ಯೋನ್ಯ ಮಾತಾಡುತ್ತಾ ಒಗ್ಗಟ್ಟಾಗುತ್ತೇವೆಂತಲೂ ಹೇಳಿದ್ದು ಕೇಳಿ ಬಹಳ ಆಶ್ಚರ್ಯವಾಯಿತು. ಆದರೆ ನನ್ನ ರಾಜಕೀಯ ಅನುಭವವು ಇದಕ್ಕೆ ವಿರೋಧವಾಗಿದೆ.

ಈ ಪ್ರಜಾ ಜವಾಬ್ದಾರಿ ಆಡಳಿತ ಪದ್ಧತಿಯನ್ನು ಎಂದೇ ಆದರೂ ಸ್ಥಾಪನೆ ಮಾಡುವಾಗ ಶುಭ ಸೂಚನೆಗಳಿಂದ ಸ್ಥಾಪಿಸಬೇಕಾದರೆ ಅದನ್ನು ಜೀವ ಇದ್ದಂತೆ ಕುಯ್ಯುವ ಈ ಏರ್ಪಾಡಿಗೆ ಒಳಗಾಗುವಂತೆ ಮಾಡಬೇಡಿ. ಅಂಥಾ ನೋವನ್ನು ಯಾವ ಸರ್ಕಾರಕ್ಕೇ ಆದರೂ ತಡೆಕೊಳ್ಳುವುದು ಸಾಧ್ಯವಾಗಲಾರದು.

ಈ ರಚನೆಗೆ ತಿಪಿರ ಒಂದು ಇದೆ. ಮಂತ್ರಿಯವರೇ ಈ ರಚನೆಗೆ ಶೇಕಡ 46ರಷ್ಟು ಅಂದರೆ ಸುಮಾರು 11½ ಕೋಟಿ ಜನಾಂಗಕ್ಕೆ ಒಪ್ಪಿಗೆಯಾಯಿತೆಂತ ಭಾವಿಸಿಕೊಂಡಂತೆ ಇಲ್ಲಿ ಹೇಳಿದ್ದು ಬಹಳ ಆಶ್ಚರ್ಯಕರ. ನೀವು ಹೇಳಿದ ಸಂಖ್ಯೆಯು ತಪ್ಪೆಂಬುದಕ್ಕೆ ಒಂದು ಪ್ರತ್ಯಕ್ಷ ರುಜುವಾತು ಇದೆ. ಏನೆಂದರೆ, ಹಿಂದೀ ಜನಾಂಗದಲ್ಲಿ ಅರ್ಧ ಹೆಂಗಸರು. ಇವರ ಪರವಾಗಿ ಇರುವ ಪ್ರತಿನಿಧಿಗಳು ತಮಗೆ ಕೋಮುವಾರು ಚುನಾವಣೆ ಬೇಡವೆಂತ ಹೇಳಿದರು. ಹಾಗೆಂದ ಮೇಲೆ ನಿಮ್ಮ ಶೇಕಡ 46 ಎಲ್ಲಿ ಉಳಿಯಿತು? ಅದು ಹಾಗಿರಲಿ, ಕಾಂಗ್ರೆಸ್ ಯಾಕೂ ಬೇಡದ ಸಂಸ್ಥೆಯಾಗಿರಬಹುದು. ಆದರೆ ಅದು ಹಿಂದೂಸ್ಥಾನದ ಒಟ್ಟು ಜನಾಂಗದ ಶೇಕಡ 85 ಯಾ 95 ಭಾಗದ ಪ್ರತಿನಿಧಿಯಾಗಿದೆ ಎಂತ ಧೈರ್ಯವಾಗಿ ಹೇಳಬಲ್ಲೆನು.

ಕಾಂಗ್ರೆಸು ಕೃಷಿಕರೆನಿಸಿಕೊಂಡ ಜನರ ಪ್ರತಿನಿಧಿಯಾಗಿದೆ. ಸರಕಾರವು ಈಗ ಆಜಮಾಯಿಸಿದರೂ ನಾನು ಹೇಳಿದ್ದು ಸರಿಯೆಂತ ನಿದರ್ಶಿಸಲು ತಯಾರಿದ್ದೇನೆ. ಕಾಂಗ್ರೆಸಿನ ಸದಸ್ಯರ ಪಟ್ಟಿಯನ್ನಾಗಲೀ ಕಳೆದ ವರ್ಷದ ಜೈಲ್‌ವಾಸಿಗಳ ಪಟ್ಟಿಯನ್ನಾಗಲೀ ನೋಡಿದರೆ ಎಷ್ಟು ಸಹಸ್ರ ಮುಸಲ್ಮಾನರು ಕಾಂಗ್ರೆಸಿನಲ್ಲಿದ್ದಾರೆ, ಕಾಂಗ್ರೆಸಿಗಾಗಿ ಜೈಲಿಗೆ ಹೋಗಿದ್ದಾರೆ ಎಂತ ತಿಳಿದೀತು. ಸಾವಿರಾರು ಅಸ್ಪೃಶ್ಯರು ಕಾಂಗ್ರೆಸ್ ಸದಸ್ಯರಾಗಿದ್ದಾರೆ, ಎಷ್ಟೋ ಕ್ರಿಸ್ತಿಯನರಿದ್ದಾರೆ.

ಕಾಂಗ್ರೆಸಿನ ಪಟ್ಟಿಯಲ್ಲಿ ಸೇರದೆ ಇರುವ ಯಾವುದಾದರೂ ಜಾತಿ ಇದೆಯೋ ಎಂಬ ಸಂಶಯವು ನನಗೆ ಇದೆ. ಎಷ್ಟೋ ದೊಡ್ಡ ಜಮೀನ್‌ದಾರರೂ, ಮಿಲ್ ಮಾಲೀಕರೂ, ಲಕ್ಷ ಪತಿಗಳೂ ಕಾಂಗ್ರೆಸ್ಸಿನಲ್ಲಿದ್ದಾರೆ. ಆದರೆ ಇವರೆಲ್ಲಾ ಕಾಂಗ್ರೆಸಿಗೆ ನಿಧಾನವಾಗಿ ಬರುತ್ತಿದ್ದಾರೆ. ಆದರೂ ಕಾಂಗ್ರೆಸು ಅವರ ಸೇವೆ ಮಾಡಲು ಪ್ರಯತ್ನಿಸುತ್ತಲಿದೆ. ಕಾಂಗ್ರೆಸು ಕೂಲಿಕಾರರ ಪ್ರತಿನಿಧಿಯೆಂತ ಸಂಶಯವಿಲ್ಲದೆ ಹೇಳಬಹುದಷ್ಟೆ. ಆದ್ದರಿಂದ ಸರ್ ಕಾರರವರ ರಚನೆಯು 11½ ಕೋಟಿ ಜನರಿಗೆ ಒಪ್ಪಿಗೆಯಾಗಿದೆಯೆಂತ ಹೇಳುವುದನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ಹಿಂದೂ ಮುಸ್ಲಿಮ್ ಸಮಸ್ಯೆಯ ಸಂಬಂಧವಾಗಿ ಕಾಂಗ್ರೆಸ್ ತನ್ನ ಸಲಹೆಯನ್ನು ಕೊಟ್ಟಿದೆ. ಅದೇ ನಡೆಯಲು ಶಕ್ಯವಿರುವಂಥಾದ್ದೆಂತ ನನ್ನ ಭಾವನೆ. ಆದರೆ ಅದು ಇಲ್ಲಿ ನೆರೆದ ಕೋಮುವಾರು ಪ್ರತಿನಿಧಿಗಳಿಗೆ ಅಂಗೀಕಾರವಾಗಲಿಲ್ಲವೆಂತ ಒಪ್ಪುತ್ತೇನೆ. ಆದರೆ ಅದೇ ಕೋಮಿನ ಪ್ರತಿನಿಧಿಗಳಿಗೆ ಹಿಂದೂಸ್ಥಾನದಲ್ಲಿ ಒಪ್ಪಿಗೆಯಾಗಿದೆ. ಆ ರಚನೆಯು ಒಬ್ಬನ ತಲೆಯಿಂದ ಬಂದದ್ದಲ್ಲ. ಎಲ್ಲಾ ಮುಖ್ಯ ಕೋಮಿನ ಪ್ರತಿನಿಧಿಗಳಿಂದ ತಯಾರಿಸಲ್ಪಟ್ಟದ್ದು. ನಿಷ್ಪಕ್ಷ ಪಂಚಾಯಿತಿಗೂ ಕಾಂಗ್ರೆಸು ಒಪ್ಪಿಗೆ ಕೊಟ್ಟಿದೆ. ಆದರೆ ಇದು ಯಾವುದೂ ಒಪ್ಪಿಗೆಯಾಗದಿದ್ದರೆ ಮತ್ತು ಯಾವ ರಾಜಕೀಯ ರಚನೆ ತಯಾರಿಸಬೇಕಾದರೂ ಇದು ಮುಂದಾಗಿ ತೀರ್ಮಾನಕ್ಕೆ ಬರಬೇಕೆಂತಾದರೆ ಪ್ರಜಾ ಜವಾಬ್ದಾರಿ ಸರಕಾರವಿಲ್ಲದಿರುವುದೇ ಮೇಲು.

ಹಿಂದೂ, ಮುಸಲ್ಮಾನ್, ಸಿಕ್ಖ್ ಈ ಮೂರು ಕೋಮಿನವರಿಗೆ ಒಪ್ಪಿಗೆಯಾಗುವ ಯಾವ ಏರ್ಪಾಡಿಗಾದರೂ ಕಾಂಗ್ರೆಸ್ ಒಪ್ಪುತ್ತದೆ. ಆದರೆ ಇತರ ಚಿಲ್ಲರೆ ಕೋಮಿನವರಿಗೆ ಪ್ರತ್ಯೇಕ ಚುನಾವಣೆಗೆ ಕಾಂಗ್ರೆಸ್ ಎಂದೂ ಒಪ್ಪುವುದಿಲ್ಲ. ಮೂಲ ಹಕ್ಕುಗಳನ್ನು ಕಾದಿಡುವ ಶರತ್ತಿಗೆ ಕಾಂಗ್ರೆಸು ಒಪ್ಪುತ್ತದೆ. ಎಲ್ಲರೂ ಓಟರುಗಳಾಗಲೂ ಒಪ್ಪುತ್ತದೆ. ಸರ್ ಕಾರ್‌ರವರ ರಚನೆಯು ಪ್ರಜಾಜವಾಬ್ದಾರಿ ಆಡಳಿತಕ್ಕೂ, ರಾಷ್ಟ್ರೀಯತ್ವಕ್ಕೂ, ವಿರೋಧವಾಗಿದೆ. ಕೌನ್ಸಿಲುಗಳಲ್ಲಿ ಬಿಸಿಬಿಸಿ ಯೂರೋಪಿಯನ್ ಇರಬೇಕಾದರೆ ಯೂರೋಪಿಯನರಿಂದಲೇ ಚುನಾಯಿತನಾಗಬೇಕಾಗಿದ್ದರೆ ಹಿಂದೂಸ್ಥಾನಕ್ಕೆ ದೇವರೇ ಗತಿ. ಒಟ್ಟು ಹಿಂದೂಸ್ಥಾನದ ಸೇವೆಯನ್ನು ಮಾಡುವ ಯೂರೋಪಿಯನನು ಒಟ್ಟು ಜನರಿಂದ ಚುನಾಯಿತನಾಗಬೇಕು, ಯೂರೋಪಿಯನರಿಂದ ಚುನಾಯಿತನಾದವನು ಯೂರೋಪಿಯನರ ಕ್ಷೇಮ ಮಾತ್ರ ನೋಡಿಯಾನು. ಈ ರೀತಿ ಕೋಮುವಾರು ಎಳೆದಾಟದಲ್ಲಿ ಶೇಕಡ 85 ರಷ್ಟು ಇರುವ ಕೃಷಿಕರ ಗತಿಯೇನು?

ನಮಗೆ ನಿಜವಾದ ಸ್ವಾತಂತ್ರ್ಯವಿರಬೇಕಾದರೆ ಜನಸೇವೆ ಮಾಡಲು ತಯಾರಿರುವ ಪ್ರತಿಯೊಬ್ಬನೂ ಸಮುದಾಯದಿಂದ ಚುನಾಯಿತನಾಗಲು ತಯಾರಿರಬೇಕು. ಕಾಂಗ್ರೆಸು ಪ್ರಾಯಬಂದ ಪ್ರತಿಯೊಬ್ಬ ಗಂಡಸಿಗೂ, ಹೆಂಗಸಿಗೂ ಓಟು ಇರಬೇಕೆಂತ ಹೇಳಿದೆ. ಅದಕ್ಕಿಂತ ಇನ್ನೇನು?

ಅಸ್ಪೃಶ್ಯರ ವಿಷಯ ಇನ್ನೊಂದು ಮಾತು. ಬೇರೆ ಅಲ್ಪ ಸಂಖ್ಯಾತರ ವಾದವೇನೋ ತಿಳಿಯುತ್ತದೆ. ಆದರೆ ಅಸ್ಪೃಶ್ಯರೂ ಪ್ರತ್ಯೇಕ ಚುನಾವಣೆ ಕೇಳುವುದು ಬಹಳ ನೋವಿನ ಸಂಗತಿ. ಇದು ಅಂಗೀಕಾರವಾದರೆ ಇವರು ಎಂದೆಂದಿಗೂ ದೂರವಾಗಿರಬೇಕಾದೀತು. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಪಡೆಯಲಿಕ್ಕಾಗದಿದ್ದರೂ ಅಸ್ಪೃಶ್ಯರ ಕ್ಷೇಮವನ್ನು ಕಳಕೊಳ್ಳಲಾರೆನು. ನಾನು ನನ್ನ ದೇಹದಲ್ಲೇ ಅಸ್ಪೃಶ್ಯರ ಸಮುದಾಯದ ಪ್ರತಿನಿಧಿಯಾಗಿದ್ದೇನೆ. ಕಾಂಗ್ರೆಸಿನ ಪರವಾಗಿ ಮಾತ್ರವಲ್ಲ. ನನ್ನ ಪರವಾಗಿಯೂ ನಾನು ಹೇಳುವುದೇನೆಂದರೆ, ಈಗ ಅಸ್ಪೃಶ್ಯರ ಓಟ್ ತೆಗೆದರೆ ನಾನು ಒಂದನೇ ನಿಂತೇನು. ಜಾತಿ ಹಿಂದುಗಳೆನಿಸಿಕೊಂಡವರ ನಾಚಿಕೆಯ ಕುರುಹಾದ ಅಸ್ಪೃಶ್ಯತೆಯು ಎಂದೆಂದೂ ಉಳಿಯಲು ಪ್ರತ್ಯೇಕ ಚುನಾವಣೆಯು ಸಹಾಯಕವಾಗುತ್ತದೆಯೆಂತ ನಾನು ಹಿಂದೂಸ್ಥಾನದ ಉದ್ದಗಲ ಬೋಧಿಸಿಯೇನು. ಈ ಕೊರತೆಯನ್ನು ಹೋಗಲಾಡಿಸಲು ಟೊಂಕ ಕಟ್ಟಿದ ಹಿಂದೂ ಸುಧಾರಕರು ಅನೇಕರಿದ್ದಾರೆಂತ ಪ್ರಪಂಚವು ತಿಳಿದಿರಲಿ.

ಅಸ್ಪೃಶ್ಯರು ಬೇರೆ ತರಗತಿಯಾಗಿ ವಿಭಾಗಿಸಲ್ಪಡಲು ನಾವು ಒಪ್ಪುವದಿಲ್ಲ. ಸಿಖ್ಖರಿಗೆ ಬೇಕಾದರೆ ಬೇರೆ ಚುನಾವಣೆಯು ಶಾಶ್ವತವಾಗಿರಲಿ, ಮುಸಲ್ಮಾನರಿಗಿರಲಿ. ಯೂರೋಪಿಯನರಿಗಿರಲಿ, ಆದರೆ ಅಸ್ಪೃಶ್ಯರು ಎಂದೆಂದೂ ಅಸ್ಪೃಶ್ಯರಾಗಿಯೇ ಇರಬೇಕೋ? ಹಿಂದೂ ಜಾತಿಯೇ ನಾಶವಾದರೂ ಚಿಂತೆ ಇಲ್ಲ, ಅಸ್ಪೃಶ್ಯತೆ ಇರಕೂಡದು.

ಡಾಕ್ಟರ್ ಅಂಬೇಡ್ಕರರ ಮೇಲೆ ನನಗೆ ತುಂಬಾ ಗೌರವ ಇದೆ. ಅಸ್ಪೃಶ್ಯರ ಉದ್ಧಾರದ ಮೇಲೆ ಅವರಿಗೆ ಅಭಿಮಾನವಿರಬಹುದು, ಶಕ್ತಿ ಇರಬಹುದು. ಅವರು ಜಾತಿ ಹಿಂದುಗಳ ಕ್ರೂರ ಕೃತ್ಯಕ್ಕೆ ಒಳಗಾಗಿ ಪಟ್ಟ ಕಷ್ಟದಿಂದ ಅವರ ನಿರ್ಣಯ ಶಕ್ತಿಯು ಕುಂದಿ ಹೋಗಿದೆ. ಅಸ್ಪೃಶ್ಯತಾ ನಿವಾರಣೆಯು ನನ್ನ ಜೀವದಷ್ಟೇ ನನಗೆ ಪ್ರಿಯವಾದ ವಿಷಯ. ಆದ್ದರಿಂದ ಅಸ್ಪೃಶ್ಯತಾ ನಿವಾರಣೆಗೆ ಸಹಾಯವಾಗುವ ವಿಷಯವನ್ನು ನಾನು ಹೇಳದಿದ್ದರೆ ನಾನು ಅಪ್ರಮಾಣಿಕನಾದೇನು. ಒಂದು ರಾಜ್ಯಕ್ಕಾಗಿಯಾಗಲೀ, ಅಥವಾ ಒಟ್ಟು ಭೂಮಂಡಲಕ್ಕಾಗಿಯೇ ಆದರೂ ಅವರ ಕ್ಷೇಮವನ್ನು ನಾನು ಬಿಟ್ಟು ಕೊಡಲಾರೆನು. ನಾನು ಅದರ ಪೂರಾ ಜವಾಬ್ದಾರಿಯನ್ನು [illegible] ಮಾಡುತ್ತೇನೆ. ಹಿಂದೂಸ್ಥಾನದ ಒಟ್ಟು ಅಸ್ಪೃಶ್ಯರ ಪರವಾಗಿ ಮಾತಾಡಲು ಡಾಕ್ಟರ್ ಅಂಬೇಡ್ಕರರಿಗೆ ಹಕ್ಕಿಲ್ಲವೆಂತ ನಾನು ಹೇಳುತ್ತೇನೆ. ಅವರು ಹೇಳುವ ಸಲಹೆಯಿಂದ ಹಿಂದೂ ಮತದೊಳಗೆ ಜಗಳವಾಗುತ್ತದೆ. ಅದನ್ನು ನಾನು ಸಹಿಸಲಾರೆನು. ಅಸ್ಪೃಶ್ಯರನ್ನು ಕ್ರೈಸ್ತ ಯಾ ಮಹಮ್ಮದೀಯ ಮತಕ್ಕೆ ಸೇರಿಸಿದರೂ ನನಗೆ ಬೇಸರವಿಲ್ಲ. ಅದನ್ನಾದರೂ ಸಹಿಸಿಯೇನು. ಆದರೆ ಹಿಂದೂ ಜಾತಿಯೊಳಗೆ ಗ್ರಾಮಗಳಲ್ಲಿ ಎರಡು ಜಗಳವಾಗುವುದನ್ನು ನೋಡಲಾರೆನು. ಅಸ್ಪೃಶ್ಯರಿಗೆ ರಾಜಕೀಯ ಹಕ್ಕುಗಳು ಬೇಕು ಎಂತ ಮಾತಾಡುವವರು ಹಿಂದೂಸ್ಥಾನವು ಏನು, ಹಿಂದೂಸ್ಥಾನದ ಸಮಾಜ ರಚನೆ ಹೇಗೆ ಎಂಬುದು ಗೊತ್ತಿಲ್ಲ. ಆದ್ದರಿಂದ ನನ್ನಲ್ಲಿ ಶಕ್ತಿ ಇರುವಷ್ಟು ಗಟ್ಟಿಗೆ, ನಾನೊಬ್ಬನೇ ಇದನ್ನು ವಿರೋಧಿಸುವವನಾದರೂ ಸಹ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆ ಬೇಕೆಂಬ ಕೋರಿಕೆಯನ್ನು ನನ್ನ ಜೀವವನ್ನೆಲ್ಲಾ ಹಾಕಿ ವಿರೋಧಿಸುತ್ತೇನೆ.

ದೇಶೀಯರಲ್ಲಿ ವಿನಂತಿ.

ಕೊಡಗಿನಲ್ಲಿ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಶಾಂತಿಯಿಂದಲೂ, ಸುಸಂಘಟಿತವಾಗಿಯೂ ನಡಸುವುದಕ್ಕಾಗಿ ತರಬೇತು ಹೊಂದಿದ ಸ್ವಯಂಸೇವಕರ ಅವಶ್ಯಕತೆಯು ತುಂಬಾ ಇದೆ. ಆದುದರಿಂದ ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಳಿಯ ತೀರ್ಮಾನದಂತೆ ಕಾಂಗ್ರೆಸ್ ಸೈನಿಕರ ಪರೀಕ್ಷೆಯ ಬಗ್ಗೆ ಈ ಪ್ರಾಂತ್ಯದ ಯುವಕರಿಗೆ ತರಬೇತು ಕೊಡಲು ದಕ್ಷಿಣ ಕೊಡಗಿನ ಮಧ್ಯ ಸ್ಥಳವಾದ ವೀರಾಜಪೇಟೆಯಲ್ಲಿ ಒಂದು ಶಿಬಿರವನ್ನು ಡಿಸೆಂಬರು 1ರಲ್ಲಿ ತೆರೆಯುವಂತೆ ನಿಶ್ಚಯಿಸಲಾಗಿದೆ. ಸದರಿ ಶಿಬಿರದಲ್ಲಿ 5 ವಾರಗಳ ವರೆಗೆ ಶಾರೀರಿಕ, ಮಾನಸಿಕ ಮತ್ತು ಭೌತಿಕ ತರಬೇತು ಕೊಡಲಾಗುವುದು. 5 ವಾರಗಳ ನಂತರ ತರಬೇತು ಮಾಡಿದ ವಿಷಯಗಳಲ್ಲಿ ಪರೀಕ್ಷೆಯು ನಡಸಲಾಗುವುದು. ಸದರಿ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಕಾಂಗ್ರೆಸ್ಸಿನ ಸರ್ಟಿಫಿಕೇಟೂ, ಯೂನಿಫಾರ್ಮ್ ಕೊಡಲಾಗುವುದು. ದಾಖಲು ಪರೀಕ್ಷೆಯಿಂದ ಆರಿಸಲಾದವರನ್ನು ಮಾತ್ರ ಶಿಬಿರಕ್ಕೆ ಸೇರಿಸಿಕೊಳ್ಳಲಾಗುವುದು. ಶಿಬಿರದಲ್ಲಿ ಊಟದ ಮತ್ತು ಉಳುಕೊಳ್ಳುವ ಏರ್ಪಾಡು ಮಾಫಿಯಾಗಿ ಮಾಡಲ್ಪಡುವುದು. ಆದರೆ ಸ್ವಯಂ ಸೇವಕರು ಬಿಳೀ ಖಾದಿಯ ಶರಟು, ಕುಂಡ ಸುರವಲು ಮತ್ತು ಬಿಳೀ ಟೊಪ್ಪಿಯನ್ನೂ, ಕಂಬಳಿ ಹಾಸಿಗೆಯನ್ನೂ ತಮ್ಮೊಂದಿಗೆ ತರಬೇಕು. ತರಬೇತಿನ ಶಿಕ್ಷಕರು ಸೇವಾದಳದ ಹೆಡ್ ಆಫೀಸಾದ ಹುಬ್ಬಳ್ಳಿಯಿಂದ ಬರುವರು. ತರಬೇತು ಹೊಂದಲು ಇಚ್ಛಿಸುವವರು ಈ ತಾ. 29 ರೊಳಗೆ ತಮ್ಮ ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸುವುದಲ್ಲದೆ, ಈ ತಾ 30ನೇ ಸೋಮವಾರ ಬೆಳಗ್ಗೆ 10 ಗಂಟೆಗೆ ವೀರಾಜಪೇಟೆ ಖಾದಿ ಭಂಡಾರದಲ್ಲಿ ಹಾಜರಿರಬೇಕು. ದೇಶದ ಸೇವೆಯನ್ನು ಶಿಸ್ತಿನಿಂದ ಮಾಡುವುದಕ್ಕಾಗಿ ಬೇಕಾದ ತರಬೇತನ್ನು ಪಡೆಯಲು ದೊರಕಿರುವ ಈ ಸುಸಂದರ್ಭವನ್ನು ಇಲ್ಲಿಯ ಯುವಕರು ಕಳಕೊಳ್ಳಲಿಕ್ಕಿಲ್ಲವಾಗಿ ಕೋರಲಾಗಿದೆ.

ಈ ಶಿಬಿರವನ್ನು ನಡಿಸಲು ಸುಮಾರು 300 ರೂ. ಬೇಕಾಗಿದೆಯೆಂದು ಅಂದಾಜು ಮಾಡಲಾಗಿದೆ. ದೇಶದ ಮಹನೀಯರೂ, ಮಹಿಳೆಯರೂ ಉದಾರ ಮನಸ್ಸಿನಿಂದ ಇದಕ್ಕೆ ದ್ರವ್ಯ ಸಹಾಯ ಮಾಡಿ ತಮ್ಮ ದೇಶದ ಸೇವೆಯನ್ನು ಮಾಡಲು ಮುಂದುಬರುವ ಯುವಕರಿಗೆ ಉತ್ತೇಜನ ಕೊಡಬೇಕಾಗಿ ಅತಿ ವಿನಯದಿಂದ ಕೋರುವ,

ಸಿ. ಐ. ಬೆಳ್ಯಪ್ಪ,
"ಕೊಡಗು" ಆಫೀಸು,
ತಾ. 19—11—'31. ಮಡಿಕೇರಿ.

Unsurpassed Photos of "The All Coorg Teachers' Conference 1931." Certified by the Sub-Asst Inspector of Schools.

Competitive rate as. 8 only per copy

(Please state the 1st or 2nd group while ordering)

This is to certify that Messrs THE SOUTH END NOVELTY Co., Mercara, have exposed The All Coorg Teachers' Conference photograph for the year 1931, and I am pleased to state that the results are satisfactory. They have fixed a reasonable rate of annas 8 per copy and I think it is worth while possessing a copy in rememberance of the occassion. The teachers may apply direct to Messrs The South End Novelty Co. where I learn copies are available

(Sd) B S. KUSHALAPPA,
B. A. D. E.
Sub-Asstt. Inspector of Schools Coorg Mercara.

Mercara,
14—11—'31.

Photographic Materials always in stock. Photographs taken at competitive rates. Please apply for rates and terms

THE SOUTH END NOVELTY Co.
Mercara, (Coorg).

26—18

ಸೂಚನೆ.

ಹುತ್ತರಿ ಹಬ್ಬದ ದೆಸೆಯಿಂದ ಬರುವ ವಾರದ (ಅ)ಂದರೆ ತಾ. 27–11–'31 ರ "ಕೊಡಗು" ಪತ್ರಿಕೆಯ ಸಂಚಿಕೆಯು ಪ್ರಕಟವಾಗುವುದಿಲ್ಲವೆಂದು ಈ ಮೂಲಕ ವಾಚಕ ಮಹಾಶಯರಿಗೆ ತಿಳಿಸಲಾಗಿದೆ.

ತಾ. 20–11–'31. ಮ್ಯಾನೇಜರು.

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ. 25ನೇ ಬುಧವಾರ ಅವಠನೆ ಪೋಳದೂ, ಮರುದಿನ ಗುರುವಾರ ನಾಡು ಪೋಳದೂ ಆಗುವುದು.

ಮೂರ್ನಾಡು ಶಾಲೆಯ 3 ನೇ ವಾರ್ಷಿಕೋತ್ಸವವು ಈ ತಾ. 22 ರಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಮಲ್ಲಚಂಡ ಯನ್. ಸುಬ್ಬಯ್ಯನವರ ಪತ್ನಿಯವರು ಈ ತಾ. 18ರ ರಾತ್ರಿ ಸಿದ್ದಾಪುರದ ಬಳಿ ಇರುವ ತಮ್ಮ ಮನೆಯಲ್ಲಿ ಬಾವಿಗೆ ಬಿದ್ದು ಆತ್ಮಹತ್ಯ ಮಾಡಿಕೊಂಡರೆಂದು ತಿಳಿಯುತ್ತೇವೆ.

ಹಿಂದೂಸ್ಥಾನಿ ಸೇವಾದಳದಲ್ಲಿರುವ ಮ. ನಡಿಕೇರಿಯಂಡ ಮೇದಯ್ಯನವರು ಈಗ ಬಿಹಾರ ಪ್ರಾಂತ್ಯದ ಪಾಟ್ನಾ ಪಟ್ಟಣದಲ್ಲಿ ಸ್ವಯಂ ಸೇವಕರನ್ನು ತರಬೇತು ಮಾಡುತ್ತಿರುವರು.

ಇದೇ ತಿಂಗಳು 21ನೇ ಶನಿವಾರ ಸಾಯಂಕಾಲ 6½ ಗಂಟೆಯಿಂದ 8½ ಗಂಟೆ ವರೆಗೆ ಜಮೀನ್ದಾರರ ಸಂಘದ ಹಾಲಿನಲ್ಲಿ ಮ. ಶ್ರೀ. ಬಿ. ಕೆ. ಸುಬ್ಬರಾಯರು ವೇದಾಂತ ಸಂಘದ ಆಶ್ರಯದಲ್ಲಿ ಹರಿಕಥೆ ಮಾಡುತ್ತಾರೆ. ಸರ್ವರಿಗೂ ಆಮಂತ್ರಣವಿದೆಯೆಂದು ಆ ಸಂಘದ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಫ್ರೇಜರ್‌ಪೇಟೆ ಗಣಪತಿ ರಥೋತ್ಸವದ ಸಮಯದಲ್ಲಿ ದನಗಳ ಪ್ರದರ್ಶನವು ಈ ತಾ. 13 ರಿಂದ 15 ರ ವರೆಗೆ ನಡೆಯಿತು. ಪ್ರದರ್ಶನವು ತಾ. 13 ರಲ್ಲಿ ತೆರೆಯಲ್ಪಟ್ಟು, ತಾ. 14 ರಲ್ಲಿ ಇನಾಮುಗಳಿಗೆ ಉತ್ತಮವಾದ ದನಗಳನ್ನು ಆರಿಸಿ, ತಾ. 15 ರ ಸಾಯಂಕಾಲ ಇನಾಮುಗಳನ್ನು ಹಂಚಿದರೆಂದು ತಿಳಿಯುತ್ತೇವೆ.

ನಾಪೋಕ್ಲುನಾಡು ಕುಂಜಿಲ ಗ್ರಾಮದಲ್ಲಿ ಈ ವಾರ ಯಾರೋ ಒಬ್ಬನು ಒಬ್ಬ ಪಾಲೆಯವನಿಗೂ, ಅವನ ಹೆಂಡತಿಗೂ ರಾತ್ರಿ ಸಮಯದಲ್ಲಿ ಗುಂಡು ಹೊಡೆದನೆಂತಲೂ, ಪಾಲಚಿಯು ಕೂಡಲೆ ಮೃತಳಾದಳೆಂತಲೂ, ಕಾಲಿಗೆ ಗುಂಡು ತಗಲಿದ ಪಾಲೆಯು ಈಗ ಮಡಿಕೇರಿ ಆಸ್ಪತ್ರೆಯಲ್ಲಿರುವನೆಂತಲೂ, ಪೋಲೀಸಿನವರು ಪತ್ತೆ ನಡಿಸುತ್ತಿರುವರೆಂತಲೂ ವರ್ತಮಾನ.

ವೀರಾಜಪೇಟೆ ಮುನ್ಸಿಪಾಲಿಟಿ ಕಮಿಟಿಯಲ್ಲಿ ಕೊಡಗರ ಪರ ಖಾಲಿ ಇದ್ದ ಒಂದು ಸ್ಥಳದ ಉಪ ಚುನಾವಣೆಗೆ ಉಮೇದುವಾರರಾಗಿ ನಿಂತಿದ್ದ ಇಬ್ಬರ ಪೈಕಿ ಮ. ಪಳಂಗಂಡ ನಂಜಪ್ಪನವರು ತನ್ನ ಅಪ್ಲಿಕೇಶನನ್ನು ವಾಪಸು ತೆಗೆದುಕೊಂಡದ್ದರಿಂದ ಉಳಿದ ಮ. ಕೋಣೇರಿರ ಸುಬ್ಬಯ್ಯನವರು ಕಮಿಟಿ ಮೆಂಬರಾಗಿ ಓಟು ತೆಗೆಯದೆ ಆರಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ತಾ. 5–9–'30ರಲ್ಲಿ ಮಡಿಕೇರಿ ಗಣಪತಿ ಬೀದಿಯಲ್ಲಿ ಬ್ಯಾರಿಗಳ ಎರಡು ಪಂಗಡಗಳಿಗಾದ ದೊಂಬಿ ಕೇಸಿನಲ್ಲಿ ಸಬ್ ಜಡ್ಜರ ಕೋರ್ಟಿನಲ್ಲಿ ಇನ್ಸ್ಪೆಕ್ಟರ್ ಬ್ಯಾಟಿಯವರ ಪಾರ್ಟಿಗೆ ಈ ಮೊದಲೇ ಕಲಹವಾಗಿ, ಅಬ್ಬುಬಕರ್ ಪಾರ್ಟಿಯವರ ಮೇಲೆ ಚಾರ್ಜು ಮಾಡಲಾಗಿತ್ತು. ನಂತರ ಅಬ್ಬುಬಕರ್ ಪಾರ್ಟಿಯವರು ಅಪೀಲು ಮಾಡಿದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಸದರಿ ಕೇಸನ್ನು ಸಬ್ ಜಡ್ಜರಿಂದ ವೀರಾಜಪೇಟೆ ಸುಭೇದಾರರಿಗೆ ವರ್ಗಾಯಿಸಿದರು. ಅಲ್ಲಿ ವಿಚಾರ ನಡೆದು ನಿನ್ನೆ ದಿನ ಎಲ್ಲರನ್ನೂ ಖುಲಾಸು ಮಾಡಲಾಯಿತೆಂದು ತಿಳಿಯುತ್ತೇವೆ.

ವೀರಾಜಪೇಟೆ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಮ. ನೆಲ್ಲಮಕ್ಕಳ ಬಿ. ಚಂಗಪ್ಪನವರು ಈ ತಾ. 16ರಲ್ಲಿ ಶಾಲೆಯಲ್ಲಿ ಸಾಯಂಕಾಲ 3 ಗಂಟೆ ವರೆಗೆ ಪಾಠ ಹೇಳುತ್ತಿದ್ದು, ಸ್ವಲ್ಪ ಅಸ್ವಸ್ಥವಾದ ಕಾರಣ ಆಸ್ಪತ್ರೆಯಿಂದ ಔಷಧಿ ತೆಗೆದುಕೊಂಡ ನಂತರ ವಾಂತಿಯು ಶುರುವಾಗಿ ನಿಶ್ಶಕ್ತರಾಗಿ ಅಮ್ಮತ್ತಿಯಲ್ಲಿರುವ ತಮ್ಮ ಮನೆಗೆ ತಲುಪಿ, ವಾಂತಿಯೂ, ಭೇದಿಯೂ, ಜೋರಾಗಿ ರಾತ್ರಿ 10 ಗಂಟೆಗೆ ಶಿವಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ. ಇವರ ಒಳ್ಳೇ ನಡೆನುಡಿಗಳಿಂದ ಇವರು ಆ ಶಾಲೆಯ ವಿದ್ಯಾರ್ಥಿಗಳಿಗೂ, ಉಪಾಧ್ಯಾಯರುಗಳಿಗೂ ಆಪ್ತರಾಗಿದ್ದುದರಿಂದ, ಇವರ ಮರಣಾರ್ಥವಾಗಿ ತಾ. 17ರಲ್ಲಿ ಸದರಿ ಶಾಲೆಯು ಮುಚ್ಚಲ್ಪಟ್ಟಿತೆಂತಲೂ ತಿಳಿಯಬರುತ್ತದೆ.

ಪೊನ್ನಂಪೇಟೆ ಶ್ರೀ ಶಾರದಾಶ್ರಮದ ಸ್ವಾಮಿ ಶಾಂಭವಾನಂದಜಿಯವರು ಈ ತಾರೀಖು 27, 28, 29 ರಲ್ಲು ಮಲೆನಾಡಿನ ಬಡಗರ ಕೇರಿ, ತೆರಾಲು, ಪರಕಟಗೇರಿ, ಬಿರುನಾಣಿ ಗ್ರಾಮಗಳಲ್ಲಿಯೂ, ತಾರೀಖು 30 ಮತ್ತು ಡಿಸೆಂಬರ್ 1 ರಲ್ಲು ಶ್ರೀಮಂಗಲನಾಡಿನ ಗ್ರಾಮಗಳಲ್ಲಿಯೂ ಹೊಸ ರೀತಿಯಲ್ಲಿ ಜೇನು ಸಾಕುವುದನ್ನು ಕುರಿತು, ಪೆಟ್ಟಿಗೆ, ಯಂತ್ರಾದಿ ಪ್ರದರ್ಶನ ಮೂಲಕ ಪ್ರಸಂಗ ಮಾಡುವರೆಂದು ತಿಳಿಸಿರುತ್ತಾರೆ. ಡಿಸೆಂಬರು ತಾರೀಖು 8ರ ನಂತರ ಇದೇ ಪ್ರಕಾರ ನಾಪೋಕ್ಲು, ಕೊಳಗದಾಳ್, ಭಾಗಮಂಡಲ, ಪುಲಿಕೋಟು, ಪೆರಾಜೆ, ನೆಲಜಿ, ನಾಲಡಿ, ಕಕ್ಕಬೆ, ಮತ್ತು ಯೈಯ್ಯಂಡಾಣೆಗಳಿಗೆ ಸಂಚರಿಸುತ್ತಾ [illegible] ವೃದ್ಧಿ ಮೂಲಕ ಭಕ್ತಿಯ ವಿಷಯವೂ, ಜೇನು ಸಾಕುವ, ಮಲೇರಿಯ ಮತ್ತು ಇತರ ವಿಷಯಗಳಲ್ಲೂ ಪ್ರಸಂಗ ಮಾಡಲಿರುವರೆಂದು ತಿಳಿಯುತ್ತೇವೆ.

ಈ ತಾ. 25ರಲ್ಲಿ ಪ್ರಾರಂಭವಾಗುವ ಹುತ್ತರಿ ಹಬ್ಬದ ಸಂಬಂಧ ಕೊಡಗಿನ ಸ್ವಯಂ ಸೇವಕ ಮಂಡಳಿಯವರು ಈ ತಾ. 18ರಿಂದ ವೀರಾಜಪೇಟೆ ಸಾರಾಯಿ ಗಡಂಗನ್ನು ಪಿಕೆಟ್ ಮಾಡಲು ಪ್ರಾರಂಭಿಸಿರುವರು. ಹಾಗೆ ಪ್ರಾರಂಭಿಸುವ ಮೊದಲು ಸ್ವಯಂ ಸೇವಕರು ರಾಷ್ಟ್ರೀಯ ಧ್ವಜದೊಂದಿಗೆ ರಾಷ್ಟ್ರೀಯ ಗೀತಗಳನ್ನು ಹಾಡುತ್ತಾ ಪೇಟೆಯಲ್ಲಿ ಮೆರವಣಿಗೆ ಮಾಡಿ, ಮಧ್ಯಾಹ್ನ 1 ಗಂಟೆಗೆ ರೀಡಿಂಗ್ ರೂಮಿನ ಎದುರಿನಲ್ಲಿ ಒಂದು ಪಬ್ಲಿಕ್ ಮೀಟಿಂಗು ಮಾಡಿದರು. ಮ. ನಾಪಂಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸದರಿ ಮೀಟಿಂಗಿನಲ್ಲಿ ಶ್ರೀಯುತರುಗಳಾದ ಕೆ. ಸಿ. ಕರುಂಬಯ್ಯನವರು, ಮತ್ತು ಪಿ. ಐ. ಬೆಳ್ಯಪ್ಪನವರು, ಈಗಿನ ರಾಜಕೀಯ ಪರಿಸ್ಥಿತಿಯನ್ನೂ, ದುಂಡುಮೇಜು ಪರಿಷತ್ತಿನ ಕಾರ್ಯಕಲಾಪಗಳ ಮತ್ತು ಪಿಕೆಟಿಂಗಿನ ಉದ್ದೇಶವನ್ನೂ ಕುರಿತು ಭಾಷಣ ಮಾಡಿದರು. ಈ ತಾ. 22ರಿಂದ ಗೋಣಿಕೊಪ್ಪಲು ಗಡಂಗವೂ ಪಿಕೆಟ್ ಮಾಡಲ್ಪಡುವುದು.

ಹಿಂದೂದೇಶ.

ಭರತ ಖಂಡದ ರೈಲ್ವೆ ಶಾಖೆಗಳ ವೆಚ್ಚ ಕಡಿಮೆ ಮಾಡಬೇಕೆಂದು ನಿಶ್ಚಯಿಸಿ ರೈಲ್ವೆ ಬೋರ್ಡಿನವರು ೧೧೦೦೦ ಕೆಲಸಗಾರರನ್ನು ತೆಗೆದುಹಾಕಬೇಕೆಂದು ಸಲಹೆ ಮಾಡಿದ್ದಾರೆ.

ಬಿಕಾನೀರಿನ ಮಹಾರಾಜರು ಅನಾರೋಗ್ಯದ ದೆಸೆಯಿಂದ ದುಂಡು ಮೇಜು ಪರಿಷತ್ತು ಮುಗಿಯುವ ಮುಂಚೆಯೇ ಲಂಡನಿನಿಂದ ಹಿಂದೂಸ್ಥಾನಕ್ಕೆ ವಾಪಸು ಬಂದಿರುವರು.

'ರಾಜಕೀಯ ಬಂದಿಗಳ ಸಮಾಚಾರ ಸಂಘ' ಒಂದು ಮುಂಬಯಿಯಲ್ಲಿ ಹುಟ್ಟಿದೆ. ಈ ಸಂಘದವರು "ಸುಮಾರು ೧೫,೦೦೦ ಮಂದಿ ಸೆರೆ ಮನೆಗಳಲ್ಲಿದ್ದಾರೆ. ಸುಮಾರು ೫೧೦ ಭಾರತೀಯರು ದೇಶಾಂತರಗತರಾಗಿದ್ದಾರೆ" ಎಂದು ತಿಳಿಸುತ್ತಾರೆ.

ಈಗಿರುವ ಎಲ್ಲ ಉದ್ಯೋಗಸ್ಥರ ಸಂಬಳವನ್ನು ಕಡಿಮೆ ಮಾಡುವುದರ ಬದಲು ದೊಡ್ಡ ಹುದ್ದೆಗಳಿಗೆ 150 ರಿಂದ 600 ರೂ. ವರೆಗೆ ಸಂಬಳ ನಿಶ್ಚಯಿಸುವುದು ಉತ್ತಮವೆಂದು ಪಂಜಾಬು ರಿಟ್ರೆಂಚ್‌ಮೆಂಟ್ ಕಮಿಟಿಯವರ ಸಲಹೆಯಾಗಿದೆ. ಇದು ದೊಡ್ಡ ಉದ್ಯೋಗಸ್ಥರಲ್ಲಿ ಗಲಭೆಯನ್ನುಂಟು ಮಾಡಿದೆಯಂತೆ!

ದೀಪಾವಳಿಯಲ್ಲಿ ಹೊಸ ಬಟ್ಟೆಗಳನ್ನು ಕೊಂಡು ಕೊಳ್ಳುವ ಪದ್ಧತಿಯಂತೆ ಈ ಸಾರಿ ಬೊಂಬಾಯಿಯಲ್ಲಿ ಜವಳಿ ವರ್ತಕರು 50 ಸಾವಿರ ಬೇಲು ಸ್ವದೇಶೀ ಅರಿವೆಯನ್ನು ಕೊಂಡುಕೊಂಡರಂತೆ. ಜಪಾನಿನ ಬಟ್ಟೆ ಬರೀ 5 ಸಾವಿರ ಮೂಟೆಗಳು ಖರ್ಚಾದವು. ಇಂಗ್ಲೆಂಡಿನ ಮ್ಯಾಂಚೆಸ್ಟರಿನ ಬಟ್ಟೆಯು ಏಳು ನೂರು ಗಂಟುಗಳು ಮಾತ್ರ ವಿಕ್ರಯಿಸಲ್ಪಟ್ಟವು! ಹಿಂದೀಯರಿಗೆ ಸ್ವದೇಶೀಯ ಮೇಲೆ ಪ್ರೇಮವು ಹೆಚ್ಚುತ್ತಾಗುತ್ತದೆ.

ನಾಸಿಕಕ್ಕೆ ಮಂತ್ರಿಗಳು ವಿಶೇಷವಾಗಿ ಬರುತ್ತಿರುವುದರಿಂದ ಶಾಂತತೆಗಾಗಿ ಪೋಲೀಸು ದಳವು ನಿಯಮಿಸಲ್ಪಡಬೇಕಾಗುವುದು. ಈ ಪೋಲೀಸು ದಳದ ವೆಚ್ಚಕ್ಕಾಗಿ ಪ್ರತಿಯೊಬ್ಬ ಯಜಮಾನನಿಂದಲೂ ಒಂದು ಜಾತಿ ಕಂದಾಯವು ವಸೂಲ್ ಮಾಡಲ್ಪಡಬೇಕಾಗಿ ಪ್ರಭುತ್ವದವರು ನಾಸಿಕದ ಮ್ಯುನಿಸಿಪಾಲಿಟಿಯವರಿಗೆ ತಿಳಿಸುತ್ತಾರೆ. ಹಾಗೆ ಈ ಕಂದಾಯ ವಿಧಿಸಲ್ಪಡಬೇಕೆಂದು ಪ್ರಭುತ್ವದವರು ನಿರ್ಬಂಧಿಸುವುದಾದರೆ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಮುನಿಸಿಪಲ್ ಕೌನ್ಸಿಲರುಗಳು ಉದ್ಯೋಗವನ್ನು ಬಿಡುವವರಾಗಿದ್ದಾರಂತೆ.

ಬಾರ್ಡೋಲಿಯಲ್ಲಿ ರೈತರು ಕಂದಾಯ ಕೊಡದೆ ಇರುವುದರ ವಿಷಯ ಸರ್ಕಾರದವರಿಗೂ, ಕಾಂಗ್ರೆಸ್ಸಿನವರಿಗೂ ಉಂಟಾಗಿರುವ ತಕರಾರುಗಳನ್ನು ವಿಚಾರಿಸುತ್ತಿರುವ ಮೆ.. ಗಾರ್ಡನ್‌ರವರು, ಈ ವಿಚಾರಕ್ಕೆ ಸಂಬಂಧಪಟ್ಟ ಸರ್ಕಾರಿ ರೆಕಾರ್ಡುಗಳನ್ನು ಹಾಜರುಪಡಿಸಬೇಕೆಂದು ಕಾಂಗ್ರೆಸ್ಸಿನ ವಕೀಲರಾದ ಮ. ದೇಸಾಯಿಯವರ ಕೋರಿಕೆಗೆ ವಿರೋಧವಾಗಿ ಹುಕುಂ ಮಾಡಿದ್ದರಿಂದ, ಮ. ದೇಸಾಯಿಯವರೂ ಹಾಗೂ ಕಾಂಗ್ರೆಸ್ಸಿನವರೂ ಸದರಿ ವಿಚಾರದಲ್ಲಿ ಮುಂದೆ ಭಾಗ ತೆಗೆದುಕೊಳ್ಳುವುದಿಲ್ಲವೆಂದು ನಿಶ್ಚಯಿಸಿ, ಅದಕ್ಕೆ ಬಹಿಷ್ಕಾರ ಹಾಕಿರುವರು.

ಬೊಂಬಾಯಿಯಲ್ಲಿ ಕೂಡಿದ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಹಿಜಲಿಯ ಗುಂಡಿನ ಪ್ರಕರಣವನ್ನು ನಿವೇದಿಸಿ, ಅಧಿಕಾರಿಗಳು ವಾಸ್ತವ ಸ್ಥಿತಿಯನ್ನು ಮುಚ್ಚಿದರೆಂದು ವಿವಾದಿಸಿ, ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಬೇಕೆಂದು ಕೇಳಿ ಠರಾವಾಗಿದೆ; ಹಾಗೆಯೇ ಮಿ. ನನೋರ್ ಮತ್ತು ಏಲ್ಲಿಯಸ್‌ರವರ ಮೇಲೆ ಗುಂಡಿನ ಅತ್ಯಾಚಾರವಾದುದಕ್ಕೂ ವಿಷಾದಿಸಿ ಠರಾವಾಗಿದೆ, ಗಾಂಧಿಯ ಅರಿವೆಗಳಲ್ಲಿ ದೊರಗಾದುದನ್ನು ತಂದು ಶುದ್ಧ ಖಾದಿಯೆಂದು ನಂಬಿಸಿ ಮಾರುವ ವ್ಯಾಪಾರಗಳ ಬಗ್ಗೆ ಖೇದ ಪ್ರದರ್ಶನ ಮಾಡಿ. ಇನ್ನಾದರೂ ಆ [illegible] ಹಾಗೆ ಮಾಡಬಾರದೆಂದು ಪ್ರಾರ್ಥಿಸಿ ಠರಾವಾಗಿದೆ.

ಡರ್ನೋ ಸಾಹೇಬರ ಕೊಲೆಗೆ ಸಂಬಂಧವಾದ ಮೇಲೆ ಪೋಲೀಸ್ ಅತಿರೇಕಗಳು ಹೆಚ್ಚಿದ ವಿಷಯದಲ್ಲಿ ವಿಚಾರಣೆ ನಡೆಸಲು ನಿಯುಕ್ತವಾದ ಕಲ್ಕತ್ತಾ ನೋನ್ ಒಫಿಶಿಯಲ್ ಕಮಿಟಿಯ ಸದಸ್ಯರಾಗಿ ಢಾಕ್ಕಾ ಜಿಲ್ಲೆಯನ್ನು ಪ್ರವೇಶಿಸಿದ್ದ ಶ್ರೀ. ಸುಭಾಸ್‌ಚಂದ್ರ ಬೋಸರನ್ನು ೧೪೪ ನೇ ಸೆಕ್ಷನಿನಂತೆ ನೋಟೀಸು ಕೊಟ್ಟರೂ ಗಣ್ಯ ಮಾಡದೆ ರೈಲು ಹತ್ತಿ ಬಂದರೆಂದು ತಾ. ೧೧ ರಲ್ಲಿ ಕೈದು ಮಾಡಿ ಜಾಮೀನನ್ನು ಸ್ವೀಕರಿಸದೆ, ಢಾಕ್ಕಾ ಸೆಂಟ್ರಲ್ ಜೈಲಿಗೊಯ್ದು ಬಂಧನದಲ್ಲಿರಿಸಿ, ಕೊನೆಗೆ ಜಾಮೀನು ಸ್ವೀಕಾರ ಮಾಡಿದರೆಂದು ತಿಳಿಸಿ, ೧೪೪ ನೇ ಪ್ರಯೋಗವನ್ನು ಹಿಂತೆಗೆದು ಬಿಡುಗಡೆ ಮಾಡಿದರು. ಇನ್ನು ಮೊಕದ್ದಮೆ ನಡೆಯಲಿಕ್ಕಿದೆ.

ವಿದೇಶ.

ಮಹಾತ್ಮ ಗಾಂಧಿಯವರು ಈ ವಾರ ಲಾರ್ಡ್ ಇರ್ವಿನ್‌ರವರನ್ನೂ, ಆಫ್ರಿಕದ ಜನರಲ್ ಸ್ಮಟ್ಸ್‌ರವರನ್ನೂ ಕಂಡು ದೀರ್ಘಕಾಲ ಸಂಭಾಷಣೆ ನಡಿಸಿದರು. ಈ ಸಂಭಾಷಣೆಗೆ ಬಹಳ ಪ್ರಾಮುಖ್ಯತೆ ಕೊಡಲಾಗಿದೆ.

ಬ್ರಿಟನ್ನಿನ ನೇಶನಲ್ ಸರ್ಕಾರದವರು ಈ ತಾ. 17ರಲ್ಲಿ ಸೆಂಟ್ ಜೇಮ್ಸ್ ಅರಮನೆಯಲ್ಲಿ ಇಂಡಿಯನ್ ಮತ್ತು ಬರ್ಮಾದ ದುಂಡು ಮೇಜು ಪರಿಷತ್ತುಗಳ ಮೆಂಬರುಗಳಿಗೆ ಒಂದು ಔತಣವನ್ನು ಕೊಟ್ಟರು. 600 ಅತಿಥಿಗಳು ಹಾಜರಿದ್ದರು.

ಸ್ಪೇಯಿನ್ ರಾಜ್ಯಭಾರವನ್ನು ತ್ಯಜಿಸಿದ ಅಲ್ಫಾಂಜೋ ರಾಜನಿಗೆ ಯಾವಜ್ಜೀವ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟು, ಆತನ ಆಸ್ತಿ ಎಲ್ಲವೂ ಪ್ರಭುತ್ವ ಸ್ವಾಧೀನಪಡಿಸಿಕೊಳ್ಳಲ್ಪಟ್ಟಿದೆ. 1921 ರಲ್ಲಿ ನಡೆದ ಮೊರಾಕೊ ವಿಪ್ಲವಕ್ಕೆ ಕಾರಣನೆಂದೂ, ಆತನ [illegible]ದಿಂದಲೇ ಬಹಳ ಜನರು ಸತ್ತು ಹೋದರೆಂದೂ, 1923 ರಲ್ಲಿ ನಡೆದ ವಿಪ್ಲವಕ್ಕೂ ಈತನೇ ಕಾರಣಭೂತನೆಂದೂ ತೀರ್ಮಾನಿಸಲ್ಪಟ್ಟಿತು. ಮರಣಶಿಕ್ಷೆ ವಿಧಿಸಲ್ಪಡದಿರುವುದಕ್ಕೆ ಕಾರಣವು, ಹೊಸ ಸ್ಪೇನ್ ಪ್ರಭುತ್ವದವರು ಮರಣದಂಡನೆಯನ್ನು ತಪ್ಪಿಸಿ ಪುನಃ ಇಂತಹ ತಪ್ಪನ್ನು ಮಾಡಿದಲ್ಲಿ ಪ್ರಾಣದಂಡನೆಯೇ ವಿಧಿಸಲ್ಪಡುವುದೆಂದು ಆಜ್ಞೆ ಮಾಡಿದುದೇ ಆಗಿರುತ್ತದೆ.

ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಮೀಟಿಂಗು ಮುಂದರಿಯುತ್ತಿದೆ. ಸೈನ್ಯದ ವಿಷಯ ಚರ್ಚೆಯು ನಡೆಯುತ್ತಿದೆ. ದುಂಡು ಮೇಜು ಪರಿಷತ್ತನ್ನು ಬೇಗನೆ ಅಂತ್ಯಗೊಳಿಸಬೇಕೆಂಬ ಸರ್ಕಾರದ ಸೂಚನೆಗೆ ಮುಸಲ್ಮಾನ ಮೆಂಬರುಗಳಲ್ಲದೆ ಬಾಕಿ ಎಲ್ಲಾ ಇಂಡಿಯನ್ ಪ್ರತಿನಿಧಿಗಳು ವಿರೋಧಿಸುತ್ತಿದ್ದಾರೆ. ಲಾರ್ಡ್ ರೀಡಿಂಗ್, ಮಿ. ವೆಜ್ವುಡ್ ಬೆನ್, ಲಾರ್ಡ್ ಸ್ಯಾಂಕಿಯವರೂ ಕೂಡ ಹಿಂದೀಯರಂತೆಯೇ ವಿರೋಧಿಸುತ್ತಿರುವರು. ಮಹಾತ್ಮ ಗಾಂಧಿಯವರು ಪ್ರಧಾನ ಮಂತ್ರಿಯವರೊಂದಿಗೆ ತಾ. 17ರಲ್ಲಿ ದೀರ್ಘ ಸಂಭಾಷಣೆ ನಡಿಸಿದರು. ಮಹಾತ್ಮರು ತಾವು ಇಂಡಿಯಾಕ್ಕೆ ಹೊರಡುವ ದಿನವನ್ನು ಮುಂದರಿಸಿರುವರು.

ಹುತ್ತರಿ ಹಬ್ಬದ ಮುಹೂರ್ತ ಪಟ್ಟಿ.

1. ಸನ್ 1931 ನೇ ಇಸವಿ ನವಂಬರ್ ತಾರೀಖು 24 ನೇ ಮಂಗಳವಾರ ದಿನ ಕೃತ್ತಿಕಾ ನಕ್ಷತ್ರದಲ್ಲಿ ಇಗ್ಗುತಪ್ಪ ದೇವರ ಕಲಾಡ್ಚ ಹಬ್ಬವಾಗುತ್ತೆ.

2. ಇದೇ ನವಂಬರ್ ತಾರೀಖು 25 ನೇ ಬುಧವಾರ ದಿನ ರೋಹಿಣಿ ನಕ್ಷತ್ರದಲ್ಲಿ ದೇವರ ಪೊಳುದ. ಸದರಿ ದಿನ ರಾತ್ರೆ 7 ಗಂಟೆಗೆ ನೆರೆಕಟ್ಟುವದು, 8 ಗಂಟೆಗೆ ಕದಿರು ಕುಯ್ಯುವದು, 9 ಗಂಟೆಗೆ ಊಟ ಮಾಡುವ ಶುಭ ಮುಹೂರ್ತ.

3. ಇದೇ ನವಂಬರ್ ತಾರೀಖು 26 ನೇ ಗುರುವಾರ ದಿನ ಮೃಗಶಿರ ನಕ್ಷತ್ರದಲ್ಲಿ ನಾಡು ಪೊಳುದ. ಸದರಿ ದಿನ ರಾತ್ರೆ 8 ಗಂಟೆಗೆ ನೆರೆಕಟ್ಟುವದು. 9 ಗಂಟೆಗೆ ಕದಿರು ತುಯ್ಯುವದು, 10 ಗಂಟೆಗೆ ಊಟ ಮಾಡುವ ಶುಭ ಮುಹೂರ್ತ.

ಮುಜ್ರಾಯಿ ಇಲಾಖೆ

ಕೆ. ಚಂಗಪ್ಪ,
(ಪ್ರೆಸಿಡೆಂಟು.)

ಅಮ್ಮತ್ತಿನಾಡಿನವರ ಮೀಟಿಂಗು.

ತಾ. 17–11–31 ರಲ್ಲಿ ಅಮ್ಮತ್ತಿನಾಡಿನವರು, ನಾಡು ತಕ್ಕರಾದ ಮ. ಕೇ[illegible] ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿಸಿದರು. ಸುಮಾರು 200 ಜನರು ಹಾಜರಿದ್ದರು.

ನಾಡಿನವರು ಯಾರೂ ಸೇಂದಿ ಇಳಿಸಲು ತಮ್ಮ ಮರಗಳನ್ನು ಗುತ್ತಿಗೆ ಕೊಡಬಾರದೆಂತಲೂ, ತಪ್ಪಿಕ್ಕೆ ಸೇಂದಿ ಸಾರಾಯಿ ಸೇವಿಸ ಬಾರದಾಗಿಯೂ ತೀರ್ಮಾನವಾದದ್ದಲ್ಲದೆ, ಕಳೆದ ಎರಡು ವರ್ಷಗಳಂತೆ ಈ ವರ್ಷವೂ ಹಬ್ಬವನ್ನು ಮುಂದರಿಸದೆ ಅವನನೆ ಕದಿರು ದಿನವೇ (ರೋಹಿಣಿ ನಕ್ಷತ್ರದಲ್ಲಿಯೇ) ತಾವು ನಾಡು ಕದಿರು ತೆಗೆಯಬೇಕೆಂದೂ ತೀರ್ಮಾನವಾಯಿತು.

ಕೊಡಗು ರಿಟ್ರೆಂಚ್‌ಮೆಂಟ್ ಕಮಿಟಿಯವರು ಅಮ್ಮತ್ತಿನಾಡು ಕಚೇರಿಯನ್ನು ತೆಗೆಯಬೇಕೆಂಬದಾಗಿ ಶಿಫಾರಸು ಮಾಡಿರುವದನ್ನು ಕೇಳಿ, ಅದನ್ನು ವಿರೋಧಿಸಿ ಠರಾವು ಸರ್ವಸಮ್ಮತದಿಂದ ಪಾಸು ಮಾಡಿದ್ದಲ್ಲದೆ, ಈ ಬಗ್ಗೆ ತಕ್ಕ ಚಳವಳಿಯನ್ನು ಹೂಡುವುದಕ್ಕೂ, ಚೀಫ್ ಕಮಿಷನರ್ ಸಾಹೇಬರವರಲ್ಲಿಗೆ ಡಿಪ್ಯುಟೇಶನ್ ಹೋಗುವುದಕ್ಕೂ ಹತ್ತು ಜನರ ಕಮಿಟಿಯೊಂದನ್ನು ನೇಮಿಸಲಾಯಿತು.

ಕೊ. ಮುತ್ತಣ್ಣ,
(ಅಧ್ಯಕ್ಷ.)

ಶಿಗ್ಗಟ್ಟೆನಾಡು ಕ್ರೆಡಿಟ್ ಲೋನ್, ಸೇಲ್ ಮತ್ತು ಸಪ್ಲೈ ಸಂಘದ ವಾರ್ಷಿಕ ಜನರಲ್ ಮೀಟಿಂಗು

ಈ ದಿನ ಮೀಟಿಂಗಿನಲ್ಲಿ 31 ಜನ ಶೇರು ಮೆಂಬರುಗಳೂ, ರಿಜಿಸ್ಟ್ರಾರವರೂ, ಇನ್‌ಸ್ಪೆಕ್ಟರುಗಳೂ, ಫೆಡರೇಶನ್ ಮೆಂಬರು ಮೆ. ಕೆ. ಪಿ ಚಿಣ್ಣಪ್ಪನವರೂ ಅಲ್ಲದೆ ಪೊನ್ನಂಪೇಟೆ ನಾಡು ಯೂನಿಯನ್ ಮೆಂಬರುಗಳು ಸಹ ಹಾಜರಿದ್ದರು.

ಈ ದಿನದ ಮೀಟಿಂಗನ್ನು ಈ ಮೊದಲೇ ನಿಶ್ಚೈಸಿದ್ದ ಮೇರೆ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ನಡಿಸಲಾಯಿತು.

ಈ ಸಂಘದ 1930—31 ನೇ ವರ್ಷದ ಆಡಿಟ್ ರಿಪೋರ್ಟನ್ನು ಸಭೆಯ ಮುಂದಿಡಲಾಯಿತು.

ಇನ್ನು ಮುಂದಕ್ಕೆ ಸಂಘವು ಆಡಿಟ್ ಆದ ಕೂಡಲೆ ಆಡಿಟ್ ರಿಪೋರ್ಟಿನ ನಕಲೊಂದನ್ನು ಪ್ರಿಂಟುಮಾಡಿಸಿ ಜನರಲ್ ಮೀಟಿಂಗಿಗೆ ಕಮ್ಮಿ ಒಂದು ವಾರಕ್ಕೆ ಮುಂಚೆಯಾದರೂ ಪ್ರತಿ ಶೇರು ಮೆಂಬರುಗಳಿಗೆ ಖಂಡಿತ ಹಂಚಿಕೊಡಬೇಕಾಗಿಯೂ, ಈ ವಿಷಯಕ್ಕೆ ಸಂಘದ ಆಡಳಿತ ಮಂಡಳಿಯವರು ಆಯಾಯ ವರ್ಷದ ಆಡಿಟ್ ಆದ ಕೂಡ್ಲೆ ನಿಗವಿಡಬೇಕಾಗಿಯೂ ತೀರ್ಮಾನಿಸಲಾಯಿತು.ಅಲ್ಲದೆ 1930—31ನೇ ವರ್ಷದ ಆಡಿಟ್ ರಿಪೋರ್ಟನ್ನು ಓದಿಕೇಳಿ ಮಂಜೂರುಮಾಡಲಾಯಿತು.

ಸ್ಟೋರಿನ ಮುಂದಿನ ಒಂದು ವರ್ಷದ ಅಂದರೆ 1931 32 ನೇ ವರ್ಷದ ಕಾರುಬಾರುಗಳನ್ನು ನಡಿಸಲಿಕ್ಕೆ ಈ ಕೆಳಗಿನ 15 ಜನ ಕಮಿಟಿ ಮೆಂಬರುಗಳನ್ನು ಚುನಾಯಿಸಲಾಯಿತು.

ಮೆ. ಗಳಾದ ಪುಚ್ಚಿಮಾಡ ಮಾದೈಯ್ಯನವರು, ಸಿ. ಎ. ಪೊನ್ನಪ್ಪನವರು, ಪಿ. ಜಿ. ಮುದ್ದಮ್ಮೈಯ್ಯನವರು, ಚಮ್ಮಾಡ ಮಾದಪ್ಪನವರು, ಕೆ. ಬಿ ಗಣಪತಿಯವರು, ಹೆಚ್. ಯಸ್. ಬೋಪೈಯ್ಯನವರು, ಪಿ. ಐ ಕುಟ್ಟಪ್ಪನವರು, ಕೆ. ಯಸ್. ನಂಜಪ್ಪನವರು, ಸಿ. ಥಿಮ್ಮೈಯ್ಯನವರು, ಯಂ. ಕೆ. ಮಾಚೈಯ್ಯನವರು. ಯಂ ಬಿದ್ದಪ್ಪನವರು, ಕೆ. ಕೆ. ಗಣಪತಿಯವರು, ಎ ಯಸ್. ಪೊನ್ನಪ್ಪನವರು, ಎ ಸಿ. ನಂಜಪ್ಪನವರು ಮತ್ತು ಕೆ. ಐಯ್ಯಮ್ಮನವರು.

ಪ್ರೆಸಿಡೆಂಟರ ಚುನಾವಣೆಗೆ ಮೆ. ಗಳಾದ ಪುಚ್ಚಿಮಾಡ ಮಾದಯ್ಯನವರು, ಚೆಪ್ಪುಡಿರ ಎ ಪೊನ್ನಪ್ಪನವರು ಮತ್ತು ಪಿ. ಜಿ. ಮುದ್ದಮಯ್ಯನವರುಗಳ ಹೆಸರುಗಳು ಸೂಚಿಸಲ್ಪಟ್ಟಿದ್ದರಲ್ಲಿ ಮೆ. ಮುದ್ದಮ್ಮಯ್ಯನವರು ತನ್ನ ಹೆಸರನ್ನು ವಜಮಾಡಬೇಕೆಂದು ಕೇಳಿಕೊಂಡ ಮೇಲೆ, ಬಾಕಿ ಇಬ್ಬರಿಗೆ ಓಟು ಹಾಕಲಾಗಿ ಮೆ. ಸಿ. ಮಾದಯ್ಯನವರು ಬಹುಮತದಿಂದ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು.

ಗೌರವ ಕಾರ್ಯದರ್ಶಿಯವರಾಗಿ ಮೆ. ಪಿ ಜಿ. ಮುದ್ದಮ್ಮಯ್ಯನವರನ್ನು ಸರ್ವಸಮ್ಮತದಿಂದ ಚುನಾಯಿಸಲಾಯಿತು.

ಚಿನ್ನ ಯಾ ಬೆಳ್ಳಿ ಮಾಲುಗಳನ್ನು ಅಡವಿಟ್ಟುಕೊಂಡು ಹಣ ಸಾಲ ಕೊಡಬೇಕಾಗಿ ಮೆ. ಪುಚ್ಚಿಮಾಡ ಕುಟ್ಟಪ್ಪನವರು ಠರಾವು ತಂದರು. ಇದು ಚೆನ್ನಾಗಿ ಚರ್ಚಿಸಲಾಯಿತು. ಇದು ಬೈಲಾ 35 ಕ್ಕೆ ಸೇರಿಲ್ಲದ್ದರಿಂದ "ಚಿನ್ನ ಮತ್ತು ಬೆಳ್ಳಿಯ ಮಾಲು" ಎಂಬ ಶಬ್ದಗಳನ್ನು ಸೇರಿಸಬೇಕಾಗಿ ಮೆ. ಸಿ. ಎ. ಪೊನ್ನಪ್ಪನವರು ಸೂಚಿಸಿದರು. ಅವರ ಸೂಚನೆಯನ್ನು ಸರ್ವ ಸಮ್ಮತದಿಂದ ಮಂಜೂರು ಮಾಡಿ, ಬೈಲಾ ತಿದ್ದುಪಡಿ ಮಾಡಿ ಆ ಮೇರೆ ಶೇಕಡ 60 ರಷ್ಟರ ವರೆಗೆ ಸಾಲ ಕೊಡಬಹುದಾಗಿ ತೀರ್ಮಾನಿಸಲಾಯಿತು.

ಮುಂದಿನ ವರ್ಷದ ಬಜೆಟ್ಟನ್ನು ಚರ್ಚಿಸಿ ಈ ಕೆಳಗೆ ಕಾಣಿಸಿದ ಮೊಬಲಗಿಗೆ ಮೀರದ ರೀತಿ ಖರ್ಚು ಮಾಡಬೇಕಾಗಿ ತೀರ್ಮಾನಿಸಲಾಯಿತು.

ಕ್ಲಾರ್ಕರ ಸಂಬಳ 12 ತಿಂಗಳಿಗೆ 30 ರೂ/ ಮೇರೆ—

	ರೂ.	360—0—0
ಆಳಿನ ಸಂಬಳ	,,	200—0—0
ಸಾದಿಲ್ವಾರ್ ಖರ್ಚು	,,	60—0—0
ಫರ್ನೀಚರ್	,,	40—0—0
ಮನೆ ಬಾಡಿಗೆ	,,	300—0—0
ಮೆಂಬರುಗಳಿಗೆ ಬತ್ಯ	,,	100—0—0
	ಜುಮ್ಲ—	1060—0—0

ಸ್ಟೋರಿನ ಕ್ಲಾರ್ಕರಿಗೆ ಜನವರಿ 1 ರಿಂದ ಮಾಸವೊಂದಕ್ಕೆ 25—ರೂ. ಸಂಬಳ ನೇಮಕ ಮಾಡಲಾಗಿದೆ.

ಸೆಂಟ್ರಲ್ ಬ್ಯಾಂಕಿಗೆ ಸ್ಟೋರಿನ ಪ್ರೆಸಿಡೆಂಟರೇ ಪ್ರತಿನಿಧಿಯಾಗಿ ಇರಬೇಕೆಂದು ತೀರ್ಮಾನವಾಯಿತು. ಯೂನಿಯನಿಗೆ ಶ್ರೀಮಂಗಲ ನಾಡಿನಿಂದ ಕಾಳ್ಯಮಾಡ ಐಯ್ಯಮ್ಮನವರನ್ನೂ, ಪೊನ್ನಂಪೇಟೆ ನಾಡಿನಿಂದ ಅಚ್ಚೆಕುಟ್ಟಿರ ಪೊನ್ನಪ್ಪನವರನ್ನೂ ಡೆಲಿಗೇಟರಾಗಿ ಚುನಾಯಿಸಲಾಯಿತು. ಈ ಸ್ಟೋರನ್ನು ಪೊನ್ನಂಪೇಟೆ ನಾಡಿನ ಯೂನಿಯನ್ನಿಗೆ ಸಂಯೋಜಿತ ಮಾಡಬೇಕಾಗಿಯೂ ಸಹ ತೀರ್ಮಾನಿಸಲಾಯಿತು.

ಸ್ಟೋರಿನ ಶಾಖೆಗಳನ್ನು ಮಾದಿಕೇರಿ ಮತ್ತು ಹಾತೂರು ಇನ್ನು ಇತರ ಸ್ಥಳಗಳಲ್ಲಿ ತೆಗೆಯಲಿಕ್ಕೆ ಕಮಿಟಿಯವರಿಗೆ ಅಧಿಕಾರ ಕೊಡಲಾಗಿದೆ.

ಅಧ್ಯಕ್ಷರು ಸಹಕಾರ ತತ್ವ ಮತ್ತು ಸ್ಟೋರಿನ ಕೆಲಸದ ವಿಷಯ ಭಾಷಣ ಮಾಡಿ ಮೀಟಿಂಗನ್ನು ಮುಕ್ತಾಯ ಮಾಡಿದರು.

ಅಧ್ಯಕ್ಷರಿಗೆ ಸಭೆಯ ಪರವಾಗಿ ವಂದನೆ ಅರ್ಪಿಸಿ ಸಭೆಯನ್ನು ಬರಖಾಸ್ತು ಮಾಡಲಾಯಿತು.

ಯಂ. ಯಸ್. ಮಂದಣ್ಣ.
(ಅಧ್ಯಕ್ಷರು)

ವಿಚಿತ್ರ ಸರ್ಪ ಪ್ರಯೋಗ!!

ನಿಜಾಮ ಸಂಸ್ಥಾನದ ಪರಭಣೀ ತಾಲೋಕಿನ ವಾಂಚಲಿಗಾಂವ ಎಂಬ ಊರಿನಲ್ಲಿ ಹುಟ್ಟಿ, ಈಗ ಶ್ರೀ ವಾಂಚಲಿಗಾಂವ ಮಹಾರಾಜರೆಂದು ಕರೆಯಲ್ಪಡುವ 22 ವರ್ಷದ ತರುಣರು ತನ್ನ ವಿಚಿತ್ರ ಶಕ್ತಿಯಿಂದ ಜನರನ್ನು ದಂಗು ಪಡಿಸಿರುವರು. ಇವರು 8,9 ವರ್ಷದವರಾಗಿದ್ದಾಗ ಇವರ ತಾಯಿಯು ನಾಗರ ಪಂಚಮಿ ದಿವಸ ಮಣ್ಣಿನ ನಾಗನನ್ನು ಮಾಡಿ ಪೂಜಿಸುತ್ತಿದ್ದಳು. ಅದನ್ನು ನೋಡಿ ಮಹಾರಾಜರು ತಾಯಿಯ ಪೂಜೆಗಾಗಿ ಜೀವಂತ ನಾಗರ ಹಾವೊಂದನ್ನೇ ತಂದು ಕೊಟ್ಟರು. ಅಂದಿನಿಂದ ಅವರು ನಿರ್ಭಯವಾಗಿ ಹಾವುಗಳನ್ನು ಹಿಡಿಯುತ್ತಿದ್ದಾರೆ. ತನ್ನ ಬಳಿಯಲ್ಲಿಯೇ ಅವನ್ನು ಕೆಲವನ್ನು ಸಾಕುತ್ತಿದ್ದಾರೆ. ಬಿಸಿಲು ಕಾಲದಲ್ಲಿ ಸರ್ಪಗಳ ಮೇಲೆಯೇ ಮಲಗುತ್ತಾರಂತೆ. ಕೇವಲ ಆತ್ಮ ವಿಶ್ವಾಸದ ಧೈರ್ಯದಿಂದಲೇ ಅವರು ಈ ಕೆಲಸ ಮಾಡುತ್ತಿರುವರಂತೆ. ಮಹಾರಾಜರು ಹಾವುಗಳ ಸಂಗಡ ಆಡಿದರೂ ಅವುಗಳು ಅವರಿಗೇನೂ ಮಾಡುವುದಿಲ್ಲ. ಅವರು ಆ ಹಾವುಗಳಿಂದ ಇತರರಿಗೆ ಕಚ್ಚಿಸಿದರೂ ವಿಷವೇರುವುದಿಲ್ಲ. ಮಹಾರಾಜರು ತ್ರಾಟಕ ವೆಂಬ ಕ್ರಿಯೆ ಮಾಡುತ್ತಾರೆ. ಅದರಿಂದಲೇ ಅವರು ತನ್ನ ಹತ್ತಿರವಿರುವ ಯಾರಿಗೂ ವಿಷವೇರ ಬಿಡುವುದಿಲ್ಲ. ಯಾವನಾವನೊಬ್ಬನಿಗೆ ಹಾವು ಕಚ್ಚಿದಾಗ ಕಚ್ಚಿದ ಏಳು ಗಂಟೆಯಲ್ಲಿ ತಂತಿ ಕೊಟ್ಟು ಮಹಾರಾಜರಿಗೆ ತಿಳಿಸಿದಲ್ಲಿ ಅವರು ವಾರದ ಗುಟಕಾವಿಧಿಯಿಂದ ಹಾವು ಕಚ್ಚಿದವನಿಗೆ ಗುಣವಾಗುವಂತೆ ಮಾಡುವರು. ಇದು ವರೆಗೆ ಅವರು ಸುಮಾರು 20 ಸಾವಿರ ಜನರಿಗೆ ಗುಣಮಾಡಿರುವರಂತೆ! ದನ ಕರುಗಳಿಗೆ ಹಾವು ಕಚ್ಚಿದರೂ ಗುಣ ಪಡಿಸುತ್ತಾರೆ. ಮಹಾರಾಜರು ಔಷಧಿಗಾಗಿ ಹಾವು ಸಾಕುವರು. ಸರ್ಪದ ವಿಷದಿಂದ ಔಷಧ ಮಾಡಿ, ರಕ್ತ, ಪಿತ್ತ, ಕ್ಷಯ, ಒಲೆರೋಗದ ಮೊದಲಾದ ರೋಗಗಳನ್ನು ಗುಣಪಡಿಸುವ ಪ್ರಯೋಗ ನಡಿಸಿದ್ದಾರೆ. 'ಭೂತ ಪಿಶಾಚಿಗಳಿವೆ. ಪಿಶಾಚಿಯು ಯೋನಿಯ [illegible] ನಾಬದ್ಧ ವಿದ್ಯುಚ್ಛಕ್ತಿಯ ರೂಪದಿಂದ [illegible] ತೊಂದರೆ ಕೊಡುವ ಶಕ್ತಿ ಪಿಶಾಚಿಗಿಲ್ಲ. ಭೂತವು [illegible] ಯಿಂದ ಬರುತ್ತದೆ. ಅದೊಂದು ಮೆದುಳಿನ ವಿಕಾರವೂ, ಮಾನಸಿಕ ರೋಗವೂ ಆಗಿದೆ. ಇದರಿಂದ ರೋಗಿಗಳಿಗೆ [illegible] ತೆ ವೇದನೆಯಾಗುತ್ತದೆ. ಇದೊಂದು ಮಾನಸಿಕ [illegible] ರುವುದರಿಂದ ಅದನ್ನು ಮಾನಸೋಪಚಾರ ಪದ್ಧತಿಯಿಂದಲೆ ಗುಣಪಡಿಸುತ್ತಾರೆ. ಭೂತ ಹಿಡಿಯುವುದೆಂಬುದು ಮಾನಸ ರೋಗವಾಗಿದ್ದರೂ ಅದು ಹಿಡಿದ ಒಸರು ತಮಗೆ ಬಾರದ ಭಾಷೆಯನ್ನಾಡುವುದು ಹೇಗೆಂದು ಕೇಳಬಹುದು. ಆ ಜನರು ಕೇಳದ ಅಥವಾ ಅವರಿಗೆ ಅಪರಿಚಿತವಾದ ಭಾಷೆಯನ್ನು ಭೂತವು ಮಾತಾಡುವುದಿಲ್ಲ. ಆ ಜನರ ಸೂಕ್ಷ್ಮ ಮನಸ್ಸಿನ ಮೇಲೆ ಅವರಿಗೆ ಗೊತ್ತಾಗದಂತೆ ಆ ಭಾಷೆಯ ಸಂಸ್ಕಾರವಾಗಿರುತ್ತದೆ. ಆದುದರಿಂದ ಭೂತ ಹಿಡಿದವರು ಆ ಭಾಷೆಯಲ್ಲಿ ಮಾತಾಡಲು ಸಾಧ್ಯವಾಗುತ್ತದೆ. ಹುಣ್ಣಿಮೆ ಅಮವಾಸ್ಯೆಗಳಲ್ಲಿ ಚಂದ್ರನ ಕಲೆಯ ಪರಿಣಾಮವು ಮೆದುಳಿನ ಮೇಲೆ ಹೆಚ್ಚಾಗುವುದರಿಂದ ಆ ದಿನಗಳಲ್ಲಿ ಭೂತ ಹಿಡಿದ ಜನರು ಬಡಬಡಿಸುವುದು ಹೆಚ್ಚೆಂದೇ' ಮಹಾರಾಜರ ಅಭಿಮತ. ಅವರು 7 ರಿಂದ 40 ಮೊಳ ಉದ್ದದ ಅಗ್ನಿ ಕುಂಡದಲ್ಲಿ ಬರಿಗಾಲಿನಿಂದು ತಾನು ನಡೆದು ಹೋಗುವುದು ಮಾತ್ರವಲ್ಲದೆ ಇತರರನ್ನೂ ನಡೆಸುತ್ತಾರೆ. ಇದನ್ನೆಲ್ಲಾ ಅವರು ತನ್ನ ಭಾವನೆಯ ಬಲದ ಮೇಲೆಯೇ ಮಾಡುತ್ತಾರೆ. ಈ ಬಲದಿಂದ ಉಷ್ಣತೆಯನ್ನು ಸಹಿಸುವ ಶಕ್ತಿಯು ಬರುತ್ತದಂತೆ. ಇದೆಲ್ಲಾ ಮನೋಬಲದ ಮೇಲೆ ನಡೆಸಲ್ಪಡುವ ಕೆಲಸವಲ್ಲದೆ ಆದಕ್ಕೆ ಯಾವ ಧರ್ಮ ಸಂಬಂಧವು ಇಲ್ಲವೆಂದು ಮಹಾರಾಜರು ತಾನೇ ತಿಳಿಸಿರುತ್ತಾರೆ. ಇವರು ಸ್ವಾಮಿ ಶ್ರದ್ಧಾನಂದರ ಕೊಲೆಯಾದ ದಿನ ಹಿಂದು ಸಂಘಟನಾ ಕಾರ್ಯ ಮಾಡಬೇಕೆಂದು ನಿರ್ಧರಿಸಿ ಅದಕ್ಕಾಗಿ ದೇಶದಲ್ಲೆಲ್ಲಾ ಸಂಚರಿಸುತ್ತಿದ್ದಾರೆ. ಮುಕ್ತೇಶ್ವರ ದಲವೆಂಬುದನ್ನು ಸ್ಥಾಪಿಸಿದ್ದಾರೆ. ಇದರ ಶಾಖೆಗಳು 40 ಕಡೆಗಳಲ್ಲಿವೆ.

ಸ. ಯ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ದಿವಂಗತ ಮೆ ಸೆಲ್ಲಮಕ್ಕಳ ಬಿ. ಚಂಗಪ್ಪನವರು

ಮಹನೀಯರೇ,

ಮೆ. ಸೆಲ್ಲಮಕ್ಕಳ ಬಿ ಚಂಗಪ್ಪನವರು ಈ ತಾ. 16ನೇ ಸೋಮವಾರ ರಾತ್ರಿ ಮರಣ ಹೊಂದಿದರೆಂಬ ವಾರ್ತೆಯು ಅವರ ಪರಿಚಿತರೆಲ್ಲರನ್ನೂ ದುಃಖ ಸಾಗರದಲ್ಲಿ ಮುಳುಗಿಸದೆ ಇರಲಾರದು. ಅವರು ಸೋಮವಾರ ಶಾಲೆಗೆ ಬಂದು ಮಧ್ಯಾಹ್ನದ ಮೇಲೆ 3 ಗಂಟೆಯ ವರೆಗೆ ಕೆಲಸ ಮಾಡಿ ಶರೀರ ಸ್ವಲ್ಪ ಅಸ್ವಸ್ಥವೆಂದು ಹೊರಟು ಹೋದರು. ಮನೆಗೆ ಹೋಗುವಾಗ ಆಸ್ಪತ್ರೆಯಿಂದ ಔಷಧಿ ತೆಗೆದುಕೊಂಡು, ಅದನ್ನು ಸೇವಿಸಿ ಸ್ವಲ್ಪ ದೂರ ಹೋದ ಮೇಲೆ ವಾಂತಿ ವಗೈರೆಯಾಗಿ ನಿಶ್ಶಕ್ತರಾದ ಕಾರಣ ಬಸ್ಸಿನಲ್ಲಿ ಮನೆಗೆ ಒಯ್ಯಲ್ಪಟ್ಟರು. ಮನೆಯಲ್ಲಿ ವಾಂತಿ, ಜುಲಾಪು ಜೋರಾಗಿ ರಾತ್ರಿ 10 ಗಂಟೆಗೆ ಶಿವಾಧೀನರಾದರು.

ಮೆ. ಚಂಗಪ್ಪನವರು ಶಾಲೆಯಲ್ಲಿ ತನ್ನ ಕರ್ತವ್ಯವನ್ನು ಬಹಳ ಶ್ರದ್ಧೆಯಿಂದಲೂ, ದಕ್ಷತೆಯಿಂದಲೂ ಮಾಡುತ್ತಿದ್ದು, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ, ಉಪಾಧ್ಯಾಯರುಗಳಿಗೂ ಬಹಳ ಆಪ್ತರಾಗಿದ್ದರು. ಆದುದರಿಂದ ಇವರ ಮರಣವಾರ್ತೆಯು ಶಾಲೆಯ ಎಲ್ಲಾ ವ್ಯಕ್ತಿಗಳಿಗೆ ತಿಳಿದೊಡನೆ ಅವರ ಎದೆಯೊಡೆದ ಹಾಗಾಯಿತು! ಅವರ ಮಾಡುವುದೇನು, ವಿಧಿಲಾಸ ವಿಚಿತ್ರವಾಗಿದೆ. ಮೃತ ಪುರುಷರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬಕ್ಕೆ ದುಃಖವನ್ನು ಸಹಿಸುವುದಕ್ಕೆ ಧೈರ್ಯವನ್ನೂ, ಭಗವಂತನು ದಯಪಾಲಿಸಲೆಂದು ದೇವರನ್ನು ಪ್ರಾರ್ಥಿಸುವ,

'ಒಬ್ಬ ಉಪಾಧ್ಯಾಯ.'

ಗುಹ್ಯ ದೇವಸ್ಥಾನದಲ್ಲಿ ಎಲ್ಲರಿಗೂ ಪ್ರವೇಶ

ಮಹನೀಯರೇ,

ಅಮ್ಮತ್ತಿನಾಡು ಗುಹ್ಯ ಗ್ರಾಮದಲ್ಲಿ ತಾ 9—11—31 ರಲ್ಲಿ ಕಾವೇರಿಯಮ್ಮನ ಜಾತ್ರೆಯು ಬಹಳ ವಿಜೃಂಭಣೆಯಿಂದ ನಡೆಯಿತು. ಈ ಜಾತ್ರೆಗೆ ನೂರಾರು ಜನಪರಿಷೆ ಬಂದು ಸೇರಲಾಯಿತು. ಜಾತ್ರೆ ಕಳೆದ ಮಾರಣೆ ದಿನದಿಂದ 2 ದಿನ ಊರಿನವರೆಲ್ಲರೂ ಸೇರಿ ಮೀಟಿಂಗ್ ಮಾಡಿ ಗುಹ್ಯ ಮಹದೇವರ ಸ್ಥಾನದಲ್ಲಿ ಹಿಂದೂ ದೇಶದಲ್ಲಿ ಉತ್ತರ ದಕ್ಷಿಣ ದೇವಸ್ಥಾನಗಳಲ್ಲಿ ನಡೆಯುವಂತೆ ಮತ ಯಾ ಜಾತಿ ಭೇದಗಳಿಲ್ಲದೆ ಪ್ರತಿ ಮನುಷ್ಯನು ಶಿವರಾತ್ರಿ ಒಂದು ದಿನ ದೇವಸ್ಥಾನದ ನಿತ್ಯ ಪೂಜೆ ಆದ ವೇಳೆ ಮಾರಣೆ ದಿನ ಸೂರ್ಯೋದಯದ ವರೆಗೆ ದೇವಸ್ಥಾನದೊಳಗೆ ನುಗ್ಗಿ ಬಿಂಬ ಸ್ಪರ್ಶದಿಂದ ಅವರವರ ಭಕ್ತಿ ವಿಶ್ವಾಸದ ಮೇರೆ ಪೂಜೆ ಮಾಡಲು ಬಿಡುವಂತೆ ತೀರ್ಮಾನಿಸಿರುವ ಸಂಗತಿ ಸ್ತೋತ್ರಾರ್ಹವಾಗಿರುತ್ತದೆ.

ಪೂರ್ವದಲ್ಲಿ ನಮ್ಮ ಭರತ ಖಂಡದಲ್ಲಿ ನವಬ್ರಹ್ಮರ ಸೃಷ್ಟಿ ಮನು ಎಂಬವರು ಹಿಂದುಗಳ ನಡತೆ, ಕರ್ಮಗಳಿಗನುಸಾರ ಜಾತಿ ಭೇದವನ್ನು ಕಲ್ಪಿಸಿದರು. ಅಲ್ಲಿಂದ ಒಗ್ಗಟ್ಟಿಗೆ ವಿರೋಧ ದ್ವೇಷ ಎಂಬ ವಿಚಾರಗಳಿಗೆ ಈಡಾಗಿ ನೂರಾರು ಒಳ ಜಾತಿ ಹುಟ್ಟಿ ದೇವರು ಒಂದೇ ಯಾದರೂ ನಾನಾಪ್ರಕಾರ ಮಾಡತಕ್ಕ ಪದ್ಧತಿಯಲ್ಲಿ ಸಹ ಭೇದ ಕಲ್ಪಿಸಿ ಪರಸ್ಪರ ಸ್ಪರ್ಧೆ ನಡೆದು ಬೇರೆಯಾಗಿಕೊಂಡು ನಾನಾ ಅನಾಹುತಕ್ಕೆ ಬಿದ್ದು ಸರಿ [illegible] ಇದನ್ನು ಸಹಿಸಲು ಶಕ್ಯವಿಲ್ಲದ ದೇವರು ಮಹಾತ್ಮರನ್ನು ಅವತರಿಸಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಪ್ರಯತ್ನಿಸುವ ಸಮಯದಲ್ಲಿ ನಾವು ಮನಗೊಡದೆ ಹೋದರೆ ಖಂಡಿತವಾಗಿ ನೂಯೆಯಂ ಪ್ರಬಲಿಸಿ ನಾಶವಾಗಿ ಇತರರ ಸುಮುಕ್ತಿ ತೊಂದರೆ ತರುವದು. ಆದುದರಿಂದ ಸರ್ವರು ಉಪೇಕ್ಷೆ ಮಾಡದೆ ಮೇಲ್ಕಂಡ ಶಿವರಾತ್ರಿ ದಿನ ನಮ್ಮ ದೇವಸ್ಥಾನದಲ್ಲಿ ಹಾಜರಾಗಿ ನಿರ್ಣಯಿಸಿರುವ ಕಾರ್ಯವನ್ನು ಸ್ವೀಕರಿಸಬೇಕಾಗಿ ವಿನಯ. ಪೂರ್ವಕದಲ್ಲಿ ಕೇಳಿಕೊಳ್ಳುತ್ತೇನೆ.

ಅಚ್ಚಯ್ಯ

ಇದು ಉನ್ನತಿಯೋ, ಅವನತಿಯೋ?

ಅಯ್ಯಾ,

ಅರುವತ್ತೊಕ್ಲು ಗೌಡ ಮಹನೀಯರ ತೀರ್ಮಾನವೆಂಬ ಶಿರೋನಾಮದಿಂದ ತಾ. 30—10—31 ರ 'ಕೊಡಗು' ಪತ್ರದಲ್ಲಿ ಗೌಡ ಮತದವರ ಆಚಾರ ವಿಚಾರ (ಪದ್ಧತಿ)ಗಳ ತಿದ್ದುಪಡಿಯ ಕುರಿತಾಗಿ ಬರೆದ ಲೇಖನವನ್ನು ಓದಿ ನೋಡಿದೆನು.

ಈ ತಿದ್ದುಪಡಿಯು ಗೌಡ ಮತದವರ "ಕಟ್ಟೆಮನೆ"ಯವರಿಂದ ಅಥವಾ ಗೌಡ ಮತದ "ಮಹಾ ಸಭೆಯ" ವರಿಂದ ಅಂಗೀಕರಿಸಲ್ಪಟ್ಟು ತೀರ್ಮಾನಿಸಿದ ತಿದ್ದುಪಡಿಯಾಗಿ ಕಂಡುಬರುವುದಿಲ್ಲ. ಇದು ಬರೇ ಒಂದು ಗ್ರಾಮಸ್ಥರು ಮಾತ್ರ ಮಾಡಿಕೊಂಡ ತೀರ್ಮಾನವಾಗಿರುತ್ತದೆ. ಆದರೆ ಇಂಥಾ ತೀರ್ಮಾನವನ್ನು ಪತ್ರದಲ್ಲಿ ಬಹಿರಂಗಪಡಿಸಿದ್ದು ಶೋಚನೀಯವೇ ಸರಿ.

ಏತಕೆಂದರೆ, ಮತಸಮ್ಮಂಧವಾದ ವಿಚಾರಗಳು ಅಂದರೆ ಪೂರ್ವ ಪದ್ಧತಿ ಪ್ರಕಾರ ನಡೆಯುವ ಶುಭ ಶೋಭನಾದಿ ಕಾರ್ಯಗಳಲ್ಲಿ ನ್ಯೂನಾತಿರೇಕಗಳು ಇದ್ದರೆ ನಮ್ಮ ಮತದವರ ಮಹಾ ಸಭೆಯಲ್ಲಿ ಬಹು ಪಕ್ಷದವರ ಅಭಿಪ್ರಾಯದಂತೆ ವಿಮರ್ಶಿಸಿ ಅದರಂತೆ ಶುಭಾಶುಭ ಕಾರ್ಯಗಳನ್ನು ಏಕ ರೀತಿಯಲ್ಲಿ ನಡೆಸಿ ಬರುವಂತೆ ತೀರ್ಮಾನಿಸುವದೇ ಯುಕ್ತವಾಗಿರುತ್ತದೆ.

ಅನು ವಿಸಹ ಮನ ಒಂದಂತೆ ಗ್ರಾಮಕ್ಕೊಂದು ನಾಡಿಗೊಂದು ಎಂಬಂತೆ ವಿಧ ವಿಧವಾದ ಪದ್ಧತಿಗಳನ್ನು ಮಾಡಿಕೊಂಡಲ್ಲಿ ಈಗಲೇ ಇರುವ "ಕುಪ್ಪಸ ದಟ್ಟಿಯ ಗೌಡ" "ಕೋಟು ಪಂಚೆಯ ಗೌಡ"ರ ಒಳಮತ ಭೇದಗಳೊಂದಿಗೆ ಇದು ಸೇರಿದರೆ ಮುಂದಕ್ಕೆ ನಮ್ಮ ಒಳಗಿನ ಐಕ್ಯಕ್ಕೆ ಕುಂದು ಉಂಟಾಗಿ ನಮ್ಮ ಉನ್ನತಿಗೆ ಬದಲಾಗಿ ಅವನತಿಗೆ ಕಾರಣವಾಗಬಹುದು.

ಇದಲ್ಲದೆ ಶುಭಶೋಭನಾದಿ ಕಾರ್ಯಗಳಲ್ಲಿ ಉಡಿಗೆ, ತೊಡಿಗೆ, ಊಟ ಉಪಚಾರಾದಿಗಳಲ್ಲಿ ಆಡಂಬರವಿಲ್ಲದೆ ಸ್ವಲ್ಪ ವೆಚ್ಚದಿಂದ ಕಡಿಮೆ ಖರ್ಚಿನಲ್ಲಿ ಕಾರ್ಯನಿರ್ವಹಿಸುವದರಿಂದ ಮಾತ್ರ ಪ್ರಯೋಜನವಾಗುವುದಲ್ಲದೆ ಅನಾವಶ್ಯ ಪೂರ್ವ ಪದ್ಧತಿಗಳನ್ನು ಲೋಪ ಮಾಡಿದ ಮಾತ್ರಕ್ಕೆ ಯಾವ ಲಾಭವೂ ಇರುವುದಿಲ್ಲ.

'ಬಂಧು.'

ಸ್ಥಳೀಕ ಸ್ವರಾಜ್ಯ ಸಂಸ್ಥೆಯ ಕರ್ತವ್ಯ.

ಅಯ್ಯಾ,

ಕೊಡಗು ದೇಶವು ಬೆಟ್ಟ ಪ್ರದೇಶವೆಂಬುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಮತ್ತು ವನಸ್ಪತಿಗಳು ಬ್ರಹ್ಮಾಂಡವಾಗಿದೆ. ಇದನ್ನು ಪುಷ್ಟೀಕರಿಸುವುದಕ್ಕೆ ಮಲೆಯಾಳದ ಅನೇಕ ವೈದ್ಯರು ಬಂದು ನಾನಾ ವಿಧದ ಮೂಲಿಕೆಗಳನ್ನು

[illegible]ತೆಗೆದುಕೊಂಡು ಹೋಗುವುದು ಮತ್ತು ಇಲ್ಲೇ ಕೆಲವು ತಿಂಗಳು ಇದ್ದುಕೊಂಡು ಮನೆ ಮನೆಗಳಲ್ಲಿ ಕಾಯಿಲಸ್ಥರಿಗೆ ಔಷಧಿ ನೀಡಿ ಹಣ ಸಂಪಾದಿಸಿ ಹೋಗುವುದನ್ನು, ಇನ್ನು ಕೆಲವರು ಬಜಾರಿನಲ್ಲಿ ಅಂಗಡಿ ಇಟ್ಟು ಕೆಲಸ ಮಾಡುವುದನ್ನೂ ನಾವು ಕಣ್ಣಾರೆ ನೋಡುತ್ತಿರುವೆವು.

ಆದರೇನು? ನಮ್ಮ ನಾಗರೀಕತನವು ಒಡೆದು ಹಿಂದು ಬಿದ್ದದ್ದು ಹಿಂದೂಸ್ಥಾನದ ಪ್ರತಿ ಭಾಗಗಳಲ್ಲೂ ನಡಿಸುವಾತ ರಿಯೂಯಿತಿಗಳು ನಮ್ಮ ಕಟ್ಟ ದೇಶದ ಒಳ ಹೊಕ್ಕಲು 25–50 ವರ್ಷಗಳಾಗುವವು. ಇದು ನಮ್ಮ ತಿಳಗೇಡಿತನವೋ ಯಾ ಸರ್ಕಾರದ ಅಡಚಣೆಯೋ? ಅಲ್ಲ. ಘನ ಸರ್ಕಾರದವರು ಸಮಯವರಿತು ಇಂಥಾ ಆಯುರ್ವೇದದ ಔಷಧಾಲಯಗಳನ್ನು ಇಡಲು ಸಹಾನುಭೂತಿ ತೋರಿಸುವುದಾಗಿ ನಮ್ಮ ಘಟ್ಟ ಕೌನ್ಸಿಲಿನಲ್ಲಿ ತಂದ ಠರಾವನ್ನು ಅಂಗೀಕರಿಸಿರುವಾಗ ನನ್ನ ಜ್ಞಾಪಕ ಅದರಿ ತಪ್ಪೆಲ್ಲಿ? ನಮ್ಮ ಸ್ಥಳೀಕ ಸ್ವರಾಜ್ಯದ ಸಂಸ್ಥೆಗಳಲ್ಲಿ ಎಂಥರ ತಪ್ಪೇ?

ಇಂಥಾ ಒಂದು ಒಳ್ಳೆಯ ಆಲೋಚನೆ [illegible] ನಮ್ಮ [illegible]. ಗಣನೆಗೆ ತಾರದು ಒಂದು ಆಯುರ್ವೇದಿಕ್ ಆಸ್ಪತ್ರೆಯನ್ನು ಭಾಗಮಂಡಲದಲ್ಲಿ ಕಳೆದ ಆಕ್ಟೋಬರ್ ತಿಂಗಳ ಆರಂಭದಿಂದ ನಡಿಸುತ್ತಿರುವರು. ಅವರ ಭಾಗ್ಯಕ್ಕೆ [illegible] ಪ್ರಸಿದ್ಧಿ ಹೊಂದಿದ [illegible] ಐದು ವರ್ಷ ಓದಿ ಚೆನ್ನದ ಪದಕದೊಂದಿಗೆ [illegible] ದೊರೆತು, ಅಲ್ಲಿನ ಕೆಲಸವು [illegible] ಚೀಫ್ ಕಮಿಷನರ್ [illegible] ಮೊದಲಾದ [illegible], [illegible] ಒಪ್ಪಿರುತಾರೆ, [illegible] ಭಾಗಮಂಡಲದ ಮತ್ತು ಸುತ್ತು ಮುತ್ತು ಗ್ರಾಮಗಳ ಭಾಗ್ಯ.

ಈ ಭಾಗ್ಯವು ನಮಗೆ ದೊರೆಯಬಾರದೇ? [illegible] ವೀರಾಜಪೇಟೆ ಎಂಬ ಪಟ್ಟಣಗಳಲ್ಲಿ ಮುನ್ಸಿಪಾಲಿಟಿ [illegible] ಸ್ಥಳೀಕ ಸ್ವರಾಜ್ಯ ಸಂಸ್ಥೆಗಳಿವೆ. ಈ ಎರಡು ಸ್ಥಳಗಳಲ್ಲಿ [illegible] ವೈದ್ಯಶಾಲೆಗಳು [illegible] ನಡೆಯುವ ಸಂಗತಿ ನಾವು ಪ್ರತಿ ದಿನವೂ ನೋಡುತ್ತಿರುವೆವು. [illegible] ನಮ್ಮ ಮುನ್ಸಿಪಾಲಿಟಿಯ ಮೆಂಬರುಗಳು ಏನು ಮಾಡುತ್ತಿರುವರು?

ಇನ್ನಾದರೂ ಎಚ್ಚತ್ತು ಅವರು ಸರ್ಕಾರಕ್ಕೆ ಕೊಡುತ್ತಿರುವ ಗ್ರಾಂಟನ್ನು [illegible] ಎರಡು ಸ್ಥಳಗಳಲ್ಲಿ ಒಂದೊಂದು ಆಯುರ್ವೇದಿಕ್ ಆಸ್ಪತ್ರೆ [illegible] ಅವಕಾಶವೂ ಇದೆ. ಸರ್ಕಾರದವರು ಮೇಲೆ ಹೇಳಿದ ಹಾಗೆ ಒಪ್ಪಿರುವ ಇರುತ್ತಾರೆ. ಹೇಗಾದರೂ ಇದರಿಂದ [illegible] ಅನೇಕ ಆಯುರ್ವೇದ ಡಾಕ್ಟರುಗಳೂ [illegible] ದೊರೆಯುತ್ತಿರುವರು.

ಪಟ್ಟಣವಾಸಿಗಳ ಪ್ರತಿನಿಧಿಗಳೇ ಇನ್ನಾದರೂ ಈ ಸಂಗತಿಗೆ ಗಮನ ಕೊಡಬೇಕಾಗಿ ಅಪೇಕ್ಷಿಸುವ

ಪಟ್ಟಣವಾಸಿ.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನಿಮ್ಮ ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು — ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು — 152-3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

52–12

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೆ ಸಂಸ್ಥೆ.

ಅಧ್ಯಕ್ಷರು:—ಮಾನ್ಯ ಸರ್ [illegible]ಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1 ಭಾರೀ ಮೊತ್ತದ ಭಂಡಾರ, ವ್ಯಾಪಾರಸ್ಥ ಕಾರ್ಯಕರ್ತರು, ಕಟ್ಟುನಿಟ್ಟಾದ ಸಂರಕ್ಷಣಾ ನಿಲಯ. ಉತ್ತಮ [illegible] ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ [illegible] ತೆಗೆದುಕೊಳ್ಳುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ [illegible] ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು, ಸಾರ್ವಜನಿಕ ಭದ್ರತೆಯಿಂದ [illegible] ಸೇವೆ ಸಲ್ಲಿಸುತ್ತಾ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3 ಈ ಸ್ವದೇಶೀ ಕಂಪೆನಿಯು ಪೊಲಿಸಿದಾರರಿಗೆ ಪೊಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮರಣದನಂತರ ವಾರೀಸುದಾರರಿಗಾಗಲೀ [illegible] ಕೊಡುವೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೆ ಮೊಬಲಗನ್ನು ಲಾಭ ಸಹಿತ ಪಾವತಿ ಕೊಡುವುದರಲ್ಲಿ ಹೆಸರುಗೊಂಡಿದೆ.

4 ಭಾರತೀಯರ [illegible] ಸ್ಥಾಪಿಸಲ್ಪಟ್ಟ [illegible] ಅತಿ ಕಡಿಮೆ ಖರ್ಚಿನಿಂದ ನಡಿಸಲ್ಪಡುವ ಈ ಸ್ವದೇಶೀ ಕಂಪೆನಿಯು [illegible] ಭಾಗಿಗಳಾಗಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವರ್ಗದವರಿಗೆ ಜಂಟಿ (ಜಾಯಿಂಟ್ ಲೈಫ್) ಪೊಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದೂ ಕಳಕೊಳ್ಳಬೇಡರು

ಆಫೀಸು— ಟೌನ್ ಹಾಲ್ ರೋಡ್, ಮಡಿಕೇರಿ. (26–6)

ಬಿ. ಎಸ್. ಐಯ್ಯಪ್ಪ, ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ಧಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಬಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟೆನ್ ಪೆನ್ನುಗಳು.

[illegible] ಪಂಪರ್ ಫೌಂಟನ್ ಪೆನ್ 1ಕ್ಕೆ	ರೂ.	3 0 0
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ		3 3 0
„ „ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ		3 8 0
„ „ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಸೋಲಿಡ್ ಕಲರ್ ಫೌಂಟನ್ ಪೆನ್ 1ಕ್ಕೆ		3 14 0
„ ಮಾರ್ಬಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ		4 2 0
„ ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಬ್ರೌನ್ ಕಲರ್ ಫೌಂಟನ್ ಪೆನ್ 1ಕ್ಕೆ		5 8 0
[illegible] ಫೌಂಟನ್ ಪೆನ್	1ಕ್ಕೆ	10 8 6
[illegible]	1ಕ್ಕೆ	11 6 0, & 20 10 0
[illegible] ಫೌಂಟನ್ ಪೆನ್	1ಕ್ಕೆ	3 8 0, & 3 12
[illegible] ಪೆನ್	1ಕ್ಕೆ	6 4 0, & 6 12 0
[illegible]	1ಕ್ಕೆ	8 0 0, & 8 10 0

ಟೈಂಪೀಸ್‌ಗಳು.

ಫ್ರಾಂಸ್ ಇರುವ ಪೆಂಟ್ ಟೈಂಪೀಸ್	1ಕ್ಕೆ	3 1 0
ಜರ್ಮನ್ ಮೇಡ್ ಸ್ಕ್ವೇರ್ ಟೈಂಪೀಸ್	1ಕ್ಕೆ	2 2 0
[illegible] ಅಲಾರಂ ಟೈಂಪೀಸ	1ಕ್ಕೆ	6 7 0, & 6 15 0
[illegible] ಅಲಾರಂ ಟೈಂಪೀಸ್	1ಕ್ಕೆ	7 2 0
[illegible] ಅಲಾರಂ [illegible] ಟೈಂಪೀಸ್ [illegible]	1ಕ್ಕೆ	8 10 0
[illegible] ಅಲಾರಂ ಟೈಂಪೀಸ್	1ಕ್ಕೆ	9 6 0
[illegible] ಟೈಂಪೀಸ್	1ಕ್ಕೆ	11 4 0
[illegible] ವಾಚ್ 1ಕ್ಕೆ		[illegible] 10 0
[illegible] ಪಾಕೆಟ್ ವಾಚ್ 1ಕ್ಕೆ		1 4 0
[illegible] ವಾಚ್ 1ಕ್ಕೆ		5 4 0 7 8 0, 10 0 0 & [illegible]



ಇಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3–6–0 ಪಾಕಿಂಗ್ ಪೋಸ್ಟೇಜು ಬೇರೆಯಾಗಿ

[illegible] ಎಂ. ಎಸ್. ಶಿದ್ಧಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು ಮೈಸೂರು.

12–22

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ವಿರಾಜಪೇಟೆ ಕೊಡಗು ಅಪೆಕ್ಸ್ ಸೊಸೈಟಿ
ಅಲ್ಲ: ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜನರಿಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆಲ್ಲ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಲ ಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ

ಪ್ರೆಸಿಡೆಂಟರು,	ಟ್ರೆಜರರ್
ಕೋಳಿಮಂಡ ಅಪ್ಪಯ್ಯನವರು	ಮನೆಯಪ್ಪಂಡ ಚೆಟ್ಟಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ
ಸಿ. ಎಸ್. ವೆಂಕಟ್ಟಯ್ಯನವರು, ಬಿ.ಎ. ಬಿ.ಎಲ್.
ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಆ ಕ್ಷೇತ್ರದ ಏಜೆಂಟರುಗಳಿಗೆ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಒಪ್ಪಿಗೆಯ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು,

ಉತ್ತರ ಕೊಡಗಿಗೆ ಮೆ॥ ಚಾಂದಿರ ಮಾದೈಯ್ಯನವರು,
ದಕ್ಷಿಣ ಕೊಡಗಿಗೆ—ಮೆ॥ ಸೋಮೆಯಂಡ ಅಚ್ಚಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ॥ ಮಂಡೇಪಂಡ ಸೋಮಯ್ಯನವರು, (ಪಾರುಪತ್ಯಗಾರರು)
ನಾಪೋಕ್ಲು—ಎಸ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ॥ ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ॥ ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ॥ ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ॥ ಪಿ. ಜಿ. ಮುದ್ದಯ್ಯನವರು,
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತಿ—ಮೆ॥ ಬಿ. ಮಾದಯ್ಯನವರು
ಸುಂಟಿಕೊಪ್ಪ—ಮೆ॥ ಅಪ್ಪಚೆಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ಧರ್ಮ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ಧರ್ಮ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ಧರ್ಮ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರಿಜಿಸ್ಟ್ರಾರನು ಸಾರ್ವತ್ರಿಕ ಉಪಯೋಗಿಸಲ್ಪಟ್ಟಿರುವ ದಾವಾ ಫಾರಮುಗಳು, ಸಾಲದ ಫಾರಮುಗಳೂ, ಜಮ್ಮು ಮಂಜೂರಾತಿ ಫಾರಮುಗಳೂ, ಸಂಘದ ಸಾಲಕ್ಕೆ ಒಪ್ಪಿಗೆ ಫಾರಮುಗಳೂ, ಜಾಮೀನು ಖಾತಾ, ಫಾರಮುಗಳೂ, ಸ್ಟೋರ್ ಕೀಪರ್ ಖಾತಾ ಫಾರಮುಗಳೂ. ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದಾ ಬರೆದಲ್ಲಿ ಆಗಿದರೇ ಆರ್ಡರ್ ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರ್ಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.	ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ,
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ.	ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.

ನೇಮಕ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟರ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾವೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಭಿವೃದ್ಧಿಯಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೊಯಂಬತ್ತೂರು	ನಾಗಪುರ	[illegible]
ಅಹ್ಮದಾಬಾದು	ಕೊಲಂಬೊ	[illegible]	ನಾಗಪುರ	[illegible]
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	[illegible]
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಢೌಲಗ್ರಾಮ	ಮಂಡಲೆ	ರಾಯಪುರ	ತಿರುನೆಲ್ವೇಲಿ
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

[52-



ಕೊಡಗಿನ ಗುಡುಗುಡು ಎಂಬ ಚಳಿಜ್ವರ ಕೆಮ್ಮು, ಕುಡಿ... ರಕ್ತ... ಗಟ್ಟಿಯಾದ ಜ್ವರಗಳಿಗೂ ಗುಣಕರವಾದ [illegible] ಜ್ವರವನ್ನು ಬಿಡಿಸಿ, ಗೆದ್ದೆಯನ್ನು ... ದುರ್ಬಲತೆಯನ್ನು ಸ್ಥಿರ ಕಾಯ. ಕ್ರಯ ಬಾಟ್ಲಿಗೆ ... ಡಜನ್ 8-8-0. 1 ಡಜನ್ 16-8-0.

ಕಂಪಾಂಡು ಸಿರಪ್ಪು ಬ್ಲಡ್

ಗುರುಗುರು ಜ್ವರ ... ರಕ್ತ ... ಗಟ್ಟಿಯಾಗಿ ... ಮತ್ತು ... ಯುವುದಕ್ಕೆ ಬಲ ಸಂಕಲ್ಪದಿಂದ ನರಳುವ ರೋಗಿಯು ಕಡಿಮೆಯಾಗಿ ಕಂಪಾಂಡು ಸಿರಪ್ಪು ಬ್ಲಡ್ ಎಂಬುದನ್ನು ತಕ್ಷಣ ತರಿಸಿ ಕುಡಿಯಲಿ ಕ್ರಯ ಬಾಟ್ಲಿಗೆ ರೂ. 3—8—0.

ಕಂಪಾಂಡು ಸಿರಪ್ಪು ಬಸಲೀನ:—ಕ್ಷಯರೋಗದ ಕ್ಷಯವೆಂಬ ರೋಗಕ್ಕೆ ಈ ಸಿರಪ್ಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿರಿ. ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು, ಕೆಮ್ಮು ಎದೆನೋವು, ರಕ್ತ ಬೀಳ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ರೋಗ ಮುಂದರಿಯದಂತೆ ಕಾಪಾಡಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3—8—0.

ಕಂಪಾಂಡು ಸಿರಪ್ಪು ಹೆಬೀನ ಸೇಪಿನ:—ಹೆಂಗಸರ ಮೂತ್ರದ್ವಾರದಿಂದಲೂ, ಗರ್ಭದ್ವಾರದಿಂದಲೂ ಹರಿಯುವ ಬಿಳೇ ಸೆರಗು ರೋಗದಿಂದ ಸೊಂಟನೋವು, ಕೈಕಾಲು ಬಚ್ಚಲು, ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಗೊಳಿಸಿ ಬಲವಾಗಿಸುವುದು ಕ್ರಯ ಬಾಟ್ಲಿಗೆ ರೂ. 3—8—0.

ಕಂಪಾಂಡು ಸಿರಪ್ಪು ವೆಸಿಫೂಜ:—ಪ್ರಮೇಹವೆಂಬ ಗುಪ್ತರೋಗವನ್ನು ಪಡಕೊಂಡು, ಮೂತ್ರ ಬಿಂದು ಬಿಂದುಗಳಾಗಿ ... ದ್ವಾರದೊಳಗೆ ಹುಣ್ಣು ವ್ರಣಗಳು, ದುರ್ಮಾಸದ ಕೂಡಿದ ಹಳದಿ ಬಣ್ಣದ ರೋಗಗಳು ಇತ್ಯಾದಿ ಕಠಿಣ ತರದ ರೋಗಗಳನ್ನು ಈ ಬಿಲವಾದ ಸಿರಪ್ಪು ಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ. 3—8—0.

ಶುದ್ಧ ಚಿಕಿತ್ಸೆಯದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ರೋಗಿಯು ತನ್ನ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಪುಟ 3 ... ವರೆಗೆ ಓದಿಕೊಂಡು ಬರೆಯುತಕ್ಕದ್ದು.
ಪರೀಕ್ಷಿಸಿ ಕೊಡುವ ದೃಷ್ಟಾಂತಗಳೂ, ಬಿಸಿಲಿಗೆ ಇತರಕ್ಕೆ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಬೆಲೆಗೆ ದೊರಕುತ್ತವೆ
ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

52—3 **Malariana Co.,**	ವಿಳಾಸ:—ಮಲೇರಿಯಾನ ಕಂಪೆನಿ,
Hampankatta No 14. Mangalore.	ಹಂಪನಕಟ್ಟೆ, ನಂಬರು 14, ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚಿ ಹವು ಮತ್ತು ಇದು ಮಧುರವಾಗಿ ರುವುದರಿಂದ ಮಕ್ಕಳು ಪ್ರೀತಿ ಯಿಂದ ತೆಗೆದುಕೊಳ್ಳುತ್ತವೆ.

ಕ್ರಯ. ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—46 ಗಿರಿಗಾಂವ, ಮುಂಬಯಿ.

Printed & published by P. I. Belliappa at "Kodagu" Press Merc[ara] for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

| ೧೧ | ಮಡಿಕೇರಿ, ಸನ್ ೧೯೩೧ನೇ ಇಸವಿ ಡಿಸೆಂಬರ್ ತಾರೀಖು ೪ ನೇ ಶುಕ್ರವಾರ. | ಸಂಚಿಕೆ ೨೬ |

Telegrams— "Precious"

V. Subramaniar Jeweller.

Telephone:— 3145.

DIAMAND MERCHANT, GOLD & SILVER SMITH.

Deals in all:—

- SPORTS CUPS in all prizes
- MEADALS in up-to-date patterns
- CASKETS in elegant styles

Nos 2 & 3, Kuppumuthu st,
TIRUVATESWARANPET,

Post Box 433, Triplicane P. O.,

MADRAS.

Deals in all:—

- GEM SET JEWELS, set with Diamonds, Rubies etc.,
- GOLD ARTICLES of all patterns
- SILVER WARE in latest style

52—2



GOOLAMHUSAIN ALLIBHOY & SONS

Largest Importers of Firearms and Ammunition

Cheapest priced firm in India,

21—11 210 Abdul Rehman Street, BOMBAY.

ಬಾಲಾರ್ಕಮಧು.



ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

52—46



52—29

9

ಕೊಡಗು.

ಸನ್ ೧೯೩೧ನೇ ಇಸವಿ

ಡಿಸೆಂಬರ್ ತಾ ೪ ನೇ ಶುಕ್ರವಾರ.

ದುಂಡು ಮೇಜು ಪರಿಷತ್ತು ಸಮಾಪ್ತಿ.

ಈ ವಾರ ತಾ 1ರಲ್ಲಿ ದುಂಡು ಮೇಜು ಪರಿಷತ್ತಿನಲ್ಲಿ ಬ್ರಿಟಿಷ್ ಮಂತ್ರಿಯವರಾದ ಮೆ. ರಾಮ್ಸೆ ಮೆಕ್ಡೊನಾಲ್ಡರು ಹಿಂದೂಸ್ಥಾನದ ರಾಜಕೀಯ ರಚನೆಯ ಭವಿಷ್ಯತ್ತಿನ ವಿಷಯ ಬ್ರಿಟಿಷ್ ಸರ್ಕಾರದ ಅಭಿಪ್ರಾಯವೇನೆಂಬದನ್ನು ತಿಳಿಸಿ ಪರಿಷತ್ತನ್ನು ಮುಕ್ತಾಯಗೊಳಿಸಿದರು. ಕಳೆದ ಜನವರಿ ತಿಂಗಳಲ್ಲಿ ಆಗಿನ ಬ್ರಿಟಿಷ್ ಸರ್ಕಾರದ ಒಪ್ಪಿಗೆಯಿಂದ ಹಿಂದೂಸ್ಥಾನದ ಭಾವೀ ರಾಜಕೀಯ ರಚನೆಯು ಯಾವ ತರದ್ದಿರಬೇಕೆಂತ ತಿಳಿಸಿದ್ದರೋ ಈಗಿನ ಸರ್ಕಾರದ ಉದ್ದೇಶವೂ ಅದೇ ಆಗಿದೆಯೆಂತ ಹೇಳಿದರು. ಆ ಉದ್ದೇಶವು ಏನೆಂದರೆ—ಹಿಂದುಸ್ಥಾನದ ಆಡಳಿತದ ಜವಾಬ್ದಾರಿಯು ಹಿಂದೂಸ್ಥಾನದ ಪ್ರಾಂತೀಯ ಮತ್ತು ಮಧ್ಯವರ್ತಿ ಶಾಸನ ಮಂಡಳಿಗಳಿಗೇನೇ ಇದ್ದು ಕೆಲವು ಕಾಲದ ವರೆಗೆ ಹಂಗಾಮಿಯಾಗಿ ಕೆಲವು ಭದ್ರತೆಗಳಿಗೆ ಒಳಪಟ್ಟಿರಬೇಕು. ಮಧ್ಯವರ್ತಿ ಸರ್ಕಾರದ ಜವಾಬ್ದಾರಿಯನ್ನು ಶಾಸನ ಮಂಡಳಿಗೆ ಕೊಡಬೇಕಾದರೆ ಮಧ್ಯವರ್ತಿ ಶಾಸನ ಮಂಡಳಿಯಲ್ಲಿ ಒಟ್ಟು ಹಿಂದುಸ್ಥಾನವು ಅಂದರೆ ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ರಾಜರುಗಳ ಪ್ರತಿನಿಧಿಗಳೂ ಸೇರಬೇಕೆಂಬ ಶರತ್ತಿಗೆ ಒಳಪಟ್ಟಿತ್ತು. ಸೈನ್ಯ ಮತ್ತು ಪರರಾಜರುಗಳೊಡನೆ ಸಂಬಂಧ—ಇವೆರಡೂ ವೈಸರಾಯರ ಸ್ವಂತ ಅಧಿಕಾರದಲ್ಲೇ ಇರಬೇಕೆಂತಲೂ ಇನ್ನೊಂದು ಶರತ್ತಾಗಿತ್ತು. ಸ್ಟೇಟ್ ಸೆಕ್ರೆಟರಿಯವರ ಜವಾಬ್ದಾರಿಯಿಂದ ಮಾಡಿದ ಸಾಲವನ್ನು ತೀರಿಸುವ ಶಕ್ತಿ ಇರಬೇಕು. ಹಿಂದೂಸ್ಥಾನದ ಆರ್ಥಿಕ ಸ್ಥಿತಿಯು ಬದ್ಧವಾಗಿರಲು ತಕ್ಕಷ್ಟು ಬಂದೋಬಸ್ತುಗಳು ಬೇಕು. ಇವೇ ಜನವರಿ ತಿಂಗಳ ಹೇಳಿಕೆಯ ಮುಖ್ಯ ಅಂಶಗಳಾಗಿವೆ.

'ಈಗಿನ ಸರ್ಕಾರವೂ ಹಿಂದೂಸ್ಥಾನದ ಭಾವೀ ರಾಜಕೀಯ ರಚನೆಯು 'ಆಲ್ ಇಂಡಿಯಾ ಫೆಡರೇಶನ್' ಅಂದರೆ ಅಖಿಲ ಭಾರತ ಸಂಯುಕ್ತ ಪ್ರಾಂತ್ಯವಾಗಿರಬೇಕೆಂತ ಒಪ್ಪುತ್ತದೆ. ಅದನ್ನು ಸ್ಥಾಪಿಸಲು ಸರ್ವ ಪ್ರಯತ್ನ ಮಾಡುತ್ತದೆ. ಅದನ್ನು ಕೂಡಲೇ ಸ್ಥಾಪಿಸಲು ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳಲು ಉಪಾಯಗಳನ್ನು ಶೋಧಿಸುತ್ತಲಿರುತ್ತದೆ. ಅಲ್ಪಸಂಖ್ಯಾತ ಕೋಮಿನವರ ಭದ್ರತೆಗಳ ವಿಷಯ ತೀರ್ಮಾನಕ್ಕೆ ಬಾರದುದರಿಂದ ಮಧ್ಯವರ್ತಿ ಶಾಸನ ಮಂಡಲಿಯ ಅಧಿಕಾರ, ಮಧ್ಯವರ್ತಿ ಸರ್ಕಾರದ ಅಧಿಕಾರಿಗಳಿಗೂ ಶಾಸನ ಮಂಡಲಿಗೂ ಇರಬೇಕಾದ ಸಂಬಂಧ ಮುಂತಾದ ವಿಷಯಗಳನ್ನು ಕುರಿತು ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ. ಪ್ರಾಂತೀಕ ಸರ್ಕಾರಗಳು ಶಾಸನ ಮಂಡಲಿಗಳಿಗೆ ಜವಾಬ್ದಾರಿಯಾಗುವಂತೆಯೂ, ಮೇಲಿನ ಸರಕಾರಕ್ಕೆ ಪ್ರಾಂತೀಕ ಸರಕಾರದ ಆಡಳಿತದಲ್ಲಿ ಕೈ ಹಾಕುವ ಹಕ್ಕು ಆದಷ್ಟು ಕಡಿಮೆ ಮಾಡುವುದೂ ಸುಲಭವಾಗಿತ್ತು. ಆದರೆ ಮಧ್ಯವರ್ತಿ ಸರಕಾರವನ್ನು ಶಾಸನ ಮಂಡಲಿಗೆ ಒಳಪಡಿಸುವ ಮುಂಚೆ ಪ್ರಾಂತೀಕ ಸರಕಾರಗಳನ್ನು ಶಾಸನ ಮಂಡಲಿಗಳಿಗೆ ಜವಾಬ್ದಾರಿ ಮಾಡುವುದು ನಿಮಗೆ ಒಪ್ಪಿಗೆಯಿಲ್ಲದ್ದರಿಂದ ಫೆಡರೇಶನನ್ನು (ಸಂಯುಕ್ತ ರಾಜ್ಯ) ರಚಿಸುವುದು ಒಂದೆರಡು ತಿಂಗಳುಗಳಲ್ಲಿ ಸಾಧ್ಯವಿಲ್ಲ. ಅದನ್ನು ಸ್ಥಾಪಿಸಲು ಇರುವ ತೊಡಕುಗಳನ್ನು ಪರಿಹರಿಸಿಕೊಳ್ಳಲು ಕೆಲವು ಕಮಿಟಿಗಳನ್ನು ನೇಮಿಸಲಾಗುತ್ತದೆ. ವಾಯುವ್ಯ ಸರಹದ್ದಿನ ಪ್ರಾಂತ್ಯವನ್ನು ಕೂಡಲೇ ಗವರ್ನರ ಪ್ರಾಂತ್ಯವಾಗಿ ಮಾಡಲಾಗುತ್ತದೆ. ಸಿಂಧು ಪ್ರದೇಶವನ್ನು ಪ್ರತ್ಯೇಕ ಪ್ರಾಂತ್ಯವಾಗಿ ಮಾಡಲು ಸರಕಾರವು ಒಪ್ಪುತ್ತದೆ. ಆದರೆ ಅದು ಸಾಧ್ಯವಾಗಲು ಅದರ ಸರಕಾರಿ ಉತ್ಪತ್ತಿಯನ್ನು ಯಾವ ರೀತಿಯಲ್ಲಿ ಹೆಚ್ಚಿಸಿಕೊಳ್ಳಬಹುದೆಂಬುದಕ್ಕೆ ಒಂದು ಕಮಿಟಿಯು ನೇಮಿಸಲ್ಪಡುತ್ತದೆ.'

'ಅಲ್ಪ ಸಂಖ್ಯೆ ಕೋಮಿನವರ ಕ್ಷೇಮದ ಭದ್ರತೆಗಳನ್ನು ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕೆಂಬುದಕ್ಕೆ ನಿಮ್ಮೊಳಗೆ ಒಗ್ಗಟ್ಟಾಗಲು ಸಾಧ್ಯವಾಗಲಿಲ್ಲ. ನಿಮ್ಮೊಳಗೆ ಒಗ್ಗಟ್ಟಾಗುವ ವರೆಗೆ ರಾಜಕೀಯ ಸುಧಾರಣೆಯನ್ನು ಬಾಕಿ ಇಡದೆ ಈ ಸಮಸ್ಯೆಯನ್ನು ಬ್ರಿಟಿಷ್ ಸರಕಾರದವರೇ ಬಿಡಿಸಲು ಪ್ರಯತ್ನಿಸಬೇಕಾಗಿದೆ. ಆದರೆ ಇನ್ನಾದರೂ ಈ ವಿಷಯದಲ್ಲಿ ನಿಮ್ಮೊಳಗೆ ಒಗ್ಗಟ್ಟಾಗುವುದು ಒಳ್ಳೆಯದೆಂತ ಎಚ್ಚರಿಸುತ್ತೇನೆ. ಈ ದುಂಡು ಮೇಜಿನ ಕಾರ್ಯವು ನಡೆಯುತ್ತಲೇ ಇರುವ ಬಗ್ಗೆ ಇದರ ಕಾರ್ಯಕಾರೀ ಮಂಡಳಿಯಂತೆ ಒಂದು ಕಮಿಟಿಯನ್ನು ಹಿಂದುಸ್ಥಾನದಲ್ಲಿ ಏರ್ಪಡಿಸಲಾಗುತ್ತದೆ. ಬಿಟಿಷ್ ಪಕ್ಷ ಯಾರಿಗೆ ಇರಬೇಕು, ಮಧ್ಯವರ್ತಿ ಸರಕಾರದಲ್ಲಿ ದೇಶರಕ್ಷಣೆ ಮತ್ತು ಪರರಾಜ್ಯ ಸಂಬಂಧದ ಹೊರತು ಆರ್ಥಿಕ ಜವಾಬ್ದಾರಿಯ ಯಾವ ತರಹದ ... ಮುಂತಾದ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಲು ... ಪ್ರತ್ಯೇಕ ಪ್ರತ್ಯೇಕ ಕಮಿಟಿಗಳು ನೇಮಿಸಲ್ಪಡುತ್ತವೆ. ... ಮಂತ್ರಿಯವರ ಹೇಳಿಕೆಯ ಮುಖ್ಯ ಅಂಶಗಳಾಗಿವೆ.

ಈ ಹೇಳಿಕೆಯು ಹಿಂದೂಸ್ಥಾನದ ಮೋಡರೇಟ್ ಪಂಗಡದವರಿಗೆ ... ತೃಪ್ತಿಯನ್ನುಂಟು ಮಾಡಿದೆಯಾಗಿ ... ಮಹಾತ್ಮ ಗಾಂಧಿಯವರಿಗೆ ತೃಪ್ತಿಯಾಗಿಲ್ಲವಾಗಿ ... ಅವರ ಅಭಿಪ್ರಾಯವನ್ನು ಕೊಟ್ಟಿರು ... ಒಂದು ವರ್ಷದ ... ಕೆಲಸ ಮಾಡಿಯೂ ... ಅಲ್ಪ ಸಂಖ್ಯೆ ಕೋಮಿನವರ ... ಅಭಿಪ್ರಾಯವೇ ... ತೀರ್ಮಾನಕ್ಕೆ ... ಅಲ್ಪ ಸಂಖ್ಯೆ ಕೋಮಿನವರ ಕ್ಷೇಮಗಳನ್ನು ಕಾಪಾಡುವ ಭದ್ರತೆಗಳು ಆಗಬೇಕೆನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಪ್ರಾರಂಭದಿಂದಲೂ ಈ ಪ್ರಶ್ನೆಗೆ ಅತೀ ಪ್ರಾಮುಖ್ಯತೆ ಕೊಟ್ಟು, ಈ ವಿಷಯದಲ್ಲಿ ಕಡು ಗರಡದ ಅಭಿಪ್ರಾಯವುಳ್ಳವರನ್ನೇ ಹುಡುಕಿ ಪರಿಷತ್ತಿಗೆ ಸದಸ್ಯರನ್ನಾಗಿ ಮಾಡಿಕೊಂಡ, ಈ ಸಮಸ್ಯೆಯಿಂದ ರಾಜಕೀಯ ರಚನೆಗೆ ಅಡ್ಡಿಯಾಗಬೇಕೆಂತಲೇ ಬ್ರಿಟಿಷ್ ರಾಜತಂತ್ರ ಪ್ರವೀಣರು ಏರ್ಪಡಿಸಿಕೊಂಡಂತೆ ಕಾಣುತ್ತದೆ. ಅಲ್ಪ ಸಂಖ್ಯಾತ ಜನರ ಹಕ್ಕುಗಳನ್ನು ಕಾಪಾಡಲು ನಿಷ್ಪಕ್ಷ ನ್ಯಾಯತೀರ್ಮಾನ ಮನುಷ್ಯನ ಸ್ಥಳಿತಿಗೆ ಬಿಡಬಹುದೆಂಬ ಮಹಾತ್ಮ ಗಾಂಧಿಯವರ ಸೂಚನೆಯನ್ನು ಅಂಗೀಕರಿಸಲಿಲ್ಲ. ಅಲ್ಪ ಸಂಖ್ಯಾತ ಕೋಮಿನಲ್ಲಿ ರಾಷ್ಟ್ರೀಯ ಅಭಿಪ್ರಾಯದವರ ಆಲೋಚನೆ ಕೇಳಲಿಲ್ಲ. ಮತ್ತು ಇದೇ ಸಮಸ್ಯೆಯು ತೀರ್ಮಾನವಾಗದಿರುವುದನ್ನು ಸ್ವರಾಜ್ಯ ಸ್ಥಾಪನೆಗೆ ಅಡ್ಡಿಯಾಗಿ ತೋರಿಸುವುದು ಯುಕ್ತವಲ್ಲ.

ಮಧ್ಯವರ್ತಿ ಸರಕಾರದಲ್ಲಿಯೂ ಪ್ರಜಾ ಜವಾಬ್ದಾರಿ ಪದ್ಧತಿಯನ್ನು ಸ್ಥಾಪಿಸಲು ಈಗಿನ ಬ್ರಿಟಿಷ್ ಸರಕಾರವೂ ಒಪ್ಪುತ್ತದೆ ಎಂತ ಹೇಳಿದ್ದಕ್ಕೆ ಮೋಡರೇಟ್ ಪಕ್ಷದವರಿಗೆ ತೃಪ್ತಿಯಾದಂತೆ ಕಾಣುತ್ತದೆ. ಈ ಅಭಿಪ್ರಾಯವನ್ನು ಕಳೆದ ಜನವರಿಯಲ್ಲೇ ಬ್ರಿಟಿಷ್ ಮಂತ್ರಿಯವರು ತಿಳಿಸಿದ್ದರು. ಆದ್ದರಿಂದ ಈಗ ಹೊಸದು ಸಿಕ್ಕಿದ್ದೇನು? ಬ್ರಿಟಿಷ್ ಪಾರ್ಲಿಮೆಂಟಿಗೆ ಹೊಸ ಚುನಾವಣೆಯಾದ ನಂತರ ಮಧ್ಯವರ್ತಿ ಸರಕಾರದಲ್ಲಿ ಪ್ರಜಾ ಜವಾಬ್ದಾರಿ ಪದ್ಧತಿಯನ್ನು ಕೊಡಲು ಸರಕಾರದ ಒಪ್ಪಿಗೆ ಇಲ್ಲವೆಂತಲೂ ಬರೇ ಪ್ರಾಂತೀಕ ಸರಕಾರಗಳಲ್ಲಿ ಮಾತ್ರ ಈ ಪದ್ಧತಿಯನ್ನು ಸ್ಥಾಪಿಸುವ ಅಭಿಪ್ರಾಯವಿದೆಯೆಂತಲೂ ವರ್ತಮಾನವಿತ್ತು. ಆ ಅಭಿಪ್ರಾಯವನ್ನು ಬಿಟ್ಟು ಮಧ್ಯವರ್ತಿ ಸರಕಾರ ಮತ್ತು ಪ್ರಾಂತ್ಯಗಳಲ್ಲಿ ಸಹ ಪ್ರಜಾ ಜವಾಬ್ದಾರಿಯನ್ನು ಸ್ವಲ್ಪ ತಡವಾಗಿಯಾದರೂ ಸ್ಥಾಪಿಸುವ ಅಭಿಪ್ರಾಯ ಸರಕಾರಕ್ಕೆ ಇದೆಯೆಂತ ತಿಳಿಸಿದ್ದಕ್ಕೇನೇ ತೃಪ್ತಿಪಡಲು ಆಸ್ಪದವೆಲ್ಲಿ? ಜನವರಿ ತಿಂಗಳ ಹೇಳಿಕೆಯು ಹಿಂದೂಸ್ಥಾನದ ಮುಖ್ಯ ರಾಜಕೀಯ ಸಂಸ್ಥೆಗೆ ತೃಪ್ತಿಯಾಗದ್ದರಿಂದ ಆ ಸಂಸ್ಥೆಯ ಪ್ರತಿನಿಧಿಗಳನ್ನೂ ಸೇರಿಸಿಕೊಂಡು ಹಿಂದೂಸ್ಥಾನದ ಬಹು ಜನಕ್ಕೆ ತೃಪ್ತಿಯಾಗುವ ಸ್ವರಾಜ್ಯ ರಚನೆಯನ್ನು ಏರ್ಪಡಿಸಲಿಕ್ಕಲ್ಲವೇ ಗಾಂಧಿ ಇರ್ವಿನ್ ಸಂಧಿಯಾದದ್ದು? ಆಗ ತತ್ವ ಒಂದು. ವರ್ಷದ ಬಳಿಕ ಈಗ ಜನವರಿಯಲ್ಲಿ ಹೇಳಿದ ಹೇಳಿಕೆಯನ್ನು ... ದೋ ... ಕೂಡ ... ಬ್ರಿಟಿಷ್ ಸರಕಾರವು ಅಭಿಪ್ರಾಯ ... ಬ್ರಿಟಿಷ್ ಸರಕಾರವು ಹಿಂದೂಸ್ಥಾನಕ್ಕೆ ಸ್ವರಾಜ್ಯ ಕೊಡಲು ಎಷ್ಟು ಹಿಂಜರಿಯುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಮಧ್ಯವರ್ತಿ ಸರಕಾರವನ್ನು ಪ್ರಜಾ ಜವಾಬ್ದಾರಿಯಾಗಿ ಮಾಡಬೇಕಾದರೂ ದೇಶೀ ರಾಜರುಗಳು ಫೆಡರೇಶನ (ಸಂಯುಕ್ತ ರಾಜ್ಯ) ಸೇರಲು ಒಪ್ಪಬೇಕಂತೆ. ದೇಶೀ ರಾಜರುಗಳು ಸೇರಲೀ, ಸೇರದಿರಲಿ ಬ್ರಿಟಿಷ್ ಹಿಂದೂಸ್ಥಾನಕ್ಕೆ ಕೂಡಲೇ ಸ್ವರಾಜ್ಯ ಸಿಕ್ಕಬೇಕೆಂತ ಸಿಂಧೀಯರ ವಾದವಾಗಿದೆ. ಆದ್ದರಿಂದ ದೇಶೀ ರಾಜರುಗಳು ಫೆಡರೇಶನ್ ಸೇರಿದರೆ ಮಾತ್ರ ಪ್ರಜಾ ಜವಾಬ್ದಾರಿ ಸರಕಾರವು ಕೊಡುವುದಾದರೆ ಈ ರಾಜರುಗಳು ಸೇರುತ್ತಾರೆಂಬ ಭರವಸೆ ಏನಿದೆ? ಈ ರಾಜರುಗಳಲ್ಲಿ ಮತಭೇದವಿದೆ. ಆ ವರೆಗೆ ಮೊದಲು ನಡೆದ ದುಂಡು ಮೇಜು ಸಭೆಯ ಚರ್ಚೆಯಲ್ಲಿ ಫೆಡರೇಶನ್ ಸೇರಲು ಒಪ್ಪಿದ ರಾಜರುಗಳೇ ಈಚೆಗೆ ಸಂಶಯಪಡುತ್ತಲಿದ್ದಾರೆ. ಈ ರಾಜರುಗಳಲ್ಲಿ ಅನೇಕರು ಬೇರೆಯವರ ಹೇಳಿಕೆಗೆ ಒಳಗಾಗುವವರಾಗಿದ್ದಾರೆ. ಆದ್ದರಿಂದ ಮಧ್ಯವರ್ತಿ ಸರಕಾರದಲ್ಲಿ ಪ್ರಜಾ ಜವಾಬ್ದಾರಿ ಕ್ರಮವನ್ನು ಪ್ರಾರಂಭ ಮಾಡುವುದು ಇನ್ನೂ ಹೆಚ್ಚು ಸಂಶಯಕ್ಕೆ ಒಳಗಾಗಿದೆ.

ಮಧ್ಯವರ್ತಿ ಸರಕಾರದಲ್ಲಿ ಪ್ರಜಾ ಜವಾಬ್ದಾರಿ ಸರಕಾರ ಪದ್ಧತಿಯನ್ನು ಸ್ಥಾಪಿಸಿದರೂ ಸಹ ಸೈನ್ಯದ ಅಧಿಕಾರ ಮತ್ತು ಪರರಾಜರ ಸಂಬಂಧ ಸಹ ವೈಸರಾಯರ ಸ್ವಂತ ಅಧೀನದಲ್ಲೇ ಇರಬೇಕಂತೆ! ಮಿಲಿಟರಿ ಖಾತೆಯ ಅಧಿಕಾರವು ಪ್ರಜಾ ಪ್ರತಿನಿಧಿಗಳಿಗೆ ಕೂಡಲೇ ಸಿಕ್ಕಬೇಕೆಂತ ಮಹಾತ್ಮ ಗಾಂಧಿಯವರು ಬಹಳ ಸ್ಪಷ್ಟವಾಗಿ ಆಚೆ ವಾರ ಹೇಳಿದರು. ಈ ಅಧಿಕಾರವು ವೈಸರಾಯರ ಸ್ವಾಧೀನದಲ್ಲೇ ಇರಬೇಕೆಂತಾದರೆ ಫೆಡರಲ್ ಸ್ಟ್ರಕ್ಚರ್ ಕಮಿಟಿಯಲ್ಲಿ ಈ ವಿಷಯ ಚರ್ಚೆ ಮಾಡಿ ಯಾಕೆ ಕಾಲಹರಣ ಮಾಡಿದರೋ ತಿಳಿಯದು. ಹಿಂದೂಸ್ಥಾನ ಸರಕಾರದ ಆರ್ಥಿಕ ಸ್ಥಿತಿಯು ಭದ್ರವಾಗುವಂತೆ ತಕ್ಕ ಬಂದೋಬಸ್ತುಗಳೂ ಇರಬೇಕಂತೆ! ಅದರ ... ವೇನೆಂದರೆ, ಹಿಂದೂಸ್ಥಾನದ ಕರಕಂದಾಯಗಳ ಮೇಲ್ವಿಚಾರ ಸುಂಕದ ಮೇಲೂ, ಟಂಕಸಾಲೆ ನಾಣ್ಯ ವಿನಿಮಯ ಮೇಲೂ ಪೂರ್ತಿ ಅಧಿಕಾರ ಪ್ರಜಾ ಪ್ರತಿನಿಧಿಗಳಿಗೆ ಸಿಗುವುದಿಲ್ಲವೆಂತಾಯಿತು. ಈ ಬಾಬುಗಳಲ್ಲಿ ಸ್ವಾತಂತ್ರ್ಯ ದೊರಕದಿದ್ದರೆ ಪ್ರಜಾ ಜನರಿಗೆ ಸಹಾಯವಾಗಲಾರದೆಂಬುದು ನಿರ್ವಿವಾದವಾಗಿದೆ. ಆದ್ದರಿಂದ ಎಂದೇ ಕೊಟ್ಟರು ದಾಗಿ ಹೇಳುವ ಪ್ರಜಾ ಜವಾಬ್ದಾರಿ ಸರಕಾರ ಪದ್ಧತಿ ನಿಜವಾದ ಸ್ವಾತಂತ್ರ್ಯ ದೊರಕುವಂತಿಲ್ಲವೆಂತ ಸ್ಪಷ್ಟವಾಗುತ್ತದೆ.

ಇಷ್ಟೂ ಅಲ್ಲದೆ ಹಿಂದೀಯರಿಗೆ ತಮ್ಮ ರಾಜ್ಯದ ಆಡಳಿತವನ್ನು ಕೊಡುವ ಅಭಿಪ್ರಾಯವು ಬ್ರಿಟಿಷ್ ಸರಕಾರಕ್ಕೆ ಇದ್ದರೆ ಹಿಂದೀಯರ ವ್ಯಕ್ತಿಸ್ವಾತಂತ್ರ್ಯಕ್ಕೆ ಸಹ ಅಡಚಣೆಯನ್ನುಂಟು ಮಾಡುವಂಥ ಆರ್ಡಿನೆನ್ಸ್‌ಗಳನ್ನು ಯಾಕೆ ಬಳಸುತ್ತಿರುವುದು ಎಂತ ಮಹಾತ್ಮರು ಕೇಳುತ್ತಾರೆ. ಅದಲ್ಲದೆ ಮೇಲೆ ಸುಂಕ ಹಾಕುವ ಕಾಟವೊಂದು ... ಕಾರಣದಿಂದ ಕೊಲೆಪಾತಕ ಮಾಡುವ ಪ್ರ... ಸುವುದಕ್ಕಾಗಿ ಸಹ ... ಕೊಡುವುದೆಂತಲೂ ... ಆರ್ ವಿಚಾರವಿಲ್ಲದೆ ಸಾಕ್ಷ್ಯ ವಿಚಾರದಿಂದ ತೀರ್ಮಾನ ... ಮಾಡುವುದೆಂತಲೂ, ಹೀಗೆ ಕೊಟ್ಟ ತೀರ್ಮಾನದ ಮೇಲೆ ಅಪೀಲು ... ಇಲ್ಲವೆಂತಲೂ ಬಂಗಾಲ ಆರ್ಡಿನೆನ್ಸಿನ ... ವಾರ ... ಮಾಡಿಕೊಂಡಿರುತ್ತಾರೆ. ಈ ... ವರ್ಷಕ್ಕೆ ಒಪ್ಪಿಗೆಯಾಗಲಾರದಂಥ ... ಅಧಿಕಾರಗಳಿಂದ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ... ಹೇಗೆ ತಾನೇ ಹುಟ್ಟೀತ.

ಮುಂದೆ ಮಹಾತ್ಮ ಗಾಂಧಿಯವರೂ ಕಾಂಗ್ರೆಸ್ಸೂ ಯಾವ ಕಾರ್ಯಕ್ರಮವನ್ನು ನಿಶ್ಚಯಿಸಿಕೊಳ್ಳುತ್ತಾರೆಂದು ಹಿಂದೂಸ್ಥಾನ ಮಾತ್ರವಲ್ಲ, ಒಟ್ಟು ಪ್ರಪಂಚವೇ ಎದುರು ನೋಡುತ್ತಲಿದೆ.

ದುಂಡುಮೇಜು ಪರಿಷತ್ತಿನಲ್ಲಿ

ಗಾಂಧೀಜಿಯವರ ಭಾಷಣ

ದುಂಡು ಮೇಜು ಪರಿಷತ್ತಿನ ಆಖೈರ ಬೈಟಕಿ ಕಳೆದ ತಾ 30ರ ಮಧ್ಯರಾತ್ರಿಯಲ್ಲಿ ಮಹಾತ್ಮ ಗಾಂಧಿಯವರು 70 ನಿಮಿಷಗಳ ವರೆಗೆ ಮಾಡಿದ ಬಹು ... ದ ಭಾಷಣದ ಸಾರಾಂಶವು ಈ ಕೆಳಗಿನಂತಿದೆ.

ಸವಿನಯ ಕಾನೂನು ಭಂಗ ಚಳವಳವನ್ನು ತಡೆಯಲು ಪ್ರಯತ್ನಿಸಲು ಈಗ ತಡವಾಯಿತು. ದಾರಿಯೊಡೆಯನ ... ನಾನು ನಿಂತಿರುತ್ತೇನೆ. ಗೌರವಾರ್ಹವಾದ ತೀರ್ಮಾನಕ್ಕೆ ಬರಲು ... ಎಷ್ಟು ಬೇಕಾದರೂ ತ್ಯಾಗ ಮಾಡಲು ಸಿದ್ಧನಿದ್ದೇನೆ. ಹಿಂದೂಸ್ಥಾನಕ್ಕೆ ನಿಜವಾದ ಸ್ವಾತಂತ್ರ್ಯವನ್ನು ಕೊಡುವಂತೆ ... ಎಂದು ಕಾಂಗ್ರೆಸ್ಸಿಗಿರುವ ಸ್ಫೂರ್ತಿಯು ನಿಮಗೂ ... ಗುವಂತೆ ನಾನು ಮಾಡಲಾರೆನಾದರೆ ನಾನು ರಾಜಿಗೆ ... ಕುತೂಹಲವುಳ್ಳವನೆಂದು ನಿಮಗೆ ಗೊತ್ತಾಗುವದು.

ಅದ (ಬ್ರಿಟಿಷರ) ಸ್ವಾತಂತ್ರ್ಯದ ಇಚ್ಛೆ ... ಇರುವ ವರೆಗೆ ರಾಜಿಯು ಸಾಧ್ಯವಾದಲ್ಲ. 350 ... ಯ ಜನ ಸಂಖ್ಯೆಯು ಜನಾಂಗಕ್ಕೆ ಕೊಡಗಾರನ ಕರ... ವಿಷದ ಒಬ್ಬಲೂ, ಬಿಸ್ಕತ್ತೂ, ಒರ್ಕೆಯೂ, ಅಥವಾ ... ಉಂಡೆಯೂ ಅವಶ್ಯವಿರುವುದಿಲ್ಲ. ಅದಕ್ಕೆ ತನ್ನ ... ಕ್ಷಯವೂ, ಇಲ್ಲ ಎಂದು ಹೇಳುವ ಶಕ್ತಿಯೂ ಪವಿತ್ರ ... ಹಿಂದೀ ಜನಾಂಗವು ಅದನ್ನೀಗ ಕಲಿ...

ಕಾಂಗ್ರೆಸ್ಸಿನ ಪರವಾಗಿ ನಾನು ಕೇಳಿರುವ ... ನ್ನು ಸ್ವಲ್ಪವೂ ಬಿಟ್ಟು ಕೊಡುವುದಿಲ್ಲವಾದರೂ, ಫೆಡರಲ್ ಸ್ಟ್ರಕ್ಚರ್ ಸಬ್ ಕಮಿಟಿಯಲ್ಲಿ ನಾನು ಮಾಡಿದ ... ಒಂದು ಶಬ್ದವನ್ನೂ ಹಿಂತೆಗೆಯುವದಿಲ್ಲವಾದರೂ ... ಮುಖ್ಯ ಬ್ರಿಟಿಷ್ ಅಥವಾ ಇಂಗ್ಲಿಷ್ ... ಸುವ ಪ್ರತಿಯೊಂದು ಸೂತ್ರವನ್ನು ಆಲೋಚಿಸಲಿಕ್ಕೆ ನಾನು ಇಲ್ಲಿ ಇರುವದಾಗಿದೆ. ಆದರೆ ದೇಶಗಳಿಗಾಗಿ ... ರ್ಷ ಕಳೆದುಕೊಂಡಿರುವ, ಬಲಹೀನ ಮೂಕ ಪ್ರಾಣಿಯಾದ ... ಪ್ಪವಾದರೆ ಎಡೆಕೊಟ್ಟ ... ನನಗೂ, ನಾನು ಪ್ರತಿನಿಧಿ... 'ವ ಕಾಂಗ್ರೆಸ್ ಸಭೆಗೂ ಸಲ್ಪ ಸ್ಥಳವನ್ನಾದರೂ ... ನೀವು ನನ್ನನ್ನು ನಂಬುವಂತೆ ಕೇಳಿಕೊಂಡರೂ ... ನ್ನು ನಂಬುವದಿಲ್ಲ. ನಾನು ಆ ಮುಸ್ಸಂಗತ ಬಹು ... ನ ... ಗೆ ಕಾಂಗ್ರೆಸಿನದಲ್ಲದೆ ಬೇರೆ ಯಾವ ಅಧಿ... ಇಲ್ಲ.

ನಾನು ಹೇಳುವ ವಿಷಯಗಳಿಂದ, ಈಗಾಗಲೇ ... ಸಲ್ಪಟ್ಟಿರಬಹುದಾದ, ಮಂತ್ರಿ ಮಂಡಳಿಯ ತೀರ್ಮಾನವು ... ದುರಾಯಿಸಲ್ಪಡುವದೆಂದು ನಾನು ನೆನಸುವುದಿಲ್ಲ. ... ಬಡ ಜನರ ಸ್ವಾತಂತ್ರ್ಯವು ಬರೇ ಸಂಭಾಷಣೆಗಳಿಂದ ... ಪೂರ್ಣಗೊಳಿಸಲ್ಪಡಲಾಗುವುದಿಲ್ಲ.

(4ನೇ ಪುಟದಲ್ಲಿ ಮುಂದುವರಿದಿದೆ.)

ಭಾರತೀಯರಿಗೆ ಸ್ವಾತಂತ್ರ್ಯ ಕೊಡಿ.

ಜನರಲ್ ಸ್ಮಟ್ಸ್‌ರವರು ದಕ್ಷಿಣ ಆಫ್ರಿಕದ ವೀರರು ಗಾಂಧಿಯವರೊಂದಿಗೆ ಹೋರಾಡಿದ, ಕೃಷ್ಣಜನಾಂಗದ ಮತ್ತು ಸ್ವಾತಂತ್ರ್ಯಗಳನ್ನುಳಿಸಿದ ಧೀರರು. ಅವರು [illegible] ಚಕ್ರಗೋಷ್ಠಿಯ ಕಾರ್ಯಕಲಾಪಗಳನ್ನೂ, ಬ್ರಿಟಿಷ [illegible] ಭಾವನೆಯನ್ನೂ, ಗಾಂಧೀಜಿಯವರ ಸಾತ್ವಿಕ ಸಾ[illegible]ವನ್ನೂ ಕಂಡು ಆಫ್ರಿಕಕ್ಕೆ ಹೋಗುವುದಕ್ಕೆ ಮೊದಲು ಹೀ[illegible] ಹೇಳಿದರು.

"ಬ್ರಿಟಿಷರ ಗಂಟಲು ಗಾಢವಾಗಿ ಈಗ ನಿಂತಿರುವದು [illegible]ಬಂಧದ ಪ್ರಶ್ನೆಯೊಂದೇ. ಅದೊಂದೇ ವಿಷಮವಾದ [illegible] ಭಂಗಬಾಧವನ್ನು ತೃಪ್ತಿಗೊಳಿಸಲು ಬ್ರಿಟನ್ನು ಬಹಳ [illegible] ತೋರಬೇಕಾಗಿದೆ. ತೃಪ್ತಿಗೊಳಿಸಲು ಮನಸ್ಸು [illegible]ಡಬೇಕು. ಅದನ್ನು ಎಷ್ಟು ಬೇಗ ನಿಂದಿಸಿದರೆ ಅಷ್ಟು [illegible] ಏಕೆಂದರೆ ಉಭಯ ಪಕ್ಷಗಳೂ ಒಂದು ತೀರ್ಮಾನ[illegible] ಒಲಿಸು ಇದೇ ಸುಲಗ್ನ. ಇಂತಹ ಸುಸಂಧಿಯು ಒಹು [illegible] ಬರಲಾರದು.

ಮಹಾತ್ಮ ಗಾಂಧಿಯವರು ಬ್ರಿಟಿಷರೊಂದಿಗೆ ಪರಸ್ಪರ [illegible]ಯುಕ್ತವಾದ ಒಪ್ಪಂದಕ್ಕೆ ಬರಲು ಬಹಳ ಕುತೂಹಲ[illegible]ವರಾಗಿರುವರೆಂದು ನನಗೆ ಚೆನ್ನಾಗಿ ಗೊತ್ತಿದೆ. ಗಾಂಧಿ[illegible] ಬಲಯುತರಾಗಿರುವಾಗಲೇ, ಅವರ ಮಾತಿಗೆ ಭಾ[illegible]ತೀಯ ಜನಾಂಗದ ಬಲವಿರುವಾಗಲೇ ಬ್ರಿಟಿಷರು ಅವರೊಂ[illegible]ಗೆ ಸಂಧಿ ಮಾಡಿಕೊಂಡಲ್ಲದೇ [illegible] ಬ್ರಿಟನ್ನಿಗದೇ ಬಂದು [illegible]ಯಿಂದ ಭಾವಿಸುತ್ತೇನೆ. ಗಾಂಧಿಯೇ ಭಾರತದ [illegible] ಮತದ ನಾಯಕರು. ಭಾರತ ಜನಾಂಗದ [illegible] [illegible] ಆ ಜನಾಂಗದ ಪರವಾಗಿ [illegible] ಮಾಡಿಕೊಂ[illegible], ಅದಕ್ಕೆ ಜನಾಂಗದ ಮನ್ನಣೆಯಿಲ್ಲದಿಲ್ಲ ನಾಯಕ [illegible]

ಮತ್ತೆ ಪರಸ್ಪರ ಅನುಮಾನ, ದ್ವೇಷಾಸೂಯೆ ಕಲಹಗ[illegible]ಳುಂಟಾಗದಂತೆ ಎಚ್ಚರಿಕೆ ತೋರಿಸಬೇಕು. [illegible] ಬಾಡದ [illegible] ಅನಾಹುತಗಳಿಗೆ ಪ್ರಾಣಹಾನಿ ಯಾಗದಂತೆ ನೋಡಿಕೊ[illegible]ಬೇಕು.

ಬಲಪ್ರದರ್ಶನವಾಗಲಿ, ಪ್ರಯೋಗವಾಗಲಿ ಅದರಿಂದೇನೂ [illegible]ಪ್ರಯೋಜನವಿಲ್ಲ. ಕಾಲಧರ್ಮವೂ ಅದಕ್ಕೆ ವಿರೋಧವಾಗಿ[illegible]. ಬ್ರಿಟಿಷರಾದರೂ ಅದಕ್ಕೆ ಸಿದ್ಧರಾಗಿಲ್ಲ. ಚಕ್ರಗೋ[illegible]ಷ್ಠಿಯ ಕಾರ್ಯಕಲಾಪಗಳಿಂದ ಸದ್ಯಕ್ಕೆ ಮುಂದೇನೂ ಮಾಡ[illegible]ಲಾಗದೆಂದು ಕಂಡು ಬಂದರೆ, ನಾಮಕಾವಾಗಿ ನಡೆಸಿ, ಅಲ್ಲಿಗೇ [illegible] ಮುಂದೆ ಸಂಧಾನವನ್ನು ನಡೆಸುವ ಯೋಜನೆ ಮಾಡ[illegible]ಬೇಕು. [illegible] ತೋರುವಂಥ ಸಮಸ್ಯೆಯಾಗಲಿ, ಮತ್ತೆ ಯಾವ[illegible]ದೇ ವಿಷಯವಾಗಲಿ ಭಾರತೀಯರಿಗೊಂದು ರಾಜ್ಯಾಂಗ ವ್ಯ[illegible]ವಸ್ಥೆ ಕೊಡಲು ಅಡ್ಡಿಯಾಗಬಾರದು. ಎಲ್ಲಕ್ಕಿಂತ ಅಧಿಕವಾ[illegible]ಗಿ ಈ ಸಮಯದಲ್ಲಿ ಬ್ರಿಟಿಷ ಮತ್ತು ಭಾರತೀಯ ನಾಯಕರ[illegible]ಲ್ಲಿ ಪರಸ್ಪರ ಅನುಮಾನವುಂಟಾಗಬಾರದು.

ಬ್ರಿಟಿಷರು ಭಾರತೀಯರಿಗೆ ಸ್ವಾತಂತ್ರ್ಯವಿತ್ತು, ಬ್ರಿಟಿಷ್ ಸಾಮ್ರಾಜ್ಯ ಸಂಬಂಧದಲ್ಲಿ ಭಂಗಬಾರದವೂ ಸಹ ತೃಪ್ತಿಗೊಂಡು [illegible]ಯಿಂದ ಇರುವಂತೆ ಬೇಗ ಮಾಡುವರೆಂದು ನಂಬುತ್ತೇನೆ.

ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಕಾರಿ ಮಂಡಲದ ಸಭೆಯು.

ಧಾರವಾಡದಲ್ಲಿ ತಾ ೨೨–೧೧–೧೯೩೧ ರಲ್ಲಿ ನಡೆದ ಸಭೆಯಲ್ಲಾದ ಕೆಲವು ನಿರ್ಣಯಗಳು

೧. ಅಸ್ಪೃಶ್ಯತಾ ನಿವಾರಣೆಯ ಸಲುವಾಗಿ ಜಿಲ್ಲಾ ಸ್ಥಳಗಳಲ್ಲಿ ರಾಷ್ಟ್ರೀಯ ದೃಷ್ಟಿಯಿಂದ ನಡೆದ ಅಸ್ಪೃಶ್ಯ ವಿದ್ಯಾರ್ಥಿ ವಸತಿ ಗೃಹಗಳಿಗೆ ಕಾಂಗ್ರೆಸ್ ಸಂಸ್ಥೆಯವರು ಶಕ್ಯವಿದ್ದ ರೀತಿಯಿಂದ ಸಹಾಯ ಮಾಡಬೇಕು. ಸಾರ್ವಜನಿಕ ಕೆರೆ ಬಾವಿಗಳಲ್ಲಿ ಅಸ್ಪೃಶ್ಯರು ನೀರು ತುಂಬುವಂತೆ ಪ್ರಚಾರ ಮಾಡಬೇಕು. ಶಕ್ಯವಿದ್ದಲ್ಲಿ ಸಾರ್ವಜನಿಕ ದೇವಾಲಯಗಳಲ್ಲಿ ಅಸ್ಪೃಶ್ಯರ ಪ್ರವೇಶವಾಗುವಂತೆ ಪ್ರಯತ್ನ ಮಾಡಬೇಕು.

೨. ಅ. ಭಾ. ಕಾಂಗ್ರೆಸ್ ಕಮಿಟಿಯವರು ಕೆಲವು ಸಮಾರಂಭಗಳನ್ನು ಅಖಿಲ ಭಾರತೀಯ ಸಮಾರಂಭಗಳೆಂದ ನಿಶ್ಚಯಿಸಿ ಆ ಸಮಾರಂಭಗಳಲ್ಲಿ ಧ್ವಜ ವಂದನೆಯ ಕಾಲಕ್ಕೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮವು ನಡೆಯಬೇಕೆಂದು ಗೊತ್ತುಪಡಿಸಿದರೆ ಅಂಥಾ ಸಮಾರಂಭಗಳಲ್ಲಿ ಪ್ರಾಂತೀಕ ಪದ [illegible] ಬಹುತರರಿಗೆ [illegible]. ಸದ್ಯಕ್ಕೆ [illegible] ಕೆಲಸಯ ರವಿವಾರ ನಡೆಯುವ ಧ್ವಜ ವಂದನೆಯ ಅಂಥಾ ಅಖಿಲ ಭಾರತೀಯ ಧ್ವಜವಂದನೆಯು 'ವಂದೇ ಮಾತರಂ' 'ಝಂಡಾ ಊಂಚಾ' ಪದಗಳನ್ನು ಅದೇ ಕಾಲ ಸ್ವರಗಳಲ್ಲಿ ಪ್ರಾಂತೀಕ ಭಾಷೆಯಲ್ಲಿ ಅನ್ನುವುದೂ ಈ ಸಭೆಗೆ ಸಮ್ಮತವಿಲ್ಲ.

೩. ಅ. ಭಾ. ಕಾಂ. ಕಮಿಟಿಯ ಲೆಕ್ಕ ತಪಾಸಿಗರು ಕ. ಪ್ರಾಂ. ಕಾಂಗ್ರೆಸ್ ಕಮಿಟಿಯ ೧–೧೦–೧೯೩೦ ರಿಂದ ೧–೫–೩೧ ವರೆಗಿನ ಲೆಕ್ಕವನ್ನು ಪರೀಕ್ಷಿಸಿ ಬರೆದ ಪತ್ರವನ್ನೂ ಅದಕ್ಕೆ ಕಾರ್ಯದರ್ಶಿಗಳು ಕಳಿಸಿದ ಉತ್ತರವನ್ನೂ ಓದಿ ಮಂಜೂರು ಮಾಡಲಾಯಿತು.

೪. ೧೯ನೇ ಕರ್ನಾಟಕ ಪ್ರಾಂತೀಕ ಪರಿಷತ್ತನ್ನು ಬರುವ ೧೯೩೨ನೇ ಜನವರಿಯಲ್ಲಿ ವಿಜಾಪುರ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ತಮ್ಮ ಮೊದಲಿನ ಆಮಂತ್ರಣದ ಮೇರೆಗೆ ಸೇರಿಸಬೇಕೆಂದು ಈ ಸಭೆಯು ಅವರಿಗೆ ಭಿನ್ನವಿಸಿಕೊಳ್ಳುತ್ತದೆ.

೫. ಸದ್ಯಕ್ಕೆ ದೇಶದಲ್ಲೆಲ್ಲ ಉಂಟಾದ ಆರ್ಥಿಕ ಕಷ್ಟಮಯ ಪರಿಸ್ಥಿತಿಯ ದೃಷ್ಟಿಯಿಂದ ಯಾವ ಜಿಲ್ಲಾ ಅಥವಾ ತಾಲೂಕ ಕಾಂಗ್ರೆಸ್ ಕಮಿಟಿಯವರು ತಮ್ಮಲ್ಲಿಯ ರೈತರ ಸ್ಥಿತಿಯ ಬಗ್ಗೆ ಅಭ್ಯಾಸ ಮಾಡಿ ಸರಕಾರ ಹಾಗೂ ಜನತೆಗೆ ಅವರ ಕಷ್ಟಗಳನ್ನು ತಿಳಿಸುವುದಕ್ಕಾಗಿಯೂ, ಅವರಿಂದ ರೈತರ ಸಲುವಾಗಿ ಅವಶ್ಯವಾದ ಸಹಾಯವನ್ನೂ ಪಡೆಯುವ ದೃಷ್ಟಿಯಿಂದಲೂ ಜಿಲ್ಲಾ ಅಥವಾ ತಾಲೂಕು ರೈತರ ಪರಿಷತ್ತುಗಳನ್ನು ಸೇರಿಸಬೇಕೆಂದು ಈ ಸಭೆಯು ಆಯಾ ಕಮಿಟಿಗಳಿಗೆ ವಿನಂತಿ ಮಾಡಿಕೊಳ್ಳುತ್ತದೆ.

೬. ಇತ್ತೀಚೆಗೆ ಮೈಸೂರು ಸಂಸ್ಥಾನದಲ್ಲಿ ನಡೆದ ದಬ್ಬಾಳಿಕೆಯನ್ನು ಕುರಿತು ಅವಶ್ಯವಾದ ವಿಚಾರಣೆ ಹಾಗೂ ಜನ ಜಾಗೃತಿಗಳನ್ನು ಮಾಡುವುದಕ್ಕಾಗಿ ಶ್ರೀ ರಾ. ಶ್ರೀ. ಹರ್ಡೀಕರ ಹಾಗೂ ಶ್ರೀ ದ. ಪ. ಕರಮಕರ ಇವರು [illegible] ಸಂಸ್ಥಾನದಲ್ಲೆಲ್ಲ ಸಂಚಾರ ಮಾಡಬೇಕು.

೭. ಕಾರ್ಯದರ್ಶಿಗಳು ಒಪ್ಪಿಸಿದ ಕಳೆದ ಆರು ತಿಂಗಳ ಜಮಾ ಖರ್ಚಿನ ಪತ್ರಿಕೆಯನ್ನು ಓದಿ ಸ್ವೀಕರಿಸಲಾಯಿತು. ಹಾಗೂ [illegible] ನಡೆದ [illegible] ಮುಂದೇ [illegible] ವರೆಗೆ ತಗಿದ [illegible] [illegible] [illegible] ಕಾರ್ಯದರ್ಶಿಗಳು [illegible] ವೆಚ್ಚಕ್ಕಾಗಿ [illegible] ಈ ಸಭೆಯು ಅಧಿಕಾರವನ್ನು ಕೊಡುತ್ತದೆ. ಇದಕ್ಕೆ [illegible] ಕಮಿಟಿಯವರಾದರೂ ತಮ್ಮ ಮುಂದಿನ ಸಭೆಯಲ್ಲಿ ಅನುಮತಿಯನ್ನು ಕೊಡಬೇಕು.

೮. ೧–೧೦–೧೯೩೧ ರಿಂದ ೧–೪–೧೯೩೨ ರ ವರೆಗಿನ ಕರ್ನಾಟಕ ಸೇವಾದಲದ ಮುಂದಿನ ೧೨೦೦ ರೂಪಾಯಿಯ ಅಂದಾಜು ಪತ್ರಿಕೆಯನ್ನು ಮಂಜೂರು ಮಾಡಲಾಯಿತು. ಹಣವು ದೊರೆತಂತೆ ಆ ವೆಚ್ಚವನ್ನು ಪೂರೈಸಬಹುದೆಂದು ಗೊತ್ತಾಯಿತು.

ಅಲ್ಲಲ್ಲಿಯ ಶಿಬಿರಗಳ ವೆಚ್ಚವನ್ನು ಆಯಾ ಸ್ಥಳದವರೇ ನೋಡಿಕೊಳ್ಳಬೇಕು.

೯. ಕರ್ನಾಟಕ ಸ್ವಯಂ ಸೇವಕ ದಳದ ಮುಖ್ಯಸ್ಥರಾದ ಶ್ರೀ. ರಂ. ರಾ. ದಿವಾಕರರು ಒಪ್ಪಿಸಿದ ಸೇವಾದಲದ ನಿಯಮಗಳನ್ನು ಮಂಜೂರು ಮಾಡಲಾಯಿತು.

೧೦. ಶಿರಸಿ ಸಿದ್ಧಾಪುರ ತಾಲೂಕುಗಳ ಆರ್ಥಿಕ ಸ್ಥಿತಿಯ ವಿಚಾರಣೆ ಬಗ್ಗೆ ನೇಮಿಸಿದ ಮಂಡಲದ ವರದಿಯನ್ನು ಸ್ವೀಕರಿಸಲಾಯಿತು. ಹಾಗೂ ಆ ವರದಿಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಗೊತ್ತಾಯಿತು.

ಕಾರ್ಯದರ್ಶಿಗಳಿಗೆ ಸೂಚನೆಗಳು—

(೧) ಹಿರೇಕೆರೂರು ತಾಲೂಕಿನಲ್ಲಿ ನಡೆದ ಕಾಂಗ್ರೆಸ್ ಕಾರ್ಯದ ಬಗ್ಗೆ ದಕ್ಷಿಣ ಭಾಗದ ಕಮಿಶನರರು ಬರೆದ ಪತ್ರಕ್ಕೆ ಶ್ರೀ. ರಾ. ಶ್ರೀ. ಹುಕ್ಕೇರೀಕರ ಹಾಗೂ ಶ್ರೀ ದಿವಾಕರರ ಉತ್ತರವನ್ನು ಬರೆಯತಕ್ಕದ್ದು.

(೨) ಹಿರೇಕೆರೂರು ತಾಲೂಕಿನಲ್ಲಿ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ನಡೆದ [illegible] ವರದಿಯನ್ನು [illegible] ಅದನ್ನು ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಬೇಕು.

(೩) ಅ. ಭಾ. ರೀತಿಯಿಂದ ಜರುಗುವ ಧ್ವಜ ವಂದನೆಯ ಮೇಲಿನ ಅಥವಾ ಕೊನೆಗೆ ಪ್ರಾಂತೀಕ ಪದ ಅಥವಾ ಜಯ[illegible]ಗಳನ್ನು ಅನ್ನತಕ್ಕದ್ದಲ್ಲ.

(೪) ಲೆಕ್ಕವನ್ನು ಬರೆಯುವಾಗ ಪ್ರವಾಸ ಮುಂತಾದುವುಗಳ ಬಿಲ್ಲಿನ ಲೆಕ್ಕವನ್ನು ಕಿರ್ದಿಯಲ್ಲಿ ಬರೆಯುವ ಅವಶ್ಯಕತೆ ಇಲ್ಲ. ಆಯಾ ಪಾವತಿಯ ಮೇಲೆ ಅಷ್ಟು ಖರ್ಚು ಬರೆದರೆ ಸಾಕು. ಮುಂಗಡ ಕೊಟ್ಟದನ್ನು ಆಮೂಲಕ ಪಾವತಿಗೆ ಖರ್ಚು ಹಾಕಿ ಪುಸ್ತಕದ ಮೇಲೆ ಹಿಡಿಯತಕ್ಕದ್ದು. ಕಿರ್ದಿಯನ್ನು ಕಾರ್ಯದರ್ಶಿಗಳು ತಿಂಗಳಿಗೊಮ್ಮೆ ನೋಡಿ ಸಹಿ ಮಾಡತಕ್ಕದ್ದು.

(೫) ಕ. ಪ್ರಾಂ. ಕಾಂ. ಕಮಿಟಿಯ ಸಭೆಯನ್ನು ಜನವರಿ (೧೯೩೨) ೩ನೇ ವಾರದಲ್ಲಿ ಕರೆಯತಕ್ಕದ್ದು.

(೬) ೨೯–೧೧–೩೧ನೇ ರವಿವಾರವನ್ನು [illegible] ಯಿಂದಾದ ಅತ್ಯಾಚಾರಗಳ ದಿನವನ್ನಾಗಿ ಆಚರಿಸತಕ್ಕದ್ದು.

(೭) ಅ. ಕ. ಸ್ವದೇಶೀ ಸಭೆಯ ಬಗ್ಗೆ ಶ್ರೀ. ದಿವಾಕರ ಹಾಗೂ ಶ್ರೀ. ಹರ್ಡೇಕರರು ಸೇರಿ ನಿರ್ಣಯ ಮಾಡತಕ್ಕದ್ದು.

ಧಾರವಾಡ, ನಾ. ಗ. ಜೋಶಿ,
೨೨–೧೧–೩೧, (ಅಧ್ಯಕ್ಷರು)

ಹಿಂದೂಸ್ಥಾನೀ ಸೇವಾದಳ.

(೧೫ನೇ ಆಗೋಸ್ತು ೧೯೩೧ರಿಂದ ಅಕ್ಟೋಬರ್ ಕೊನೆಯ ವರೆಗಿನ ವರದಿಯ ಸಾರಾಂಶ)

೨೧ ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ೧೮ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ತಮ್ಮ ತಮ್ಮ ಸೇವಾದಲಗಳನ್ನು ಸ್ಥಾಪಿಸಿಕೊಂಡಿರುತ್ತಾರೆ. ವಾಯುವ್ಯ ಸರಹದ್ದಿನ ಪ್ರಾಂತ್ಯದವರಿಗೆ 'ಖುದಾಯಿ ಖಿದಮತಗಾರ್' ಎಂಬ ಹೆಸರಿಂದು ಸೈನಿಕ ಸಂಸ್ಥೆಯುಂಟು. ಅದು ಅಲ್ಲಿಯ ಕಾರ್ಯ ಮಾಡಿದೆ. ಉತ್ಕಲದವರು ಸೇವಾದಲದ ಶಿಕ್ಷಕರನ್ನೇ ಕರೆಯಿಸಿಕೊಂಡು ಬರುವ ರಾಷ್ಟ್ರೀಯ ಮಹಾಸಭೆಯ ಅಧಿವೇಶನದ ಸಿದ್ಧತೆಯನ್ನು ನಡಿಸಿದ್ದಾರೆ. ಆದರೆ ಸೇವಾದಲದ ವಿಷಯವಾಗಿ ಏನೂ ಮಾಡಿರುವುದಿಲ್ಲ. ಬ್ರಹ್ಮದೇಶ ಕಾಂಗ್ರೆಸ್ ಕಮಿಟಿಯವರು ಏನೂ ಬರೆದಿಲ್ಲ.

[illegible] ಪ್ರಾಂತ್ಯಗಳೊಳಗೆ ಹತ್ತು ಪ್ರಾಂತ್ಯಗಳಲ್ಲಿ ಸೈನಿಕರನ್ನು ಸೇರಿಸುವ ಮತ್ತು ಶಿಕ್ಷಣವನ್ನು ಕೊಡುವ ಕಾರ್ಯಗಳು ನಡೆದಿವೆ. ಆ ಪ್ರಾಂತ್ಯಗಳು ಮುಖ್ಯ ದಲದ ಶಿಕ್ಷಕರನ್ನು ಕರೆಯಿಸಿಕೊಂಡಿರುವವು. ಅಲ್ಲಿಯ ವರೆಗೆ ೧೯ ಶಿಕ್ಷಕರು ಶಿಕ್ಷಣ ಶಿಬಿರ ಇಲ್ಲವೆ ವರ್ಗಗಳನ್ನು ನಡಿಸಲು ಹೊರಗೆ ಕಳುಹಲ್ಪಟ್ಟಿದ್ದಾರೆ.

ಆಂಧ್ರ, ಬಿಹಾರ್, ಮುಂಬಾಯಿ, ಮಧ್ಯಪ್ರಾಂತ್ಯ (ಮರಾಠಿ) ದಿಲ್ಲಿ, ಗುಜರಾಥ್, ಕರ್ನಾಟಕ, ಮಹಾರಾಷ್ಟ್ರ, ಸಂಯುಕ್ತಪ್ರಾಂತ್ಯ ಮತ್ತು ಉತ್ಕಲ ಈ ಹತ್ತು ಪ್ರಾಂತ್ಯಗಳಲ್ಲಿ ಒಟ್ಟು ೬೮೧ ಸೈನಿಕರು, ಮುಂಬಯಿ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ೨೬೫ ಕುಮಾರರೂ ಕುಮಾರಿಯರೂ, ಮುಂಬಯಿ, ದಿಲ್ಲಿ, ಗುಜರಾತ್, ಮಹಾರಾಷ್ಟ್ರ, ಉತ್ಕಲದಲ್ಲಿ ಒಟ್ಟಿಗೆ ೧೮೧ ಸ್ತ್ರೀಯರು ಶಿಕ್ಷಣ ಹೊಂದುತ್ತಿರ[illegible] [illegible] ಆಂಧ್ರ, ಸಂಯುಕ್ತಪ್ರಾಂತ್ಯ, ಉತ್ಕಲ, ಗುಜರಾತ್ ಹಾಗೂ ಉಳಿದ ಪ್ರಾಂತ್ಯಗಳಲ್ಲಿ ದಲದ ಶಿಕ್ಷಕರೇ ಶಿಬಿರಗಳನ್ನು ವರ್ಗಗಳನ್ನು ನಡಿಸುತ್ತಿರುವರು.

ಎಲ್ಲ ಪ್ರಾಂತಗಳಲ್ಲಿ ಪರೀಕ್ಷೆಯ ವ್ಯವಸ್ಥೆಯನ್ನು ಮಾಡಲ್ಪಟ್ಟಿತು. ಈಗ ಶಿಕ್ಷಣ ಹೊಂದುತ್ತಿರುವವರೆಲ್ಲ ಸೈನಿಕ ಪರೀಕ್ಷೆಗೆ ಕುಳಿತಿದ್ದರು. ಅವರಲ್ಲಿ ಕೆಲವರು ಉತ್ತೀರ್ಣರಾಗಿಲ್ಲ. ಉತ್ತೀರ್ಣ ಆದವರಿಗೆ ಬೇಗನೆ ಪ್ರಮಾಣಪತ್ರಗಳು ಕೊಡಲ್ಪಡುವವು.

ಜನವರಿ ೧೯೩೨ ರ ದಿನಗಳೊಳಗೆ ತಮ್ಮ ಪಾಲಿಗೆ ಬಂದ ಸ್ವಯಂ ಸೇವಕರನ್ನು ಕರೆದು ಶಿಕ್ಷಣ ಕೊಟ್ಟು ಸಿದ್ಧಪಡಿಸುತ್ತೇವೆಂದು ಕೆಲ ಪ್ರಾಂತ್ಯದವರು ಹಾಕಿಕೊಟ್ಟಿದ್ದಾರೆ. ೬೦೦೦ ಸುಶಿಕ್ಷಿತ ಸೈನಿಕರಿಂದ ಹೊಸವರ್ಷವನ್ನು ಪ್ರಾರಂಭಿಸಬೇಕೆಂದು ಪ[illegible] ಮಂಡಲದವರು ಇಚ್ಛಿಸುತ್ತಾರೆ. ಕೆಲವು ಪ್ರಾಂತ್ಯಗಳು ಸುಮ್ಮನಿರುವವು.

ಸ್ಥಿರ ಸ್ವಯಂ ಸೇವಕರ ದಲವು ಹುಬ್ಬಳ್ಳಿಯಲ್ಲಿರುತ್ತದೆ. ಸುಮಾರು ೧೨೦ ಸ್ವಯಂ ಸೇವಕರು ಈ ದಲದಲ್ಲಿದ್ದಾರೆ. ಹುಬ್ಬಳ್ಳಿಯಲ್ಲಿ ಸುಮಾರು ೨೫, ಬಾಗಲಕೋಟೆಯಲ್ಲಿ ೩೫. ೩೦ ಇದ್ದಾರೆ. ೫೦ ಸ್ವಯಂ ಸೇವಕರು ಶಿಕ್ಷಣ ಹೊಂದಿದವರಿದ್ದಾರೆ. ಇವರು ದೇಶದಲ್ಲೆಲ್ಲ ಹರಡಿದ್ದಾರೆ. ಇವರಲ್ಲಿ ಸ್ತ್ರೀಯರೂ ಇದ್ದಾರೆ.

ಬಾಗಲಕೋಟೆಯ ಸೇವಾದಲದ ಶಿಕ್ಷಣ ಸಮಿತಿಯ [illegible]ಗ್ಯೆ ಅಧ್ಯಾಪಕ ಮಂಡಲವೂ ನಿಯುಕ್ತವಾಗಿದೆ. ಅದು ಈಗಾಗಲೇ ೨೭ ಸೈನಿಕರಿಗೆ ಶಿಕ್ಷಣ ಕೊಟ್ಟಿದೆ. ಸದ್ಯಕ್ಕೆ [illegible] ಜನರಿಗೆ ಹಾಗೂ ಬಾಗಲಕೋಟೆಯ ಊರಲ್ಲಿ ೫೦ ಜನರಿಗೆ ಶಿಕ್ಷಣ ಕೊಡುತ್ತಲಿದೆ. ಇದಲ್ಲದೆ ಮಹಾರಾಷ್ಟ್ರ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ [illegible] ಹಿಂದಿನಿಂದಲೂ, ಒಟ್ಟು ಸ್ವಂತ ಖರ್ಚಿನಿಂದಲೂ ಬಂದವರು [illegible] ಉಳಿದವರು ಊಟ ಜೀವನವನ್ನು ಮಧ್ಯವರ್ತಿ ಮಂಡಲವು ನಡೆಸುತ್ತದೆ. ಇವರೆಲ್ಲರೂ ಮೂರು ವರ್ಷಗಳವರೆಗೆ ದಲದ ಹಾಗೂ ಕಾಂಗ್ರೆಸ್ ಸೇವೆಯನ್ನು ಮಾಡುತ್ತೇವೆಂದು ಒಂದು ಪ್ರತಿಜ್ಞೆಯನ್ನು ಬರೆದು ಕೊಟ್ಟಿದ್ದಾರೆ.

ಸೇವಾದಲದ ಸೈನಿಕರ ಉಡುಪು ಸೀರೆ ಒಪ್ಪಾ ಇದೇ ಕೆಲಸ ನಿಶ್ಚಿತವಾಗಿದೆ. ಇದಕ್ಕೆ ಕೆಲ ಪ್ರಾಂತ್ಯದವರು ತಕರಾರು ತೆಗೆದಿದ್ದಾರೆ. ಸೇವಾದಲದ ಸಮಿತಿ (ಎಲ್ಲ ಪ್ರಾಂತಗಳ ಸಂಗಳ) ಯು [illegible] ಆಗುತ್ತದೆ. ವಿಶಾಲ ಸೇವಾದಲದ [illegible]

ಸ್ತ್ರೀ [illegible]

ಸ್ತ್ರೀ [illegible] ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಇವರ [illegible] ವಾಗಿ [illegible] ಶ್ರೀಮತಿ [illegible] ಕುಮಾರಿ [illegible] ಇವರನ್ನು ತಮ್ಮ [illegible] ನಿಯಮಿಸಿಕೊಂಡಿದ್ದಾರೆ. [illegible] ಪ್ರವಾಸದ ಕಾರ್ಯದರ್ಶಿಗಳಾಗಿರುವರು. ಶ್ರೀಮತಿ [illegible] ದೇವಿಯವರು ಹಾಗೂ [illegible] ಕರ್ನಾಟಕ, ಗುಜರಾಥ ಆಂಧ್ರ ದಿಲ್ಲಿ ಮತ್ತು ಪಂಜಾಬದ [illegible] ಭಾಗಗಳನ್ನು ಸಂಚರಿಸುತ್ತಿದ್ದಾರೆ. [illegible] ಸ್ವಯಂ ಸೇವಕರನ್ನು ಕಲಿಯಿಸುತ್ತಿದ್ದಾರೆ.

ಹಳೇ ಸೇವಾದಲವು ಹೊಸ ಸಂಸ್ಥೆಗೆ ೧೦೦೦ ರೂಪಾಯಿಗಳನ್ನು ಕೊಟ್ಟಿತು. ಸಂಘದ ಕಾರ್ಯದರ್ಶಿಗಳು ಮುಂಬಯಿಯಲ್ಲಿ ವ್ಯಾಖ್ಯಾನಗಳಿಂದ ೧೦೦೦ ರೂಪಾಯಿಗಳನ್ನು ವಸೂಲು ಮಾಡಿ ಕೊಟ್ಟರು. ವರ್ಕಿಂಗ್ ಕಮಿಟಿಯವರು ೨೫೦೦ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈ ಪ್ರಕಾರ ೬೫೦೦ ರೂಪಾಯಿಗಳನ್ನು ಈಗ ಮಧ್ಯವರ್ತಿ ದಲದ ಹತ್ತಿರ ಇರುವವು. ಸದ್ಯಕ್ಕೆ ಸೇವಾದಲದ ವೆಚ್ಚವು ತಿಂಗಳಿಗೆ ೩೦೦೦ ರೂ. ಇರುತ್ತದೆ. ಅಲ್ಲದೆ ಮಧ್ಯವರ್ತಿ ಮಂಡಲವು ೫೦೦೦ ಕ್ಕಿಂತ ಹೆಚ್ಚು ರೂಪಾಯಿಗಳನ್ನು ಖರ್ಚು ಮಾಡಿರುತ್ತದೆ.

ಸ್ವಯಂ ಸೇವಕರ ಸರ್ವಾಂಗ ಸುಂದರವಾದ ಸುಸ್ಥಿರ ನಿರ್ಮಾಣದ ಕಾರ್ಯದಲ್ಲಿ ಎಲ್ಲರೂ ಅದಕ್ಕೆ ಸಹಾಯ ಮಾಡಿ ಸಹಾನುಭೂತಿಯನ್ನು ತೋರಿಸುವರೆಂದು ನಂಬುತ್ತದೆ.

ಮಹಾತ್ಮ ಗಾಂಧಿಯವರ ಭಾಷಣ.

(2ನೇ ಪುಟದಿಂದ ಮುಂದುವರಿದದ್ದು)

ಈ ಕಾನ್‌ಫರೆನ್ಸಿನ ಮುಂದಿಟ್ಟಿರುವ ವರದಿಗಳಲ್ಲಿ ಹೆಚ್ಚಿನವುಗಳಿಗೆ ನನ್ನ ಒಪ್ಪಿಗೆ ಇಲ್ಲ. ಹಾಗೆ ಮಾಡದೆ ಹೋದರೆ ನಾನು ಕಾಂಗ್ರೆಸ್ ಸಂಸ್ಥೆಯ ನಿಜವಾದ ಪ್ರತಿನಿಧಿಯಾಗಲಾರೆ. ಕಾಂಗ್ರೆಸ್ ಸಭೆಯೇ ಹಿಂದೂಸ್ಥಾನದ ಎಲ್ಲಾ ಜನರ ನಿಜವಾದ ಪ್ರತಿನಿಧಿ ಸಭೆ. ಕಾನ್‌ಫರೆನ್ಸಿನಲ್ಲಿ ಈ ಸಭೆಯನ್ನು ಒಂದು ಪಾರ್ಟಿ ಸಂಸ್ಥೆಯಾಗಿ ಕಂಡದ್ದು ಬಹು ವಿಷಾದ್ಯಾಗಿದೆ. ಕಾಂಗ್ರೆಸ್ ಸಭೆಯು ಹಿಂದೂ ದೇಶದ ಪರ ಮಾತಾಡಲು ಅಧಿಕಾರವಿರುವ ಸಭೆಯೆಂದು ಪ್ರಚುರಿಸಲಾಗಿ, ಸರ್ಕಾರಕ್ಕೂ ಮಂಡಿಸಿ ಮಾಡಲು ಇಚ್ಛಿಸುತ್ತೇನೆ. ಇದನ್ನು ಬ್ರಿಟಿಷರು ಒಪ್ಪಿಕೊಂಡಿದ್ದರೆ ದೊಡ್ಡ ಉದಾರಾವಣೆಯುಂಟಾಗುತ್ತಿತ್ತು. ಇದನ್ನು ಅವರು ಒಪ್ಪಿಕೊಂಡಿದ್ದರೆ, ಎಷ್ಟು ಕಷ್ಟ ಒಂದರೂ ಕೂಡ ತನ್ನ ಅಧೀನದಲ್ಲಿ ಏನೊಂದೂ ಬಲವಿಲ್ಲದೆ, ಇನ್ನೊಂದು ಸರ್ಕಾರವನ್ನು ನಡಿಸಬಲ್ಲಂಥ ಸಂಸ್ಥೆಗೆ ಅವರು ಸ್ವಾಗತವನ್ನೀಯುತ್ತಿದ್ದರು. ಕಾಂಗ್ರೆಸು ಈ ಕಾನ್‌ಫರೆನ್ಸಿಗೆ ಆಮಂತ್ರಿಸಲ್ಪಟ್ಟಿದ್ದರೂ ಅದು ಇಡೀ ಹಿಂದೂಸ್ಥಾನದ ಪ್ರತಿನಿಧಿ ಸಭೆಯೆಂಬುದನ್ನು ಬ್ರಿಟಿಷರು ಒಪ್ಪಿಕೊಳ್ಳಲಿಲ್ಲ. ಈ ಪಕ್ಷವನ್ನು ಇಲ್ಲಿ ಸ್ಥಾಪಿಸಲು ನನಗೆ ಅಸಾಧ್ಯವಾದರೂ, ನನ್ನ ಮೇಲೆ ದೊಡ್ಡ ಜವಾಬ್ದಾರಿ ಇರುವದರಿಂದ ಇದನ್ನು ಒತ್ತಿ ಹೇಳುವದಾಗಿದೆ.

ಈ ವರೆಗಿನ ಚರ್ಚೆಗಳಲ್ಲಿ ಹೆಚ್ಚಿನ ಮಟ್ಟಿಗೆ ಒಪ್ಪಿಗೆಗಳಾಗಿದ್ದರೂ ನಾವು ಇನ್ನೂ ನಿಜವಾದ ಮುಖ್ಯ ವಿಷಯವನ್ನು ಮುಟ್ಟಿರುವುದಿಲ್ಲ. ಬಹು ಕಷ್ಟ ತರವಾದ ಸಮಸ್ಯೆಗಳಿವೆಯೆಂದು ನನಗೆ ಗೊತ್ತಿದೆ; ಆದರೆ ಅವುಗಳನ್ನು ತೀರ್ಮಾನಿಸಬಹುದೆಂಬ ನಂಬಿಕೆ ಇದೆ. ಸವಿನಯ ಕಾನೂನು ಭಂಗ ಚಳವಳವನ್ನು ಪುನಃ ಆರಂಭಿಸಬೇಕೆಂಬ ಆಶೆ ನನಗಿಲ್ಲ. ತಾತ್ಕಾಲಿಕ ಸಂಧಿಯನ್ನು ಖಾಯಂ ಶಾಂತಿಯಾಗಿ ಮಾಡಬೇಕೆಂದು ನನ್ನ ಇಚ್ಛೆ. ನೀವು ನನ್ನನ್ನು ನಂಬಿದರೆ, ಕಾಂಗ್ರೆಸ್ಸನ್ನು ನಂಬಿದಂತೆಯೆ. ಅಲ್ಪ ಸಂಖ್ಯಾಕ ಕೋಮಿನವರ ಸಮಸ್ಯೆಯನ್ನು ಬಿಡಿಸಿದ ಹೊರತು ಹಿಂದೂಸ್ಥಾನಕ್ಕೆ ಸ್ವರಾಜ್ಯವಿರಲಾರದು, ಆದರೆ ಈ ಸಮಸ್ಯೆಯನ್ನು ಬಿಡಿಸುವುದು ಅಸಾಧ್ಯವೆಂದು ನನಗೆ ತೋರುವುದಿಲ್ಲ. ಪರದೇಶೀ ಸರ್ಕಾರವಿರುವ ವರೆಗೆ ಈ ಸಮಸ್ಯೆಯು ತೀರ್ಮಾನಿಸಲ್ಪಡುವುದಿಲ್ಲ. ಬ್ರಿಟಿಷರು ಬರುವ ಮುಂಚೆ ಈ ಸಮಸ್ಯೆಯು ಇರಲಿಲ್ಲ ಮತ್ತು ಹಿಂದೂಗಳು ಮತ್ತು ಮುಸಲ್ಮಾನರು ಗ್ರಾಮಗಳಲ್ಲಿ ಈಗಲೂ ಶಾಂತತೆಯಿಂದ ವಾಸಿಸುತ್ತಾರೆ."

ಹೋಗಿ ಯುದ್ಧ ಆರಂಭಿಸಿ!

ಲಾಯಿಡ್ ಜಾರ್ಜರವರು ಗಾಂಧೀಜಿಯವರಿಗೆ ಇತ್ತೀಚಿನ ದಿನಗಳಲ್ಲಿ ಒಂದು ತಂತೀ ಕಳುಹಿಸಿದರಂತೆ. ಅದರಲ್ಲಿ ಹೀಗಿತ್ತೆಂದು ತಿಳಿದುಬಂದಿದೆ.

'ಭರತ ಖಂಡಕ್ಕೆ ಸ್ವಾತಂತ್ರ್ಯ ಕೊಡುವ ವಿಚಾರದಲ್ಲಿ ಟೋರಿಗಳು ಅಡ್ಡಿಯಾಗಿದ್ದಾರೆಂದು ಮೆಕ್ಡೊನಾಲ್ಡರು ಹೇಳುತ್ತಿರುವುದೆಂದು ಕುಂಟು ನೆಪ. ಅದು ನಿಜವಲ್ಲ. ಗಾಂಧಿ ಟೋರಿಗಳ ಸಹಾಯದಿಂದ ಮೆಕ್ಡೊನಾಲ್ಡರು ಪಾರ್ಲಿಮೆಂಟಿನಲ್ಲಿ ಜಯವನ್ನು ಯಾವಾಗ ಬೇಕಾದರೂ ಪಡೆಯಬಹುದು.

ಗಾಂಧೀಜೀಯವರೇ, ಈ ಚಕ್ರಗೋಷ್ಠಿಯಿಂದ ಮುಂದೆ ಯಾವ ಪ್ರಯೋಜನವಾಗುವುದಿಲ್ಲ. ನೆಟ್ಟಗೆ ನಿಮ್ಮೂರಿಗೆ ಹೋಗಿ ಮತ್ತೆ ಯುದ್ಧ ಆರಂಭಿಸಿ. ಈ ಸರ್ಕಾರಕ್ಕೆ ಬುದ್ಧಿ ಕಲಿಸಬೇಕಾದರೆ ಅದೊಂದೇ ದಾರಿ."

ಬೆಂಗಳೂರು ಕೊಡಗರ ಹುತ್ತರಿ ಹಬ್ಬ.

(ಒಬ್ಬ ಸದಸ್ಯರಿಂದ.)

ಬೆಂಗಳೂರಿನಲ್ಲಿರುವ ಕೊಡಗರು ಹುತ್ತರಿ ಹಬ್ಬವನ್ನು ತಾರೀಕು 29 ರಲ್ಲಿ ಅರ್‌ಕಾಟ್ ನಾರಾಯಣ ಸ್ವಾಮಿ ಹಾಲ್‌ನಲ್ಲಿ ಬಹಳ ವಿಜೃಂಭಣೆಯಿಂದ ಜರಗಿಸಿದರು. ಮಹಿಳೆ ಮಹನೀಯರು ಸೇರಿ 55 ಜನರು ಸರಿಯಾಗಿ ಸಾಯಂಕಾಲ 4.15 ಕ್ಕೆ ಒಂದು ಸೇರಿದರು. ಬಿಸ್ಕತ್, ಪಾಯಸ, ಟೀ ಮತ್ತು ಇತರ ತಿಂಡಿ ಪದಾರ್ಥಗಳು ಮೇಜಿನ ಮುಂದು ನೀಳುತ್ತಲೇ ಎಲ್ಲರೂ ಸಂತೋಷದಿಂದ ಸ್ವೀಕರಿಸಲಿಕ್ಕೆ ಸಿದ್ಧರು.. ಅಂತು ಇಂತು ಕೈ, ಬಾಯಿಯ ಕೆಲಸವು ಒಂದು ಘಂಟೆಯಲ್ಲೇ ತೀರಿತು.

ತದನಂತರ ಒಂದು ಭಾಗದಲ್ಲಿ ಗ್ರಾಮಫೋನು, ಇನ್ನೊಂದು ಭಾಗದಲ್ಲಿ ಹಾರ್ಮೋನಿಯಂ ಮೇಳವು ನಡೆಯುತ್ತಿತ್ತು. ಮನೆಯಪಂಡ ಯಂ. ಪೊನ್ನಪ್ಪನವರು, ಮಂಡೆಯಡ ಚಂಗಪ್ಪನವರು, ಪಳಂಗಂಡ ಗಣಪತಿಯವರು ಮತ್ತು ಮುಕ್ಕಾಟಿರ ಅಪ್ಪಯ್ಯನವರ ಸಣ್ಣ ಹುಡುಗಿಯರು ತಮ್ಮ ಸ್ವಾರಸ್ಯವಾದ ಸಂಗೀತದಿಂದ ನೆರೆದವರನ್ನು ಆನಂದಗೊಳಿಸಿದರು. ಅನಂತರ ಪ್ರೆಸಿಡೆಂಟರಾದ ಮ. ರಾ. ಶ್ರೀ. ಕೋದಂಡ ಮಾಚಯ್ಯನವರು ಬೆಟಿಯಂಡ ಮುನಿಸಿಪಲ್ ಕಮಿಶನರು ತಮ್ಮ ನಯನುಡಿಯಿಂದ ಈ ರೀತಿ ಹೇಳಿದರು...."ಹಬ್ಬವು ಪ್ರತಿ ಒಬ್ಬನ ಮನಸ್ಸನ್ನು ಆನಂದ ಪಡಿಸುತ್ತದೆ. ಮನುಷ್ಯನು ಯಾವಾಗಲೂ ತನ್ನ ಕೆಲಸದಲ್ಲಿಯೇ ಮಗ್ನನಾಗಿರುವ ವೇಳೆಯಲ್ಲಿ ಈ ರೀತಿಯ ಹಬ್ಬವು ಅವನ ಮನಸ್ಸನ್ನು ಆನಂದಗೊಳಿಸುವುದು. ಹುತ್ತರಿಯು ಕೊಡಗರಿಗೆ ದೊಡ್ಡ ಹಬ್ಬವಾಗಿರುತ್ತೆ. ಹೌಸಿಂಗ್ ಕಮಿಟಿಯವರು ಶ್ರಮಪಟ್ಟು ಮಾಡಿರುವ ತಿಂಡಿ ತೀರ್ಥವು ಎಲ್ಲರಿಗೂ ಮನಸ್ಸಂತೋಷಗೊಳಿಸಿದೆ. ಅವರು ಮಾಡಿದ ಕೆಲಸವು ಸ್ತೋತ್ರಾರ್ಹವಾಗಿದೆ. ಪ್ರತಿಯೊಬ್ಬ ಮನುಷ್ಯನು ತನ್ನ ಕೆಲಸವನ್ನು ಸರಿಯಾಗಿ ಮಾಡಿದರೆ ಅದಕ್ಕೆ ತಕ್ಕ ಪ್ರತಿಫಲವು ಭಗವಂತನಿಂದ ದೊರಕಿಯೇ ದೊರಕುವದು. 'As we sow, so we reap' ಎಂಬ ಗಾದೆಯು ಎಲ್ಲರಿಗೂ ತಿಳಿದಿದೆ. ನಮ್ಮನ್ನೆಲ್ಲಾ ಇಷ್ಟರ ಮಟ್ಟಿಗೆ ಮಾಡಿದಂಥ ಆ ಪರಮಾತ್ಮನಿಗೆ ನಾವೆಲ್ಲರೂ ವಂದಿಸಬೇಕು.

ಇದಾದನಂತರ ಕೊಡಗರ 'ವಾಲಗದಾಟ' ಪ್ರಾರಂಭಿಸಿತು. ಮನೆಯಪಂಡ ಯಂ. ಪೊನ್ನಪ್ಪನವರು ಹಾರ್ಮೋನಿಯಂನಿಂದ ಎಲ್ಲಾ ತರದ ವಾದ್ಯವನ್ನು ಬಹಳ ನೆಗನಾಗಿ ಭಾರಿಸಿದರು. ಯುವಕರೆಲ್ಲರೂ ಕುಣಿತದಲ್ಲಿ ಭಾಗ ತೆಗೆದುದಲ್ಲದೆ ಪ್ರೆಸಿಡೆಂಟರೂ ಮತ್ತು ಮ. ಶ್ರೀ. ಕಲ್ಲಚಂಡ ಕರುಂಬಯ್ಯನವರೂ ಸಹ ಸಂತೋಷದಿಂದ ಯುವಕರ ಜೊತೆಯಲ್ಲಿ ಕುಣಿದರು. ಅನಂತರ ಚಕ್ರವರ್ತಿ ಸಾರ್ವಭೌಮರಿಗೂ, ಮೈಸೂರು ಮಹಾರಾಜರಿಗೂ ವಂದನೆಗಳಿಂದ ಸಭೆಯು 6½ ಗಂಟೆಗೆ ಬರಖಾಸ್ತಾಯಿತು.

ಎಕ್ಸೈಸ್ ಎಡ್ವೈಸರಿ ಕಮಿಟಿ ಮೀಟಿಂಗು.

ಕೊಡಗು ಅಬ್ಕಾರಿ ಎಡ್ವೈಸರಿ ಕಮಿಟಿ ಮೀಟಿಂಗು ತಾ 21.11.31ರಲ್ಲಿ ಮಡಿಕೇರಿ ಕೌನ್ಸಿಲು ಹಾಲಿನಲ್ಲಿ ನಡೆಯಿತು. ಕಮಿಟಿಯ ಅಧ್ಯಕ್ಷರಾದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮೀಟಿಂಗಿನ ಪ್ರೆಸಿಡೆಂಟರಾಗಿದ್ದರು. ಈ ಮೀಟಿಂಗಿನಲ್ಲಾದ ತೀರ್ಮಾನಗಳಲ್ಲಿ ಈ ಕೆಳಗಿನವು ಮುಖ್ಯವಾದವುಗಳಾಗಿವೆ.

1. ಕುಂಜಿಲ, ನಾಲಡಿ, ಯವಕಪಾಡಿ, ಕೋಕೇರಿ ಮತ್ತು ನೆಲಜಿ ಗ್ರಾಮಸ್ಥರು ಕಕ್ಕಬೆಯಲ್ಲಿ ಸಾರಾಯಿ ಅಂಗಡಿಯನ್ನು ಪುನಃ ಇಡಬೇಕೆಂದು ಬರೆದುಕೊಂಡ ಅರ್ಜಿಯು ತಿರಸ್ಕರಿಸಲ್ಪಟ್ಟಿತು.

2 ಆಲೂರು ಸಾರಾಯಿ ಅಂಗಡಿಯನ್ನು ಬಸವನಕೊಪ್ಪಕ್ಕೆ ವರ್ಗಾಯಿಸಬೇಕೆಂಬ ಸೂಚನೆಯು ಮಂಜೂರಾಗಲಿಲ್ಲ.

3. ಹಾಕತ್ತೂರು 11ನೇ ನಂಬರು ಸೇಂದಿ ಅಂಗಡಿಯನ್ನು ಮಡಿಕೇರಿ—ಮೂರ್ನಾಡು ರಸ್ತೆಯ 5ನೇ ಮೈಲಿಗೆ ವರ್ಗಾಯಿಸುವಂತೆ ತೀರ್ಮಾನಿಸಲಾಯಿತು.

4 ತಾವಳಗೇರಿ ಸೇಂದಿ ಅಂಗಡಿಯನ್ನು ಹುದಿಕೇರಿಗೆ ವರ್ಗಾಯಿಸಬೇಕೆಂಬ ಸೂಚನೆಯು ಮಂಜೂರಾಯಿತು.

5. ಸಿದ್ದಾಪುರದಲ್ಲಿ ಒಂದು ಹೊಸ ಗಾಂಜ ಅಂಗಡಿ ತೆರೆಯುವಂತೆ ತೀರ್ಮಾನಿಸಲಾಯಿತು.

6. ಮಡಿಕೇರಿ ಮತ್ತು ವೀರಾಜಪೇಟೆ ಸಾರಾಯಿ ಮತ್ತು ಬೀರ್ ಅಂಗಡಿಗಳನ್ನು ಬೆಳಗ್ಗೆ 11ರಿಂದ ರಾತ್ರಿ 8 ಗಂಟೆ ವರೆಗಿನ ಬದಲು ಬೆಳಗ್ಗೆ 11ರಿಂದ ರಾತ್ರಿ 9 ಗಂಟೆ ವರೆಗೆ ತೆರೆದಿಡಬೇಕೆಂಬ ಸೂಚನೆಯು ಮಂಜೂರಾಗಲಿಲ್ಲ.

'ಕೊಡಗು' ಕಂಪೆನಿಯ ಜನರಲ್ ಮೀಟಿಂಗು.

'ಕೊಡಗು' ಲಿಮಿಟೆಡ್ ಕಂಪೆನಿಯ ಶೇರುದಾರರ ವಾರ್ಷಿಕ ಜನರಲ್ ಮೀಟಿಂಗು ತಾ. 21—11—31ರಲ್ಲಿ ಮಡಿಕೇರಿಯಲ್ಲಿರುವ ಕೊಡಗು ಜಮೀನ್ದಾರರ ಸಂಘದ ಹಾಲಿನಲ್ಲಿ ನಡೆಯಿತು. 11 ಶೇರುದಾರರು ಹಾಜರಿದ್ದರು. ಮೆ. ಸಿ. ಯನ್. ವೆಂಕಪ್ಪಯ್ಯನವರು ಅಧ್ಯಕ್ಷರಾಗಿದ್ದರು.

1. ಕಳೆದ ಜನರಲ್ ಮೀಟಿಂಗಿನ ಪ್ರೊಸಿಡಿಂಗ್ಸನ್ನು ಓದಿ ಒಪ್ಪಲಾಯಿತು.

2 ಕಂಪೆನಿಯ 1930—31ನೇ ವರ್ಷದ ಡೈರೆಕ್ಟರುಗಳ ವರದಿಯು ಓದಲಾಯಿತು. ಅದರ ಮೇಲೆ ಸ್ವಲ್ಪ ಚರ್ಚೆ ನಡೆದನಂತರ ವರದಿಯನ್ನು ಮಂಜೂರು ಮಾಡುವಂತೆ ಮೆ. ಐ. ಸಿ. ಸುಬ್ಬಯ್ಯನವರು ಸೂಚಿಸಿದನ್ನು ಮೆ ಕೆ. ಪಿ. ಚಿಣ್ಣಪ್ಪನವರು ಅನುಮೋದಿಸಿದರು.

ವರದಿಯು ಸರ್ವ ಸಮ್ಮತದಿಂದ ಮಂಜೂರಾಯಿತು.

3 1931—32ನೇ ವರ್ಷಕ್ಕೆ ಮೆ. ಬಿ. ಕಾಮಣ್ಣನವರನ್ನು ಆಡಿಟರಾಗಿ ನೇಮಿಸಬೇಕೆಂದು ಮೆ ಐ ಸಿ. ಸುಬ್ಬಯ್ಯನವರು ಸೂಚಿಸಿದರು. ಮೆ. ಯಂ. ಸಿದ್ಲಿಂಗಪ್ಪನವರು ಅನುಮೋದಿಸಿದ ಮೇಲೆ ಒಮ್ಮತದಿಂದ ಪಾಸಾಯಿತು.

4. ಮೆ. ಬಿ. ಕಾಮಣ್ಣನವರು ಕಳೆದ ವರ್ಷ 75 ರೂ. ಮೊತ್ತ ಆಡಿಟ್ ಫೀಯಾಗಿ ತೆಗೆದುಕೊಂಡದಕ್ಕೆ ಅವರಿಗೆ ವಂದನೆಯನ್ನು ಅರ್ಪಿಸುವಂತೆಯೂ, 1930—31ನೇ ವರ್ಷಕ್ಕೆ ಅವರಿಗೆ 60 ರೂ. ಆಡಿಟ್ ಫೀ ಕೊಡುವಂತೆಯೂ ಮೆ. ಪಿ. ಯನ್. ಚಂಗಪ್ಪನವರು ಸೂಚಿಸಿದನ್ನು ಮೆ. ಯಂ. ಯಂ. ಚಿಣ್ಣಪ್ಪನವರು ಅನುಮೋದಿಸಿದರು. ಠರಾವು ಸರ್ವ ಸಮ್ಮತದಿಂದ ಪಾಸಾಯಿತು.

5. ಕಂಪೆನಿಯ ರೂಲ್ಸ್ ಮೇರೆ ಎಲ್ಲರಿಗಿಂತಲೂ ಹೆಚ್ಚು ಕಾಲ ಡೈರೆಕ್ಟರುಗಳಾಗಿದ್ದ ಮೆ. ಗಳಾದ (1) ಕೋಟೆರ ಚಿಣ್ಣಪ್ಪನವರು, (2) ಬಿದ್ದಂಡ ಸುಬ್ಬಯ್ಯನವರು, (3) ಐನಂಡ ಕಾರ್ಯಪ್ಪನವರು, (4) ಕೋದಂಡ ಉತ್ತಯ್ಯನವರು ಮತ್ತು (5) ಯನ್. ಆರ್. ಸುಬ್ರಮಣ್ಯಯ್ಯನವರು ಬಿಟ್ಟುಹೋದರು. ಇವರ ಸ್ಥಳಗಳಿಗೆ ಮೆ ಗಳಾದ (1) ಕೋಟೆರ ಚಿಣ್ಣಪ್ಪನವರು, (2) ಗುಂಡುಗುಟ್ಟಿ ಎಂ. ಮಂಜುನಾಥಯ್ಯನವರು, (3) ಐನಂಡ ಕಾರ್ಯಪ್ಪನವರು, (4) ಯಂ. ಸಿದ್ಲಿಂಗಪ್ಪನವರು ಮತ್ತು (5) ಬಿದ್ದಂಡ ಸುಬ್ಬಯ್ಯನವರು ಡೈರೆಕ್ಟರುಗಳಾಗಿ ಆರಿಸಲ್ಪಡಬೇಕೆಂದು ಮೆ. ಐಚೆಟ್ಟಿರ ಸುಬ್ಬಯ್ಯನವರು ಸೂಚಿಸಿದ್ದನ್ನು ಮೆ. ಪಾರ್ವಂಗಡ ಚಂಗಪ್ಪನವರು ಅನುಮೋದಿಸಿದರು. ಸರ್ವ ಸಮ್ಮತದಿಂದ ಮಂಜೂರಾಯಿತು.

6. ರಿಟೈರಾದ ಡೈರೆಕ್ಟರುಗಳಿಗೆ ವಂದನೆಯನ್ನು ಅರ್ಪಿಸಬೇಕೆಂದು ಮೆ. ಮನೆಯಪಂಡ ಚಿಣ್ಣಪ್ಪನವರು ಸೂಚಿಸಿದ್ದನ್ನು ಮೆ. ಯಂ. ಸಿದ್ಲಿಂಗಪ್ಪನವರು ಅನುಮೋದಿಸಲಾಗಿ, ವಿರೋಧವಿಲ್ಲದೆ ಪಾಸಾಯಿತು.

ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗು ಬರಖಾಸ್ತಾಯಿತು.

ಸಿ. ಯನ್. ವೆಂಕಪ್ಪಯ್ಯ,
(ಅಧ್ಯಕ್ಷರು)

COORG CIVIL SURGEON'S OFFICE,
Mercara, dated the 2nd December 1931.

NOTICE.

Sealed tenders will be received at the Civil Surgeon's Office, Mercara up to 11 a. m. on Friday the 15th January 1932, for the supply contract of all articles of diet etc., required separately for the use of the in-patients of (1) Mercara, (2) Virajpet and (3) Somwarpet Hospitals from 1st April 1932 to 31 March 1933 (both days inclusive).

For further particulars apply to the Medical Officer in charge of the Hospitals concerned.

F. R. THORNTON,
Major, I. M. S.,
2—1 Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 2—12—1931

ನೋಟೀಸು.

(1) ಮಡಿಕೇರಿ. (2) ವೀರಾಜಪೇಟೆ ಮತ್ತು (3) ಸೋಮವಾರಪೇಟೆ ಆಸ್ಪತ್ರೆಗಳಲ್ಲಿರುವ ರೋಗಿಗಳ ಉಪಯೋಗಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಗುತ್ತಿಗೆ ಮೂಲಕ 1932ನೇ ಏಪ್ರಿಲ್ 1ರಿಂದ 1933ನೇ ಮಾರ್ಚ್ 31ರ ವರೆಗೆ (ಈ 2 ದಿವಸಗಳೂ ಸೇರಿ) ಈ ಮೂರು ಆಸ್ಪತ್ರೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒದಗಿಸಿ ಕೊಡಲು ಮುದ್ರೆ ಹಾಕಿದ ದರಖಾಸ್ತುಗಳು (ಟೆಂಡರ್) 1932ನೇ ಜನವರಿ 15ನೇ ಶುಕ್ರವಾರ ಬೆಳಗ್ಗೆ 11 ಗಂಟೆ ವರೆಗೆ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುವವು.

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಆಸ್ಪತ್ರೆಗಳ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರಿಗೆ ಬರೆಕೊಳ್ಳುವದು.

ಎಫ್. ಆರ್. ಥಾರ್ನಟನ್,
ಮೇಜರ್, ಐ. ಯಂ. ಎಸ್.,
ಸಿವಿಲ್ ಸರ್ಜನ್, ಕೊಡಗು.

COORG CIVIL SURGEON'S OFFICE,
Mercara, dated the 2nd December 1931.

NOTICE.

Sealed tenders for the hiring out of cows to the Vaccine Depot at Mercara for one year commencing from 1st April 1932 to 31st March 1933 will be received at the Civil Surgeon's Office, Mercara up to 11 a. m on Friday the 15th January 1932.

For terms and other particulars apply to the Vaccine Inspector or the Civil Surgeon's Office at Mercara.

F. R. THORNTON,
Major, I. M. S.,
2—1 Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 2—12—1931.

ನೋಟೀಸು.

1932ನೇ ಏಪ್ರಿಲ್ 1ರಿಂದ 1933ನೇ ಮಾರ್ಚ್ ವರೆಗೆ ಒಂದು ವರ್ಷ ಮಡಿಕೇರಿ ವೇಕ್ಸಿನ್ ಡಿಪೋಗೆ ದನಗಳನ್ನು ಬಾಡಿಗೆಗೆ ಕೊಡಲು ಮುದ್ರೆ ಹಾಕಿದ ದರಖಾಸ್ತುಗಳು (ಟೆಂಡರ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1932ನೇ ಜನವರಿ 15ನೇ ಶುಕ್ರವಾರ ಬೆಳಗ್ಗೆ 11 ಗಂಟೆ ವರೆಗೆ ತೆಗೆದುಕೊಳ್ಳಲಾಗುವವು.

ಕರಾರುಗಳು ಮತ್ತು ವಿವರಗಳಿಗೆ ವೇಕ್ಸಿನ್ ಇನ್ಸ್‌ಪೆಕ್ಟರಿಗೆ ಅಥವಾ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿಗೆ ಬರೆಕೊಳ್ಳುವುದು.

ಎಫ್. ಆರ್. ಥಾರ್ನಟನ್,
ಮೇಜರ್, ಐ. ಯಂ ಎಸ್.,
ಸಿವಿಲ್ ಸರ್ಜನ್, ಕೊಡಗು.

ವರ್ತಮಾನ ಸಂಗ್ರಹ.

ಒಳ ದೇಶ.

ಕೊಡಗು ರಿಟ್ರೆಂಚ್‌ಮೆಂಟ್ ಕಮಿಟಿಯು [illegible] ಈ ದಿನ ನಡೆಯುತ್ತದೆಂದು ತಿಳಿಯ ಬರುತ್ತದೆ.

ಕಳೆದ ಅಕ್ಟೋಬರು ತಿಂಗಳಲ್ಲಿ ಕೊಡಗಿನಲ್ಲಿ 319 ಮರಣಗಳೂ, 339 ಜನನಗಳೂ ಆದವೆಂದು ಪ್ರಕಟವಾಗಿದೆ.

ಎಕ್ಸೈಸ್ ಎನ್ಕ್ವಯರಿ ಕಮಿಟಿಯ ಮೀಟಿಂಗೊಂದು ತಾ. 21—11—'31 ರಲ್ಲಿ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು.

ಮ. ಚೆಕ್ಕೇರ ದೇವಯ್ಯನವರ ಪತ್ನಿಯವರು ಈ ತಾ. 2 ನೇ ಬುಧವಾರ ದಿನ ಪ್ರಾತಃಕಾಲ ಅವರ ಹೊಸೂರು ಮನೆಯಲ್ಲಿ ಶಿವಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ವೀರಾಜಪೇಟೆ, ಪೊನ್ನಂಪೇಟೆ ಕುಶಾಲನಗರ, ಮಡಿಕೇರಿ ಮತ್ತು ಕೋಟೆ[illegible]ಗಳಲ್ಲಿ ವಾರ್ಷಿಕ ಧ್ವಜಾಭಿವಂದನೆಯು ಕಳೆದ ತಾ. 29 ನೇ ಆದಿತ್ಯವಾರ ದಿವಸ ನಡೆಸಲ್ಪಟ್ಟಿತೆಂದು ತಿಳಿಯುತ್ತೇವೆ.

ಬೆಟ್ಟನಾಡು ನಾಲ್ಕೇರಿ ಗ್ರಾಮದ ಆತಕೋಟು ಕಾಲ ಸ್ವಾಮಿ (ಆತಕೋಟು ಪದೀಬು) ದೇವರ ಹಬ್ಬವು ಇದೇ ಡಿಸೆಂಬರು ತಿಂಗಳು 14ರಲ್ಲಿ ಪ್ರಾರಂಭವಾಗಿ, 15ರಲ್ಲಿ ದೊಡ್ಡ ಹಬ್ಬವೂ, 16ರಲ್ಲಿ ದೇವರು ಮಿಂದುವುದೂ ಆಗುತ್ತದೆಂದು ತಿಳಿಯ ಬರುತ್ತದೆ.

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದಂತೆ ನಾಪೋಕ್ಲು ನಾಡು ಕುಂಜಿಲ ಗ್ರಾಮದಲ್ಲಿ ಯಾರಿಂದಲೋ ರಾತ್ರಿ, ಗುಂಡು ಹೊಡೆಯಲ್ಪಟ್ಟು ಮಡಿಕೇರಿ ಆಸ್ಪತ್ರೆಯಲ್ಲಿದ್ದ ವಾಲೆಯೂ ಮೃತನಾದನೆಂದೂ, ಈ ಕೊಲೆ ಕೇಸಿನ ಸಂಬಂಧ ಇದಿಯಂಡ ಉತ್ತಪ್ಪನೆಂಬವನು ದಸ್ತಗಿರಿ ಮಾಡಲ್ಪಟ್ಟಿರುವನೆಂತಲೂ ವರ್ತಮಾನ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೆಂಬರುಗಳ ಚುನಾವಣೆ ಬಗ್ಗೆ ಈ ತಾ 14 ನೇ ಸೋಮವಾರ ಮಧ್ಯಾಹ್ನ 2 ಗಂಟೆಗೆ ವೀರಾಜಪೇಟೆಯಲ್ಲಿರುವ ಸ್ವಯಂಸೇವಕರ ಶಿಬಿರದಲ್ಲಿ ಒಂದು ಮೀಟಿಂಗು ನಡೆಯುವದರಿಂದ, ಕಾಂಗ್ರೆಸ್ಸಿನ ಮೆಂಬರುಗಳಾಗಿರುವವರೂ, ಮೆಂಬರುಗಳಾಗಲು ಇಚ್ಛಿಸುವವರೂ ಸದರಿ ಮೀಟಿಂಗಿಗೆ ಬರಬೇಕಾಗಿ ಕೋರಲಾಗಿದೆ.

ಕೊಡಗಿನ ಕಾಂಗ್ರೆಸ್ ಸ್ವಯಂ ಸೇವಕರ ತರಬೇತಿನ ಶಿಬಿರವು ಈ ತಾ 1 ರಲ್ಲಿ ವೀರಾಜಪೇಟೆಯಲ್ಲಿ ತೆರೆಯಲ್ಪಟ್ಟಿದೆ. ಪ್ರಥಮ ದಿನ 17 ಸ್ವಯಂ ಸೇವಕರು ತರಬೇತಿಗೆ ಸೇರಿರುವರು. ಧಾರವಾಡದ ಶ್ರೀಯುತ ಅವಧಾನಿಯವರು ತರಬೇತು ಶಿಕ್ಷಕರಾಗಿರುವರು. ತರಬೇತು (ಈ ಮೊದಲು ಪ್ರಕಟಿಸಿದಂತೆ) 5 ವಾರಗಳ ಬದಲು 2 ವಾರಗಳಲ್ಲೇ ಮುಗಿಸಲ್ಪಡುವದೆಂದು ತಿಳಿಯಬರುತ್ತದೆ.

ಕೆಲವು ದಿವಸಗಳ ಹಿಂದೆ ಭಾಗಮಂಡಲ ನಾಡು ಕುಂದಚೇರಿ ಗ್ರಾಮದಲ್ಲಿರುವ ಕುಂದುಬೆಟ್ಟದಲ್ಲಿ ಮೂರು ಹುಡುಗರು ದನ ಮೇಯಿಸುತ್ತಾ ಇದ್ದಾಗ್ಯೆ ಸಾಯಂಕಾಲ 4 ಗಂಟೆ ಸಮಯದಲ್ಲಿ ಸಿಡಿಲು ಬಿದ್ದು ಒಂದು ಮರಕ್ಕೆ ಫಕ್ಕನೆ ಬೆಂಕಿ ಹಿಡಿದು, ಆದರಿಂದ ಪಕ್ಕದಲ್ಲಿದ್ದ ಒಂದು ಹಸುವು ಸತ್ತು ಹೋದುದಲ್ಲದೆ ಆ ಮೂವರು ಹುಡುಗರಿಗೂ ಘಾಯಗಳಾದವೆಂದು ವರ್ತಮಾನ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳು ಮ. ಗಳಾದ ಬಿ. ತ್ರಿಪತಿರಾಯರು, ಪಟ್ಟಚೆರುವಂಡ ಎ. ಚಂಗಪ್ಪನವರು ಮತ್ತು ಬಲ್ಲಚಂಡ ಎ ಬೆಳ್ಯಪ್ಪನವರನ್ನು ಫೈನಾನ್ಸ್ ಕಮಿಟಿ ಮೆಂಬರರಾಗಿ ಆರಿಸಿದರ ಜೊತೆಗೆ ಚೀಫ್ ಕಮಿಷನರವರು ಮ. ಎ. ಆರ್. ಬ್ರ್ಯಾಂಡ್‌ರವರನ್ನೂ, ಲೆ. ಕರ್ನಲ್ ಹೆಚ್. ಯಫ್. ಮುರ್ಲೇಂಡ್‌ರವರನ್ನೂ ಸದರಿ ಕಮಿಟಿಯ ಮೆಂಬರುಗಳಾಗಿ ನೇಮಿಸಿರುವರು.

ವೀರಾಜಪೇಟೆ ಮತ್ತು ಗೋಣಿಕೊಪ್ಪಲು ಸಾರಾಯಿ ಗಡಂಗಗಳ ಪಿಕೆಟಿಂಗು ಕಳೆದ ತಾ 25 ರ ವರೆಗೆ ನಡೆಯಿತು. ಇದರಿಂದಲೂ, ಜನರ ಆರ್ಥಿಕ ಹೀನಸ್ಥಿತಿಯಿಂದಲೂ ಗಡಂಗಗಳಲ್ಲಿ ಸಾರಾಯಿಯ ವ್ಯಾಪಾರ ಬಹಳ ಕಡಿಮೆಯಾಯಿತೆಂದೂ, ವಾಡಿಕೆಯಾಗಿ ಹುತ್ರಿ ಹಬ್ಬಕ್ಕಾಗಿ ಒಂದು ಸಾವಿರ ಗ್ಯಾಲನ್ನುಗಳಿಗಿಂತ ಹೆಚ್ಚಾಗಿ ಖರ್ಚಾಗುತ್ತಿದ್ದ ವೀರಾಜಪೇಟೆ ಗಡಂಗದಲ್ಲಿ ಈ ವರ್ಷ 110 ಗ್ಯಾಲನುಗಳನ್ನು ಮಾರಲಿಲ್ಲವೆಂದೂ ತಿಳಿಯಬರುತ್ತದೆ.

ಕಳೆದ ತಾ. 27 ರಲ್ಲಿ ದಕ್ಷಿಣ ಕೊಡಗಿನ ಕೊಡಗೇತರರು ಹಲವರು ಸೇರಿ, ಮುನಸೀಫ್ ಉದ್ಯೋಗದಿಂದ ರಿಟೈರಾದ ಮ. ಸಿ. [illegible] ಸುಬ್ಬಣ್ಣನವರಿಗೆ ವೀರಾಜಪೇಟೆ ಮುನಿಸಿಪಾಲ್ ಶಾಲೆಯ ಕಟ್ಟಡದಲ್ಲಿ ಒಂದು ಟೀಪಾರ್ಟಿಯನ್ನು ಕೊಟ್ಟರು. [illegible]ರವರು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರೇ ಮೊದಲಾದವರು ಹಾಜರಿದ್ದರೆಂತಲೂ, ಮ. ಸುಬ್ಬಣ್ಣನವರು ದಕ್ಷಿಣ ಕೊಡಗಿನಲ್ಲಿ ಸುಮಾರು 21 ವರ್ಷ ಉದ್ಯೋಗ ಮಾಡಿದ್ದು [illegible]ವಾಗಿ ಸಭಿಕರು ಅವರಿಗೊಂದು ಬೆಳ್ಳಿಯ ತಳಿಗೆಯನ್ನು ಒಪ್ಪಿಸಿದರೆಂತಲೂ ತಿಳಿಯಬರುತ್ತದೆ.

ಹಿಂದೂ ದೇಶ.

ಸಂಯುಕ್ತ ಪ್ರಾಂತ್ಯದಲ್ಲಿ, ಕಂದಾಯ ಕೊಡದ ಚಳವಳಿಯ ಸಂಬಂಧ ಸರಕಾರದವರು ಆರ್ಡಿನೇನ್ಸನ್ನು ಹೊರಡಿಸುವ ಸಂಭವವಿದೆಯೆಂದು ಸುದ್ದಿ.

ಕಂದಾಯ ಕೊಡದಿರುವಿಕೆಯ ಚಳವಳಿಯನ್ನು [illegible] ಕೈಕೊಳ್ಳಬೇಕೆಂದು [illegible] ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರನ್ನು ಕೇಳಿಕೊಂಡಿರುವರು.

[illegible] ಎಂಬಲ್ಲಿ ಒಬ್ಬ ಬ್ರಾಹ್ಮಣ ಸ್ತ್ರೀಯು ಕಳೆದ ತಾ. [illegible] ರಲ್ಲಿ ಚೆನ್ನಾಗಿ ಬೆಳೆದ ನಾಲ್ಕು ಮಕ್ಕಳನ್ನು ಪ್ರಸವಿಸಿರುವಳು. 2 ಹೆಣ್ಣು ಮತ್ತು 2 ಗಂಡು. ಒಂದಲ್ಲದೆ ಬಾಕಿಯೆಲ್ಲವೂ ಚೆನ್ನಾಗಿರುವವೆಂದು ವರ್ತಮಾನ.

ಬರುವ ಪೂರಿ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಗುಜರಾತು ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು [illegible] ಪ್ರಸಾದ್ ಮತ್ತು ಸಿ. ರಾಜಗೋಪಾಲಾಚಾರ್ಯರ ಹೆಸರುಗಳನ್ನು ಶಿಫಾರಸು ಮಾಡಿರುವರು.

ಮ. ಪಟೇಲ್. [illegible] ಪತ್ರದಲ್ಲಿ [illegible] ಬ್ರಿಟಿಷರ ಮೇಲೆ [illegible] ವನ್ನು [illegible] ಅಧ್ಯಕ್ಷ [illegible]

ಮೈಸೂರಿನ ಎಗ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರರಾಗಿರುವ ಸರ್ [illegible] ಮಸ್ಕೀನ್‌ರವರು ದಕ್ಷಿಣ ಆಫ್ರಿಕದೊಂದಿಗೆ ಇಂಡಿಯಾದ ಒಪ್ಪಂದವನ್ನು ಕುರಿತು ಚರ್ಚಿಸಲು ಆಫ್ರಿಕಕ್ಕೆ ಹೋಗುವಾಗ್ಯೆ ಅವರ ಬದಲು ಸರ್ [illegible]ರು ಎಗ್ಸಿಕ್ಯುಟಿವ್ ಕೌನ್ಸಿಲು ಮೆಂಬರರಾಗಿ ನೇಮಿಸಲ್ಪಡುವರೆಂದು ವರ್ತಮಾನವಿದೆ.

ಈ ತಾ. 17 ರಲ್ಲಿ ಪಂಡಿತ ಜವಾಹರಲಾಲ್ ನೆಹರೂರವರು ಹುಬ್ಬಳ್ಳಿ, ಬಾಗಲಕೋಟೆಗಳನ್ನು ಸಂದರ್ಶಿಸುವರು. ಹುಬ್ಬಳ್ಳಿಯಲ್ಲಿ ತಾ 17 ರಲ್ಲಿ ಅಖಿಲ ಭಾರತೀಯ ಸ್ವದೇಶೀ ವಸ್ತು ಪ್ರದರ್ಶನವನ್ನು ತೆರೆಯುವದಲ್ಲದೆ, ಹುಬ್ಬಳ್ಳಿ [illegible] ಹಿಂದೂಸ್ಥಾನೀ ಸೇವಾದಳದ ಮುಖ್ಯ ಕಚೇರಿಯ ಮತ್ತು ಬಾಗಲಕೋಟೆಯಲ್ಲಿಯ ಸೇವಾದಳದ ಶಿಕ್ಷಣ ಸಂಸ್ಥೆಯ ಕಾರ್ಯ ಕಲಾಪಗಳನ್ನು ನೋಡುವರು.

ಸರ್ ಸಿ. ವಿ. ರಾಮನ್‌ರವರೇ ಮೊದಲಾದ ಹಲವು [illegible] ವಿಜ್ಞಾನ ಶಾಸ್ತ್ರ ಪ್ರೊಫೆಸರುಗಳ ಮತ್ತು ವಿದ್ಯಾರ್ಥಿಗಳ ಎದುರಿನಲ್ಲಿ ಈ ತಾ. 2 ರಲ್ಲಿ ಕಲ್ಕತ್ತಾದಲ್ಲಿ, [illegible] ಹಿಂದೂ ಯೋಗಿಯಾದ ನರಸಿಂಗ ಸ್ವಾಮಿಯವರು [illegible]ರದ ವಿಷವನ್ನೂ, ಗಾಜಿನ ಚೂರುಗಳನ್ನೂ ಮೊಳೆಗಳನ್ನೂ ಸುಲಭವಾಗಿ ನುಂಗಿದರಂತೆ! [illegible] ಪರೀಕ್ಷಿಸಿದರೆ ಅವುಗಳೆಲ್ಲವೂ ಅವರ ಹೊಟ್ಟೆಯೊಳಗೆ [illegible], ಇದು ಪೂರ್ವದ ಹಠಯೋಗದ [illegible] ಪಾಶ್ಚಾತ್ಯ ಶಾಸ್ತ್ರಕಾರರು ಇದನ್ನು ನೋಡಿ ಬೆರಗಾಗುತ್ತಿರುವರೆಂತಲೂ ವರ್ತಮಾನ.

ಬಂಗಾಳದ ಭಯಾನಕ ಚಳವಳಿಯನ್ನು ಅಡಗಿಸುವ ಬಗ್ಗೆ ಇಂಡಿಯಾ ಸರಕಾರದವರು ಹೊಸ ಆರ್ಡಿನೇನ್ಸನ್ನು ಹೊರಡಿಸಿರುವರು. ಇದರ ಮೇರೆ ಕೊಲೆಯನ್ನು [illegible] ಮರಣ ಶಿಕ್ಷೆ ಕೊಡಲಾಗುವುದಲ್ಲದೆ ಅಲ್ಪ ಸ್ವಲ್ಪ ವಿಚಾರದಿಂದ ಶಿಕ್ಷಿಸುವ ದೊಡ್ಡ ಅಧಿಕಾರವು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳಿಗೆ ಕೊಡಲಾಗಿದೆ. ಇದನ್ನು [illegible] ಮಹಾತ್ಮ ಗಾಂಧಿಯವರು ತೀವ್ರವಾಗಿ ಖಂಡಿಸಿರುವರು. ಇದರಿಂದ ಕಾಂಗ್ರೆಸ್ಸಿನವರು ಸರಕಾರದೊಂದಿಗೆ ಸಹಕರಿಸುವದು ಕಷ್ಟವಾಗುತ್ತಿದೆಯೆಂದು ಮಹಾತ್ಮರು ಸೂಚಿಸಿರುವರು.

ಸರಕಾರದವರು ಬಂಗಾಳ ಮತ್ತು ವಾಯುವ್ಯ ಪ್ರಾಂತ್ಯಗಳಲ್ಲಿ ನಡೆಸುತ್ತಿರುವ ದಬ್ಬಾಳಿಕೆ, ಇಂಡಿಯಾದ ಎಲ್ಲಾ ಕಡೆಗಳಲ್ಲಿ ನಡೆಯುತ್ತಿರುವ ಗೋಳು, [illegible] ಮತ್ತು ಶಿಕ್ಷೆಗಳು, ಬಾರ್ಡೋಲಿ ವಿಚಾರದಲ್ಲಿ [illegible] ಮೊದಲಾದವುಗಳು ಗಾಂಧಿ—ಇರ್ವಿನ್ ಸಂಧಿಗೆ ವಿರೋಧವಾದವೆಂತಲೂ, ಇಂಥಾ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು [illegible] ಸಿದ್ಧರಾಗಿರಬೇಕೆಂದು [illegible] ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ಠರಾವು ಪಾಸು ಮಾಡಿರುವರು.

ವಿದೇಶ.

ಬರ್ಮಾ ರೌಂಡ್ ಟೇಬಲ್ ಪರಿಷತ್ತು ಈ ತಾ 2ರಲ್ಲಿ ಲಂಡನ್ನಿನ ಸೆಂಟ್ ಜೇಮ್ಸ್ ಅರಮನೆಯಲ್ಲಿ ಪ್ರಾರಂಭವಾಗಿದೆ. ಲಾರ್ಡ್ ಪೀಲ್‌ರವರು ಅಧ್ಯಕ್ಷರಾಗಿರುವರು.

ಬ್ರಿಟಿಷ್ ಪ್ರಧಾನ ಮಂತ್ರಿಯವರು ರೌಂಡ್ ಟೇಬಲ್ ಪರಿಷತ್ತಿನಲ್ಲಿ [illegible] ಸರಕಾರದ ಕಲ್ಪನೆಯನ್ನು ಕುರಿತು ಪಾರ್ಲಿಮೆಂಟಿನಲ್ಲಿ ಈ ತಾ. 2 ರಂದ ಚರ್ಚೆ ನಡೆಯುತ್ತಿದೆ. ಪ್ರಧಾನ ಮಂತ್ರಿಯವರು ಇಂಡಿಯಾದ ಸಮಸ್ಯೆಯನ್ನು ಕುರಿತು ದೀರ್ಘ ಭಾಷಣ ಮಾಡಿದರು.

ಮಹಾತ್ಮ ಗಾಂಧಿಯವರು ಈ ತಾ 5ನೇ ಶನಿವಾರ ದಿವಸ ಲಂಡನಿನಿಂದ ಹೊರಟು ಪ್ಯಾರಿಸ್ ಎಂಬಲ್ಲಿಗೆ 6ರ ರಾತ್ರಿ ತಲುಪುತ್ತಾರೆ. ಅವರು ಅಲ್ಲಿಂದ ಇಟಲಿಯ ರೋಮ್ ಪಟ್ಟಣಕ್ಕೆ ಹೋಗಿ ಬ್ರಿಂಡಿಸಿ ಎಂಬಲ್ಲಿಂದ ಈ ತಾ. 14ರಲ್ಲಿ "[illegible]" ಎಂಬ ಇಟಲೀ ಹಡಗವನ್ನೇರಿ ಇಂಡಿಯಕ್ಕೆ ಬರುವರು. ಬೊಂಬಾಯಿಗೆ 28ರಲ್ಲಿ ತಲುಪುವರೆಂದು ಸುದ್ದಿ. ಮಹಾತ್ಮರು ಪ್ಯಾರಿಸ ನಗರಕ್ಕೆ ಹೋಗುವದು [illegible] ಅವರು [illegible] ಒಪ್ಪಿಕೊಂಡಿರುವರು.

ಬ್ರಿಟನಿನಲ್ಲಿ 1931ನೇ ಇಸವಿಗೆ ಕಳೆದ ವರ್ಷದಲ್ಲಿ ಎಲ್ಲದಕ್ಕಿಂತಲೂ ಹೆಚ್ಚು ಮದುವೆಗಳಾಗಿರುವವು. ಕಳೆದ ವರ್ಷದ ಲಗ್ನಗಳ ಸಂಖ್ಯೆಯು 315,100. ಅಲ್ಲಿ [illegible] ಪ್ರಾಯ 16 [illegible] 22 ಗಂಡಸರೂ, 699 ಸ್ತ್ರೀಯರೂ [illegible] 70 ವರ್ಷದ [illegible] 17 ವರ್ಷದ [illegible]

[illegible]

[illegible]

ಆಟೋಟ [illegible]

ಮ. ಸಿ. ಯಂ. ತಿಮ್ಮಯ್ಯನವರ ವಿಶೇಷ ಜಯ.

[illegible]

ತಾ 21—11—31ರಲ್ಲಿ ನಡೆದ [illegible] (1) [illegible] (3) [illegible] ಗೆದ್ದರು.

"[illegible]" [illegible] 11 ರಲ್ಲಿ [illegible] ಮ. ಸಿ. ಯಂ. ತಿಮ್ಮಯ್ಯನವರು 45 'ಪಾಯಿಂಟ್' ಗಳನ್ನು ಗೆದ್ದು 'ಚ್ಯಾಂಪಿಯನ್' [illegible] ಪಡೆದರು. [illegible]

ಮ. ತಿಮ್ಮಯ್ಯನವರು, (1) 100 ಗಜ [illegible] (2) [illegible] (3) 120 ಗಜ [illegible] (4) [illegible]

ಅಖಿಲ ಭಾರತ ಸ್ವದೇಶಿ ವಸ್ತ್ರ ಪ್ರದರ್ಶನ ಹುಬ್ಬಳ್ಳಿ.

ಆಧುನಿಕ ಜಗತ್ತಿನಲ್ಲಿ ಯಾವುದೇ ದೇಶದ ಅಭ್ಯುದಯವನ್ನು ತಿಳಿಯಬೇಕಾದರೆ ಆ ದೇಶದ ಕೈಗಾರಿಕೆಯ ಕಡೆ ದೃಷ್ಟಿಕೊಟ್ಟು ನೋಡಿದರೆ ಗೊತ್ತಾಗುವದು ಅದೇ ಕಾರಣದಿಂದಲೆ ಅನೇಕ ದೇಶದ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದರ ಸಲುವಾಗಿ ಆಗಾಗ್ಗೆ ಪ್ರದರ್ಶನಗಳನ್ನು ಮಾಡುತ್ತಿರುತ್ತಾರೆ ಹಿಂದೂಸ್ಥಾನದಲ್ಲಿಯಾದರೋ ದೇಶದ ಕೈಗಾರಿಕೆಗಳ ಪುನರುಜ್ಜೀವನಕ್ಕಾಗಿ ದೇಶದ ನಾನಾ ಕಡೆಗಳಲ್ಲಿ ಅನೇಕ ಪ್ರದರ್ಶನಗಳು ನಡೆಯುತ್ತಿವೆ ಹುಬ್ಬಳ್ಳಿಯಲ್ಲಿ ಡಿಸಂಬರ್ 17 ನೇ ತಾರೀಖಿನ ದಿನ ಪಂಡಿತ ಜವಹಿರ್‌ಲಾಲ್ ನೆಹರು ಇವರು ಅಖಿಲ ಭಾರತ ಸ್ವದೇಶೀ ವಸ್ತ್ರ ಪ್ರದರ್ಶನವನ್ನು ತೆರೆಯುವವರಿದ್ದಾರೆ ಈ ಪ್ರದರ್ಶನಕ್ಕೆ ಈಗಾಗಲೆ ದೇಶದ ನಾನಾ ಕಡೆಗಳಿಂದ ಅನೇಕ ವಿಧವಾದ ಸಾಮಾನುಗಳು ಬಂದಿವೆ ಪ್ರದರ್ಶನದಲ್ಲಿನ ಅಂಗಡಿಗಳನ್ನಾದರೂ ಬಾಡಿಗೆಗೆ ಹಿಡಿಯಲು ವ್ಯಾಪಾರಸ್ಥರು ಹಾಗು ಕಾರಖಾನೆದಾರರು ನಾಮುಂದೆ ನೀವಮುಂದೆ ಎಂದು ಬರುತ್ತಿದ್ದಾರೆ ಇರುವ ಅಂಗಡಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಕಾದಿಟ್ಟುಕೊಂಡಿದ್ದಾರೆ ಸ್ಥಳ ಸಂಕೋಚವಿದ್ದರೂ ಪ್ರದರ್ಶನ ಅಧಿಕಾರಿಗಳು ಬಂದ ವ್ಯಾಪಾರಸ್ಥರೆಲ್ಲರಿಗೂ ಸ್ಥಳ ಒದಗಿಸಿಕೊಡಲು ಪ್ರಯತ್ನ ಮಾಡುವರು ಸರಕುಗಳನ್ನು ಅನುಸರಿಸಿ ಅಂಗಡಿಗಳನ್ನು ಕೊಡಲಾಗಿದೆ ಪ್ರತಿಯೊಂದರಲ್ಲಿಯೂ ವ್ಯಾಪಾರಸ್ಥರ ಸೌಲಭ್ಯಗಳನ್ನು ಕುರಿತು ಪ್ರದರ್ಶನದವರು ಕೆಲಸ ಮಾಡುತ್ತಾರೆ. ಕಾರಣ ವ್ಯಾಪಾರಸ್ಥರು ಈ ಸುಸಂಧಿಯನ್ನು ಕಳೆದುಕೊಳ್ಳಬಾರದಾಗಿ ವಿನಂತಿ ಇದೆ

ಕಾರ್ಯದರ್ಶಿ

ಸೆಂಟ್ರಲ್ ಬ್ಯಾಂಕ್ ಮೀಟಿಂಗು

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 21 11 31 ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು 10 ಡೈರೆಕ್ಟರುಗಳು ಹಾಜರಿದ್ದರು

1 ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಒಪ್ಪಲಾಯಿತು

2 ಅಕ್ಟೋಬರ್ ತಿಂಗಳ ಜಮ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3 ಕೊಡಗು ಕಾಫಿ ಪ್ಲಾಂಟರುಗಳ ಸೊಸೈಟಿಗೆ 6700 ರೂ ಸಾಲ ಮಂಜೂರು ಮಾಡಲಾಯಿತು

4 ಅಮ್ಮತ್ತಿ ಟೌನ್ ಸೊಸೈಟಿಯು ಸಾಲದ ಅರ್ಜಿ ವಿರೇರೆ ಬ್ಯಾಂಕಿಗೆ ಸದರಿ ಸೊಸೈಟಿಯಿಂದ ಬರಬೇಕಾದ ಬಾಕಿ ಯಿದೆ ಮಿತಿರಿದ ಸಾಲ ವಾಪತಿ ಮಾಡದ್ದರಿಂದ ಸಾಲ ಮಂಜೂರು ಮಾಡಲು ಆಗುವುದಿಲ್ಲವಾಗಿ ತೀರ್ಮಾನವಾಯಿತು

5 ಬ್ಯಾಂಕಿನ 1930-31ನೇ ಸಂವತ್ಸರದ ಜನರಲ್ ಮೀಟಿಂಗನ್ನು ತಾ 21-2-32ನೇ ಆದಿತ್ಯವಾರ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯಲ್ಲಿ ನಡಿಸುವಂತೆಯೂ, ಮೀಟಿಂಗಿಗೆ ಬಂದ ಮೆಂಬರರುಗಳಿಗೆ ಕಾಮನ್‌ಗುಡ್ ಫಂಡಿನ ಹಣದಿಂದ 150 ರೂಪಾಯಿಗಳಿಗೆ ಮೀರದೆ ತಿಂಡಿ ತೀರ್ಥ ಕೊಡಬೇಕೆಂತಲೂ ತೀರ್ಮಾನವಾಯಿತು

6 ಕಳೆದ ಮೀಟಿಂಗಿನಲ್ಲಿ ತೀರ್ಮಾನವಾದ ಮೇ(೦) ಜನವರಿಯಿಂದ ಜೂನ್ ವರೆಗೆ ಬ್ಯಾಂಕಿನಲ್ಲಿ ಹಣ ಡಿಪಾಜಿಟ್ಟು ಇಡುವ ವಿಷಯ ಎಲ್ಲಾ ಬ್ಯಾಂಕುಗಳಿಗೆ ಪತ್ರ ಬರೆದುಕೊಂಡದಕ್ಕೆ ಬಂದ ಜವಾಬುಗಳನ್ನು ಓದಲಾಯಿತು

ಸದರಿ ವಿಷಯ ಚರ್ಚೆಗೆ ಇನ್ನೊಂದು ಮೀಟಿಂಗಿಗೆ ಇಡುವಂತೆ ತೀರ್ಮಾನವಾಯಿತು

7 ಕೊಡಗು ಕೋ ಆಪರೇಟಿವ್ ಸ್ಟಾಂಪು ಕಾಗದ ರಿಜಿಸ್ಟ್ರೇಶನ್ ಮತ್ತು ಟ್ರೆಜರಿ ವಗೈರೆ ನಾಡು ಕಚೇರಿಗಳ ಮೂಲಕ ಸೊಸೈಟಿಗಳು ಹಣ ಹೊಂದಿಸಿಕೊಳ್ಳುವ ವಿಷಯ ಕಳೆದ ಮೀಟಿಂಗಿನ ತೀರ್ಮಾನದ ಮೇರೆ ಬರೆದುಕೊಂಡ ಪತ್ರ ಓದಲಾಯಿತು

8 ಬ್ಯಾಂಕಿನ ಮೀಟಿಂಗು ತೀರುವುದರೊಳಗೆ ಯಾವನಾದರೊಬ್ಬ ಡೈರೆಕ್ಟರು ಮೀಟಿಂಗಿಗೆ ಬಂದರೆ ಅವರಿಗೆ ಪ್ರಯಾಣದ ಬತ್ತ ಕೊಡಬಹುದೆಂತಲೂ, ಮೀಟಿಂಗಿಗೆ ಬರ್ಗೆ ಮಾಡಿದ ಗಂಟೆಗೆ ಮೀರಿ 15 ನಿಮಿಷಗಳ ಒಳಗೆ ಕೋರಂ ಆಗದಿದ್ದ ಪಕ್ಷ ಆದರೊಳಗೆ ಬಂದ ಡೈರೆಕ್ಟರುಗಳಿಗೆ ಮಾತ್ರ ಬಸ್ ಚಾರ್ಜು ಕೊಡಬಹುದೆಂತಲೂ ಮತ್ತು ಆದರನಂತರ ಬಂದ ಮೆಂಬರುಗಳು ಬಸ್ಸು ಚಾರ್ಜಿಗೆ ಅರ್ಹರಲ್ಲವೆಂತಲೂ ತೀರ್ಮಾನವಾಯಿತು

ಕೆ ಅಪ್ಪಯ್ಯ
(ಅಧ್ಯಕ್ಷರು)

ಪತ್ರವ್ಯವಹಾರ.

[ಬರೆಯುವವರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ]

ಗುಹ್ಯ ಗ್ರಾಮದ ಕಾವೇರಿ ಜಾತ್ರೆ

ಅಯ್ಯಾ,

ತಾರೀಖು 9-11-31 ರಲ್ಲಿ ನಡೆದ ಜಾತ್ರೆಯು ಬಹು ವಿಜೃಂಭಣೆಯಿಂದ ನೆರವೇರಿತು. ಈ ಜಾತ್ರೆಗೆ ಕೊಡಗಿನ ಎಲ್ಲಾ ಕಡೆಗಳಿಂದ ಮಾತ್ರವಲ್ಲದೆ ಇತರ ದೇಶಗಳಿಂದಲೂ ಜನರು ಬಂದಿದ್ದರು ಈ ಜನಗಳಿಗೆ ಕೇಳುವವರ ಭಕ್ತ ಮತ್ತು ಜಾಗ್ರತೆಯ ಭಕ್ತರಗಳಲ್ಲಿ ಊಟ ಉಪಚಾರಗಳು ಬಹಳ ವರ್ಷಗಳಿಂದಲೇ ನಡೆಯುತ್ತಾ ಬಂದು ಇತ್ತೀಚೆಗೆ ಕೆಲವು ವರ್ಷಗಳಿಂದ ಜೋಂದಂಡ ಭಕ್ತರಲ್ಲಿ ಮಾತ್ರ ಕೊಡಲ್ಪಡುತ್ತಾ ಇತ್ತು ಈ ವರ್ಷ ಜೋಂದಂಡ ಭಕ್ತರಲ್ಲಿ ನಡೆಯುವುದು ಬಾಕಿ ಮಾಡುತ್ತಾರೆಂಬುದನ್ನು ತಿಳಿದು ವೀರಾಜಪೇಟೆ ಮತ್ತು ಸಿದ್ದಾಪುರ ಪೇಟೆಗಳಿಂದ ಐದಾರು ಹೋಟೇಲುಗಳು ಬಂದು ತಯಾರಿರುವದನ್ನೂ, ಈಗಿನ ದುಸ್ಥಿತಿಯ ಕಾಲವನ್ನೂ, ಅರಿತವರಾದ ಗ್ರಾಮದ ಪಟೇಲ ಸಿ ಎ ಕೃಷ್ಣಯ್ಯನವರು ಸೋಮಿಯಂಡ ಅಚ್ಚಯ್ಯನವರು ಮತ್ತು ತಾತಪಂಡ ಪೂವಯ್ಯನವರು ದಯದಿಂದ ಬರುವ ಜನರಿಗೆ ಅನುಕೂಲ ಮಾಡಿ ಕೊಡದಿದ್ದಲ್ಲಿ ಪೂರ್ತಿ ಕಷ್ಟಕ್ಕೆ ಒಳಗಾಗುವುದಾಗಿ ಯೋಚಿಸಿ ಬಹಳ ಕಷ್ಟ ಸ್ಥಿತಿಯಿಂದ ಅಂದರೆ ಗಂಜಿ ಅನ್ನ ಚಟ್ನಿ ಮತ್ತು ಉಪ್ಪಿನ ಕಾಯಿ ಯಿಂದ ಊಟ ಕೊಟ್ಟು ಸಹಾಯ ಮಾಡಿದರು ಇದು ಹಿಂಬಾಲಿಸತಕ್ಕ ಉದಾಹರಣೆಯಾಗಿದೆ

ಯಾತ್ರಾರ್ಥಿ

ಮಡಿಕೇರಿ ಕೊಡವರ ಹುತ್ರಿ

ಅಯ್ಯಾ,

ಈ ವರ್ಷದ ಹುತ್ರಿಯು ಕಳೆದ ತಾರೀಖು 25 ಮತ್ತು 26 ರಲ್ಲಿ ನಡೆಯಿತು ಎಂದು ನಾನು ಬೇರೆ ಬರೆದು ತಿಳಿಸಬೇಕಾಗಿಲ್ಲ ಆದರೆ ತಾ 25 ನೇ ಬುಧವಾರ ಸಾಯಂಕಾಲ 8 ಗಂಟೆಗೆ ಕದಿರು ತೆಗೆಯುವುದೆಂದ ಕೊಡಗು ಮುಖ್ತಾರಿಯು ಇತ್ಯಾದಿ ಯವರು ಈ ಪತ್ರಿಕೆಯ ಮೂಲಕ ತಿಳಿಸಿದ್ದ ಮೇರೆ ಆ ಸಮಯಕ್ಕೆ ಸರಿಯಾಗಿ ನಾನು ಓಂಕಾರೇಶ್ವರ ದೇವಸ್ಥಾನಕ್ಕೆ ಹೋದೆನು ಪ್ರಾಯದ ಬಾಲು ಕಮ್ಮಿಯಾಗಿದ್ದರು ಶಾಲೆಯ ಹುಡುಗರು ಕೆಲವು ನಿಂತಿದ್ದರು ಕದಿರು ತೆಗೆಯುವ ದಿನ ನಮ್ಮ ಪೂರ್ವ ಪದ್ಧತಿ ಪ್ರಕಾರ ಕೊಡವ ಡ್ರೆಸ್ ಕುಪ್ಪಸ ದಟ್ಟಿ ರುಮಾಲು ವಗೈರೆ ಧರಿಸಿಕೊಂಡು ಬಂದವರು ಬಿಲ್ಲದೆ ಬೇರೆ ಯಾರೂ ಇರಲಿಲ್ಲ! ಮಡಿಕೇರಿ ನಗರ ಜನರು ಕೊಡವರನ್ನೂ ಪ್ರಯತ್ನವೂ ಆಯಿತು ಇಷ್ಟು ದೊಡ್ಡ ಪಟ್ಟಣದಲ್ಲಿ ಕೊಡವ ಪದ್ಧತಿ ಪ್ರಕಾರ ಬಟ್ಟೆ ಧರಿಸಿದ್ದರು ಎಂದು ಯಾರಿಗೆ ತಾನೇ ಆಶ್ಚರ್ಯವಾಗದೆ ಇರವುದು? ಮಡಿಕೇರಿಯು ಕೊಡಗಿನ ಮುಖ್ಯ ಪಟ್ಟಣವಾಗಿದ್ದು ಗಜೆಟೆಡ್ ಉದ್ಯೋಗಸ್ಥರೂ ವಿದ್ಯೆ ಪಡೆದ ಅನೇಕರೂ ಇರುವ ಇಲ್ಲಿಯೇ ಕೊಡವ ಪದ್ಧತಿ ಪ್ರಕಾರ ನಡೆಯದಿದ್ದರೆ ಆಶ್ಚರ್ಯವಲ್ಲವೇ? ಇನ್ನು ಮುಂದೆಯಾದರೂ ವಿದ್ಯಾಬುದ್ಧಿವಂತರೆನಿಸಿಕೊಳ್ಳುವ ಮಡಿಕೇರಿಯ ಕೊಡವರು ನಮ್ಮ ಪೂರ್ವ ಪದ್ಧತಿ ಮೇರೆ ಕೊಡವರ ಉಡುಪನ್ನು ಧರಿಸಿಯೇ ಕದಿರು ತೆಗೆಯುವರೆಂದು ನಂಬುತ್ತೇನೆ

ಕೊಡವ

ದೇವಸ್ಥಾನ ಜೀರ್ಣೋದ್ಧಾರ ಮತ್ತು ಪೂಜೆ

ಅಯ್ಯಾ,

ನಾಪೋಕ್ಲು ನಾಡು ಬೆ ತು ಗ್ರಾಮದ ಶಕ್ತಿ ದೇವಸ್ಥಾನದಲ್ಲಿ ತಾ 11-11-31ರಲ್ಲಿ ಬೆ ತು ಬೊಪ್ಪಂಡ ಮತ್ತು ಕೆಲ್ಲಕೇರಿ ಊರು ಜನರೆಲ್ಲಾ ಸೇರಿ (ಚವಟ್) ಎಂದರೆ ಸಾಧಾರಣ ದೇವರಿಗೆ ಪೂಜೆ ಮಾಡಿ ಬೆಳೆಯಾಯಿತು ಸಾರ್ಥಕವು ದೈವಾಲ್ ಸಲ್ಲಿಸ ಕಷ್ಟದ ಮಿಗನ್ನ ಬಂದು ಕೇಳಿ ಅಲ್ಲಿದ್ದ ವಾದ ಪಡೆದರು

ಕೊಳಕೇರಿ ಗ್ರಾಮದಲ್ಲಿರುವ ನೂರಂಬಾಡ ಮುಖ್ಯೇರಿ ಭಗವತಿ ದೇವರ ದೇವಸ್ಥಾನವು ಸಾಧಾರಣ 60 ವರ್ಷದಿಂದ ಜೀರ್ಣವಾಗಿ ಉತ್ಸವ ಪೂಜೆ ನಡೆಯದಿದ್ದುದನ್ನು ಪುನಃ ಉದ್ಧಾರ ಮಾಡಲು ಒಂದು ಜನರಲ್ ಮೀಟಿಂಗ್ ನಡಿಸಿ ಜನರಿಂದ ಚಂದಾ ದೇವಸ್ಥಾನ ರಿಪೇರಿ ಮಾಡಿ ಮೇಲೆ ಕುಲಕೋಲು ಜಾರಿ ಮಾಡಿದನು ನಾಪೋಕ್ಲು ಗ್ರಾಮದಲ್ಲಿರುವ ಐರಿ ಅಪ್ಪಯ್ಯ ವಗೈರರಿಗೆ ಕಂಟ್ರಾಕ್ಟು ಕೊಟ್ಟು ಕಟ್ಟಡ ಕಟ್ಟುವ ವಿಧಾನ ಒಪ್ಪಿದ ಕಂಟ್ರಾಕ್ಟು ಹಣ ಹೊಂದಿಸಿಕೊಳ್ಳುವ ವಗೈರೆ ಕಾಗದಗಳ ಖರಾರನ್ನು ಬರೆಯಿಸಿಕೊಂಡು 60 ರೂ ಅಡ್ವಾನ್ಸು ಕೊಡಲಾಗಿ ಕೆಲಸ ನಡೆಯುತ್ತಾ ಇದಕ್ಕೆ ಈ ದಿನ ಊರಿನ ಪ್ರತಿ ಒಬ್ಬರ ಕುಲಪೂಜಾದಿ 2 ಅಣೆಯಂತೆ ಬರಬೇಕಾಗಿಯೂ ನಾಲ್ಕು ಬಟ್ಟಿ ಭೂಮಿಗೆ ½ ಭಟ್ಟಿ ಭತ್ತ ಕೊಡಬೇಕಾಗಿಯೂ ತೀರ್ಮಾನಿಸಿ ಬಲ್ಲಾಟಂಡ ಚಂಗಪ್ಪನವರ ದಯೆಯಿಂದ ಈ ಗ್ರಾಮದಲ್ಲಿ ಪೂರ್ತಿ ಬಾಧ್ಯರಿಂದ ಬರುವ ಡಿಸೆಂಬರು 5ನೇ ತಾರೀಖಿನೊಳಗೆ ಮೀಟಿಂಗ ಮಾಡಿ ತಿಳಿಸುತ್ತೇವೆಯೆಂದು ಮೆ ಬೊಳ್ಳಿಯಂಡ ನಂದಣ್ಣನವರು ಸೂಚಿಸಿದ್ದಕ್ಕೆ ಅಧ್ಯಕ್ಷರಾದ ಬಲ್ಲಾರಂಡ ತಿಮ್ಮಪ್ಪಯ್ಯನವರು ಅನುಮೋದಿಸಿದ ರೀತಿ ಮುಕ್ತಾಯ ಆಯಿತು

ಅಚ್ಚಯ್ಯ

ಸೋಮವಾರಪೇಟೆನಿಂದ ಚೋರ ರಸ್ತೆಗಳು

ಅಯ್ಯಾ,

ತಾರೀಖು 17-11-31 & 18-11-31ನೇ ಶುಭ ದಿನಗಳಲ್ಲಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಪಾಂಡಂಡ ಚಂಗಪ್ಪನವರು ಆ ನಾಡಿನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರು ಮೆ ಚಾರ್ಲ್ಸ್ ಕಾಳಪ್ಪನವರ ಸಮೇತ ಕುಂದಳ್ಳಿಯಿಂದ ಶ್ರೀ ರಾಜೆಂಗಾಗಿ ನೂರು ಮಣ್ಣಿನ ಕ್ಷೇತ್ರ ಮಾರ್ಗದ ಅದು ಮಾಡಿಸುತ್ತಿರುವ ಹೊಸ ಗಾಡಿ ರಸ್ತೆಯನ್ನೂ, ಅಲೆ ಕಟ್ಟೆಯಿಂದ ಕೂರ್ಗಿಗಾಗಿ ಮ್ಯಾಪೂ ತಯಾರಾಗಬೇಕಾದ ಗಾಡಿ ರಸ್ತೆಯನ್ನು ಮತ್ತು ಅಬ್ಬೂರು ಕಟ್ಟೆಯಿಂದ ಹಿರಿಕರೆ ಭಾಗದ ರಸ್ತೆಗೆ ಸೇರಿಸುವ ತೋಡು ಸಹ ಪರಿಶೀಲಿಸಿದರು ಗಾಡಿಗಳನ್ನು ತೆಗೆದುಕೊಂಡು ಹೋಗಲು ಬಿಡುಗುತ್ತ ಅವರಾಧ್ಯತೆಯ ಸೆಂಕ್ಷನ್ನು ನಮ್ಮ ಡಿ ಬೋರ್ಡು ಮೆಂಬರು ಚೆನ್ನಾಗಿ ವಿವರಿಸಿ ಕೊಟ್ಟರು ಇವುಗಳನ್ನು ನೋಡಿಕೊಂಡು ಅಲ್ಲಿಯ ಗ್ರಾಮದ ರೈತರುಗಳು ಕೇಳಿ ಗಾಡಿಯನ್ನಾಗಲೀ ಕತ್ತಿಯನ್ನಾಗಲೀ ತೆಗೆದುಕೊಂಡು ಹೋಗದ ಹಾಗೆ ಮುಂಚೆ ಈ ರಸ್ತೆ ಮಾಡಿದರೆ ತಾವು ಬೋರ್ಡಿನಿಂದ ಹಣ ಕೊಡಿಸುವದಾಗಿ ವಾಗ್ದಾನ ಕೊಟ್ಟಿರುತ್ತಾರೆ ಈ ರಸ್ತೆಯು ಜಾತ್ರೆಗೆ ಹೋಗುವ ಜನರಿಗೂ ಮತ್ತು ದನಕರುಗಳಿಗೂ ಶ್ರೀ ವಗೈರೆ ಸಾಗಿಸಲಿಕ್ಕೂ ದಕ್ಷಿಣ ಕನ್ನಡದಿಂದ ಹಂಚು ವಗೈರೆ ತರಲು ಉಪಯೋಗಕರವಾದ ರಸ್ತೆಗಳಾಗಿ ನ ಕೆವ್ವಾಲೆ ವಗೈರೆ ಗ್ರಾಮಗಳಿಂದ ಸೋಮವಾರಪೇಟೆ ಸಂತೆಗೆ ಹೋಗಿ ಬರುವ ಜನರಿಗೆ ಆನೆ ಭಯವೂ ತಪ್ಪುವದಾಗಿರುತ್ತೆ ಆಯಾಯ ಸರಹದ್ದಿನ ಗ್ರಾಮಸ್ಥರು ಬೇಗ ರಸ್ತೆಯನ್ನು ತಯಾರು ಮಾಡಿ ಅಬಿವೂಯಿಸಿಕಗೆ ಇಟ್ಟು ಬೇಗ ಹಣ ಸಿಕ್ಕ ಬಹುದೆಂದು ಕೋರುತ್ತೆ

ಹಿತಚಿಂತಕ

ಕೊಡಗಿನಲ್ಲಿ ಭಿಕ್ಷೆ

ಬಡ ಹುಟ್ಟಿದವರೇ

ನಾನೊಬ್ಬ ಭಿಕ್ಷುಕ ನಿಮ್ಮಲ್ಲಿ ಭಿಕ್ಷೆ ಬೇಡಿ ಹೊಟ್ಟೆಯನ್ನು ಹೊರೆಯಲು ನನಗೆ ಬಲವತ್ತರದ ಆಶೆ ನಿಮ್ಮ ದಾನದಿಂದಲೇ ನನ್ನ ಹೊಟ್ಟೆ ತುಂಬಬೇಕು ಬೇರೆಯವರಲ್ಲಿ ಯಾಚಿಸಲು—ನಿಮ್ಮನ್ನು ಬಿಟ್ಟು—ಮನಸಿಲ್ಲ ಅಲ್ಲದೆ ನಿಮ್ಮ ದರಲ್ಲದೆ ಬೇರೆ ಯಾರು ನೀಡಿ ಕೃತಾರ್ಥರಾಗಬೇಕು?

ತರುಣರೇ! ನಿಮ್ಮನ್ನು ಕಾಣುವಾಗ ನನ್ನಿಂದ ಎತ್ತಿ ಹಿಡಿಯಲು ಅಗತ್ಯವಾಗಿ ನೀವು ವೀರ ಕೊಡವರು ಯಾವುದಕ್ಕೂ ಹೆದರದ ಬೆಡಗಿನ ಕೊಡವರ ಅಂದ ಮೇಲೆ ವ್ಯರ್ಥ ನಿರಾಕರಿಸುವುದು ಯೋಗ್ಯವಲ್ಲ ಪೂರ್ಣವಾಗಿ ಕಷ್ಟ ಕೊಡುವರು ಕಾರ್ಯಸಿದ್ಧಿಗಳಾಗಿಯೂ, ಸ್ವದೇಶಿ ಪ್ರೇಮಿಗಳಾಗಿಯೂ ನಾನು ನಿಮ್ಮ ಜನ್ಮವನ್ನು ಸಾರ್ಥಕಪಡಿಸಿರಿ

ಕರ್ನಾಟಕವು ಭಾರತಖಂಡದಲ್ಲೊಂದು ಭಾಗ ಕೊಡಗು ಕರ್ನಾಟಕದಲ್ಲಿನ ಒಂದು ಅಂದ ಮೇಲೆ ತಾಯಿಯ ಮೇಲೆ ಬಂದಿರುವ ಭಯಂಕರ ಪ್ರಸಂಗದಲ್ಲಿ ಕೊಡಗರೂ ಪಾಲುಗಾರರಾಗಬೇಕು ಭರತಖಂಡದ ಬಂಧನವನ್ನು ಹರಿಯುವ ಕಾಲವು ಬಂದಿದೆ ನೀವು ಅದರಲ್ಲಿ ಭಾಗಿಗಳಾಗಿ ಕರ್ತವ್ಯ ಪಾಲಕರಾಗಿ ನಾಡನ್ನು ರಕ್ಷಿಸಿಕೊಳ್ಳಬೇಕು

ಆದರೆ ನಿಮ್ಮ ಮನಸ್ಸಿನಲ್ಲಿ ಯೋಚನೆಯು ಬರಬಹುದು ದಂಡು ಮೋಚಿಸ ಪರಿಷತ್ತಿನಲ್ಲಿ ಕ ಭವಾಗಬಹುದೆಂದು ಆದರೆ ಎಲ್ಲರಂತೆಯೇ ನಿಮಗೂ ಮನವರಿಕೆಯಾಗಿದೆ ಇಟ್ಟ ಅಲ್ಪ ಸ್ವಲ್ಪ ಆಶೆಯೂ ಗಗನ ಕುಸುಮಗಳಾದವು ನರ ಹೋಗಿ ಎಲ್ಲವೂ ಶುಭ್ರವಾದವು ನಂಬಿಕೆಯು ದೂರವಾಯಿತು ಅಂದ ಮೇಲೆ ಉಳಿದಿರುವುದೇನ?

ಇದಕ್ಕೆ ಉತ್ತರವಾಗಿ ಒಂದೇ ಒಂದು ಮಾತು ಹೇಳಬಹುದು ದೇಶದಲ್ಲಿನ ಜನರಲ್ಲಿ ಸ್ವದೇಶ ಪ್ರೇಮದ ಜ್ವಾಲೆಯನ್ನು ಬಿತ್ತಿ ರಾಷ್ಟ್ರದ ಪುನರುಜ್ಜೀವನದ ಕೆಲಸದಲ್ಲಿ ತೊಡಗಬೇಕು ಕಳೆದ ಸಂವತ್ಸರಕ್ಕಿಂತಲೂ ಹೆಚ್ಚಾದ ಉತ್ಸುಕತೆಯಿಂದ ಆಶೆಯಿಂದ ಕೆಲಸ ಮಾಡಿ ಕಾರ್ಯಕ್ಷೇತ್ರದಲ್ಲಿ ಇಳಿಯಬೇಕು ಇದಕ್ಕೆ ಸಾಧನವೆಂದರೆ ಯೋಗ್ಯವಾದ ವ್ಯವಸ್ಥಿತವಾದ ಶಿಕ್ಷಣ

ಅವಶ್ಯಕವಾದ ಶಿಕ್ಷಣವನ್ನು ದೇಶದ ಕಾರ್ಯಕ್ಕೆ ಕಂಕಣ ಕಟ್ಟಿರುವ ಹಿಂದೂಸ್ಥಾನೀ ಸೇವಾದಲದವರು ಕೊಡುತ್ತಿರುವರು ಇದರ ಸಾಕ್ಷಿಯು ನಿಮ್ಮ ಸಮೀಪದಲ್ಲಿಯೇ ನಿಮ್ಮ ಕಣ್ಣೆದುರಿನಲ್ಲಿಯೇ ಇವೆ ಬಂಧುಗಳೇ ಕಣ್ಣೆತ್ತಿ ನೋಡಿ—ವೀರಾಜಪೇಟೆಯ ಕಡೆಗೆ ಆಹಾ, ತ್ಯಾಗ ಮೂರ್ತಿಗಳಾದ, ಕಾರ್ಯಾತುರರಾದ ಕೆಲವು ಕೊಡವರ ಶಿಕ್ಷಣ ಹೊಂದುತ್ತಿರುವರು

ಬಡ ಹುಟ್ಟಿದವರೇ, ದೇಶದ ಸ್ವಾತಂತ್ರ್ಯ ಸಂಪಾದನೆಗೆ ಅಷ್ಟೇ ಮಂದಿ ಸುಶಿಕ್ಷಿತರು ಸಾಲದು ಇನ್ನೂ ಬಹಳ ಮಂದಿ ಬೇಕು ಎನ್ನುವುದರಲ್ಲಿ ಸಂಶಯವಿಲ್ಲ

ಕೊಡಗಿನ ತರುಣರುಗಳೇ ಕೊಡಗು ಸ್ವಾತಂತ್ರ್ಯಪ್ರಿಯರಾದ ಕೊಡವರು ಭರತಮಾತೆಯ ಸೇವೆಗಾಗಿ ತೀರಾ ಶಿಕ್ಷಣವನ್ನು ಸೇರಿ ಪ್ರಸ್ತುತಿಂದ ಕಾರಣ ನ ಭಿಕ್ಷೆ ಕೈ ಜೋಡಿಸಿ ದೀನನಾಗಿ ನಾನು ಬೇಡುವ ಭಿಕ್ಷೆ

ತಾಯಿಯ ಸಲುವಾಗಿ ಭಿಕ್ಷೆ ಯಾವಕ್ಕು ಯುವಕರನ್ನು ಕಳುಹಿಸಿ ನ್ನಿ. ಮಧ್ಯವಯಸಿನವರಲ್ಲಿ, ವೃದ್ಧರಲ್ಲಿ ಭಿಕ್ಷೆ ಬಂಧನವನ್ನು ಕಿತ್ತೊಗೆಯಲು ಭಾಗಿಗಳಾಗಬೇಕೆಂದು.

ಭಿಕ್ಷೆಯು ಕಿರಿದಲ್ಲ ಹಿರಿದು ಎಲ್ಲರೂ ಕೈಲಾದಷ್ಟು ಸಹಾಯ ಮಾಡಬೇಕು ಯಾವುದಕ್ಕೂ ಅಂಜದೆ ಪ್ರತಿಷ್ಠೆ ರಾಶಿಗಳನ್ನು ಹಿಂದಕ್ಕೆ ಎಳೆದು ಹಾಕದೆ ಕಾರ್ಯಕ್ಷೇತ್ರಕ್ಕೆ ಹಚ್ಚಬೇಕು

ವೀರ ಕೊಡವರೇ, ನೀವು ಇಂಥಾ ಭಿಕ್ಷೆಯನ್ನು ಅಪೂರ್ವ ಭಿಕ್ಷೆಯನ್ನು ಕೊಡಲಾರಿರಾ? ಹಾಗಾದರೆ ನೀವು ದಾನ ಮಾಡುವಿರೆಂದು ನನ್ನ ಹೃದಯ ವೀಣೆಯು ನವ ಚೈತನ್ಯ ವಲ್ಲೋಲದ ಗಾನವನ್ನು ನುಡಿಸುತ್ತಿರುವುದು

ಕೆ ವೆಂಕಯ್ಯ

ಮೂರ್ನಾಡು ಶಾಲೆಯ 3ನೇ ವಾರ್ಷಿಕೋತ್ಸವ.

[illegible]ನವ್ಯ,

ಮೂರ್ನಾಡು ಶಾಲೆಯ ಮೂರನೇ ವಾರ್ಷಿಕೋತ್ಸವ [illegible] ನವಂಬರ್ ತಿಂಗಳು 22ನೇ ತಾರೀಕಿನಲ್ಲಿ ಸಬ್ ಇನ್ [illegible] ಪಿ. ಬಿ. ಮೇದಪ್ಪನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆ[illegible]ಯಿಂದ ಜರಗಿತು. ಆಟೋಟಗಳ ಸ್ಪರ್ಧೆಯು 10ರಿಂದ 12 [illegible]ಜೆನು ವರೆಗೆ ನಡೆಯಿತು. ಹುಡುಗರು ಮತ್ತು ಹುಡುಗಿ[illegible]ಯರು ಬಹಳ ಚಟುವಟಿಕೆಯುಳ್ಳವರಾಗಿದ್ದರು. ಪಬ್ಲಿಕಿನವ[illegible]ಗೂ, ಸದರಿ ಶಾಲೆಯ ಹಳೇ ವಿದ್ಯಾರ್ಥಿಗಳಿಗೂ, ಬೇರೆ [illegible] ಶಾಲೆಯ ಹುಡುಗರಿಗೂ ಸ್ಪೋರ್ಟ್ಸಿನಲ್ಲಿ ಸೇರಿ ತಮ್ಮ [illegible] ಚಾತುರ್ಯಗಳನ್ನು ತೋರಿಸುವ ಸಂದರ್ಭಗಳಿದ್ದವು. [illegible]ಲ್ಲಿಂದ ಶಾಲೆಯ ಆಟೋಟಗಳ ಸ್ಪರ್ಧೆಯು ಮೂರ್ನಾಡಿ[illegible] ಪಾಂಡಾಣೆ ಮಂದಿಸಲ್ಲಿ ಜರಗಿತೆಂದೂ, ಅನೇಕ ಮಹನೀ[illegible]ಯರೂ, ಮಹಿಳೆಯರೂ ನೆರೆದಿದ್ದರೆಂದೂ ಹೇಳಲು ಸಂತೋಷ[illegible]ಪಡುತ್ತೇನೆ. ಅಲ್ಲಿ ನೆರೆದಿದ್ದವರೆಲ್ಲರೂ ಹುಡುಗಿಯರ ಬ[illegible] ಸಾರುವ ಚಟುವಟಿಕೆಯನ್ನೂ, ಸಣ್ಣ ಹುಡುಗರ ಚಳ್ಳಿ [illegible] ಓಟ-ನ್ನೂ ನೋಡಿ ಬಹಳ ಆನಂದ ಪಟ್ಟರು. ಅಲ್ಲದೆ [illegible]ಉಪಾಧ್ಯಾಯರ ಪರಸ್ಪರ ಸಹಾಯವೋ ಎಂಬಂತೆ ಎಲ್ಲಾ [illegible]ಶಾಲೆಗಳ ಉಪಾಧ್ಯಾಯರು ಒಮ್ಮತಿತ ಮೂಡಿಯನ್ನು ನಾ[illegible]ನ ಜನರಿಗೆ ಪ್ರೋತ್ಸಾಹಕ್ಕೆಯಾಗಿ ತೋರಿಸುವ ಕೂಟವೋ ಎಂ[illegible]ತೆ ಅವ್ಯತ್ತಿ, ಹೊದ್ದೂರು, ನಾಪೋಕ್ಲು, ಭಾಗಮಂಡ್ಲ, [illegible] ಚೆಟ್ಟಳ್ಳಿ ಮತ್ತು ಕಾಕೋಟುಪರಂಬು ಶಾಲೆಗಳಿಂದ [illegible] ಸಹ ಅನೇಕ ಉಪಾಧ್ಯಾಯರುಗಳು ಬಂದು ಸದರಿ ಶಾ[illegible]ಲೆಯ ಉಪಾಧ್ಯಾಯರುಗಳಿಗೆ ಸ್ಪೋರ್ಟ್ಸಿನಲ್ಲಿಯೂ, ಜನ[illegible]ಸ್ತೋಮನೆರೆದಿದ್ದವರನ್ನು ಸತ್ಕರಿಸುವುದರಲ್ಲಿಯೂ ಭಾಗಿಗ[illegible]ಳಾಗಿದ್ದರು. ಮೂರ್ನಾಡು ಶಾಲೆಯ ಹೆ. ಮಾ. ರವರೂ, [illegible]ತರ ಸಹಾಯಕ ಉಪಾಧ್ಯಾಯರುಗಳೂ ಸಹ ತಮ್ಮ ಸ[illegible]ಹೋದರ ವರ್ಗಕ್ಕೆ ಸೇರಿದ ಇತರ ಶಾಲೆಗಳಿಂದ ಅತಿಥಿಯಾಗಿ ಬಂದು ಇಲ್ಲಿ ಜರಗಿತಕ್ಕ ಎಲ್ಲಾ ಕೆಲಸಗಳಿಗೂ ಭಾಗಿಗಳಾದ ತಮ್ಮ ಸಹೋದರ ಉಪಾಧ್ಯಾಯರುಗಳಿಗೂ, ಗ್ರಾಮಸ್ಥರಿ[illegible]ಗೂ ಸಹ, ಇತರ ಮಹನೀಯರುಗಳಿಗೂ ತಮ್ಮ ಕೃತಜ್ಞತೆ[illegible]ಯನ್ನು ತೋರಿಸುವಂತೆ ಎಂಬ ರೀತಿಯಿಂದ ಪಸನ್ನ ಮುಖಿ[illegible]ಗಳೂ, ಸರಳ ಹೃದಯರಾಗಿಯೂ ಇದ್ದರು. ಆಟೋಟ[illegible]ಗಳ ಸ್ಪರ್ಧೆಯು ತೀರಿದ ನಂತರ ನೆರೆದಿದ್ದ ಮಹಿಳೆಯರಿಗೂ, ಮಹನೀಯರಿಗೂ ಮತ್ತು ಶಾಲಾ ಮಕ್ಕಳಿಗೂ, ಊಟ ಉ[illegible]ಪಚಾರವು ಬಹು ತೃಪ್ತಿಕರವಾಗಿ ನಡೆಯಿತು. ಇಲ್ಲಿಯೂ ಸಹ ಅತಿಥಿಗಳಾಗಿ ಬಂದ ಕೆಲವು ಉಪಾಧ್ಯಾಯರುಗಳು ಸದ[illegible]ರಿ ಶಾಲೆಯ ಉಪಾಧ್ಯಾಯರುಗಳು ತಾರತಮ್ಯವಿಲ್ಲದ ರೀತಿಯಿಂದ ಕೆ[illegible]ಲಸ ಮಾಡುವುದನ್ನು ನೋಡಿ ಸತ್ಯ ಸಾಲ್ಪಲಿನ ಗ್ರಾಮಸ್ಥರ[illegible]ದ ಯೋಗ್ಯ ಯುವಕರು ಸಹ ಮುಂದೆ ಬಂದು ಬಹಳ ಮು[illegible]ತುವರ್ಜಿಯಿಂದ ಕೆಲಸ ಮಾಡಿದರು. ಇದನ್ನೆಲ್ಲಾ ನೋಡು[illegible]ತ್ತ ಹೀಗಿದ್ದ ನನಗೆ ಶಾಲೆಗಳಲ್ಲಿ ನಡೆಯತಕ್ಕ ಈ ತರದ ಕೂ[illegible]ಟಗಳಿಂದ ಗ್ರಾಮಸ್ಥರಿಗೂ, ನಮ್ಮ ಮುಂದಿನ ಜನಾಂಗವ[illegible]ನ್ನು ತಯಾರು ಮಾಡುವ ಉಪಾಧ್ಯಾಯರುಗಳಿಗೂ ಒಮ್ಮತಿ[illegible]ತಗಳು ಬರುವುದಕ್ಕೆ ಯೋಗ್ಯ ಸಂದರ್ಭ ಕೂಟಗಳು ಇವೇ ಎಂಬುವುದು ಮನಸ್ಸಿಗೆ ನಾಟಿತು.

ಅತಿಥಿಗಳ ಊಟ ಉಪಚಾರಗಳು ಮುಗಿದ ನಂತರ ಸದರಿ ಶಾಲೆಯ ಹೆ ಮಾ. ರವರು ಕೆಲವು ಪಬ್ಲಿಕ್ ಜನರನ್ನೂ, ಬೇರೆ ಶಾಲೆಗಳಿಂದ ಬಂದಿದ್ದ ಮಾಸ್ತರು, ನಾಲ್ಕು ಉಪಾಧ್ಯಾಯರುಗಳನ್ನೂ ಶಾಲೆಯ ವಸ್ತು ಪ್ರದರ್ಶನದ ಕೊಠಡಿಯನ್ನು ನೋಡುವಂತೆಯೂ, ಅವುಗಳಲ್ಲಿ ಚೆನ್ನಾಗಿ ಮಾಡಿದ ಕೈ ಗಾರಿಕೆಗಳಿಗೆ ಇನಾಮು ಗೊತ್ತು ಪಡಿಸುವಂತೆಯೂ ಕೇಳಿಕೊಂಡರು. ಅವರು ಅದೇ ರೀತಿ ಸದರಿ ಸಾಮಾನುಗಳನ್ನು ನೋಡಿ ಇನಾಮು ಗೊತ್ತುಪಡಿಸಿದರು. ಆ ಮೇಲೆ ಇಷ್ಟ ಇದ್ದವರೆಲ್ಲರೂ ಮಕ್ಕಳು ಮಾಡಿದ ವಸ್ತುಗಳನ್ನೆಲ್ಲಾ ನೋಡಿ ಸಂತೋಷಿಸಿದರು.

ಸುಮಾರು 2½ ಗಂಟೆಗೆ ಶಾಲಾ ಸಬ್ ಅಸಿಸ್ಟೆಂಟ್ ಇ[illegible]ನ್ಸ್‌ಪೆಕ್ಟರ ಸಂಗಡ ಬಂದ ಅಧ್ಯಕ್ಷರನ್ನು ಬಹಳ [illegible]ದಿಂದ ಎದುರುಗೊಂಡರು. ಅಧ್ಯಕ್ಷರು ಪೀಠವನ್ನು [illegible] ಮೇಲೆ ಸ್ಪೋರ್ಟ್ಸಿನಲ್ಲಿ ಗೆದ್ದ ಹುಡುಗರಿಗೂ [illegible]ಗೂ, ಬೇರೆ ಮಹನೀಯರುಗಳಿಗೂ ಇನಾಮು [illegible]. ಆ ಮೇಲೆ ಹೆ. ಮಾ. ರವರು ಅಧ್ಯಕ್ಷರ ಅಪ್ಪಣೆ [illegible] ಶಾಲಾ ವರದಿ ಓದಿದರು. ಅನಂತರ ಮಿ. ಪಿ. ಬಿ. [illegible] ನವರು ಆರೋಗ್ಯದ ಕುರಿತು ಪ್ರಬಂಧ ಓದಿದರು. ಆ ಮೇ[illegible]ಲೆ ಮಿ. ಎ. ಸಿ. [illegible]ನವರು ಗ್ರಾಮಸ್ಥರು [illegible] ಎಂಬ ವಿಷಯ [illegible] ಪ್ರಬಂಧ ಓದಿದರು. ಆ ಮೇಲೆ ಮಿ. ಬಿ. [illegible] [illegible] ಗ್ರಾಮಸ್ಥರಲ್ಲಿ [illegible]. ಅ[illegible]ಧ್ಯಕ್ಷರು [illegible] [illegible]. [illegible] [illegible] [illegible] [illegible] [illegible] "[illegible] School" [illegible] [illegible] ಕನ್ನಡ ನಾಟಕವನ್ನು ಚೆನ್ನಾಗಿ ಆಡಿ[illegible].

ಅಧ್ಯಕ್ಷರು [illegible] [illegible] [illegible]

"[illegible]"

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮಾ ಸಂಸ್ಥೆ.

ಅಧ್ಯಕ್ಷರು:—ಮಾನನೀಯ ಸರ್ [illegible], [illegible]

ಕೆಟಿ., ಸಿ. ಐ. ಇ, ಜೆ. ಪಿ., [illegible]

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟೆರಿಗಳು.

1 ಭಾಗ್ಯವಂತರ ಭಂಡಾರ ಪ್ರಾಮಾಣಿಕರ [illegible] [illegible]ರ ಜೀವನಾಧಾರ ಇದೇ ಜೀವ ವಿಮೆಯು ತತ್ವವು.

2 ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ [illegible] ಯು ಭಾರತೀಯರ ಉತ್ಸಾಹವಾದ ಆಡಳಿತದಿಂದ ಬಹು [illegible] ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭದ್ರತೆಯಿಂದ ಪ್ರೇತೀ [illegible] ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3 ಈ ಸ್ವದೇಶೀ ಕಂಪೆನಿಯು ಪೊಲಿಸಿದಾರರಿಗೆ ಪೊಲಿಸಿ [illegible] ಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ [illegible] ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು [illegible]

4. ಧನಿಕಬಂಧುವ ಮಹನೀಯರಿಂದ ಸ್ಥಾಪಿಸಲ್ಪಟ್ಟು [illegible] ನಲ್ಲಡುವ ಈ ಸ್ವದೇಶೀ ಕಂಪೆನಿಯಲ್ಲ [illegible] ವನ್ನರಂಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೊಲಿಸಿ [illegible] ಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು [illegible]

ಆಫೀಸು—

ಟಿಂಪರ್ ಸ್ಟಿಡ್,

ಮಡಿಕೇರಿ. (26-7)

[illegible]

[illegible]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟನ್ ಪೆನ್ ಗಳು.

ರೆಡ್ ವಂಡರ್ ಫೌಂಟನ್ ಪೆನ್ 1ಕ್ಕೆ	ರೂ. 3	0	0
" " ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
" " ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
" " ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ [illegible] ಕಲರ್ ಫೌಂಟನ್ ಪೆನ್ 1ಕ್ಕೆ	3	14	0
" [illegible] ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4	2	0
" ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ [illegible] ಕಲರ್ ಫೌಂಟನ್ ಪೆನ್ 1ಕ್ಕೆ	5	8	0
[illegible] ಫೌಂಟನ್ ಪೆನ್ 1ಕ್ಕೆ	10	8	0
[illegible] ಪೆನ್ 1ಕ್ಕೆ	14 6 0, & 20	10	0
[illegible] ಫೌಂಟನ್ ಪೆನ್ 1ಕ್ಕೆ	3 8 0, & 3	12	
[illegible] ಫೌಂಟನ್ ಪೆನ್ 1ಕ್ಕೆ	6 4 0, & 6	12	0
[illegible] ಫೌಂಟನ್ ಪೆನ್ 1ಕ್ಕೆ	8 [illegible] 0, & 8	10	0

ಟೈಂಪೀಸ್‌ಗಳು.

[illegible] ಟೈಂಪೀಸ್	1ಕ್ಕೆ	3	6	0
ಜರ್ಮನ್ [illegible] ಸಣ್ಣ ಟೈಂಪೀಸ್	1ಕ್ಕೆ	2	2	[illegible]
[illegible] ಟೈಂಪೀಸ್	1ಕ್ಕೆ	6 [illegible] 6	12	0
[illegible] ಟೈಂಪೀಸ್	1ಕ್ಕೆ	7	2	0
[illegible] ಟೈಂಪೀಸ್ [illegible]	1ಕ್ಕೆ	8	10	0
[illegible] ಟೈಂಪೀಸ್	1ಕ್ಕೆ	9	6	0
[illegible] ಟೈಂಪೀಸ್	1ಕ್ಕೆ	13	4	[illegible]
[illegible] ವಾಚ್	1ಕ್ಕೆ	5	10	[illegible]
[illegible] ವಾಚ್	1ಕ್ಕೆ	[illegible]	4	0
[illegible] ವಾಚ್	1ಕ್ಕೆ	5 4 0, 7 8 0, 10 0 0 & 12	8	0



ತೋರಿಯೂರ್ದಾರ್ [illegible]— ಎಂ. ಎಸ್. ಶಿದ್ದಪ್ಪ [illegible]

[illegible]

52-23

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಆಫ್ ಅಪೆಕ್ಸ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

	ರೂ.
ಶೇರ್ ಬಂಡವಾಳ ...	50,000
ವಸೂಲಾದ ಶೇರ್ ಮೊಬಲಗು ...	26,800
ಜನರಲ್ ಬಂದ ಠೇವಣಾತಿ ...	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ

ಪ್ರೆಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು,	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು

ಸೆಕ್ರೆಟರಿ

ಸಿ. ಯ. ನ್. ವೆಂಕಪ್ಪಯ್ಯನವರು, ಬಿ.ಎ., ಎಲ್. ಎಲ್. ಬಿ.

ತಾರೀಕು 1—7—1931.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಚಾರಿರ ಮೊಣ್ಣಯ್ಯನವರು,
ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಚ್ಚಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಸ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಚ್ಚಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತಿ—ಸಿದ್ದಾಪುರ—ಮೆ. ಅನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮೊಣ್ಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಆವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಬಯ್ಯ ಮುಂಚೂರಾತಿ ಫಾರಮುಗಳೂ, ಕಟಿಂಬಸ್ತರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ - 8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಚಾಲಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 51 ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4 ರಕ್ಕಿಂತ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಪೂರ್ಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂದರೆ ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಭಿವೃದ್ಧಿಯಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
ಅಜ್ಮೀರ್	ಢಕ್ಕಾ	[illegible]	ಪಾಟ್ನಾ	[illegible]
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	[illegible]
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪುರ	[illegible]
ಭೋಪಾಲ್	ಕರಾಚಿ	[illegible]	ರಾಂಚಿ	[illegible] [52—1

ಎಂಪೈರ್ ಆಫ್ ಇಂಡಿಯಾ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು.—	ಬ್ರಾಂಚ್ ಆಫೀಸು —
ಎಂಪೈರ್ ಆಫ್ ಇಂಡಿಯಾ	152-3 ಕಮರ್ಷಿಯಲ್ ಸ್ಟ್ರೀಟ್,
ಲೈಫ್ ಬಿಲ್ಡಿಂಗ್,	ಬೆಂಗಳೂರು.
52—13 ಬೊಂಬಾಯಿ.	

26—19



ಸಣ್ಣ ಹುಡುಗರ ಸಲುವಾಗಿ

ಇವರ

ಈ ಬಾಲಾಮೃತವನ್ನು [illegible] ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ. ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ದೋಂಗರೆ ಕಂಪೆನಿ,

52—47 ಗಿರಿಗಾಂವ, ಮುಂಬಾಯಿ.

Printed & published by P. I. Belliappa at "Kodagu" Press Mercara for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

[illegible]

ವರ್ಷದ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೧೧ | ಮಡಿಕೇರಿ, ಸನ್ ೧೯೩೧ನೇ ಇಸವಿ ಡಿಸೆಂಬರ್ ತಾರೀಖು ೧೧ ನೇ ಶುಕ್ರವಾರ. | ಸಂಚಿಕೆ ೨೭

Telegrams — "Precious"

V. Subramaniaier
Jeweller,

Telephone —

DIAMAND MERCHANT GOLD & SILVER SMITH.

Deals in all :-

SPORTS CUPS in all prices
MEADALS in up-to-date patterns
CASKETS in elegant styles

Nos. 2 & 3, Kuppumuthu st,
TIRUVATESWARANPET,
Post Box 423, Triplicane P. O.,
MADRAS.

Deals in all :-

GEM SET JEWELS, set with Diamonds, Rubies etc.,
GOLD ARTICLES of all patterns
SILVER WARE in latest style

52–3

[illegible]

ಕೋವಿಗಳು, ಕತ್ತಿಗಳು, ಟಬೇಗಳು, ಕಾಟ್ರಿಡ್ಜಗಳು, ಕೇಪ್ಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24–12

ಕಟುಕಷಾಯ ಮಲೇರಿಯಾ:—[illegible] 3—4 ದಿವಸಕ್ಕೊಂದು ಸಾರಿ ಬರುವ ಜ್ವರ, [illegible] ಬರುವ ಜ್ವರ ಮತ್ತು [illegible] ಗುಣ ಕೊಡುತ್ತದೆ. [illegible] ರೂ 1—8—0, 3ಕ್ಕೆ ರೂ. 4—0—0; 6ಕ್ಕೆ ರೂ 7—8—0, 12ಕ್ಕೆ ರೂ 14

ಮಹೇಶ್ವರ ರಕ್ತ ಕಷಾಯ

ಚಂದನಾಸವ:—[illegible] 1, 3, 6ಕ್ಕೆ ರೂ 1—4—0 3—8—0, 6—12—0

[illegible] 52–30

[illegible] 9. [illegible]

ಬಾಲಾರ್ಕಮಧು.

[illegible]



[illegible]

ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

52–47

ಕೊಡಗು.

ಸನ್ ೧೯೩೧ನೇ ಇಸವಿ

ಡಿಸೆಂಬರ್ ತಾ. ೧೧ನೇ ಶುಕ್ರವಾರ.

೧೯೩೦-೩೧ನೇ ವರ್ಷದ ಸಹಕಾರ ಸಂಘಗಳ ವರದಿ.

1931ನೇ ಇಸವಿ ಜೂನ್ 30ಕ್ಕೆ ಅಂತ್ಯವಾದ ವರ್ಷದ ಕೊಡಗಿನ ಸಹಕಾರಿ ಸಂಘಗಳ ಕೆಲಸದ ವರದಿಯು ಸದರಿ ಇಲಾಖೆಯ ರಿಜಸ್ಟ್ರಾರವರಿಂದ ತಯಾರಿಸಲ್ಪಟ್ಟು ಈಗ ತಾನೇ ಪ್ರಕಟವಾಗಿದೆ. ಇದರ ಪ್ರಕಾರ ಸಂಘಗಳ ಸಂಖ್ಯೆಯು 250 ರಿಂದ 239 ಕ್ಕೆ ಇಳಿದರೂ, ಮೆಂಬರುಗಳ ಸಂಖ್ಯೆಯು 13 750 ರಿಂದ 14,037 ಕ್ಕೆ ಏರಿತು ಪಾಲು ಬಂಡವಾಳವು ರೂ 2,37 716 ರಿಂದ ರೂ. 2,48 590 ಕ್ಕೂ, ಕ್ಷೇಮನಿಧಿಯು ರೂ. 2,40,639 ರಿಂದ ರೂ 2 62 297ಕ್ಕೂ ಮತ್ತು ಚಲಾವಣೆಯ ಬಂಡವಾಳವು ರೂ 7,31,248ರಿಂದ ರೂ 8,42,069ಕ್ಕೂ ಹೆಚ್ಚಿದೆ ಆದರೆ 1929-30ರಲ್ಲಿ ಸಂಘಗಳ ಸಂಖ್ಯೆಯು 230ರಿಂದ 250ಕ್ಕೆ ಏರಿತ್ತು.

ವರದಿಯ ವರ್ಷದಲ್ಲಿ ಸಂಘಗಳ ಸಂಖ್ಯೆಯು 11ರಿಂದ ಕಡಿಮೆಯಾದದ್ದು ಶೋಚನೀಯ ಇದು ಸಹಕಾರ ಚಳವಳದ ಅಭಿವೃದ್ಧಿಯನ್ನು ಸೂಚಿಸುವುದಿಲ್ಲ ಸಂಘಗಳ ಕೆಲಸವು ಸರಿಯಾಗಿ ನಡಿಯುತ್ತಿಲ್ಲವಾದುದರಿಂದ ಅವುಗಳಲ್ಲಿ ಕೆಡೆಗೆಟ್ಟ 14 ಸಂಘಗಳನ್ನು ಒಡೆದು ಹಾಕಬೇಕಾಯಿತೆಂದೂ, ಒನ್ನು ಬೇರೆ ಸಂಘಗಳೊಂದಿಗೆ ಸೇರಿಸಬೇಕಾಯಿತೆಂದೂ ವರದಿಯಲ್ಲಿ ಸೂಚಿಸಲಾಗಿದೆ ಚೆನ್ನಾಗಿ ಕೆಲಸ ನಡೆಯದ ಸಂಘಗಳನ್ನು ಒಡೆದು ಹಾಕುವುದೇನೋ ಅಧಿಕಾರವಿರುವವರಿಗೆ ಸುಲಭವಾಗಿದೆ ಆದರೆ ಸಹಕಾರ ಚಳವಳದ ಬೆಳವಣಿಗೆಗೆ ಇದು ಉಪಯೋಜನಕರವಾದ ದಾರಿಯಲ್ಲ ಗ್ರಾಮಾಂತರಗಳಲ್ಲಿರುವ ಜನರು ಹೆಚ್ಚಿನ ವಿದ್ಯಾವಂತರಾಗಿರಂದೆ, ಸಹಕಾರ ತತ್ವವನ್ನು ಇನ್ನೂ ಚೆನ್ನಾಗಿ ಅರಿತುಕೊಂಡಿರುವುದಿಲ್ಲವಾದುದರಿಂದಲೂ, ಮೇಲಧಿಕಾರಿಗಳ ಉಸ್ತುವಾರಿಯು ಸಾಕಷ್ಟು ಇಲ್ಲದ್ದರಿಂದಲೂ ಕೆಲವು ಸಂಘಗಳ ಕಾರ್ಯವು ತೃಪ್ತಿಕರವಾಗಿ ನಡೆಯದೆ ಇರಲು ಕಾರಣವಾಗಿದೆ ಈ ಇಲಾಖೆಯಲ್ಲಿ ರಿಜಿಸ್ಟ್ರಾರರ ಕೈಕೆಳಗೆ ಐದು ಇನ್‌ಸ್ಪೆಕ್ಟರುಗಳೂ, ಫೆಡರೇಶನಿನವರ ಅಧೀನದಲ್ಲಿ 10 ಸುಪರ್‌ವೈಜರುಗಳೂ ಇರುವದಲ್ಲದೆ ಫೆಡರೇಶನಿನವರೂ, ಯೂನಿಯನ್‌ಗಳೂ ಈ ಚಳವಳದ ಕೆಲಸವನ್ನು ಅಭಿವೃದ್ಧಿಗೊಳಿಸಲು ಇರುವವು ಹೀಗಿರುವಲ್ಲಿ ಇವೆಲ್ಲರೂ ಗ್ರಾಮ ನಿವಾಸಿಗಳಿಗೆ ತಕ್ಕಷ್ಟು ತಿಳುವಳಿಕೆ ಕೊಟ್ಟು ಮೇಲುಸ್ತುವಾರಿಯನ್ನು ಚೆನ್ನಾಗಿ ನಡಿಸಿ ಸಂಘಗಳ ಕೆಲಸವನ್ನು ಸುಧಾರಿಸಬೇಕಲ್ಲದೆ ಅವುಗಳನ್ನು ಒಡೆದು ಹಾಕುವುದು ಸರಿಯಲ್ಲ. ತಿದ್ದುಪಡಿ ಮಾಡ [illegible] ಅತ್ಯಗೋಳಿಸ ವುದಕ್ಕಿಂತ [illegible] ಕೆಲಸವಾದರೂ ಸಹಕಾರ ಸಂಘಗಳ [illegible] ದಾರಿಯನ್ನೇ ಕೈಕೊಳ್ಳುವುದು ಉತ್ತಮವಾಗಿದೆ ಇಲ್ಲವಾದರೆ ಕ್ರಮೇಣ ಸಂಘಗಳನ್ನೆಲ್ಲಾ ಮುಚ್ಚಬೇಕಾಗುವ ಸ್ಥಿತಿಯು ಬರಬಹುದು. ಈ ವಿಷಯಕ್ಕೆ ಸಂಬಂಧಪಟ್ಟವರು ತಕ್ಕಷ್ಟು ಗಮನ ಕೊಡುವರಾಗಿ ನಂಬುತ್ತೇವೆ

ವ್ಯವಸಾಯಿಕ ಪತ್ತಿನ ಸಂಘಗಳಲ್ಲಿ ವಸೂಲಾಗಬೇಕಾಗಿದ್ದ ಸಾಲ 3,00,378 ರೂಪಾಯಿಯಲ್ಲಿ 12 821 ರೂಪಾಯಿಗಳಿಗೆ ವಾಯಿದೆಯು ಕೊಡಲಾಗಿ, ರೂ. 1 23,900 ಮಾತ್ರ ವಸೂಲಾಯಿತು ರೂ. 2,49,299 ವಸೂಲಾಗದೆ ವಾಯಿದೆ ಮೀರಿದ ಸಾಲವಾಯಿತು. ವ್ಯವಸಾಯಿಕವಲ್ಲದ ಸಂಘಗಳಲ್ಲಿ ವಸೂಲಾಗಬೇಕಾಗಿದ್ದ 1,62,213 ರೂ ಲ್ಲಿ ರೂ 1,28,250 ವಸೂಲಾಗಿ ರೂ. 33,963 ಬಾಕಿ ಇದೆ ಒಟ್ಟಾರೆ ಸಾಲ ವಸೂಲಾತಿಯು ಶೇಕಡ 34.38 ಮಾತ್ರವಾಗಿದೆ 1929-30 ರಲ್ಲಿ ಶೇಕಡ 51 30 ಮತ್ತು 1928-29 ರಲ್ಲಿ 63 ಆಗಿತ್ತು ಇದರಿಂದ ವರದಿ ವರ್ಷದಲ್ಲಿ ಸಾಲ ಮರುಪಾವತಿಯು ಬಹಳ ಅತೃಪ್ತಿಕರವೆಂಬದು ಸ್ಪಷ್ಟವಾಗುತ್ತದೆ ರೈತರು ಬೆಳೆಸುವ ದವಸ ಧಾನ್ಯಗಳಿಗೆ ಬೆಲೆಯು ಬಹು ಮಟ್ಟಿಗೆ ಇಳಿದು ಹೋಗಿರುವುದೂ, ಜನರ ಈಗಿನ ಆರ್ಥಿಕ ಹೀನಸ್ಥಿತಿಯೂ ಇದಕ್ಕೆ ಮುಖ್ಯ ಕಾರಣಗಳೆಂಬುದರಲ್ಲಿ ಸಂಶಯವಿಲ್ಲ. ಆದರೂ ವರದಿಯಲ್ಲಿ ಸೂಚಿಸಿರುವಂತೆ ಬೇರೆ ಕಾರಣಗಳೂ ಇವೆ. ಶೇಕಡ 50 ರಷ್ಟು ಕಮಿಟಿ ಮೆಂಬರುಗಳು ಸಾಲ ತೆಗೆದುಕೊಂಡಿರುವರೆಂದ ಮೇಲೆ ಸಾಲ ಮರು ಪಾವತಿಯು ಹೇಗೆ ತಾನೇ ಕ್ರಮವಾಗಿ ನಡೆಯುವುದು ? ಒಟ್ಟಾರೆ ಹೇಳುವುದಾದರೆ ಸಂಘದ ಮೆಂಬರುಗಳು ಸಹಕಾರ ತತ್ವವನ್ನು ಚೆನ್ನಾಗಿ ತಿಳಿದುಕೊಂಡು ಅವರ ಜವಾಬ್ದಾರಿಯನ್ನು ಅರಿತುಕೊಳ್ಳುವಂತೆ ಮಾಡಬೇಕಾದದ್ದು ಅತ್ಯವಶ್ಯವಾಗಿದೆ ಅಂದರೆ ಈ ವಿಷಯ ಬೋಧನ ಕೆಲಸವು ಕ್ರಮವಾಗಿ ನಡೆಯಬೇಕಾಗಿದೆ. ಸಂಘದ ಸದಸ್ಯರುಗಳು ಈ ಚಾಲನೆಯಲ್ಲಿ ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳದೆ ಹೋದರೆ ಸಂಘಗಳಿಂದ ತಮಗೆ ಈಗ ದೊರೆಯುವ ಸಹಾಯವು ಬೇಗನೆ ಇಲ್ಲದಂತಾಗುವದೆಂಬದನ್ನು ಅವರು ಮರೆಯಬಾರದು

ವರದಿಯ ವರ್ಷದಲ್ಲಿ 3 ಹೊಸ ಸ್ಟೋರ್‌ಗಳು ರಿಜಿಸ್ಟರ್ ಮಾಡಲ್ಪಟ್ಟವು ಈಗ ಒಟ್ಟು 6 ಸ್ಟೋರುಗಳಿವೆ. ಇವುಗಳಲ್ಲಿ ಒಂದು ಉಪಾಧ್ಯಾಯರುಗಳ ಸಹಕಾರಿ ಸ್ಟೋರಾಗಿದೆ ಇದರ ಕೆಲಸವು ತೃಪ್ತಿಕರವಾಗಿದೆ. ಎರಡು ಹಳೇಯವು ಮುಖ್ಯವಾಗಿ ಬಟ್ಟೆಯ ಸ್ಟೋರುಗಳಾಗಿವೆ ಒಳ್ಳೇ ವ್ಯಾಪಾರದ ಸಮಯದಲ್ಲಿ ಪ್ಲೇಗು ರೋಗವು ಹರಡಿದ್ದರಿಂದ ಇವುಗಳ ಕೆಲಸವು ಚೆನ್ನಾಗಿ ನಡೆಯಲು ಅನುಕೂಲವಾಗಲಿಲ್ಲವಾದುದರಿಂದ ಅವುಗಳಿಗೆ ಸ್ವಲ್ಪ ನಷ್ಟವುಂಟಾಯಿತು ಮೂರು ಹೊಸ ಸ್ಟೋರುಗಳ ಪೈಕಿ ಎರಡು, ವರ್ಷದ ಅಂತ್ಯ ಭಾಗದಲ್ಲಿ ಸ್ಥಾಪಿಸಲ್ಪಟ್ಟದ್ದರಿಂದ ಅವುಗಳ ಕೆಲಸವೇನೂ ನಡೆಯಲಿಲ್ಲ ಆದರೆ ನಾಪೋಕ್ಲು ಜಿನಸುಗಳ ಸ್ಟೋರು 5 ತಿಂಗಳು ಕೆಲಸ ನಡಿಸಿದ್ದರಲ್ಲಿ 90 ಮೆಂಬರುಗಳು ಸೇರಿದ್ದಲ್ಲದೆ, 5,766 ರೂಪಾಯಿಯ ವ್ಯಾಪಾರ ನಡಿಸಿ 526 ರೂ ಲಾಭ ಗಳಿಸಿದೆ ಇದು ಜಿನಸುಗಳ ಸ್ಟೋರುಗಳ ಕೆಲಸಕ್ಕೆ ಉತ್ತೇಜನಕರವಾದ ಚಿಹ್ನೆಯಾಗಿದೆ ಇತ್ತಲಾಗಿ ಮಡಿಕೇರಿಯಲ್ಲಿ, ವಿರಾಜಪೇಟೆಯಲ್ಲೂ ಇದೇ ತರಹದ ಸ್ಟೋರುಗಳು ತೆರೆಯಲ್ಪಟ್ಟಿವೆ ಇದರಿಂದ ಸ್ಟೋರಿನ ಕೆಲಸದಲ್ಲಿ ಜನರು ಉತ್ಸಾಹ ತೋರಿಸುತ್ತಿರುವರೆಂದು ಕಂಡು ಬರುತ್ತದೆ. ಇಂಥಾ ಸ್ಟೋರಿನ ಕೆಲಸವು ಜಯಪ್ರದವಾಗಿ ನಡೆಯಬೇಕಾದರೆ ಪ್ರಮಾಣಿಕತನದ ಕೆಲಸಗಾರರು ಅತ್ಯಗತ್ಯವೆಂಬುದನ್ನು ಯಾರೂ ಮರೆಯಬಾರದು ಇವು ತೃಪ್ತಿಕರವಾಗಿ ನಡಿಸಲ್ಪಟ್ಟರೆ ಜನರಿಗೆ ತುಂಬಾ ಪ್ರಯೋಜನಕರವಾಗುವವೆಂಬುದರಲ್ಲಿ ಸಂಶಯವಿಲ್ಲ.

ಕೊಡಗಿನಲ್ಲಿರುವ 516 ಗ್ರಾಮ ಮತ್ತು ಪಟ್ಟಣಗಳಲ್ಲಿ 459 ಕ್ಕೆ ಮಾತ್ರ ಸಹಕಾರ ಚಳವಳವು ತಲಪಿದೆ ಸಹಕಾರ ಸಂಘಗಳ ವಾಸನೆಯೇ ತಿಳಿಯದ 57 ಗ್ರಾಮ ಮತ್ತು [illegible]ಗಳಿವೆ ಇಷ್ಟು ಚಿಕ್ಕ ಪ್ರಾಂತ್ಯದಲ್ಲಿ [illegible] ದ್ದರೂ ಸಹಕಾರ ಸಂಘಗಳು ಮುಟ್ಟದ ಗ್ರಾಮಗ[illegible] ಹಲವು ಇರುವುದು ವ್ಯಸನಕರ ಈ ವಿಷಯವನ್ನು [illegible]ಗಸ್ಥರೂ ಉದ್ಯೋಗಸ್ಥರಲ್ಲದ ಸಹಕಾರಿಗಳೂ ಮನ[illegible]ತೆಗೆದುಕೊಳ್ಳಬೇಕಾಗಿ ಆಶಿಸುತ್ತೇವೆ.

ವಾರ್ಷಿಕ ಆಡಿಟ್ ಅಲ್ಲದೆ ಬೇರೆಯವರ [illegible] ಸಹಾಯವಿಲ್ಲದೆ ತೃಪ್ತಿಕರವಾಗಿ ಕೆಲಸ ನಡಿಸುತ್ತಿರುವ [illegible] ತರಗತಿಯ 11 ಸಂಘಗಳೂ ಕೆಲವು ಕುಂದು ಕೊರತೆಗಳಿದ್ದರೂ ಸಾಧಾರಣದ ಮಟ್ಟಿಗೆ ತೃಪ್ತಿಕರವಾಗಿ ಕಾರ್ಯ ಸಾಗಿಸುತ್ತಿರುವ 'ಬಿ' ತರಗತಿಯ 70 ಸಂಘಗಳೂ, ಉಳಿದವುಗಳಲ್ಲಿ 'ಡಿ' ಮತ್ತು 'ಇ' ತರಗತಿಗಳಿಗೆ ಸೇರದ 121 'ಸಿ' ತರಗತಿಯ ಸಂಘಗಳೂ, ಎರಡು ವರ್ಷಗಳೊಳಗೆ 'ಸಿ' ತರಗತಿಗೆ ಬಾರದೆ ಹೋದರೆ ಒಡೆಯಲ್ಪಡಬೇಕಾದ 34 'ಡಿ' ತರಗತಿಯ ಸಂಘಗಳೂ ಮತ್ತು ಸಂಪಡಿಸಲು ಅಸಾಧ್ಯವಾಗಿ ಒಡೆಯಲ್ಪಡಬೇಕಾದ 3 'ಇ' ತರಗತಿಯ ಸಂಘಗಳೂ ಇರುವವು ಹೆಚ್ಚಿನ ಸಂಘಗಳು 'ಸಿ' ಮತ್ತು 'ಡಿ' ತರಗತಿಗಳಿಗೆ ಸೇರಿರುವುದು ಎಂದೂ ತೃಪ್ತಿಕರವಲ್ಲ ಸಹಕಾರ ತತ್ವಗಳನ್ನು ಅರಿತುಕೊಳ್ಳಲು ಬೇಕಾದಷ್ಟು ಅನುಕೂಲವಿರದ [illegible] ಗ್ರಾಮಸ್ಥರು ತಮ್ಮ ಸಂಘಗಳನ್ನು [illegible] ದನೆಗಳ ಅನುಸಾರವಾಗಿಯೂ, ಕಾರ್ಯದಕ್ಷತೆಯಿಂದಲೂ ನಡಿಸದೆ ಇರುವದು ಶೋಚನೀಯವಾಗಿದೆ ಇನ್ನಾದರೂ ಅವರು ಕಣ್ತೆರೆದು [illegible] ತರಗತಿಗೆ ಏರುವಂತೆ ಪ್ರಯತ್ನಿಸುವರೆಂದು ನಂಬುತ್ತೇವೆ

ಸೆಂಟ್ರಲ್ ಬ್ಯಾಂಕಿನ ಮೆಂಬರುಗಳ ಸಂಖ್ಯೆಯು 304 ರಿಂದ 327 ಕ್ಕೆ ಏರಿತು. ಇನ್ನು 33 ಸಂಘಗಳು ಸೆಂಟ್ರಲ್ ಬ್ಯಾಂಕಿಗೆ ಸೇರಲು ಬಾಕಿ ಇವೆ ಇವುಗಳಲ್ಲಿ ಬ್ಯಾಂಕಿನ ಸಹಾಯ ಅವಶ್ಯವಿಲ್ಲದೆ ಇರುವ ದವಸ ಬಂಡಾರಗಳೇ ಹೆಚ್ಚು ಡಿಪಾಜಿಟ್ ಮೊಬಲಗು 2,16 472 ರೂ ಯಿಂದ 2 50,30[illegible] ರೂ. ಗೆ ಏರಿತು ಇದರಲ್ಲಿ ಮೆಂಬರು ಸಂಘಗಳ ಡಿಪಾಜಿಟ್ಟು 5,910 ರೂ. ಯಿಂದ ರೂ. 15,148 ಕ್ಕೆ ಏರಿದ್ದು ಸಂತೋಷಕರ. ಬ್ಯಾಂಕಿಗೆ ಬರಬೇಕಾದ ಸಾಲಗಳಲ್ಲಿ ರೂ 33,229 ವಾಯಿದೆ ಮೀರಿದ್ದಾಗಿವೆ. ಕಳೆದ ವರ್ಷ ವಾಯಿದೆ ಮೀರಿದ ಸಾಲ ಬರೀ ರೂ 14,213 ಮಾತ್ರವಿತ್ತು. ಇಷ್ಟು ದೊಡ್ಡ ಬಾಕಿಗೆ ದೇಶದ ಆರ್ಥಿಕ ಹೀನ ಸ್ಥಿತಿಯೂ ಧಾನ್ಯದ ಕ್ರಯ ಕಡಿಮೆಯಾದದ್ದೇ ಕಾರಣವೆಂಬುದರಲ್ಲಿ ಸಂಶಯವಿಲ್ಲ ಹೇಗೂ ಬ್ಯಾಂಕಿನ ಕೆಲಸವು ತೃಪ್ತಿಕರವಾಗಿ ನಡೆಯುತ್ತಾ, ಜನರ ವಿಶ್ವಾಸದಲ್ಲಿ ಇರುವುದು ಸಂತೋಷದ ಸಂಗತಿಯಾಗಿದೆ.

ಯೂನಿಯನ್‌ಗಳ ಫೆಡರೇಶನು ವರದಿಯ ವರ್ಷದಲ್ಲಿ ಕೆಲಸ ಪ್ರಾರಂಭ ಮಾಡಿ, ಸುಪರ್‌ವೈಜರುಗಳ ಮೇಲಿನ ಅಧಿಕಾರವನ್ನು ರಿಜಿಸ್ಟ್ರಾರವರಿಂದ ವಹಿಸಿಕೊಂಡಿತು 'ಸಹಕಾರಿ'ಯೆಂಬ ಒಂದು ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಾ ಬಂತು. ನಂತರ ಅದನ್ನು ತ್ರೈಮಾಸಿಕವಾಗಿ ಮಾಡಿತು ಇದರಿಂದ ಹೆಚ್ಚಿನ ಪ್ರಯೋಜನವಾಗಲಾರದೆಂದು ವರದಿಯಲ್ಲಿ ಸೂಚಿಸಲಾಗಿದೆ ಆದರೆ ಈ ಅಭಿಪ್ರಾಯವು ಸರಿಯೆಂದು ನಮಗೆ ತೋರುವುದಿಲ್ಲ ಬೇರೆ ಕಡೆಗಳಿಗಿಂತ ಹೆಚ್ಚಿನ ವಿದ್ಯಾ ಪ್ರಸಾರವಾಗಿರುವ ಈ ಪ್ರಾಂತ್ಯದಲ್ಲಿ ಪತ್ರಿಕೆಗಳ ಮೂಲಕ ಜನರಿಗೆ ಸಹಕಾರಿ ತತ್ವಗಳನ್ನು ಬೋಧಿಸಲು ತುಂಬಾ ಅವಕಾಶವಿದೆ ಮೀಟಿಂಗುಗಳ ಜೊತೆಗೆ ಮಾಸಿಕ ಪತ್ರಿಕೆಯೂ ಸಹಕಾರ ಚಳವಳವನ್ನು ಜನರಲ್ಲಿ ಹರಡಲು ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ. ಫೆಡರೇಶನು ಪ್ರಾರಂಭವಾದ ಮೇಲೆ ಅದರಿಂದ ಪ್ರಯೋಜನವಾಗುವುದರ ಬದಲು [illegible] ಕೆಲಸಕ್ಕೆ ಅಡ್ಡಿಯಾಗಬಹುದೆಂದು ಜವಾಬ್ದಾರಿಯುಳ್ಳ ಕೆಲವರು ಯರೂ ಹೇಳಿದ್ದುಂಟು. ಆದರೆ ಒಂದು ವರ್ಷದ [illegible] ಅದರ ಸ್ಥಾಪನೆಯು ಪ್ರಯೋಜನಕರವಾದದೆಂತಲೂ, ಅನುಭವದಿಂದ ಅದು ಪ್ರಾಂತ್ಯದಲ್ಲಿ ಸಹಕಾರ [illegible] ಉತ್ತೇಜನ ಕೊಡುವುದು ಖಂಡಿತವೆಂತಲೂ ವರದಿ[illegible] ರಿಂದ ತಿಳಿಯುವದು ಉದ್ಯೋಗಸ್ಥರಲ್ಲದ ಸಹಕಾರಿ ಕೆಲಸಗಾರರ ಪ್ರೋತ್ಸಾಹವನ್ನೀಯದೆ ಇರದು. ಸಹಕಾರ [illegible] ಮೇಲಿನ ಅಧಿಕಾರವನ್ನು ಉದ್ಯೋಗಸ್ಥರಿಂದ [illegible] ರಲ್ಲದ ಗೌರವ ಕೆಲಸಗಾರರಿಗೆ ವರ್ಗಾಯಿಸುವುದು ಈ [illegible] ಮೂಲಕವಾಗಿ ಆಗಬೇಕಾಗಿದೆ ಈ ಕೆಲಸವು [illegible] ದಷ್ಟು ಬೇಗನೆ ಆಗಬೇಕಾಗಿರುವ ಕಾರಣ ಫೆಡರೇ[illegible] ತುಂಬಾ ಜೋಕಸತ್ತಿನಿಂದ ಕೆಲಸ ಮಾಡಿ ಅಧಿಕಾರ [illegible] ಗೌರವ ಕೆಲಸಗಾರರ ಅರ್ಹತೆಯನ್ನು ತೋರಿಸುವರಾ[illegible]ಸುತ್ತೇವೆ.

ಸೈನ್ಯದ ವಿಷಯ

ಗಾಂಧೀಜಿಯವರ ಭಾಷಣ.

ದುಂಡು ಮೇಜು ಪರಿಷತ್ತಿನ ಫೆಡರಲ್ ಸ್ಟ್ರ[illegible] ಕಮಿಟಿಯಲ್ಲಿ ತಾ 17-11-31 ರಲ್ಲಿ ಸೈನ್ಯದ [illegible] ಚರ್ಚೆ ನಡೆದಾಗ ಮಹಾತ್ಮ ಗಾಂಧಿಯವರು [illegible] ದ ಭಾಷಣವನ್ನು ಮಾಡಿದರು ಅದರ ಸಾರಾಂಶವು [illegible] ಕೊಡಲಾಗಿದೆ

" ನಾನು ಕಾಂಗ್ರೆಸಿನ ಪರ ಮಾತಾಡುವಾಗ [illegible] ಜವಾಬ್ದಾರಿಯನ್ನು ತೆಗದುಕೊಳ್ಳುತ್ತೇನೆಂದು [illegible] ದೆ ನಾನು ನನಂಬರ ಮುಂಚಿನಂತಿರುವದರಿಂದ [illegible] ಮಾತಾಡುವದಾಗಿದೆ ಈ ಚರ್ಚೆಯು ಮೇಲೆ [illegible] ಇರುವದೋ, ಇಲ್ಲವೋ ಎಂಬದು ನನಗೆ ಗೊತ್ತಿಲ್ಲ [illegible] ಚರ್ಚೆಗಳನ್ನು ಥಕ್ಕನೆ ನಿಲ್ಲಿಸಲ್ಪಡುವುದೋ, [illegible] ಸಲ್ಪಡುವದೋ ಎಂದೂ ನನಗೆ ಗೊತ್ತಿಲ್ಲ.

ಸ್ನೇಹ ಭಾವದ ಸಂಭಾಷಣೆಗಳಿಂದಲೂ, [illegible] ನನ್ನ ಉದ್ದೇಶವು ನೆರವೇರುವಂತಿದ್ದರೆ ನನ್ನ [illegible] ಯಾಸದ ಚಳಿಗಾಲವನ್ನು ಇಂಗ್ಲೆಂಡಿನಲ್ಲಿ ಕಳೆಯಲು ಸಿದ್ಧನಾಗಿ ಬಂದಿರುತ್ತೇನೆ ಮಂತ್ರಿಗಳು ಜನ ಸಮುದಾಯದ ಮೇಲೆ ಶಕ್ತಿ ಇರುವವರು ಮತ್ತು ಹಿಂದೂಸ್ಥಾನದ ಸವಿ[illegible]ನ್ನು ಮನಸ್ಸಿಗೆ ತೆಗೆದುಕೊಳ್ಳುವವರುಗಳೊಂದಿಗೆ [illegible]ಗಿ ಸಂಭಾಷಣೆಗಳನ್ನು ನಡಿಸಿಯಾಗಲೀ, ಪರಿಷತ್ತಿನ [illegible] ರಂಗವಾಗಿ ಚರ್ಚೆ ನಡಿಸಿಯಾಗಲೀ ಗೌರವಾರ್ಹವಾದ ಮಾರ್ಗದಲ್ಲಿ ಬರಲು ಎಲ್ಲಾ ದಾರಿಗಳನ್ನು ಸಾಧಿ[illegible]ಕ್ಕೆ ನಾನು ಇಲ್ಲಿಗೆ ಕಳುಹಿಸಲ್ಪಟ್ಟಿರುವದಾಗಿದೆ [illegible]ಲ್ಲರಿಗೂ ಗೊತ್ತಿರುವಂತೆ ಕಾಂಗ್ರೆಸು ಕೈಕೊಂಡಿರುವ [illegible]ಯದ ದೆಸೆಯಿಂದ ತೀರ್ಮಾನಕ್ಕೆ ಬರಲು ಎಲ್ಲಾ [illegible]ನ್ನೂ ನಾನು ಸಾಧಿಸಿ ನೋಡಬೇಕಾಗಿದೆ. ಕಾಂಗ್ರೆಸ್ಸಿನ ಗುರಿಯನ್ನು ಆಗುವಷ್ಟು ಬೇಗನೆ ತಿಳಿಸಲು [illegible] ದೆ ಮತ್ತು ಈ ವಿಷಯಗಳೆಲ್ಲಾ ಗೊತ್ತು [illegible] ಗಳ್ಳಲ್ಪಡ್ಡಾಗಿದೆ [illegible] ಪ್ರಧಾನರ [illegible] ಎಲ್ಲಾ ಜವಾಬ್ದಾರಿಗಳ [illegible] ದ ಕಾಂಗ್ರೆಸ್ಸಿನ [illegible] ಈ [illegible] ವಿಕಲು ಸಾಧ್ಯವಿಲ್ಲವೆಂದು ನನಗೆ ತೋರಿತು

ಕಾಂಗ್ರೆಸ್ಸಿನ ಅಭಿಪ್ರಾಯದಲ್ಲಿ ಸಂಪೂರ್ಣ [illegible] ರಿಯು ಇಂಡಿಯಕ್ಕೆ ವರ್ಗಾಯಿಸಲ್ಪಡಬೇಕು ಇಂಡಿಯಕ್ಕೆ ಸೈನ್ಯ ಮತ್ತು ಪರದೇಶಗಳ ಸಂಬಂಧಯಗಳಲ್ಲಿ ಸಂಪೂರ್ಣ ಅಧಿಕಾರವಿರಬೇಕು, ಆದ[illegible] ಪ್ಪಂದಗಳನ್ನೂ ಯೋಚಿಸುತ್ತವೆ.

ಈ ಮುಖ್ಯ ವಿಷಯದಲ್ಲಿ ಜವಾಬ್ದಾರಿಯ[illegible] ಹೋದರೆ, ನಮಗೆ ಜವಾಬ್ದಾರಿ ಸರಕಾರ [illegible] ದು ಯೋಚಿಸಿ ನಾವು ನನ್ನ [illegible] ಸಗೆಡಳಿಸ[illegible] ತನ್ನ ಧನ್ಯತೆಯ ಸ್ವಸ್ಥ[illegible] ದೇಶಗಳ [illegible] ಬಂಧನ ಮೇಲೆ ಅಧಿಕಾರವಿಲ್ಲದ [illegible] ಜನಾಂಗವಾಗುವುದಿಲ್ಲ ರಕ್ಷಣೆ ಅದರ ಸೈನ್ಯವು ಬೇರೆ ಜನಾಂಗದ ಇರುವಿಕೆ[illegible] ಕವಾಗಿದೆ, ಮತ್ತು ಜನಾಂಗದ ರಕ್ಷಣೆಯು ಮೇ[illegible] (ಅವರು ಎಷ್ಟು ಸ್ನೇಹ ಭಾವದಲ್ಲಿದ್ದರೂ) ಅಧೀನದಲ್ಲಿ ಜನಾಂಗವು ಖಂಡಿತವಾಗಿಯೂ ಜವಾಬ್ದಾರಿಯ[illegible] ಬಂಧಿತವಲ್ಲ. ನಮ್ಮ ಇಂಗ್ಲಿಷ್ ಉಪಾಧ್ಯ[illegible] ಎಷ್ಟೆ ಕಲ್ಪದಷ್ಟು ಸಾರಿ ನಮಗೆ ಕಲಿಸಿದ್ದಾ[illegible] ದರಿಂದ ರಕ್ಷಣೆಯು ಸೈನ್ಯದ ಮೇಲೆ ಅಧಿಕಾರ[illegible] ಗೆ ಜವಾಬ್ದಾರಿ ಸರಕಾರ ದೊರೆಯುವದೆಂದು ಹೇ[illegible] ಕೆಲವು ಇಂಗ್ಲಿಷ್ ಮನುಷ್ಯರು ನನ್ನನ್ನು [illegible] ರು. ಆದಕಾರಣ ರಕ್ಷಣೆಯ ಸೈನ್ಯ ಮತ್ತು ಪರದೇಶ ಸಂಬಂಧದ ಮೇಲೆ ಪೂರ್ಣ ಅಧಿಕಾರ ಕೊಡಬೇಕೆಂದೆ[illegible]

(4ನೇ ಪುಟದಲ್ಲಿ ಮುಂದುವರಿ.)

ಕರ್ನಾಟಕದ ಸಮ್ಮೇಳನಗಳು.

ಕಾರವಾರ ೧೯೩೧.

ಅಂಕೆ ೧.

ಬರಲಿರುವ ಕ್ರಿಸ್ಮಸ ಹಬ್ಬದ ಬಿಡುವಿನಲ್ಲಿ (ಡಿಸೆಂಬರ್ ... ನಾಲ್ಕು ದಿವಸ) ಉತ್ತರ ಕನ್ನಡದವರು ೧೭ನೆಯ ... ಸಾಹಿತ್ಯ ಸಮ್ಮೇಳನವನ್ನು, ಕವಿಗಳ ಗೋಷ್ಠಿ ... ಕರ್ನಾಟಕದ ಏಕೀಕರಣ ಪರಿಷತ್ತನ್ನೂ, ಜಿಲ್ಲೆಯ ... ರಾದ ಕಾರವಾರದಲ್ಲಿ ನೆರವೇರಿಸುವರು ... ಸಾಹಿತ್ಯ ಸಮ್ಮೇಳನಕ್ಕೆ ಮೆ ಶಾಸ್ತ್ರಿ ಶಿವರಾಮರಾಯ ... ಸ್ವಾಮಿ ವರದಲ್ಲಿ ವಕೀಲರಾಗಿರುವವರು) ಸ್ವಾಗತದ ... ರೂ, ಶ್ರೀಮಾನ್ ಪಂಜೆ ಮಂಗೇಶರಾಯರು ಅಧ್ಯ ... ಆಗಬಹುದು, ಕವಿಗೋಷ್ಠಿಗೆ ಸ್ವಾಗತ ಮಾಡುವವರು ... ಸ್ವಾಮಿ ದಿನಕರರಾಯರು (ಅಂಕೋಲೆಯವರು), ಅ... ಹಿರಿಯರಾಗಬೇಕೆಂದು ಶ್ರೀಮಾನ್ ಮುಳಿಯ ತಿಮ್ಮಪ್ಪ ... ಪಂಡಿತರಿಗೆ ಬಿನ್ನವಿಸಿ ಬರೆದಿದ್ದೇವೆ, ಏಕೀಕರಣ ಸಭೆಗೆ ... ವಹಿಸಿಕೊಳ್ಳುವವರು ಮೆ ಶಿವರಾಸ್ ಸಿಲ್ವಾ ವಕೀಲರು ... ಸವಾರ), ಅದಕ್ಕೆ ಅಧ್ಯಕ್ಷರು ಶ್ರೀಮಾನ್ ಜೆ. ಸಾಲ್ಡಾ ... ಸಾಹೇಬರು.

ಕಾರವಾರವು ಪಶ್ಚಿಮ ಘಟ್ಟಾವಳಿಯಲ್ಲಿ ಮುಂಬಯಿ— ... ಊರುಗಳ ಮಧ್ಯದಲ್ಲಿ; ಮುಂಬಯಿಯವರು ಕಡಲ್ಲ ... ದಿಂದಾಗಲೀ, ಉಗಿಬಂಡಿಯಿಂದ ಬೆಳಗಾಂವಿಗ ಬಂದು ... ಮೋಟಾರಿನಿಂದಾಗಲೀ ಇಲ್ಲಿಗೆ ಬರಬಲ್ಲರು ಮ... ದಿನವರಿಗೆ ಕಡಲ್ತಡಿಯಿಂದ ಬರುವುದೇ ಸುಲಭ, ಬೇ... ಮೋಟಾರಿನಿಂದಲೂ ಬರಬಹುದು. ನೀಲಗಿರಿ, ಕೊ... ಕರ್ನೂರು, ಮದ್ರಾಸು ಬಳ್ಳಾರಿ, ಅನಂತಪುರ, ಮೈಸೂ... ಕೊಡಗು, ಸೊಂಡೂರು, ಹೈದರಬಾದ್, ವಿಜಾಪುರ, ಸೊ... ಪುರ ಮುಂತಾದ ಕಡೆಗಳಲ್ಲಿರುವವರು ಉಗಿಬಂಡಿಯಿಂ ... ಹುಬ್ಬಳ್ಳಿಗೆ ಬಂದು, ಅಲ್ಲಿಂದ ಕಾರವಾರಕ್ಕೆ ಬರಬೇಕು ... ಬೆಳಗಾಂವಿಯಿಂದಲೂ, ಧಾರವಾಡದಿಂದಲೂ, ಹುಬ್ಬಳ್ಳಿಯಿಂ ... ಬಸ್ಸುಗಳು ಮುಂಜಾನೆ ೯ ಗಂಟೆಗೆ ಹೊರಟು, ಸಂ... ಇಲ್ಲಿಗೆ ಬರುತ್ತವೆ. ಬೆಳಗಾಂವಿಯಿಂದ ಕಾರವಾರಕ್ಕೆ ... ಮೈಲು, (ಬಸ್ಸಿನ ಬಾಡಿಗೆಯ ದರ—೫ರೂ.) ಧಾರ... ದಿಂದ ೧೦೭ ಮೈಲಿ, (ದರ—೪ರೂ.) ಹುಬ್ಬಳ್ಳಿಯಿಂದ ... ಮೈಲಿ, (ದರ—೩ರೂ.) ಕ್ರಿಸ್ಮಸ್ ರಜೆ ನಿಮಿತ್ತವಾಗಿ ಬಂಡಿಯವರೂ, ಹಡಗದವರೂ, ಮೋಟಾರಿನವರೂ ಬಾ... ಯನ್ನು ಕಡಿಮೆ ಮಾಡುವುದು ವಾಡಿಕೆಯಾಗಿದೆ.

ಈ ಜಿಲ್ಲೆಯಲ್ಲಿ ಗೋಕರ್ಣವು ಪ್ರಸಿದ್ಧ ಕ್ಷೇತ್ರವು ಬ... ಸಿಯು ಕದಂಬರ ರಾಜಧಾನಿ, ಮೂಡ ಘಟ್ಟಗಳಲ್ಲಿ ಹ... ಬಸ್ತಿಗಳಿವೆ, ಸೋಂದೆಯು ಇಲ್ಲಿನ ಇತಿಹಾಸದಲ್ಲಿ ಹೆ... ದ ಹಳೆಯೂರು. ಗೆರಸೊಪ್ಪೆಯು ಸಮೀಪದಲ್ಲಿಯೇ ... ಗದ ಜಲಪಾತ' ಇದೆ. ಕಾರವಾರದ ಹತ್ತಿರದಲ್ಲಿರುವ ... ಯಲ್ಲಿ ಪೋರ್ತುಗೀಸರು ಕಟ್ಟಿಸಿದ ಕ್ರೈಸ್ತರ ದೇವಾಲ... ಯ. ಮನೋಹರವಾಗಿವೆ ಬಸವಣ್ಣನವರ 'ಉಳವೆ' ... ನ್ನು ನೋಡಬೇಕು. ಇವೆಲ್ಲ ಕಡೆಗಳಿಗೂ ಇಲ್ಲಿಂದ ಬ... ಗಳು ದಿನಾಲು ಹೋಗಿಬರುವುದುಂಟು.

ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಸಮ್ಮೇಳನಕ್ಕೆ ಬರಲು ... ವನ್ನು ಕೊಡಬೇಕೆಂದು ಅಧಿಕಾರಿಗಳಿಗೆ ಬರೆದುಕೊಂಡಿ... ವೆ ಶಿಕ್ಷಕರು ತಂಡತಂಡವಾಗಿ ಬರುವರೆಂದು ನಮ್ಮ ... ಕೆ.

ಉತ್ತರಕನ್ನಡ ಜಿಲ್ಲೆಯವರಷ್ಟೇ ೫ ರೂಪಾಯಿಗಳನ್ನು ... ಕೊಟ್ಟರೆ ಸ್ವಾಗತ ಮಂಡಲದ ಸಭಾಸದರಾಗಬಲ್ಲರು ... ಗೆ ಸ್ವಾಗತ ಮಂಡಲದ ಹಿರಿಯರನ್ನಾರಿಸಿಕೊಡುವ ಅಧಿ ... ವಲ್ಲದೆ ಪ್ರತಿನಿಧಿಗಳ ಅಧಿಕಾರವೂ ಇರಬೇಕೆಂದು ಗೊ... ಗಿದೆ. ಈ ಜಿಲ್ಲೆಯವರೂ, ಹೊರಗಿನವರೂ ೨ ರೂಪಾ... ಗಳನ್ನು ಸಲಿಸಿದರೆ ಸಮ್ಮೇಳನಗಳ ಪ್ರತಿನಿಧಿಗಳಾಗಬಲ್ಲ...

ಸಮ್ಮೇಳನಗಳಲ್ಲಿ ಬರಲಿರುವ ಗೊತ್ತುವಳಿಗಳ ವಿಷಯ ... ಗಿ ತಮ್ಮ ಮತಗಳನ್ನು ವ್ಯಕ್ತಪಡಿಸುವ ಅಧಿಕಾರವು ಪ್ರತಿ ... ಗಳಾಗದವರಿಗೆ ಇರಲಾರದು.

ಪ್ರತಿನಿಧಿಗಳಾಗಿ ಇಲ್ಲಿಗೆ ಬರುವವರಿಗೆಲ್ಲರಿಗೂ (ಡಿಸೆಂ... ೨ ೧೫ನೇ ತಾರೀಖಿನೊಳಗಾಗಿ ಕಾರ್ಯದರ್ಶಿಯವರಿಗೆ ... ದುಕೊಂಡರೆ ಮಾತ್ರ) ನಾಲ್ಕು ದಿವಸ ಇರಲು ಇಂಬೂ, ... ಟ—ತಿಂಡಿಗಳೂ ದೊರಕುವ ಏರ್ಪಾಡು ಮಾಡಲಾಗಿದೆ.

ಈ ಅನುಕೂಲತೆಗಳೆಲ್ಲವೂ ಬೇಕೆಂದು ಬಯಸುವ ಪ್ರ... ತಿನಿಧಿಗಳಿಗೆ ನಾಲ್ಕು ದಿವಸಗಳಿಗಾಗಿ ೩ ರೂ. ಕೊಡಬೇಕಾ... ವುದು. ಬರಲಿರುವ ಪ್ರತಿನಿಧಿಗಳು ತಮಗೆ ಬೇಕಾಗಬಹು... ದ ಅನುಕೂಲತೆಗಳ ವಿಷಯವಾಗಿ ವಿಸ್ತಾರವಾಗಿಯೂ, ... ದವಾಗಿಯೂ ಬೇಗನೆ ಕಾರ್ಯದರ್ಶಿಯವರಿಗೆ ಬರೆಯಬೇ... ಗಿ ಬಿನ್ನಹ.

ಸಮ್ಮೇಳನಗಳಲ್ಲಿ ಚರ್ಚಿಸಲು ಶಕ್ಯವಾದ ಗೊತ್ತುವಳಿ... ಗಳನ್ನು ಬರೆದು ಕಾರ್ಯದರ್ಶಿಯವರಿಗೂ ಹೇಳಬೇಕೆಂದಿರು ... ಉಪನ್ಯಾಸಗಳನ್ನು **ಸಾಹಿತ್ಯ ಪರಿಷತ್ತಿನ ಕಾರ್ಯದ... ರ್ಶಿಯವರಿಗೂ** (ಕರ್ನಾಟಕ ಸಾಹಿತ್ಯ ಪರಿಷತ್ತು, ಶಂಕ... ರ, ಬಸವನಗುಡಿ (ಪೋಸ್ಟು) ಬೆಂಗಳೂರು ನಗರ ಎಂಬ ವಿ... ಳಾಸವನ್ನು ಸ್ಪಷ್ಟವಾಗಿ ಬರೆದು) ಡಿಸೆಂಬರು ೧೫ನೇ ತಾರೀ... ಖಿನೊಳಗಾಗಿ ಕಳುಹಿಸಬೇಕು.

ಸಾಹಿತ್ಯ ಸಮ್ಮೇಳನದ ಸ್ವಾಗತ ಅಧ್ಯಕ್ಷರನ್ನು ಆಯ್ಕೆ ... ಮಾಡಲು ಸ್ವಾಗತ ಮಂಡಲದ ಸಭಾಸದರ ಸಭೆಯು ... ಬರುವ ತಾ. ೧೫ನೇ ಗುರುವಾರ ಸಂಜೆಯಲ್ಲಿ ಇಲ್ಲಿನ ಮು... ನ್ಸಿಪಾಲ್ ಮಂದಿರದಲ್ಲಿ ಸೇರುವುದು. ಸಭಾಸದರಾಗುವ ವರೆಲ್ಲರೂ ಬೇಗನೆ ಹಣವನ್ನು ಸಲಿಸಿ ಈ ಸಭೆಗೆ ಬರಬೇಕೆಂದು ಉತ್ತರಕನ್ನಡ ಜಿಲ್ಲೆಯವರಿಗೆ ಬಿನ್ನಹ.

ಕಾರವಾರ ಸೋಮವಾರ ಶೇಲಂಗೆ ಮಂಗೇಶರಾಯರು,
ತಾ. 30—11—'31 (ಕಾರ್ಯಕಾರಿ ಮಂಡಲದ ಅಧ್ಯಕ್ಷರು)

ಶಾಲಾ ಬಂಧು.

(ಮಟ್ಟು ಜಯಜಯ ಭಾರತೀ ಯಜ—ಏಂಬಂತೆ)

ಬಂದು ದಿನದಲಿ ಅಂಧ ಕಾರವು | ಬಂದು ಮುಸುಕಿತು ಶಾಲೆಯ ॥

ಅಂದು ನಮ್ಮಯ ನಯನ ದೊಳಗೆ | ಮಂಜು ಮುಸುಕಿತು ವ್ಯಸನದಾ ॥೧॥

ಎಲ್ಲಿ ನೋಡಲು ವ್ಯಸನ ಸೂಚಕ | ವೆಲ್ಲಿ ನೋಡಲು ಅಳುಮುಖಾ ॥

ನೆಲ್ಲ ಮಕ್ಕಳ ಚಂಗನ್ನಾರವ | ದೆಲ್ಲದಕೂವರ ಶಾರಣಾ ॥೨॥

ಗೂಡಿನೊಳು ಮರಿ ಕಾಣದಿಪ್ಪರೆ | ಹೆಣ್ಣು ಹಕ್ಕಿಗೆ ವ್ಯಸನವೂ ॥

ಕಾಡದೆಯೆ ಜನ ಲೋಕ ತ್ಯಜಿಸಲು | ಎಲ್ಲರಿಗು ಬಹು ದುಃಖವು ॥೩॥

ನಮ್ಮ ಶಾಲೆಯ ಧೀರ ಬಂಧುವು | ತ್ಯಜಿಸಿ ಪೋದರು ಲೋಕವಾ ॥

ತಪ್ಪು ತಂಗಿಯರಂತೆ ಕಂಡರು | ನಮ್ಮ ಶಾಲೆಯ ಮಕ್ಕಳಾ ॥೪॥

ಶಿಷ್ಟರಿಗೆ ಬಹು ಶಿಷ್ಟರವರು | ದುಷ್ಟರಿಗೆ ಬಹು ದುಷ್ಟರೂ ॥

ಕಷ್ಟ ಕಾಲದಿ ಶಿಷ್ಟ ಜನರಾ | ಇಷ್ಟವನು ನೆರವೇರಿಸಾ ॥೫॥

ಸಾಧು ಸಜ್ಜನ ಸಂಗವವರಿಗೆ | ಪ್ರೀತಿಯೂ ಬಹು ಘನತೆಯೂ ॥

ಸ್ವದೇಶದಾ ಅಭಿಮಾನವವರಿಂದ | ಲೇಶ ಮಾತ್ರವೂ ತ್ಯಜಿಸದು ॥೬॥

ಪಕ್ಷಪಾತದ ದೃಷ್ಟಿ ಅವರಲಿ | ಇಷ್ಟು ಮಾತ್ರವು ಇಲ್ಲವು ॥

ಲಕ್ಷ ಜನರಿಗೂ ಕೇಳುವಂತಹ | ಸ್ವಚ್ಛವಾದ ಮಾತಲೇ ॥೭॥

ಶಾಲ ಬಂಧುವು ಶಾಲೆಯಲಿ ಬಹು | ಧೀರ್ಘ ಕಾಲವ ಕಳೆಯುತಾ ॥

"ನೀಲ ಕಾಟೇಜ" ಎಂಬ ಭವನದಿ | ಅಸುನ ತೊರೆದು ಪೋದರೂ ॥೮॥

ಎಲ್ಲರಿಗು ತಾ ವಿಧೇಯನಾಗಿದ್ದು | ಎಲ್ಲರಿಂದಲೂ ಸ್ತುತಿಸುತಾ ॥

ಇಲ್ಲಿಗಸ್ಮರ ಜನ್ಮ ಸಾಕೆಂದು | ಕಾಯ ತೊರೆದರು ಬಂಧುವು ॥೯॥

ಕರುಣ ಬಂದಿಹ ಕರುಣ ಸಿಂಧುವ | ಸ್ಥಿರದ ಆತ್ಮಕ್ಕೀಗ ರೇ ॥

ನಿರುತ ಶಾಂತಿಯ ನೀಯಲೆಂದು | ಶರಣ ಮುಗಿವೆನು ಹರನಿಗೆ ॥೧೦॥

ಸಿ. ಎಂ. ಚಂಗಪ್ಪ,
ವಿದ್ಯಾರ್ಥಿ.

COORG CIVIL SURGEON'S OFFICE
Mercara, dated the 2nd December 1931.

NOTICE.

Sealed tenders for the hiring out of calves to the Vaccine Depot at Mercara for one year commencing from 1st April 1932 to 31st March 1933 will be received at the Civil Surgeon's Office, Mercara up to 11 a m on Friday the 15th January 1932.

For terms and other particulars apply to the Vaccine Inspector or the Civil Surgeon's Office at Mercara

F R THORNTON,
Major, I M S.,
Civil Surgeon, Coorg

2—2

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 2—12—1931.

ನೋಟೀಸು.

1932ನೇ ಏಪ್ರಿಲ್ 1ರಿಂದ 1933ನೇ ಮಾರ್ಚಿ ೩೧ರ ವರೆಗೆ ಒಂದು ವರ್ಷ ಮಡಿಕೇರಿ ವೇಕ್ಸಿನ್ ಡಿಪೋಗೆ ಕರುಗಳನ್ನು ಬಾಡಿಗೆಗೆ ಕೊಡಲು ಮುದ್ರೆ ಹಾಕಿದ ದರಪಟ್ಟಿಗಳು (ಟೆಂಡರ್ಸ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1932ನೇ ಜನವರಿ 15ನೇ ಶುಕ್ರವಾರ ಬೆಳಿಗ್ಗೆ 11 ಗಂಟೆ ವರೆಗೆ ತೆಗೆದುಕೊಳ್ಳಲಾಗುವವು.

ಕರಾರುಗಳು ಮತ್ತು ವಿವರಗಳಿಗೆ ವೇಕ್ಸಿನ್ ಇನ್‌ಸ್ಪೆಕ್ಟರಿಗೆ ಅಥವಾ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿಗೆ ಬರೆದುಕೊಳ್ಳುವುದು.

ಎಫ್. ಆರ್. ಥಾರ್ನಟನ್,
ಮೇಜರ್, ಐ ಎಂ ಎಸ್,
ಸಿವಿಲ್ ಸರ್ಜನ್, ಕೊಡಗು.

ಮದುವೆಯ ಸಂತೋಷವೋ, ಸಾಲದ ಬಾಧೆಯೋ?

(ಲೇಖಕ ಸಿ ಬಿ ಸದಾಶಿವ ರಾವ್)

ಮಡಿಕೇರಿ ಮಹದೇವಪೇಟೆಯಲ್ಲಿ ಒಬ್ಬ ಶಾಲಾ ಉಪಾಧ್ಯಾಯನ ಮನೆ ಈತನ ಹೆಸರು "ರಾಮಚಂದ್ರನು" ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳೊಡನೆ ರಾಮಚಂದ್ರನು ತನ್ನ ಮನೆಯಲ್ಲಿ ವಾಸವಾಗಿದ್ದನು. ಹಿರಿಯ ಮಗಳಿಗೆ ಹದಿನಾಲ್ಕು ವರ್ಷ ವಯಸ್ಸು ಎರಡನೆಯ ಮತ್ತು ಕಿರಿಯ ಮಗನಿಗೆ ಎಂಟು ವರ್ಷ.

ಈ ದಿನ ರಾಮಚಂದ್ರನ ಮನೆಯಲ್ಲಿ ಬಹು ಗಲಭೆ ಒಂದೆಡೆ ವಾಲಗದವರು ವಾದ್ಯಮಾಡುತ್ತಿದ್ದಾರೆ. ಇನ್ನೊಂದು ಕಡೆ ಪುರೋಹಿತರು ಮಂತ್ರೋಚ್ಚಾರಣೆ ಮಾಡುತ್ತಿದ್ದಾರೆ ಮನೆಯ ಮುಂದೆ ಅಂಗಳದಲ್ಲಿ ಹಾಕಿದ ಮಂಟಪದಲ್ಲಿ ಹಸೆಮಣೆಯ ಮೇಲೆ ಗಂಡು ಮತ್ತು ಹೆಣ್ಣು ಅಲಂಕೃತರಾಗಿ ಕುಳಿತಿದ್ದಾರೆ. ರಾಮಚಂದ್ರನ ಮಗಳಿಗೆ ಈ ದಿನ ಮದುವೆ ಯೆಂತ ಮತ್ತೆ ಬೇರೆ ವಿವರಿಸಿ ಹೇಳಬೇಕಿಲ್ಲವಷ್ಟೆ!

ಮದುವೆಯು ನಿರಾತಂಕವಾಗಿ ನೆರವೇರಿತು ಆದರೆ ರಾಮಚಂದ್ರನು ಚಿಂತಾಕುಲನಾಗಿ ತನ್ನ ಕೊಠಡಿಯಲ್ಲಿ ಕುಳಿತಿರಲು ಕಾರಣವೇನು? ಪಾಠಕ ಮಹಾಶಯರೆ ಇತ್ತ ಕಡೆ ಕಿವಿಗೊಡಿರಿ.

"ನಾನು ನಿನಗೆ ಬಹು ವಿಧದಲ್ಲಿ ಹೇಳಿದರೂ ನೀನು ಕೇಳಲಿಲ್ಲ. ಆಳಿಯನಿಗೆ ಚಿನ್ನದ ಸಂಚಿಗೆ, ಬೆಳ್ಳಿ ಚೊಂಬು, ಪಂಚಪಾತ್ರೆ, ಉದ್ಧರಣೆ, ತಟ್ಟೆ, ಜರತಾರಿಪಂಚೆ ಕೊಡಲೇಬೇಕೆಂತ ಹಠ ಹಿಡಿದುಬಿಟ್ಟೆ! ನನ್ನ ಕೈಯ್ಯಲ್ಲಿ ಸಾಕಷ್ಟು ಹಣವಿಲ್ಲವೆಂದರೂ ಕೇಳಲಿಲ್ಲ' ಎಂದು ರಾಮಚಂದ್ರನು ಆಗ ತಾನೇ ಕೆಲಸತೀರಿಸಿಕೊಳಗೆ ಬಂದು ತನ್ನ ಪಾರ್ಶ್ವದಲ್ಲಿ ಕುಳಿತ ತನ್ನ ಪತ್ನಿ ಕಮಲಮ್ಮನಿಗೆ ಹೇಳಿದನು. ಕಮಲಮ್ಮ— "ಏನೂ ಅಂದರೆ, ಇದೀಗ ಹೇಳ್ತಾ ಇರುತ್ತ ನೀವು ಶಾಲೆಯ ಹೆಡ್ಮಾಸ್ಟರು, ತಿಂಗಳಿಗೆ 75 ರೂಪಾಯಿ ಸಂಬಳ ಬರುತ್ತಿದೆ. ಅಳಿಯನಿಗೆ ನಮ್ಮ ಮರ್ಯಾದೆಗೆ ಕುಂದಕ ಬಂದಂತೆ ಉಡುಗೆರೆ ಮಾಡಬೇಕೆ? ಅಲ್ಲ ಅಂದರೆ ಅಂದಿನಿಂದಲೂ ಒಂದೇ ರೀತಿ ಇದೇ ಮಾತು ಹೇಳುತ್ತಿದ್ದೀರಲ್ಲ ನೀವೇನೊ ಗಂಡಸರು. ನೆರೆಮನೆಯವರ ಆಡಿಕೆಯ ಮಾತುಗಳನ್ನು ಕೇಳತಕ್ಕವಳು ನಾನು ತಾನೆ? ನಿಮಗೆ ಅದು ಹೇಗೆ ಗೊತ್ತಾಗಬೇಕು.'

ರಾಮಚಂದ್ರ—"ಕಮಲ, ಮದುವೆಗೆ ಖರ್ಚೆಷ್ಟಾಯಿತೆಂತ ಬಲ್ಲೆಯೋ? ಬರೇ ಚಿನ್ನಿಯ ಖರ್ಚು 700 ರೂಪಾಯಿ, ಊಟ ತಿಂಡಿಯ ಖರ್ಚು 500 ರೂಪಾಯಿ, ಅಳಿಯಂದಿರ ಉಡುಗೆರೆ ಮತ್ತು ಇತರ ಖರ್ಚು ಸೇರಿ 800 ರೂಪಾಯಿ, ಹೀಗೆ 2000 ರೂಪಾಯಿ ಖರ್ಚಾಗಿ ಹೋಯಿತಲ್ಲ! ನನ್ನ ಪತ್ರಿಕಾ 1000 ರೂಪಾಯಿ ಮಾತ್ರ ಇದೆಯೆಂತ ನಿನಗೆ ಆಗಲೇ ಹೇಳಿದ್ದೆನಷ್ಟೆ!"

ಕಮಲಮ್ಮ—"ಇನ್ನೊಂದು ಸಾವಿರಕ್ಕೇನು ಮಾಡಿದಿರಿ? ರಾಮಚಂದ್ರ—'ತಂದೇ ಇದೆ ಮನೆಗೀಗ'

ಕಮಲಮ್ಮ—'ಆಗಲೀಂದ್ರೆ ಎರಡು ಸಾವಿರ ರೂಪಾಯಿ ಖರ್ಚಾದರೂ ಚಿಂತೆಯಿಲ್ಲ. ಮನೆ ಗಿರ್ಣಿಯಾದರೂ ಆಗಲಿ, ಮದುವೆಯೇನೊ ಬಹು ಸಾಂಭ್ರಮವಾಗಿ ಆಯಿತು ಶಾಯರು ಸೀತಾರಾಮಯ್ಯನವರ ಮಗಳ ಮದುವೆಗಿಂತಲೂ ಚೆನ್ನಾಗಿ ಆಯಿತು ಅವರೆಂಥ ಜಿಗುಟು ಮನುಷ್ಯರೊ ಕಾಣೆ! ಮಗಳಿಗೆ ಒಂದು ಕರಾಷಕ್ಕು ಸೀರೆ ಇಲ್ಲ, ಅಳಿಯನಿಗೆ ಜರತಾರಿ ಪಂಚೆಯಿಲ್ಲ ನಗಗಳಂತೂ ಹೋಗಲಿ! ಒಳ್ಳೆ ಬಟ್ಟೆ ಬರೆ ತೆಗೆಯದಿದ್ದವರು ಇನ್ನು ನಗಗಳನ್ನು ತೆಗೆಯುತ್ತಾರೆಯೇ! ಗಾಂಧಿ ಸೀರೆಯಂತೆ, ಗಾಂಧಿ ಪಂಚೆಯಂತೆ ಅವರೆಂತ ಗಾಂಧಿಯೊ, ಅದ್ಯಾವ ಗಾಂಧಿ ಒಟ್ಟಿಗೋ, ನಾನು ಬೇರೆ ಕಾಣೆ.'

ರಾಮಚಂದ್ರ—ಹೀಗೆ ಅದು ಹೇಗೆ ತಿಳಿಯಬೇಕು ಗಾಂಧಿಯವರ ಸರಳ ಜೀವನ, ಬಡವರ ಮೇಲಿರುವ ಅನಂತವಾದ ಪ್ರೇಮ, ಅವರ ಕಷ್ಟಗಳಲ್ಲಿ ತಾನು ಭಾಗಿಯಾಗುವುದು, ಅವರಿಗೋಸ್ಕರವಾಗಿ ಅನವರತವೂ ಚಿಂತಿಸುವುದು, ಇವೆಲ್ಲ ಅವರ ಚರಿತ್ರೆಯನ್ನು ಓದುವುದರಿಂದಲೂ, ಪತ್ರಿಕೆಗಳಲ್ಲಿ ಅವರು ಬರೆಯುವ ಲೇಖನಗಳಿಂದಲೂ, ಅವರ ಬಾಯಿಂದ ಹೊರಡುವ ವಚನ ಗಳಿಂದಲೂ ತಿಳಿಯಬೇಕಲ್ಲದೆ, ಇವೊಂದನ್ನೂ ಓದದ ಮತ್ತು ಕೇಳದ ನೀನು ಹೇಗೆ ತಿಳಿಯಬೇಕು? ಗಾಂಧಿಯವರ ಅನ... ಸೀತಾರಾಮಯ್ಯನವರು ತಮ್ಮ ... ಮದುವೆ ಮಾಡಿದ್ದು ಅವರ ಮಗಳ ವಾಗೆ ಅವರು 100 ರೂಪಾಯಿಗಿಂತ ಹೆಚ್ಚಿಗೆ ಖರ್ಚು ಮಾಡಲಿಲ್ಲ. ಅದುದರಿಂದಲೇ ಅವರು ಮದುವೆ ಮಾಡಿದ ನಂತರ ನನ್ನಂತೆ ಸಾಲಗಾರರಾಗಲಿಲ್ಲ ಈಗಲೂ ಅನುಕೂಲಸ್ಥರಾಗಿಯೇ ಇದ್ದಾರೆ '

ಕಮಲಮ್ಮ—'ಏನೋ ಕಾಣೆ' ಎನ್ನುತ್ತ ನಿಟ್ಟುಸಿರು ಬಿಟ್ಟು ಒಳಕ್ಕೆ ಕೆಲಸದ ನಿಮಿತ್ತ ಹೋದಳು.

ಮಗಳ ಮದುವೆಯಾಗಿ ಒಂದು ವರ್ಷ ಕಳೆಯಿತು ಆದರೆ ರಾಮಚಂದ್ರನು ಮಾಡಿದ 1000 ರೂಪಾಯಿ ಸಾಲ ಪೂರ್ತಿ ತೀರಲೇ ಇಲ್ಲ. ಸಾಲಗಾರನು ಒಂದು 'ಹಣಕಾಸಿಕ್ಕ ಇಲ್ಲದಿದ್ದರೆ ಸ್ವತ್ತು ಸ್ವಾಧೀನ ಪಡಿಸಿಕೊಳ್ಳುತ್ತೇನೆ' ಎಂತ ಹಿಂಸೆ ಮಾಡುತ್ತಿದ್ದನು. ಎರಡು ತಿಂಗಳ ವರೆಗೆ ರಾಮಚಂದ್ರನು ಈ ತಿಂಗಳಲ್ಲಿ ಕೊಡುತ್ತೇನೆ. ಮುಂದಿನ ತಿಂಗಳಲ್ಲಿ ಕೊಡುತ್ತೇನೆ' ಎಂತಲೇ ಹೇಳುತ್ತ ಬಂದನು ಆದರೆ ಕೊನೆಗೆ ಅದು ನಡೆಯದೆ ಹೋಯಿತು ಸಾಲಗಾರನು ಮನೆಯ

ನ್ನು ಸ್ವಾಧೀನ ಮಾಡಿಕೊಂಡೇ ಬಿಟ್ಟನು. ಕಮಲಮ್ಮನು ತನ್ನ ಮಗನನ್ನು ಕರೆದುಕೊಂಡು ಗಂಡನೊಡನೆ ಕಣ್ಣೀರು ಸುರಿಸುತ್ತ ಅದೇ ಬೀದಿಯಲ್ಲಿರುವ ಕಂಟ್ರಾಕ್ಟರ್ ತಿಮ್ಮಯ್ಯನ ಬಾಡಿಗೆ ಮನೆಯನ್ನು ಹೊಕ್ಕಳು.

'ನಿನ್ನ ಗಂಡ ಮಗಳ ಮದುವೆ ಮಾಡಿ ಮನೆ ಮಾರಿಕೊಂಡಂತೆ ನನ್ನ ಗಂಡನೇನೂ ಮಾಡಲಿಲ್ಲ.' ಕಮಲಮ್ಮನಿಗೂ, ನೆರೆಮನೆಯ ಸರಸಮ್ಮನಿಗೂ ಮನಸ್ತಾಪವುಂಟಾದ್ದಾಗ್ಯೆ ಸರಸಮ್ಮನು ಕಮಲಮ್ಮನಿಗೆ ಹೀಗೆ ಹೇಳಿದಳು. ಕಮಲಮ್ಮನು ಉತ್ತರ ಕೊಡಲು ದಾರಿ ತೋರದೆ ಕಣ್ಣಲ್ಲಿ ನೀರು ಸುರಿಸುತ್ತ 'ಅಯ್ಯೋ, ನನ್ನ ದುರಾದೃಷ್ಟವೆ. ಅವರ ಮಾತುಗಳನ್ನು ನಾನು ಕೇಳಿದ್ದರೆ ನಮ್ಮ ಮನೆಯೂ ಹೋಗುತ್ತಿರಲಿಲ್ಲ. ಈಗ ಈ ಕಠೋರವಾದ ಮಾತುಗಳನ್ನೂ ಕೇಳಬೇಕಾಗಿರಲಿಲ್ಲ' ಎನ್ನುತ್ತ ಅತಿಗೆ ಮನೆಯೊಳಕ್ಕೆ ಹೋದಳು.

ಸೈನ್ಯದ ವಿಷಯ ಮಹಾತ್ಮ ಗಾಂಧಿಯವರ ಭಾಷಣ.

(೭ನೇ ಪುಟದಿಂದ ಮುಂದುವರಿದದ್ದು.)

... ಸದ್ಯದ ವಿಚಾರವಾಗಿ ನಾನು ಬಹು ಮರ್ಯಾದೆಯಿಂದ ಹೇಳಬೇಕಾಗಿದೆ. ಈ ಕಡೇ ವಿಷಯವನ್ನು ಕುರಿತು ಮಾತಾಡುವಾಗ್ಯೆ ಪ್ರಸಂಗೋಚಿತವನ್ನು ಖಾತೆ ಮಾಡಲು ಅದನ್ನು ಇಲ್ಲಿ ಸೇರಿಸಿಕೊಂಡದ್ದಾಗಿದೆ. ಜವಾಬ್ದಾರಿ ಸರಕಾರವನ್ನು ವಹಿಸಿಕೊಳ್ಳುವಾಗ್ಯೆ ನಮಗೆ ಈ ಅಧಿಕಾರ ದೊರೆಯದೆ ಹೋದರೆ, ಬೇರೆ ವಿಷಯಗಳಲ್ಲಿ ನಾವು ಜವಾಬ್ದಾರಿಯನ್ನು ನಡಿಸುತ್ತಿರುವುದರಿಂದ ನಾವು ಫಕ್ಕನೆ ಸೈನ್ಯದ ಮೇಲೆ ಅಧಿಕಾರವನ್ನು ಕೈಕೊಳ್ಳಲು ಯೋಗ್ಯತೆಯುಳ್ಳವರೆಂದು ಕಂಡು ಬರುವ ಸಮಯವು ಯಾವಾಗ ಬರುವದೋ ಎಂದು ನನಗೆ ತೋರುವುದಿಲ್ಲ. ಈ ವಿಷಯ ನಾವು ದೀರ್ಘಾಲೋಚನೆ ಮಾಡಿ ತೀರ್ಮಾನಕ್ಕೆ ಬಂದಿರುವದಾಗಿದೆ.

ಹಿಂದುಸ್ಥಾನದ ಈಗಿನ ಸೈನ್ಯವು ದೇಶೀಯ ಸೈನಿಕರದ್ದೇ ಆಗಲೀ ಬ್ರಿಟಿಷ್ ಸೈನಿಕರದ್ದೇ ಆಗಲೀ ನನ್ನ ಅಭಿಪ್ರಾಯದಲ್ಲಿ ದೇಶವನ್ನು ಅಧೀನದಲ್ಲಿ ಇಟ್ಟುಕೊಳ್ಳಲು ಇರುವ ಸೈನ್ಯವಾಗಿದೆ. ಅನುಭವದಿಂದ ಹೇಳುವುದೇನೆಂದರೆ—ಸಿಕ್, ಗುರ್ಖಾ, ಪಠಾಣ್, ಮದ್ರಾಸಿ, ರಜಪೂತ ಯಾವ ಪಂಗಡದವನೇ ಆಗಲಿ, ಸೈನ್ಯದಲ್ಲಿ ಇರುವಷ್ಟು ಕಾಲ ಅವರು ನಮಗೆ ಪರದೇಶೀಯರೇ ಆಗಿರುತ್ತಾರೆ. ಅವರ ಸಂಗಡ ನಾವು ಮಾತಾಡಕೂಡದು. ಗುಟ್ಟಾಗಿ ನನ್ನಲ್ಲಿಗೆ ಶಿಪಾಯಿಗಳು ಬಂದಿದ್ದಾರೆ. ನನ್ನ ಸಂಗಡ ಮಾತಾಡಲು ಸಹ ಅವರಿಗೆ ಹೆದರಿಕೆ. ತಮ್ಮ ಮೇಲೆ ಪ್ರಕಾರಾದೀತೆಂಬ ಭಯ. ಶಿಪಾಯಿಗಳನ್ನು ಲೈನ್ಸಲ್ಲಿಗೆ ನಾವು ಸಾಧಾರಣವಾಗಿ ಹೋಗಕೂಡದು. ನಮ್ಮನ್ನು ಅವರ ದೇಶೀಯರನ್ನಾಗಿ ಭಾವಿಸಕೂಡದಂತೆ ಅವರನ್ನು ತರಬೇತು ಮಾಡಿರುತ್ತಾರೆ. ಪ್ರಪಂಚದ ಬೇರೆ ಯಾವ ಕಡೆಯಲ್ಲೂ ಇಲ್ಲದ ನಿಯಮಗಳು ಇಂಡಿಯಾದಲ್ಲಿ ಇವೆ. ಶಿಪಾಯಿಗಳಿಗೂ ಇತರ ಜನ ಸಮುದಾಯಕ್ಕೂ ಯಾವ ತರದ ವ್ಯವಹಾರವೂ ಇರಕೂಡದು. ಹಿಂದೀ ಜೀವನದ ಎಲ್ಲಾ ಭಾಗದ ಸಂಬಂಧವೂ ಇರಬೇಕೆಂತ ನಾನು ಪ್ರಯತ್ನಿಸಿದಾಗ ನನಗೆ ದೊರೆತ ಅನುಭವವನ್ನು ನಿಮ್ಮ ಮುಂದೆ ಋಜುವಾತಿಗೆ ಹೇಳಿದ್ದೇನೆ. ಆದರೆ ಇದು ಬರೇ ನನ್ನೊಬ್ಬನ ಅನುಭವವಲ್ಲ. ನೂರಾರು, ಸಾವಿರಾರು ಕಾಂಗ್ರೆಸ್ ಸದಸ್ಯರ ಅನುಭವವಾಗಿದೆ. ಶಿಪಾಯಿಗಳಿಗೂ ಬೇರೆ ಜನರಿಗೂ ಮಧ್ಯೆ ಬಹಳ ಎತ್ತರವಾದ ಗೋಡೆ ಇದೆ. ಆದ್ದರಿಂದ ಸೈನ್ಯದ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು ದೊಡ್ಡ ಭಾರದ ಕೆಲಸವಾಗಿದೆ. ಶಿಪಾಯಿಗಳನ್ನು ಮುಖ್ಯವಾಗಿ ಬ್ರಿಟಿಷ್ ಆಫೀಸರುಗಳನ್ನು ನಮ್ಮ ಅಧೀನಕ್ಕೆ ತಂದುಕೊಳ್ಳುವುದು ಸುಲಭ ಸಾಧ್ಯವಲ್ಲ. ಇದೇ ನಮ್ಮ ದುರಾದೃಷ್ಟದ ಸ್ಥಿತಿಯಾಗಿದೆ. ನಮ್ಮನ್ನು ಆಳುವವರು ನಮ್ಮನ್ನು ಈ ದುರವಸ್ಥೆಗೆ ಇಳಿಸಿದ್ದಾರೆ.

ಇಂಡಿಯಾದಲ್ಲಿರುವ ಬ್ರಿಟಿಷ್ ಸೈನ್ಯದ ಉದ್ದೇಶವೇನು? ಬ್ರಿಟಿಷ್ ಮತ್ತು ದೇಶೀಯ ಸೈನ್ಯವೆಲ್ಲವೂ ಬ್ರಿಟಿಷರ ಹಕ್ಕುಗಳನ್ನು ಕಾಪಾಡಲಿಕ್ಕಾಗಿಯೂ, ಪರಕೀಯರ ಧಾಳಿಯನ್ನು ಇಲ್ಲದಂತೆ ಮಾಡಲಿಕ್ಕೆ ಅಥವಾ ತಡೆಯಲಿಕ್ಕೆ ಇರುವುದಾಗಿದೆ ಈ ಮಾತುಗಳನ್ನು ಹೇಳಬೇಕಾದದ್ದಕ್ಕೆ ವ್ಯಸನಪಡುತ್ತೇನೆ. ಆದರೆ ನಾನು ತಿಳಿದುಕೊಂಡ, ಅನುಭವಪಟ್ಟ ಸತ್ಯಗಳನ್ನು ತಿಳಿಸಿಕೊಡದೆ ಇದ್ದರೆ ನನ್ನ ಬ್ರಿಟಿಷ್ ಸ್ನೇಹಿತರಿಗೆ ಸಹ ಅನ್ಯಾಯ ಮಾಡಿದಂತಾಗುತ್ತದೆ. ಮೂರನೇ ಕಾರಣವೇನೆಂದರೆ ಸ್ಥಾಪಿತವಾದ ಅಧಿಕಾರದ ಮೇಲೆ ದಂಗೆ ಎದ್ದರೆ ಅದನ್ನು ಅಡಗಿಸಲಿಕ್ಕೆ. ಇವೇ ಸೈನ್ಯದ ಮುಖ್ಯ ಕೆಲಸಗಳಾಗಿವೆ. ಆದ್ದರಿಂದ ಇಂಗ್ಲಿಷ್ ಮಹನೀಯರಿಗೆ ಇರುವ ಅಭಿಪ್ರಾಯದಲ್ಲಿ ಆಶ್ಚರ್ಯವೇನೂ ಇಲ್ಲ.

ನಾನು ಇಂಗ್ಲಿಷ್ ಮನುಷ್ಯನಾಗಿದ್ದರೆ ಮತ್ತು ಬೇರೆ ಜನಾಂಗವನ್ನು ಆಳುವ ಆಶೆ ಇದ್ದಿದ್ದರೆ ನಾನೂ ಅದೇ ಅಭಿಪ್ರಾಯವುಳ್ಳವನಾಗಿರುತ್ತಿದ್ದೆ. ಹಿಂದೀಯರನ್ನು ಹಿಡಿದು ತಂದೇಟು ಕೊಟ್ಟು ಹೇಳಿದಂತೆ ಕೇಳುವವರನ್ನಾಗಿ ಅಂದರೆ ನಾನು ಹೇಳಿದರೆ ಯಾರನ್ನಾದರೂ ಗುಂಡು ಹೊಡೆಯಲಿಕ್ಕೆ ಹಿಂಜರಿಯದವರನ್ನಾಗಿ ಮಾಡುತ್ತಿದ್ದೆ. ಜಲಿಯನ್‌ವಾಲಾಬಾಗಿನಲ್ಲಿ ಹಿಂದೀಯರನ್ನು ಗುಂಡು ಹೊಡೆದದ್ದು ದೇಶೀಯ ಶಿಪಾಯಿಗಳೇ ಅಲ್ಲವೆ?

ಆದ್ದರಿಂದ ಇದರಲ್ಲಿ ಆಶ್ಚರ್ಯವೇನೂ ಇಲ್ಲ. ನಿಜವ ಸಂಗತಿಯಾಗಿದೆ. ಬ್ರಿಟಿಷ್ ಸೈನ್ಯವಿರುವುದೂ ಆ ಉದ್ದೇಶಕ್ಕೇನೇ. ಈ ನೀರೆ ಬೇರೆ ಜಾತಿ ಶಿಪಾಯಿಗಳನ್ನು ತುಕಡಿಯಲ್ಲಿ ಇಟ್ಟುಕೊಳ್ಳುತ್ತಾರೆ. ಬ್ರಿಟಿಷ್ ಅಧಿಕಾರಿಗಳ ಮತ್ತು ಇತರರ ಜೀವ ಸಂರಕ್ಷಣೆ ಮಾಡುತ್ತಾರೆ. ಬ್ರಿಟಿಷರು ಹಿಂದೂಸ್ಥಾನವನ್ನು ಕೈವಶ ಮಾಡಿ ಇಟ್ಟುಕೊಳ್ಳಬೇಕೆಂತ ನಾನು ಒಪ್ಪುವುದಾದರೆ ನಾನು ಆಕ್ಷೇಪಿಸುತ್ತಿರಲಿಲ್ಲ.

ಸರ್ ಟಿ. ಬಿ. ಸಪ್ರೂ ಮತ್ತು ಪಂಡಿತ ಮಾಳವೀಯರಂತಹ ಎತ್ತರ ಸವಾಲಿಗೆ ನಾನು ಜವಾಬು ಕೊಡುವುದು ಕಷ್ಟವಾಗಿಲ್ಲ. ಅವರು ಈ ಇಲಾಖೆಯ ಅನುಭವ ಇರುವ ಪಟುಗಳಲ್ಲದ್ದರಿಂದ ಸೈನ್ಯವನ್ನು ಎಷ್ಟರ ಮಟ್ಟಿಗೆ ಕಡಿಮೆ ಮಾಡಬಹುದೆಂತ ಹೇಳಲಾರದವರಂತ ಹೇಳಿದರು.

ಏನಾಗಬೇಕೆಂತ ಹೇಳಲು ನನಗೆ ಕಷ್ಟ ತೋರುವುದಿಲ್ಲ. ಹಿಂದೀ ಸರಕಾರವನ್ನು ನಡಿಸುವ ಹಕ್ಕು ನಮಗೆ ಸಿಕ್ಕುವ ಮುಂಚೆ ಸೈನ್ಯದ ಆಡಳಿತವು ನಮ್ಮ ಕೈಗೆ ಸಿಕ್ಕದಿದ್ದರೆ ಸೈನ್ಯವನ್ನೆಲ್ಲಾ ಚದರಿಸಿ ಮನೆಗೆ ಕಳುಹಿಸಿಯೇನು. ಬ್ರಿಟಿಷ್ ಮಂತ್ರಿಗಳಿಗೂ ಜನರಿಗೂ ಹಿಂದೂಸ್ಥಾನಕ್ಕೆ ಒಳ್ಳೇದು ಮಾಡಬೇಕೆಂತ ಇದ್ದರೆ ಆಡಳಿತದ ಅಧಿಕಾರವನ್ನು ನಮಗೆ ಕೊಡುತ್ತೀರಾದರೆ ಸೈನ್ಯದ ಮೇಲಧಿಕಾರವನ್ನು ಸಂಪೂರ್ಣವಾಗಿ ನಮ್ಮ ಸ್ವಾಧೀನಕ್ಕೆ ಬಿಟ್ಟುಕೊಡಬೇಕು.

ಆದರೆ ಇದರಿಂದ ಅಪಾಯವಿದೆಯೆಂತ ನನಗೆ ಗೊತ್ತಿದೆಯೆಂತ ಹೇಳಿದ್ದೇನೆ. ಸೈನ್ಯವು ನನ್ನ ಹುಕುಮನ್ನು ಅಂಗೀಕರಿಸುವುದಿಲ್ಲವೆಂತ ನನಗೆ ಚೆನ್ನಾಗಿ ತಿಳಿದಿದೆ. ಬ್ರಿಟಿಷ್ ಸೈನ್ಯಾಧಿಪತಿಯಾಗಲೀ, ಸಿಕ್, ರಜಪೂತ ಶಿಪಾಯಿಗಳಾಗಲೀ ನನ್ನ ಹುಕುಮನ್ನು ಅಂಗೀಕರಿಸುವುದಿಲ್ಲ.

ಆದರೂ ಬ್ರಿಟಿಷ್ ಜನರ ಸಹಾನುಭೂತಿಯಿಂದ ಸೈನ್ಯವನ್ನು ಅಧೀನದಲ್ಲಿ ಇಟ್ಟುಕೊಳ್ಳಲು ನಿರೀಕ್ಷಿಸುತ್ತೇನೆ. ಬ್ರಿಟಿಷ್ ಜನರ ಹೇಳಿಕೆಯನ್ನಲ್ಲ, ನಮ್ಮ ಹೇಳಿಕೆಯನ್ನು ನಡಿಸಬೇಕೆಂತಲೂ, ಹಾಗೆ ನಮ್ಮ ಹೇಳಿಕೆಯನ್ನು ನಡಿಸಿದರೆ ಅವರ ದೇಶದ ಜನರ ಸೇವೆಯೇ ಮಾಡುವುದಾಗಿದೆಯೆಂತಲೂ ಸೈನಿಕರಿಗೆ ಕಲಿಸಿಕೊಡಲು ಬ್ರಿಟಿಷರ ಸಹಾಯ ಬೇಕಾಗಿದೆ.

ಬ್ರಿಟಿಷ್ ಸೈನಿಕರಿಗೂ ಏನು ಕಲಿಸಬೇಕೆಂದರೆ, 'ನೀವು ಹಿಂದೂಸ್ಥಾನದಲ್ಲಿರುವುದು ಬ್ರಿಟಿಷರ ಹಕ್ಕುಗಳನ್ನು ಕಾಪಾಡಲಿಕ್ಕಾಗಿಯಲ್ಲ, ಬ್ರಿಟಿಷರ ಜೀವ ರಕ್ಷಣೆಗಾಗಿಯಲ್ಲ. ಪರರಾಜ್ಯರ ಸೈನ್ಯ ಬಂದರೆ ಅದನ್ನು ತಡೆಯಲಿಕ್ಕೂ, ದೇಶದೊಳಗೆ ಫಂಡಾದರೆ ಅದನ್ನು ಅಡಗಿಸಲಿಕ್ಕೂ. ಅಂದರೆ ದೇಶ ನಿಮ್ಮದೇ ಆಗಿದ್ದರೆ ನೀವು ಹೇಗೆ ಕೆಲಸ ಮಾಡುತ್ತಿದ್ದೀರೋ ಹಾಗೆ ಮಾತ್ರ ಮಾಡಿದರೆ ಸಾಕೆಂತ' ಕಲಿಸಿಕೊಡಬೇಕು. ಇದೇ ನನ್ನ ಕನಸು.

ಈ ಕನಸನ್ನು ಇಲ್ಲಿ ಸಾಧಿಸಿಕೊಳ್ಳಲು ಆಗುವುದಿಲ್ಲವೆಂತ ನನಗೆ ಗೊತ್ತಿದೆ. ಈ ಸಭೆಯಲ್ಲಿ ಇದನ್ನು ಸಾಧಿಸಿಕೊಳ್ಳಲು ಸಾಧ್ಯವಿಲ್ಲವೆಂಬದಕ್ಕೆ ಋಜುವಾತು ಇದೆ. ಆದರೂ ಈ ಕನಸನ್ನು ಸಾಧಿಸಲು ಪ್ರಯತ್ನಿಸುತ್ತಲೇ ಇರುತ್ತೇನೆ. ನನ್ನ ಜೀವವಿರುವ ವರೆಗೂ ಪ್ರಯತ್ನಿಸುತ್ತಲೇ ಇರುತ್ತೇನೆ. ಆದರೆ ಇಲ್ಲಿನ ವಾತಾವರಣವನ್ನು ನೋಡಿದರೆ ಬ್ರಿಟಿಷ್ ಮುಂದಾಳುಗಳನ್ನಾಗಲೀ, ಜನರನ್ನಾಗಲೀ ಈ ಅಭಿಪ್ರಾಯಕ್ಕೆ ತಿರುಗಿಸಲು ಸಾಧ್ಯವಾಗುವಂತೆ ಕಾಣುವುದಿಲ್ಲ. ಮಂತ್ರಿಯವರ ಹೇಳಿಕೆಯೂ, ಲಾರ್ಡ್ ಇರ್ವಿನರ ಅಪೇಕ್ಷೆಯೂ ನನ್ನ ಅಭಿಪ್ರಾಯಕ್ಕೆ ಆಧಾರವಾಗಿವೆ.

ನಮ್ಮ ದೇಶವನ್ನು ನಾವೇ ಕಾಪಾಡಿಕೊಳ್ಳುವಂತೆ ನಮ್ಮನ್ನು ತರಬೇತು ಮಾಡುವುದು ಬ್ರಿಟಿಷರ ಹೆಮ್ಮೆಯ ಕರ್ತವ್ಯವಾಗಿರಬೇಕು. ನಮ್ಮ ರೆಕ್ಕೆಯನ್ನು ಕತ್ತರಿಸಿರುವಾಗ, ಬ್ರಿಟಿಷ್ ಜನರು ಆಕಾಶದಲ್ಲಿ ಹಾರಾಡುತ್ತಿರುವಂತೆ ನಮಗೂ ಹಾರಾಡಲು ಸಾಧ್ಯವಾಗುವಂತೆ ನಮಗೆ ಪುನಹ ರೆಕ್ಕೆ ಕೊಡಬೇಕು. ಇದೇ ನನ್ನ ಆಶೆ. ಈ ಹಕ್ಕು ಸಿಕ್ಕುವ ವರೆಗೂ ಕಾಯಲು ತಯಾರಿದ್ದೇನೆ. ಸೈನ್ಯದ ಮೇಲೆ ಅಧಿಕಾರ ಸಿಕ್ಕದೆ ಪ್ರಜಾಜವಾಬ್ದಾರಿ ಸರ್ಕಾರ ಪದ್ಧತಿಯು ಸಿಕ್ಕಿದಂತಾಯಿತೆಂತ ನನ್ನನ್ನು ನಾನು ಮೋಸಗೊಳಿಸಿಕೊಳ್ಳುವುದಿಲ್ಲ.

(ಮುಂದುವರಿಯುವುದು.)

---

೯೫ ವರ್ಷದ ಅಜ್ಜಿ ಮುದುಕಿ ಗರ್ಭಿಣಿಯಾದದ್ದು!!

ಗುಲ್ಬರ್ಗ ಡಿ. ಕಲ್ಯಾಣಕ್ಕೆ ಸೇರಿದ ರಟಕಲ್ಲಿನ ಸಮೀಪದಲ್ಲಿರುವ ರೇವಣಸಿದ್ಧೇಶ್ವರ ದೇವಾಲಯಕ್ಕೆ ಸಮೀಪವಾಗಿ ಮಯುನಾಸೂರ ಎಂಬ ಹಳ್ಳಿಯೊಂದಿದೆ. ಈ ಹಳ್ಳಿಯಲ್ಲಿ 95 ವರ್ಷ ವಯಸ್ಸಿನ ಹಣ್ಣು ಮುದುಕಿಯೊಬ್ಬಳಿರುತ್ತಾಳೆ ಈಕೆಗೆ ಕಣ್ಣು ಮಂಜಾಗಿದೆ, ಕಿವಿ ಮಂದವಾಗಿ, ನಡು ಬಗ್ಗಿ ಹೋಗಿದೆ. ಗಂಡನು ಸತ್ತು 60 ವರ್ಷಗಳಾದುವು ಮತ್ತು ಬಹಿಷ್ಠೆಯಾಗುವುದು ನಿಂತು 40 ವರ್ಷಗಳಾದವು. ಹೀಗಿದ್ದರೂ, ತಾನು ಗರ್ಭಧರಿಸಿದ್ದೇನೆಂದೂ, ತನಗೆ ಒಯಳ ಕಂಡರುತ್ತದೆಂದೂ ಹೇಳುತ್ತಿರುವುದಾಗಿಯೂ, ಪರೀಕ್ಷಿಸುವಲ್ಲಿ 4–5 ತಿಂಗಳ ಗರ್ಭಧಾರಣೆಯಾಗಿರುವುದಾಗಿಯೂ ತಿಳಿಯಬರುತ್ತದೆ. ನರೆಗೂದಲನ್ನುಳ್ಳ ಈ ಪೂರ್ಣ ವೃದ್ಧಳು ಗರ್ಭಧರಿಸಿರುವುದು ನಿಜವಾಗಿದ್ದಲ್ಲಿ ಬಹಳ ವಿಚಿತ್ರವೇ ಸರಿ.

ವೈ. ಸ್ವಾ.

---

೫೩ ವರ್ಷಗಳ ಅನುಭವಸಿದ್ಧ ...
ಸಾವಿರಾರು ಜನರಿಂದ ಉಪಯೋ...
ಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದ ... ರ ಹೋಗುವಿಕೆ, ನರಗಳು ದುರ್ಬಲವಾಗಿ ... ಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟ... ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ... ತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧ... ಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗು... ಕೆಟ್ಟು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದ... ಡಬ್ಬಿ 1ಕ್ಕೆ 2–8–0 ಮೂರು ಡಬ್ಬಿಗಳಿಗೆ ರೂ. ...

೨. ಅಶೋಕಾರಿಷ್ಟ ಮತ್ತು ಮಾ...

ಹೆಂಗಸರ ಮುಟ್ಟು ದೋಷಗಳು, ಮುಟ್ಟು ... ಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ... ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ... ನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ... ಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವ ... ಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ... ಅಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆ ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ ... 3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. ...

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, ೭ ದಿ... ಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ... ರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ... ನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾ... 1–8–0, 3 ಬಾಟ್ಲಿಗಳಿಗೆ 4–2–0.

೪. ಮೇಹ ಕುಠಾರ.

ಇದು ಮೂತ್ರ... ದ ಕೆಂಪು, ಬಿಳದು, ಹಳದಿಯಂತೆ ಹೋಗತಕ್ಕ ಶೀಮ... ಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ ... ರೂ. 2–8–0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ.

ಅಯ... ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ ... ಆಣೆ. 3 ಬಾಟ್ಲಿಗಳಿಗೆ 2–2–0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತ... ಯಿರೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ... ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋ...

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್,
ರಥಬೀದಿ, ಮಂಗಳೂರು, ದ.

COORG CIVIL SURGEON'S OFF...
Mercara, dated the 2nd Decembe...

NOTICE.

Sealed tenders will be received at the ... Surgeon's Office, Mercara up to 11 a. ... Friday the 15th January 1932, for the sup... contract of all articles of diet etc. ... separately for the use of the in-patients ... Mercara, (2) Virajpet and (3) Somwarpet ... 1st April 1932 to 31 March 1933 (bot... inclusive).

For further particulars apply to the ... Officer in charge of the Hospitals concern...

F. R. THORNTON
Major, I. M. S.,
2—2 Civil Surgeon, Coo...

ಕೊಡಗು ಸಿವಿಲ್ ಸರ್ಜನರ ...
ಮಡಿಕೇರಿ, 2–12–19...

ನೋಟೀಸು.

(1) ಮಡಿಕೇರಿ, (2) ವೀರಾಜಪೇಟೆ ಮತ್ತು ... ಸೋಮವಾರಪೇಟೆ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ... ಉಪಯೋಗಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ... ಕ್ಟು ಮೂಲಕ 1932ನೇ ಏಪ್ರಿಲ್ 1ರಿಂದ 1933ನೇ ... 31ರ ವರೆಗೆ (ಈ 2 ದಿವಸಗಳೂ ಸೇರಿ) ಈ ಮೂರು ... ಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒದಗಿಸಿ ಕೊಡಲು ... ಹಾಕಿದ ದರಖಾಸ್ತುಗಳು (ಟೆಂಡರ್) 1932ನೇ ... 15ನೇ ಶುಕ್ರವಾರ ಬೆಳಗ್ಗೆ 11 ಗಂಟೆ ವರೆಗೆ ಮಡಿಕೇರಿ... ಲ್ ಸರ್ಜನರ ಆಫೀಸಿನಲ್ಲಿ ತಗೆದುಕೊಳ್ಳಲಾಗುವವು.

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಆಸ್ಪತ್ರೆಗಳಲ್ಲಿರುವ ಮೆಡಿಕಲ್ ಆಫೀಸರಿಗೆ ಬರಕೊಳ್ಳಬಹುದು.

ಎಫ್. ಆರ್. ಥಾರ್ನಟನ್
ಮೇಜರ್, ಐ. ಯಂ. ಎ...
ಸಿವಿಲ್ ಸರ್ಜನ್, ಕೊಡ...

ವರ್ತಮಾನ ಸಂಗ್ರಹ.

ಒಳ ದೇಶ.

ಸೋಮವಾರಪೇಟೆ ನಾಡಿನ ಮಿ. ಕೆ. ಹೆಚ್. ಮಲ್ಲಪ್ಪ, ಬಿ. ಎ., ಬಿ. ಎಲ್. ರವರು ಮಡಿಕೇರಿಯಲ್ಲಿ ಲಾಯರು ಕೆಲಸವನ್ನು ಪ್ರಾರಂಭಿಸಿರುವರು.

ಈ ವರ್ಷ ವೀರಾಜಪೇಟೆಯಲ್ಲಿ ನಡೆದ ಹಾಕಿ ಟೂರ್ನಮೆಂಟನಲ್ಲಿ 'ಪುಲಿಯಂಡ ಬಟ್ಲನ್ನು' ಮಡಿಕೇರಿ ಹೈಸ್ಕೂಲಿನ ಟೀಮಿನವರು ಗೆದ್ದರು.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 19—12—31ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿಕ್ಕಿದೆ.

ಜನನ ಮರಣಗಳ ರಿಜಿಸ್ಟ್ರೇಷನನ್ನು ಕುರಿತು ಅಭಿಪ್ರಾಯ ಕೊಡಲು ಕೌನ್ಸಿಲಿನಿಂದ ನೇಮಿಸಲ್ಪಟ್ಟಿರುವ ಕಮಿಟಿಯ ಮೀಟಿಂಗೊಂದು ನಿನ್ನೆ ದಿನ ಮಡಿಕೇರಿಯಲ್ಲಿ ನಡೆಯಿತು.

ಈ ತಾ 15ರಿಂದ ಪೋಸ್ಟು ಕಾರ್ಡುಗಳ ಕ್ರಯವು 9 ಕಾಸೂ, ಕಾಗದಕ್ಕೆ ಹಚ್ಚಬೇಕಾದ ಸ್ಟಾಂಪಿಗೆ 1 ಆಣೆ 3 ಕಾಸೂ, ಸ್ಟಾಂಪು ಕವರಿಗೆ 1 ಆಣೆ 4 ಕಾಸೂ ಆಗುವದು

ಕಾಂಗ್ರೆಸ್ ಸ್ವಯಂಸೇವಕರ ತರಬೇತು ವೀರಾಜಪೇಟೆ ತಿಂಗಳಲ್ಲಿ ನಡೆಯುತ್ತಾ ಇದೆ. ಪ್ರಾರಂಭದ ಎರಡನೇ ದಿನದಿಂದಲೇ 22 ಸ್ವಯಂಸೇವಕರು ತರಬೇತು ಹೊಂದುತ್ತಿರುವರು.

ಈ ವಾರವೆಲ್ಲಾ ಮೋಡ ಕವಿದುಕೊಂಡಿದ್ದು, ಮಡಿಕೇರಿಯಲ್ಲಿ ನಿನ್ನೆ ಬೆಳಿಗ್ಗೆಯಿಂದ ಮಳೆ ಹನುಕುತ್ತಾ ರಾತ್ರಿ ಸಾಧಾರಣದ ಒಂದು ಮಳೆ ಬಿತ್ತು. ಈ ಮಳೆಯಿಂದ ಕಾಫಿ ತೋಟದವರಿಗೆ ತುಂಬಾ ನಷ್ಟವಿದೆ.

ಈ ವಾರ ಮಡಿಕೇರಿಯಲ್ಲಿ ನೇಟಿವ್ ಕಾಫಿ ಖಂಡಿಗೆ 226 ರೂಪಾಯಿಯಲ್ಲಿಯೂ, ಪಾರ್ಚ್‌ಮೆಂಟ್ ಕಾಫಿ ಹಂಡ್ರೆಡ್‌ವೈಟಿಗೆ 56 ರೂಪಾಯಿಯಲ್ಲಿಯೂ ಮಾರಾಟವಾಯಿತೆಂದು ತಿಳಿಯುತ್ತದೆ.

ದಕ್ಷಿಣ ಕೊಡಗಿನ ಹಲವರು ಸೇರಿ ರಿಟಯರ್ಡ್ ಮುನಸೀಫರಾದ ಮಿ. ಸಿ. ಯನ್. ಮುತ್ತಣ್ಣನವರಿಗೆ ತಾ 23ರಲ್ಲಿ ವೀರಾಜಪೇಟೆಯಲ್ಲಿ ಒಂದು ಸತ್ಕಾರ ಕೂಟವನ್ನು ನಡಿಸುವರಾಗಿ ತಿಳಿಯಬರುತ್ತದೆ.

ನಿನ್ನೆ ದಿನ ಫ್ರೇಜರ್‌ಪೇಟೆ ಬಳಿ ಮಲ್ಲಿಕಾರ್ಜುನ ಮೋಟಾರ್ ಸರ್ವಿಸಿನ ಬಸ್ಸೂ, ಕಾವೇರಿ ಸರ್ವಿಸಿನ ಬಸ್ಸೂ ಒಂದಕ್ಕೊಂದು ಅಪ್ಪಳಿಸಿ, ಎರಡಕ್ಕೂ ಮುಕ್ಕು ಉಂಟಾಗಿ, ಅಲ್ಲೇ ನಿಂತು ಹೋದವಲ್ಲದೆ ಪ್ರಯಾಣಿಕರಿಗೂ ಘಾಯಗಳಾದವೆಂದು ವರ್ತಮಾನ.

ಮಡಿಕೇರಿ ಅರಮನೆಯ ಪೂರ್ವ ಭಾಗದ ರಿಪೇರಿ ಬಗ್ಗೆ ಸದರಿ ಭಾಗವು ಕೀಳಲ್ಪಡುತ್ತಿದೆ. ಇದರ ಹಳೇ ಮರದ ಸಾಮಾನುಗಳೂ, ಕಂಬ, ಮತ್ತು ಜೋಡು ಕಗಡುಗಳೂ ತಾ. 11—1—32ರಲ್ಲಿ ಕೋಟೆಯೊಳಗೆ ಹರಾಜು ಮಾಡಲ್ಪಡುವವೆಂದು ಪ್ರಕಟವಾಗಿದೆ.

ವೀರಾಜಪೇಟೆ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರಾದ ಮಿ. ಸುಬ್ರಹ್ಮಣ್ಯಮ್‌ರವರು 1½ ತಿಂಗಳು ರಜೆ ತೆಗೆದುಕೊಂಡಿರುವದರಿಂದ ಅವರ ಬದಲು ಹಂಗಾಮಿಯಾಗಿ ಮೆಮಂಡೇಪಂಡ ಯಸ್. ಬೋಪಯ್ಯನವರು ನೇಮಿಸಲ್ಪಟ್ಟಿರುವರು. ಇವರು ಕಳೆದ ಅಕ್ಟೋಬರಿನಲ್ಲಿ ನಡೆದ ಯಲ್. ಯಂ. ಪಿ ಪರೀಕ್ಷೆಯಲ್ಲಿ ಇಡೀ ಮದ್ರಾಸು ಪ್ರಾಂತ್ಯದಲ್ಲಿ 3ನೇಯವರಾಗಿ ಬಂದಿರುವರೆಂದು ಕೇಳಿ ಸಂತೋಷಪಡುತ್ತೇವೆ.

ಹಿಂದೂ ದೇಶ.

ಐರ್ಲೇಂಡಿನಲ್ಲಿ ತುಂಬಾ ಕೆಲಸ ಮಾಡಿದ ಸರ್ ಜಾನ್ ಆಂಡರ್ಸನ್‌ರವರು ಬಂಗಾಳದ ಮುಂದಿನ ಗವರ್ನರಾಗಿ ನೇಮಿಸಲ್ಪಟ್ಟಿರುವರು. ಇವರ ನೇಮಕವು ಹಿಂದೀಯರಲ್ಲಿ ಹಲವರಿಗೆ ಅತೃಪ್ತಿಯನ್ನುಂಟು ಮಾಡಿದೆ.

ಇಂಡಿಯಾ ಸರ್ಕಾರದ ಇಂಡಿಯನ್ ಸ್ಟೋರ್ಸ್ ಇಲಾಖೆಯವರು 20 ಸಾವಿರ ಲಾಠಿಗಳನ್ನು ಮಾಡಲು ಹುಕುಂ ಕೊಟ್ಟಿರುವರೆಂತಲೂ, ಇವು ಬಂಗಾಳ ಪ್ರಾಂತ್ಯದ ಪೋಲೀಸಿನವರ ಉಪಯೋಗಕ್ಕೆ ಆಗಿದಬಹುದೆಂತಲೂ ಸುದ್ದಿ.

ಇಂಡಿಯಾ ಮತ್ತು ಬಂಗಾಳ ಸರ್ಕಾರಗಳ ಕಡು ತರದ ಒತ್ತಾಯದಿಂದ ಬ್ರಿಟಿಷ್ ಮಂತ್ರಿ ಮಂಡಲಿಯವರು ಬಂಗಾಳ ಆರ್ಡಿನೆನ್ಸಿಗೆ ಒಪ್ಪಿಗೆಯನ್ನಿತ್ತರೆಂತಲೂ, ಇತ್ತೀಚಗ ಅದಕ್ಕೆ ವಿರೋಧವಾಗಿರುವ ಇಂಡಿಯಾದವರ ಅಭಿಪ್ರಾಯದ ಶಕ್ತಿಯನ್ನು ತಿಳಿಯ ಹತ್ತಿರುವರೆಂತಲೂ ಸುದ್ದಿ ಹುಟ್ಟಿದೆ.

ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನ 'ಹೋಮ್ ಮೆಂಬ' ರಾದ ಸರ್ ಜೇಮ್ಸ್ ಕ್ರೆರಾರವರು ಸರ್ ಯಸ್. ಯನ್. ಮಲ್ಲಿಕ್‌ರವರ ನಂತರ ಇಂಡಿಯಾ ಕೌನ್ಸಿಲು ಮೆಂಬರಾಗುವರೆಂತಲೂ, ಮಿ. ಎಮರ್ಸನ್‌ರವರು ಸರ್ ಜೆ. ಕ್ರೆರಾರವರ ಬದಲು 'ಹೋಮ್ ಮೆಂಬ' ರಾಗುವರೆಂತಲೂ ವರ್ತಮಾನ.

ಸಂಯುಕ್ತ ಪ್ರಾಂತ್ಯದ ಐದು ಜಿಲ್ಲೆಗಳಲ್ಲಿ ಈ ವಾರ ಗೇಣಿ ಕೊಡದ ಚಳವಳಿಯು ಪ್ರಾರಂಭಿಸಲ್ಪಡುವದು. ಇದಲ್ಲದೆ ಇನ್ನೂ ಏಳು ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಈ ಚಳವಳಿವನ್ನು ನಡಿಸಲು ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಪ್ಪಣೆ ಕೇಳಿರುವವು. ಸರ್ಕಾರದವರು ಇದನ್ನು ಎದುರಿಸಲಿಕ್ಕೆ ಏರ್ಪಾಡು ಮಾಡುತ್ತಿದ್ದಾರೆ

ಡೆಕ್ಕಾಡ ಮಿಟ್‌ಫರ್ಡ್ ಆಸ್ಪತ್ರೆಯ ಇಂಡಿಯನ್ ನರ್ಸ್‌ಗಳು ತಮ್ಮ ಬಟ್ಟೆಗಳನ್ನೂ, ಹಾಸಿಗೆಯನ್ನೂ ತಮ್ಮ ಬಿಡಾರಗಳಲ್ಲಿ ಬಿಸಿಲಿನಲ್ಲಿ ಒಣಗಿಸಲಿಕ್ಕೆ ಮೇಲಾಧಿಕಾರಿಗಳು ಬಿಡಲಿಲ್ಲವೆಂದು ಕೆಲಸಕ್ಕೆ ಹೋಗದೆ 'ಸತ್ಯಾಗ್ರಹ' ಮಾಡಿರುವರೆಂದೂ, ಇವರ ಬದಲಿಗೆ ಅಲ್ಲಿಗೆ ಬೇರೆ ನರ್ಸ್‌ಗಳನ್ನು ತರುವ ಏರ್ಪಾಡು ನಡೆಯುತ್ತಿದೆಯೆಂದೂ ವರ್ತಮಾನವಿದೆ

ನವಂಬರು 10ರಲ್ಲಿ ಸೇಂದಿ ಅಂಗಡಿ ಮುಂದೆ ಪಿಕೆಟ್ ಮಾಡುತ್ತಿದ್ದ ಇಬ್ರಾಹಿಂ ಬವ್ಕಾರ್ ಎಂಬ ಕಾಂಗ್ರೆಸ್ ಸ್ವಯಂ ಸೇವಕನು ಕುಡಿಯಲಿಕ್ಕೆ ಹೋದವರನ್ನು ತಡೆದದ್ದು ತಪ್ಪೆಂದು ದಸ್ತಗಿರಿ ಮಾಡಲ್ಪಟ್ಟನು ಕೇಸು ವಿಚಾರವಾದಾಗ್ಯೆ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು ಅಪರಾಧಿಯು ಅಹಿಂಸಾ ತತ್ವವನ್ನನುಸರಿಸಿ, ಕುಡಿಯದಂತೆ ಬೋಧನೆ ಕೊಟ್ಟದ್ದು ತಪ್ಪಲ್ಲವೆಂತ ಅವನನ್ನು ಬಿಡುಗಡೆ ಮಾಡಿದರು

ಮಹಾತ್ಮ ಗಾಂಧಿಯವರ ಬಹು ಆಪ್ತ ಸ್ನೇಹಿತರಾದ ಇಮಾಮ್ ಸಾಹೇಬರವರಿಗೆ ಕಾಯಿಲೆಯು ಜೋರಾಗಿದ್ದುದರಿಂದ ಗಾಂಧಿಜೀಯವರು ಈ ತಾ 28ರಲ್ಲಿ ಬೊಂಬಾಯಿಗೆ ತಲಪಿದ ಕೂಡಲೇ ಅಹ್ಮದಾಬಾದಿಗೆ ಹೊರಟು [illegible] ವರು. ಆದಕಾರಣ ಕಾಂಗ್ರೆಸ್ಸಿನ ಅಧ್ಯಕ್ಷರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗನ್ನು ಇದೇ ತಾ. 30ರಲ್ಲಿ ಅಹ್ಮದಾಬಾದಿನಲ್ಲಿ ನಡಿಸುವಂತೆ ನಿಶ್ಚಯಿಸಿರುವರು.

ಬಂಗಾಳ ಪ್ರಾಂತೀಕ ವಿಶೇಷ ಕಾನ್‌ಫರೆನ್ಸಿನಲ್ಲಿ ಎಲ್ಲಾ ಬ್ರಿಟಿಷ್ ಸಾಮಾನುಗಳನ್ನೂ, ಪರದೇಶೀ ಬಟ್ಟೆಯನ್ನೂ ಸಂಪೂರ್ಣ ಬಹಿಷ್ಕರಿಸುವ ಚಳವಳಿ ನಡಿಸಬೇಕೆಂದೂ, ಕಾಂಗ್ರೆಸ್ಸಿನ ಅಹಿಂಸಾ ತತ್ವವನ್ನೇ ಅನುಸರಿಸಬೇಕೆಂದೂ ತೀರ್ಮಾನಿಸಲಾದವು. ಈ ವಿಷಯವನ್ನು ಕುರಿತು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕೇಳಿದಾಗ ಯಾವ [illegible] ಚಳವಳಿಯನ್ನಾದರೂ ಎದುರುಗೊಳ್ಳಲು ಸರ್ಕಾರದವರು ಪೂರ್ಣ ಸನ್ನದ್ಧರಾಗಿರುವರೆಂದು ಇಂಡಿಯಾ ಸೆಕ್ರೆಟರಿಯವರು ಜವಾಬು ಕೊಟ್ಟಿರುವರು.

ಬರುವ ಕಾಂಗ್ರೆಸು ಮಹಾ ಸಭೆಯು ನಡೆಯಲಿಕ್ಕಿರುವ ಪೂರಿ ಪಟ್ಟಣದಲ್ಲಿ ತರಬೇತು ಹೊಂದುತ್ತಿರುವ ಸ್ವಯಂ ಸೇವಕರು ಮೆರವಣಿಗೆಯಾಗಲೀ, ನಾಲ್ಕು ನಾಲ್ಕಾಗಿ ನಡೆಕೊಂಡಾಗಲೀ ಹೋಗಕೂಡದೆಂದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಇ. ಕ್ರಿ. ಪ್ರೊ. ಕೋಡಿನ 144 ನೇ ಸೆಕ್ಷನ್ ಮೇರೆ ಹುಕುಂ ಮಾಡಿರುವರು. ಇದರಿಂದ ಕಾಂಗ್ರೆಸ್ಸಿನ ಮಹಾ ಸಭೆಯ ಕೆಲಸಕ್ಕೆ ಅಡಚಣೆಯಾಗಿದೆಯೆಂದೂ, ಇದು ಗಾಂಧಿ—ಇರ್ವಿನ್ ಒಪ್ಪಂದಕ್ಕೆ ಪೂರ್ತಿ ವಿರೋಧವಾಗಿದೆಯೆಂದೂ ಪಂಡಿತ ಜವಾಹಿರ್‌ಲಾಲ್‌ರವರು ಪ್ರಕಟಿಸಿರುವರು.

ಇಂಗ್ಲೆಂಡಿನ ಲಿಬರಲ್ ಪಕ್ಷದ ಮುಂದಾಳಾದ ಮಿ. ಲಾಯಿಡ್ ಜಾರ್ಜ್‌ರವರು ತಮ್ಮ ಆರೋಗ್ಯವನ್ನು ಮರಳಿ ಪಡೆಯಲು ಸಿಲೋನಿಗೆ ಹೋಗುವಾಗ್ಯೆ ತಾ 4ರಲ್ಲಿ ಬೊಂಬಾಯಿಯಲ್ಲಿ ಇಳಿದರು. ಆ ದಿನ ಅವರಿಗೆ ಬೊಂಬಾಯಿಯ ಕಾರ್ಪೊರೇಶನಿನವರು ಒಂದು ಬಿನ್ನಹ ಪತ್ರವನ್ನು ಒಪ್ಪಿಸಿದರು ಜಾರ್ಜ್‌ರವರು ಉತ್ತರವನ್ನಿತ್ತಾಗ್ಯೆ ಮಹಾತ್ಮ ಗಾಂಧಿಯವರು ದೊಡ್ಡ ರಾಜಕೀಯ ಪಟುಗಳು ಎಂದು ಅವರನ್ನು ಹೊಗಳಿದರು. ಅಲ್ಲದೆ ಅವರು ಸಿಲೋನಿಗೆ ಹೊರಡುವ ಮೊದಲು 'ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯುವ ಕಾಲ ಮಿತಿಯು ಹಿಂದೀಯರ ಕೈಯ್ಯಲ್ಲೇ ಇದೆ. ಹಿಂದೂಸ್ಥಾನದ ಬಗ್ಗೆಗಿನ ಕೋರಿಕೆಯನ್ನು ಬ್ರಿಟನ್ನಿಗೆ ತಿರಸ್ಕರಿಸಲು ಸಾಧ್ಯವಿಲ್ಲ' ವೆಂದು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು.

ಕಾಂಗ್ರೆಸ್ಸಿನ ಸೆಕ್ರೆಟರಿಯಾದ ಪಂಡಿತ ಜವಾಹಿರ್‌ಲಾಲ್ ನೆಹರುರವರು ಕಳೆದ ಸತ್ಯಾಗ್ರಹ ಚಳವಳಿಯಲ್ಲಿ ಜೈಲುವಾಸವನ್ನು ಅನುಭವಿಸಿದವರ ಸಂಖ್ಯೆಗಳನ್ನು ಸಂಗ್ರಹಿಸಿ ಈಗ ಪ್ರಕಟಿಸಿರುವರು. ಅಜಮೀರ್—150, ಆಂಧ್ರ—3 878, ಅಸ್ಸಾಂ—1,459, ಬಿಹಾರ್—14,251, ಬಂಗಾಳ—15,000, ಬೇರಾರ್—1,750, ಬೊಂಬಾಯಿ ಪಟ್ಟಣ—4,700, ಮಧ್ಯಪ್ರಾಂತ್ಯ ಹಿಂದೂಸ್ಥಾನೀ—2,255, ಮ. ಪ್ರಾ. ಮರಾಠಿ—907, ಡೆಲ್ಲಿ—4,500, ಗುಜರಾತು—3,549 ಕರ್ನಾಟಕ 1.900, ಕೇರಳ—450, ಮಹಾರಾಷ್ಟ್ರ—4,000, ಪಂಜಾಬು 12,000, ಸಿಂಧ—774 ತಮಿಳುನಾಡು—2,991, ಸಂಯುಕ್ತ ಪ್ರಾಂತ್ಯ—12651, ಮತ್ತು ಉತ್ಕಲ—1,009. ವಾಯುವ್ಯ ಪ್ರಾಂತ್ಯದ ಲೆಕ್ಕ ಸರಿಯಾಗಿ ಸಿಕ್ಕದಿರುವುದಿಲ್ಲವಾದರೂ ಅಲ್ಲಿ 4,000ವೆಂದು ಹೇಳಬಹುದು ಒಟ್ಟಾರೆ ಬರ್ಮಾ ವಿನಹ ಬಟ್ಟು ಹಿಂದೂಸ್ಥಾನದಲ್ಲಿ ಸತ್ಯಾಗ್ರಹದಲ್ಲಿ 91,124 ಜನರು ಕಾರಾಗೃಹವನ್ನು ಸೇರಿದ್ದರು. ಸಂಖ್ಯೆಗಳೆಲ್ಲವೂ ಕಡಿಮೆಯಾಗಿ ಅಂದಾಜು ಮಾಡಲ್ಪಟ್ಟಿರುವದರಿಂದ 100,000 ಜನರಾದರೂ ಕೈದಿಗಳಾಗಿದ್ದಿರಬಹುದು ಜವಾಹಿರ್‌ಲಾಲರವರ ಹೇಳಿಕೆ. ಇವರ ಪೈಕಿ 12,000 ಮುಸಲ್ಮಾನರೆಂದು ಅಂದಾಜು.

ವಿದೇಶ.

ದುಂಡು ಮೇಜು ಪರಿಷತ್ತಿನ ಕೆಲಸವನ್ನು ಇಂಡಿಯಾದಲ್ಲಿ ಮುಂದರಿಸಲು ನೇಮಿಸಲ್ಪಡುವ ಕಮಿಟಿಗಳ ಮೆಂಬರುಗಳ ಹೆಸರುಗಳು ಒಂದು ವಾರದೊಳಗೆ ಪ್ರಕಟಿಸಲ್ಪಡುವವೆಂದೂ, ಲಾರ್ಡ್ ಲೋಥಿಯನ್(?) ಮತ್ತು ಸರ್ ಪೆರ್ಸಿ ವಿನ್‌ಸೆಂಟರು ಅಧ್ಯಕ್ಷರುಗಳಾಗಿ ನೇಮಿಸಲ್ಪಡಬಹುದೆಂದೂ ಸುದ್ದಿ ಇದೆ.

ಗ್ರೇಟ್ ಬ್ರಿಟನ್ ದೇಶವು ಹೊರಗಿನಿಂದ ಬರುವ ಮಾಲಿಗೆಲ್ಲಾ ನೂರಕ್ಕೆ ೧೦೦ ರಂತೆ ಸುಂಕ ಹೆಚ್ಚಿಸಿರುವದರಿಂದ, ಅಮೇರಿಕವೂ ಕೂಡ ಇಂಗ್ಲೆಂಡಿಗೆ ಪ್ರತ್ಯುತ್ತರವೆಂದು ಇಂಗ್ಲೆಂಡಿನಿಂದ ಅಮೇರಿಕಾಕ್ಕೆ ಹೋಗುವ ಮಾಲಿಗೆಲ್ಲಾ ಇಂಗ್ಲೆಂಡಿನಲ್ಲಿ ಅಮೇರಿಕದ ಮಾಲಿನ ಮೇಲೆ ಹಾಕಿದಷ್ಟೇ ಸುಂಕವನ್ನು ಹಾಕಬೇಕೆಂದು ಅಲ್ಲಿಯ ಸರಕಾರವು ನಿರ್ಧರಿಸಿದೆ

ಮಹಾತ್ಮರು ತಾ. 5 ರಲ್ಲಿ ಲಂಡನಿನಿಂದ ಹೊರಟು ಪ್ಯಾರಿಸಿಗೆ ಬಂದು ಅಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಇಂಡಿಯಾದ ಅಹಿಂಸಾ ತತ್ವದ ಯುದ್ಧವನ್ನು ಜನ್ಮಾಗಿ ಪರಾಂಬರಿಸಿ ನೋಡಿ, ಅದು ಉತ್ತಮವಾದದ್ದಾದರೆ ಅದಕ್ಕೆ ಸಹಾನುಭೂತಿಯನ್ನು ತೋರಿಸಿರಿ ಎಂದು ಸರಿದಿಷ್ಟವಾಗಿ ಅಪ್ಪೀಲು ಮಾಡಿದರು. ನಂತರ ಜಿನೇವಾಕ್ಕೆ ಬಂದರು ಅಲ್ಲಿಂದ ವಿಲ್ಲೆನ್ಯೂವ್ ಎಂಬಲ್ಲಿಗೆ ರೋಮೇಯ್ನಾ ರೋಲೆಂಡ್ ರವರನ್ನು ಕಾಣಲು ಹೋದರು. ಆ ಮೇಲೆ ಲಾಸೇನ್ ಎಂಬಲ್ಲಿಗೆ ಹೋಗಿ ಕೆಲವು ಭಾಷಣಗಳನ್ನು ಮಾಡಿದರು. ಲಂಡನಿನಿಂದ ಜಿನೇವಾದ ವರೆಗೆ ಅವರೊಂದಿಗೆ ಇದ್ದ ಇಂಗ್ಲಿಷ್ ಗುಪ್ತಚಾರರು ಇದ್ದರು. ಅಲ್ಲಿಂದ ಈಗ ಇದ್ದು ಸ್ವಿಸ್ ಗುಪ್ತಚಾರರಿರುವರು.

ಪ್ರಧಾನ ಮಂತ್ರಿಯವರು [illegible] ಪಾರ್ಲಿಮೆಂಟಿನಲ್ಲಿ ನಡೆಸಿದ ಚರ್ಚೆಯ [illegible] ಅಂಗೀಕರಿಸುವ ರಾತ್ರಿ [illegible] ಪಾರ್ಲಿಮೆಂಟಿನ್ಲ್ಲಿ [illegible] ದೊಡ್ಡ ಬಹುಮತದಿಂದ [illegible]. ಈಗ ಲಾರ್ಡ್ಸ್ ಪಾರ್ಲಿಮೆಂಟಿನಲ್ಲಿ ನಡೆಯುತ್ತಿದೆ [illegible] ಮಾಜಿ ವೈಸರಾಯರಾದ ಲಾರ್ಡ್ ಇರ್ವಿನ್‌ರವರು [illegible] ಹಿಂದೀಯರ [illegible] ರಾಜಿ ಸಂಧಾನಗಳಿಂದ ಒಪ್ಪಂದಕ್ಕೆ [illegible] ಮಾರ್ಮಿಕ ಭಾಷಣ ಮಾಡಿದರು. [illegible] ಗಳನ್ನು [illegible] ಲಾರ್ಡ್ ನ್ಯಾಂಕಿ [illegible] ಹೇಳಿದರು.

ಮಹಾತ್ಮ ಗಾಂಧಿಯವರು ಈ ತಾ [illegible] ರಲ್ಲಿ ಲಂಡನಿನಿಂದ ಫ್ರಾನ್ಸಿಗೆ ಹೊರಟರು. ಹೊರಡುವ ಮುಂಚೆ ಪ್ರಧಾನ ಮಂತ್ರಿಯವರೊಂದಿಗೆ ಪೂರ್ಣ ಸಂಭಾಷಣೆ ನಡೆಯಿತು. ಬಂಗಾಳ ಆರ್ಡಿನೆನ್ಸಿನ ವಿಷಯ ಮಾತಾಡಿದ್ದರಲ್ಲಿ ಮಹಾತ್ಮರಿಗೆ ಮಂತ್ರಿಯವರ ಉತ್ತರವು ತೃಪ್ತಿಕರವಾಗಲಿಲ್ಲವೆಂದು ಸುದ್ದಿ. ಪ್ರಧಾನ ಮಂತ್ರಿಯವರ ಪ್ರಕಟನೆ ಮತ್ತು [illegible] ಪಾರ್ಲಿಮೆಂಟಿನಲ್ಲಿ [illegible] ಇಂಡಿಯಾದ ಸಮಸ್ಯೆಯು ಬಗೆಹರಿಯಲಿಲ್ಲ [illegible], ಕಾಂಗ್ರೆಸ್ಸು ಕೇಳಿದ ಬಗೆಯಾದ ಸ್ವಾತಂತ್ರ್ಯವು ದೊರೆಯುವಂತೆ ಕಾಣುವುದಿಲ್ಲವೆಂತಲೂ ಮಹಾತ್ಮರು ಅಭಿಪ್ರಾಯ ಕೊಟ್ಟಿರುವರು. ಅವರೂ [illegible] ದಲ್ಲಿ ಬರುವ ತೀರ್ಮಾನಕ್ಕೆ ಬರಬಹುದೆಂತಲೂ [illegible] ವಿಷಯಕ್ಕೆ ಬಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು [illegible] ತೆಗೆದುಕೊಳ್ಳುವ ವರೆಗೆ ಯಾವ ನಿಶ್ಚಯವನ್ನು ಹೇಳಲಾಗುವದಿಲ್ಲವೆಂತಲೂ ಅವರು ಹೇಳಿರುವರು.

ವಿನಂತಿ.

ಈ ತಾ 11 ಮತ್ತು 12ರಲ್ಲಿ [illegible]

[illegible]

ಕೆ. ಎ [illegible]

[illegible]

[—]

[illegible]

[illegible]

ಮದ್ರಾಸು ಕೊಡಗರ ಹುತ್ತರಿ.

ಮದ್ರಾಸು "ಕೂರ್ಗ್ ಅಸೋಸಿಯೇಶನ್" ನವರು ಹುತ್ತರಿ ಹಬ್ಬವನ್ನು ನವಂಬರ್ ತಾ. 29ನೇ ಆದಿತ್ಯವಾರ 'ರೆಡ್ ಹಿಲ್ಸ್' (Red Hills) ಕಾರ್ಪೋರೇಶನ್ ಬಂಗ್ಲೆಯಲ್ಲಿ ಬಹು ವಿಜೃಂಭಣೆಯಿಂದ ನಡೆಸಿದರು. ಸಂಘದ ಒಬ್ಬಿಬ್ಬರು ಮೆಂಬರರಲ್ಲದೆ ಬಾಕಿ ಎಲ್ಲರೂ ದಯಮಾಡಿಸಿದ್ದರು. ಮಾ. ರಾ. ಶ್ರೀ. ಚನ್ನಿರ ಕುಶಾಲಪ್ಪನವರು ಅತಿಥಿಗಳಾಗಿದ್ದರು.

ಹನ್ನೊಂದು ಗಂಟೆಗೆ ಸರಿಯಾಗಿ ಎಲ್ಲರೂ ಬಂಗಲೆಯಲ್ಲಿ ಸೇರಿದರು. ಸ್ಥಳದ ಪ್ರಕೃತಿ ಲಕ್ಷಣವು ಬಹು ರಮಣೀಯವಾಗಿದ್ದುದರಿಂದ, ನೆರೆದವರೆಲ್ಲಾ ಭೂಸೌಂದರ್ಯವನ್ನು ಸಂದರ್ಶಿಸಲು ಸ್ವಲ್ಪ ಹೊತ್ತು ಅತ್ತಿತ್ತ ಅಡ್ಡಾಡಿದರು. 12 ಗಂಟೆಗೆ ಸರಿಯಾಗಿ ಕದಿರು ತೆಗೆಯಲಾಯಿತು. ಆ ಮೇಲೆ ಕಾವೇರಿ ಮಾತೆಯನ್ನು ಸ್ತುತಿಸುವ ಒಂದು ಕೀರ್ತನೆಯನ್ನು ಹಾಡಿ ಎಲ್ಲರೂ ಭೋಜನಕ್ಕೆ ಕುಳಿತರು.

ಊಟವಾದ ಮೇಲೆ ಎಲ್ಲರೂ ಬಂಗಲೆಯ ನಡುಮನೆಯಲ್ಲಿ ನೆರೆದರು. ಸ್ವಲ್ಪ ಸಮಯ ಸಂಘದ ಕೆಲವು ಮೆಂಬರರು ಬಹು ಸ್ವಾರಸ್ಯವಾದ ಸಂಗೀತಗಳಿಂದ ಎಲ್ಲರನ್ನೂ ಆನಂದಪಡಿಸಿದರು. ಆ ಮೇಲೆ ಮಾ ರಾ ಶ್ರೀ. ಕೆ. ಟಿ. ಅಚ್ಚಯ್ಯನವರು ತಾನು ಜಪಾನಿನಿಂದ ಮ್ಯಾಂಸಿಗೆ ನಡೆಸಿದ ಪ್ರಯಾಣವನ್ನೂ, ತಾನು ಯೂರೋಪಿನಲ್ಲಿ ಸಂಗ್ರಹಿಸಿದ ವಿವಿಧ ಅನುಭವಗಳನ್ನೂ ಕುರಿತು ಮಾತಾಡಿದರು.

ಆ ಮೇಲೆ ಸ್ವಲ್ಪ ಹೊತ್ತು ಸಂಘದ ಕೆಲವು ಮೆಂಬರರು ಕೋಲು ಹೊಡೆದರು, ಕೆಲವರು ಕುಣಿದರು, ಕೆಲವರು ಇತರ ಆಟಗಳಲ್ಲಿ ಭಾಗಿಗಳಾದರು.

5 ಗಂಟೆಗೆ ಸರಿಯಾಗಿ ತಂಬಿಟ್ಟು ಮತ್ತು ಟೀ ಫಲಾಹಾರವಾಯಿತು. 'ಟೀ' ಯಾದ ಮೇಲೆ ಮಾ. ರಾ ಶ್ರೀ ಕೊಪ್ಪಿರ ನಂಜಪ್ಪನವರು ತಮ್ಮ ಸುಳ್ಳು ಇಂದ್ರಜಾಲ ವಿದ್ಯೆಯನ್ನು ತೋರ್ಪಡಿಸಿ, ಸಭೆಯವರನ್ನು ವಿನೋದ ಪಡಿಸಿದರು.

ಬಳಿಕ 6 ಗಂಟೆಗೆ ಸರಿಯಾಗಿ ಎಲ್ಲರೂ ತಮ್ಮ ತಮ್ಮ ವಾಹನಗಳನ್ನೇರಿ ಅವರವರ ನಿವಾಸ ಸ್ಥಾನಗಳಿಗೆ ಹೊರಟು ಹೋದರು.

ಪಿ. ಜಿ. ಐಯ್ಯಪ್ಪ,
(ಸೆಕ್ರೆಟರಿ.)

ವೀರಾಜಪೇಟೆ ಮೀಟಿಂಗು.

ರಿಟೈರ್ಡ್ ಮುನಸೀಫರಾದ ಮ॥ ಕೊರವಂಡ ಮುತ್ತಣ್ಣ ಬಾರ್. ಎಟ್. ಲಾ ರವರಿಗೆ ದಕ್ಷಿಣ ಕೊಡಗಿನವರು ಕೊಡತಕ್ಕ ಸತ್ಕಾರ ಕೂಟದ ಸ್ವಾಗತ ಕಮಿಟಿಯವರ ಮೀಟಿಂಗು ಮ॥ ಸಿ. ಯಸ್. ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಈ ಕೆಳಗಿನ ವಿಷಯಗಳು ತೀರ್ಮಾನವಾದವು.

(1) ಬಹೂ ಒಂದ ಹಣದ ತಪಶೀಲ್ ನೋಡಲಾಯಿತು. ಚಂದಾ ಪಟ್ಟಿಯನ್ನು ಪಡೆಕೊಂಡ ಗ್ರಾಮಗಳ ಮಹನೀಯರೂ ಬರುವ ಬುಧವಾರದೊಳಗೆ ತಮ್ಮ ಪಟ್ಟಿಯನ್ನು ಲೆಕ್ಕ ಸಮೇತ ಹಾಜರುಪಡಿಸಬೇಕೆಂದೂ, ಈ ವಿಷಯ ಜಾಯಿಂಟ್ ಸೆಕ್ರೆಟರಿಯವರು ನೋಟೀಸ್ ಕೊಡಬೇಕೆಂದೂ ತೀರ್ಮಾನವಾಯಿತು.

(2) ಸತ್ಕಾರ ಕೂಟವನ್ನು ಈ ತಾರೀಕು 23ನೇ ಬುಧವಾರ ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆ ತಾಲೋಕು ಕಚೇರಿ ಬಳಿ ನಡೆಸುವಂತೆಯೂ, ಈ ವಿಷಯವನ್ನು ಮ॥ ಸಿ. ಯಸ್. ಮುತ್ತಣ್ಣನವರಿಗೆ ಪ್ರೆಸಿಡೆಂಟರು ಬರೆದು ಸಮ್ಮತಿ ಪಡಕೊಳ್ಳುವಂತೆಯೂ, ಈ ಬಾಬಿನ ಮುಂದಣ ಏರ್ಪಾಡಿಗಾಗಿ ಹತ್ತು ಜನರಿಂದ ಕೂಡಿದ ಒಂದು ಕಮಿಟಿಯನ್ನು ಏರ್ಪಡಿಸುವಂತೆಯೂ, ಆಮಂತ್ರಣವನ್ನು ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು ಅಬ್ದುಲ್ ಗಫೂರ್ ಖಾನರವರ ಹೆಸರಿನಲ್ಲಿ ಪ್ರಿಂಟು ಮಾಡಿಸಿ ದಕ್ಷಿಣ ಕೊಡಗಿನವರಿಗೆಲ್ಲಾ ಹಂಚುವಂತೆಯೂ ತೀರ್ಮಾನವಾಯಿತು.

ವೀರಾಜಪೇಟೆ	ಸಿ. ಯಸ್. ಉತ್ತಯ್ಯ,
ತಾ. 9—12—31,	(ಸ್ವಾಗತ ಪ್ರೆಸಿಡೆಂಟರು,)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಬಾಡಗ ಗ್ರಾಮಸ್ಥರ ಮೀಟಿಂಗು.

ಅಯ್ಯಾ,

ಈ ತಾ. 5 ರಲ್ಲಿ ಬಾಡಗ ಗ್ರಾಮದಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಗ್ರಾಮಸ್ಥರೆಲ್ಲರೂ ಸೇರಿದ್ದರು. ಈಗ ಇಡೀ ಹಿಂದೂಸ್ಥಾನದಲ್ಲಿ ಉಂಟಾಗಿರುವ ಜನಜಾಗ್ರತಿಯನ್ನು ನೋಡಿ, ಇಲ್ಲಿಯವರೂ ಸುತ್ತು ಮುತ್ತಲು ನಡೆಯುತ್ತಿರುವ ವಿಷಯಗಳನ್ನು ತಿಳಿದುಕೊಂಡು ಜಾಗ್ರತಿಗೊಳ್ಳಲು ಇಂಥಾ ಮೀಟಿಂಗನ್ನು ನಡೆಸುವುದಾಗಿದೆ. ಗ್ರಾಮಾಭಿವೃದ್ಧಿಯನ್ನು ಕುರಿತು ಮ॥ ಎ ಎನ್. ಚಂಗಪ್ಪನವರೂ, ಈಗಿನ ಜನಾಂಗದ ಅವಸ್ಥೆಯನ್ನೂ, ಈಗಿನ ದಾರಿದ್ರ್ಯಾವಸ್ಥೆಗೆ ಕಾರಣಗಳನ್ನೂ ಕುರಿತು ಮ॥ ಅಪ್ಪಂಡೆರಂಡ ಐಯ್ಯಪ್ಪನವರೂ, ಮತ್ತು ಈಗಿನ ರಾಜಕೀಯ ಚಳವಳವನ್ನು ಕುರಿತು ಮ॥ ನಂಬುಡುಮಾಡ ಮುದ್ದಯ್ಯನವರೂ ಭಾಷಣ ಮಾಡಿದರು. ಗ್ರಾಮಾಭಿವೃದ್ಧಿಗೂ, ಜನ ಜಾಗ್ರತಿಗೂ ಇದೊಂದು ಉತ್ತಮವಾದ ಸಾಧನವೆಂಬುದರಲ್ಲಿ ಸಂಶಯವಿಲ್ಲ.

"ಹಾಜರಿದ್ದವ"

ಗುರುವಿಗೆ ಸತ್ಕಾರ.

ಮಹನೀಯರೇ,

ಇನ್ನು ಕೆಲವು ದಿವಸಗಳೊಳಗಾಗಿ ಮಡಿಕೇರಿಯ ಹೈಸ್ಕೂಲಿನ ಉಪಾಧ್ಯಾಯರಾದ ಮ॥ ಬಿ. ವೆಂಕಟರಾಮಯ್ಯನವರು ಉದ್ಯೋಗದಿಂದ ನಿವೃತ್ತರಾಗುವರೆಂದು ಎಲ್ಲರಿಗೂ ತಿಳಿದಿರಬಹುದು. ಇವರು ಕೊಡಗಿನಲ್ಲಿ ಸುಮಾರು ಮೂವತ್ತಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಕೊಡಗಿನ ವಿದ್ಯಾವಂತ ತರುಣರಲ್ಲಿ ಹೆಚ್ಚಿನವರು ಅವರ ವಿದ್ಯಾರ್ಥಿಗಳಾಗಿರುವರೆಂಬುವುದರಲ್ಲಿ ಸಂಶಯವಿರಲಾರದು. ಹಾಗಿರುವುದರಿಂದ ಈಗ ಅವರು ಉದ್ಯೋಗದಿಂದ ನಿವೃತ್ತರಾಗುವ ಸಮಯದಲ್ಲಿ ಅವರ ಹಳೇ ವಿದ್ಯಾರ್ಥಿಗಳು ಅವರನ್ನು ಯೋಗ್ಯ ರೀತಿಯಿಂದ ಸತ್ಕರಿಸಿ, ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಅವರ ಕರ್ತವ್ಯವಲ್ಲವೇ? ಇದನ್ನು ಮ॥ ವೆಂಕಟರಾಮಯ್ಯನವರ ಇತರ ಹಳೇ ವಿದ್ಯಾರ್ಥಿಗಳು ಆಲೋಚಿಸಬೇಕೆಂದು ಕೋರುವ,

"ಒಬ್ಬ ಹಳೇ ವಿದ್ಯಾರ್ಥಿ"

ಕೊಪವಂಡ ಅಪ್ಪಯ್ಯ ದೇವಯ್ಯ ಇನಾಮು

ಅಯ್ಯಾ,

ಮದ್ರಾಸು ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಇಂಗ್ಲಿಷಿನಲ್ಲಿ ಹೆಚ್ಚು ಮಾರ್ಕನ್ನು ಪಡೆಯುವ ಕೊಡವ ವಿದ್ಯಾರ್ಥಿಗಳಿಗೆ ಕೊಡಬೇಕೆಂದಿಟ್ಟಿರುವ ಕೊಪವಂಡ ಅಪ್ಪಯ್ಯ ದೇವಯ್ಯ ಪ್ರೈಸನ್ನು ಕೊಡಗ. ವಿದ್ಯಾರ್ಥಿಗಳು ಪಡೆಯಲಾಗಲಿಲ್ಲವೆಂಬ ತಪ್ಪು ಭಾವನೆಯಿಂದ ಇತರರಿಗೆ ಹಂಚುತ್ತಾರೆ. ಪರೀಕ್ಷೆಗೆ ಹೋಗಲು ಕಳುಹಿಸುವ ಫಾರಂನಲ್ಲಿ ಕೊಡಗು ವಿದ್ಯಾರ್ಥಿಗಳು ತಮ್ಮ ಕುಲವನ್ನು ಕಾಣಿಸದುದರಿಂದ ಯೂನಿವರ್ಸಿಟಿ ಅಧಿಕಾರಿಗಳು ಹೀಗೆ ತಪ್ಪು ಭಾವನೆ ಮಾಡಲು ಕಾರಣವಾಗಿದೆ. ಈ ವರ್ಷ ಇಬ್ಬರು ಕೊಡವ ಯುವಕರು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರಾದರೂ ಈ ಪ್ರೈಸ್ ಎರ್ನಾಕ್ಯುಲಮ್ ಕಾಲೇಜಿನಲ್ಲಿ ಓದುತ್ತಿದ್ದ ಮ॥ ರಾಮನ್ ಕುಟ್ಟಿಯವರಿಗೆ ಕೊಡಲ್ಪಟ್ಟಿದೆ. ಇನ್ನು ಮುಂದೆಯಾದರೂ ಕೊಡಗು ವಿದ್ಯಾರ್ಥಿಗಳು ತಮ್ಮ ಕುಲವನ್ನು "Coorg, Hindu" ಎಂದು ಕಾಣಿಸದೇಕಾಗಿ ಕೋರಿಕೆ.

'ಕೊಡಗ'

ಶೆಟ್ಟಿಗೇರಿ ಶಾಲೆ ಕಟ್ಟಡ.

ಅಯ್ಯಾ,

ನಮ್ಮ ಬಡ ಕುತ್ತುನಾಡು ಶಾಲೆಯ ವಿಷಯ ಏನೆಂದು ಬರೆಯಲಿ. ಈ ಶಾಲೆಯು, ಬಡ ಕುತ್ತು ನಾಡಿನವರಿಂದಲೂ ವಿದೇಶದವರಿಂದಲೂ ಭಿಕ್ಷೆ ಎತ್ತಿಯೂ, ಸರ್ಕಾರದವರಲ್ಲಿ ಹೋರಾಡಿ ಸ್ವಲ್ಪ ಸಹಾಯ ಪಡೆದೂ ಕಟ್ಟಿಸಿದ್ದಾಗಿದೆ. ಈ ಶಾಲೆಗೆ ಗಾಳಿಯ ಹೊಡೆತವನ್ನು ತಪ್ಪಿಸುವುದಕ್ಕಾಗಿ ಅದರ ಸುತ್ತಲೂ ನಾಲು ಮರಗಳು ನೆಡಲ್ಪಟ್ಟಿದ್ದವು. ಹಾವು ಚೇಳಿನ ಹಾವಳಿಯನ್ನು ತಪ್ಪಿಸುವ ಉದ್ದಿಶ್ಯ ಸದರಿ ನಾಲು ಮರಗಳನ್ನು ಕಳೆದ ವರ್ಷ ಸರ್ಕಾರದವರು ಕಡಿಸಿ, ಬೈಲು ಮಾಡಿಬಿಟ್ಟರು. ಆದುದರಿಂದ ಕಳೆದ ಮಳೆಗಾಲದಲ್ಲಿ ಮಳೆಯ ಎರಚಲಿನಿಂದ ಕಟ್ಟಡದ ಒಂದು ಭಾಗದ ಗೋಡೆಯು ಬಿದ್ದು ಹೋಯಿತು. ಈ ಬಿದ್ದ ಭಾಗವನ್ನು ದುರಸ್ತು ಮಾಡಲಿಕ್ಕೆ ಸದರಿ ಬಡ ಗ್ರಾಮಸ್ಥರಿಗೆ ಸಾಧ್ಯವೇ ಇಲ್ಲ. ಆದರೆ ಇದರ ರಿಪೇರಿ ಬಗ್ಗೆ ಸರ್ಕಾರದವರು ಇಷ್ಟರ ವರಗೆ ಏನೊಂದೂ ನಿಗವಿಟ್ಟಂತೆ ಕಾಣುವುದಿಲ್ಲ. ಸಂಬಂಧಪಟ್ಟ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರೂ, ಶಾಲಾ ಸ. ಅ. ಇನ್‌ಸ್ಪೆಕ್ಟರವರೂ ಈ ವಿಷಯವನ್ನು ಮನಸಿಗೆ ತೆಗೆದುಕೊಂಡು ಸದರಿ ಕಟ್ಟಡವನ್ನು ರಿಪೇರಿ ಮಾಡಿಸಿ ಕೊಟ್ಟು, ನಮ್ಮ ಬಡ ನಾಡಿನವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವರಾಗಿ ಕೋರುವ,

ಕಾ. ಚಿಣ್ಣಪ್ಪ.

ವಾಹನ ತೆರಿಗೆ.

ಅಯ್ಯಾ ಸಂಪಾದಕರೆ,

ಬೇಗನೆ ಕೊಡಗು ದೇಶದಲ್ಲಿಯೂ ಕೂಡ, ಇಡಿ ಮದ್ರಾಸು ಪ್ರಾಂತ್ಯದಲ್ಲೆಲ್ಲಾ ಜಾರಿಗೆ ತಂದಿರುವ ವಹಾನ ತೆರಿಗೆಯನ್ನು ಜಾರಿಗೆ ತರಬೇಕೆಂಬ ಸಲಹೆಯು ಹೆಚ್ಚುತಲಿದೆ. ಈ ತೆರಿಗೆಯು ಹೆಸರಿಗೆ ವಾಹನ ತೆರಿಗೆಯೆಂದಾದರೂ ಸರ್ಕಾರವು ಬಡ ಜನರಿಂದ ಅವರಿಗೆ ತಿಳಿಯದೆ ಎತ್ತುವ ಕಂದಾಯಗಳಲ್ಲಿ (Indirect Tax) ಒಂದಾಗಿರುತ್ತೆ. ಆದುದರಿಂದ ಆ ಕಂದಾಯವನ್ನು ತೆರುವ ಜನರು ಅದರ ವಿಷಯವಾಗಿ ಅಭಿಪ್ರಾಯವನ್ನು ಸೂಚಿಸುವುದು ಸರ್ಕಾರ ನಿಷ್ಪ್ರಯೋಜನದಾಗಲಾರದಾಗಿ ನಂಬುತ್ತೇನೆ.

ಯೋಚಿಸುತ್ತಲಿರುವ ಈ ವಾಹನ ತೆರಿಗೆಯ ಪಟ್ಟಿಯ ಪ್ರಕಾರ ಬಸ್ಸುಗಳು ಅವುಗಳ ಸ್ಥಳಗಳಿಗನುಸಾರವಾಗಿ ಸ್ಥಳ ಒಂದರ 44 ರೂಪಾಯಿ ಕಂದಾಯ ಕೊಡಬೇಕಾಗುತ್ತೆ. ಎಂದರೆ 15 ಸೀಟಿನ ಒಂದು ಬಸ್ಸು ವರ್ಷ ಒಂದರ 660 ರೂಪಾಯಿಯಷ್ಟು ಕಂದಾಯ ರೂಪದಲ್ಲಿ ಸರ್ಕಾರಕ್ಕೆ ಕೊಡಬೇಕಾಗುತ್ತೆ. ಇದಿಷ್ಟು ತೆರಿಗೆಯನ್ನೂ, ಬಸ್ಸಿನ ಒಂದು ವರ್ಷದ ಕ್ರಯವನ್ನೂ, ಅದರ ರಿಪೇರಿ, ಡ್ರೈವರ್ ಸಂಬಳ, ಪೆಟ್ರೋಲ್ ಖರ್ಚು, ಮತ್ತು ಇನ್ನೂ ಅನೇಕ ಚಿಲ್ಲರೆ ಖರ್ಚುಗಳನ್ನೂ ಇವುಗಳ ಮೇಲೆ ಬಸ್ಸು ಮಾಲೀಕರ ನ್ಯಾಯವಾದ ಲಾಭವನ್ನೂ ಕೊಡುವಂಥ ಬಸ್ಸು ಲೈನು ಕೊಡಗಿನಲ್ಲಿರುವುದಿಲ್ಲ. ಹೀಗಿರುವಾಗ ಬಸ್ಸುಗಳು ನ್ಯಾಯವಾಗಿ ಓಡಬೇಕಾದರೆ ಬಸ್ಸು ಚಾರ್ಜನ್ನು ಹೆಚ್ಚಿಸಬೇಕು. ಇಲ್ಲವೇ ಬಸ್ಸುಗಳು ಮೂಲೆಗೊತ್ತಲ್ಪಡಬೇಕು. ಬಸ್ಸು ಚಾರ್ಜನ್ನು ಹೆಚ್ಚಿಸಿದರೆ (According to law of returns) ಹೆಚ್ಚಿನ ಜನರು ಬಸ್ಸುಗಳನ್ನು ಪ್ರೋತ್ಸಾಹಿಸದೆ ಹೋಗುವರು.

ಹಾಗಾದರೆ ಮದ್ರಾಸು ಪ್ರಾಂತ್ಯದಲ್ಲಿ ಇದು ಹೇಗೆ ಸಾಧ್ಯವಾಗಿದೆ ಎಂಬ ಒಂದು ಪ್ರಶ್ನೆಯು ಬರಬಹುದು. ಮೊದಲನೆಯದಾಗಿ ಕೊಡಗಿನಲ್ಲಿಯ ಸರಾಸರಿ ಜನಸಂಖ್ಯೆಯು ಬಹಳ ಕಮ್ಮಿ. ಮದ್ರಾಸು ಪ್ರಾಂತ್ಯದಲ್ಲಿ ಚದರ ಮೈಲಿ ಒಂದರ ಸರಾಸರಿ 625ರಷ್ಟು ಜನರು ಇರುವರು. ಕೊಡಗಿನಲ್ಲಿ ಚ. ಮೈಲಿ ಒಂದರ ಬರೇ 102ರಷ್ಟು ಇರುವರು. ಇದರಲ್ಲಿಯೂ ಕೊಡಗಿನ ಹೆಂಗಸರು ಮದ್ರಾಸು ಪ್ರಾಂತ್ಯದಲ್ಲಿಯ ಹೆಂಗಸರಂತೆ ಬಸ್ಸುಗಳಲ್ಲಿ ಜಾಸ್ತಿ ತಿರುಗಾಡುವುದಿಲ್ಲ. ಎರಡನೆಯದಾಗಿ, ಅಲ್ಲಿಯ ಬಸ್ಸುಗಳು ಎರಡು ಮೂರು ಜಿಲ್ಲೆಗಳಿಗಾಗಿ ದಿನ ಒಂದರ ಹೆಚ್ಚು ಕಮ್ಮಿ 150 ಮೈಲಿಗಳಷ್ಟು ಓಡುತ್ತವೆ. ಹಾಗೆ ಓಡಲು ಕೊಡಗಿನಲ್ಲಿಯ ಬಸ್ಸುಗಳಿಗೆ ಅಸ್ಪದವಿಲ್ಲ. ಕೊಡಗಿನಲ್ಲಿಯ ಬಸ್ಸುಗಳು ದಿನ ಒಂದರ ಸರಾಸರಿ 50 ಮೈಲಿಗಿಂತ ಹೆಚ್ಚು ಓಡುವುದಿಲ್ಲ. ಮೂರನೇಯದಾಗಿ ಮದ್ರಾಸಿನಲ್ಲಿ ಈ ತೆರಿಗೆಯು ವಿಪರೀತವಾಗಿ ಹೋಗಿದೆ ಎಂಬದಾಗಿ ಚಳವಳವು ನಡೆಯುತ್ತಲಿದೆ.

ಅಲ್ಲಲ್ಲಿ ಸುಂಕ ಕೊಡುವ ದೊಡ್ಡದೊಂದು ತೊಂದರೆಯನ್ನು ಇಲ್ಲದೆ ಮಾಡಿ, ಸುಂಕದಿಂದ ಮಧ್ಯಸ್ಥರು ಹೊಂದುವ ಲಾಭಕ್ಕೆ ಸರ್ಕಾರವೇ ಅರ್ಹರಾಗುವಂತೆ ಕಂಡು ಹಿಡಿದ ಈ ವಾಹನ ತೆರಿಗೆಯ ಉಪಾಯವು ಉತ್ತಮವೇ. ಆದಾಗ್ಯೂ ಮದ್ರಾಸು ಅಧಿಪತ್ಯದಲ್ಲಿ ಈಗ ತಾನೇ ಆರಂಭಿಸಿ ಇನ್ನೂ ಶೋಧನೆಯಲ್ಲಿರುವ ಈ ಮಾರ್ಪಾಟನ್ನು ಅವರಲ್ಲಿಯ ಪ್ರಯತ್ನದ ಫಲಿತಾಂಶವನ್ನು ನೋಡದೆ, ಮದ್ರಾಸು ಪ್ರಾಂತ್ಯದಲ್ಲಿಯ ಸರಾಸರಿ ಶೇಕಡ 20ರಷ್ಟು ಜನಸಂಖ್ಯೆ ಇಲ್ಲದ ಕೊಡಗಿನಲ್ಲಿ ಅವಿವೇಕದಿಂದ ಜಾರಿಗೆ ತಂದರೆ ಅದರ ಫಲಿತಾಂಶವು ಬಾಧಕವಾಗಿಯೂ ಅಸಹಜಯವೇ. ಈ ಕಾನೂನನ್ನು ಜಾರಿಗೆ ತಂದರೆ ಕೊಡಗಿನಲ್ಲಿಯ ಬಸ್ಸುಗಳೆಲ್ಲವೂ ಮೂಲೆಗೆ ಸೇರಿ ನಮ್ಮ ಬಸ್ಸು ಲೈನುಗಳೆಲ್ಲವೂ ಪರದೇಶದವರ ಒಂದೆರಡು ಬಲಾಢ್ಯ ಬಸ್ಸು ಕಂಪೆಯವರ ಕೈ ಸೇರುವುದರಲ್ಲಿ ಯಾವ ಸಂದೇಹವೂ ಇಲ್ಲ. ಹೀಗಾಗಿ ಕೊಡಗಿನಿಂದ ವರ್ಷಂಪ್ರತಿಯೂ ಲಕ್ಷಗಟ್ಟಲೆ ರೂಪಾಯಿಗಳು ಹೊರಗೆ ಹೋಗಿ ಕೊಡಗಿನ ಜನರು ಮತ್ತಷ್ಟು ಬಡವರಾಗುವರು.

ಸರ್ಕಾರದವರಿಗೂ ಕೂಡ ಮೊದಲಿನ ಒಂದು ವರ್ಷದಲ್ಲಿ ಮಾತ್ರ ಈ ಉಪಾಯವು ದೊಡ್ಡದೊಂದು ಉತ್ಪತ್ತಿಯನ್ನು ತೋರಿಸಬಹುದಲ್ಲದೆ ಬಸ್ಸುಗಳು ಕ್ರಮೇಣ ಕಮ್ಮಿಯಾಗುವುದರಿಂದ ಅದರಂತೆ ಸರ್ಕಾರದ ಉತ್ಪತ್ತಿಯೂ ಕಮ್ಮಿಯಾಗುವುದು. ಆದುದರಿಂದ ಈ ವಿಷಯದಲ್ಲಿ ಹೆಚ್ಚು ಆಲೋಚಿಸಿ ಈ ತೆರಿಗೆಯನ್ನು ಸೀಟು ಒಂದರ 15 ರೂಪಾಯಿಗಳಿಗಿಂತ ಕೊಂಚವೂ ಏರಿಸಲಿಕ್ಕಿಲ್ಲವಾಗಿ ಪೂರಾ ನಂಬುವ.

ಕೆ. ಯಂ. ಪೂವಯ್ಯ.

ರಾಷ್ಟ್ರಕಾರ್ಯದಲ್ಲಿ ಸರ್ಕಾರೀ ನೌಕರರ ಕರ್ತವ್ಯವು

ಅಯ್ಯಾ,

ಮೇಲಿನ ಶಿರೋನಾಮೆಯ ಲೇಖನ ಒಂದನ್ನು "ಕರ್ಮವೀರ" ಪತ್ರಿಕೆಯಲ್ಲಿ ಓದಿದಾಗ, ಅದರಲ್ಲಿರುವ ಕೆಲವು ವಿಷಯಗಳು ನಮ್ಮ ಈ ಪ್ರಾಂತ್ಯದ ಸರ್ಕಾರೀ ಉದ್ಯೋಗಸ್ಥರಿಗೆ ಚೆನ್ನಾಗಿ ಅನ್ವಯಿಸುವದೆಂದು ತೋರಿದ್ದರಿಂದ ಅದರ ಆಧಾರದಿಂದ ಬರೆದ ಈ ಬಾತ್ಮಿಯನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಕಳುಹಿಸಿದ್ದಾಗಿದೆ.

ನಮ್ಮ ಭರತ ಖಂಡದಲ್ಲಿ ಬ್ರಿಟಿಷ್ ಸರ್ಕಾರದ ಆಡಳಿತಕ್ಕೆ ನಮ್ಮ ಹಿಂದೀ ಜನರೇ ಮೂಲಾಧಾರರಾಗಿದ್ದಾರೆ. ಪೋಲೀಸು, ಸೈನ್ಯ, ರೆವೆನ್ಯೂ, ಅಬ್ಕಾರಿ ಮುಂತಾದ ಎಲ್ಲಾ ಇಲಾಖೆಗಳಲ್ಲೂ ನಮ್ಮ ಜನರೇ ಹೆಚ್ಚಾಗಿದ್ದಾರೆ. ಈ ಎಲ್ಲಾ ಇಲಾಖೆಗಳ ಆಡಳಿತವನ್ನು ನಡಿಸಲು ಇಂಗ್ಲೆಂಡಿನಿಂದಲೇ ಜನರೆಲ್ಲರನ್ನು ತರಲು ಸಾಧ್ಯವಿಲ್ಲ. ಕಮಿಷನರು ಯಾ ಕಲೆಕ್ಟರು ಹೊರಗಿನವರಾದರೂ ಅವರ ಕೈಕೆಳಗೆ ಕೆಲಸ ಮಾಡುವ ಚಿಕ್ಕ ಚಿಕ್ಕ ಉದ್ಯೋಗಸ್ಥರೂ, ಗುಮಾಸ್ತರುಗಳೂ, ಮನೆಯಲ್ಲಿ ಅಡಿಗೆ ಮಾಡುವ ಬಟ್ಲರುಗಳೂ, ಪ್ಲೋಟೀನಲ್ಲಿ ಕೆಲಸ

...ನಡುವ ಕೂಲಿಗಾರರೂ, ಮೋಟಾರು ನಡಿಸುವ ಡ್ರೈವರ ರೂ, ಇವರೆಲ್ಲರೂ ಹಿಂದೀಯರೇ. ಇವರೆಲ್ಲರ ಸಹಾಯವಿಲ್ಲದೆ ಆಡಳಿತವು ಒಂದು ದಿನವೂ ನಡೆಯಲಾರದು.

ಸರ್ಕಾರೀ ಉದ್ಯೋಗಸ್ಥರು ಸಹಾಯ ಮಾಡಿದರೆ ನಮಗೆ ಒಡನೆ ಸ್ವರಾಜ್ಯ ದೊರೆಯುವದೆಂದು ಹಳ್ಳಿಗಾಡಿನ ಜನರು ಹೇಳುತ್ತಿರುವರು. ಆದರೆ ವಿದ್ಯಾಹೀನರಿಗಿಂತ ವಿದ್ಯಾವಂತರು ಹೆಚ್ಚಿನ ಸ್ವಾರ್ಥಪರರೆಂದು ಹಳ್ಳಿಯವರಿಗೆ ತಿಳಿಯದೆಂದು ತೋರುತ್ತೆ! ಸರ್ಕಾರಿ ನೌಕರಿಗೆ ಸೇರದವರಿಗೇನೇ ರಾಷ್ಟ್ರಹಿತ ಬುದ್ಧಿ ಇರುವದೆಂದಲ್ಲ. ಆದರೆ ಸರ್ಕಾರಿ ನೌಕರಿಯೇ ತಮ್ಮ ಜೀವನವನ್ನು ನಡಿಸಲು ಇರುವ ಉತ್ತಮವಾದ ದಾರಿಯೆಂದು ಅವರು ನಂಬಿರುತ್ತಾರೆ. ವ್ಯವಸಾಯದಲ್ಲಿ ಉತ್ಪತ್ತಿ ಇಲ್ಲ; ವ್ಯಾಪಾರದಲ್ಲಿ ಲಾಭವಿಲ್ಲ. ಸರ್ಕಾರಿ ಉದ್ಯೋಗದಲ್ಲಾದರೆ ತಿಂಗಳು ಗಟ್ಟಿ ಸಂಬಳ ಬರುತ್ತೆ. ಈ ಸಂಬಳವನ್ನು ಪೋಷಿಸಿ ಹಲವು ವಿದ್ಯಾವಂತರು, ರಾಷ್ಟ್ರೀಯ ಭಾವನೆ ಇರುವವರು, ಬುದ್ಧಿವಂತರು ನೌಕರಿಯನ್ನು ಸೇರಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ಸರ್ಕಾರಿ ನೌಕರರೆಲ್ಲರೂ ರಾಷ್ಟ್ರಹಿತ ಬುದ್ಧಿಯುಳ್ಳವರೂ ಅಲ್ಲ. ಅವರಲ್ಲಿ ಹಲವರು ರಾಷ್ಟ್ರಾಭಿವೃದ್ಧಿಯಲ್ಲಿ ಸಹಾನುಭೂತಿಯುಳ್ಳವರಾಗಿದ್ದಾರೆ ಮತ್ತು ಇಂಥವರು ಉದ್ಯೋಗದಲ್ಲಿರುವದು ರಾಷ್ಟ್ರಹಿತದ ದೃಷ್ಟಿಯಿಂದ ಒಳ್ಳೆಯದೇ. ಸರ್ಕಾರಿ ನೌಕರಿಯೆಂದರೆ ಅದೊಂದು ಕಂಟ್ರಾಕ್ಟು. ಇಂತಿಷ್ಟು ಕೆಲಸಕ್ಕೆ ಇಂತಿಷ್ಟು ಸಂಬಳವೆಂಬ ಒಪ್ಪಂದವದು. ನೌಕರಿಗೆ ಸೇರಿದಾಕ್ಷಣ ಯಾರೂ ತನ್ನ ಆತ್ಮವನ್ನು ಸರ್ಕಾರಕ್ಕೆ ಮಾರಿಕೊಳ್ಳುವುದಿಲ್ಲ. ತನಗೆ ದೊರೆಯುವ ಸಂಬಳಕ್ಕೆ ಕಾರ್ಯದಕ್ಷತೆಯಿಂದ ಕೆಲಸ ಮಾಡಬೇಕಾದದ್ದು ನೌಕರನ ಕರ್ತವ್ಯ. ಆದರೆ ದೇಶದ ಹಿತವನ್ನು ವಿರೋಧಿಸುವ ಮತ್ತು ರಾಷ್ಟ್ರದ ಸುಖವನ್ನು ಸಾಧಿಸುವದಿಲ್ಲವೆಂಬ ಕರಾರೇನೂ ನೌಕರನು ಸರ್ಕಾರಕ್ಕೆ ಬರೆದುಕೊಟ್ಟಿಲ್ಲ. ಉದ್ಯೋಗಸ್ಥನು ಸರ್ಕಾರದ ಸಹಕಾರಿಯು, ದಾಸನಲ್ಲ. ಆದುದರಿಂದ ತಾನು ಸರ್ಕಾರದವರು ಕೊಡುವ ಸಂಬಳಕ್ಕೆ ಸಂಬಂಧಿಸಿದ ಕೆಲಸವನ್ನು ಮಾಡುತ್ತಾ, ನ್ಯಾಯದ ನಿಯಮಗಳಿಗೆ ಸೇರುವ ರಾಷ್ಟ್ರದ ಕಾರ್ಯವನ್ನೂ ನೌಕರನು ಮಾಡಬೇಕು.

ಸರ್ಕಾರೀ ನೌಕರನು ತನ್ನ ನಿಯಮಗಳಿಗೆ ವಿರೋಧವಿಲ್ಲದೆ ಯಾವ ತರಹದ ರಾಷ್ಟ್ರ ಕಾರ್ಯಗಳನ್ನು ಮಾಡಬಹುದೆಂದು ಹೇಳಬೇಕೆ? ಅವನಲ್ಲಿ ನಿಜವಾದ ದೇಶಭಕ್ತಿ ಇದ್ದರೆ ಅವನು ಹಲವು ರಾಷ್ಟ್ರೋದ್ಧಾರದ ಕಾರ್ಯಗಳನ್ನು ಮಾಡಬಹುದು. ಅವನು ಪರದೇಶೀ ಬಟ್ಟೆಗಳನ್ನು ಬಹಿಷ್ಕರಿಸಿ, ಖಾದೀ ಮತ್ತು ಸ್ವದೇಶೀ ಬಟ್ಟೆಗಳಿಗೇನೇ ಉತ್ತೇಜನ ಕೊಡಬಲ್ಲನು. ತನ್ನ ಮಕ್ಕಳಿಗೆ ರಾಷ್ಟ್ರಭಕ್ತಿ ಹುಟ್ಟುವಂಥ ವಿದ್ಯಾಭ್ಯಾಸವನ್ನೇ ನೀಡಿಸಬಲ್ಲನು. ರಾಷ್ಟ್ರೀಯ ಸಂಸ್ಥೆಗಳಿಗೂ, ದೇಶೋದ್ಧಾರದ ಕಾರ್ಯಗಳಿಗೂ ದ್ರವ್ಯ ಸಹಾಯ ಮಾಡಬಲ್ಲನು. ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ಖಾದೀ ಪ್ರಚಾರ ಮುಂತಾದ ಜನೋದ್ಧಾರದ ಕೆಲಸಗಳಿಗೆ ಸಹಾಯ ಮಾಡಬಲ್ಲನು. ಹಿಂದೀಯನಾಗಿ, ಹಿಂದೂಸ್ಥಾನದ ಅಭಿವೃದ್ಧಿಯ ವಿಚಾರದಲ್ಲಿ ನಿರತನಾಗಿ, ತನ್ನ ಸುತ್ತ ಮುತ್ತಲು ರಾಷ್ಟ್ರೀಯ ವಾತಾವರಣವನ್ನು ನಿರ್ಮಿಸಬಲ್ಲನು. ಶಾಂತಿಯದೆ ಭಂಗದಂಥ ಸರ್ಕಾರದ ಬುಡವನ್ನು ಕತ್ತರಿಸಲು ಮಾಡುವಂಥ ಚಳವಳದಲ್ಲಿ ಭಾಗ ತೆಗೆದುಕೊಳ್ಳದೆ, ಸರ್ಕಾರದ ನಿಯಮದ ಮೇರೆ ವಿಚಾರಿಸಿದರೂ ತಪ್ಪಲ್ಲದ ರಾಷ್ಟ್ರ ಕಾರ್ಯಕ್ಕೆ ತನು ಮನ ಧನದಿಂದ ಸಹಾಯ ಮಾಡಬಲ್ಲನು.

ಈಗಿನ ಸರ್ಕಾರಿ ಉದ್ಯೋಗಸ್ಥರಲ್ಲಿ ದೇಶೋದ್ಧಾರದ ಕಾರ್ಯಗಳಲ್ಲಿ ಸಹಾನುಭೂತಿ ಇರುವವರು ಹಲವರು ಇರುವುದು ಸಂತೋಷದ ಮಾತಾಗಿದೆ. ಆದರೆ ಅಂಥವರೇ, ಪರದೇಶೀ ಬಟ್ಟೆಯ ಯಾ ವಿಲಾಸ ಪದಾರ್ಥಗಳ ಮೋಹದಿಂದಲೋ, ಅಥವಾ ಮೇಲಧಿಕಾರಿಗಳ ಹೆದರಿಕೆಯಿಂದಲೋ ಪರದೇಶೀ ಅಂಗಿಗಳನ್ನು ಉಡುತ್ತಲೂ, ವಿಲಾಸ ಸೇವನೆ ಮಾಡುತ್ತಲೂ ಇರುವರು. ಇದು ಘೋರ ತಪ್ಪು. ವಿಲಾಸ ಸೇವನೆ ಮಾಡಬೇಕೆಂದೂ, ಪರದೇಶೀ ಬಟ್ಟೆಯನ್ನೇ ಉಡಬೇಕೆಂದೂ ಯಾವ ಅಧಿಕಾರಿಯೂ ಹೇಳಲಾರನು. ಹಾಗೆ ಹೇಳಿದರೂ ಅದು ಸರ್ಕಾರಿ ನಿಯಮವನ್ನನುಸರಿಸಿದ್ದಲ್ಲ. ಹೆದರಿಕೆಯಿಂದ ಹೀಗೆ ವರ್ತಿಸುವವರ ಮನಸ್ಸಿನಲ್ಲಿರುವ ಸಹಾನುಭೂತಿಯಿಂದ ರಾಷ್ಟ್ರಕ್ಕೆ ಏನೂ ಪ್ರಯೋಜನವಾಗಲಾರದು.

ಸಾಮಾನುಗಳ ಕ್ರಯವು ಇಳಿದಿರುವ ಈ ಕಾಲದಲ್ಲಿ ದೊಡ್ಡ ಸಂಬಳದ ಉದ್ಯೋಗಸ್ಥರಲ್ಲಿ ಹಣದ ಉಳಿತಾಯವು ಹೆಚ್ಚಾಗುತ್ತದೆ. ನಮ್ಮ ಸಂಬಳವು ಹಗಲಿರುಳು ಮಳೆ ಬಿಸಿಲೆನ್ನದೆ ಕಷ್ಟ ಪಡುವ ರೈತರಿಂದ ಬರುತ್ತದೆಂಬುದನ್ನು ಈ ಉದ್ಯೋಗಸ್ಥರು ಲಕ್ಷ್ಯಕ್ಕೆ ತಂದುಕೊಂಡು, ಆ ಬಡ ರೈತರ ಹಿತಕ್ಕಾಗಿ ತಮ್ಮ ಸಂಬಳದಲ್ಲಿ ಕೆಲವು ಭಾಗವನ್ನು ಯಾವದಾದರೊಂದು ಸತ್ಕಾರ್ಯದಲ್ಲಿ ಉಪಯೋಗಿಸಬೇಕು. ‘ಈಗ ನಡೆಯುತ್ತಿರುವ ಹೋರಾಟವು ನಮಗಾಗಿ, ನಮ್ಮ ಮಕ್ಕಳಿಗಾಗಿ. ನಾವು ಯಾವುದಾದರೊಂದು ವಿಧದಲ್ಲಿ ನಮ್ಮ ರಾಷ್ಟ್ರಕ್ಕೆ ನೆರವಾಗಿ, ರಾಷ್ಟ್ರ ಋಣವನ್ನು ತೀರಿಸಲೇ ಬೇಕು. ಇಲ್ಲವಾದರೆ ನಾವೆಲ್ಲರೂ ಅಧೋಗತಿಯನ್ನು ಹೊಂದುವೆವೆಂಬುದನ್ನು ಯಾವ ಉದ್ಯೋಗಸ್ಥನೂ ಮರೆಯಬಾರದಾಗಿ ವಿನಂತಿ.

" ವಾಚಕ "

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಸ್ಥೆ.

ಅಧ್ಯಕ್ಷರು:—ಮಾನನೀಯ ಸರ್ ಚುನ್ನಿಲಾಲ ಭಾಯಿ ಸಾಮುಲದಾಸ್,

ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಜೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2 ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಜೋತೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೊಲಿಸಿದಾರರಿಗೆ ಪೊಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಆಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭಾರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡಿಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಇಂದು ಭಾಗಿಗಳಾಗಿರಿ; ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರೆರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೊಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ಹುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—

ಜೆಂಪಲ್ ಸ್ಟ್ರೀಟ್,

ಮಡಿಕೇರಿ. (26—8)

ಬಿ. ಎಸ್. ಐಯ್ಯಪ್ಪ,

ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಡ್ವೇರಿಯಂ ವ್ಯಾಪಾರಿಗಳು, ಮೈಸೂರು.

1 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಹಿಂದೊಂಬಸ್ತಾದ ಫೌಂಟೆನ್ ಪೆನ್‌ಗಳು.

ವ್ಯಾನ್ಗಾರ್ಡ್ ಫೌಂಟನ್‌ಪೆನ್ 1ಕ್ಕೆ	ರೂ 3	0	0
„ ಬಿಗ್ ಎನ್ಯಾಮಲ್ ಪೆನ್ 1ಕ್ಕೆ	3	3	0
„ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಟಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0
„ ಮೊಟಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
„ ಸೆಲ್ಫ್ ಫಿಲ್ಲಿಂಗ ಮಾಡಲ್ ಆಧುನ ಫ್ಯಾನ್ಸಿ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
ಬಿಗ್ ಸ್ವಾನ್ ಫೌಂಟನ್‌ಪೆನ್ 1ಕ್ಕೆ	10	8	0
ಸ್ವಾಲ್ಡರ್ ಪೆನ್ 1ಕ್ಕೆ	14 6 0, & 20	10	0
ವಿನ್ಸಟ್‌ಬರ್ ಫೌಂಟನ್‌ಪೆನ್ 1ಕ್ಕೆ	3 8 0, & 3	12	
ಸ್ವಾನ್ ಫೌಂಟನ್ ಪೆನ್ 1ಕ್ಕೆ	6 4 0, & 6	12	0
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಾದಾ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಗಿಳಿಯಾ ಆಕಾರದ ಟೈಂಪೀಸ 1ಕ್ಕೆ 6 9 &	6	15	0
ಗಿಳಿಯಾ ಸಣ್ಣಸ್ಟೈಲಿನ ಆಕಾರದ ಟೈಂಪೀಸ್ 1ಕ್ಕೆ	7	2	0
ಗಿಳಿ ಯ ಆಕಾರದ ಸಣ್ಣ ಟೈಂಪೀಸ್ ರೇಡಿಯಂ ಟೈಮಿನ 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ರೈಕಿಂಗ್ ‘ರಾತ್ರಿ ಕಾಣುವ’ ಯಾದ ಟೈಂಪೀಸ್ 1ಕ್ಕೆ	13	4	0
ರಾತ್ರಿಯೂ ಒಂದೊಂಬಸ್ತಿನ ಆಡ ಪಾಕೆಟ್ ವಾಚ್ 1ಕ್ಕೆ	5	10	0
ಹಿಟೋ ನಮೂನೆಯಲ್ಲಿ ಎಬ್ರಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 &	12	8	0

ಇಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್ ಕ್ಲಾಕ್ಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅಲಾಯಿದಾ.

ಮುಖ್ಯ ಏಜೆಂಟರ್ ದರ್ಶನ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

52—24

ಹಾರ್ಡ್ವೇರಿಯಂ ವ್ಯಾಪಾರಿಗಳು ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕ್,
ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜನೊಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5.0–0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು,	ಟ್ರೆಜರರ್
ಕೇ. ವಂಡ ಅಪ್ಪಯ್ಯನವರು ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಬಿನ್ ವೆಂಕಪ್ಪಯ್ಯನವರು, ಬಿ.ಎ. ಬಿ.ಎಲ್
ತಾರೀಕು 1–7–1931.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಕೊ. ಚಾರಿಯ ಮೊಣ್ಣಯ್ಯನವರು,
ದಕ್ಷಿಣ ಕೊಡಗಿಗೆ—ಮೆ ಸೋಮೆಯಂಡ ಅಪ್ಪಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ಪಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ–ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಬಿ ಮುದ್ದಮ್ಮಯ್ಯನವರು,
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ ಬಿ. ಮಾಚಮ್ಮಯ್ಯನವರು,
ಬಿಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಪೂಣಚ್ಚಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಒಂದಾನು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಬಾಕಿದಾರರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಏರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದು
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದಲ್ಲಿದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚನಾಪಳ್ಳಿ
ಬೊಂಬಾಯಿ	ಗೌಲಗಾನ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52-

ಎಂಪೈರ್ ಆಫ್ ಇಂಡಿಯಾ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ ! ಬೋನಸ್ ವರ್ಷ !!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು —	ಬ್ರಾಂಚ್ ಆಫೀಸು —
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.	152–3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

52–14



26–20

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ. ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

52–48

Printed & published by P. I Belliappa at "Kodagu" Press, Merca[ra] for "Kodagu" Ltd

If not delivered please return to "KODAGU" OFFICE MERCARA.

ಕೊಡಗು.

ಸರ್ವೇಷ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತಯಾ । ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೧ನೇ ಇಸವಿ ಡಿಸೆಂಬರ್ ತಾರೀಕು ೧೮ ನೇ ಶುಕ್ರವಾರ. ಸಂಚಿಕೆ ೫೦

V. Subramaniyer Jeweller.

Telephone — 3135

'DIAMAND MERCHANT GOLD & SILVER SMITH.

Deals in all :—

SPORTS CUPS in all prices
MEADALS in up-to-date patterns
CASKETS in elegant styles

Nos 2 & 3, Kuppamuthu st,
TIRUVATESWARANPET,
Post Box 423, Triplicane P. O.,
MADRAS.

Deals in all :—

GEM SET JEWELS, set with Diamonds Rubies etc,
GOLD ARTICLES of all patterns
SILVER WARE in latest style.

52—4



ಕೋವಿಗಳು, ಕತ್ತಿಗಳು, ಚಾಕುಗಳು, ತೋಟೆ [illegible] ಸಾಮಾನುಗಳು ಬಹು ಕಡಮೆ ದರದಲ್ಲಿ ದೊರೆಯುವವು.

GOOLAMHUSAIN ALI SHOY [illegible]
Largest Importers of Firearms and Ammunition
Cheapest priced firm in India,
21—13 210 Abdul Rehman Street BOMBAY.

ಕಟಿರೋಗ ಕಷಾಯ:— [illegible] ಬರುವ ಜ್ವರ [illegible] ರೂ. 1—3—0, [illegible] ರೂ. 4—0—0, [illegible] ರೂ. 7—8—0 [illegible] ರೂ. 14

ರತಿ ಕಷಾಯ

[illegible] 1, 3 [illegible] ರೂ. 1—3—0 3—8—0 [illegible]

ರೋಮನಾಶಿನಿ:— [illegible] 1ಕ್ಕೆ 6 ಆಣೆ, 3 [illegible] ರೂ. 1, 1 [illegible] 3—8—0

ಮನೋಲ್ಲಾಸಿನಿ ತೈಲ:— [illegible] ರೂ. 1, 3 [illegible] 2, 5 [illegible] 5—8—0

ವಿಳಾಸ—ಮನೋಲ್ಲಾಸಿನಿ ಕಂಪೆನಿ,

52—31 [illegible] 9. [illegible]

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು [illegible] ಬಾಲಾರ್ಕ ಮಧುವನ್ನು [illegible]



[illegible]

ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.
[illegible]

ಕೊಡಗು.

ಸನ್ ೧೯೩೧ನೇ ಇಸವಿ

ಡಿಸೆಂಬರ್ ತಾ. ೧೮ನೇ ಶುಕ್ರವಾರ.

ಈಗಿನ ಪರಿಸ್ಥಿತಿ.

ಕಳೆದ ಮೂರು—ನಾಲ್ಕು ತಿಂಗಳುಗಳಿಂದ ಹಿಂದೂಸ್ಥಾನದವರೆಲ್ಲರ ದೃಷ್ಟಿಯು ಲಂಡನ್ ಪರಿಷತ್ತಿನ ಕಡೆಗೇ ಇತ್ತು. ಸದರಿ ಪರಿಷತ್ತಿನಿಂದ ಹಿಂದೀಯರ ಕೋರಿಕೆಯು ನೆರವೇರಿಸಲ್ಪಡುವದೆಂದು ಸರ್ಕಾರದ ಸಹಕಾರಿಗಳೂ, ಮಧ್ಯಗಾಮಿಗಳೂ ಸಂಪೂರ್ಣ ನಂಬಿದ್ದರು. ಅದರಲ್ಲೂ ಸರ್ಕಾರದವರಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳು ತುಂಬಾ ಉತ್ಸಾಹದಿಂದ ಲಂಡನಿಗೆ ಹೋಗಿದ್ದರು. ಆದರೆ ಕಾಂಗ್ರೆಸ್ಸಿನವರಿಗೆ ಈ ಪರಿಷತ್ತಿನಲ್ಲಿ ಹೆಚ್ಚಿನ ವಿಶ್ವಾಸವೇನೂ ಇರಲಿಲ್ಲ. ಕಾಂಗ್ರೆಸ್ಸಿನ ಒಬ್ಬನೇ ಪ್ರತಿನಿಧಿಯಾದ ಮಹಾತ್ಮ ಗಾಂಧಿಯವರೂ ಇದೇ ಅಭಿಪ್ರಾಯದವರಾಗಿದ್ದರು. ಆದರೂ ಅವರಿಗೂ, ಲಾರ್ಡ್ ಇರ್ವಿನ್‌ರವರಿಗೂ ಆದ ತಾತ್ಕಾಲಿಕ ಸಂಧಿಯ ಮೇರೆ ಗಾಂಧಿಯವರು ಲಂಡನಿಗೆ ಹೋಗಲೇ ಬೇಕಾಯಿತು. ಮಹಾತ್ಮರು ಹೋಗುವ ಮುಂಚೆ, ಅವರು ಲಂಡನಿಗೆ ಹೋಗುವದರಿಂದ ಪ್ರಯೋಜನವೇನೂ ಆಗಲಾರದೆಂತಲೂ, ಬ್ರಿಟಿಷರು ಬರೀ ಕಾಲಹರಣ ಮಾಡುತ್ತಿರುವದಲ್ಲದೆ ನಿಜವಾಗಿಯೂ ಹಿಂದೀಯರ ಕೋರಿಕೆಯನ್ನು ನೆರವೇರಿಸಲು ಅವರಿಗೆ ಒಂದಿಷ್ಟೂ ಮನಸ್ಸಿಲ್ಲವೆಂತಲೂ, ಹೀಗೆ ಕಾಲಹರಣ ಮಾಡುವುದರಿಂದ ಕಳೆದ ಸತ್ಯಾಗ್ರಹ ಚಳವಳದಿಂದ ಜನರಲ್ಲಿ ಹುಟ್ಟಿರುವ ಸ್ವಾತಂತ್ರ್ಯದ ಸಲುವಾದ ಉತ್ಸಾಹವು ಕಡಿಮೆಯಾಗುವ ಸಂಭವವಿದೆಯೆಂತಲೂ ಹಲವು ಕಾಂಗ್ರೆಸು ಮಹನೀಯರು ಸೂಚಿಸಿದ್ದರು. ಆದರೆ ಕಾಂಗ್ರೆಸಿನ ಪರವಾಗಿ ಗಾಂಧಿಯವರೊಬ್ಬರೇ ಲಂಡನಿಗೆ ಹೋಗಿ ಬಾಕಿ ಮುಂದಾಳುಗಳೆಲ್ಲರೂ ಇಂಡಿಯಾದಲ್ಲಿಯೇ ಇದ್ದು, ದುಂಡು ಮೇಜು ಪರಿಷತಿನಲ್ಲಾದ ಸಂಗತಿಗಳನ್ನು ಆಗಾಗ್ಗೆ ವಿಮರ್ಶಿಸುತ್ತಾ ಜನಸಮುದಾಯವನ್ನು ಎಚ್ಚರಗೊಳಿಸುತ್ತಾ ಇದ್ದರು. ಆದುದರಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಜನರಿಗಿದ್ದ ಉತ್ಸಾಹವು ಕಡಿಮೆಯಾಗುವುದರ ಬದಲು ಹೆಚ್ಚಾಗುತ್ತಿದೆ ಎಂಬುವುದರಲ್ಲಿ ಸಂಶಯವಿಲ್ಲ.

ಮಹಾತ್ಮರೇನೋ ಕಾಂಗ್ರೆಸ್ಸಿನ ಹಲವರು ಭವಿಷ್ಯ ಹೇಳಿದಂತೆ ಲಂಡನಿನಿಂದ ಬರಿ ಕೈಯ್ಯಲ್ಲಿ ವಾಪಸು ಹೊರಟರು. ಆದರೆ ಅವರು ಇಂಗ್ಲೆಂಡಿಗೆ ಹೋದದ್ದು ನಿಷ್ಪ್ರಯೋಜನವಾಯಿತೆಂದು ಹೇಳಲಾಗುವುದಿಲ್ಲ. ಅವರು ಹೋಗುವಾಗ್ಯೆ ದಾರಿಯಲ್ಲಿ ಹೇಳಿದ್ದಂತೆ, ಪರಿಷತ್ತಿನ ಕಾರ್ಯ ಕಲಾಪಗಳಲ್ಲಿ ಭಾಗ ತೆಗೆದುಕೊಂಡದ್ದಕ್ಕಿಂತ ಹೆಚ್ಚಾಗಿ ಅದರ ಹೊರಗೆ ಕೆಲಸ ಮಾಡಿದರು. ಹಲವು ಕಡೆಗಳಲ್ಲಿ ನಡೆದ ಸಭೆಗಳಲ್ಲಿ ಭಾಷಣ ಮಾಡಿ ಹಿಂದೂ ದೇಶದ ನಿಜ ಸ್ಥಿತಿಯನ್ನು ಬ್ರಿಟಿಷ್ ಜನಸಮುದಾಯಕ್ಕೆ ಚೆನ್ನಾಗಿ ವಿವರಿಸಿ ಹೇಳಿದರು. ಪ್ರಾಮುಖ್ಯ ಮುಂದಾಳುಗಳೊಡನೆ ಸಂಭಾಷಣೆ ನಡಿಸಿ ಇಂಡಿಯಾದ ಸಮಸ್ಯೆಯನ್ನು ಅವರಿಗೆ ಮನದಟ್ಟು ಮಾಡಿಕೊಟ್ಟರು. ತನ್ನ ಸತ್ಯಶೀಲತೆಯನ್ನೂ, ಸರಳ ಹೃದಯವನ್ನೂ ಅಲ್ಲಿಯ ನಿವಾಸಿಗಳಿಗೆ ಬಿಚ್ಚಿ ತೋರಿಸಿ, ತಾನು ಮಾಡುತ್ತಿರುವ ಇಂಡಿಯಾದ ಸ್ವಾತಂತ್ರ್ಯ ಹೋರಾಟಕ್ಕೆ ಅವರ ಸಹಾನುಭೂತಿಯನ್ನು ಪಡೆದರು. ಮಹಾತ್ಮರು ನಡೆಸಿದ ಅಹಿಂಸಾ ತತ್ವದ 'ಯುದ್ಧ' ದ ಮಹಿಮೆಯೂ, "ಯುದ್ಧ"ದ ಉದ್ದೇಶದ ನ್ಯಾಯಶೀಲತೆಯೂ ಬ್ರಿಟನ್ನಿನವರಿಗೆ ಮಾತ್ರವಲ್ಲ ಇಡೀ ಪ್ರಪಂಚದವರಿಗೇ ಗೊತ್ತಾಗುವಂತೆ ಮಾಡಿದರು. ಇದರಿಂದ ಮಹಾತ್ಮರ ಗೌರವ ಮಾತ್ರವಲ್ಲ, ಅವರು ಯಾರ ಪ್ರತಿನಿಧಿಯಾಗಿ ಹೋಗಿದ್ದರೋ ಆ ಭಾರತ ಭೂಮಿಯ ಅತ್ಮ ಗೌರವವೂ ಕೂಡ ಪ್ರಪಂಚದವರ ದೃಷ್ಟಿಯಲ್ಲಿ ಹೆಚ್ಚಾಗಿದೆಯೆಂಬುವುದರಲ್ಲಿ ಸಂಶಯವಿಲ್ಲ. ಇದು ಹಿಂದೂಸ್ಥಾನದ ಮುಂದಿನ ಹೋರಾಟಕ್ಕೆ ಸಾಧಾರಣದ ಲಾಭವೇನೂ ಅಲ್ಲ.

ಇತ್ತ ಕಡೆ ಹಿಂದೂಸ್ಥಾನದ ಪರಿಸ್ಥಿತಿಯು ದಿನೇ ದಿನೇ ಕಠಿಣಾವಸ್ಥೆಯನ್ನು ತಾಳುತ್ತಿದೆ. ಬಂಗಾಳದ ಕೆಲವು ಯುವಕರು ಅಹಿಂಸಾತತ್ವದಲ್ಲಿ ವಿಶ್ವಾಸವನ್ನು ಬಿಟ್ಟು ಕ್ರಾಂತಿಕಾರರಾಗಿರುವರು; ಕ್ರೂರ ಹಿಂಸಾಕೃತ್ಯಗಳನ್ನು ಮಾಡುತ್ತಿದ್ದಾರೆ. ಆಲೋಚನಾಪರರಾದ ಹಿಂದೀಯರೆಲ್ಲರೂ ಇಂಥಾ ಹಿಂಸಾ ಮಾರ್ಗವನ್ನು ಖಂಡಿಸುತ್ತಾರೆಂಬುವುದರಲ್ಲಿ ಸಂಶಯವಿಲ್ಲ. ಇದನ್ನು ನೋಡಿ ಗಾಬರಿಗೊಂಡ ಸರ್ಕಾರದವರು ಅತ್ಯಂತಲೂ ಕ್ರೂರವಾದ ದಬ್ಬಾಳಿಕೆಯ ಶಾಸನವನ್ನು (ಆರ್ಡಿನೇನ್ಸ್) ಜಾರಿಗೆ ತಂದಿರುವರು. ಸರ್ಕಾರದವರು ಅಲ್ಲಿಯ ಕ್ರಾಂತಿಗೆ ಕಾರಣವೇನೆಂಬುದನ್ನು ವಿಚಾರಿಸದೆ, ಹಿಂಸೆಯನ್ನು ಹಿಂಸೆಯಿಂದ ತಗ್ಗಿಸಲೆತ್ನಿಸುತ್ತಿರುವರು. ಆದರೆ ಈ ಕ್ರಾಂತಿಕಾರರು ತಮ್ಮ ಧ್ಯೇಯವನ್ನು ಸಾಧಿಸಲು ಅಯೋಗ್ಯವಾದ ಮತ್ತು ತಪ್ಪಾದ ದಾರಿಯನ್ನು ಕೈಕೊಂಡಿರುವರು. ಇವರನ್ನು ಈ ದಾರಿಯಿಂದ ಬಿಡಿಸಬೇಕಾದರೆ ಅವರ ಚಾಂಚಲ್ಯದ ಮೂಲವನ್ನೇ ಕಿತ್ತು ಹಾಕಬೇಕು. ಅಂದರೆ ಅವರ ಗುಲಾಮಗಿರಿಯನ್ನು ನೀಗಲಾಡಿಸಿ, ಸ್ವಾತಂತ್ರ್ಯವನ್ನು ಕೊಡುವುದೇ ಉತ್ತಮ ಮತ್ತು ಸುಲಭ ಉಪಾಯ. ಇದರ ಬದಲು ಸಂಶಯದ ಮೇಲೂ ಕೂಡ ಗಂಡಸರನ್ನೂ, ಹೆಂಗಸರನ್ನೂ ಎಲ್ಲಿ ಬೇಕಾದರೂ ದಸ್ತಗಿರಿ ಮಾಡುವ, ಆಸ್ತಿ ಪಾಸ್ತಿಗಳನ್ನು ಜುಲುಮಿನಿಂದ ತೆಗೆದುಕೊಳ್ಳುವ, ಯಾವನ ಸೇವೆಯನ್ನಾದರೂ ಯಾವಾಗ ಬೇಕಾದರೂ ತೆಗೆದುಕೊಳ್ಳುವ ಮತ್ತು ಪೋಲೀಸು ಮತ್ತು ಮಿಲಿಟರಿ ಉದ್ಯೋಗಸ್ಥರುಗಳಿಗೆ ತುಂಬಾ ಅಧಿಕಾರ ಕೊಟ್ಟಿರುವಂಥ ಆರ್ಡಿನೇನ್ಸನ್ನು ಜಾರಿಗೆ ತಂದಿರುವದು ಎಂದೂ ನ್ಯಾಯಸಮ್ಮತವಲ್ಲವೆಂದು ಹೇಳಬೇಕಾಗಿಲ್ಲ. ಜೀವದಾಶೆ ಇಲ್ಲದ ಕ್ರಾಂತಿಕಾರರನ್ನು ದಬ್ಬಾಳಿಕೆಯಿಂದ ಅಡಗಿಸಲು ಸಾಧ್ಯವಿಲ್ಲವೆಂತಲೂ, ಆರ್ಡಿನೇನ್ಸುಗಳಿಂದ ಶಾಂತಿ ಸ್ಥಾಪನೆಯಾಗಲಾರದೆಂದೂ ಶಾಂತಿಯೇ ಕ್ರಾಂತಿಯನ್ನು ಅಡಗಿಸಲು ತಕ್ಕ ಸಾಧನವೆಂತಲೂ ಸೂಚಿಸದೆ ಇರಲಾರೆವು.

ಇನ್ನೊಂದು ಕಡೆ ಸಂಯುಕ್ತ ಪ್ರಾಂತ್ಯದಲ್ಲಿ ಜಮೀನುದಾರರು ಮತ್ತು ಸರ್ಕಾರದವರಿಗೂ, ಗೇಣಿದಾರರಿಗೂ ಹೋರಾಟವು ಬಲವಾಗಿ ನಡೆಯುತ್ತಿದೆ. ಬಡತನದಲ್ಲಿ ಮುಳುಗಿರುವ ವ್ಯವಸಾಯಗಾರರು ಈ ವರ್ಷ ತಮ್ಮ ಗೇಣಿಯನ್ನು ಸಂಪೂರ್ಣ ಕೊಡಲಾರದವರಾದ ಕಾರಣ ಅದರಲ್ಲಿ ಸ್ವಲ್ಪ ಮಟ್ಟಿಗೆ ಬಿಟ್ಟು ಕೊಡಬೇಕೆಂದು ಭೂಮಾಲೀಕರನ್ನು ಕೇಳಿಕೊಂಡರು. ಈ ವಿಷಯದಲ್ಲಿ ಕಾಂಗ್ರೆಸಿನವರು ವ್ಯವಸಾಯಗಾರರ ಪಕ್ಷವನ್ನೂ, ಸರ್ಕಾರದವರು ಭೂಮಾಲೀಕರ ಪಕ್ಷವನ್ನೂ ವಹಿಸಿಕೊಂಡು ತೀರ್ಮಾನದ ಬಗ್ಗೆ ಪತ್ರವ್ಯವಹಾರಗಳನ್ನೂ, ಸಂಭಾಷಣೆಗಳನ್ನೂ ನಡಿಸಿದರು. ಆದರೆ ಇದು ಬೇಗನೆ ತೀರ್ಮಾನಕ್ಕೆ ಬರಲಿಲ್ಲ. ಗೇಣಿ ಕಟ್ಟುವ ಕಾಲವು ಬಂತು. ತೀರ್ಮಾನವಾಗುವ ವರೆಗೆ ಗೇಣಿ ಕೊಡುವದು ಬೇಡವೆಂದು ಕಾಂಗ್ರೆಸಿನವರು ವ್ಯವಸಾಯಗಾರರಿಗೆ ಹೇಳಿದರು. ಅದರಂತೆ ಒಂದೆರಡು ದಿವಸಗಳಲ್ಲಿ 1003 ಸ್ಥಳಗಳಲ್ಲಿ ಮೀಟಿಂಗು ನಡೆದು ಒಂದು ಲಕ್ಷ ಜನರು ಗೇಣಿ ಕೊಡುವದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಇದು ಸರ್ಕಾರದವರನ್ನು ಗಾಬರಿಗೊಳಿಸಿತು. ಈಗ ಅವರು ಅಲ್ಲಿ ಒಂದು ಹೊಸ ಆರ್ಡಿನೇನ್ಸನ್ನು ಜಾರಿಗೆ ತಂದಿರುವರು. ಕಾಂಗ್ರೆಸಿನವರ ಅಲ್ಲಿಯ ರೈತರನ್ನು ತಮ್ಮ ರಾಜಕೀಯ ಚಳವಳಕ್ಕೆ ಉಪಯೋಗಿಸಿಕೊಳ್ಳಲಿಕ್ಕಾಗಿ ಗೇಣಿ ಕೊಡಬಾರದೆಂಬ ಚಳವಳವನ್ನು ಹೂಡಿರುವರೆಂದು ಸರ್ಕಾರದವರ ಆರೋಪಣೆಯಾಗಿದೆ. ಆದರೆ ರೈತರ ಸ್ಥಿತಿಯು ನಿಜವಾಗಿಯೂ ಕಷ್ಟತರವಾಗಿದೆಯೋ ಎಂಬುದನ್ನು ಒಂದು ನಿಷ್ಪಕ್ಷಪಾತದ ಕಮಿಟಿಯಿಂದ ವಿಚಾರಿಸಿದ್ದರೆ ಸರ್ಕಾರದವರ ವರ್ತನೆಯು ಸರಿಯಾದದ್ದೆಂದು ಹೇಳಬಹುದಾಗಿತ್ತು. ಹಾಗೆ ಮಾಡದೆ ಹೊರಡಿಸಿರುವ ಆರ್ಡಿನೇನ್ಸಿಗೆ ದೇಶದವರ ಒಪ್ಪಿಗೆಯು ಎಂದೂ ದೊರೆಯಲಾರದು.

ದಬ್ಬಾಳಿಕೆಯಿಂದ ಸ್ವಾತಂತ್ರ್ಯದ ಸ್ಫೂರ್ತಿಯನ್ನು ಇಷ್ಟರ ವರೆಗೆ ಎಲ್ಲಿಯೂ ಅಡಗಿಸಲು ಸಾಧ್ಯವಾಗಿರುವುದಿಲ್ಲ: ಇನ್ನು ಸಾಧ್ಯವಾಗಲಿಕ್ಕೂ ಇಲ್ಲ. ಚರಿತ್ರೆಯ ಪುಟಗಳನ್ನು ಎಷ್ಟು ಮಗುಚಿ ನೋಡಿದರೂ ಇಂಥಾ ಉದಾಹರಣೆಗಳು ದೊರೆಯಲಾರವು. ಒಂದು ವೇಳೆ ಸ್ವಲ್ಪ ಕಾಲದ ವರೆಗೆ ಆರ್ಡಿನೇನ್ಸುಗಳಿಂದ ಜನರನ್ನು ಅವರ ಇಚ್ಛೆಗೆ ವಿರೋಧವಾಗಿ ಆಳಬಹುದು. ಆದರೆ ಆರ್ಡಿನೇನ್ಸುಗಳಿಂದ ಎಂದೆಂದಿಗೂ ಆಳಲಾಗುವುದಿಲ್ಲ. ದಬ್ಬಾಳಿಕೆಯನ್ನು ನಿಲ್ಲಿಸಿದ ಕೂಡಲೇ ಪುನಃ ಜನ ಸಮುದಾಯದ ಉತ್ಸಾಹವು ಉಕ್ಕಿ ಹೊರ ಬರುವುದು. ಬ್ರಿಟಿಷ್ ಸರ್ಕಾರದವರು ಅನುಭವದ ಪಾಠಗಳನ್ನು ಮರೆಯುವಂತೆ ಕಾಣುತ್ತದೆ. ಹಿಂದೂಸ್ಥಾನದ ಬಿಕ್ಕಟ್ಟಿನ ರಾಜಕೀಯ ಪರಿಸ್ಥಿತಿಯಲ್ಲಿ, ವೈಸರಾಯ ರಾಗಿದ್ದು, ಹತ್ತೆಂಟು ಆರ್ಡಿನೇನ್ಸುಗಳನ್ನು ಜಾರಿಗೆ ತಂದು ಹಿಂದೀಯರ ಸ್ವಾತಂತ್ರ್ಯದ ಚಳವಳವನ್ನು ತಗ್ಗಿಸಲು ಯತ್ನಿಸಿ, ಸಾಧ್ಯವಾಗದೆ ರಾಜಿ ಸಂಧಾನಗಳನ್ನು ಮಾಡಿದ ಲಾರ್ಡ್ ಇರ್ವಿನ್‌ರವರೇ ಮೊನ್ನೆ ದಿನ ಲಾರ್ಡ್ಸ್ ಪಾರ್ಲಿಮೆಂಟಿನಲ್ಲಿ 'ದಬ್ಬಾಳಿಕೆಯಿಂದ ಇಂಡಿಯಾವನ್ನು ಆಳಲು ಸಾಧ್ಯವಿಲ್ಲ. ರಾಜಿ ಒಪ್ಪಂದಗಳಿಂದ ಅಲ್ಲಿ ಶಾಂತಿಯನ್ನು ಸ್ಥಾಪಿಸಬೇಕಾಗಿದೆ' ಎಂದು ಬಹಿರಂಗವಾಗಿ ಹೇಳಿರುವರು. ಈ ಹಿಂದೀ ಅನುಭವದ ಬುದ್ಧಿ ಮಾತುಗಳನ್ನು ಈಗಿನ ವೈಸರಾಯರು ಹಳೆಬರಾದರೂ ಮನಸ್ಸಿಗೆ ತೆಗೆದುಕೊಳ್ಳದೆ ಇರುವದು ವ್ಯಸನಕರ. ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಲು ದಬ್ಬಾಳಿಕೆಯು ಎಷ್ಟು ನಿಷ್ಪ್ರಯೋಜನದ್ದೋ ಅಷ್ಟೇ ಹಿಂಸಾ ರೀತಿಯು ಸ್ವಾತಂತ್ರ್ಯವನ್ನು ಪಡೆಯಲು ನಿಷ್ಪ್ರಯೋಜನವಾದದ್ದು. ಆದಕಾರಣ ಸರ್ಕಾರದವರು ಎಷ್ಟು ಆರ್ಡಿನೇನ್ಸುಗಳನ್ನು ಹೊರಡಿಸಿದರೂ ಜನರು ಅಹಿಂಸಾ ತತ್ವವನ್ನು ಒಂದಿಷ್ಟೂ ಬಿಡದೆ ಪರಿಪಾಲಿಸಬೇಕಾಗಿ ನಮ್ಮ ಕೋರಿಕೆ.

ಹೀಗೆ ಗಾಂಧಿ—ಇರ್ವಿನ್ ಸಂಧಿಯ ಮೇರೆ ಉಂಟಾದ ತಾತ್ಕಾಲಿಕ ಶಾಂತಿಯು ಖಾಯಂ ಆಗುವುದರ ಬದಲು, ಶಾಂತಿಯೇ ಇಲ್ಲದಾಗುವಂಥ ಚಿಹ್ನೆಗಳು ಕಾಣುಬರುತ್ತವೆ. ಸರ್ಕಾರದವರು ಡೆಲ್ಲಿ ಸಂಧಿಯ ಶರತ್ತುಗಳನ್ನು ಗಮನಿಸದೆ ಆರ್ಡಿನೇನ್ಸುಗಳನ್ನು ಒಂದರ ನಂತರ ಒಂದನ್ನು ಜಾರಿಗೆ ತಂದು ಹತ್ತಿರುವರು. ಮಹಾತ್ಮ ಗಾಂಧಿಯವರು ದುಂಡು ಮೇಜು ಪರಿಷತ್ತಿನ ಫಲಿತಾಂಶದಿಂದ ಅತೃಪ್ತರಾಗಿ ಹಿಂತಿರುಗಿ ಬರುತ್ತಿದ್ದಾರೆ. ಮುಂದೆ ತಾನು ಮಾಡಬೇಕೆಂಬುದನ್ನು ನಿರ್ಧರಿಸಲು ಕಾಂಗ್ರೆಸ್ ಕಾರ್ಯ-ಕಾರೀ ಮಂಡಳಿಯ ಆಲೋಚನೆ ತೆಗೆದುಕೊಳ್ಳಬೇಕೆಂದು ಅವರು ಹೇಳುತ್ತಾರಾದರೂ, ಇಟಲಿಯಿಂದ ಇಂಡಿಯಾಕ್ಕೆ ಹಡಗು ಹತ್ತುವ ಮೊದಲು, ದುಂಡು ಮೇಜು ಪರಿಷತ್ತು, ಇಂಗ್ಲೆಂಡಿಗೂ, ಇಂಡಿಯಾಕ್ಕೂ ಇದ್ದ ಸಂಬಂಧವನ್ನು ಕತ್ತರಿಸಿಬಿಟ್ಟಿದೆ, ಆದ ಕಾರಣ ಬ್ರಿಟಿಷ್ ವಿರೋಧವಾದ ಇಂಡಿಯಾದ ಚಳವಳವನ್ನು ಮುಂದೆ ತಾನು ಹಿಡಿಯುತ್ತಿದ್ದೇನೆ' ಎಂದು ಹೇಳಿರುವರು. ಕಾಂಗ್ರೆಸ್ಸಿನ ಅಧ್ಯಕ್ಷರಂತೂ, 'ಲಂಡನು ಪರಿಷತ್ತಿನಿಂದ ಏನೂ ದೊರೆಯಲಿಕ್ಕಿಲ್ಲ, ಚಳವಳಕ್ಕೆ ಜನರು ತಯಾರಾಗಿಯಿರಬೇಕೆಂದು ಸೂಚಿಸಿರುವರು. ಇದರಿಂದ ಸರ್ಕಾರದವರೂ ಕಾಂಗ್ರೆಸಿನವರೂ ಇನ್ನೊಂದು ಹೋರಾಟಕ್ಕೆ ತಯಾರಾಗಿದ್ದಾರೆಂದು ಸ್ಪಷ್ಟವಾಗುತ್ತದೆ. ಹಾಗೇನಾದರೂ ಆದರೆ ಈ ದಿನ ಹೋರಾಟವು ಬಹು ವಿಶೇಷ ತರದ್ದಾಗುವದೆಂಬುದರಲ್ಲಿ ಸಂಶಯವಿಲ್ಲ. ಇದರಿಂದ ಎರಡು ಕಡೆಯವರಿಗೂ ವಿಶೇಷ ನಷ್ಟಗಳುಂಟಾಗುವುವು. ಆದರೂ ತಮ್ಮ ದೇಶದ ಸ್ವಾತಂತ್ರ್ಯದ ಸಲುವಾಗಿ ಎಲ್ಲವನ್ನೂ ತ್ಯಾಗಮಾಡಲು ಸಿದ್ಧರಾಗಿರುವ ಹಿಂದೀಯರು ತಮ್ಮ ಉದ್ದೇಶವು ಕೈಗೂಡುವ ವರೆಗೆ ಬಿಡದೆ ಇರಲಾರರು. ಹೇಗೂ ಮಹಾತ್ಮರು ಇಂಡಿಯಾಕ್ಕೆ ಬಂದ ಮೇಲೆ, ಸರ್ಕಾರದವರೂ ಕಾಂಗ್ರೆಸಿನವರೂ ಪುನಃ 'ಯುದ್ಧ'ದ ಕಠಿಣ ಪರಿಣಾಮಗಳನ್ನು ಮನಸ್ಸಿಗೆ ತಂದುಕೊಂಡು ಎಲ್ಲವನ್ನೂ ಶಾಂತ ರೀತಿಯಿಂದಲೇ ತೀರ್ಮಾನಿಸುವ ಯತ್ನ ಮಾಡುವರಾಗಿ ಆಶಿಸುತ್ತೇವೆ.

ಕಡೇ ಅಧ್ಯಾಯ.

(ಸಿ. ರಾಜಗೋಪಾಲಾಚಾರ್ಯರಿಂದ)

ಲಂಡನ್ ಪರಿಷತ್ತಿನಿಂದ ಹಿಂದೂಸ್ಥಾನವು ಏನೂ ಫಲವಿಲ್ಲದೆ ದುಃಖಕರವಾಗಿ ವಾಪಸು ಕಳುಹಿಸಲ್ಪಟ್ಟಿದೆ. ಮಂತ್ರಿಗಳವರಾದರೂ ಎರಡು ಕಡೆಯವರಿಗೂ ತೃಪ್ತಿಯಾಗುವಂತೆ ಮಾಡಿದ್ದೇನೆಂತ ಹೇಳಿದರೂ ಪ್ರಪಂಚವು ನಿಜ ಸ್ಥಿತಿಯನ್ನು ತಿಳಿದಿರಬೇಕು.

ಸೆಂಟ್ ಜೇಮ್ಸ್ ಅರಮನೆಯ ನಾಟಕದ ಅಂತ್ಯದ ದೃಶ್ಯದಲ್ಲಿ ತುಂಬಾ ಹಸ್ತಲಾಘವಗಳು (ಶೇಕ್ ಹ್ಯಾಂಡ್‌ಗಳು) ನಡೆದವು. ಹಿಂದೂಸ್ಥಾನದ ಅಡಚಣೆಗಳನ್ನೂ, ದುರ್ಭಾಗ್ಯವನ್ನೂ—ಹಿಂದೂಸ್ಥಾನದ ಬಲವನ್ನೂ—ಸಂತೋಷವನ್ನೂ ಸ್ವಾತಂತ್ರ್ಯದ ದೃಢ ಸಂಕಲ್ಪವನ್ನೂ ಅಲ್ಲ—ತೋರಿಸಲು ಕೆಲವು ಚಿಕ್ಕ ಮನುಷ್ಯರಿಗೆ ತುಂಬಾ ತೃಪ್ತಿಯಾಗಿರಬಹುದು. ಬಡಿಗಳಿಗೆ ತಮ್ಮದೊಂದು ಚಿಕ್ಕ ತಮಾಷೆ ಬೇರೆಯೇ ಇತ್ತು. ಪ್ರಾಂತೀಕ ಸ್ವಾತಂತ್ರ್ಯವೆಂಬದೊಂದು ಕರೀ ಪಿಶಾಚಿಯಂತೆ ಕಾಣುವಂತೆ ಮಾಡಿ ಅನಂತರ ಅದನ್ನು ಕತ್ತರಿಸಿಬಿಟ್ಟರು. ಪ್ರಾಂತೀಕ ಸ್ವಾತಂತ್ರ್ಯ ಮತ್ತು ಮಧ್ಯ ಸರಕಾರದಲ್ಲಿ ಯಾವುದೋ ತರದ ಏರ್ಪಾಡೇ ಅವರಿಗೆ ಸ್ವರ್ಗವಾಗಿತ್ತು. ಕಾನ್‌ಫರೆನ್ಸ್ ಪ್ರಾರಂಭವಾದಾಗ ತಾವು ಮಾಡಿದ್ದನ್ನೇ ಪುನಃ ಅಂಗೀಕಾರ ಮಾಡಿದ್ದಕ್ಕೆ ಅವರ ಸಂತೋಷಕ್ಕೆ ಪಾರವೇ ಇಲ್ಲದಾಯಿತು. ಕಾನ್‌ಫರೆನ್ಸಿನಲ್ಲಿ ಏನೂ ಕಳಕೊಳ್ಳಲಿಲ್ಲವೆಂಬ ಜಯದ ನೃತ್ಯವನ್ನು ನಡೆಸಿದರು. ಆಟಾಳ ಮತ್ತು ಹೇಡಿತನಗಳಿಗೆ ರೀತಿ ಧನ್ಯವಾದಗಳನ್ನು ಕೊಡುವುದರಲ್ಲಿ ನಿರತರಾಗಿದ್ದರು. ಜಾಗ್ರತಿಯನ್ನು ಹೊಂದಿದ ಹಿಂದೂಸ್ಥಾನದ ಪ್ರತಿನಿಧಿಯಾದ ಒಬ್ಬರೇಯಾದವರು ಪ್ರಪಾತದ ಅಂಚಿಗೆ ತಲುಪಿದವನಂತೆ ಕುತೂಹಲ ಯುಕ್ತವಾದ ಆಲೋಚನೆಯಲ್ಲಿ ಮಗ್ನರಾಗಿದ್ದರು. ಅವರಿಗೂ ನಿಸ್ಸಾರವಾದ ಗೌರವಗಳೂ, ಶ್ಲಾಘನೆಗಳೂ ದೊರೆತವು. ಅವರೂ ಪದ್ಧತಿ ಮೇರೆ ನಗುಮುಖವನ್ನು ತೋರಿಸಿದರು. ಆದರೆ ಆ ನಗುವು ಬೆಳಕನ್ನು ಬೀರಲಿಲ್ಲ. ಕತ್ತಲನ್ನು ಮುಸುಕಿತು. ಅದಲ್ಲದೆ ಬೇರೆ ಏನಾದೀತ ?

ಇನ್ನೇನು ಮಾಡಬೇಕೆಂಬುದು ಹಿಂದೂಸ್ಥಾನಕ್ಕೆ ತಿಳಿದಿದೆ. ದೇವರ ಸೃಷ್ಟಿಯಲ್ಲಿ ನ್ಯಾಯಕ್ಕೆ ಜಯವೆಂಬ ನಂಬಿಕೆಯಿದೆ. ಒಂದು ದೇಶದ ಜನರನ್ನು ಬೇರೊಂದು ದೇಶದ ಜನರಿಂದ ಆಳಿಸಲ್ಪಡಲಿಕ್ಕಾಗಿಯೇ ಸೃಷ್ಟಿಮಾಡಲಿಲ್ಲವೆಂಬ ಧೈರ್ಯದಿಂದಲೂ ಹಿಂದೂಸ್ಥಾನವು ತನ್ನ ಕರ್ತವ್ಯವನ್ನು ಪುನಃ ಮಾಡುತ್ತದೆ. ತನ್ನ ಯುದ್ಧವನ್ನು ಪರಿಶುದ್ಧವಾದ ಯುದ್ಧಗಳಿಂದ, ಕಷ್ಟವನ್ನು ಅನುಭವಿಸುವುದೆಂಬ ಹೊಸ ಶಸ್ತ್ರದಿಂದ, ದೇವರ ಇಚ್ಛೆಯಂತಾಗಲಿ ಎಂಬ ಧೈರ್ಯದಿಂದ ಕಾದಾಡುತ್ತದೆ.

ಈ ಕಥೆಯಲ್ಲಿ ಇನ್ನೊಂದು ಪ್ರಧಾನ ಯುಕ್ತಿಯಿದೆ. ಅದನ್ನು ಮರೆಯಬಾರದು. ಅದು ಲಾರ್ಡ್ ಇರ್ವಿನ್‌ರು. ಗಾಂಧಿಯವರಂತೆಯೇ ಲಂಕಶಯರಿನ ಜನರ ಆಲೋಚನೆಯಲ್ಲಿ ಮುಳುಗಿದೆ. ಬ್ರಿಟಿಷ್ ಸರಕಾರವನ್ನು ನಡಿಸುವ, ಬ್ರಿಟಿಷ್ ಜನರ ಅಭಿಪ್ರಾಯವನ್ನು ತಯಾರಿಸುವಲ್ಲಿ ತಿರುಗದ ಮುಂದಾಳುಗಳು ಲಂಕಾಶಯರಿಗೂ ಕಡೆಗೆ ಮಾಡಿದರು. ಲಂಕಾಶಯರಿನ ಕಷ್ಟ ನಿವಾರಣೆಗೆ ಅವರ ಮನಸ್ಸಿನ ಸೂಚನೆಯೇನೆಂದರೆ—"ಹಿಂದೂಸ್ಥಾನಕ್ಕೆ ವಾಗ್ದಾನಗಳನ್ನು ಕೊಡುವ, ಸ್ವಾತಂತ್ರ್ಯವನ್ನು ಸೂಚಿಸುವ ಶಬ್ದಗಳನ್ನು ಉಪಯೋಗಿಸುವ; ಆದರೆ ಭದ್ರತೆಗಳಿಂದ ಹಿಂದೂಸ್ಥಾನದ ಶಕ್ತಿಯನ್ನು ಹಿಸುಕುವ, ಬ್ರಿಟಿಷ್ ಸಾಮಾನುಗಳನ್ನು ಹಿಂದೂಸ್ಥಾನದವರು ಕೊಂಡುಕೊಳ್ಳದಿದ್ದರೆ ಅವರನ್ನು ಬಹಿಷ್ಕಾರ ಚಳವಳ ನಡಿಸುತ್ತಾರೆಂಬುವ ತಕ್ಕರಿಗೆ ಗುರಿ ಮಾಡುವ ದಬ್ಬಾಳಿಕೆಯನ್ನು ಸಾಕಷ್ಟು ನಡಿಸಿದರೆ ವ್ಯಾಪಾರವು ಹೆಚ್ಚುತ್ತದೆ" ಆದರೆ ಈ ಉಪಶಮನವು ಸರಿಯಾದದ್ದೆಂದು ಲಂಕಾಶಯರಿಗೆ ತಿಳಿದು ಬರುವುದಿಲ್ಲ.

'ಯಂ. ಇ.'

ಸ್ವಾತಂತ್ರ್ಯದ ಚಿನ್ಹೆ.

(ಲೇಖಕರು—ಕಾಕಾ ಕಾಲೇಲಕರ್)

ಗಾಂಧಿ ವಾರದಲ್ಲಿ ತುಂಬಾ ಕೆಲಸ ಮಾಡಿದ್ದೇವೆ. ಏಂಟು ಲಕ್ಷ ರೂ. ಕ್ರಯದ ಖಾದಿಯು ಗಿರಾಕಿಗಳು ಮನೆಗಳನ್ನು ಮುಟ್ಟಿತು. ಅದರಿಂದ ಆ ಲಕ್ಷ ರೂಪಾಯಿಗಳು ಹಸಿವಿನಿಂದ ಕಷ್ಟ ಪಡುತ್ತಿದ್ದ ಬಡ ಜನರ ಉಪಯೋಗಕ್ಕೆ ದೊರಕಿತು. ಕಳೆದ ಎರಡು ವರ್ಷಗಳಿಂದ ಸ್ವರಾಜ್ಯದಂತೆಯೇ ಖಾದಿಯೂ ಜನರ ಹೃದಯದಲ್ಲಿ ನೆಲೆಸಿದೆಯೆಂಬುದು ಕಂಡು ಬಂದಿದೆ. ಆದರೆ ಜನರು ಖಾದಿಯನ್ನು ಅಪೇಕ್ಷಿಸುವುದರಲ್ಲಿ ಸ್ಥಿರವಾಗಿ ಇಲ್ಲ. ಅದರಿಂದ ಕೆಲವು ವೇಳೆ ಖಾದಿಯು ದೊರಕದೇ ಹೋಗುತ್ತದೆ. ಇನ್ನು ಕೆಲವು ವೇಳೆ ತಯಾರಾಗಿರುವ ಖಾದಿಯು ವಿಕ್ರಯವಾಗದೆ ಬಿದ್ದಿರುತ್ತದೆ. ಬಡವರಿಗೆ ಅನ್ನ ಮತ್ತು ಮಜ್ಜಿಗೆ ಕೊಡಲು ನಾವು ಸಿದ್ಧರಿದ್ದೇವಾದರೆ ಖಾದಿ ಪ್ರೀತಿಯಲ್ಲಿ ಈ ರೀತಿ ಏರಿ ಇಳಿತಕ್ಕೆ ಎಡೆ ಕೊಡಬಾರದು. ತಾಯಿಗೆ ಮಕ್ಕಳ ಮೇಲೆ ಪ್ರೀತಿಯು ಎಂದೂ ತುಂಬಿಯೇ ಇರುತ್ತದೆ. ಹಾಗೆಯೇ ಖಾದಿ ಮೇಲೆ ನಮಗೆ ಇರುವ ಮಮತೆಯು ಸ್ವರಾಜ್ಯ ದೊರೆಯದೆ ಇರುವವರೆಗೂ, ಬಡವರ ಕಷ್ಟವನ್ನು ಕೆಲವು ಮಟ್ಟಿಗಾದರೂ ನಿವಾರಿಸುವ ವರೆಗೂ ಏಕ ರೀತಿಯಿಂದ ತುಂಬಿ ಇರಬೇಕು. ಖಾದಿಯನ್ನು ಕುರಿತು ಅನಾವಶ್ಯವಾಗಿ ಅಲ್ಪ ಲಾಭ ನಷ್ಟದ ಸಂಬಂಧವಾದ ಚರ್ಚೆಯಲ್ಲಿ [illegible] ಕಳೆಯಬಾರದು. ಒಂದು ಸಮಯದಲ್ಲಿ ತನ್ನನ್ನು ಹೆತ್ತು ಸಲಹಿದ ಇನ್ನೊಂದು ವೇಳೆ ತನ್ನ ಮಕ್ಕಳನ್ನು ತನ್ನ ಬಲಹೀನ ಕೈಗಳಿಂದ ಎತ್ತಿ ಮುದ್ದಾಡುವ ತಾಯಿಯಿಂದ ಲಾಭವೋ, ನಷ್ಟವೋ ಎಂತ ಚರ್ಚಿಸುತ್ತಾ ಕೂರುವ ಮಕ್ಕಳನ್ನು ನೋಡಿದ ಸ್ವಾರ್ಥಿಗೆ ಸಹ ಅಸಹ್ಯವೆನಿಸದಿರಲಾರದು. ಖಾದಿಯ ಮೂಲಕ ನಮ್ಮ ದೇಶದ ಕೋಟ್ಯಾಂತರ ಗಂಡಸರಿಗೆ, ಹೆಂಗಸರಿಗೆ ಗೌರವಯುಕ್ತವಾದ ಜೀವನ ದೊರೆಯುತ್ತದೆ ಎಂಬುದೊಂದೇ ಕಾರಣ ಸಾಲದೇ? ಖಾದಿಯ ಸಹಾಯವಿಲ್ಲದೆ ನಮ್ಮ ಸ್ವಾತಂತ್ರ್ಯ ಯುದ್ಧವನ್ನು ನಡಿಸಲು ಸಾಧ್ಯವಿಲ್ಲವೆಂಬುದೊಂದೇ ಕಾರಣ ಸಾಲದೇ? ಹಿಂಸಾಯುಕ್ತವಾದ ಆಯುಧಗಳಿಂದ ಮಾಡುವ ಯುದ್ಧದಲ್ಲಿ ಕೋವಿಗಳ ತೋಟಿಡ, ಫಿರಂಗಿಗಳ ಶೆಲ್‌ಗಳ ಮತ್ತು ಆಕಾಶ ವಿಮಾನದಿಂದ ಎಸೆಯುವ ಬಾಂಬುಗಳ ಬೆಲೆಯನ್ನು ಲೆಕ್ಕ ಹಾಕುತ್ತಾ ಯಾರೂ ಕೂರುವುದಿಲ್ಲ. ವ್ಯಾಪಾರದ ಮೇಲೆ ದೃಷ್ಟಿ ಇರುವ ಇಂಗ್ಲೆಂಡಿನ ಮೇಲೆ ನಾವು ನಡಿಸುತ್ತಿರುವ ಅಹಿಂಸಾ ಯುದ್ಧದಲ್ಲಿ ಖಾದಿಯೇ ನಮ್ಮ ಮುಖ್ಯ ಆಯುಧ. ಇದನ್ನು ಒಂದು ನಿಮಿಷವಾದರೂ ಮರೆಯಬಾರದು. ಖಾದಿಯಲ್ಲದ ಒಂದು ಗಜ ಬಟ್ಟೆಯನ್ನಾದರೂ ಕೊಂಡುಕೊಳ್ಳುವುದೆಂದರೆ ಜನಾಂಗದ ಬಲವನ್ನು ಆ ಷ್ಟರ ಮಟ್ಟಿಗೆ ಕಡಿಮೆ ಮಾಡಿದಂತಾಗುತ್ತದೆ. ಬೇರೆ ರಾಜ್ಯಗಳು ಸ್ವಾತಂತ್ರ್ಯದ ಯುದ್ಧವನ್ನು ಏನೂ ಆಯಾಸವಿಲ್ಲದೆ ಕಾದುತ್ತಾರೆ. ನಾವೂ ಸಹ ಅವಶ್ಯವಿದ್ದರೆ ಈ ಯುದ್ಧವನ್ನು ಬಹು ಕಾಲದ ವರೆಗೆ ನಡಿಸಲು ತಯಾರಿದ್ದೇವೆ. ನಾವೆಲ್ಲರೂ ಒಂದು ಮನಸ್ಸಿನವರಾದರೆ ಮತ್ತು ನಮ್ಮ ಮನಸ್ಸಿನ ಸಂಕಲ್ಪವನ್ನು ನಡಿಸಲು ಸ್ವಲ್ಪವಾದರೂ ಪ್ರಯತ್ನಿಸಿದರೆ ತಕ್ಷಣ ಸ್ವಾತಂತ್ರ್ಯ ದೊರಕುವ ದಾರಿಯೆಂದನ್ನು ಗಾಂಧಿಯವರು ದೇವರ ದಯೆಯಿಂದ ನಮಗೆ ತೋರಿಸಿ ಕೊಟ್ಟಿದ್ದಾರೆ. ತಾತ್ಕಾಲಿಕ ರಾಜಿಯ [illegible] ಇರುವ ವರೆಗೆ ಯುದ್ಧ ಪ್ರಾರಂಭಿಸಬಾರದೆಂಬುದು ನಿಜ. ಆದರೂ ಈ ಕಾಲದಲ್ಲಿ ಜನಾಂಗದ ಬಲವು ಕಡಿಮೆಯಾಗುವಂತೆ ಮಾಡುವುದು ನಮ್ಮ ಕೆಲಸವಲ್ಲ. ಖಾದಿಯನ್ನು ಅಲ್ಲಗಳೆದರೆ ಜನಾಂಗದ ಬಲವನ್ನು ಕಡಿಮೆ ಮಾಡಲು ಖಂಡಿತದ ಉಪಾಯವಾಗುತ್ತದೆ. ಈಗ ಖಾದಿಯನ್ನು ಧರಿಸುವವರು ಎರಡು ಬದಿಯಲ್ಲಿರುವ ತನ್ನ ಇಷ್ಟದ ನೆರೆಯವರಿಗಾದರೂ ಬೋಧಿಸಿದರೆ ಗಾಂಧಿ ವಾರದಲ್ಲಿ ಆದ ಪ್ರಚಾರಕ್ಕಿಂತ ಮೂರರಷ್ಟು ಹೆಚ್ಚಿನ ಪ್ರಚಾರವಾಗುತ್ತದೆ.

ಗಾಂಧಿಜೀಯವರು ಇಂಗ್ಲೆಂಡಿನಿಂದ ಹಿಂತಿರುಗಿ ಬರುತ್ತಾರೆ. ಕಾಂಗ್ರೆಸಿನ ಒಬ್ಬನೇ ಒಬ್ಬನಾದ ಪ್ರತಿನಿಧಿಯು ಹಿಂದಕ್ಕೆ ಬರುತ್ತಾರೆ. ಹಿಂದೂಸ್ಥಾನದ ಆತ್ಮ ಬಲದ ಅದ್ಭುತ ಶಕ್ತಿಯನ್ನು ಇಂಗ್ಲೆಂಡಿಗೆ ತೋರಿಸಲು ದೃಢಸಂಕಲ್ಪ ಮಾಡಿ ಬಂದಿರುತ್ತಾರೆ.

ಇಂಗ್ಲೆಂಡು ಅವರನ್ನು ತನ್ನ ಅತಿಥಿಯಾಗಿ ಆಮಂತ್ರಿಸಿತು. ಆದರೆ ಸ್ವರಾಜ್ಯವಿಲ್ಲದೆ ಬರೀ ಕೈಯಲ್ಲಿ ಹಿಂದಕ್ಕೆ ಕಳುಹಿಸಿದೆ. ನಮ್ಮ ದೇಶಕ್ಕೆ ಅವರು ಹಿಂತಿರುಗಿ ಬರುವಾಗ ಅವರಿಗೆ ನಾವು ಯಾವ ರೀತಿಯ ಸ್ವಾಗತವನ್ನೀಯಬೇಕು?

ಹಿಂದೂಸ್ಥಾನಕ್ಕೆ ತನ್ನ ಆತ್ಮಗೌರವವು ತಿಳಿದಿದೆ. ಗುಲಾಮಗಿರಿಯ ದುಸ್ತನ್ನು ಧರಿಸಲು ಒಪ್ಪುವುದಿಲ್ಲ. ಖಾದಿಯೇ ಹಿಂದೂಸ್ಥಾನದ ಉಡುಪೆಂತ ತೋರಿಸಬಹುದು. ಈ ದೃಢ ಸಂಕಲ್ಪವನ್ನು ವಿಜ್ಞಾಪನಾ ಪತ್ರದಲ್ಲಿ ಬರೆದು ಒಪ್ಪಿಸಬೇಕೆಂತ ಇಲ್ಲ. ನಾವೆಲ್ಲರೂ ಖಾದಿಯನ್ನು ಧರಿಸಿಯೇ ತೋರಿಸಬೇಕು. ಮೂವತ್ತು ಮೂರು ಕೋಟಿ ಜನರ ಪ್ರತಿನಿಧಿಯಾಗಲು ಬೇರೆ ಯಾರಾದರೂ ಇಷ್ಟು ವಿಶೇಷ ಶಕ್ತಿ ಇರುವವರು ಇದ್ದಾರೆಯೋ? ಅಂಥವರ ಬಲವು ಪ್ರಪಂಚದಲ್ಲಿ ಯಾರಿಗೂ ಅಂಜದಿರುವಂಥಾದ್ದಾಗಿರಬೇಕು. ಪುರಾತನ ಕಾಲದಲ್ಲಿ ಬ್ರಹ್ಮಚಾರಿಯಾದ ಕಾರ್ತಿಕೇಯನಿಗೆ ದೇವತೆಗಳು ಅಂಥಾ ಶಕ್ತಿಯನ್ನು ಕೊಟ್ಟರು. ಅವನೇ ದೇವತೆಗಳ ಸೈನ್ಯಾಧಿಪತಿಯಾದನು. ಹಾಗೆಯೇ ನಾವು ಗಾಂಧಿಜಿಯವರಿಗೆ ಶಕ್ತಿಯನ್ನು ಕೊಟ್ಟಿರುತ್ತೇವೆ. ನಮ್ಮ ದುರ್ಬಲವನ್ನು ತೋರಿಸುವ ಅವಕಾಶವು ಗಾಂಧಿಯವರಿಗೆ ಇಲ್ಲದಂತೆ ನಾವು ಮಾಡಬೇಕು. ಇಂಗ್ಲೆಂಡಿನ ಅತಿ ಕಠಿಣ ಚಳಿ ಮಳೆ ಬಿಸಿಲಿನಲ್ಲಿಯೂ ಸಹ ಅವರು ಕಾಲಿಗೆ ಚೀಲ ಸಹ ಹಾಕಲಿಲ್ಲ. ಆದರೆ ಅವರ ಸಂಗಡ ಅವರ ದೇಶೀಯರ ಬಿಸಿ ಬಿಸಿ ಹೃದಯಗಳ ಬೆಂಬಲವಿತ್ತು. ಅದೇ ಉರಿಯುವ ಹೃದಯದೊಡನೆ ಹಿಂತಿರುಗಿ ಬರುತ್ತಿದ್ದಾರೆ. ಎಲ್ಲಿಯೂ ಪರದೇಶೀ ಬಟ್ಟೆ ಕಾಣದಂತೆ ಮಾಡಿ ನಮ್ಮ ಗೌರವವನ್ನು ಉಳಿಸಿಕೊಳ್ಳುವ ಕರ್ತವ್ಯವು ನಮ್ಮದಾಗಿರಬೇಕು. ಖಾದಿಯ ಖರ್ಚು ಎಷ್ಟೇ ಏರಿದರೆ ಪ್ರವಾಹದಂತೆ ಆಗುತ್ತಿರಬೇಕು. ಗುಲಾಮಗಿರಿಯ ಚಿನ್ಹೆಯಾದ ಪರದೇಶೀ ಬಟ್ಟೆಯನ್ನು ಖಂಡಿತವಾಗಿಯೂ ಬಿಡಬೇಕು. ಸ್ವಾತಂತ್ರ್ಯ ದೇವಿಯನ್ನು ಪೂಜಿಸುವಾಗ ಶುದ್ಧ ಸ್ವಾತಂತ್ರ್ಯದ ಕುರುಹಾದ ಬಿಳೀ ಖಾದಿಯೇ ನಮ್ಮ ಉಡುಪಾಗಿರಬೇಕು. 'ರಂಗ ಪಂಚಮಿ' ಯನ್ನು ಆಚರಿಸುವ ಸುಮುಹೂರ್ತ ಬಂದಾಗ ತ್ಯಾಗಿಯ ರಕ್ತ ಬೇಕಾದಷ್ಟು ದೊರೆಕೀತು.

"ಯಂಗ್ ಇಂಡಿಯ."

ಸೈನ್ಯದ ವಿಷಯ.

ಗಾಂಧೀಜಿಯವರ ಭಾಷಣ.

(ಕಳೆದ ವಾರದಿಂದ ಮುಂದುವರಿದದ್ದು)

ಹಿಂದೀಯರು ಹಿಂದೂಸ್ಥಾನವನ್ನು ಕಾಪಾಡಿಕೊಳ್ಳಲು ತಿಳಿಯದೆ ಇರುವವರಲ್ಲ. ಸಾಮಗ್ರಿಗಳೆಲ್ಲಾ ತಯಾರಿವೆ. ಮುಸಲ್ಮಾನರಿಗೆ ಪರ ರಾಜರ ಮುತ್ತಿಗೆಯ ಭಯವಿಲ್ಲ. ಬೇರೆ ಯಾರಿಂದಲೂ ಸೋಲಿಸಲ್ಪಟ್ಟೇವೆಂತ ಸಿಕ್ಕರು ಯೋಚಿಸುವುದೇ ಇಲ್ಲ. ಗ ರ್ಖರಿಗೆ ಶಾಂತಿಯ ಭಾವನೆ ಬಂದರೆ ಹಿಂದೂಸ್ಥಾನವನ್ನು ತಾವು ಮಾತ್ರವೇ ಕಾಪಾಡಿಕೊಳ್ಳುತ್ತೇವೆ ಅವರು ಎನ್ನುತ್ತಾರೆ. ರಜಪೂತ್ರರು ಶೌರ್ಯಕ್ಕೆ ಪ್ರಖ್ಯಾತರಾಗಿದ್ದಾರೆ. ಆದ್ದರಿಂದ ಹಿಂದೀಯರಿಗೆ ಶೌರ್ಯವನ್ನು ಕಲಿಸಿಕೊಡಬೇಕಾಗಿಲ್ಲ. ಹಿಂದೂಸ್ಥಾನವನ್ನು ಆಳುವ ಜವಾಬ್ದಾರಿಯನ್ನು ವಹಿಸಿಕೊಳ್ಳುವಾಗ ಈ ಎಲ್ಲಾ ಜಾತಿ ಜನರೂ ಸಹಕರಿಸುತ್ತಾರೆ.

ಕೋಮುವಾರು ಭೇದವಿಲ್ಲದೆ ಎಂದು ಒಗ್ಗಟ್ಟಾದೇವೆಂತ ಎದೆಬಿರಿಯುವ ನೋವು ಉಳ್ಳವನಾಗಿದ್ದೇನೆ. ಒಗ್ಗಟ್ಟಾದಾಗ ಅನ್ಯೋನ್ಯ ನಂಬಿಕೆ ಇರುತ್ತದೆ. ಆಳುವುದರಲ್ಲಿ ಮುಸಲ್ಮಾನರು, ಸಿಕ್ಕರು, ಹಿಂದುಗಳು ಯಾರೇ ಪ್ರಬಲರಾದರೂ ಮುಸಲ್ಮಾನ್, ಸಿಖ್, ಹಿಂದೂವಾಗಿ ಆಳುವುದಿಲ್ಲ. ಹಿಂದೀಯರಾಗಿ ಆಳುತ್ತಾರೆ. ನಮ್ಮಲ್ಲಿ ಅನ್ಯೋನ್ಯ ಅಪನಂಬಿಕೆ ಇದ್ದರೆ ಅನ್ಯೋನ್ಯ ಕೊಲ್ಲುವುದನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಬ್ರಿಟಿಷ್ ಜನರ ಸಹಾಯ ಬೇಕಾಗುತ್ತದೆ. ಅಂಥಾ ಸ್ಥಿತಿಯಲ್ಲಿ ಪ್ರಜಾಜವಾಬ್ದಾರಿ ಸರಕಾರದ ಮಾತೇಬೇಡ. ಸ್ನೇಹ ಸ್ವಭಾವವಿರುವ ಎಲ್ಲಾ ಜಾತಿಯವರು ಸಹಕರಿಸಿಯಾರೆಂತಲೂ, ಬ್ರಿಟಿಷರು ಹಿಂದೂಸ್ಥಾನದ ಮೇಲಿನ ಪ್ರೀತಿಯಿಂದ ಸಹಾಯ ಮಾಡಿಯಾರೆಂತಲೂ, ಆದ್ದರಿಂದ ಪ್ರಜಾಜವಾಬ್ದಾರಿ ಸರಕಾರದ ಸ್ಥಾಪನೆಯಾದೀತೆಂತಲೂ ನನಗೆ ನಂಬಿಕೆ ಇದೆ. ಇಂಥಾ ಸುದಿನ ಪ್ರಾಪ್ತಿಗೆ ಇನ್ನೂ ಒಂದು ಶತಮಾನ ಕಾಯಬೇಕೆಂತ ಬ್ರಿಟಿಷರು ಎಣಿಸುವುದಾದರೆ ಕಾಂಗ್ರೆಸಿನವರು ಆ ಶತಮಾನವೆಲ್ಲಾ ಕಾದು ಕುಳಿತುಕೊಳ್ಳದೇ ಇರುತ್ತಾರೆ. ಅವರ ಬೆಂಕಿ ಪ್ರವೇಶದಂತಿರುವ ಚಳವಳಿಗಳನ್ನು ನಡಿಸುತ್ತಲೇ ಇರುತ್ತಾರೆ. ಕಷ್ಟ ಅನುಭವಿಸಲು ತಯಾರಿರುತ್ತಾರೆ. ತಮ್ಮ ವಿಷಯ ಸುಳ್ಳು ಸುಳ್ಳು ಹೇಳಿದರೂ ಸಹಿಸಲು ತಯಾರಿರುತ್ತಾರೆ. ದೇವರ ಇಚ್ಛೆ ಹಾಗಿದ್ದರೆ, ಕೋವಿ ಗುಂಡಿನ ಮಳೆಯ ನಡುವೆಯಾದರೂ ಪ್ರವೇಶಿಸಲು ತಯಾರಿದ್ದಾರೆ. ಈ ತರ ಕಷ್ಟ ಯಾಕೆ ಅನುಭವಿಸಬೇಕೆಂದರೆ, ನಾವು ಅನ್ಯೋನ್ಯ ನಂಬುವುದಿಲ್ಲವಾದ್ದರಿಂದ, ಬ್ರಿಟಿಷರು ಹಿಂದೀಯರೂ ಅನ್ಯೋನ್ಯ ಪರರೆಂದು ನೋಡುತ್ತಿರುವುದರಿಂದ.

ಇದೇ ನನ್ನ ಮುಖ್ಯ ಹೇಳಿಕೆ. ತಪಶೀಲ್ ವಿವರಿಸಬೇಕಾಗಿಲ್ಲ. ನನ್ನಿಂದ ಸಾಧ್ಯವಿದ್ದಷ್ಟು ಜೋರಿನಿಂದ ಹೇಳಿದ್ದೇನೆ. ಈ ಸ್ಥಿತಿಯನ್ನು ಒಪ್ಪಿಕೊಳ್ಳುತ್ತೀರಾದರೆ ಮತ್ತು ಹಿಂದೂಸ್ಥಾನಕ್ಕೆ ಪ್ರಯೋಜನವಾಗುವಂಥಾದ್ದಾರೆ ನಿಮ್ಮಲ್ಲಿ ಜನರಿಗೆ ಒಪ್ಪಿಗೆಯಾಗುವ ಎಷ್ಟು ಬಂದೋಬಸ್ತುಗಳನ್ನಾದರೂ ತಯಾರಿಸಲು ಸಿದ್ಧನಾಗಿದ್ದೇನೆ. ಲಾರ್ಡ್ ಇರ್ವಿನರು ಇಂಗ್ಲೆಂಡಿಗೂ, ಇಂಡಿಯಾಕ್ಕೂ ಅವಶ್ಯವಿರುವ ಭದ್ರತೆಗಳನ್ನು ಮಾಡಿಕೊಳ್ಳಲು ಗಾಂಧಿಯು ಸಹ ಒಪ್ಪಿದ್ದಾರೆಂತ ಹೇಳಿದರು. ಇಂಗ್ಲೆಂಡಿಗೂ ಇಂಡಿಯಾಕ್ಕೂ ಆಗಬೇಕಾದ ಪಾಲುವಂತಿಗೆಯ ಏರ್ಪಾಡು ಸರಿಸಮಾನರಿಗೆ ಆಗುವಂಥಾದ್ದಾರೆ ಇಂಗ್ಲೆಂಡಿಗೆ ಪ್ರಯೋಜನವಾಗುವಂಥಾದ್ದು ಇಂಡಿಯಾಕ್ಕೆ ಪ್ರಯೋಜನವಾಗಲಾರದೆಂತಲೂ, ಇಂಡಿಯಾಕ್ಕೆ ಪ್ರಯೋಜನವಾಗುವಂಥಾದ್ದು ಇಂಗ್ಲೆಂಡಿನ ಪ್ರಯೋಜನವಾಗಲಾರದೆಂತಲೂ ಹೇಳಲು ಸಾಧ್ಯವಿಲ್ಲ.

ಸೈನ್ಯದ ಮೇಲೆ ಅಧಿಕಾರ ಬೇಕೆಂತ ಕೇಳಲು ಕೊಟ್ಟ ಕಾರಣಗಳಿಗಾಗಿಯೇ ಪರ ರಾಜರ ಸಂಬಂಧದ ಮೇಲೂ ನಮಗೆ ಅಧಿಕಾರ ಬೇಕೆಂತ ಕೇಳುವುದಾಗಿದೆ. ಪರರಾಜರ, ದೇಶೀ ರಾಜರ, ಸಂಬಂಧದ ಅಧಿಕಾರವನ್ನು ವಹಿಸಲು ನಾವೂ ಸಂಪೂರ್ಣ ಅರ್ಹರಾಗಿದ್ದೇವೆ. ದೇಶೀ ರಾಜರುಗಳು ನಮ್ಮವರೇ ಆಗಿದ್ದಾರೆ. ಅವರ ಸಂಗಡ ಸ್ನೇಹದಲ್ಲಿರುವುದು ಏನೂ ಕಷ್ಟವಿಲ್ಲ. ಅಫಘಾನ್, ಜಪಾನ್ ಮತ್ತು ಬ್ರಿಟಿಷ್ ಸಾಮಂತ ರಾಜ್ಯಗಳೊಂದಿಗೆ ಸ್ನೇಹದಲ್ಲಿರುವುದು ಕಷ್ಟವಿಲ್ಲ. ಸಾಮಂತ ರಾಜ್ಯಗಳಲ್ಲಿ ನಮ್ಮ ದೇಶೀಯರಿಗೆ ಅನುಕೂಲಗಳು ದೊರೆಯದಿದ್ದರೆ ಅವರೊಂದಿಗೆ ವ್ಯವಹಾರ ನಡಿಸಬಹುದು.

ನನ್ನನ್ನು ಹುಚ್ಚನೆಂತ ಭಾವಿಸಬಹುದು. ಆದರೆ ನಾನು ಕೇಳುವ ಹಕ್ಕುಗಳು ಸಿಕ್ಕಲೇ ಬೇಕೆಂತ ಹೇಳುವ ಶಕ್ತಿಯು ನಾವಿರ ಕಾಂಗ್ರೆಸಿನಲ್ಲಿ ನನ್ನಂತಾ ಹುಚ್ಚರೇ ಇದ್ದಾರೆ. ಹಿಂದೂಸ್ಥಾನವೂ ಇಂಗ್ಲೆಂಡೂ ಮನಃ ಪೂರ್ತಿಯಾಗಿ ಒಗ್ಗಟ್ಟಾದರೆ ಇಂಗ್ಲೆಂಡಿನ ಪಕ್ಷಗಳಿಗೂ ಇಂಗ್ಲೀಷರ ದೇವರಿಗೂ ಹಾನಿ ಬಾರದಂಥ ಭದ್ರತೆಗಳನ್ನು ಮಾಡಿಕೊಳ್ಳುವುದು ಏನೂ ಕಷ್ಟವಲ್ಲ.

ಇಂಗ್ಲೀಷರ ಮೇಲೆ ನನಗಿರುವ ಸ್ನೇಹ ಭಾವದಿಂದಲೂ, ನನ್ನ ದೇಶೀಯರ ಸೇವೆ ಮಾಡಬೇಕೆಂಬ ಭಾವದಿಂದಲೂ ನಾನು ಮಾತನಾಡಿರುವುದಾಗಿದೆ.

ಕೊಡಗಿನ ಕಾಂಗ್ರೆಸು ಮೀಟಿಂಗು.

ಕೊಡಗಿನ ಕಾಂಗ್ರೆಸು ಮೆಂಬರುಗಳ ಜನರಲ್ ಮೀಟಿಂಗು ಈ ತಾ 14ನೇ ಸೋಮವಾರ ವೀರರಾಜಪೇಟೆಯಲ್ಲಿ ನಡೆಯಿತು. ಶ್ರೀ ನಾಯಡ ಪೆಮ್ಮಯ್ಯನವರು ಮೀಟಿಂಗಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

1. ಕೊಡಗಿನ ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ 15 ಮೆಂಬರುಗಳಿರಬೇಕೆಂದು ಶ್ರೀ ಮುಂಡೇಮಾಡ ಸೋಮಣ್ಣನವರು ಸೂಚಿಸಿದನ್ನು ಶ್ರೀ [illegible] ನವರು ಅನುಮೋದಿಸಿದರು. ಠರಾವು ಒಮ್ಮತದಿಂದ ಮಂಜೂರಾಯಿತು.

2. ಕ್ರೀಯುತರುಗಳಾದ (1) ಸಿ. ಎಮ್. ಪೆಂಮಯ್ಯನವರು, (2) [illegible] ನವರು, (3) [illegible] ಮುದ್ದಪ್ಪಯ್ಯನವರು, (4) ಕೋಟೇರ ಚಿಣ್ಣಪ್ಪನವರು, (5) ಮುಂಡೇಮಾಡ ಸೋಮಣ್ಣನವರು, (6) [illegible] ಪೆಮ್ಮಯ್ಯನವರು, (7) ಅಬ್ದುಲ್ ಗಫೂರ್‌ಖಾನ್ ಸಾಹೇಬರು, (8) ಹೆಚ್. ಆರ್. ಕೃಷ್ಣಯ್ಯನವರು, (9) [illegible] ಚಿಣ್ಣಪ್ಪನವರು, (10) ಕೊಳ್ಳಿಮಾಡ [illegible] ಯ್ಯನವರು, (11) ಅಜ್ಜಮಾಡ ಮಾದಪ್ಪನವರು, (12) [illegible] ಚಿಣ್ಣಪ್ಪನವರು, (13) [illegible] ನವರು, (14) [illegible] ಮೆಯಂಡ ಅಚ್ಚಯ್ಯನವರು ಮತ್ತು (15) [illegible] ಪ್ಪನವರು ಜಿಲ್ಲಾ ಕಾಂಗ್ರೆಸ್ ಕಮಿಟಿ ಮೆಂಬರುಗಳಾಗಿ ಆರಿಸಲ್ಪಡಬೇಕೆಂದು ಶ್ರೀ [illegible] ನವರು ಸೂಚಿಸಿದರು. ಶ್ರೀ [illegible] ನವರು ಅನುಮೋದಿಸಿದರು. ಸ್ವಲ್ಪ ಚರ್ಚೆ ನಡೆದ ನಂತರ ಮೇಲಿನ ಸೂಚನೆಯು ಸರ್ವ ಸಮ್ಮತದಿಂದ ಪಾಸಾಯಿತು.

3. ಕಮಿಟಿಯ ಮೀಟಿಂಗಿನ ಕೋರಂಗೆ 5 ಜನರು ಹಾಜರಿರಬೇಕೆಂದು ತೀರ್ಮಾನಿಸಲಾಯಿತು.

4. ಕ್ರೀಯುತರುಗಳಾದ [illegible] ನವರು ಕಮಿಟಿಯ ಅಧ್ಯಕ್ಷರಾಗಿಯೂ, [illegible] ನವರು ಕಾರ್ಯದರ್ಶಿಯಾಗಿಯೂ ಮತ್ತು [illegible] ನವರು ಖಜಾಂಚಿಯಾಗಿಯೂ ಸರ್ವ ಸಮ್ಮತದಿಂದ ಆರಿಸಲ್ಪಟ್ಟರು.

[illegible] ನವರು ಮತ್ತು [illegible] ನವರು ತಮ್ಮನ್ನು ಅಧ್ಯಕ್ಷ [illegible] ಗಳಾಗಿ ಚುನಾಯಿಸಿದ್ದಕ್ಕಾಗಿ [illegible] ಕಾಂಗ್ರೆಸಿನ ಕೆಲಸವನ್ನು [illegible] ನಡಿಸಲು [illegible]

ಸಭಾಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗು ಮುಗಿಯಿತು.

[illegible]

[illegible]

[illegible]

ದುಕೊಂಡರು. 12 ಗಂಟೆಗೆ ಸರಿಯಾಗಿ ಅತಿಥಿಗಳು ಒಂದ ನಂತರ ಮನಸ್ಸಿಗೆ ಆಹ್ಲಾದ ಉಂಟಾಗುವಂತೆ ಊಟ ಉಪ ಚಾರಗಳನ್ನು ಮುಗಿಸಿದನಂತರ ನೆರೆದಿದ್ದವರು ಹಣ್ಣು ಹಂಪ ಲುಗಳನ್ನು ಸ್ವೀಕರಿಸಿದರು.

ಮಿ. ತಿಮ್ಮಯ್ಯ ಪುಂಜರವರು ಅತಿಥಿಗಳ ಪರವಾಗಿ ಒಂದು ಚಿಕ್ಕ ಭಾಷಣದಲ್ಲಿ ಅವರಿಗೆ ಆಮಂತ್ರಣವಿತ್ತದಕ್ಕೆ ಸಭೆಯನ್ನು ವಂದಿಸಿ, ಸಂಘವು ಮುಂದಕ್ಕೆ ಅಭಿವೃದ್ಧಿಯನ್ನು ಹೊಂದುವಂತೆ ಹಾರೈಸಿದರು. ಸಂಘದ ಪರವಾಗಿ ಪ್ರೆಸಿಡೆಂಟರು ಅತಿಥಿಗಳಿಗೆ ವಂದಿಸಿ, ಹುತ್ತರಿ ಹಬ್ಬದ ವಿಶೇಷತೆಯನ್ನು ಕುರಿತು ಭಾಷಣವನ್ನು ಮಾಡಿದರು. ಸುಮಾರು ಮೂರು ಗಂಟೆಗೆ ಸಭೆಯು ಮುಕ್ತಾಯವಾಯಿತು.

ಗೌರವ ಕಾರ್ಯದರ್ಶಿ.

ಮಹಾತ್ಮರ ಕಡೆಯ ಪ್ರಕಟನೆ.

ಮಹಾತ್ಮ ಗಾಂಧಿಯವರು ಲಂಡನಿನಿಂದ ಹಿಂತಿರುಗುವ ಮುಂಚೆ ತಮ್ಮ ಈ ಕೆಳಗಿನ ಅಲ್ಲಿಯ ಕಡೇ ಹೇಳಿಕೆಯನ್ನು ಬಹಿರಂಗಗೊಳಿಸಿದರು—

(1) ಕಾಂಗ್ರೆಸ್ಸಿನವರು ಪೂರ್ಣ ಸ್ವರಾಜ್ಯವ (ಕಂಪ್ಲೀಟ್ ಇಂಡಿಪೆಂಡೆನ್ಸ್)ನ್ನು ಕೋರುತ್ತಿರುವರು. ದೇಶ ರಕ್ಷಣ ಸೇನೆ, ವಿದೇಶ ವಿಷಯ, ಆರ್ಥಿಕ—ಇವುಗಳ ಮೇಲೆ ಕೂಡ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ಕಾಂಗ್ರೆಸಿನವರು ಅಪೇಕ್ಷಿಸುತ್ತಾರೆ (2) ಬ್ರಿಟಿಷ್ ಕಾಮನ್ ವೆಲ್ತಿನಲ್ಲಿ ಬ್ರಿಟಿಷಿನವರಿಗಿರುವ ಹಕ್ಕನ್ನೂ, ಸಮಾನ ಗೌರವವನ್ನೂ ಉಳ್ಳ ನಾಲುದಾರನಂತೆ ಭಾರತ ದೇಶವು ಕೂಡ ಇರತಕ್ಕದು ಅತ್ಯಂತ ಮುಖ್ಯವಾದದ್ದು. ಈ ನಾಲುದಾರಿಕೆಯ ಸಂಬಂಧವನ್ನು ರದ್ದುಪಡಿಸಿಕೊಳ್ಳಬೇಕೆಂದು ಬ್ರಿಟಿಷಿನವರು ಕೋರಿದರೂ, ಯಾ ಭಾರತೀಯರು ಕೋರಿದರೂ ಆ ಸಂಬಂಧವನ್ನು ರದ್ದು ಪಡಿಸಲು ಸಹ ಸಂಪೂರ್ಣ ಸ್ವಾತಂತ್ರ್ಯವು ಭಾರತೀಯರಿಗಿರಬೇಕ. (3) ಪರಸ್ಪರ ಬಾಧ್ಯತೆಯನ್ನು ಇಟ್ಟುಕೊಂಡು ಎರಡು ದೇಶದವರೂ ಒಪ್ಪಬೇಕು. (4) ಭಾರತ ದೇಶಕ್ಕೆ ಬಾಧಕರವಾದ ರಕ್ಷಣೆಯನ್ನು ಕಾಂಗ್ರೆಸಿನವರು ಅಂಗೀಕರಿಸುವರು. (5) ಭಾರತ ದೇಶದವರು ಯುಕ್ತವಿಲ್ಲದೆ ತೀರಿಸಬೇಕಾದ ಋಣವನ್ನಲ್ಲ ತೀರಿಸಲು ಕಾಂಗ್ರೆಸಿನವರಿಗೆ ಯಾವ ಅಭ್ಯಂತರವೂ ಇಲ್ಲವಾದರೂ ಅದನ್ನು ಕುರಿತು ನಿಷ್ಪಕ್ಷಪಾತವಾದ ಒಂದು ನ್ಯಾಯಸ್ಥಾನದವರು ವಿಚಾರಣೆ ಮಾಡಿ ಸ್ಥಿರಪಡಿಸಬೇಕು (6) ಅಲ್ಪ ಸಂಖ್ಯಾತರ ಸಮಸ್ಯೆಯನ್ನು ಭಾರತೀಯರೇ ಪರಿಷ್ಕರಿಸಬೇಕೆಂದು ಕಾಂಗ್ರೆಸಿನವರು ನಿಶ್ಚೈಸಿದರು. ಅದರ ಆವಶ್ಯಕವಿದ್ದಲ್ಲಿ ಶಾಸನ ಸಭೆಯಲ್ಲಿ ಮಹಮ್ಮದೀಯರಿಗೂ, ಸಿಖ್ಖರಿಗೂ ಮಾತ್ರ ಪ್ರತ್ಯೇಕ ಸ್ಥಾನಗಳು ಕೊಡಲ್ಪಡಬೇಕೆಂಬ ಸಿದ್ಧಾಂತವನ್ನೊಪ್ಪಿದರು. ಇದು ಹಾನಿಕರವಾಗಿರುವುದಾದರೂ ಚಾರಿತ್ರಿಕವಾದ ಕಾರಣಗಳಿಂದ ತಪ್ಪಿಸತಕ್ಕುದಲ್ಲವಾಗಿದೆ. (7) ಅಸ್ಪೃಶ್ಯರ ವಿಚಾರವಾಗಿ ಕಾಂಗ್ರೆಸಿನವರು ಪ್ರತ್ಯೇಕ ಶ್ರದ್ಧೆಯನ್ನು ವಹಿಸುವರು. ಅವರಿಗೆ ಪ್ರತ್ಯೇಕ ಸ್ಥಾನಗಳನ್ನು ಗೊತ್ತು ಮಾಡುವುದು ನ್ಯಾಯವಲ್ಲವು. ಹಾಗೆ ಮಾಡಿದರೆ ಅಸ್ಪೃಶ್ಯತೆಯು ಶಾಶ್ವತವಾಗಿರಲು ಅನುಮೋದಿಸಿದಂತೆಯೇ ಆಗುವುದು. ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಲು ಈಗಲ್ಲದೂ ತಮ್ಮ ಶಕ್ತಿ ಸಾಹಸಗಳನ್ನೆಲ್ಲ ವಿನಿಯೋಗಿಸುತ್ತಿದ್ದಾರೆ. ಆದುದರಿಂದ ಇದಕ್ಕೆ ವಿರೋಧವಾಗಿ ಏನನ್ನೂ ಮಾಡಲಾಗದು. (8) ಜಾತಿ ವರ್ಣಾದಿ ಭೇದಗಳನ್ನನುಸರಿಸಿ ರಾಜಕೀಯ ಹಕ್ಕುಗಳಲ್ಲಿ ವಿಭೇದವು ಎಷ್ಟು ಮಾತ್ರಕ್ಕೂ ಕಲ್ಪಿಸಲ್ಪಡುವುದಿಲ್ಲ. (9) ಪ್ರಾಪ್ತ ವಯಸ್ಕರಾದವರೆಲ್ಲರಿಗೂ ಓಟು ಮಾಡುವದಕ್ಕೂ ಉಮೇದುವಾರರಾಗಿ ನಿಲ್ಲುವುದಕ್ಕೂ ಹಕ್ಕಿರಬೇಕು. ದೇಶ ಸೇವೆ ಮಾಡತಕ್ಕವರು ಯಾವ ಅಲ್ಪ ಸಂಖ್ಯಾತ ಸಂಘಕ್ಕೆ ಸೇರಿದವರಾದರೂ ಕೂಡ ಅವರು ಶಾಸನ ಸಭೆಗಳಿಗೆ ಚುನಾಯಿಸಲ್ಪಡಲು ಯಾವ ಅಭ್ಯಂತರವೂ ಇರಕೂಡದು.

ಕೊಡಗಿನ

ಸ್ವಯಂ ಸೇವಕರ ತರಬೇತು.

ಕೊಡಗಿನ ಕಾಂಗ್ರೆಸು ಸೈನಿಕರನ್ನು ತರಬೇತು ಮಾಡಲು ಈ ತಾ. 1 ರಲ್ಲಿ ವೀರರಾಜಪೇಟೆಯಲ್ಲಿ ಒಂದು ಶಿಬಿರವು ತೆರೆಯಲ್ಪಟ್ಟಿತು. ಹಿಂದೂಸ್ಥಾನಿ ಸೇವಾದಳಕ್ಕೆ ಸೇರಿದ ಧಾರವಾಡದ ಶ್ರೀಯುತ ಬಾಲಚಾರ್ಯ ಅವಧಾನಿಯವರು ಶಾರೀರಿಕ ಅಂದರೆ ಕವಾತು ಮತ್ತು ಲಾಠಿ ತಿರುಗಿಸುವ ತರಬೇತನ್ನು ಕೊಟ್ಟರು. ಕೊಡಗಿನ ಕಾಂಗ್ರೆಸು ಕೆಲಸಗಾರರೇ ಭೌತಿಕ ಶಿಕ್ಷಣವನ್ನು ಕೊಟ್ಟರು. ಡಾಕ್ಟರ್ ಪಾಂಡಂಡ ಸೋಮಪ್ಪನವರು 'ಪ್ರಥಮ ಶಿಕ್ಷಣ' (ಔಷಧ)ದಲ್ಲಿ ಪಾಠ ಹೇಳಿದರು. 22 ಯುವಕರು ಶಿಬಿರದಲ್ಲಿ ಶಿಕ್ಷಣ ಹೊಂದಿದರು. ಶಿಬಿರವನ್ನು 5 ವಾರಗಳ ವರೆಗೆ ನಡಿಸಬೇಕೆಂದು ನಿಶ್ಚಯಿಸಿದ್ದರೂ, ಪಂಡಿತ ಜವಾಹರ್‌ಲಾಲ್ ನೆಹರೂರವರು ಈ ತಾ. 18 ರಲ್ಲಿ ಕರ್ನಾಟಕ ಸೇವಾದಲ ಸೈನಿಕರ ಪದವೀದಾನ ಸಮಾರಂಭವನ್ನು ನಡಿಸುವರೆಂದು ತಿಳಿದು ಬಂದ ಕಾರಣ, ಕರ್ನಾಟಕದ ಇತರ ಎಲ್ಲಾ ಭಾಗಗಳಂತೆ ಇಲ್ಲಿಯೂ ಸೈನಿಕರ ಪರೀಕ್ಷೆಯನ್ನು ಈ ತಾ 14 ರೊಳಗೆ ಮುಗಿಸಬೇಕಾಗಿ ಬಂದುದರಿಂದ, ಈ ಶಿಬಿರವನ್ನು ತಾ. 14 ರಲ್ಲಿ ಅಂತ್ಯಗೊಳಿಸಬೇಕಾಗಿ ಬಂತು.

ಕರ್ನಾಟಕ ಸೇವಾದಳದ ಕಾರ್ಯದರ್ಶಿಯವರಿಂದ ಅಧಿಕಾರ ಹೊಂದಿದ ಶ್ರೀಯುತರುಗಳಾದ ಪಿ. ಐ ಬೆಳ್ಯಪ್ಪನವರು, ಕೆ. ಸಿ. ಕರುಂಬಯ್ಯನವರು ಮತ್ತು ಬಾ. ಅವಧಾನಿಯವರು ಶಿಬಿರದಲ್ಲಿ ತರಬೇತು ಹೊಂದಿದ್ದ 22 ಸೈನಿಕರನ್ನು ತಾ 13 ರಲ್ಲಿ ಪರೀಕ್ಷೆ ಮಾಡಿದರು. ಪರೀಕ್ಷೆಯಲ್ಲಿ ಈ ಕೆಳಗಿನ 20 ಸ್ವಯಂ ಸೇವಕರು ತೇರ್ಗಡೆ ಹೊಂದಿರುವರು: 1. ಮಲ್ಲೇಂಗಡ ಚಂಗಪ್ಪನವರು, 2. ಕಡೇಮಾಡ ಸಂಜಪ್ಪನವರು, 3. ಬಿ. ಜಿ. ಗಣಪಯ್ಯನವರು, 4. ಪುಲಿಯಂಡ ಸುಬ್ಬಯ್ಯನವರು, 5. ಮಾಚೆಟ್ಟಿರ ಮುದ್ದಪ್ಪನವರು, 6. ಎ. ಆರ್. ತಮ್ಮಯ್ಯನವರು, 7. ಸೋಮೆಯಂಡ ಅಚ್ಚಯ್ಯನವರು, 8 ಅಪ್ಪಂಡೆರಂಡ ಬಿದ್ದಯ್ಯನವರು, 9 ಹೆಚ್. ತಮ್ಮಯ್ಯನವರು, 10 ಕಾಡಪಂಡ ಪೂವಯ್ಯನವರು, 11. ಚೆಕ್ಕೆರ ಮಾಚಯ್ಯನವರು, 12. ತಡಿಯಂಗಡ ಸುಬ್ಬಯ್ಯನವರು, 13 ಅಮ್ಮತ್ತಿರ ರಾಮಯ್ಯನವರು, 14. ಮಲ್ಲೇಂಗಡ ಮಂದಣ್ಣನವರು, 15 ಅಲ್ಲುಮಾಡ ಚಟ್ಟಪ್ಪನವರು, 16 ಕೈಬಿಲಿರ ಮಾಚಯ್ಯನವರು, 17. ಕೆ ಸುಬ್ರಾಯನವರು, 18. ಅಜ್ಜಿಕುಟ್ಟಿರ ಸಂಜಪ್ಪನವರು, 19 ಮಳಂಡ ಚಂಗಪ್ಪನವರು ಮತ್ತು 20 ಪೂಜಾರಿ ರಾಮಪ್ಪನವರು.

ಇವರ ಪಟ್ಟಿಯು ಧಾರವಾಡದಲ್ಲಿರುವ ಕರ್ನಾಟಕ ಸೇವಾದಳದ ಹೆಡ್ ಆಫೀಸಿಗೂ, ಹುಬ್ಬಳ್ಳಿಯಲ್ಲಿರುವ ಹಿಂದೂಸ್ಥಾನಿ ಸೇವಾದಳದ ಹೆಡ್ ಆಫೀಸಿಗೂ ಕಳುಹಿಸಲಾಗಿದೆ ದಾರಿ ಖರ್ಚಿಗೆ ಹಣದ ಅಭಾವದಿಂದ ತೇರ್ಗಡೆ ಹೊಂದಿದ ಸೈನಿಕರನ್ನು ಹುಬ್ಬಳ್ಳಿಯಲ್ಲಿ ಈ ತಾ. 18 ರಲ್ಲಿ ನಡೆಯುವ ಕರ್ನಾಟಕ ಸೇವಾದಲ ಸೈನಿಕರ ಪದವೀದಾನ ಸಮಾರಂಭಕ್ಕೆ ಕಳುಹಿಸಲು ಸಾಧ್ಯವಾಗಲಿಲ್ಲ. ಇವರ ಸರ್ಟಿಫಿಕೇಟುಗಳು ಹುಬ್ಬಳ್ಳಿಯಿಂದ ಬಂದ ಮೇಲೆ, ಕಾಂಗ್ರೆಸು ಯೂನಿಫಾರಮಿನ ಸಮೇತ ಇವರಿಗೆ ಅವು ಕೊಡಲ್ಪಡುವವು.

ಪಿ ಐ. ಬೆಳ್ಯಪ್ಪ.

ಗಾಂಧಿಜಿಯವರಿಗೊಂದು "ಚೆಕ್ಕು."

ಮಹಾತ್ಮ ಗಾಂಧಿಯವರು ಲಂಡನಿಗೆ ಹೋಗಿ ಪ್ರಥಮ ಸಲದಲ್ಲಾಗಿ ಅಮೇರಿಕದ ಜನರಿಗೊಂದು ಸಂದೇಶವನ್ನು ವಯರ್‌ಲೆಸ್ ಮೂಲಕ ಕೊಟ್ಟರಷ್ಟೆ! ಆ ಸಂದೇಶವು ಪ್ರತಿಯೊಂದು ವಿದೇಶಿ ಪತ್ರಿಕೆಯ ಲ್ಲೂ ಪ್ರಕಟವಾಯಿತು ಅದನ್ನು ಒಬ್ಬ ಅಮೇರಿಕನ್ ಮಹನೀಯರು ಓದಿ ಅತ್ಯಂತ ಸಂತುಷ್ಟರಾಗಿ ಗಾಂಧಿಯವರಿಗೆ ೫೦ ಪೌಂಡಿನ ಒಂದು ಚೆಕ್ಕನ್ನು ಒಂದು ಕಾಗದದೊಡನೆ ರವಾನಿಸಿದರು. ಕಾಗದದಲ್ಲಿ "ನೀವು ಶನಿವಾರ ದಿನ ಮಿತ್ರಗೃಹದಲ್ಲಿ ಮಾಡಿದ ಭಾಷಣವನ್ನೂ ಅಮೇರಿಕಕ್ಕೆ ಕಳುಹಿಸಿದ ಸಂದೇಶವನ್ನೂ ಈ ದಿನ 'ಟೈಮ್ಸ್' ಪತ್ರಿಕೆಯಲ್ಲಿ ಓದಿ ನೋಡಿ ಬಹಳ ಸಂತೋಷವಾಯಿತು. ಇವೆರಡು ಭಾಷಣಗಳಲ್ಲಿ ಸಂಗೃಹೀತವಾಗಿರುವ ತಮ್ಮ ಉಪದೇಶವು ಅತ್ಯಮೋಘವಾದುದು. ಆ ಉಪದೇಶವನ್ನು ಕೇಳಿದ ಪ್ರಪಂಚದಲ್ಲಿನ ಸಮಸ್ತ ಭಾಗದ ಜನರೂ ಅದನ್ನು ಆಚರಣೆಗೆ ತರುವರೆಂದು ಆಶಿಸುತ್ತೇನೆ. ನನಗೆ ಹಿಂದೂದೇಶದ ಸಂಬಂಧವಾಗಿ ಮೊದಲಿಗಿಂತಲೂ ಬಹಳ ಆಸಕ್ತಿಯುಂಟು ಇದರೊಂದಿಗೆ ಇಟ್ಟಿರುವ ಚೆಕ್ಕನ್ನು ತಮ್ಮ ಕಾರ್ಯಕಲಾಪಗಳಲ್ಲಿ ನನಗಿರುವ ಸಹಾನುಭೂತಿಯ ಸೂಚನೆಗಾಗಿ ಅಂಗೀಕರಿಸಿರಿ. ನಿಮಗೆ ಯುಕ್ತ ತರದ ಕೆಲಸಕ್ಕೆ ಈ ಹಣವನ್ನು ವೆಚ್ಚಮಾಡಬಹುದು. ಪರಿಷತ್ತಿನಲ್ಲಿ ನಿಮ್ಮಿಂದ ಬಹಳ ಕೆಲಸವಾಗಲೆಂದೂ, ನಮ್ಮ ದೇಶದ ವಾಯುಗುಣದಿಂದ ನಿಮಗೆ ಯಾವ ತರದ ತೊಂದರೆಯೂ ಆಗದಿರಲೆಂದೂ ಆಶಿಸುತ್ತೇನೆ" ಎಂದು ಬರೆದಿರುವರು.

"ಸ್ವ. ಟ."

British Photo Camera Rs. 4-8-0.

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಗಳು ವಿಲಾಯಿತಿಯಲ್ಲಿ ತಯಾರಾದವು. ಈ ಕ್ಯಾಮರಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು.



ಇದನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಬಹುಮಾನವಾಗಿ ಕಳುಹಿಸುವೆವು. ಈ ಟೇಬಲ್ ಟೈಂಪೀಸಗಳೂ ಈ ಚಿತ್ರಗಳಲ್ಲಿ ಇರುವಂತೆಯೇ ಇರುವವು. ತಬ್ಬಲ್ ಪಾಲೀಷಿನ ನಿಕ್ಕಲ್ ಕೇಸೂ, ಬಲಿಷ್ಠವಾದ ಲೀವರ್ ಮೂವ್ಮೆಂಟ್‌ಗಳಿಂದ ತಯಾರಿಸಲ್ಪಟ್ಟವು. ಸರಿಯಾದ ಕಾಲವನ್ನು ತೋರಿಸುವವು. ಇದಕ್ಕೆ 5 ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ ಫೋಟೋ ಕ್ಯಾಮರಾ ಬಹುಮಾನ ಟೈಂಪೀಸ್ ಸಹಿತ ರೂ 4-8-0.

The Legal Trading Co.
12-1 P. B. 243. Madras.

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಕ್ಷರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಮೂತ್ರದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಿಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ, ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕ್ರಯ ಡಬ್ಬಿ 1ಕ್ಕೆ 2-8-0 ಮೂರು ಡಬ್ಬಿಗಳಿಗೆ ರೂ. 7-0-0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರ ಆಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ 8, 3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1-8-0, 3 ಬಾಟ್ಲಿಗಳಿಗೆ 4-2-0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ ಡಬ್ಬಿ 1ಕ್ಕೆ ರೂ 2-8-0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಆಯಾಸವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0-12-0 ಆಣೆ. 3 ಬಾಟ್ಲಿಗಳಿಗೆ 2-2-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52-2 ರಥಬೀದಿ, ಮಂಗಳೂರು, ದ. ಕನ್ನಡ.

ಶಕ್ತಿಯ ಉಂಗುರ (1ಕ್ಕೆ ರೂ. 1-4-0.)

ಈ ಉಂಗುರಗಳನ್ನು ಹಿಮಾಲಯ ಪರ್ವತದ ಒಬ್ಬ ಋಷಿಯಿಂದ ತಯಾರಿಸಿದ್ದು, ಇದನ್ನು ಬೆರಳಿನಲ್ಲಿ ಹಾಕಿಕೊಳ್ಳುವುದರಿಂದ ವ್ಯಾಪಾರದಲ್ಲಿ ಲಾಭವೂ, ಕೋರ್ಟಿನ ವ್ಯಾಜ್ಯಗಳಲ್ಲಿ ಜಯವೂ, ರೋಗ ಪೀಡಿತರಿಗೆ ಆರೋಗ್ಯವೂ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ, ಸಂಪಾದನೆ ಇಲ್ಲದಿದ್ದವರಿಗೆ ಸಂಪಾದನೆ, ಬಿಳಿಯ ತೊನ್ನು ಹಿಡಿದವರಿಗೆ ಗುಣವೂ ಮತ್ತು ಇತರ ಅನೇಕ ವಿಧವಾದ ಕಾರ್ಯಗಳಲ್ಲಿ ಜಯ, ಧೈರ್ಯ, ಲಾಭಗಳನ್ನು ಉಂಟು ಮಾಡುವವು. ಮತ್ತು ಈ ಶಕ್ತಿಯ ಉಂಗುರಗಳನ್ನು ಮಕ್ಕಳ ಕೊರಳಿನಲ್ಲಿ ಕಟ್ಟುವುದರಿಂದ ಮಕ್ಕಳಿಗೆ ಬರುವ ಎಲ್ಲಾ ವಿಧವಾದ ವ್ಯಾಧಿಗಳನ್ನು ಗುಣಪಡಿಸುವವು. ಈ ಶಕ್ತಿಯ ಉಂಗುರಗಳು ನಾವು ತಿಳಿಸಿರುವಂತೆ ಪ್ರತಿ ಕೆಲಸದಲ್ಲಿಯೂ ಬಾಧಕವನ್ನು ಕೊಡಲಿಲ್ಲವೆಂದು ವ್ಯಕ್ತಪಡಿಸುವವರಿಗೆ 50 ರೂ. ಗಳನ್ನು ಇನಾಮಾಗಿ ಕೊಡುವೆವು. ಶಕ್ತಿಯ ಉಂಗುರ 1ಕ್ಕೆ 1-4-0, 3ಕ್ಕೆ 3-4-0, 6ಕ್ಕೆ 6-0-0

ವಿಳಾಸ—ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,
12-1 109 ಬ್ರಾಡ್ವೇ ಬಜಾರ್, ಮದರಾಸು

1932 ನೇ ಇಸವಿಯ ಪಾಕೆಟ್ ಡೈರಿ ಇನಾಂ.

ಈ ಪೆನ್ನಾವನ್ನು ಕೊಳ್ಳುವವರಿಗೆ 1932 ನೇ ಇಸವಿಯ ಪಾಕೆಟ್ ಡೈರಿ ಇನಾಮಾಗಿ ಕೊಡುವೆವು. ಈ ಡೈರಿಯಲ್ಲಿ ಎಲ್ಲಾ ರಾಜರುಗಳ ಹೆಸರೂ, ಗವರ್ನರುಗಳ ಹೆಸರೂ, ಯಾರ್ಯಾರಿಗೆ ಎಷ್ಟು ಗುಂಡುಗಳು ಹಾರಿಸಬೇಕೆಂಬುದೂ ಮತ್ತು ರೈಲು, ಟಪಾಲು, ರಿಜಿಸ್ಟ್ರೇಶನ್ ಚಾರ್ಜುಗಳೂ, ಪಂಚಾಂಗ, ಎಲ್ಲಾ ಮತಸ್ಥರ ಹಬ್ಬಗಳೂ, ಸರ್ಕಾರ ರಜಗಳೂ ಕನ್ನಡ, ಇಂಗ್ಲೀಷು ಭಾಷೆಗಳಲ್ಲಿ ಪ್ರಿಂಟಾಗಿವೆ ಈ ಫೌಂಟನ್ ಪೆನ್ನಾವು ವಿಲಾಯಿತಿಯಲ್ಲಿ ತಯಾರಾದದ್ದು. ಇದಕ್ಕೆ ಬಂಗಾರದ ನಿಬ್ಬು ಹಾಕಿದೆ. ಪಾಕೆಟ್ ಡೈರಿ ಸಹಿತ ಪೆನ್ನಾ 1ಕ್ಕೆ 1-12-0

ಯಂ. ರಿಯೋ ಅಂಡ್ ಕೋ,
12-1 168 ಬ್ರಾಡ್ವೇ ಬಜಾರ್, ಮದರಾಸು.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಸಹಕಾರಿ ಫೆಡರೇಶನಿನ ಮೀಟಿಂಗೊಂದು ಈ 13ರಲ್ಲಿ ಅದರ ಆಫೀಸಿನಲ್ಲಿ ನಡೆಯಿತು.

ಕಳೆದ ವಾರ ದೇಶದ ಹಲವು ಕಡೆಗಳಿಗೆ ಮಳೆ ಬಿದ್ದು ಬೆಳೆ ನಷ್ಟಕ್ಕೆ ಕಾರಣವಾಯಿತು. ಆದರೆ ಈ ವಾರ ಮಳೆಗಲಾಟೆ ಏನೂ ಇಲ್ಲದೆ ಆಕಾಶವು ಶುಭ್ರವಾಗಿದೆ.

ಈ ವಾರ ಮಡಿಕೇರಿಯಲ್ಲಿ ನೇಟಿವ್ ಕಾಫಿ ಬಾಡಿಗೆ ರೂಪಾಯಿಯಲ್ಲಿಯೂ, ಪಾರ್ಚ್‌ಮೆಂಟ್ ಕಾಫಿ ಖಂಡ್ರೆ ಒಂದಕ್ಕೆ 56 ರೂಪಾಯಿಯಲ್ಲಿಯೂ ವ್ಯಾಪಾರವಾಯಿತು ವರ್ತಮಾನ.

ವೀರಾಜಪೇಟೆಯ ಶಿಬಿರದಲ್ಲಿ ತರಬೇತು ಹೊಂದುತ್ತಿದ್ದ ಕಾಂಗ್ರೆಸ್ ಸೇವಾದಳ ಸೈನಿಕರ ಪರೀಕ್ಷೆಯು ಈ ತಾ. 13 ರಲ್ಲಿ ಮುಗಿದು ಶಿಬಿರವು ತಾ 14ರಲ್ಲಿ ಮುಚ್ಚಲ್ಪಟ್ಟಿದೆ. ತರಬೇತು ಹೊಂದಿದ 27 ಯುವಕರ ಪೈಕಿ 20 ಸೈನಿಕರು ತೇರ್ಗಡೆ ಹೊಂದಿರುವರು.

ಕೊಡಗಿನ ಕಾಂಗ್ರೆಸು ಸದಸ್ಯರುಗಳ ಜನರಲ್ ಮೀಟಿಂಗೊಂದು ಈ ತಾ 14ರಲ್ಲಿ ವೀರಾಜಪೇಟೆಯಲ್ಲಿ ನಡೆದು, ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ ಮೆಂಬರುಗಳ ಚುನಾವಣೆಯೂ ಆಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಶಾಂತಿನಾಲ್ಕುನಾಡಿನ ಬೆಳ್ಳೂರುವಲಿ ಗ್ರಾಮದವರು ಕಳೆದ ಸೋಮವಾರ ಬೇಟೆಗೆ ಹೋಗಿದ್ದಲ್ಲಿ ಒಂದು ಹುಲಿಗೆ ಗುಂಡು ಹೊಡೆದಾಗ್ಯೂ, ಘಾಯವಾದ ಆ ಹುಲಿಯು ಯರವರ ಸುಬ್ಬಾಯನೆಂಬವರನ್ನು ಕಚ್ಚಿ ಕೊಂದುಬಿಟ್ಟಿತೆಂದು ಸುದ್ದಿ ಇದೆ.

ಮಡಿಕೇರಿ ವೇದಾಂತ ಸಂಘದವರು ಭಗವದ್ಗೀತೋತ್ಸವವನ್ನು ಇದೇ ತಾರೀಖು 20ನೇ ಆದಿತ್ಯವಾರ ದಿವಸ ಜವಾಹಿರ ಸಂಘದ ಹಾಲಿನಲ್ಲಿ ಮ. ರಾ ಶ್ರೀ ಓಡ್ಲಮನೆ ಆಪ್ಪಯ್ಯ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡಿಸುತ್ತಾರೆ. ಸರ್ವರೂ ಬಂದು ಉತ್ಸವಕ್ಕೆ ದಯಮಾಡಿಸಬೇಕಾಗಿ ಕೋರಲಾಗಿದೆ.

ಕೆಲವು ದಿವಸಗಳಿಂದ ಸುಂಟಿಕೊಪ್ಪ ಸೋಮವಾರಪೇಟೆ ಮೊದಲಾದ ಸ್ಥಳಗಳಲ್ಲಿ ಆಟಗಳನ್ನು ತೋರಿಸುತ್ತಿದ್ದ ಪ್ರೊಫೆಸರ್ [illegible]ಯವರ ಫೇಮಸ್ ಕಣ್ಣನೂರು ಸರ್ಕಸ್ ಕಂಪೆನಿ[illegible] ಈಗ ಮಡಿಕೇರಿಗೆ ಬಂದಿರುವರು. ಅವರು ಇಲ್ಲಿ [illegible]ಗಳ ಆಪ್ಕೈತು ವರೆಗೆ ಆಟಗಳನ್ನು ತೋರಿಸುವರಾಗಿ ತಿಳಿಯಬರುತ್ತದೆ.

ಹಿಂದೂದೇಶ.

ಈ ತಾ. 11ರಲ್ಲಿ ಕಲಕತ್ತೆಯಲ್ಲಿ 25 ಗಂಟೆಗಳಲ್ಲಿ 20½ ಇಂಚು ಮಳೆ ಬಿದ್ದು ದೊಡ್ಡ ನೆರೆ ಬಂದು ತುಂಬಾ ನಷ್ಟ ಉಂಟಾಗಿದೆ.

ಮದ್ರಾಸಿನಲ್ಲಿ ಏರ್ಪಡಿಸಲ್ಪಟ್ಟಿರುವ ಅಖಿಲ ಭಾರತ ಸ್ವದೇಶೀ ಪ್ರದರ್ಶನವನ್ನು ಮೈಸೂರಿನ ಸರ್ ಯಂ. ವಿಶ್ವೇಶ್ವರಯ್ಯನವರು ತಾ 16 ರಲ್ಲಿ ತೆರೆದರು.

ಕಾಶ್ಮೀರದ ಜಮ್ಮು ಮತ್ತು ಮುಜಾಫರ್‌ಬಾದಿನ ರೈತರ ಕಷ್ಟವನ್ನು ನೋಡಿ ಅಲ್ಲಿಯ ಮಹಾರಾಜರು ಈ ವರ್ಷದ ಕಂದಾಯದಲ್ಲಿ ಶೇಕಡ 2ರಷ್ಟು ಬಿಟ್ಟು ಕೊಟ್ಟಿರುವರು.

ಬಂಗಾಳದ ಗವರ್ನರವರು, ಎಕ್ಸಿಕ್ಯೂಟಿವ್ ಕೌನ್ಸಿಲು ಮೆಂಬರುಗಳು ಮತ್ತು ಮಂತ್ರಿಗಳು ತಮ್ಮ ಸಂಬಳದಲ್ಲಿ ಶೇಕಡ 10ರಷ್ಟು ಕಡಿಮೆ ಹೊಂದಿಕೊಳ್ಳುವರೆಂದು ಪ್ರಕಟಿಸಲಾಗಿದೆ.

ಇಂಡಿಯಾದ ರಾಜಕೀಯ ಸುಧಾರಣೆಯನ್ನು ಕುರಿತ ಪ್ರಧಾನ ಮಂತ್ರಿಯವರ ಪ್ರಕಟಣೆಯು ಅತೃಪ್ತಿಕರವೆಂದು ಡೆಕ್ಕನ್ ಸಭಾದ ಕೌನ್ಸಿಲಿನವರು ಠರಾವು ಪಾಸು ಮಾಡಿರುವರು.

ಮುಸಲ್ಮಾನರಲ್ಲಿ ಪ್ರಮುಖ್ಯ ದೇಶದ ಜ್ಞಾನ ಶಾಸ್ತ್ರಜ್ಞರಾದ ಮತ್ತು ಅಖಿಲ ಭಾರತ ಮುಸ್ಲಿಮ್ ಕಾನ್ಫರೆನ್ಸಿನ ಪ್ರಮುಖ್ಯ ಮೆಂಬರಾದ ಮಹಾರಾಜಾ ಅಬ್ದುಲ್ ಮಜಿದ್ ಬಾದಾನಿಯವರು ಈ ತಾ 14ರಲ್ಲಿ ಲಕ್ನೋದಲ್ಲಿ ಮೃತರಾದರು.

ನಾಸಿಕದಲ್ಲಿ ಅಸ್ಪೃಶ್ಯರಾದ 'ಮಹಾರ'ರು ಪರಿಶುದ್ಧ ಕೊಳದಲ್ಲಿ ಸ್ನಾನ ಮಾಡಲು ಪ್ರಯತ್ನಿಸಿದ್ದಾಗ್ಯೆ ಸನಾತನಿಗಳು ವಿರೋಧಿಸಿದ್ದರಿಂದ ಕಂಟಿಗಳಾದವು. ಆದುದರಿಂದ ಅಲ್ಲಿ 2 ತಿಂಗಳ ವರೆಗೆ ಯಾರೂ ಸ್ನಾನ ಮಾಡಕೂಡದೆಂದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಹುಕುಂ ಮಾಡಿರುವರು.

ಮಧ್ಯಪ್ರಾಂತ್ಯದ ಸರ್ಕಾರದವರು ಕುರಿತದ ಸಿಬ್ಬಂದಿ ಹೋತಿಯು ಹುಕುಂ ಮಾಡಿರುವರು. ಈ ತಿಂಗಳಿಂದ 1933 ನೇ ಏಪ್ರಿಲ್ ವರೆಗೆ 50 ರೂ ಗಿಂತ ಹೆಚ್ಚಿನ ಸಂಬಳದವರಿಗೆ ಶೇಕಡ 10ರಷ್ಟು ಕಡಿಮೆ ಮಾಡಲಾಗುವುದು. ಈ ಕಡಿತಯು ಪೆನ್ಶನಿಗಾಗಲೀ, ಪ್ರಾವಿಡೆಂಟ್ ಫಂಡಿಗಾಗಲೀ ಅನ್ವಯಿಸುವುದಿಲ್ಲ.

ಸಂಯುಕ್ತ ಪ್ರಾಂತ್ಯದ ಹೊಸ ಆರ್ಡಿನೇನ್ಸನ್ನು ಖಂಡಿಸಲು ಅಲ್ಲಿಯ ರೈತರ ಮಹಾ ಸಭೆಯೊಂದನ್ನು ಈ ತಾ 18 ರಲ್ಲಿ ಭಾವನಗರಿಯಲ್ಲು ನಡಿಸಲು ಏರ್ಪಡಾಗ[illegible]. ಇದನ್ನು ನಡೆಸದಂತೆ ಸರ್ಕಾರದವರು ಕ್ರಿ. ಪ್ರೊ. ಕೋ. 144ನೇ ಸೆಕ್ಷನ್ ಮೇರೆ 15 ನೋಟೀಸುಗಳನ್ನು ಮುಂದಾಳುಗಳಿಗೆ ಕೊಟ್ಟಿರುವರು. ಮೀಟಿಂಗು ಏನಾಗುತ್ತೋ ನೋಡಬೇಕಾಗಿದೆ.

ಸಂಯುಕ್ತ ಪ್ರಾಂತ್ಯದಲ್ಲಿ ರೈತರು ಪ್ರಾರಂಭಿಸಿರುವ 'ಗೇಣಿ ಕೊಡಬಾರದೆಂಬ ಚಳವಳವನ್ನು ಮುರಿಯಲಿಕ್ಕಾಗಿ ಇಂಡಿಯಾ ಸರ್ಕಾರದವರು ಅಲ್ಲಿ ಒಂದು ಹೊಸ ಆರ್ಡಿನೇನ್ಸನ್ನು ಈ ತಾ 14ರಲ್ಲಿ ಜಾರಿಗೆ ತಂದಿರುವರು. ಈ ಆರ್ಡಿನೇನ್ಸಿನ ಮೇರೆ ಮೇಲಿನ ಚಳವಳಕ್ಕೆ ಯಾವ ವಿಧದಲ್ಲಾದರೂ ಉತ್ತೇಜನ ಕೊಡುವವರಿಗೆ ಜುಲ್ಮಾನೆ ಮತ್ತು ಸಜೆಯ ಶಿಕ್ಷೆ ಕೊಡಲಾಗುವುದು. ಇದು ಅಲ್ಲಿಯ ಜನರಲ್ಲಿ ತುಂಬಾ ಅತೃಪ್ತಿಯನ್ನುಂಟು ಮಾಡಿದೆ.

ಮಹಾತ್ಮ ಗಾಂಧಿಯವರು ಈ ತಾ. 28ರಲ್ಲಿ ಬೊಂಬಾಯಿಗೆ ತಲಪಿದ ಕೂಡಲೇ, ಮೊದಲಿನ ಏರ್ಪಾಡಿನಂತೆ ಅಹ್ಮದಾಬಾದಿಗೆ ಹೋಗುವುದಿಲ್ಲವಾದುದರಿಂದ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಮೀಟಿಂಗನ್ನು ತಾ 29ರಲ್ಲಿ ಬೊಂಬಾಯಿಯಲ್ಲಿ ನಡಿಸುವಂತೆ ನಿಶ್ಚೈಸಲಾಗಿದೆ. ಹಿಂದೂಸ್ಥಾನದ ಈಗಿನ ರಾಜಕೀಯ ಸ್ಥಿತಿಯನ್ನು ವಿಮರ್ಶಿಸುವ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗೊಂದನ್ನು ವರ್ಕಿಂಗ್ ಕಮಿಟಿಯ ಮೀಟಿಂಗು ಆದ ಒಡನೆ ನಡಿಸಲು ಕಾಂಗ್ರೆಸಿನ ಅಧ್ಯಕ್ಷರು ತೀರ್ಮಾನಿಸಿರುವರೆಂದು ವರ್ತಮಾನ.

ಮಹಾತ್ಮ ಗಾಂಧಿಯವರು ಈ ತಾ 28ರಲ್ಲಿ ಬೊಂಬಾಯಿಗೆ ಬಂದು ತಲಪುವಾಗ್ಯೆ ಅವರಿಗೆ ಸ್ವಾಗತವೀಯಲು ವಿಶೇಷ ಏರ್ಪಾಡುಗಳು ನಡೆಯುತ್ತಿವೆ. ಅವರು ಹಡಗಿನಿಂದ ಇಳಿದ ಕೂಡಲೆ ಅವರಿಗೆ ಬಂದರದಲ್ಲಿ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಸ್ವಾಗತವನ್ನೀಯಿ, ಅವರನ್ನು ಮುನ್ಸಿಪಲ್ ಹಾಲ್‌ಗೆ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಿ ಅಲ್ಲಿ ಮುನ್ಸಿಪಾಲಿಟಿಯವರು ಬಿನ್ನಹ ಪತ್ರವನ್ನು ಒಪ್ಪಿಸುವಂತೆಯೂ ನಂತರ ಸಾಯಂಕಾಲ ಅಜಾದ್ ಮೈದಾನದಲ್ಲಿ ಸಾರ್ವಜನಿಕ ಸಭೆ ನಡಿಸಿ, ಮಹಾತ್ಮರು ಭಾಷಣ ಮಾಡುವಂತೆಯೂ ಏರ್ಪಾಡುಗಳು ನಡೆಯುತ್ತಿವೆ.

ಸಂಯುಕ್ತ ಪ್ರಾಂತ್ಯದ ಹೊಸ ಆರ್ಡಿನೇನ್ಸಿನ ಮೇರೆ ತಾ 15ರಲ್ಲಿ ಅಲಹಾಬಾದಿನಲ್ಲಿ 'ಆನಂದ ಭವನ', 'ಸ್ವರಾಜ್ಯ ಭವನ', ಜಿಲ್ಲಾ ಮತ್ತು ಪಟ್ಟಣ ಕಾಂಗ್ರೆಸ್ ಆಫೀಸುಗಳು, 'ಅಭ್ಯುದಯ ಪ್ರೆಸ್' ಮೊದಲಾದ ಸ್ಥಳಗಳು ಪೋಲೀಸರವರಿಂದ ಹುಡುಕಲ್ಪಟ್ಟವು. ಪಂಡಿತ ಜವಾಹರ್‌ಲಾಲ್ ನೆಹರೂರವರ ಕೋಣೆಯೂ ಚೆನ್ನಾಗಿ ಹುಡುಕಲ್ಪಟ್ಟಿತಂತೆ. ಆದರೆ 'ಗೇಣಿ ಕೊಡಬಾರದೆಂಬ ಚಳವಳಕ್ಕೆ ಸಂಬಂಧಪಟ್ಟ ರಿಕಾರ್ಡುಗಳೇನೂ ಅಲ್ಲಿ ದೊರೆಯಲಿಲ್ಲವೆಂದು ಸುದ್ದಿ. ಅಲ್ಲದೆ ಅಲ್ಲಿಯ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಮಿ. ಟಿ. ಕೆ. ಶೆರ್ವಾನಿಯವರಿಗೂ, ಇನ್ನೂ ಹಲವು ಕಾಂಗ್ರೆಸ್ ಕೆಲಸಗಾರರಿಗೂ ಕ್ರಿ. ಪ್ರೊ. ಕೋಡಿನ 144ನೇ ಸೆಕ್ಷನ್ ಮೇರೆ ನೋಟೀಸು ಕೊಡಲಾಗಿದೆ.

ಕಡಲೂರು ತೆಂಗಿನ ತೋಟದ ಊರೆಂದರೆ ತಪ್ಪಾಗಲಾರದು. ಅಲ್ಲಿ, ಎಲ್ಲಿ ನೋಡಿದರೂ ತೆಂಗಿನ ಮರಗಳೇ ಕಾಣುತ್ತವೆ. ಅವುಗಳಿಂದ ನೀರಾ ಇಳಿಸಿ ಗುತ್ತಿಗೆದಾರರು ತುಂಬಾ ಹಣ ಮಾಡುತ್ತಿದ್ದರು. ಕಾಂಗ್ರೆಸ್ಸಿನವರು ನೀರಾ ಇಳಿಸಬಾರದೆಂದು ಮಾಲೀಕರನ್ನು ಬೇಡಿಕೊಂಡರು. 57000 ಮರಗಳ 37 ಮಾಲೀಕರು ಕಾಂಗ್ರೆಸ್ಸಿನವರ ಮಾತಿನಂತೆ ಒಪ್ಪಿದರು. ಇವನ್ನು ನೋಡಿ 50000 ಮರ - ಗುಬಾರೆದಾರರಾದ ಶ್ರೀ. ತಂಗವೇಲು ಪಡೆಯಾಚಿಯವರು ತನ್ನ ಮರಗಳಿಂದ ನೀರಾ ಇಳಿಸಲು ಗುತ್ತಿಗೆ ಕೊಡುವದನ್ನು ನಿಲ್ಲಿಸಿ ಮಾಡಿ ನಾಲ್ಕೈದು ಲಕ್ಷರೂಪಾಯಿಗಳ ಉತ್ಪತ್ತಿಯನ್ನು ದೇಶದ ಕಲ್ಯಾಣಕ್ಕಾಗಿ ಕಳಕೊಂಡರು. ನಮ್ಮ ದೇಶದ ಹತ್ತು ಗಟ್ಟಿ ರೂ ಉತ್ಪತ್ತಿಯ ಬೈನೆ ತೋಟದವರು ಇದಕ್ಕೇನನ್ನುತ್ತಾರೆ?

ಬಂಗಾಳದ ಕೋಮಿಲ್ಲಾ ಜಿಲ್ಲೆಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಮಿ ಸ್ಟೀವನ್ಸ್‌ರವರು ಈ ತಾ 14 ರಲ್ಲಿ ಗುಂಡಿನ ಪೆಟ್ಟಿಗೆ ತುತ್ತಾದರು. ಅಲ್ಲಿಯ ಫೈಜುನ್ನಿಸಾ ಸರ್ಕಾರಿ ಹೈಸ್ಕೂಲಿನ 8 ನೇ ತರಗತಿಯಲ್ಲಿ ಓದುತ್ತಿದ್ದ ಶಾಂತಿ ಘೋಷ್ ಮತ್ತು ಸುನಿತಿ ಚೌಧರಿ ಎಂಬ ಇಬ್ಬರು ವಿದ್ಯಾರ್ಥಿನಿಯರು ಆ ದಿನ ಬೆಳಿಗ್ಗೆ ಈಜುವ ಸ್ಪರ್ಧೆಯನ್ನು ಏರ್ಪಡಿಸಬೇಕೆಂದು ಅರ್ಜಿ ಒದನು ಸದರಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಕೊಡಲಿಕ್ಕೆ ಹೋಗಿದ್ದರು. ಮೇಜಿಸ್ಟ್ರೇಟರು ಆ ಅರ್ಜಿಯನ್ನು ಅವರ ಶಾಲೆಯ ಹೆಡ್ ಮಿಸ್ಟ್ರೆಸನ್ನು ಕೇಳುವಂತೆ ಹೇಳಿ ಅರ್ಜಿಯನ್ನು ವಾಪಸು ಕೊಟ್ಟರು. ಆಗ್ಯೆ ಆ ಹುಡುಗಿಯರಿಬ್ಬರು ಅವರ ಎದೆಗೆ ಪಿಸ್ತೋಲಿನಿಂದ ಗುಂಡು ಹಾರಿಸಿದರು. ಸ್ಟೀವನ್ಸ್‌ರವರು ಕೂಡಲೆ ಮೃತರಾದರು. ಅಲ್ಲಿ ಹಾಜರಿದ್ದ ಸಬ್ ಡಿವಿಜನಲ್ ಆಫೀಸರು ಹುಡುಗಿಯರಿಬ್ಬರನ್ನು ದಸ್ತಗಿರಿ ಮಾಡಿದರು. ಈ ವಿಷಯವನ್ನು ಕೇಳಿ ಪಬ್ಲಿಕ್ ಮೀಟಿಂಗುಗಳನ್ನು ನಡಿಸಿ ಈ ಕ್ರೂರ ಕೃತ್ಯವನ್ನು ಖಂಡಿಸಲಾಯಿತು.

ವಿದೇಶ.

ಮಂಚೂರಿಯದಲ್ಲಿ ಚೈನಾದವರಿಗೂ, ಜಪಾನರಿಗೂ ಪುನಹ ಯುದ್ಧವು ಶುರುವಾಗಿದೆಯೆಂದು ವರ್ತಮಾನ.

ಇಂಗ್ಲೆಂಡಿನ ಸಾಲಗಳನ್ನು ಸಲ್ಲಿಸುವ ವಿಷಯ ಅಮೇರಿಕದ ಸಂಯುಕ್ತ ಪ್ರಾಂತ್ಯದ ಸರ್ಕಾರದವರು ವಿರೋಧವಾಗಿರುವರೆಂದು ಪ್ರಕಟಿಸಿರುವರು.

ಜಪಾನಿನ ಹಳೇ ಮಂತ್ರಿ ಮಂಡಳಿಯು ರಾಜಿನಾಮೆ ಕೊಟ್ಟಿತು. ಇನುಕಾಯಿಯವರು ಪ್ರಧಾನ ಮಂತ್ರಿಯಾಗಿ ಹೊಸ ಮಂತ್ರಿ ಮಂಡಳಿಯನ್ನು ನೇಮಿಸಿರುವರು.

ಚೈನಾ ಸರ್ಕಾರದ ಅಧ್ಯಕ್ಷರಾಗಿದ್ದ ಚ್ಯಾಂಗ್ ಕೈ ಶೆಕ್‌ರವರು ತಮ್ಮ ಪದವಿಗೆ ರಾಜಿನಾಮೆ ಕೊಟ್ಟಿರುವರು. ಲೆಜಿಸ್ಲೇಟಿವ್ ಇಲಾಖೆಯ ಅಧ್ಯಕ್ಷರಾಗಿದ್ದ ಲಿನ್‌ಸೆನ್‌ರವರು ರಿಪಬ್ಲಿಕ್ ಸರ್ಕಾರದ ಹಂಗಾಮಿ ಪ್ರೆಸಿಡೆಂಟರಾಗಿರುವರು.

ತಾ 14 ರಲ್ಲಿ ಚೈನಾದ ಟಾಂಗ್ಟ್ಸ್ ನದಿಯಲ್ಲಿ ಹೋಗುತ್ತಿದ್ದ 'ಟೇಲ' ಎಂಬ ಚೈನಾದ ಹಡಗಕ್ಕೆ ಆಕಸ್ಮಾತು ಬೆಂಕಿ ಹಿಡಿದು ಅದರಲ್ಲಿದ್ದ 600 ಜನರ ಪೈಕಿ 300 ಜನರು ಜೀವ ಸಹಿತ ಸುಡಲ್ಪಟ್ಟರೆಂಬ ಶೋಚನೀಯವಾದ ವರ್ತಮಾನ ಬಂದಿದೆ.

ಜರೂಸಲೇಮಿನಲ್ಲಿ ನಡೆದ ಅಖಿಲ ಮುಸ್ಲಿಮ್ ಕಾನ್ಫರೆನ್ಸಿನಲ್ಲಿ ಒಡಕು ಹುಟ್ಟಿ, ಪ್ಯಾಲಸ್ಟೈನ್ ಪ್ರಾಮುಖ್ಯ ಮುಸಲ್ಮಾನರು ಮೇಲಿನ ಸಭೆಗೆ ವಿರೋಧವಾಗಿ ಇನ್ನೊಂದು ಕಾನ್ಫರೆನ್ಸನ್ನು ಒರುಸಲೇಮಿನ 'ಮೇಯರ್ [illegible]' ಅಧ್ಯಕ್ಷತೆಯಲ್ಲಿ ನಡಿಸಿದರು.

ಲಾರ್ಡ್ ಇರ್ವಿನ್‌ರವರ ತಂದೆ ಲಾರ್ಡ್ ಹಾಲಿಫ್ಯಾಕ್ಸ್‌ರವರು ತೀರಿಹೋದರು. ಭಾಷಣದಲ್ಲಿ, ಇರ್ವಿನ್‌ರವರು ಲಾರ್ಡ್ಸ್ ಸಭೆಯಲ್ಲಿ ಮಾಡಿದ ಭಾಷಣಕ್ಕೆ ಒತ್ತಾಸೆಯನ್ನಿತ್ತು, 'ಹಿಂದೂಸ್ಥಾನವನ್ನು ಹಿಂಸೆಯಿಂದ ಆಳಲು ಎಂದೂ ಸಾಧ್ಯವಿಲ್ಲವೆಂದೂ, ರಾಜಿ ಒಪ್ಪಂದಗಳಿಂದಲೇ ಅಲ್ಲಿ ಶಾಂತಿಯನ್ನು ಸ್ಥಾಪಿಸಬೇಕೆಂತಲೂ ಹೇಳಿದರು.

ಇಂಡಿಯಾದಲ್ಲಿ ಬಹಿಷ್ಕಾರ ಚಳವಳವನ್ನು ಜೋರಾಗಿ ಮುಂದರಿಸಲಾಗುವದೆಂದು ಮಹಾತ್ಮ ಗಾಂಧಿಯವರು ಇಟಲಿಯಲ್ಲಿ ಹೇಳಿದಷ್ಟು ಬಂಗಾಳದಲ್ಲಿ ಪುನಹ ಒಬ್ಬ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಕೊಲ್ಲಲ್ಪಟ್ಟದ್ದು ಇಂಗ್ಲೆಂಡಿನ ಜನರಲ್ಲಿ ಅಸಮಾಧಾನ ಉಂಟುಮಾಡಿದೆಯಂತೆ.

ಗಾಂಧಿಜಿಯವರು ಸ್ವಿಟ್ಸರ್‌ಲೆಂಡಿನಿಂದ ರೋಮಿಗೆ ಹೋಗುತ್ತಿದ್ದಾಗ್ಯೆ ಅವರಿದ್ದ ರೈಲು ಗಾಡಿಯು ಇಟಲಿಯ ಮಿಲಾನ್ ಪಟ್ಟಣಕ್ಕೆ ತಲಪಿದ ಕೂಡಲೆ ಅಲ್ಲಿಯ ಸ್ಟೇಶನ್ ಮಾಸ್ಟರು ಮಹಾತ್ಮರಿಗೆ ರೈಲು ಗಾಡಿಯಲ್ಲಿ 1 ನೇ ತರಗತಿಯ ಕೋಣೆಯನ್ನು ಮುಫತಾಗಿ ಕೊಟ್ಟರು. ಮಹಾತ್ಮರು ವಂದನಾ ಪೂರ್ವಕ ಸ್ವೀಕರಿಸಿ, ಕೋಣೆ ಒದಗಾಯಿಸಿದರಂತೆ.

ಪಂಡಿತ ಮದನಮೋಹನ ಮಾಳವೀಯರು ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಹೊರಟಿರುವರು. ತಾ 14 ರಿಂದ 17ರ ವರೆಗೆ ಪ್ಯಾರಿಸ್ ಪಟ್ಟಣದಲ್ಲಿದ್ದು, ಹಿಂದೀ ವಿದ್ಯಾರ್ಥಿಗಳಿಂದಲೂ, ಅಲ್ಲಿಯ ಯೂನಿವರ್ಸಿಟಿಯವರಿಂದಲೂ ಸ್ವಾಗತವನ್ನು ಪಡೆದರು. ಅಲ್ಲಿ ಭಾಷಣ ಮಾಡುವಾಗ್ಯೆ 'ಯುದ್ಧವನ್ನು ಮುಂದರಿಸಲು ಹಿಂದೂಸ್ಥಾನವು ಸಂಪೂರ್ಣ ತಯಾರಾಗಿದೆ' ಯೆಂದು ಅವರು ಹೇಳಿದರು.

ದುಂಡು ಮೇಜು ಪರಿಷತ್ತಿನ ವರ್ಕಿಂಗ್ ಕಮಿಟಿಯ ಅಧ್ಯಕ್ಷರಾಗಿ ಪ್ರಧಾನ ಮಂತ್ರಿಯಾದ ರಾಮ್ಸೆ ಮೆಕ್ಡೊನಾಲ್ಡರವರು ಹಿಂದೂಸ್ಥಾನಕ್ಕೆ ಒಂದು ತಿಂಗಳ ಮಟ್ಟಿಗೆ ಬಂದು ಹೋಗಬಹುದೆಂದು 'ಡೈಲಿ ಹೆರಾಲ್ಡ್' ಪತ್ರಿಕೆಯು ಸೂಚಿಸುತ್ತ ಲಾರ್ಡ್ ಸ್ಯಾಂಕಿಯವರು ಫೈನಾನ್ಸ್ ಕಮಿಟಿಯ ಅಧ್ಯಕ್ಷರಾಗಬಹುದೆಂತಲೂ, ಲಾರ್ಡ್ ಜಸ್ಟಿಸ್ ಅಟ್ಕಿನ್‌ರವರು ವರ್ಕಿಂಗ್ ಕಮಿಟಿಯ ಅಧ್ಯಕ್ಷರಾಗಬಹುದೆಂದೂ ಇನ್ನೊಂದು ಸುದ್ದಿ.

ಒಮ್ಮೆ ದುಂಡು ಮೇಜು ಪರಿಷತ್ತಿನ ಅಧ್ಯಕ್ಷರಾದ ಲಾರ್ಡ್ ಪೀಲ್‌ರವರ ಭಾಷಣದ ಮೇರೆ ಜನರಿಗೆ ಪಡೆಯುವ ಸಂಭವವಿಲ್ಲದ್ದರಿಂದ ತಮ್ಮ ಅತೃಪ್ತಿಯನ್ನು ಸೂಚಿಸುವ ಬಗ್ಗೆ ಬರ್ಮಾದ ಪ್ರತಿನಿಧಿಗಳು ಸದರಿ ಕಾನ್ಫರೆನ್ಸಿನಿಂದ ಈ ತಾ 14 ರಲ್ಲಿ ಎದ್ದು ಹೊರಗೆ ಹೋಗಿ ಬಿಟ್ಟರು. ಅಲ್ಲದೆ ಪ್ರಾಮಾಣ್ಯ ಸರ್ಕಾರವಿಲ್ಲದೆ ಬರ್ಮಾವನ್ನು ಇಂಡಿಯಾದಿಂದ ಪ್ರತ್ಯೇಕಿಸಕೂಡದೆಂತಲೂ ತಮ್ಮ ಬಾಷಣದಲ್ಲಿ ಸೂಚಿಸಿದರು.

ಮಹಾತ್ಮ ಗಾಂಧಿಯವರು ಈ ತಾ 14ರಲ್ಲಿ ಇಟಲಿಯ ಬ್ರಿಂಡಿಸಿ ಪಟ್ಟಣದಿಂದ 'ಪಿಲ್ಸ್‌ನಾ' ಎಂಬ ಹಡಗಿನಲ್ಲಿ ಇಂಡಿಯಾಕ್ಕೆ ಹೊರಟರು. ಹೊರಡುವ ಮುಂಚೆ ಪತ್ರಿಕಾ ಪ್ರತಿನಿಧಿಗಳಿಗೆ ಹೀಗೆಂದು ಹೇಳಿದರು—'ದುಂಡು ಮೇಜು ಪರಿಷತ್ತಿನಲ್ಲಿ ಇಂಡಿಯಾಕ್ಕೂ ಇಂಗ್ಲೆಂಡಿಗೂ ಇದ್ದ ಸಂಬಂಧವು ಮುರಿದು ಹೋಯಿತು. ನಾನು ಇಂಡಿಯಾದಲ್ಲಿ ಇಂಗ್ಲೆಂಡಿಗೆ ವಿರೋಧವಾದ ಚಳವಳವನ್ನು ಮುಂದರಿಸಲು ಹೋಗುತ್ತಿದ್ದೇನೆ. ಆದರೆ ಅದು ಅಹಿಂಸಾತ್ಮಕವಾಗಿರುವದು. ಬಹಿಷ್ಕಾರ ಚಳವಳದಿಂದ ವ್ಯಾಪಾರಕ್ಕೆ ಹೆಚ್ಚು ಪೆಟ್ಟು ತಗಲದೆ ಇರಲಾರದು.'

ಮಹಾತ್ಮ ಗಾಂಧಿಯವರು ರೋಮ್ ಪಟ್ಟಣಕ್ಕಾಗಿ ಬಂದಾಗ ಪೋಪರನ್ನು ನೋಡ ಬಯಸಿದರೂ ಅವರಿಗೆ ಅವಕಾಶವಾಗಲಿಲ್ಲ. ಆದರೆ ಇಟಲಿಯ ಪ್ರಧಾನ ಮಂತ್ರಿಯಾದ ಮುಸ್ಸೊಲೋನಿಯವರ ಸಂಗಡ 10 ಮಿನಿಟು ಸಂಭಾಷಣೆ ನಡಿಸಿದರು. ಮುಸ್ಸೊಲೋನಿಯವರು ಹೆಚ್ಚಾಗಿ ಇಂಡಿಯಾದ ಈಗಿನ ಪರಿಸ್ಥಿತಿಯ ವಿಷಯವೇ ಪ್ರಶ್ನೆ ಕೇಳಿದರು. ಇಟಲಿ ರಾಜರ ಕಿರೀಮಗಳಾದ ಮೇರಿಯ ರಾಣಿ ಕುಮಾರಿಯು ಮಹಾತ್ಮರನ್ನು ಭೇಟಿಯಾಗಿ, ಅರ್ಧ ಗಂಟೆ ಸಂಭಾಷಣೆ ನಡಿಸಿ, ಗಾಂಧೀಜಿಯವರ ಸಾಯಂಕಾಲದ ಪ್ರಾರ್ಥನೆಯಲ್ಲಿ ಭಾಗಿಗಳಾದರಂತೆ!



ಈ ಗಡಿಯಾರಗಳು ಈ ಚಿತ್ರದಲ್ಲಿರುವಂತೆಯೇ ಇರುವವು. ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ತರಿಸುತ್ತೇವೆ. ಸರಿಯಾಗಿ ಘಂಟೆಯನ್ನು ತೋರಿಸುತ್ತವೆ. ಇದುವರೆಗೂ ಯಾರೂ ಈಗಿನ ಕಡಮೆ ಬೆಲೆಗೆ ತರಿಸಿರುವವರೇ ಇಲ್ಲ. ಆದ್ದರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ:—ಜೆ. ಎನ್. ಬೆನ್‌ಸನ್ ಅಂಡ್ ಕೊ,

12—1 ಪೋ|| ನಂ|| 1240, ಮದರಾಸು.

ಒ ವ್ಮೆ ಕು ಡಿ ಚಿ.

(ಸ. ಬಿ. ಸುಬ್ಬಯ್ಯನವರಿಂದ)

ಅಪ್ಪ–ಅವ್ವ–ಮಕ್ಕ–ಉಂಬಳ ಮನೆಲ್.

ಅಪ್ಪ—ಮಕ್ಕ ಕೊಂಡ್‌ಂದ ಕಕ್ಕಳ ಇಂದ್ ಪಟ್ಟ ನ ಲ್ಲೋಣೆ ಉಂಡ್. ಎಟ್ಟಕೋ ದಿನತ್‌ಂಜಿ ಇಷ್ಟ್ ಚಾಯಾಡೆ ಉಂಡಿಲೆ.

ಅವ್ವ—ನಾನ್ ಎಣ್ಣಾಂಡೊಂದ್ ಬಾಯಿಯೊಟ್‌ತ್, ಅಕ್ಕಣೆ ಎಣ್ಣಾರಾ! ಇಂದ್ ನಂಗ ಎಲ್ಲಾರೂ ನಲ್ಲೋಣೆ ಉಂಡತ್. ಇಂದೂ ಕಿಟ್ಟಿಕ ಪೆರ ದಿನ ಆಚಿ. ಅಲ್ಲಕ ನಂಗ ಎಲ್ಲಾರೂ ಪೊರಾಕತಂಡ ಬಯಿಟಾಕಣೆ ಚಾಣ ಕುಂಡಿರ ಪಣ್ ಕಜ್ಜಾನಕುಂದ್ "ಪಯಿಪೇ ನಳವಾಕ"ಂದ್ ಆಟಿ ಕಂಡಿರಾ ಎಕ್ಕ್ಯಲು ಮೂಂಡರೆ ವಾವ್ವ ಅಕ್ಕಿ ಇಟ್ಟತೆಂಗಿ ಒಟ್ಟಿಕೂ ಕೂಳ್ ಇವಿಸ್ಸಂಬತ್; ಇಂದ್ ಕೂಕಲ ನೋಟಿ!

ಪಾವು—ಇನ್ನ ನಾಚೆಂಗಿ ನಾಸನೂ, ಅಕ್ಕಯ್ಯನೂ ಎಕ್ಕ್ಯಲೂ ನಿಂಗಡ ಕೂಡ ಪಣ್‌ಕ್ ಕೂಡುವ. ಉಂಡಿತ್ ಕಲ ದುಂಬಿಚೆಂಗಿಯೂ ಬಾಯಿ ಬೋಂಡು ಎಣ್ಣುವಲ್ಲ. ಇದ್‌ಂಗಾ "ಕೈಕಸರಾದರೆ ಬಾಯಿ ಮೊಸರು"ದೆಣ್ಣುವ.

ಅಪ್ಪ— ಇಂದೇಕ ಚಾಣ ಕುಂಡಿ ನೋಟ್ಟ್‌ನಕ, ಅಂದ್ ಪೇಟೆಲ್ ದೃಸದ್ ಮಕ್ಕಳ ನೋಟಿತ್ ಇನಾನ್ ಕೂಡತಿತ್ ಇಲ್‌ಲ್ ನಕ್ಕಲ್ ಚಾಣ ಕುಂಡಿ ಎನ್ನನ ಬೆಕ್ಕಡುಂಡು ಕಾಟಿಲಿಯು, ಅನ್ನನೆ ಉಂಡ್. ನಾಳೆ ಪೊಲಕ ಅತ್ತ ಕೆಟ್ಟ್ಯರ ಪೊಕಕ ಒಮ್ಮ ಚಾಯಿಕೂಟಿರನ. ಪಿಣ ದಿನಾಲು ಬಾಳೆ ಕುಣ್ಯೋ, ಪುಳಿ ಕಿ.ಇಯೊ ನಡಪದೇ ಇಸ್ಪ, ಗುದ್ದಲಿ ಪಣಿ ಕೆಯ್ಯಂಡು, ಅಂದ್ ಉಂಡ್ ನೋಟಂಡು. ಕೇಚಕ ಕೂಳ್ ರೋ ಕೇಂಬ್‌ಕರಿ ಚೋದ್ ಅಂದ್ ಅರಿವ.

ಅಕ್ಕಚಿ—ಅವ್ವ ನಿಂಗೆಲ್ಲಾ ಪೋಯಿ ಕೋಂಬರೆಕ್. ನಾನ್ ನಾಸನೊನ್ನೆಲ್ಲಾ ಕತ್ತಿ ಮೊಕ್ಕ ಬೆಟ್ಟತ್ ಒಪ್ಪಿ. ಅದಾ, ಎಕ್ಕ್ಯಲು ಪರಂದಕ ಪರಂದಕ ಕೀರಕ ಪಾಷ್ತ ಬೆಲ್ಲಕೂಕುವ.

ಅವ್ವ—ಸೀ ಪೋ, ಅಪ್ಪಂಡ ಕಾಲ್‌ಕ್ ಎಣ್ಣೆ ಇದ್, ಅಕ್ಕಣೆ ನಾ ಒಪ್ಪಿ.

(ಬಯಿಟ್ ಒರ್ ಒರಕಾಯಿತ್)

ಅವ್ವ—ಆದಿರಿ, ದಾರೋ ಬಂದಿತ್ ದಡ ದಡ ಪಡಿಕೊಟ್ಟುವ, ದಾರ್‌ಂದ್ ಕೇಕ.

ಅಪ್ಪ—ದಾರದ್, ವಾದರ ನೇರತ್?

ದಂಡಾಳ್—ಎಳ್ ವೊಬಾಯ. ಐಯ್ಯಪ್ಪ, ಮುಳ್ಳ ಮಸಿಲ್ ಕಾಡ್‌ಪಂದಿರ ಸೂರೆಲೊ, ಪೋಯಿತ್ ಒಳ್ಳ್ ಅಳಕ. ಅಳ್‌ಕೋರಂದ್ ಕೊಂಡರಲು, ಎಳ್ ಎಳ್.

ಐಯ್ಯಪ್ಪ—ನಿಂಗಕ್ ಕೇವೆ ಇಲ್ಲೆ. ಒಳ್‌ಕ್ ಬಾರಿ, ಬುದ್ದ್ಯೋಳಿ, ಕೋಳ ಕೂವಕ ಪೋಕ. ಅಕ್ಕ ನೆಲಚಿ

ಚಂಗಪ್ಪ—ಒರಕ್ ಎಣ್ಣಚೆಂಗಿ ಚಾವ, ಪೋಲ್ ಒದಿ. ಅಕ್ಕ ಒರಕ್ ಬಪ್ಪರೆಲೊ, ಇದೂರ್ ಪುದ್‌ಮೆ. ನಾನಲ್ಲ ಮೂಂದಿರ್ ಮೂಂದ್ ಪೋಲ್ ಒರುವಿ. ಕೈಲ್ ಕೋಕು, ಕುಡಿಪಕ್ ಕೆಲದುಂಬ ಕಳ್ಳ ಉಂಡೆಂಗಿ ನಾಲೆಲ್ ಆರ್‌ ಆರ್ ಪೋಲು ಬೋಟಿ ಆಡಿಯು.

ಐಯ್ಯಪ್ಪ—ಕೂಡ್‌ನ ಕೂಳ ಕೊಂಡೇ ಪೋಕು. ಎಳ ಬೆರಿಯ ಪೋಯಿತ್, ಬೆರಿಯ ಬಕ್ಕ.

ಅವ್ವ—ಮಕ್ಕಳೆ, ಈ ವಾಳಾನ ದಂಡಾಳ್‌ರ ಕೂಡ ಕೂಡಿತ್ ಈ ಕೋಳ್‌ರ ಕೆವ್ವರಾಯಿತೂ ನಿಂಗಡ ಪೊನ್ನಪ್ಪ ಎವ್ವಾ ಪಕುಂಡೋ? ದೇವಕೇ ಗೊತ್ತ್. ಕಳ್ಳ ಕುಡಿಪನ್ನೋ? ಅಕ್ಕಣೆ ಕಂಡಿತ್ತಿಲ್ಲೆ.

ಐಯ್ಯಪ್ಪ—ಮಹಾರಾಯಂಗಳೆ, ಕುಳಿತ್ತಿತ್ ನಡಪರ್ ಕಾಲ್ ಬಪ್ಪಲೆ. ನಂಗಕ್ ಪಿರಾಂದಲ್ಲಾ, ಈ ವಾದರ ನೇರ ಕುಂಡ ಪಿರಾಚಿಯಳೆನ್ನಕ ಮನೆ ಬುಟ್ಟ ತಿರುಗುವ.

ಚಂಗಪ್ಪ—ಸೀನೊಡ್ ಅಣಾ. ಅದ್‌ಲೂ ಕೊಡವನ್ನ? ನಂಗಡ ಕೂಡ ಕೂಡಿತ್ ಬೆಪಿ ಬೋಟೆಂಗಿ ಪಣ್‌ಚಿಯು. ಇದಾ ಚೆನ್ನ ಕುಡಿ ಚಾಯೊವ, ಒರ್ ಪೊದಿಯೋ, ಬೆಕ್ಕಿಯೂ, ದ್ಯೆಯೋರ್ ಒಪ್ಪ. ಅದಂಗಲ್ಲ ಕೊಡವ ಇದ್ ಕುಡಿಚಕೆಂಗಿ ಅಡ.ಂಗಳ್ ನಂಗಕ್ ಆಳುವ ಕೈಯ್ಯಂಡ ನಾವಿರ ಕಾಲಕ್‌ಂಬೇ ನಿಪ್ಪ್‌ಚಿಟ್ಟಿಯು. ಎನ್ನಂಡುವಿದ್, ಇದ ಕುಪ್ಪಿರ ಬಾಚಿ ನೊಮ್ಮ ಕೊಡಿಚಾ.

ಐಯ್ಯಪ್ಪ—ಈ ಕಳ್ಳ ಪೊರಮೆ ಎಕ್ಕಂಗಿ ಎಣ್ಣಾಕೆ. ಕೆಳಕು. ಅಂಚ ಕೊಡಿಯೂ ಬೋಂಡ, ಚಡಿಯೂ ಬೋಂಡ.

ಕಾರ್ಯಪ್ಪ—ಐಯ್ಯಪ್ಪಂಗ್ ನೂಲ್‌ಟ್ಟದ್ ಪುರಂದ್‌ಟಿಯೂ? ಅವನ್ನಲ್ಲ ಅಣಾ ಕಳ್ಳ ಕುಡಿಪ್‌ಲೆಲೊ!

ಐಯ್ಯಪ್ಪ—ಕ ಕ ಕ್ಕೆ ಬ ಬಪ್ಪರೆ ಚೆನ್ನ ತಾ ತಾ ತಾ ವೊ ವೊರಾಯೊ.

ಚಂಗಪ್ಪ—ಇದ ಚೆಳ್ಳಿಕ್ ಬೂಕಿಯು, ಮೆಲ್ಲೆ ಕುಡಿ, ಬಾಯಿ ಚುಡು.

ಐಯ್ಯಪ್ಪ—ನಾಕೆನ್ನಲೋ ಅವ ನಿಂಗಡ ಅವ್ವ .... ನಿಂಗಳ ಬೊಡಿಬೆಪ್ಪಕಾವ: ನೆಲಚಿಕ್ಕ್ಬೊಡಿ ಬೆಪ್ಪಿ ಕೋಕ್ ತಾ. ಈ ವಾಳಾನ ಮುಳ್ಳ, ಬಳ್ಳಿ ಪಟ್ಟಿತಲ್ಲಾ ಬುದ್ಧ, ಅದನ ಬೇಕೋಡೆ ಬಲಿಪಿ. ಕೈಯೊಪರಾದಕೆಂಗಿ, ಪಲ್ಲೂ ಕಡಿಚಿ ಬಲಿಪಿ

(ಬುದ್ಧ ಐಯ್ಯಪ್ಪನ ಕೊಂಡ್ ಒಯಿತ್ ಅವಂಡ ಕಯ್ಯಲೆಲ್ ಇಟ್ಟ್‌ಬುವಂಜಿ ದಂಡಾಳು ಪೋಯಿರುವ.)

ಅವ್ವ—ಅಕ್ಕಚಿ, ಐಸಪ್ಪ, ನೇರಾಚಿ, ಕೋಳ ಕೂವ ಅದ. ತಿತ್ತ್‌ಪೊಟ್ಟಿ ಕಾಕೋರತುಂಡ್ ನಾಪೊನೆಯು ಉದ್‌ಕಣಿತಿತ್, ಆಡಪಟಿತ್. ಒರ್ ಒಲೆಲ್ ಕಾಂಜ ನೀರ್‌ಕಲ, ಇಂಡಿಂದಾಲ್ ಅಂಬಲಿಕ್ ನೀರ್ ಬೆಯಿ.

ಅಕ್ಕಚ್ಚಿ—ಅವ್ವಾ, ಅವ್ವಾ ಒನ್ನ ಬಾ ಅವ್ವ, ನೋಟವ್ವ ಕಂಡಿಲಾರೋ ಬುದ್ಧ ಒಯಿಂಗುವ.

ಅವ್ವ—ಎನ್ನ ಕವನ್ನಾ (ಒಡಿತ್) ಉಯಿಾ ಇದಾರ್ ಕಿಜ್ಜ ಪಣ್, ಮೇಲೆಲ್ಲಾ ಪುರ ಕಟ್ಟಿ ಪೋಯಿತ್. ಕೆದ್‌ತರ್‌ಕಲ್ಲಾ. ಸಿನಾಕ್ಕಂದ್ (ಮೊರಟಂದ್) ಅವ್ವ ಪರಂದ ಒಕ್ಕಾಮೆ ಎನ್ನ್, ಇಂದ ಉಡ್ ನೋರೆ ಪೋಸವೆನ್ನ್.

ಐಯ್ಯಪ್ಪ—ಬಾಯಿ ಒಡಿಕಕೆ ಮು ...... ಚೊಕ್ಕಿ ಬಾಯಿಯು. ನಾನ್ ಈ ಕ.ಳ್‌ಲು ಇಲ್ಲಿ, ನೀನೂ ನೀಡ ಮಕ್ಕಳೂ ಮು ... .ಕೂಟಿ ಮಂಡ್ ಒಳ್ ಬೆಕ್ಕೆಲ್ ದಾದದ್ ಅಲೆ ದಾಟ್‌ನ್?

ಅವ್ವ—ಎನ್ನಂಗಿ ಒಡೊ್ಡೀಳಿ, ನಾದ ಒಲೆ ಘಾನ್ಯ ಬಾಕಿ ಆಚಲ್ಲ ಮಡಿ. ಬಾಂ ಮಕ್ಕಳ ಅಪ್ಪನ ಒಳ್‌ಕ್ ಕೊಂಡ್ ಪೋಕ. ಕಾಂಜನೀರ್ ಕೊಂಡವ್ವ, ಕಾಲ್ ಮೂಡ್ ಕತ್ತಿತ್ ಬೊಡಿರೋ ಕತ್ತಿರೋ ಗಾಯ. ಉಂಡಾ ನೋಟನ ಚೆರಂಗೆ ಎಲ್ಲಿಯ?

ವಾವು—ವಾಳಾನ ಕಳ್ಳ ನಾರಿತ್ ಕಯ್ಯಲೆ. ಮುಂಡ್‌ಲೊ ಎನ್ನಕೆಲೊ್ಲೀ ಪಾರುವ ಅವ್ವಾ, ಅಪ್ಪಯ್ಯ, ಒಮ್ಮ ನೋಟ್.

ಅವ್ವ—ಕಾಲಕೆ, ಮೊರಡಕೆ, ಒರದ್. ಎದ್ದಿತ್ ಆಯಿಂಗಡ ಈ ಸ್ಥಿತಿನ ಅವ್ವೇ ನೋಟ್‌ನಕ ಪಿಂಜ ಕುಡಿಯು.

ಅಯ್ಯಪ್ಪ—ಮೂಡೀ ಮೂಡೀ, ನಾನ್ ಎಚ್ಚರ್ ನೇರ ಒರೀಟಿಯು. ಮಟ್ಟಣಾತಿರ್‌ಂಜೆನ್ನಕ ಕಾಂಬಲ್ಲ, ಇದ್ ಎನ್ನತ. ಕೈಲೂ ಬೋರಿ. ಉಯಿಾ ಮೂಡೆಲ್ಲಾ ಬಲಿವಪ್ಪ. ಎವಕಯ್ಯಲೆ, ನಡು ಪೊಟ್ಟಿ ಪೋಯಿತ. ಉಯಿಾ ಉಯಿಾ, ಇಕ್ಕ ಗೊತ್ತಾಚಿ; ಆ ವಾಳಾನಯಿಂಗಡ ಕೂಡ ಪೋನಾಂಡ ಕರ್‌ಮ. ಮನೆಲ್ ಎಲ್ಲಾರೂ ಪಣ್‌ಕ್ ಪೋನನ್ನಕೆ ಕಾಂಬ. ನಾಡ ಇಂದೇಕೆಟ್ಟ ದಿನೇ ನಾನ್ ಆಳಲ್ಲ. ಪೋಲಿಯಡ ಕೂಡ ಪೋನಕ ನಾಡ ಪೊನ್ನೊಕ್ಕ ಪೊಳೆಕುತ್ತ ಪೋಕು. (ಬೋರ್‌ಲ್ ಮೊರಟಂಡ) ಇನ್ನನೇ ಅರಾ ಕಳ್ಳನ ಕುಡಿಚಿತ್ ಮನಸ್ಸಾನಗಾರಿ ಪೊರ್‌ಕಿಯ ಆನ. ಕಂಡವ ರಾಜ ಆನ. ವ್ಯಾಪಾರ ಎಲ್ಲ ಪರ ಜನಕಾನ.

ಚಾಡ್, ಇಂದಿಂಜಿ ನಾನ್ ಕಳ್ಳ ಕುಡಿಪ್‌ಲೆ. ಅಲ್ಲ, ಕಳ್ಳ ಕುಡಿಪಲ್ಲಿ ಪೋಪ್‌ಲೆ ಪೋನಲ್ಲಿ ಎಲ್ಲಾ ಕಳ್ಳ ಕುಡಿಚಕೆಂಗಿ ಅವ ತೊಂದರೆನ ಎಣ್ ಕೊಡಿಪ್ಪಿ, ಪೆಟ್ಟ ಪರಂದಕ ಎಟ್ಟಕೋ ಆಕ:

(ಸೂಚನೆ:—ಸಂಟಕವಾದಲು ಅಪೇಕ್ಷಿಸಿದವರಿಗೆ ನಾಲ್ಕು ಪದಗಳನ್ನು ಕಳುಹಿಸಿಕೊಡುವೆನು.)

ಮುಂಬಯಿ ಕೊಡಗು ಸಂಘದವರ ಹುತ್ತರಿ ಹಬ್ಬ.

ಮುಂಬಯಿ ಕೊಡಗು ಸಂಘದವರು ತಮ್ಮ ವರ್ಷದ ಹುತ್ತರಿ ಹಬ್ಬವನ್ನು ಈ ತಿಂಗಳ ತಾ. 6ನೇ ಆದಿತ್ಯವಾರ ದಿನ ಮ. ರಾ. ಮು. ಸುಬ್ರಹ್ಮಣ್ಯನವರ ಭವನದಲ್ಲಿ ಸಭೆ ಸೇರಿ ಬಹು ವಿಜೃಂಭಣೆಯಿಂದ ನಡೆಸಿದರು. ಈ ಕೂಟಕ್ಕೆ ಸಂಘದ ಎಲ್ಲಾ ಮೆಂಬರುಗಳು ಹಾಜರಿದ್ದುದಲ್ಲದೆ ಇನ್ನೂ ಅನೇಕ ಕೊಡಗು ಬಂಧುಗಳೂ, ಅತಿಥಿಗಳೂ ದಯಮಾಡಿಸಿದ್ದರು. ರಾತ್ರಿ 8—30 ಗಂಟೆಗೆ ಸರಿಯಾಗಿ ಮೆಂಬರುಗಳು ಅತಿಥಿಗಳ ಸಮೇತ ಊಟ ಉಪಚಾರಗಳನ್ನು ಬಹು ಆಡಂಬರದಿಂದಲೂ, ಉತ್ಸಾಹದಿಂದಲೂ ಮುಗಿಸಿದರು. ಭೋಜನವಾದನಂತರ ಕೆಲವು ಸಮಯವನ್ನು ಸಂಗೀತ ಗಾನಗಳೊಡನೆ ಕಳೆದು ತಾಂಬೂಲಾದಿಗಳನ್ನು ಸ್ವೀಕರಿಸಿ ಸಾಧಾರಣ 11 ಗಂಟೆಗೆ ಕೂಟವು ಮುಕ್ತಾಯವಾಯಿತು.

ಯಂ. ಯಂ ಅಪ್ಪಯ್ಯ,
(ಗೌರವ ಕಾರ್ಯದರ್ಶಿ.)

ಪತ್ರವ್ಯವಹಾರ.

[ಬರೆಯುವರು ಸಹ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಗೋಣಿಕೊಪ್ಪಲಿನ ಮುನೀಶ್ವರ ದೇವಸ್ಥಾನ

ಅಯ್ಯಾ,

ಗೋಣಿಕೊಪ್ಪಲಲ್ಲಿರುವ ಮುನೀಶ್ವರ ಗುಡಿಯು ಕಲ್ಲು ಬಂಡೆ ಇರುವುದನ್ನು ಸರ್ಕಾರದವರು ಧೀರ್ಘದಿಂದ ಕ್ರಯಕ್ಕೆ ಪಡೆಕೊಳ್ಳಲು ಪ್ರಯತ್ನಪಡುತ್ತಿದ್ದು ಹೇಗೋ ಅದನ್ನು ಹೊಂದಿಕೊಂಡಿರುವರು. ಅಲ್ಲಿ ಕಲ್ಲು ಡೆಯಲು ಸುರಂಗ ಹಾಕಿದರೆ ಸದರಿ ದೇವಸ್ಥಾನವು ಹಾಳಾಗುವುದೆಂದು ಅದಕ್ಕೆ ಸಂಬಂಧಪಟ್ಟ ಪಟ್ಟಣಾಗರ ತಕರಾರು ಅವರೂ ಕೂಡ ಡಿ. ಪಿ. ಡಬ್ಲ್ಯು. ಇಲಾಖೆಯವರು ಈ 16ರಲ್ಲಿ ಅಲ್ಲಿ ಸುರಂಗ ಹಾಕಿಯೇ ಹಾಕಿದರು. ಸುರಂಗ ಕುವಾಗ್ಯೆ ಕೆಲವರು ಬಂದು ತಕರಾರು ಮಾಡಿದರೂ ಅಲ್ಲಿಯ ಕೆಲಸಗಾರರು ಅವರನ್ನು ದೂರ ತಳ್ಳಿ, ಕೋಟು ಹಾರಿಸಿ ಕಲ್ಲನ್ನು ಒಡೆದರು. ಕೂಡಲೆ ಪಟ್ಟಣಾಗರು ಅವರಿಗೆ ತಂತೀ ವಾರ್ತೆ ಮೂಲಕ ಮೇಲಿನ ಸಂಗತಿಗಳನ್ನು ತಿಳಿಸಿ, ಪಡನೆ ಅಲ್ಲಿಗೆ ಖುದ್ದು ಬಂದು ನೋಡಬೇಕೆಂದು ಳಿಕೆ ಹಿಂದಿರುವರು. ಅಲ್ಲಿ ಇನ್ನು ಮುಂದೆ ಕಲ್ಲು ಒಡೆತ್ತಾ ಬಂದರೆ ಸದರಿ ದೇವಸ್ಥಾನವು ಹಾಳಾಗುವುದರಲ್ಲಿ ಸಂಶಯವಿಲ್ಲ. ಆದಕಾರಣ ಅಧಿಕಾರಿಗಳು ಜನರ ಮತಕ್ಕೆ ಅಡಚಣೆಯಾಗದಂತೆ ಈ ದೇವಸ್ಥಾನವನ್ನು ಕಾಪಾಡಲು ಹುಕುಂ ಕೊಡುವರಾಗಿ ಬಿಡುತ್ತೇನೆ. ಇಲ್ಲವಾದರೆ ಇದರಿಂದ ಅಲ್ಲಿಯ ಜನರಿಗೆ ತುಂಬಾ ಅತೃಪ್ತಿಯುಂಟಾಗುವುದು ಸಂದೇಹವಿಲ್ಲ.

'ಪಟ್ಟಣಾಗ'

ಕೊಡಗಿನ ಕ್ಷೌರಿಕರ ಸ್ಥಿತಿ.

ಅಯ್ಯಾ,

ಕೊಡಗಿನ ಕ್ಷೌರಿಕರ ಕಷ್ಟದ ಸ್ಥಿತಿಯನ್ನು ಕೇಳುವರು ಯಾರೂ ಇಲ್ಲವೇ? ಕೊಡಗಿನ ಮುಖ್ಯ ಪಟ್ಟಣಗಳಾದ ವೀರರಾಜೇಂದ್ರಪೇಟೆ, ಗೋಣಿಕೊಪ್ಪಲು, ಸಿದ್ದಾಪುರ, ಸುಂಟಿಕೊಪ್ಪಲು, ಸೋಮವಾರಪೇಟೆ ಮೊದಲಾದ ಸಂತೆ ನಡೆಯುವ ಹಲವು ಸ್ಥಳಗಳಲ್ಲಿ ಕ್ಷೌರಿಕರ ಪಾಡನ್ನು ಹೇಳಿ ಪೂರೈಸಲಾಗುವುದಿಲ್ಲ. ಸಂತೆ ಸ್ಥಳಗಳಲ್ಲಿ ಬೇರೆ ಎಲ್ಲಾ ತರದ ವ್ಯಾಪಾರಸ್ಥರುಗಳಿಗೂ, ಕಸಬುದಾರರಿಗೂ ಸರ್ಕಾರದವರು ಕಟ್ಟಿಸಿರುವ ಕಟ್ಟಡಗಳಿವೆ. ಆದುದರಿಂದ ಅವರು ಮಳೆ ಬಿಸಿಲಿನ ತೊಂದರೆಗೆ ಈಡಾಗುವುದಿಲ್ಲ. ಆದರೆ ಕ್ಷೌರಿಕರಿಗೆ ಅಂಥಾ ಅನುಕೂಲವೇನೂ ಇಲ್ಲದೆ ಹುಲ್ಲು ಮೈದಾನದಲ್ಲಿ ಯಾ ದಾರಿಯ ರಸ್ತೆ ಬಾಜಿನಲ್ಲಿ ಕೊಡೆ ಹಿಡಿದು ಕುಳಿತುಕೊಂಡು ಮಳೆಗಾಳಿ ಮತ್ತು ಬಿಸಿಲಿನ ಬಾಧೆಗೆ ತಾವು ಈಡಾಗುವುದು ಮಾತ್ರವಲ್ಲ, ಕ್ಷೌರ ಮಾಡಿಸಿಕೊಳ್ಳುವ ಮಹನೀಯರೂ ಸಹ ಈ ಕಷ್ಟಕ್ಕೆ ಒಳಪಡಬೇಕಾಗುತ್ತದೆ. ಇಂಥಾ ಕಷ್ಟಕ್ಕೆ ಒಳಗಾದರೂ ಕೂಡ ಒಡ ಕ್ಷೌರಿಕರು ತೆರಿಗೆಯ ಬಾಧೆಯಿಂದ ವಿನಾಯಿಸಲ್ಪಟ್ಟಿರುವುದಿಲ್ಲ. ಇದೆಂಥಾ ಅನ್ಯಾಯ! ಆದುದರಿಂದ ಸರ್ಕಾರದವರು ಇನ್ನಾದರೂ ಕ್ಷೌರಿಕರಿಗೂ ಕಟ್ಟಡಗಳನ್ನು ಕಟ್ಟಿಸಿ ಕೊಟ್ಟು, ಅವರಿಂದ ನ್ಯಾಯವಾದ ತೆರಿಗೆಯನ್ನು ವಸೂಲಿ ಮಾಡಿಕೊಂಡಾದರೂ ಅವರ ಕಷ್ಟವನ್ನು ಪರಿಹರಿಸುವರಾಗಿ ಕೋರುವ.

'ಹಿತೈಷಿ'

ಬೊಂಬಾಯಿಯಲ್ಲಿ ಸ್ವಾಗತ ಕೂಟ.

ಅಯ್ಯಾ,

ಕಳೆದ ತಿಂಗಳಲ್ಲಿ ವಿವಾಹವನ್ನು ಮುಗಿಸಿಕೊಂಡು ಮುಂಬಯಿಗೆ ಹಿಂತಿರುಗಿರುವ ಮ. ರಾ. ಐ ಸಿ. ಗಣಪತಿಯವರಿಗೂ, ಅವರ ಪತ್ನಿಯವರಿಗೂ ಅಲ್ಲಿಯ ಕೊಡಗು ಸಂಘದವರು ಇದೇ ತಿಂಗಳ 6ನೇ ಆದಿತ್ಯವಾರ ದಿನ ನಾಲ್ಕು ಗಂಟೆ ಸಮಯಕ್ಕೆ 5ನೇ ನಂಬರು ಬಲರಾಮ ಬೀದಿಯಲ್ಲಿ ಸಭೆ ಸೇರಿ ಸ್ವಾಗತವನ್ನಿತ್ತರು.

ಸಂಘದ ಮೆಂಬರುಗಳೆಲ್ಲರೂ ಬಹು ಉತ್ಸಾಹದಿಂದ ನೆರೆದಿದ್ದರು. ಅಧ್ಯಕ್ಷರಾದ ಶ್ರೀಮತಿ ಸೀತಾ ಪೂವಯ್ಯನವರು ದಂಪತಿಗಳನ್ನು ಮಾನ್ಯದಿಂದ ಬರಮಾಡಿಕೊಂಡು ಸಂಘದ ಪರವಾಗಿ ಅವರನ್ನು ಅಭಿವಂದಿಸಿ ಮೆಂಬರುಗಳಿಗೆ ಅವರ ಪರಿಚಯವನ್ನು ಮಾಡಿದರು. ಅನಂತರ ಅಧ್ಯಕ್ಷರು ಸಂಘದ ಪರವಾಗಿ ದಂಪತಿಗಳಿಗೆ ಒಂದು ಚಲೋದಾದ ಪುಷ್ಪಪಾತ್ರವನ್ನು ಒಪ್ಪಿಸಿದರು. ಸಂಘದ ಕಾರ್ಯದರ್ಶಿಯವರು ಸತ್ಕಾರವನ್ನು ಸ್ವೀಕರಿಸಿದುದಕ್ಕಾಗಿಯೂ, ತಮ್ಮ ಪರಿಚಯವನ್ನು ಮಾಡಿಕೊಳ್ಳಲು ಎಡೆ ಕೊಟ್ಟದಕ್ಕಾಗಿ ದಂಪತಿಗಳನ್ನು ವಂದಿಸಿ, ಅವರಿಗೆ ಚಿರ ಆಯುರಾರೋಗ್ಯ ಉಂಟಾಗಲೆಂದು ಆಶೀರ್ವದಿಸಿದರು. ಕೊನೆಗೆ ದಂಪತಿಗಳು ಸಂಘದವರು ಮಾಡಿದ ಸತ್ಕಾರಕ್ಕೆ ಬಹಳವಾಗಿ ವಂದಿಸಿದರು. ನಂತರ ಸಭೆಯವರು ದಂಪತಿಗಳ ಸಮೇತ ತಿಂಡಿ ತೀರ್ಥಗಳಲ್ಲಿ ಭಾಗಿಗಳಾಗಿ ತೆರಳುವವರಾದರು.

'ಮಿತ್ರ'

ವಿದ್ಯಾವಂತ ಯುವಕರ ಪರಿಸ್ಥಿತಿ.

ನಮ್ಮ ದೇಶೀಯ ಯುವಕರ ಪರಿಸ್ಥಿತಿಯನ್ನು ಬರೆದು ಎಷರಿಸದೇಯಾದಿಲ್ಲ "ಕೊಡಗು" ಪತ್ರಿಕಾ ಪ್ರೇಮಿಗಳಿಗೆ ಸಮಾಧಾನವಾಗದಿರದು. ಇದೇನು, ಇದುವರೆಗೆ ಇಲ್ಲ

…ಸ್ಥಿತಿಯು ಇಂದು ಬಂದಿತು ಎಂದು ಕೇಳಬಹುದು. ಈ ಸ್ಥಿತಿಯು ಅತಿ ಪುರಾತನ ಕಾಲದಿಂದಲೂ ಇದ್ದುಕೊಂಡು ಬಂದಿದೆ. ಯಾವಾಗ ಆಂಗ್ಲೇಯರು ರಾಜ್ಯಭಾರಕ್ಕೆ ತೊಡಗಿದರೋ, ಬಂದುಗಳಿಗೆ ಓದು ಬರಹ ಕಲಿಸಿ, ಅವರನ್ನು ತಮಗೆ ಸಹಾಯಕರನ್ನಾಗಿಯಾಗಲು ನೌಕರರನ್ನಾಗಿ ಇಟ್ಟುಕೊಂಡರೋ ಅಂದೇ ಈ ದುಸ್ಥಿತಿಯು ನಮ್ಮ ಭರತ ಖಂಡಕ್ಕೆ ಕಾಲಿಟ್ಟಿತು. ನಮ್ಮ ಹಿರಿಯರು ಇದಕ್ಕಿಂತಲೂ ಕಷ್ಟಕ್ಕೆ ಒಳಗಾಗಿರಬಹುದು. ಆದರೆ ಅದೊಂದು ಸಮಯ. ವಿದ್ಯಾವಂತರು ಅಪರೂಪ; ಅಲ್ಪ ಸ್ವಲ್ಪ ಓದು ಬರಹವನ್ನು ಕಲಿತವರಾದರಿಂ ಅವರಿಗೆ ಸರ್ಕಾರಿ ನೌಕರಿಯಲ್ಲಿ ಅಷ್ಟೇನು ಅಭಿಲಾಷೆಯು ಕಂಡುಬಂದಿರಲಿಕ್ಕಿಲ್ಲ. ಉದ್ಯೋಗ ಸಿಕ್ಕದೆ ಹೋದರೂ ತಮ್ಮ ಹಿರಿಯರು ಕೂಡಿಸಿದ್ದ ವಿಸ್ತಾರವಾದ ತೋಟ, ಭೂಮಿಗಳಿದ್ದವು. ಆದರೆ ಈಗಿನ ವಿಚಾರವೇ ಬೇರೆ. ಓದುವುದೇ ಸರ್ಕಾರಿ ನೌಕರಿಗೆ ಎಂಬ ಅಭಿಪ್ರಾಯವು ಹುಟ್ಟಿ ಹೋಗಿದೆ. ಇಂಥ ಅಭಿಪ್ರಾಯವನ್ನು ಬೇರು ಸಮೇತ ಕಿತ್ತು ಬಿಸಾಡಲು ಅನೇಕ ಕಾಲ ಬೇಕಾದೀತು. ಆದರೆ ಅದು ಈ ಬಾತ್ಮಿಯ ಉದ್ದೇಶವಲ್ಲ.

ಈಗ್ಗೆ ಕೆಲವು ವರ್ಷಗಳ ಹಿಂದೆ ನಮ್ಮ ಜನಾಂಗದವರು ಅಂದರೆ ಕೊಡಗರು, ನಮ್ಮಲ್ಲಿ ವಿದ್ಯಾವಂತರು ಅಪರೂಪ, ಜನಾಂಗವು ಹಿಂದುಳಿಯುವ ಸಂಭವವು ಬಂದು ಹೋಗಿದೆ ಎಂದು ಮೊದಲಾಗಿ ಚಳವಳವೆಬ್ಬಿಸಿ ವಿದ್ಯಾ ಫಂಡುಗಳನ್ನೇ ಸ್ಥಾಪಿಸಿ, ಬಡ ವಿದ್ಯಾರ್ಥಿಗಳಿಗೆ ದ್ರವ್ಯ ಸಹಾಯ ಮಾಡಿ ಅನೇಕರಿಗೆ ಪ್ರೌಢ ವಿದ್ಯಾಭ್ಯಾಸ ಮಾಡಲು ಸಹಾಯ ಮಾಡಿಕೊಟ್ಟರು. ವಿದ್ಯೆಯಲ್ಲಿ ಅಭಿರುಚಿ ಹುಟ್ಟಿ, ಅನೇಕರು ಕಷ್ಟನಷ್ಟಗಳನ್ನು ಪಟ್ಟು ಬಿ. ಎ., ಎಂ. ಎ. ಪ್ಯಾಸ್ ಮಾಡಿಯೂ, ಇಲ್ಲವೇ ಡಾಕ್ಟರ್, ಇಂಜನೀಯರ್ ತಂಬೇತು ಹೊಂದಿಯೂ ತನ್ನ ಜನನಿಯ ಪಾದಸೇವೆ ಮಾಡಬೇಕೆಂದು ನಮ್ಮ ಯುವಕರು ಬಂದಲ್ಲ ಇಲ್ಲಿಯ ವಾತಾವರಣವು ಬೇರೆಯಾಗಿ ತೋರುತ್ತೆ.

ನಮ್ಮ ಸರ್ಕಾರದ ಕಾರ್ಯಕಲಾಪವು ಅತೃಪ್ತಿಯನ್ನುಂಟುಮಾಡುವಂಥಾದ್ದಾಗಿದೆ. ಒಂದು ಕಡೆ ಕೊಡಗರನ್ನು, ಇನ್ನೊಂದು ಕಡೆ ಕೊಡಗೇತರರನ್ನು ಪ್ರೀತಿಪಡಿಸಲು ಪ್ರಯತ್ನಿಸುವಂತೆ ತೋರುತ್ತದೆ. ಯಾವದೇ ಸರ್ಕಾರವಾಗಲೀ ನಿಸ್ಪಕ್ಷಪಾತಿಯಾಗಿರಬೇಕು. ಕೊಡಗ ಕೊಡಗೇತರ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಬಿನ್ನಭೇದವನ್ನು ಜನಸ್ತೋಮದಿಂದ ಹೋಗಲಾಡಿಸಲು ಪ್ರಯತ್ನಿಸಬೇಕೇ ಹೊರತು ಅದನ್ನು ಹೆಚ್ಚಿಸಲು ಯತ್ನಿಸಬಾರದು. ಯಾವುದಾದರೂ ನೌಕರಿ ಖಾಲಿ ಬಿದ್ದಲ್ಲಿ ಉಸ್ತವು ತರಗತಿಯ ಉಮೇದ್ವಾರರನ್ನು ಆರಿಸಬೇಕೇ ಹೊರತು ಪಕ್ಷ ಇಲ್ಲವೇ ಇನ್‌ಪ್ಲುಏನ್ಸ್ (Influence) ಗೆ ಒಳಗಾಗಬಾರದು

ಇತ್ತೀಚೆಗೆ ಔಷಧ ಇಲಾಖೆಯ ವರ್ತನೆಗಳು ನ್ಯಾಯವಾಗಿ ಕಂಡು ಬರುವುದಿಲ್ಲ. ರಿಟ್ರೆಂಚ್‌ಮೆಂಟ್ ಎಲ್ಲೆಲ್ಲಿಯೂ ವ್ಯಾಪಿಸಿರುವುದರಿಂದ ಖಾಯಂ ಸ್ಥಳ ದೊರಕದಿದ್ದರೂ ಹಂಗಾಮಿಯಾಗಿ ಬಿದ್ದ ಸ್ಥಳಕ್ಕೆ ಒಮ್ಮೆ ಒಬ್ಬರನ್ನು ನಿರ್ವಹಿಸಿ ಇನ್ನೊಂದಾವರ್ತಿ ತಕ್ಕ ಕಾರಣವೇನೂ ತೋರಿಸದೆ ಇನ್ನೊಬ್ಬರಿಗೆ ಕೊಟ್ಟರು. ಅದಂತಿರಲಿ. ಮೊನ್ನೆ ತಾನೇ ವೀರಾಜಪೇಟೆಯಲ್ಲಿ ಖಾಲಿ ಬಿದ್ದ ಸಬ್ ಅ. ಸರ್ಜನರ ಸ್ಥಳಕ್ಕೆ ಮತ್ತೊಬ್ಬರನ್ನು ತಂದಿದ್ದಾರೆಂದು ತಿಳಿಯ ಬರುತ್ತದೆ. ಮೊದಲು ಹಂಗಾಮಿಯಾಗಿ ಈ ಕೆಲಸ ನೋಡಿದ ಮೆ. ಎನ್. ಯಂ. ದೇವಯ್ಯನವರು ಮದ್ರಾಸಿಗೆ ಹೋಗಿ ಹೆಚ್ಚಿನ ಅನುಭವವನ್ನು ಪಡೆದು ಬಂದಿದ್ದರೂ ಅವರನ್ನು ಯಾವುದೋ ಕಾರಣದಿಂದ ಬಿಟ್ಟು ಮೊನ್ನೆ ತಾನೇ ಪಾಸಾದವರೊಬ್ಬರಿಗೆ ಕೊಟ್ಟರೆಂದು ತಿಳಿಯುತ್ತೇನೆ. ನೋಡಿದಲ್ಲಿ, ದೇವಯ್ಯನವರ ತಂದೆಯವರೂ ಸಹ ಅದೇ ಇಲಾಖೆಯಲ್ಲಿ 25, 30 ವರ್ಷ ದುಡಿದು, ನಿವೃತ್ತರಾಗಿ ಪೆನ್ಶನ್ ಹೊಂದಿರುವರು. ಇದನ್ನೆಲ್ಲಾ ಆಲೋಚಿಸದೆ ನಮ್ಮ ಸಿವಿಲ್ ಸರ್ಜನರು ಈ ರೀತಿ ವರ್ತಿಸಿದ್ದು ಆಶ್ಚರ್ಯವೇ ಸರಿ. ಇನ್ನಾದರೂ ಖಾಯಂ ಯಾ ಹಂಗಾಮಿಯಾಗಿ ಬೀಳುವ ಸ್ಥಳಕ್ಕೆ ಮೆ. ದೇವಯ್ಯನವರನ್ನು ನಿರ್ವಹಿಸಿ ಈಗ ದೇವಯ್ಯನವರಿಗೆ ಉಂಟಾಗಿರುವ ಅನ್ಯಾಯವನ್ನು ಹೋಗಲಾಡಿಸುವದಲ್ಲದೆ, ಬ್ರಿಟಿಷ್ ಆಳ್ವಿಕೆಯ ನಿಷ್ಪಕ್ಷಪಾತತನದಲ್ಲಿ ಜನರಿಗೆ ವಿಶ್ವಾಸವು ನೆಲೆಗೊಳ್ಳುವಂತೆ ಮಾಡುವರಾ ನಂಬುವ.

'ಒಬ್ಬ ಯುವಕ'

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಖರಾರು ಗಂಟೆಯನ್ನು ತೋರಿಸುವವು. ಒಳಗಡೆ ರೆಂಗುಗಳು ಇಟ್ಟಿವೆ. ಇದರ ಒಣ್ಣವು ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ಗೋಲ್ಡ್ ಗಿಲ್ಟ್ ಭಂಗಾರದ ಕತ್ತಿನ ಹಾರ (ನೆಕ್‌ಲೇಸ್), ಒಂದು ಟೇಬಲ್ ಟೈಂಪೀಸು ಇನಾಮಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯಾದ 4 ವರ್ಷ ಗ್ಯಾರಂಟಿ ಪತ್ರ, ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟವಾಚ್ 1 ಕ್ಕೆ 6-8-0.

ವಿಳಾಸ.— ಸಿಟಿ ಪಾರ್ಟ್,

12—1 168 ಜೈನಾ ಬಜಾರ್, ಮದರಾಸು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,

ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಕಡಿಮೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತನಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದಸಂತರಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಆಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಇಂದು ಭಾಗಿಗಳಾಗಿರಿ, **ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ** ತೆಗೆದುಕೊಳ್ಳಲು ಈ ಕಂಪೆನಿಯು ಹುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—

ಟೆಂಪಲ್ ಸೈಡ್, ಬಿ. ಎಸ್. ಐಯ್ಯಪ್ಪ,

ಮಡಿಕೇರಿ. (26—9) ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯಾ ಬಂದೋಬಸ್ತಾ ಆದ ಫೌಂಟನ್‌ಪೆನ್‌ಗಳು.

ವರಲ್ಡ್ಸ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ. 3	0	0
„ , ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
„ „ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
„ , ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0
„ ಪೂರಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
„ ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
ರಿಗ್ ಸ್ಪ್ಲಾಟ್ ಫೌಂಟನ್‌ಪೆನ್ 1ಕ್ಕೆ	10	8	0
ಪಾರ್ಕರ್ ಪೆನ್ 1ಕ್ಕೆ 14 6 0, &	20	10	0
ವಾಟರ್‌ಮನ್ ಫೌಂಟನ್‌ಪೆನ್ 1ಕ್ಕೆ 3 8 0, &	3	12	
ಸ್ವಾನ್ ಫೌಂಟನ್ ಪೆನ್ 1ಕ್ಕೆ 6 4 0, &	6	12	0
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ 8 2 0, &	8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಲಿಗಲಿಯೂ ಅಲಾರಂ ಟೈಂಪೀಸ 1ಕ್ಕೆ 6 9 0, &	6	15	0
ಲಿಗಲಿಯೂ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7	2	0
ಲಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇದಕ್ಕೆ ಖಾತ್ರಿಯಾದ ಟೈಂಪೀಸ್ 1ಕ್ಕೆ	13	4	0
ಖಾತ್ರಿಯಾ ಬಂದೋಬಸ್ತಾ ಆದ ಪಾಕೆಟ್ ವಾಚ್ 1ಕ್ಕೆ	5	10	0
ವಿಟೋ ನಮೂನೆಯಲ್ಲಿ ಎಬ್ರಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮೂಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 &	12	8	0



ಇಲ್ಲಿ ಕಾಣುವ ಈ ಸಿಸ್ಟಮ್ ನಮೂನೆ ಅಂದವಾದ ಟೇಬಲ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅಲಾಯಿದಾ.

ಮನಿಯಾರ್ಡರ್ ರವಾನಿಸುವವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ ಬ್ರದರ್ಸ್.

ಹಾರ್ಮೋನಿಯಂ ವ್ಯಾ.. ... ಮೈಸೂರು.

52—25

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್. ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೆಯಾದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ಪ್ರಕಾರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್!
ಕೋದಂಡ ಅಪ್ಪಯ್ಯನವರು	ಮನೆಯಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಎನ್. ವೆಂಕಪ್ಪಯ್ಯನವರು, ಬಿ. ಎ., ಬಿ.ಎಲ್.

ತಾರೀಖು 1–7–1931

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೆ. ಚಾರಿರ ಮಾದೈಯ್ಯನವರು,
ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಚ್ಚಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಬಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,
ಬಿಟ್ಟಂಗಾಲ ಮ ತಿತಿಮತ್ತಿ—ಮೆ. ಪಿ. ಮಾದಪ್ಪಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾದೈಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಸಲು ಆವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಬಿರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಬಿರಾರು ಫಾರಮುಗಳೂ, ಸ್ಟೋರ್ ಕೀಪರ್ ಬಿರಾರು ಫಾರಮುಗಳೂ, ಓವರಿಗ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—511 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.	ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ.	ಪಾಲಿಸಿದಾರರಿಗೆ ಸಾಲ 8013 ಜನರಿಗೆ 32 ಲಕ್ಷ

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದು.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಚೀನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದಲ್ಲಿದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಪೆನಾಂಗ	ರಂಗೂನ
ಅಹ್ಮದಾಬಾದು	ಕೊಲಂಬೋ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸಕ್ಕರ್
ಅಲ್ಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಹೈದರಾಬಾದ್	ಮಂಡಲೆ	ರಾಯಪುರ	ತಿರುವೇಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897)

ಹಿಂದೂಸ್ಥಾನದಲ್ಲಿ ಪ್ರಾಚೀನವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು —	ಬ್ರಾಂಚ್ ಆಫೀಸು —
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.	152–3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

52–15

26–21

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ. ಬಾಟ್ಲಿ 1ಕ್ಕೆ 11 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52–49 ಗಿರಿಗಾಂವ, ಮುಂಬಯಿ.

Printed & published by P. I. Bellippa at "Kodagu" Press, Merc for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

[illegible]

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೧ನೇ ಇಸವಿ ಡಿಸೆಂಬರ್ ತಾರೀಕು ೨೫ ನೇ ಶುಕ್ರವಾರ. | ಸಂಚಿಕೆ ೨೯

Telegrams—
"[illegible]"

V. Subramaniaier Jeweller,

Telephone—
3145

DIAMAND MERCHANT GOLD & SILVER SMITH.

Deals in all :—

SPORTS CUPS in all prices
MEADALS in up-to-date patterns
CASKETS in elegant styles

Nos, 2 & 3, Kuppumuthu st,
TIRUVATESWARANPET,
Post Box 423, Triplicane P. O.,
MADRAS.

Deals in all :—

GEM SET JEWELS, set with Diamonds, Rubies etc,
GOLD ARTICLES of all patterns
SILVER WARE in latest style .

52–5



[illegible]

ಕೋವಿಗಳು, ಕತ್ತಿಗಳು, [illegible] ... ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
210 Abdul Rehman Street BOMBAY.
34 14

ಬಾಲಾರ್ಕಮಧು.

[illegible]

[illegible]

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿಮೊಗ್ಗಾ,
52–49

ಕಟುಕಷಾಯ ಮಲೆಜ್ವರಕ್ಕೆ :— [illegible] ... ಬೆಲೆ ಒಂದಕ್ಕೆ ರೂ 1–8–0 3ಕ್ಕೆ ರೂ 4–0–0, 6ಕ್ಕೆ ರೂ 7–8–0 12ಕ್ಕೆ ರೂ 14

ಮಲೆ ಜ್ವರಕ್ಕೆ ಕಟುಕಷಾಯ

ಚಂದನಾಸವ:— [illegible] ... 1–4–0 3–8–0, 6–12–0

[illegible] ... 1 1 ಡಜನಿಗೆ 2–8–0

[illegible] ... 5–8–0

ವಿಳಾಸ—[illegible]
9. ಮಂಗಳೂರು
52–32

ಕೊಡಗು.

ಸನ್ ೧೯೩೧ನೇ ಇಸವಿ

ಡಿಸೆಂಬರ್ ತಾ ೨೫ನೇ ಶುಕ್ರವಾರ.

ಕೈಗಾರಿಕೆಗೆ ಪ್ರೋತ್ಸಾಹ.

ಮದ್ರಾಸ್ ಪಟ್ಟಣದಲ್ಲಿ ಸ್ವದೇಶೀ ವಸ್ತುಗಳ ಪ್ರದರ್ಶನ ಒಂದನ್ನು ಏರ್ಪಡಿಸಿ, ಅದನ್ನು ಮೈಸೂರು ದಿವಾನರಾಗಿದ್ದ ಸರ್ ಯಂ ವಿಶ್ವೇಶ್ವರಯ್ಯನವರು ತೆರೆದರು. ಅದನ್ನು ತೆರೆಯುವ ಸಮಾರಂಭದಲ್ಲಿ ಕೈಗಾರಿಕೆಯ ಕಡೆಗೆ ಜನರ ದೃಷ್ಟಿಯು ಪೂರ್ತಿಯಾಗಿ ತಿರುಗಬೇಕೆಂಬುದರ ಕುರಿತು ಅವರು ಬಹಳ ಸ್ಫೂರ್ತಿದಾಯಕವಾದ ಭಾಷಣ ಮಾಡಿದರು. ಕಾರ್ಖಾನೆ ಕೈಗಾರಿಕೆಗಳ ಕುರಿತು ತುಂಬಾ ಅನುಭವವಿರುವ ಇವರ ಮಾತುಗಳಿಗೆ ದೇಶೀಯರು ಗಮನಕೊಡಬೇಕಾದದ್ದು ಅತ್ಯವಶ್ಯ.

ಹಿಂದೂಸ್ಥಾನದಲ್ಲಿ ಈಗ ಉಂಟಾಗಿರುವ ಜಾಗೃತಿಗೆ ಸಂತೋಷಪಟ್ಟು, ರಾಜಕೀಯ ಹಕ್ಕುಗಳಿಗೆ ಪ್ರಯತ್ನಪಟ್ಟಂತೆಯೇ ಆರ್ಥಿಕ ಅಭಿವೃದ್ಧಿಗೂ ಗಮನಕೊಡಬೇಕೆಂತ ಅವರು ಕೇಳಿಕೊಂಡಿದ್ದಾರೆ. ಕಾರ್ಖಾನೆ ಕೈಗಾರಿಕೆಗಳ ಆವಶ್ಯಕತೆ ಕುರಿತು ಜನರಿಗೆ ಬೋಧಿಸಿದರೆ ಪುರಾಣಗಳಿಗೆ ಕಿವಿಕೊಟ್ಟು ಕೇಳುವಂತೆ ಕೇಳಿ ಬಿಡುತ್ತಾರೆಯೇ ಹೊರತು, ಕಾರ್ಯರೂಪಕ್ಕೆ ತರುವುದಿಲ್ಲವೆಂಬುವುದನ್ನು ನೋಡಿದರೆ ಎದೆ ಒಡೆದು ಹೋಗುತ್ತದೆ ಎಂತ ತುಂಬಾ ದುಃಖದಿಂದ ಹೇಳಿರುತ್ತಾರೆ. ಬರೇ ಕೃಷಿಯ ಮೇಲೆಯೇ ಅವಲಂಬಿಸಿರುವ ದೇಶವು ಆರ್ಥಿಕ ಸ್ಥಿತಿಯಲ್ಲಿ ಅಭಿವೃದ್ಧಿ ಹೊಂದುವುದು ಬಹಳ ಕಷ್ಟಸಾಧ್ಯ. ಕೃಷಿಕನು ವರ್ಷವೆಲ್ಲಾ ಕಷ್ಟಪಟ್ಟು ಸಂಪಾದಿಸುವ ಹಣವನ್ನು ಕೈಗಾರಿಕೆಯನ್ನು ನಡಿಸುವವರು ಸುಲಭದಲ್ಲೇ, ಶೀಘ್ರದಲ್ಲೇ ಮಾಡಿಕೊಳ್ಳುತ್ತಾರೆಂತ ವಿವರಿಸಿರುತ್ತಾರೆ. ಪ್ರಾಮುಖ್ಯತೆಗೆ ಬಂದಿರುವ ಬೇರೆ ಐದು ದೇಶಗಳಲ್ಲಿ ಕೃಷಿ ಮತ್ತು ಕೈಗಾರಿಕೆಯ ಉತ್ಪನ್ನಗಳನ್ನು ಹೀಗೆ ತೋರಿಸಿರುತ್ತಾರೆ.

	ಕೃಷಿ (ಕೋಟಿ ರೂ)	ಕೈಗಾರಿಕೆ (ಕೋಟಿ ರೂ)
ಯುನೈಟೆಡ್ ಸ್ಟೇಟ್ಸ್	286	1300
ಕೆನಡಾ	464	1047.
ಬ್ರಿಟನ್	80	808
ಜಪಾನ್	85	120
ಸ್ವೀಡನ್	129	384
ಇಂಡಿಯಾ	67	13

ಈ ಸಂಖ್ಯೆಗಳನ್ನು ನೋಡಿದರೆ ಬೇರೆ ದೇಶಗಳಲ್ಲಿ ಕೈಗಾರಿಕೆಯಿಂದ ಎಷ್ಟೊಂದು ಉತ್ಪತ್ತಿ ಇದೆಯೆಂಬುದೂ, ಹಿಂದೂಸ್ಥಾನದಲ್ಲಿ ಎಷ್ಟೊಂದು ಕಡಿಮೆ ಇದೆಯೆಂಬುದೂ ಸ್ಪಷ್ಟವಾಗುತ್ತದೆ.

ಜಪಾನ್ ದೇಶವು 50 ವರ್ಷಗಳ ಕೆಳಗೆ ಹಿಂದೂಸ್ಥಾನದಷ್ಟೇ ಹಿಂದೆ ಬಿದ್ದಿದ್ದರೂ ಈಗ ಎಷ್ಟೊಂದು ಮುಂದುವರಿದಿದೆ! ಕೆನಡಾ ರಾಜ್ಯವು ಹಿಂದೂಸ್ಥಾನದಂತೆ ಕೃಷಿಯಲ್ಲಿ ಪ್ರಾಮುಖ್ಯತೆ ಪಡೆದ ದೇಶವಾಗಿದ್ದರೂ ಕೈಗಾರಿಕೆಯನ್ನು ಮರೆತಿಲ್ಲ. ಹಿಂದೂಸ್ಥಾನದಲ್ಲಿ ಜನಸಂಖ್ಯೆ ಮೂವತ್ತೈದು ಕೋಟಿ, ಕೆನಡಾ ರಾಜ್ಯದಲ್ಲಿ ಜನಸಂಖ್ಯೆ ಒಂದೇ ಒಂದು ಕೋಟಿ ಮಾತ್ರ. ಆದರೂ ಕೃಷಿಯಲ್ಲೂ ಕೈಗಾರಿಕೆಯಲ್ಲೂ ಅದು ಎಷ್ಟೊಂದು ಮುಂದುವರಿದಿದೆ! ಕೈಗಾರಿಕೆಯನ್ನು ಬೆಳಸಿ ಜನರ ಸಂಪತ್ತನ್ನು ಹೆಚ್ಚಿಸಿಕೊಂಡರೆ ಕೃಷಿಯೂ ಅಭಿವೃದ್ಧಿಯಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಕೃಷಿಯು ಅಭಿವೃದ್ಧಿಯಾಗದಿರಲು ಜನರ ಬಡತನವೇ ಒಂದು ಮುಖ್ಯ ಕಾರಣ. ಕೆಲಸವಿಲ್ಲದವರಿಗೆ ಕೆಲಸ ಸಿಕ್ಕುವ ಕಾರ್ಖಾನೆಗಳು ಸ್ಥಾಪಿತವಾಗಿ ಕೃಷಿಯಿಂದ ಉತ್ಪತ್ತಿಯಾಗುವ ವಸ್ತುಗಳು ದೂರ ದೇಶಗಳಿಗೆ ಹೋಗಿ ಕಾರ್ಖಾನೆಗಳಲ್ಲಿ ಮಾರ್ಪಾಡು ಹೊಂದಿ ವಾಪಸು ಬಂದು ಹೆಚ್ಚಿಗೆ ಕ್ರಯಕೊಟ್ಟು ಕೊಂಡುಕೊಳ್ಳುವುದರ ಬದಲು, ಕೃಷಿಯ ಉತ್ಪನ್ನಗಳು ದೇಶದೊಳಗೇನೇ ಕಾರ್ಖಾನೆಗಳಲ್ಲಿ ಉಪಯುಕ್ತವಾದ ಸಾಮಾನುಗಳಾಗಿ ಮಾರ್ಪಟ್ಟರೆ ತಯಾರಾದ ಸಾಮಾನುಗಳಿಗೆ ಕೊಡುವ ಹೆಚ್ಚಿನ ಕ್ರಯವೂ ಉಳಿಯುತ್ತದೆ. ಕಾರ್ಖಾನೆಗಳಲ್ಲಿ ದುಡಿಯುವ ದುಡ್ಡು ದೇಶೀಯರಿಗೆ ಸಿಕ್ಕುತ್ತದೆ.

ಕಾರ್ಖಾನೆಗಳನ್ನು ಹೊರಡಿಸಲೂ, ಕೈಗಾರಿಕೆಗಳನ್ನು ಹೆಚ್ಚಿಸಿಕೊಳ್ಳಲೂ ನಡಿಸುವ ಶಕ್ತಿ, ಹಣ, ಯಂತ್ರಗಳು, ಜನರು, ಸಾಮಗ್ರಿ ಕೊಂಡುಕೊಳ್ಳುವವರು ಎಂಬ ಆರು ವಿಷಯಗಳು ಬೇಕು. ಹಣವಾದರೂ ದೊರೆತೀತು, ಹಣವಿದ್ದರೆ ಯಂತ್ರಗಳೂ ದೊರೆತೀತು, ಕೆಲಸ ಮಾಡಲು ಜನರು ಸಮೃದ್ಧಿಯಾಗಿದ್ದಾರೆ. ಪರದೇಶಕ್ಕೆ ಹೋಗುವ ಮೂಲ ವಸ್ತುಗಳು ಬೇಕಾದಷ್ಟು ಇವೆ. ಕೊಂಡುಕೊಳ್ಳುವ ಜನರೂ ಇದ್ದಾರೆ. ಇಂಥಾ ಕಾರ್ಖಾನೆಗಳನ್ನು ನಡಿಸಲು ಅನುಭವವನ್ನು ಪಡೆದುಕೊಳ್ಳುವುದು ಕಷ್ಟವಾಗಲಾರದು. ಈ ವಿಷಯ[illegible] ಜನರು ಜಾಗರೂಕರಾಗಬೇಕಾದದ್ದೇ ಮುಖ್ಯ ಆವಶ್ಯಕತೆ. ಕೈಗಾರಿಕೆಯನ್ನು ಹೆಚ್ಚಿಸಲು ಸರ್ಕಾರವು ಕೈಹಾಕಬೇಕಾದದ್ದಿಲ್ಲವೆಂತ ಈಗಿನ ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ವಿಷಯದಲ್ಲಿ ಸ್ವಪ್ರಯತ್ನವನ್ನೇ ನಂಬಬೇಕಾಗಿದೆ.

ರಷ್ಯಾ ದೇಶದಲ್ಲಿ ಹೊಸ ಸರಕಾರವು ಸ್ಥಾಪಿತವಾದ ನಂತರ ಐದು ವರ್ಷಗಳೊಳಗೆ ದೇಶದ ಅಭಿವೃದ್ಧಿಯನ್ನು ಅತ್ಯುನ್ನತ ಪದವಿಗೆ ತರಲು ಪ್ರಯತ್ನಿಸಬೇಕೆಂತ ಸಂಕಲ್ಪ ಮಾಡಿಕೊಂಡು ಸಾಧಿಸುತ್ತಿದ್ದಾರೆ. ಹಾಗೆಯೇ ಹಿಂದೂಸ್ಥಾನದವರೂ ಸಹ 5 ವರ್ಷಗಳೊಳಗೆ ಕೈಗಾರಿಕೆಯನ್ನು ಹೆಚ್ಚಿಸಲು ದೃಢಸಂಕಲ್ಪ ಮಾಡಿಕೊಂಡು ಯಾವ ಯಾವ ಪ್ರಾಂತ್ಯದಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಕೈಕೊಳ್ಳಲು ಸಾಧ್ಯವಿದೆ ವಗೈರೆ ವಿಷಯಗಳನ್ನು ಕೂಡಲೇ ಅಜಮಾಯಿಸಬೇಕೆಂತಲೂ ಪ್ರತಿಯೊಂದು ಪ್ರಾಂತೀಕ ಸರಕಾರವೂ ಕಬ್ಬಿಣ, ಹತ್ತಿ ಮುಂತಾದ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸುವಂತೆ ಮಾಡಬೇಕೆಂತಲೂ, ವಿದ್ಯಾ ಇಲಾಖೆಯವರು ಸಾಧಾರಣ ವಿದ್ಯೆ ಕೊಟ್ಟ ನಂತರ ಕಾರ್ಖಾನೆ ಕೈಗಾರಿಕೆಗಳನ್ನು ನಡಿಸಲು ಅರ್ಹರಾಗುವಂತೆ ತರಬೇತು ಕೊಡಬೇಕೆಂತಲೂ ಸೂಚಿಸಿರುತ್ತಾರೆ.

ಜನರನ್ನು ಎಚ್ಚರಗೊಳಿಸುವುದೂ, ದೊಡ್ಡ ದೊಡ್ಡ ಖರ್ಚು ತಗಲುವ ಕಾರ್ಖಾನೆಗಳನ್ನು ಸ್ಥಾಪಿಸಲು ಸಹಾಯ ಮಾಡುವುದೂ, ದೇಶದಲ್ಲಿ ತಯಾರಾಗುವ ತರದ ಮಾಲುಗಳು ಹೊರಗಿನಿಂದ ಬರುವದಕ್ಕೆ ಹೆಚ್ಚಿಗೆ ತೆರಿಗೆ ಹಾಕುವುದೂ, ವಿದ್ಯಾಭ್ಯಾಸ ಕ್ರಮದಲ್ಲಿ ಮಾರ್ಪಾಡು ಮಾಡುವುದೂ ವಗೈರೆ ಕೆಲಸಗಳು ಸ್ವರಾಜ್ಯ ಸಿಕ್ಕುವ ಮುಂಚೆ ಸಾಧ್ಯವಿಲ್ಲ. ಆದರೂ ಜನರಿಂದ ಸಾಧ್ಯವಿರುವಷ್ಟನ್ನು ಮಾಡಿಕೊಳ್ಳಲು ಪ್ರಯತ್ನಿಸಲೇ ಬೇಕು.

ಸ್ವರಾಜ್ಯ ಸ್ಥಾಪನೆಗೆ ಸಹಾಯವಾಗುವ ಮತ್ತು ಬಡವರಿಗೆ ಅನ್ನ ಕೊಡುವ ಖದ್ದರ್ ಕೈಗಾರಿಕೆಯನ್ನು ರಾಜಕೀಯ ಕೆಲಸಗಾರರು ಮರೆತಿಲ್ಲ. ಈ ಕೈಗಾರಿಕೆಯಲ್ಲಿ ತನಗೆ ನಂಬಿಕೆ ಇರಲಿಲ್ಲವಾಗಿಯೂ, ಆದರೆ ಈಗಿನ ಸ್ಥಿತಿಯಲ್ಲಿ ಈ ಕೈಗಾರಿಕೆಯಿಂದ ಪ್ರಯೋಜನ ಮಾಡಿಕೊಳ್ಳಬಹುದೆಂತ ತನಗೆ ಈಗ ನಂಬಿಕೆಯಾಗಿರುವುದಾಗಿಯೂ, ಸ್ವರಾಜ್ಯ ಸಿಕ್ಕಿದ ನಂತರ ಈ ಖದ್ದರ್ ಪ್ರಚಾರಕ್ಕೆ ಮಾಡುವ ಪ್ರಯತ್ನದಲ್ಲಿ ಕೆಲವು ಭಾಗವನ್ನಾದರೂ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಲು ಉಪಯೋಗಿಸಿಯಾರೆಂತ ನಂಬುತ್ತೇನೆಂದೂ ಉಪನ್ಯಾಸಕಾರರು ಹೇಳಿರುವರು. ಈಗಿನ ಹೋರಾಟದಲ್ಲಿ ಜನರಿಗಾಗಿರುವ ಸಾರ್ವಜನಿಕ ಕೆಲಸದ ಬುದ್ಧಿಯನ್ನು ಈ ಖದ್ದರ್ ಪ್ರಚಾರದ ಮೂಲಕ ಸಂಪತ್ತನ್ನು ಹೆಚ್ಚಿಸಲು ಉಪಯೋಗಿಸುವುದೇ ಅವಶ್ಯವೆಂತ ಹೇಳಬೇಕಾಗಿದೆ. ದೊಡ್ಡ ದೊಡ್ಡ ಕಾರ್ಖಾನೆಗಳಲ್ಲೂ, ಪಾಶ್ಚಾತ್ಯ ಅರ್ಥ ನೀತಿಯಲ್ಲೂ ನಂಬಿಕೆ ಇರುವ ಸರ್ ಎಂ ವಿಶ್ವೇಶ್ವರಯ್ಯನಂಥವರ ಬಾಯಿಗೆ '[illegible]ದ ನಂತರ ಅರೆ ಹೊಟ್ಟೆ [illegible] ಜನರ ಸಹ ಚರಕದ ಕಡೆಗೂ, ಅದು ಸಾಧ್ಯವಿಲ್ಲದವರು ಚರಕದ ಉತ್ಪತ್ತಿಯಾದ ಖದ್ದರಿನ ಕಡೆಗೂ ಮನಸು ತಿರುಗಿಯಾರೆಂತ ನಂಬುತ್ತೇವೆ.

ಸಿಬ್ಬಂದಿ ಖೋತೆಯ ಏರ್ಪಾಡುಗಳು.

ಕೊಡಗಿನ ರಿಟ್ರೆಂಚ್‌ಮೆಂಟ್ ಕಮಿಟಿಯ ವರದಿಯು ಚೀಫ್ ಕಮಿಷನರವರಿಗೆ ತಲುಪಿ ಅವರು ಅದರ ಮೇಲೆ ತಮ್ಮ ಹುಕುಮನ್ನು ಮಾಡಿರುವರು. ಮಾಹೆಯಾನ 40 ರೂಪಾಯಿಯ ಮೇಲೆ ಸಂಬಳವಿರುವ ಸರ್ಕಾರಿ ಉದ್ಯೋಗಸ್ಥರೆಲ್ಲರ ಸಂಬಳದಲ್ಲಿ ಶೇಕಡ 10ರಷ್ಟು ಕಡಿಮೆ ಮಾಡಲಾಗುವುದೆಂಬುದೂ, ಈ ಖೋತೆಯು ಈ ತಿಂಗಳ ಸಂಬಳದಿಂದ 1933ನೇ ಇಸವಿ ಮಾರ್ಚ್ ಆಖೈರು ವರೆಗೆ ಜಾರಿಯಲ್ಲಿರುವದೆಂಬುದೂ ಈ ಹುಕುಮಿನ ಮುಖ್ಯಾಂಶವಾಗಿದೆ. 40 ರೂಪಾಯಿಗಿಂತ ಕಡಿಮೆ ಸಂಬಳವಿರುವವರಿಗೆ ಈ ಖೋತೆಯು ಅನ್ವಯಿಸದಂತೆ ಮಾಡಿದ್ದು ನ್ಯಾಯವೇ ಸರಿ. ಈ ಮಿತಿಯನ್ನು 50 ರೂ ಸಂಬಳಕ್ಕೂ ಏರಿಸಿದ್ದರೆ ಅನ್ಯಾಯವಾಗುತ್ತಿರಲಿಲ್ಲ. ಆದ[illegible] 40 ರೂಪಾಯಿಯಿಂದ ಮೇಲಿನಗಟ್ಟಲೆ ಸಂಬಳ ಸಿಕ್ಕುವವರಿಗೆ ಒಂದೇ ಸಮನಾಗಿ ಶೇಕಡ 10ರಷ್ಟು ಕಡಿಮೆ ಮಾಡಿದ್ದು ಎಂದೂ ನ್ಯಾಯವಲ್ಲ. ದೊಡ್ಡ ಅಧಿಕಾರಿಗಳಿಗೂ, ಸಣ್ಣ ನೌಕರರಿಗೂ ಸಂಬಳದಲ್ಲೇ ಅನ್ಯಾಯವಾದ ತಾರತಮ್ಯವಿದೆ. ದೊಡ್ಡ ಉದ್ಯೋಗಸ್ಥರ ಮತ್ತು ಚಿಕ್ಕ ನೌಕರರ ಜೀವನಕ್ರಮದಲ್ಲಿ ಅವರ ಸಂಬಳದಲ್ಲಿರುವಷ್ಟು ತಾರತಮ್ಯವಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಹೀಗಿರುವಲ್ಲಿ ದುಂದುಗಾರಿಕೆಯಿಂದ ಜೀವನ ನಡಿಸುವ ದೊಡ್ಡ ಸಂಬಳದವರಿಗೂ, ಕಷ್ಟದಿಂದ ಸಾದಾ ಜೀವನ ನಡಿಸುವ ಸಣ್ಣ ಸಂಬಳದ ಉದ್ಯೋಗಸ್ಥರಿಗೂ ಒಂದೇ ತರದ ಖೋತೆ ಮಾಡಿದ್ದು ಸರಿಯಲ್ಲವೆಂದು ಯಾರಿಗೆ ತಾನೇ ತೋರದು? ಸಂಬಳವು ಏರುತ್ತಾ ಹೋದ ಹಾಗೆ ನ್ಯಾಯಪ್ರಕಾರ ಖೋತೆಯು ಹೆಚ್ಚಾಗಬೇಕಿತ್ತು. ಇದರಿಂದ ದೊಡ್ಡ ಸಂಬಳದ ಉದ್ಯೋಗಸ್ಥರಿಗೆ ಮಾತ್ರ ಸಹಾಯ ಮಾಡಿದಂತಾಯಿತು. ಈ ತರಹದ ಸಿಬ್ಬಂದಿ ಖೋತೆಯು ಇಡೀ ಹಿಂದೂಸ್ಥಾನದಲ್ಲಿ ಮಾಡಲ್ಪಟ್ಟಿರುವದರಿಂದ ಇದು ಬ್ರಿಟಿಷ್ ಸರ್ಕಾರದವರ ಅನ್ಯಾಯಗಳಲ್ಲಿ ಒಂದೆಂದರೆ ತಪ್ಪಾಗಲಾರದು.

ರಿಟ್ರೆಂಚ್‌ಮೆಂಟ್ ಕಮಿಟಿಯವರು ಅಮ್ಮತ್ತಿ ನಾಡು ಕಚ್ಚೇರಿಯನ್ನು ತೆಗೆದು ಹಾಕಿ ಅದನ್ನು ವೀರಾಜಪೇಟೆ ನಾಡಿಗೆ ಸೇರಿಸಬೇಕೆಂದ ಸಿಫಾರಸ್ಸು ಮಾಡಿದ್ದರೆಂದೂ ಆದರೆ ಅದನ್ನು ಚೀಫ್ ಕಮಿಷನರವರು ಅಂಗೀಕರಿಸಲಿಲ್ಲವೆಂದೂ ವರ್ತಮಾನವಿದೆ. ರಿಟ್ರೆಂಚ್‌ಮೆಂಟ್ ಕಮಿಟಿಯ ವರದಿಯ ಪ್ರತಿಯಾಗಲೀ, ಅದರ ಮೇಲೆ ಚೀಫ್ ಕಮಿಷನರವರ ತೀರ್ಪಿನ ಪ್ರತಿಯಾಗಲೀ ನಮಗೆ ಕಳುಹಿಸಲ್ಪಡದೇ ಇರುವುದರಿಂದ ವರ್ತಮಾನದ ಮೇಲೆ ಟೀಕಿಸಬೇಕಾಗಿ ಬಂತು. ಅಮ್ಮತ್ತಿ ನಾಡು ಕಚ್ಚೇರಿಯನ್ನು ತೆಗೆದು ಹಾಕುವುದರಿಂದ, ವಿಶಾಲವಾದ ಮತ್ತು ಜನಭರಿತವಾದ ಆ ನಾಡಿನವರಿಗೆ ತುಂಬಾ ತೊಂದರೆಗಳುಂಟಾಗುವವೆಂದು ಸದರಿ ನಾಡಿನವರು ಸೂಚಿಸ[illegible] ಕೂಡ ರಿಟ್ರೆಂಚ್‌ಮೆಂಟ್ ಕಮಿಟಿಯವರು ಅದನ್ನು ಗಣ್ಯ ತೆಗೆದುಕೊಳ್ಳದೆ ಹೋದದ್ದು ವ್ಯಸನಕರ. ಆದರೆ ಚೀಫ್ ಕಮಿಶನರವರು ಆ ನಾಡಿನವರ ಕಷ್ಟವನ್ನು ತಿಳಿದು ಸದರಿ ನಾಡು ಕಚ್ಚೇರಿಯನ್ನು ವಜಾ ಮಾಡಲು ಒಪ್ಪದೆ, ಅಲ್ಲಿಯವರ ಕೃತಜ್ಞತೆಯನ್ನು ಸಂಪಾದಿಸಿರುವರೆಂಬುದರಲ್ಲಿ ಸಂಶಯವಿಲ್ಲ.

ವೈದ್ಯ ಇಲಾಖೆಯ ಮುಖ್ಯ ಅಧಿಕಾರಿಯ ಉದ್ಯೋಗವನ್ನು 'ಪ್ರೋವಿನ್ಶಿಯಲ್' ತರಗತಿಗೆ ಇಳಿಸಬೇಕೆಂದು ರಿಟ್ರೆಂಚ್‌ಮೆಂಟ್ ಕಮಿಟಿಯವರು ಸಿಫಾರಸ್ಸು ಮಾಡಿರುವರಂತೆ. [illegible]ರೊಂದಿಗೆ ಪಿ ಡಬ್ಲ್ಯು. ಡಿ. ಮತ್ತು ಫಾರೆಸ್ಟ್ ಇಲಾಖೆಯ ಮುಖ್ಯಾಧಿಕಾರಿಗಳ ಉದ್ಯೋಗಗಳನ್ನೂ ಸೇರಿಸಿದ್ದರೆ ನ್ಯಾಯವಾಗುತ್ತಿತ್ತು. ಆದರೆ ಚೀಫ್ ಕಮಿಶನರವರು ಈ ಸೂಚನೆಯನ್ನು ಸಂಪೂರ್ಣವಾಗಿ ಅಂಗೀಕರಿಸಿದೆ, ಸಿವಿಲ್ ಸರ್ಜನರ ಹುದ್ದೆಯನ್ನು 'ಪ್ರೊವಿನ್ಶಿಯಲ್' ತರಗತಿಗೆ ಇಳಿಸಲು ಒಪ್ಪಿದರೂ ಅದನ್ನು ಹಿಂದೀಯನಲ್ಲದವರಿಗೆ ಕಾದಿಡಬೇಕೆಂದು ನಿಶ್ಚೈಸಿರುವ ಸುದ್ದಿ ಇದೆ. ಇದು ನಿಜವಾದರೆ ಆತ್ಮಗೌರವವಿರುವ [illegible]ಯೊಬ್ಬ ದೇಶೀಯನಿಗೂ ಆಶ್ಚರ್ಯವನ್ನೂ, ಅತೃಪ್ತಿಯನ್ನೂ ಉಂಟುಮಾಡದೆ ಇರದು. ಇಡೀ ಹಿಂದೂಸ್ಥಾನವೇ ಸ್ವಾತಂತ್ರ್ಯಕ್ಕೆ ಪ್ರಚಂಡ ಚಳವಳವನ್ನು ನಡಿಸುತ್ತಿರುವಾಗ, ಬ್ರಿಟಿಷ್ ಮಂತ್ರಿಗಳೇ ಹಿಂದೀಯರಿಗೆ ಜವಾಬ್ದಾರಿ ಸರಕಾರ ಕೊಡುತ್ತೇವೆಯೆಂದು ಭಾಷೆಯನ್ನಿತ್ತಿರುವಾಗ್ಯೂ ನಮ್ಮ ಈ ಚಿಕ್ಕ ಪ್ರಾಂತ್ಯದಲ್ಲಿ ಸಿವಿಲ್ ಸರ್ಜನರ ಹುದ್ದೆಯ ತರಗತಿಯನ್ನು ಕಡಿಮೆ ಮಾಡಬಹುದಾದರೂ ಅದನ್ನು ಹಿಂದೀಯರಿಗೆ ಕೊಡಬಾರದೆಂದು ಚೀಫ್ ಕಮಿಷನರವರು ತೀರ್ಮಾನಿಸುವುದರ ಅರ್ಥವೇನೆಂದು ಗೊತ್ತಾಗುವುದಿಲ್ಲ. ಸದರಿ ಉದ್ಯೋಗಕ್ಕೆ ಯೋಗ್ಯರಾದ ಹಿಂದೀಯರು ದೊರೆಯಲಾರರೆಂದು ಹೇಳಲು ಸಾಧ್ಯವಿಲ್ಲ. ಅಂದ ಮೇಲೆ ಈ ಪಕ್ಷಪಾತವೇತಕ್ಕೆ?

ಈ ಹುದ್ದೆಯನ್ನು ಪ್ರೊವಿನ್ಶಿಯಲ್ ತರಗತಿಗೆ ಇಳಿಸುವುದರಿಂದ ಐ ಯಂ. ಯಸ್. ಪದವೀಧರರು ಬರುವುದಿಲ್ಲವಾಯಿತು. ಅದಕ್ಕೆ ಹಿಂದೀಯರು ಬರಕೂಡದೆಂದು ಪ್ರೊವಿನ್ಶಿಯಲ್ ಯಂ ಪಿ (ಸಬ್ ಅಸಿಸ್ಟೆಂಟ್ ಸರ್ಜನರ) ತರಗತಿಗೆ ಸೇರಲುವ ಆಂಗ್ಲೋ ಇಂಡಿಯನ್ ಮಿಲಿಟರಿ ಡಾಕ್ಟರರ [illegible]ರುವ ಸಂಭವವೇ ಹೆಚ್ಚು. ಇಡೀ ಪ್ರಾಂತ್ಯದ ವೈದ್ಯ ಇಲಾಖೆಯನ್ನು ಇಂಥಾ ಉದ್ಯೋಗಸ್ಥರ ಕೈಕೆಳಗೆ ಇಡುವುದು ಆಶ್ಚರ್ಯಪ್ರದವಲ್ಲವೇ? ಮತ್ತು ಇಲ್ಲಿಯವರು ಕಠಿಣ [illegible]ಗಳಿಗೂ, ದೊಡ್ಡ ಶಸ್ತ್ರ ಕ್ರಿಯೆಗಳಿಗೂ ಹೊರ ಪ್ರಾಂತ್ಯಗಳಿಗೆ ಮುಖ್ಯವಾಗಿ ಮೈಸೂರಿಗೆ ಹೋಗಬೇಕಾಗುವದಲ್ಲವೇ? ಅದರ ಬದಲು ಈ ಉದ್ಯೋಗಕ್ಕೆ ಪ್ರೊವಿನ್ಶಿಯಲ್ ತರಗತಿಯವರನ್ನೇ ಆಗಲೀ ನೇಮಿಸುವುದಾದರೆ ಯಂ ಬಿ ಬಿ ಯಸ್ ಪದವೀಧರರಾದ ಮತ್ತು ಬಹು ಗಟ್ಟಿಗರಾದ ಹಿಂದೀಯರು ಸಿಕ್ಕುವುದರಲ್ಲಿ ಸಂಶಯವಿಲ್ಲ. ಆಗ ಇಲ್ಲಿಯವರು ಹೆಚ್ಚು ಹಣ ವೆಚ್ಚ ಮಾಡಿಕೊಂಡು ಚಿಕಿತ್ಸೆ ಹೊಂದಲು ಹೊರಗೆ ಹೋಗುವ ಆವಶ್ಯಕತೆ ಇರುವುದಿಲ್ಲ. ಆದುದರಿಂದ ಚೀಫ್ ಕಮಿಷನರವರು ಈ ವಿಷಯ ಪುನರಾಲೋಚನೆ ಮಾಡಿ, ಮಾತ್ಸರ್ಯಜನಕವಾದ ಭೇದವುಳ್ಳ ತಮ್ಮ ತೀರ್ಮಾನವನ್ನು ಬದಲಾಯಿಸುವರೆಂದು ನಂಬುತ್ತೇವೆ.

ಫ್ರೀಶಿಪ್‌ಗಳೂ, ಸ್ಕಾಲರ್ ಶಿಪ್‌ಗಳೂ.

ಫ್ರೀಶಿಪ್ ಮತ್ತು ಸ್ಕಾಲರ್‌ಶಿಪ್‌ಗಳನ್ನು ಕುರಿತ [illegible]ಯೊಂದು ಇನ್ನೊಂದು ಕಡೆ ಪ್ರಕಟವಾಗಿದೆ. ಅದರಲ್ಲಿ [illegible]ರುವ ಮೇರೆ ವಾಡಿಕೆಯಾಗಿ ಸೆಪ್ಟೆಂಬರು ತಿಂಗಳಲ್ಲಿ [illegible] ವಿದ್ಯಾರ್ಥಿಗಳ ಸ್ಕಾಲರ್‌ಶಿಪ್‌ಗಳು ಈ ವರ್ಷ [illegible] ತಿಂಗಳುಗಳಲ್ಲಿ [illegible] ಫ್ರೀಶಿಪ್‌ಗ[illegible] ಅವುಗಳನ್ನು ಪಡೆಯು[illegible] ತುಂಬಾ ಅನ್ಯಾಯವಾಯಿತೆಂಬುದರಲ್ಲಿ ಸಂದೇಹವಿಲ್ಲ. [illegible] ವರ್ಷವು ಪ್ರಾರಂಭವಾಗಿ ಒಂದೆರಡು ತಿಂಗಳುಗಳಲ್ಲಿಯೇ ಈ ರಿಯಾಯಿತಿಗಳನ್ನು ಮಂಜೂರು ಮಾಡು[illegible]ತ್ತು. ಹಾಗೆ ಮಾಡುವುದರ ಬದಲು [illegible]ಗಳಲ್ಲಿ ಸ್ಕಾಲರ್‌ಶಿಪ್‌ಗಳನ್ನು ಮಂಜೂರು ಮಾಡಿ, ಫ್ರೀಶಿಪ್‌ಗಳನ್ನು ಇನ್ನೂ ಮಂಜೂರು ಮಾಡದೆ ಇರುವುದು [illegible]. ಇದರಿಂದ ಈ ರಿಯಾಯಿತಿಗಳನ್ನು ಕೊಡುವುದರ ಉದ್ದೇಶವನ್ನು ನೆರವೇರಿಸಿದಂತಾಗುವುದಿಲ್ಲ. ಈ ಸಹಾಯವನ್ನೇ ನಂಬಿಕೊಂಡು ವಿದ್ಯಾಭ್ಯಾಸಂಗವನ್ನು ಮುಂದರಿಸುತ್ತಿದ್ದ ವಿದ್ಯಾರ್ಥಿಗಳಿಗೆ ಅರ್ಧ ವರ್ಷ ಮುಗಿದ ನಂತರ ಈ ರಿಯಾಯಿತಿಗಳನ್ನು ಮಂಜೂರು ಮಾಡುವುದರಿಂದ ಅವರಿಗೆ ಎಷ್ಟು ತೊಂದರೆಗಳುಂಟಾಗುತ್ತವೆಂಬುದು ಸದರಿ [illegible]ಯಲ್ಲಿ ವಿವರಿಸಲ್ಪಟ್ಟಿದೆ.

ವಾಡಿಕೆಯಂತೆ ಸಂಬಂಧಪಟ್ಟ ಶಾಲಾ ಅಧಿಕಾರಿಗಳ ಶಿಫಾರಸ್ಸಿನ ಮೇರೆ ಮಂಜೂರು ಮಾಡುವಂಥ ಈ ಸಂಗತಿಯನ್ನು ಇಷ್ಟು ತಡ ಮಾಡಲು ಕಾರಣವೇನೆಂದು ತಿಳಿಯಲಿಲ್ಲ. ಅಧಿಕಾರಿಗಳು ಬಡ ವಿದ್ಯಾರ್ಥಿಗಳಿಗೆ ಹೀಗೆ ತಡಮಾಡುವುದರಿಂದ ಉಂಟಾಗುವ ತೊಂದರೆಗಳನ್ನು ತಿಳಿಯದಿರುವರೇ ಅಥವಾ ಉದಾಸೀನತೆಯೇ ಹೀಗಾಗಲು ಕಾರಣವೆನ್ನಬಹುದಲ್ಲವೇ? ಇನ್ನಾದರೂ ಅಧಿಕಾರಿಗಳು ಫ್ರೀಶಿಪ್‌ಗಳನ್ನು ಕೂಡಲೆ ಮಂಜೂರು ಮಾಡಿಯೂ, ಮುಂದಿನ ವರ್ಷಗಳಲ್ಲಿ ಶಾಲೆಗಳು ಆರಂಭಿಸಿ ಎರಡನೇ ತಿಂಗಳಲ್ಲಾದರೂ ರಿಯಾಯಿತಿಗಳನ್ನು ಮಂಜೂರು ಮಾಡಿಯೂ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುವರಾಗಿ ಆಶಿಸುತ್ತೇವೆ.

ಚಕ್ರಗೋಷ್ಠಿಯಲ್ಲಿ

ಮಹಾತ್ಮ ಗಾಂಧಿಯವರ ಭಾಷಣ.

[ಮಹಾತ್ಮ ಗಾಂಧಿಯವರು ಈ ತಿಂಗಳ ೧ನೇ ತಾರೀಖಿನ ಸಡೆದ ಚಕ್ರಗೋಷ್ಠಿಯಲ್ಲಿ ಮಾಡಿದ ಅಯ್ಯರು ಭಾಷಣದ ಸಾರಾಂಶವು ಈ ಕೆಳಗೆ ಕೊಡಲಾಗಿದೆ. ಮಹಾತ್ಮರು ಇಂಗ್ಲೆಂಡಿನಲ್ಲಿ ಮಾಡಿದ ಪ್ರಾಮುಖ್ಯ ಭಾಷಣಗಳಲ್ಲಿ ಇದೊಂದಾಗಿದೆ. ಹಿಂದೂದೇಶದ ಕಾಂಗ್ರೆಸ್ ಮಹಾಸಭೆಯ ಪರವಾಗಿ ಗಾಂಧೀಜಿಯವರು ಮಧ್ಯರಾತ್ರಿ 12 ಗಂಟೆಯ ಮೇಲೆ ಚಕ್ರಗೋಷ್ಠಿಯ ಸಭಾಮಧ್ಯದಲ್ಲಿ ಬ್ರಿಟನ್ನಿನ ಪ್ರಧಾನ ಮಂತ್ರಿಯವರನ್ನುದ್ದೇಶಿಸಿ 70 ಮಿನಿಟುಗಳ ವರೆಗೆ ಮಾಡಿದ ಮಹತ್ವದ ಭಾಷಣವನ್ನು ಎಲ್ಲರೂ ಓದಿ ತಿಳಕೊಳ್ಳುವದು ಅತ್ಯವಶ್ಯವಾಗಿದೆ.]

'ನಾನು ಮೌನವಾದರೆ ಸುಮ್ಮನಿರಬಹುದಾಗಿತ್ತು. ಆದರೆ ನಾನು ಹಾಗೆ ಸುಮ್ಮನಿದ್ದು ಕಾಂಗ್ರೆಸ್ಸಿನ ಪರವಾಗಿ ನಿಮಗೆ ಹಲವು ಮಾತುಗಳನ್ನು ಹೇಳದಿದ್ದಲ್ಲಿ, ನಾನು ನಿಮಗೆ ವಿದ್ರೋಹವನ್ನು ಮಾಡಿದಂತಾಗುತ್ತಲ್ಲದೆ, ನಾನು ನನ್ನ ಕರ್ತವ್ಯವನ್ನು ಪಾಲಿಸಿದಂತಾಗುತ್ತಿರಲಿಲ್ಲ. ನನ್ನ ಈ ಮಾತುಗಳು ಬ್ರಿಟಿಷ್ ಮಂತ್ರಿ ಮಂಡಲದ ಮನೋವೃತ್ತಿಯನ್ನು ಬದಲಾಯಿಸಲಾರವೆಂಬುದನ್ನು ನಾನು ಬಲ್ಲೆ. ಬರೀ ಮಾತಿನಿಂದ, ವಾದದಿಂದ, ಸಂಧಾನದಿಂದ ಭಾರತ ದೇಶದಂತಹ ಮಹಾ ಜನಾಂಗದ ಸ್ವಾತಂತ್ರ್ಯವನ್ನು ಗಳಿಸಬಹುದೆಂಬುದು ಹುಚ್ಚುತನ. ಆದರೆ ಈ ಸಂಧಾನಾದಿಗಳಿಂದ ಸ್ವಾತಂತ್ರ್ಯ ಸಾಧನೆಯು ಬಹು ಮಟ್ಟಿಗೆ ಸುಲಭವಾಗಬಹುದು. ಈ ಪರಿಣಾಮವುಂಟಾಗಬೇಕಾದರೆ ನಾವು ನಮ್ಮ ಸಂಧಾನವನ್ನು ಯೋಗ್ಯವಾದ ವಾತಾವರಣದಲ್ಲಿ ನಡೆಸತಕ್ಕದ್ದು ಅತ್ಯಾವಶ್ಯಕ. ಹಾಗಿಲ್ಲದಿದ್ದಲ್ಲಿ ಈ ಸಂಧಾನಗಳೆಲ್ಲವೂ ಗುಡ್ಡಕ್ಕೆ ಕಲ್ಲು ಹೊತ್ತಂತೆಯೇ ಸರಿ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ನಾನೀ ವಿಚಾರವಾಗಿ ಇದಕ್ಕಿಂತಲೂ ಹೆಚ್ಚಾಗಿ ಇನ್ನೇನೂ ಹೇಳಲಾರೆ.

ಈ ಚಕ್ರಗೋಷ್ಠಿಯ ಉಪಸಮಿತಿಗಳು ಈಗ ಈ ಗೋಷ್ಠಿಯ ಮುಂದಿಟ್ಟಿರುವ ವರದಿಗಳ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಬೇಕೆನ್ನುತ್ತೇನೆ. ಈ ವರದಿಗಳ ಲೇಖಕರು, ಅನೇಕ ಸಂದರ್ಭಗಳಲ್ಲಿ "ಬಹುಮಂದಿ ಸದಸ್ಯರು ಈ ಅಭಿಪ್ರಾಯ"ವನ್ನೊಪ್ಪಿದರು, 'ಕೆಲವರು ಈ ಅಭಿಪ್ರಾಯವನ್ನು ವಿರೋಧಿಸಿದರು' ಎಂದು ಮುಂತಾಗಿ ಬರೆದಿದ್ದಾರೆ. ಆದರೆ ವಿರೋಧಾಭಿಪ್ರಾಯವನ್ನು ಸೂಚಿಸಿದವರಾರೆಂಬುದನ್ನವರು ತಮ್ಮ ವರದಿಯಲ್ಲಿ ಉಲ್ಲೇಖಿಸಿಲ್ಲ. ನಾನು ಈ ಚಕ್ರಗೋಷ್ಠಿಯಲ್ಲಿ ಭಾಗಿಯಾಗಲು ಬರುವುದಕ್ಕೆ ಮುಂಚೆ ನಾನು ಹಿಂದೂ ದೇಶದಲ್ಲಿದ್ದಾಗ್ಯೆ, ಚಕ್ರಗೋಷ್ಠಿಯ ಅಭಿಪ್ರಾಯಾದಿಗಳು ಸಂಖ್ಯಾ ಬಲದಿಂದ ನಿರ್ಣಯಿಸಲ್ಪಡುವುದಿಲ್ಲವೆಂದು ನನಗೆ ತಿಳಿಸಲ್ಪಟ್ಟಿತ್ತು. ನಾನು ಹೀಗೆಂದ ಮಾತ್ರಕ್ಕೆ ಈ ವರದಿಯಲ್ಲಿನ ಸೂಚನೆಗಳೆಲ್ಲವೂ ಸಂಖ್ಯಾಬಲದಿಂದ ನಿರ್ಣಯಿಸಲ್ಪಟ್ಟುವೆಂದು ನಾನು ಹೇಳುತ್ತಿರುವೆನೆಂದಾಗಲೀ, ಈ ವರದಿಗಳ ಮೇಲೆ ಅನ್ಯಾಯವಾಗಿ ದೋಷಾರೋಪಣೆ ಮಾಡುತ್ತಿದ್ದೇನೆಂದಾಗಲೀ ಯಾರೂ ಭಾವಿಸಬಾರದು.

ಈ ವರದಿಗಳಲ್ಲಿ ಸೂಚಿತವಾಗಿರುವ ವಿವಿಧ ವಿರೋಧಾಭಿಪ್ರಾಯ ಪ್ರದರ್ಶನಗಳೆಲ್ಲವೂ ನನ್ನ ಕಡೆಗೆ ಸೇರಿರುತ್ತದಾದುದರಿಂದ ನಾನೀ ಮಾತನ್ನು ಎತ್ತಬೇಕಾಯಿತು. ನನ್ನ ಗುರುಸಮಿತ್ರರಾದ ಇತರ ಪ್ರತಿನಿಧಿಗಳ ಅಭಿಪ್ರಾಯವನ್ನು ವಿರೋಧಿಸುವುದು ಬಹು ವ್ಯಸನದಾಯಕವಾದ ಪ್ರಸಂಗ. ಆದರೆ ನಾನು ಹಾಗೆ ನನ್ನ ವಿರೋಧಾಭಿಪ್ರಾಯವನ್ನು ಪ್ರಕಟಿಸದ ಹೊರತು, ನಾನು ನನ್ನ ಕರ್ತವ್ಯವನ್ನು ನೆರವೇರಿಸಿದಂತಾಗ ತ್ತಿರಲಿಲ್ಲ, ಕಾಂಗ್ರೆಸ್ಸಿನ ಪ್ರತಿನಿಧಿಯಾದ ನಾನು, ಕಾಂಗ್ರೆಸ್ಸಿನ ಅಭಿಪ್ರಾಯಗಳನ್ನು ಪ್ರಕಟಿಸಿದಂತಾಗುತ್ತಿರಲಿಲ್ಲ.

ಈ ಸಂದರ್ಭದಲ್ಲಿ ಈ ಗೋಷ್ಠಿಯ ಸದಸ್ಯರು ಕಾಂಗ್ರೆಸ್ಸಿನ ವಿರೋಧಾಭಿಪ್ರಾಯದ ಮಹತ್ವವೆಷ್ಟೆಂಬುದನ್ನು ಪರ್ಯಾಲೋಚಿಸತಕ್ಕದ್ದು ಅತ್ಯಾವಶ್ಯಕ. ಕಾಂಗ್ರೆಸ್ ಸಂಸ್ಥೆಯು ಭಾರತ ವರ್ಷದ ಬಹು ಭಾಗದ ಜನರ, (ಶೇಕಡ ೮೫ ರಷ್ಟು ಜನರ) ಭಾರತ ದೇಶದ ಬಡಪಾಯಿಗಳ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತದೆಯೆಂದು ನಾನೀಗಾಗಲೇ ಹೇಳಿದ್ದೇನೆ. ಇದಲ್ಲದೆ ಕಾಂಗ್ರೆಸು ಭಾರತ ದೇಶೀಯ ರಾಜರ ಮತ್ತು ಜಮೀನ್ದಾರರ ಮತ್ತು ವಿದ್ಯಾವಂತರ ಹಿತವನ್ನು ಕೂಡ ರಕ್ಷಿಸುತ್ತಿದೆಯಾದ್ದರಿಂದ ಭಾರತ ದೇಶದ ರಾಜರ, ಧನಿಕರ, ವಿದ್ಯಾವಂತರ, ಅಷ್ಟೇಕೆ ಭಾರತ ದೇಶದಲ್ಲಿರುವ ಸಮಸ್ತ ಪಂಗಡದವರ ಪ್ರಾತಿನಿಧ್ಯವನ್ನು ವಹಿಸಿ ಮಾತನಾಡುವ ಹಕ್ಕು ಕಾಂಗ್ರೆಸ್ಸಿಗಿದೆ. ಈ ಗೋಷ್ಠಿಗೆ ಬಂದಿರುವ ಇತರ ಪ್ರತಿನಿಧಿಗಳು ಅವರವರ ಪಕ್ಷಗಳ ಹಿತವನ್ನು ಸಾಧಿಸಲು ಬಂದಿದ್ದಾರೆ. ಆದರೆ ಅಖಂಡ ಭಾರತದ ಪ್ರಾತಿನಿಧ್ಯವನ್ನು ವಹಿಸಿ, ಅಖಿಲ ಭಾರತದ ಹಿತಸಾಧನೆಗಾಗಿ ಕಾಂಗ್ರೆಸು ತನ್ನ ಪ್ರತಿನಿಧಿಯನ್ನಿಲ್ಲಿಗೆ ಕಳುಹಿಸಿದೆ. ಕಾಂಗ್ರೆಸು 'ಕೋಮುವಾರು ಸಂಸ್ಥೆ'ಯಲ್ಲ. ಅದು 'ಕೋಮುವಾರು ತತ್ವ'ದ ವೈರಿ. ಜಾತಿ ಮತ ಭೇದಗಳ ಸೋಂಕಿಲ್ಲ ಕಾಂಗ್ರೆಸ್ಸಿಗೆ. ಅದು ವಿಶ್ವವ್ಯಾಪಿಯಾದ ಸಂಸ್ಥೆ.

ಆದರೆ ಅನೇಕ ವೇಳೆ ಕಾಂಗ್ರೆಸು ತನ್ನ ಧ್ಯೇಯವನ್ನು ಸಂಪೂರ್ಣವಾಗಿ ಸಾಧಿಸಲಾರದಿರಬಹುದು. ತನ್ನ ಧ್ಯೇಯವನ್ನು ಸಂಪೂರ್ಣವಾಗಿ ಸಾಧಿಸಿರುವ ಮಾನವ ಸಂಸ್ಥೆಯಾವುದಿದೆ? ನಾನರಿಯೆ. ಕಾಂಗ್ರೆಸು ಅನೇಕ ತಪ್ಪುಗಳನ್ನು ಮಾಡಿದೆಯೆಂಬುದು ನನಗೆ ಗೊತ್ತು; ಅನೇಕ ಮಂದಿ ಕಾಂಗ್ರೆಸ್ ವಿರೋಧಿಗಳಿಗೂ ಗೊತ್ತು. ಆದರೆ ಕಾಂಗ್ರೆಸ್ಸಿಗೆ ಅಖಿಲ ಭಾರತದ ಬೆಂಬಲವುಂಟೆಂಬುದನ್ನು, ಕಾಂಗ್ರೆಸ್ಸಿನ ಸತ್ವವು ದಿನ ದಿನಕ್ಕೆ ಬೆಳೆಯುತ್ತಿದೆಯೆಂಬುದನ್ನು, ಅದರ ಸಂದೇಶವು ಸಕಲ ಭಾರತೀಯರ ಹೃದಯವನ್ನಾವರಿಸಿದೆಯೆಂಬುದನ್ನು ಯಾರೂ ವಿರೋಧಿಸಲಾರರು. ಆದರೆ ಈ ಚಕ್ರಗೋಷ್ಠಿಯಲ್ಲಿ ಕಾಂಗ್ರೆಸಿನ ಯೋಗ್ಯತೆಗೆ ತಕ್ಕ ಸ್ಥಾನವು ದೊರೆಯಲಿಲ್ಲ. ಗೋಷ್ಠಿಗೆ ಬಂದಿದ್ದ ಮಿಕ್ಕೆಲ್ಲ 'ಕೋಮು'ಗಳಂತೆ ಕಾಂಗ್ರೆಸನ್ನೂ ಒಂದು 'ಕೋಮು' ಅಲ್ಲ, ಒಂದು ಸಂಸ್ಥೆಯೆಂದು ಪರಿಗಣಿಸಲ್ಪಟ್ಟಿತು. ನಾನಿದನ್ನು ಲಕ್ಷಿಸೆ. ಈ ಪ್ರಸಂಗದಿಂದ ಕಾಂಗ್ರೆಸ್ಸಿಗೆ ಒಂದು ಮಹಾ ವಿಪತ್ತುಂಟಾಯಿತೆಂದು ನಾನು ಭಾವಿಸಲಾರೆ. ಆದರೆ ನಾವೆಲ್ಲರೂ ಇಲ್ಲಿ ಯಾವ ಕಾರ್ಯ ಸಾಧನೆಗಾಗಿ ಸೇರಿದ್ದೇವೋ ಆ ಕಾರ್ಯಕ್ಕೆ ಇದರಿಂದ ಮಹಾ ವಿಪತ್ತುಂಟಾಯಿತೆಂಬುದರಲ್ಲಿ ಸಂದೇಹವಿಲ್ಲ.

ಕಾಂಗ್ರೆಸು ಭಾರತ ದೇಶದ ಸಮಸ್ತ ಪಂಗಡಗಳ ಪ್ರಾತಿನಿಧ್ಯವುಳ್ಳ ಸಾರ್ವಜನಿಕ ಸಂಸ್ಥೆಯೆಂದೂ, ಅದು ಕೋಮುವಾರು ವಿಭಜನೆಯಿಂದ ಕಲುಷಿತವಾಗಿಲ್ಲವೆಂದೂ, ಭಾರತ ದೇಶದ ರಾಜ್ಯಾಡಳಿತವನ್ನು ಬ್ರಿಟನ್ನಿಂದ ವಹಿಸಿಕೊಳ್ಳಲು ಕಾಂಗ್ರೆಸ್ಸೇ ತಕ್ಕ ಸಂಸ್ಥೆಯೆಂದೂ ನಾನು ಬ್ರಿಟಿಷ್ ಜನರಿಗೂ ಬ್ರಿಟಿಷ್ ಮಂತ್ರಿ ಮಂಡಲಿಗೂ ಸಿದ್ಧಮಾಡಿ ತೋರಿಸಿಕೊಡಲು ಸಿದ್ಧನಿದ್ದೇನೆ. ಕಾಂಗ್ರೆಸ್ಸಿನ ಈ ನ್ಯಾಯವಾದ ಹಕ್ಕನ್ನು ಮುಚ್ಚಲು ಮಾಡುತ್ತಿರುವ ಯತ್ನಗಳು ಖಂಡನೀಯವಾದುವು. ಇಲ್ಲಿಗೆ ಬಂದಿರುವ ಅಲ್ಪ ಸಂಖ್ಯಾಕ ಪ್ರತಿನಿಧಿಗಳು ಭಾರತ ಜನಸಂಖ್ಯೆಯ ಅರ್ಧಭಾಗದಷ್ಟು ಜನರ ಪ್ರಾತಿನಿಧ್ಯವನ್ನು ವಹಿಸಿದ್ದಾರೆಂದು ಹೇಳುವುದು ಅಸತ್ಯ, ಸುಳ್ಳು. ಕಾಂಗ್ರೆಸು ಆ ಪಂಗಡಗಳೆಲ್ಲದರ ಪ್ರಾತಿನಿಧ್ಯವನ್ನು ವಹಿಸಿದೆ. ಶಾಂತರೀತಿಯಿಂದ ಭಾರತ ಹಿತಸಾಧನೆ ಮಾಡಬೇಕೆಂಬ ಉದ್ದೇಶದಿಂದ ನಾನಿಲ್ಲಿ ಸೇರಿದವನಾದ ಕಾರಣ ನಾನು ಈ ವಿಚಾರವನ್ನು ಒತ್ತಿ ಹೇಳಬೇಕಾಗಿದೆ.

ಕಾಂಗ್ರೆಸು ಭಾರತ ದೇಶದಲ್ಲಿ ಈಗಿರುವ ಸರಕಾರಕ್ಕೊಂದು ಪ್ರತಿ ಸರಕಾರವನ್ನು (Parallel Govt) ಸ್ಥಾಪಿಸಲಪೇಕ್ಷೆಯುಳ್ಳ ಗುಲ್ಲುಗಾರರ ಸಂಸ್ಥೆಯೆಂದು ಅನೇಕ ವೇಳೆ ಆರೋಪಿಸಲ್ಪಟ್ಟಿದೆ. ಈ ಅಪವಾದನೆಯು ಬಹುಮಟ್ಟಿಗೆ ಸತ್ಯವಾದುದೆಂದು ನಾನು ಒಪ್ಪಿಕೊಳ್ಳುತ್ತೇನೆ. ತಮ್ಮ ವಿರೋಧಿಗಳ ನಡುವೆ, ವಿರೋಧಿಗಳಿಗಿರುವ ಬಲ, ಅನುಕೂಲ್ಯಗಳೆಲ್ಲದೆ, ಉತ್ತಮ ರೀತಿಯಲ್ಲಿ ಒಂದು ಪ್ರತಿ ಸರಕಾರವನ್ನು ನಡೆಸಬಲ್ಲಂತಹ ಕರ್ತವ್ಯ ಶಕ್ತಿಯೂ, ಆಂತರಿಕ ಶಕ್ತಿಯೂ ಕಾಂಗ್ರೆಸ್ಸಿಗಿದೆಯೆಂದ ಮೇಲೆ, ಕಾಂಗ್ರೆಸ್ಸು ಅಖಿಲ ಭಾರತದ ಸಾರ್ವಜನಿಕ ಸಂಸ್ಥೆಯಲ್ಲವೆಂದು ಹೇಳತಕ್ಕ ಎದೆಯಾರಿಗುಂಟು? ಇಂತಹ ಸಾರ್ವಜನಿಕ ಸಂಸ್ಥೆಗೆ ಆಮಂತ್ರಣ ಕೊಟ್ಟು ಅದರ ಪ್ರತಿನಿಧಿಯನ್ನು ಚಕ್ರಗೋಷ್ಠಿಗೆ ಬರಮಾಡಿಕೊಂಡ, ಆ ಸಂಸ್ಥೆಯ ವಿಚಾರವಾಗಿ ಅನಾವಶ್ಯಕವಾದ ಅಪನಂಬಿಕೆಯನ್ನು ತೋರಿಸುತ್ತಿದ್ದೀರಿ. ಕಾಂಗ್ರೆಸ್ಸಿನ ಮಹಾ ಶಕ್ತಿಯೆಂತಹುದೆಂಬುನ್ನು ನಾನಿಲ್ಲಿ ಈಗ ಸಿದ್ಧಪಡಿಸಿ ತೋರಿಸಲಾರದವನಾಗಿರುವೆನಾದರೂ, ಅದು ಭಾರತ ವರ್ಷದ ಏಕಮಾತ್ರ ಸಾರ್ವಜನಿಕ ಸಂಸ್ಥೆಯೆಂದು ಒತ್ತಿ ಒತ್ತಿ ಹೇಳುತ್ತೇನೆ.

ಕಾಂಗ್ರೆಸು ಗುಲ್ಲುಗಾರರ ಕೂಟವೆಂಬುದು ನಿಜ. ಸಂಧಾನದಿಂದ ಭಾರತ ಸ್ವಾತಂತ್ರ್ಯವನ್ನು ಪಡೆಯಲೆತ್ನಿಸುತ್ತಿರುವ ಈ ಗೋಷ್ಠಿಯಲ್ಲಿ, ಗುಲ್ಲುಗಾರರ ಹಾಗೂ ದಂಗೆಯ ಮಾತನ್ನೆತ್ತುವುದು ನ್ಯಾಯವಲ್ಲವೆಂದು ನನಗೆ ಗೊತ್ತು. ಗೋಷ್ಠಿಗೆ ಬಂದಿರುವ ಅನೇಕ ಮಂದಿ ಪ್ರತಿನಿಧಿಗಳು, ವಾದ, ಸಂಧಾನಗಳಿಂದ ಭಾರತ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ಅನೇಕಾವರ್ತಿ ಹೇಳಿರುವರು. ಬ್ರಿಟಿಷರು ವಾದಕ್ಕೆ ತಲೆಬಾಗಿ, ನ್ಯಾಯವಾದ ರೀತಿಯಲ್ಲಿ ಸಂಧಾನ ನಡೆಸಿ ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಲೊಪ್ಪಿದರೆ ಅದು ಬ್ರಿಟನ್ನಿಗೆ ಕೀರ್ತಿಕರವೆಂಬುದರಲ್ಲಿ ಸಂದೇಹವಿಲ್ಲ.

ಇಂಡಿಯಾದಲ್ಲಿ ಕ್ರೂರ ಕ್ರಾಂತಿಯಾಗಲೀ, ದಂಗೆಯಾಗಲೀ ಉಂಟಾದಲ್ಲಿ ದೇಶ ಹಿತಕ್ಕದು ಅಪಾಯಕಾರಿಯೆಂದು ಈಗ ಇಲ್ಲಿ ಅನೇಕ ಮಂದಿ ಪ್ರತಿನಿಧಿಗಳು ಹೇಳಿದರು. ನನಗೆ ಇತಿಹಾಸದ ಪರಿಚಯವು ಬಹಳವಿಲ್ಲವಾದರೂ, ಸ್ವಾತಂತ್ರ್ಯ ಸಾಧನೆಗಾಗಿ ಮಾನವ ರಕ್ತವನ್ನು ಕೋಡಿಹರಿಸಿದ ಅನೇಕ ಸಂದರ್ಭಗಳನ್ನು ಬಲ್ಲವನಾಗಿದ್ದೇನೆ. ಸ್ವಾತಂತ್ರ್ಯ ಕಾಂಕ್ಷೆಯಿಂದ ಮತ್ತರಾದ ಜನರು ತಮ್ಮ ಮತ್ತಿನ ಭರದಲ್ಲಿ ಅನೇಕ ಅಮಾನುಷ ಕೃತ್ಯಗಳನ್ನು ಮಾಡಿಬಿಟ್ಟಿರುವರು. ಇತಿಹಾಸಕಾರರಾರೂ ಇದನ್ನು ಖಂಡಿಸಿಲ್ಲ. ಆದರೆ ನಾನು ಮಾತ್ರ ಈ ಕ್ರೂರ ಮಾರ್ಗವನ್ನು ಪೂರ್ಣವಾಗಿ ಖಂಡಿಸುತ್ತೇನೆ.

ಕಾಂಗ್ರೆಸ್ಸಿನವರು ಸ್ವಾತಂತ್ರ್ಯ ಸಾಧನೆಗಾಗಿ ಈಗೊಂದು ಹೊಸ ಮಾರ್ಗವನ್ನು ತೋರಿರುವರು. ಮಾನವ ಇತಿಹಾಸಕ್ಕೆ ಹೊಸದು ಈ ಮಾರ್ಗ. ಕಾಂಗ್ರೆಸ್ಸಿನವರು ಈಗ ಹೂಡಿರುವ ಅಸಹಕಾರ ಮತ್ತು ಶಾಸನಭಂಗ ಚಳವಳಿಯು ಯಾವ ಸರಕಾರವನ್ನಾದರೂ ನಡುಗಿಸಬಲ್ಲದು. ಆದ್ದರಿಂದ ಯಾವ ಸರಕಾರವೂ ಅದನ್ನು ಸಹಿಸಲಾರದು. ಜನರು ಸರಕಾರವನ್ನೆದುರಿಸಿ ಬಹಿರಂಗವಾಗಿ ದಂಗೆ ನಡೆಸುತ್ತಿರುವುದನ್ನು ಕಂಡು ಯಾವ ಸರಕಾರವು ತಾನೇ ಸುಮ್ಮನಿರಲಾದೀತು. ಸರಕಾರವು ಈ ವರ್ತನೆಯನ್ನು ಸಹಿಸಲಾರದಾದರೂ, ಅದು ಈ ಗುಲ್ಲುಗಾರರೊಡನೆ ಸಂಧಾನ ನಡೆಸದಿದ್ದರೆ ವಿಧಿಯಿಲ್ಲ. ಈ ಅಂಶವೇನೂ ಹೊಸದಲ್ಲ. ಬ್ರಿಟಿಷ್ ಸರಕಾರದವರು ಇಂಡಿಯಾದ ಸತ್ಯಾಗ್ರಹಿಗಳಿಗೆ ತಲೆ ಬಾಗಿಸಿ ಬಹು ಕಾಲವಾಗಿಲ್ಲ. ಹಿಂದೊಮ್ಮೆ ಹಾಲೆಂಡಿನ ಸರಕಾರದವರು ಎಂಟು ವರ್ಷಗಳ ವರೆಗೆ ಹೋರಾಡಿ ನಂತರ ಸತ್ಯಾಗ್ರಹಿಗೆ ತಲೆಬಾಗಿಸಿದರು.

ಈ ಸತ್ಯಶಕ್ತಿಯನ್ನೆದುರಿಸಿ ಗೆಲ್ಲುತ್ತೇನೆಂದು ನಂಬುವುದು ಹುಚ್ಚುತನ. ಆದ್ದರಿಂದ ಈಗ ನಾವಿಬ್ಬರೂ ಬೇರೆ ಬೇರೆ ಮಾರ್ಗಗಳನ್ನನುಸರಿಸಿ ಮುಂದುವರಿಯಲಾರಂಭಿಸತಕ್ಕ ಕಾಲವೊದಗಿ ಬಂದಿದೆಯೆಂದು ನಾನು ಭಾವಿಸುತ್ತೇನೆ. ಆದರೆ ನಾನು ಒಪ್ಪಂದಕ್ಕೆ ಒಪ್ಪಲಣಿಯಾಗಿಲ್ಲವೆಂದಲ್ಲ. ನ್ಯಾಯವಾದ ಮರ್ಯಾದಾರ್ಹವಾದ ಯಾವ ಒಪ್ಪಂದಕ್ಕೆ ಬೇಕಾದರೂ ಒಪ್ಪಲು ಸಿದ್ಧನಿದ್ದೇನೆ. ಲಕ್ಷಾಂತರ ಮಂದಿ ಭಾರತ ಸ್ತ್ರೀ ಪುರುಷರನ್ನೂ, ಮಕ್ಕಳನ್ನೂ ಶಾಂತಿ ರಣರಂಗಕ್ಕೆಳೆದೆ, ನಾನು ಭಾರತದ ಹಿತವನ್ನು ಸಾಧಿಸುವುದು ಸಾಧ್ಯವಿದ್ದಲ್ಲಿ ನಾನು ಅಂತಹ ಸಂದರ್ಭವನ್ನು ಉಚಿತ ರೀತಿಯಲ್ಲಿ ಉಪಯೋಗಿಸಿಕೊಳ್ಳದೆ ಬಿಡೆನು.

ಮತ್ತೆ ಶಾಂತಿ ಯುದ್ಧವನ್ನಾರಂಭಿಸಿರೆಂದು ನನ್ನ ಜನರಿಗೆ ಹೇಳುವುದು ಸಂತೋಷದ ಸುದ್ದಿಯಲ್ಲ. ಅವರು ಕಷ್ಟಪಡುವುದನ್ನು ಕಂಡು ನನ್ನೆದೆಯು ಮರುಗುತ್ತದೆ. ಆದರೆ ಅಂಥಾ ಶಾಂತಿ ಯುದ್ಧವನ್ನು ಹೂಡುವುದು ಅತ್ಯಾವಶ್ಯಕವಾಗಿ ಪರಿಣಮಿಸಿದಲ್ಲಿ ನಾನಂಥಾ ಸತ್ಯ ಯುದ್ಧವನು ಮತ್ತೆ ಆರಂಭಿಸುತ್ತೇನೆ. ಅದರ ಪರಿಣಾಮವನ್ನು ಸಂತೋಷ ಚಿತ್ತದಿಂದ ಅನುಭವಿಸಲು ಸಿದ್ಧನಿದ್ದೇನೆ.

ನನ್ನ ಈ ಚಳವಳಿಯಿಂದ ನಿಮ್ಮ ಜನರಿಗೆ ತೊಂದರೆಯುಂಟಾಗುವುದೆಂದು ನನಗೆ ಗೊತ್ತು. ಅಂಥಾ ತೊಂದರೆಯಿಂದ ನಿಮಗೆ ಚಿಂತೆಯಾಗದಿರುವುಂಟಾಗಲೆಂಬ ಆಕಾಂಕ್ಷೆಯಿಂದ ನಾನೂ, ನನ್ನ ದೇಶೀಯರೂ ಅನೇಕ ವಿಧವಾದ ತೊಂದರೆಗಳನ್ನನುಭವಿಸಲು ಸಿದ್ಧರಾಗಿದ್ದೇವೆ. ತೊಂದರೆಯು ಬಿಸಿ ತಟ್ಟಿದ ಮೇಲೆ ನೀವು ಸರಿಯಾದ ರೀತಿಯಲ್ಲಿ ಸಂಧಾನ ನಡೆಸುವಿರಿ. ಅಲ್ಲಿನ ವರೆಗೆ ನಿಮ್ಮ ಮನೋವೃತ್ತಿಯು ಮಾರ್ಪಡದು. ನ್ಯಾಯವಾದ ರೀತಿಯಲ್ಲಿ ಸಂಧಾನಗಳನ್ನು ನಡೆಸುವುದಕ್ಕಾಗಿ ನಾನಿಲ್ಲಿಗೆ ಬಂದೆ. ನಮ್ಮ ಶಾಂತಿ ಯುದ್ಧದ ಸತ್ವವು ನಿಮಗೆ ಗೊತ್ತಾಗಿದೆಯೆಂದು ನಂಬಿದ್ದೆ. ಆತುರದ ರಾಜಾಜ್ಞೆ (Ordinance) ಗಳಿಗೆ ನಮ್ಮನ್ನು ಗುರಿ ಮಾಡಿ ನೋಡಿ. ಲಾರ್ಡ್ ಇರ್ವಿನ್‌ರವರು ಭಾರತ ದೇಶೀಯರ ಸ್ವಾತಂತ್ರ್ಯ ಕಾಂಕ್ಷೆಯ ಆಳವನ್ನು ಕಂಡು ಹಿಡಿದಿದ್ದರೆಂದು ನಾನು ತಿಳಿದಿದ್ದೆ. ಆತುರದ ರಾಜಾಜ್ಞೆಗಳನ್ನು ಹೊರಡಿಸಲಿ, ಬಿಡಲಿ, ಲಾಠಿ ಪ್ರಯೋಗ ನಡೆಸಲಿ, ಬಿಡಲಿ ಭಾರತೀಯರ ಸ್ವಾತಂತ್ರ್ಯ ಕಾಂಕ್ಷೆಯು ತಗ್ಗದೆಂದು ಇರ್ವಿನ್ನರು ಮನಗಂಡಿದ್ದರೆಂದು ನಾನು ಭಾವಿಸಿದ್ದೆ.

ನನ್ನ ಮತ್ತು ನನ್ನ ಸಹೋದ್ಯೋಗಿಗಳಾದ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯವರ ದೇಹವನ್ನೂ ನಿಮಗರ್ಪಿಸಲು ಸಿದ್ಧನಿದ್ದೇನೆ. ನಿಮ್ಮ ಕೈಯಲ್ಲಿ ಸಿಕ್ಕಿಬಿದ್ದಿರುವ ಕೋಟ್ಯಾನುಕೋಟಿ ಜನ ಭಾರತೀಯರ ದೇಹವನ್ನು ನೀವು ಉತ್ತಮಗೊಳಿಸಲು ಯತ್ನಿಸುವಿರಾದರೆ ಅದಕ್ಕಾಗಿ ನಾನು ಎಂಥ ತ್ಯಾಗವನ್ನು ಬೇಕಾದರೂ ಮಾಡಲು ಸಿದ್ಧನಿದ್ದೇನೆ, ನನ್ನಿಂದಾಗಬಹುದಾದ ಸಮಸ್ತ ಸಹಾಯಗಳನ್ನೂ ಅರ್ಪಿಸಲು ಸಿದ್ಧನಿದ್ದೇನೆ. ಆ ಸಾಧನೆಗಾಗಿ ನಾನು ನ್ಯಾಯವಾದ ಗೌರವಾರ್ಹವಾದ ಯಾವ ಒಪ್ಪಂದಕ್ಕೆ ಬೇಕಾದರೂ ಸಹಿ ಮಾಡಲು ಸಿದ್ಧನಿದ್ದೇನೆ. ನಾನು ಶಾಂತಿ ಪ್ರಿಯ. ಕಾಂಗ್ರೆಸು ಸಮಾಧಾನವನ್ನು ಬಯಸುತ್ತದೆ. ನೀವು ಕಾಂಗ್ರೆಸಿನ ಹೃದಯವನ್ನರಿತು ನಡೆಯುವುದಾದರೆ ಸಮಾಧಾನವು ಸಾಧ್ಯ. ಹಾಗಿಲ್ಲದೆ ನಾವಿಬ್ಬರೂ ಬೇರೆ ಬೇರೆ ರೀತಿಯಲ್ಲಿ ವರ್ತಿಸುತ್ತಾ, ನಮ್ಮಲ್ಲಿ ಏಕಮುಖತೆ ಇಲ್ಲದೆ ಹೋದಲ್ಲಿ, ನಾವು ಒಬ್ಬರ ಹೃದಯವನ್ನೊಬ್ಬರು ತಿಳಿಯಲಾರದೆ ಹೋದಲ್ಲಿ ಸಂಧಾನವು ಶಕ್ಯವಿಲ್ಲ.

ಸಂಧಾನಕ್ಕೆ ಕಾಲವಿನ್ನೂ ಮೀರಿಲ್ಲ. ನಾನು ಸಕಲರ ಸ್ನೇಹವನ್ನು ಬಯಸತಕ್ಕವನು. ದಬ್ಬಾಳಿಕೆಯನ್ನು ನಡೆಸುವವರನ್ನೂ, ಪರರ ಸ್ವಾತಂತ್ರ್ಯವನು ತಮ್ಮ ಕಾಲು ಕೆಳಗೆ ಮೆಟ್ಟಿ ಹಿಡಿದಿರುವವರನ್ನೂ ನಾಶಗೊಳಿಸುವುದು ನನ್ನ ಸ್ವಭಾವವಲ್ಲ, ಅದು ನನ್ನ ತತ್ವಕ್ಕೆ ವಿರೋಧ. ಈಗ ಕಾಂಗ್ರೆಸಿನವರು ನನ್ನ ತತ್ವವನ್ನು ತಮ್ಮ ನೀತಿಯನ್ನಾಗಿ ಅಂಗೀಕರಿಸಿದ್ದಾರೆ. ಆ ನೀತಿಯಿಂದ ಇಂಡಿಯಾಕ್ಕೆ ಹಿತವುಂಟೆಂದೂ, ಇಂಡಿಯಾಕ್ಕದು ತಕ್ಕುದೆಂದೂ ಅವರು ಮನಗಂಡಿದ್ದಾರೆ.

ಮೂವತ್ತೈದು ಕೋಟಿ ಜನ ಸಂಖ್ಯೆಯುಳ್ಳ ಭಾರತ ಜನಾಂಗವು ತನ್ನ ಸ್ವಾತಂತ್ರ್ಯವನ್ನು ಸಾಧಿಸಲು ಶಸ್ತ್ರ ಎತ್ತಿ ಹೋರಡಬೇಕಾಗಿಲ್ಲ. ಗುಂಡು ಮದ್ದುಗಳನ್ನು ಅಣಿಮಾಡಿಕೊಳ್ಳಬೇಕಾಗಿಲ್ಲ. ತನ್ನ ಅಧಿಕಾರಯುಕ್ತವಾದ ವಾಣಿಯಿಂದ ನನಗೆ ಈ ಸರ್ಕಾರವು 'ಬೇಡ' ಎಂದರೆ ಸಾಕು. ಈಗ ಇಂಡಿಯಾ ದೇಶವು ಇಂಥಾ ಅಧಿಕಾರ ವಾಣಿಯನ್ನು ಹೊರಗೆಡುವುದನ್ನು ಕಲಿಯುತ್ತಿದೆ.

ಇಂಡಿಯಾಕ್ಕೂ, ಇಂಗ್ಲೆಂಡಿಗೂ ಇರುವ ಸಂಬಂಧವನ್ನು ಕತ್ತರಿಸಿ ಹಾಕಬೇಕೆಂಬ ಅಪೇಕ್ಷೆಯು ನನಗಿಲ್ಲ; ಭಾರತ ಜನಾಂಗಕ್ಕೆ ಕೂಡ ಅಂಥಾ ಬಯಕೆ ಇಲ್ಲ. ಆದರೆ ಈ ಎರಡು ದೇಶಗಳ ಸಂಬಂಧ ರೂಪವು ವ್ಯತ್ಯಾಸ ಹೊಂದಬೇಕಾಗಿದೆ. ನಮ್ಮ ದೇಶದ ದಾಸ್ಯವು ತೊಲಗಿ ನಾವು ಬಂಧನದಿಂದ ವಿಮುಕ್ತರಾಗಬೇಕು. ಅದನ್ನು ಸಂಪೂರ್ಣ ಸ್ವಾತಂತ್ರ್ಯವೆಂದು ಬೇಕಾದರೂ ಕರೆಯಿರಿ, ಅಥವಾ ಅದಕ್ಕೆ ಬೇರೊಂದು ಹೆಸರು ಕೊಡಿ. ನಾನು ಹೆಸರಿಗಾಗಿ ಹೋರಾಡುವವನಲ್ಲ. ಬಂಧನವು ತೊಲಗಬೇಕು, ಅದೇ ನನ್ನ ಬಯಕೆ!

(ಮುಂದುವರಿಯುವುದು.)

ಮೆ. ಮುತ್ತಣ್ಣನವರಿಗೆ ಸತ್ಕಾರ.

ದಕ್ಷಿಣ ಕೊಡಗಿನ ರಿಟೈರ್ಡ್ ಮುನಸೀಫರಾದ ಮೆ. ಕೊರವಂಡ ಮುತ್ತಣ್ಣ ಬಾರ್ ಅಟ್ ಲಾ ರವರಿಗೆ, ದಕ್ಷಿಣ ಕೊಡಗಿನವರು ತಾರೀಖು 23-12-31 ರಲ್ಲಿ ಕೊಟ್ಟ ಸತ್ಕಾರದ ವಿವರ.

ಆಮಂತ್ರಣ ಪ್ರಕಾರ ಸಾವಿರಾರು ಜನರು ಒಡ್ಡೋಲಗದಿಂದ ಕ್ಲಾಕ್ ಟವರಿನಿಂದ ಮೆರವಣಿಗೆಯಿಂದ ಹೊರಟು ಒಂದು ಗಂಟೆಗೆ ಸರಿಯಾಗಿ ಮಗ್ಗುಲದ ಸಂಕದ ಹತ್ತಿರ ಬಳಿ ಮೆ. ಸಿ. ಯಸ್. ಮುತ್ತಣ್ಣನವರನ್ನು ಎದುರುಗೊಂಡರು. ಅಲ್ಲಿ ಅವರಿಗೆ ಸ್ವಾಗತ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹೂಮಾಲೆಗಳನ್ನು ಹಾಕಿ, ಅವರನ್ನು ತಾಲೋಕು ಕಚೇರಿ ಒಳಿಯ ಮೈದಾನದಲ್ಲಿ ಹಾಕಿದ ಖಾದಿ ಚಪ್ಪರಕ್ಕೆ ಕರತಂದರು. ಮೆರವಣಿಗೆಯಲ್ಲಿ ಸುಮಾರು ನಾಲ್ಕು ಸಾವಿರಕ್ಕಿಂತ ಹೆಚ್ಚು ಜನರು ಉತ್ಸಾಹದಿಂದಲೂ, ಸಂತೋಷದಿಂದಲೂ ಸೇರಿದ್ದರು. ರಸ್ತೆಯ ಎರಡು ಸಂದುಗಳಲ್ಲಿಯೂ, ಮನೆಗಳಲ್ಲಿಯೂ ಜನರು ಕಿಕ್ಕಿರಿದು ಮೆರವಣಿಗೆಯನ್ನು ನೋಡುತ್ತಿದ್ದರು.

ಒಂದೂವರೆ ಗಂಟೆಗೆ ಚಪ್ಪರಕ್ಕೆ ಮೆರವಣಿಗೆಯು ಬಂತು. ಮೆರವಣಿಗೆಯಲ್ಲಿದ್ದಷ್ಟೇ ಜನರು ಸಭೆಯಲ್ಲೂ ಇದ್ದರು. ಕೂಡಲೇ ಮೆ. ಮುತ್ತಣ್ಣನವರನ್ನು ಮತ್ತು ಎಲ್ಲಾ ಮಹನೀಯರುಗಳನ್ನು ಉಚಿತಾಸನದಲ್ಲಿ ಕುಳ್ಳಿರಿಸಿ, ಅಧ್ಯಕ್ಷರಾದ ಮೆ. ಸಿ. ಯಸ್. ಉತ್ತಯ್ಯನವರು ಅಭಿವಂದನಾಪತ್ರವನ್ನು ಓದಿ ಒಪ್ಪಿಸುವ ಸಮಯದಲ್ಲಿ ಹೇಳಿದ್ದೇನೆಂದರೆ—

"ಮೆ ಮುತ್ತಣ್ಣನವರೇ, ದಕ್ಷಿಣ ಕೊಡಗಿನಲ್ಲಿ ಕಳೆದ ಇಪ್ಪತ್ತೆರಡು ವರ್ಷಗಳ ಕಾಲ ಸತ್ಯ, ಪ್ರಮಾಣಿಕತೆ ಮತ್ತು ನಿರ್ದಾಕ್ಷಿಣ್ಯತೆಯಿಂದ ತಾವು ಮುನ್ಸೀಫ್ ಕೆಲಸ ಮಾಡಿದ್ದಕ್ಕಾಗಿ, ದಕ್ಷಿಣ ಕೊಡಗಿನ ಪರವಾಗಿ ಅವರಿಗೆ ತಮ್ಮ ಮೇಲಿರುವ ಪ್ರೀತಿ, ವಿಶ್ವಾಸಗಳನ್ನು ನಿದರ್ಶಿಸಲಿಕ್ಕಾಗಿ ಈ ಅಭಿವಂದನಾ ಪತ್ರವನ್ನು ಒಪ್ಪಿಸುತ್ತೇನೆ

ತಾವು ಸದ್ಗೃಹಸ್ಥರೂ, ಐಶ್ವರ್ಯವಂತರೂ ಮತ್ತು ವಿದ್ಯಾವಂತರೂ ಆಗಿರುವಿರಿ ಆದರೂ ಜನರ ಮೇಲಿನ ಕನಿಕರದಿಂದ ಕಳೆದ ಇಪ್ಪತ್ತೆರಡು ವರ್ಷಗಳ ಕಾಲ ಮುನ್ಸೀಫ್ ಕೆಲಸವನ್ನು ಎಲ್ಲರ ಪ್ರೀತಿಗೆ ಪಾತ್ರರಾಗಿ ನೆರವೇರಿಸಿದ್ದಕ್ಕೆ ನಾವು ತುಂಬಾ ವಂದಿಸುತ್ತೇವೆ. ಮನುಷ್ಯರು ಎಷ್ಟು ಐಶ್ವರ್ಯವಂತ ಮತ್ತು ವಿದ್ಯಾವಂತರಾದಾಗ್ಯೂ, ಅಂಥಾವುಗಳನ್ನು ಜನರ ಕ್ಷೇಮಕ್ಕಾಗಿ ವಿನಿಯೋಗಿಸದಿದ್ದರೆ ಅಂಥಾ ಐಶ್ವರ್ಯ ಮತ್ತು ವಿದ್ಯೆಯಿಂದ ಯಾವ ಪ್ರಯೋಜನವೂ ಇಲ್ಲ. ಮನುಷ್ಯರು ಮೊದಲಾಗಿ ಸಂಪಾದಿಸಬೇಕಾದದ್ದು ಒಳ್ಳೆಯ ಕೀರ್ತಿಯೇ ಆಗಿದೆ. ಅಂಥಾ ಕೀರ್ತಿಯು ದೇಶಕ್ಕೆ ಕೆಲಸ ಮಾಡುವುದರಲ್ಲಿಯೇ ಇದೆ. ಅದರಷ್ಟು ದೊಡ್ಡ ಸೇವೆಯು ಯಾವುದೂ ಇಲ್ಲ. ಆದ್ದರಿಂದಲೇ ದೇಶಸೇವೆಯೇ ಈಶ ಸೇವೆಯೆಂದು ಹೇಳುವುದಾಗಿದೆ. ನೀವು ಇನ್ನು ಯುವಕರಾಗಿಯೇ ಇರುತ್ತೀರಿ. ದೇಶಕ್ಕಾಗಿ ಕೆಲಸ ಮಾಡಲು ತುಂಬಾ ಅವಕಾಶ ಮತ್ತು ಅನುಕೂಲವು ನಿಮಗಿದೆ. ಯಾವ ಕೋಮುವಾರು ವ್ಯತ್ಯಾಸವನ್ನು ಉಂಟುಮಾಡದೆ, ದೇಶದ ಎಲ್ಲಾ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುವ ಕೊಡಗು ಜನೋಪಕಾರ ಸಂಘದಲ್ಲಿ, ರಾ. ಬಾ. ಗಳಾದ ಕೋದಂಡ ಮಾದೈಯ್ಯನವರು, ಮನೆಯಪಂಡ ಮುತ್ತಣ್ಣನವರು, ಕೂಡಂಡೇರ ಕುಟ್ಟಯ್ಯನವರು ಹೇಗೆ ಕೆಲಸ ಮಾಡಿದರೋ, ಅದಕ್ಕಿಂತ ಹೆಚ್ಚಾಗಿ ನಿಮಗೆ ಈ ಸಂಘದಲ್ಲಿ, ದೇಶಕ್ಕೆ ಕೆಲಸ ಮಾಡಲು ಅನುಕೂಲವಿದೆ. ಇಂಥಾ ಸುಸಮಯವನ್ನು ನೀವು ಚೆನ್ನಾಗಿ ಉಪಯೋಗಿಸಿಕೊಂಡು ಕೊಡಗು ದೇಶದಲ್ಲಿ ಜಾತಿ ಮಾತ್ಸರ್ಯದಿಂದ ಪಂಗಡಭೇದ ತರುವ ಯಾವ ಸಂಸ್ಥೆಗೂ ಒತ್ತಾಸೆ ಕೊಡದೆ ಎಲ್ಲಾ ಜನರ ಪ್ರಯೋಜನಕ್ಕಾಗಿ ನೀವು ಕೆಲಸ ಮಾಡಲು ಮುಂದೆ ಬರುವಿರೆಂದೂ, ಭಗವಂತನು ಈ ಕೆಲಸವನ್ನೆಲ್ಲಾ ನೆರವೇರಿಸಲು ನಿಮಗೆ ಆಯುರಾರೋಗ್ಯ ಐಶ್ವರ್ಯವನ್ನು ದಯಪಾಲಿಸಲೆಂದೂ ಬೇಡುತ್ತೇವೆ" ಎಂಬುದಾಗಿ ಹೇಳಿ ಅಭಿವಂದನಾ ಪತ್ರವನ್ನು ಒಪ್ಪಿಸಿದರು

ಕೂಡಲೇ ವೈಸ್ ಪ್ರೆಸಿಡೆಂಟರಾದ ಮೆ. ಅಬ್ದುಲ್ ಗಫೂರ್ ಖಾನ್ ಕೃಷ್ಣಿಯವರು ಎದ್ದುನಿಂತು, ಮೆ. ಮುತ್ತಣ್ಣನವರನ್ನು ಸಂಬೋಧಿಸಿ ಹೇಳಿದ್ದೇನೆಂದರೆ—"ಈ ದಿನ ನೆರೆದ ಸಾವಿರಾರು ಮಹನೀಯರು ಇಲ್ಲಿ ಕೂಡಿದ್ದು ಮೆ. ಮುತ್ತಣ್ಣನವರು ಸರ್ಕಾರ ಚಾಕರಿಯಿಂದ ರಿಟೈಯರ್ ಆದದ್ದಕ್ಕಲ್ಲ, ಅವರು ಮಾಡಿದ ಕೆಲಸಕ್ಕೂ ಮಾತ್ರವಲ್ಲ, ದೇಶದವರು ಮೆ ಮುತ್ತಣ್ಣನವರಂಥ ಇನ್ನು ಅನೇಕ ಒಳ್ಳೇ ಕೆಲಸ ನಡೆಯಲಿಕ್ಕಿದೆ, ಅವರು ಮಾಡ್ಯಾರು, ಅವರು ನಮ್ಮ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆಂಬುವುದನ್ನು ತೋರಿಸಲಿಕ್ಕಾಗಿಯೆಂದೇ ನಾನು ಹೇಳಬಿದ್ದೇನೆ. ಭೂಲೋಕದಲ್ಲಿ ಮನುಷ್ಯರಿಗೆ ಬರೇ ಐಶ್ವರ್ಯ ಮಾತ್ರ ಒಂದಿದ್ದರೆ ಸಾಲದು. ಅವರಿಗೆ ಜನರ ಸೇವೆಯನ್ನು ಮಾಡುವ ಗುಣವಿರಬೇಕು ಆ ಅರೆ ಬೆತ್ತಲೆಯ ಮನುಷ್ಯನು ಭೂಲೋಕದಲ್ಲಿ ದೊಡ್ಡವನೆಂದು ಏತಕ್ಕೆ ಅನ್ನಿಸಲ್ಪಟ್ಟಿದ್ದಾನೆ ಅವನ ಮಹತ್ವದ ಸೇವೆಯಿಂದ. ಸೇವೆಗಿಂತ ದೊಡ್ಡದಾದ ದೇವರಿಲ್ಲ. ಆದ್ದರಿಂದ ಮೆ. ಮುತ್ತಣ್ಣನವರು ಇಂಥಾ ಮಹಾಪುರುಷರ ಉದಾಹರಣೆಯನ್ನು ಹಿಂಬಾಲಿಸಿ, ದೇಶದ ಎಲ್ಲಾ ಬಡ ಜನರ, ಗ್ರಾಮಸ್ಥರ ಕಲ್ಯಾಣಕ್ಕಾಗಿ ಏನೇನು ಒಳ್ಳೇ ಕೆಲಸ ಮಾಡಬೇಕೋ ಅಂಥಾದ್ದನ್ನು ಮಾಡಲು ಶುರು ಮಾಡುವರೆಂದು ನಂಬಿದ್ದೇನೆ. ಅವರು ಪ್ರತಿ ಗ್ರಾಮಕ್ಕೂ ಹೋಗಿ ಜನರ ಸ್ಥಿತಿಯನ್ನು ಉತ್ತಮ ಸ್ಥಿತಿಗೆ ತರುವರೆಂದು ಹಾರೈಸುತ್ತೇನೆ.

ಇಂಥಾ ಕೆಲಸವನ್ನು ಪ್ರತೀ ಸರ್ಕಾರವೂ ಉದ್ಯೋಗಸ್ಥರೂ ಖಾಸಗಿ ಮನುಷ್ಯರು ಮಾಡಿಯೇ ಮಾಡಬೇಕಾಗಿದೆ. ಅಂಥಾದ್ದನ್ನು ಮೆ. ಮುತ್ತಣ್ಣನವರು ಮಾಡಿ ದೇಶದ ಸರ್ವ ಜನರ ಪ್ರೀತಿಗೆ ಪಾತ್ರರಾಗುವರಾಗಿ ನಂಬುತ್ತೇನೆ ಅವರು ಮಾಡುವ ಎಲ್ಲಾ ಒಳ್ಳೆಯ ಕಾರ್ಯಕ್ಕೂ ಭಗವಂತನು ಸಹಾಯಕನಾಗಲಿ '

ಇದಾದನಂತರ ಮೆ ಸಿ ಯಸ್. ಮುತ್ತಣ್ಣನವರು ಈ ಕೆಳಗಿನ ಭಾಷಣವನ್ನು ಮಾಡಿದರು.

"ಮೆ ಉತ್ತಯ್ಯ ಮತ್ತು ಅಬ್ದುಲ್ ಗಫೂರ್ ಖಾನ್ ಕೃಷ್ಣಿಯವರುಗಳೇ ಮತ್ತು ಪ್ರಿಯ ಸ್ನೇಹಿತರೇ,

ಸ್ವಾಗತ ಕಮಿಟಿಯ ಅಧ್ಯಕ್ಷರ ಆಮಂತ್ರಣ ದೊರೆತದಕ್ಕೆ ತುಂಬಾ ಸಂತೋಷಪಟ್ಟು ಅದನ್ನು ಅಂಗೀಕರಿಸಿರುತ್ತೇನೆ.

ದಕ್ಷಿಣ ಕೊಡಗಿನ ಮುನಸೀಫನಾಗಿ, ನಾನು ನ್ಯಾಯಾಧೀಶರ ಪವಿತ್ರ ಕರ್ತವ್ಯವನ್ನು ಯಾವಾಗಲೂ ಮನಸಿನಲ್ಲಿಟ್ಟುಕೊಂಡು, ಜನರೊಳಗೆ ಭೇದವನ್ನೆಣಿಸದೆ ತ್ರಾಸನ್ನು ಒಂದೇ ಸಮಾನ ಹಿಡಿದು, ನನ್ನ ಸಂಕುಚಿತ ಅವಕಾಶದಲ್ಲಿ ನನ್ನಿಂದ ಸಾಧ್ಯವಾದಷ್ಟು ಕೆಲಸ ಮಾಡಿದ್ದೇನೆಂದು ಮಾತ್ರ ಪ್ರಮಾಣಿಕತೆಯಿಂದ ಹೇಳಬಲ್ಲೆನು. ನ್ಯಾಯಾಧೀಶರಿಗೆ ಅತ್ಯವಶ್ಯವಾದ ಮನಸಿನ ಸ್ಥಿತಿಯು ನನಗೆ ಇತ್ತು. ಮತ್ತು ಅದು ನನ್ನನ್ನು ನ್ಯಾಯವಾದ ದಾರಿಯಲ್ಲಿ ನಡಿಸಿದೆ. ನಾನು ತಪ್ಪುಗಳನ್ನು ಮಾಡಿರಬಹುದು, ಆದರೆ ಅವುಗಳನ್ನು ನಾನು ಮನಸ್ಸಿನ ಚಪಲತೆಯಿಂದಾಗಲೀ, ಅವಿಚಾರದಿಂದಾಗಲೀ, ಬೇಕೆಂತ ಮಾಡಲಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆನು

ನಾನು ಯಾವಾಗಲೂ, ಮನುಷ್ಯನಿಗೆ ಸಾಧ್ಯವಾದಷ್ಟು ಮಟ್ಟಿಗೆ ವಿಷಯಗಳನ್ನು ತೂಗಿ ನೋಡುತ್ತಿದ್ದೆನು, ಅಲ್ಲದೆ ನಿಜ ಸಂಗತಿಗಳ ಮತ್ತು ಮನೋ ಭಾವನೆಗಳ ಜೋಡಣೆಯ ಒಳಗೆ ಅಡಗಿರುವ ದೈವಿಕ ನ್ಯಾಯವನ್ನು ಹುಡುಕುತ್ತಿದ್ದೆನು. ಇಂಥಾ ಕರ್ತವ್ಯಕ್ಕೆ ಮೆಚ್ಚುಗಾರಿಗೆಯನ್ನು ಆಶಿಸುವ ಅಧಿಕಾರವಿಲ್ಲ. ಆದುದರಿಂದ ಈ ದಿನ ನೀವು ತೋರಿಸಿರುವ ಅಧಿಕವಾದ ಮನೋಭಾವನೆಯು ನಿಮಗೆ ನನ್ನ ಮೇಲಿರುವ ದಯೆಯಿಂದಲೇ ಆಗಿದೆಯೆಂದು ಹೇಳಬೇಕಾಗಿದೆ ಹೇಗೂ ನಾನು ನಿಮಗೆ ತುಂಬಾ ಕೃತಜ್ಞನಾಗಿದ್ದೇನೆ ಮತ್ತು ದಕ್ಷಿಣ ಕೊಡಗಿನ ಜನರ ಮಧ್ಯದಲ್ಲಿ ದೀರ್ಘಕಾಲ ಇದ್ದ ಸಂತೋಷದ ಜ್ಞಾಪಕವನ್ನು ಕೊಂಡೊಯ್ಯುತ್ತೇನೆಂದು ನಾನು ನಿಶ್ಚಯವಾಗಿ ಹೇಳುತ್ತೇನೆ.

ನನ್ನ ಕುಂದು ಕೊರತೆಗಳನ್ನೆಲ್ಲ ದಿದ್ದರೂ, ಪರಿಮಿತಿಗಳನ್ನು ಗೊತ್ತಿದ್ದ ನಾನು ನಿಮ್ಮಿಂದ ಇಷ್ಟರ ಮಟ್ಟಿನ ಮೆಚ್ಚಿಗೆಯನ್ನು ಪಡೆಯಲು ತಯಾರಾಗಿರಲಿಲ್ಲವೆಂದು ಹೇಳಬೇಕಾಗಿದೆ. ಸ್ನೇಹಿತರೇ, ನಿಮಗೆಲ್ಲ ಗೊತ್ತಿರುವಂತೆ, ತಪ್ಪು ಮಾಡುವದು ಮನುಷ್ಯ ಸ್ವಭಾವವಾಗಿದೆ, ಆದರೆ ಕ್ಷಮಿಸುವದು ದೇವರ ಗುಣವಾಗಿದೆ. ನ್ಯಾಯ ತೀರ್ಪಿನ ಉದ್ಯೋಗಸ್ಥನಿಗೆ ಅವನ ಸಂಕುಚಿತ ಅವಕಾಶದಲ್ಲಿ ಕೋರ್ಟುಗಳಿಗೆ ಬರುವ ಜನರ ಹಿತ ಮತ್ತು ಅಭಿವೃದ್ಧಿಗಾಗಿ ಮಾಡಲು ಸಾಧ್ಯವಾದಷ್ಟು ಕೆಲಸವನ್ನು ನಾನು ಮಾಡದೆ ಇಲ್ಲವೆಂದು ನಾನು ದೃಢವಾಗಿ ಹೇಳುವಾಗ್ಯೆ ನೀವು ನಂಬಿರಲಿರಾ. ಜನರಿಗೆ ಒಳ್ಳೇದು ಮಾಡಲು ಆಡಳಿತ ನಡಿಸುವ ಉದ್ಯೋಗಸ್ಥರಿಗೆ ಇಲ್ಲವೆಂಬುವುದರಲ್ಲಿ ಸಂಶಯವಿಲ್ಲ. ಬಹು ಸ್ವಲ್ಪ ಮಂದಿಯ ಅಭಿಪ್ರಾಯದಲ್ಲಿ ನಾನು ಏನೊಂದೂ ಒಳ್ಳೇದು ಮಾಡದಿದ್ದರೂ, ಯಾರೊಬ್ಬರಿಗೂ ತಪ್ಪನ್ನಾಗಲೀ, ಕೆಡಕನ್ನಾಗಲೀ ಮಾಡಲಿಲ್ಲವೆಂದು ದೃಢವಾಗಿ ಹೇಳಬಲ್ಲೆನು.

ಯಾವುದೊಂದೂ ನಿರೀಕ್ಷಣೆ ಅಥವಾ ಭಯವಿಲ್ಲದೆ ನಾನು ನಿಮಗೆ ಮಾಡಿರುವ ಕೆಲಸವನ್ನು ನೀವು ಒಮ್ಮತದಿಂದ ಮೆಚ್ಚಿರುವುದು ನನ್ನ ವಿಶ್ರಾಂತಿಯ ಕಾಲದಲ್ಲಿ ನನಗೊಂದು ಸಮಾಧಾನವಾಗಿದೆ

ನಾನು ಯಾವಾಗಲೂ ನ್ಯಾಯವನ್ನೇ ಮಾಡಲು ಪ್ರಯತ್ನಿಸಿದ್ದೇನೆ. ಮತ್ತು ನನ್ನ ತೀರ್ಪು ತಪ್ಪೆಂದು ಗೊತ್ತಿದ್ದು ನಾನು ಯಾವ ಮೊಕದ್ದಮೆಯನ್ನಾದರೂ ತೀರ್ಮಾನಿಸಿದ ಜ್ಞಾಪಕವು ನನಗಿಲ್ಲ. ನಾನು ಅಧಿಕಾರಿಗಳ ಮೆಚ್ಚಿಗೆಯನ್ನಾಗಲೀ, ಸಿಟ್ಟನ್ನಾಗಲೀ ಗಮನಿಸದೆ ದೇವರಿಗೊಬ್ಬನಿಗಲ್ಲದೆ ಬೇರೆ ಯಾರಿಗೂ ಹೆದರದೆ ನ್ಯಾಯ ತೀರ್ಪನ್ನು ಕೊಡುತ್ತಿದ್ದೆನು. ನಾನು ನನ್ನ ಆತ್ಮ ಸಾಕ್ಷಿಗೆ ಸರಿಯಾಗಿಯೂ, ನನ್ನ ಕೈಯ್ಯಲ್ಲಾಗುವಷ್ಟು ಮಟ್ಟಿಗೆ ಕೋರ್ಟಿಗೆ ಬರುವ ಜನರ ಹಿತಕ್ಕಾಗಿಯೂ ನನ್ನ ಕಷ್ಟತರವಾದ ಕರ್ತವ್ಯವನ್ನು ಮಾಡಲು ಯತ್ನಿಸಿದ್ದೇನೆ.

ರಾಜಕೀಯದ ಮಟ್ಟಿಗೆ ನನ್ನ ಮುಂದಿನ ಕೆಲಸವೇನೆಂದು ತಿಳಿಯಲು ನೀವು ಕುತೂಹಲವುಳ್ಳವರಾಗಿರಬಹುದು. ಆದರೆ ಮನ ಬಿಚ್ಚಿ ಹೇಳುವುದಾದರೆ, ಈಗಿನ ರಾಜಕೀಯ ಚಳವಳದಲ್ಲಿ ಎಷ್ಟರ ಮಟ್ಟಿಗೆ ಭಾಗ ತೆಗೆದುಕೊಳ್ಳುವದೆಂದು ನಾನು ಇನ್ನೂ ನಿಶ್ಚೈಸಿರುವುದಿಲ್ಲ.

ನಿಮ್ಮೊಳಗೆ ಇಷ್ಟರ ಮಟ್ಟಿಗೆ ಒಗ್ಗಟ್ಟಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗುತ್ತದೆ. ನಿಮ್ಮೊಳಗೆ ಇರುವ ಚಿಕ್ಕ ಭಿನ್ನಭೇದಗಳನ್ನೂ, ಅಸೂಯೆಗಳನ್ನೂ ಮರೆಯುವುದರಿಂದಲೇ ಮಾದರಿಯ ಒಗ್ಗಟ್ಟು ಸಾಧಿಸಲ್ಪಡುವುದು ಈ ಪ್ರಸಂಗದಲ್ಲಿ ಜಯಕ್ಕೆ ಹಿತದ ಐಕ್ಯತೆಯೂ, ಗ ರಿಯು ಏಕಾಗ್ರತೆಯೂ ಮತ್ತು ಉದ್ದೇಶದ ಒಗ್ಗಟ್ಟೂ ಅವಶ್ಯವಾಗಿದೆ

ದಕ್ಷಿಣ ಕೊಡಗಿನ ಪಬ್ಲಿಕಿನವರು ನನಗೆ ನೀಡಿದ ಸ್ವಾಗತವನ್ನು ನಾನು ಮನಃಪೂರ್ತಿಯಾಗಿ ಸ್ವೀಕರಿಸುತ್ತೇನೆ'

ಈ ಭಾಷಣಾನಂತರ ಎಲ್ಲರಿಗೂ ತಾಂಬೂಲವನ್ನು ಹಂಚಿ ಸಭೆಯು ಮುಗಿಯಿತು. ಮೆ. ಮುತ್ತಣ್ಣನವರನ್ನು ಪುನಃ ಮೆರವಣಿಗೆಯಿಂದ ಪೋಸ್ಟಾಫೀಸುವರೆಗೆ ಬಿಟ್ಟನಂತರ ಸತ್ಕಾರದ ಕೆಲಸವು ಕೊನೆಗಂಡಿತು

ಕೂಡಲೇ ಸ್ವಾಗತ ಕಮಿಟಿಯವರು ಮೀಟಿಂಗ್ ನಡೆಸಿ ಲೆಕ್ಕಗಳನ್ನು ಚೆಕ್ ಮಾಡಿ ಉಳಿಕೆಯಾದ ಹಣದ ಬಡ್ಡಿಯಿಂದ ಮೆ ಮುತ್ತಣ್ಣನವರ ಹೆಸರಿನಲ್ಲಿ ಪ್ರತಿ ವರ್ಷವೂ ವೀರಾಜಪೇಟೆ ಹೈಸ್ಕೂಲಿನ ಒಬ್ಬ ವಿದ್ಯಾರ್ಥಿಗೆ ಕನ್ನಡ ಭಾಷಾ ಪರೀಕ್ಷೆಗೆ ಒಂದು ಇನಾಮನ್ನು ಕೊಡುವಂತೆಯೂ, ಹಣವನ್ನು ಹೆಡ್ ಮಾಸ್ಟರ ಜವಾಬ್ದಾರಿಗೆ ಕೊಡುವಂತೆಯೂ ಮತ್ತು ಈ ವಿಷಯದ ನ್ಯಾಯವಾದ ಮುಂದಿನ ಏರ್ಪಾಡನ್ನು ಮೆ ಸಿ. ಯಸ್. ಉತ್ತಯ್ಯನವರು ಮತ್ತು ಮೆ ಯಂ. ಯನ್. ಸೋಮಯ್ಯನವರು ಹೆಡ್ ಮಾಸ್ಟರವರಲ್ಲಿ ಮಾತಾಡಿ ತೀರಿಸುವಂತೆಯೂ ತೀರ್ಮಾನವಾಯಿತು

ಮಹಾಲಕ್ಷ್ಮಿಗೆ ಹಂಚಿದ ಎಲ್ಲಾ ಪಟ್ಟಿಯನ್ನು ಮೆ ಕಣಪತ್ತಿಯವರು ಮಾಸೂಲ್ಯಾದಿ ಕಮಿಟಿ ಮೀಟಿಂಗೊಂದು ನಡೆಸಬೇಕೆಂತಲೂ ತೀರ್ಮಾನವಾಯಿತು.

ಕೆ. ಪಿ. ಚಿಣ್ಣಪ್ಪ,

"ಪ್ರ" (ಸ್ವಾಗತ ಸೆಕ್ರಟರಿ)

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಖು 19-12-31ರಲ್ಲಿ ನಡೆಯಿತು. 11 ಡೈರೆಕ್ಟರುಗಳು ಹಾಜರಿದ್ದರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2 ನವಂಬರ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕದ ಮಂಜೂರು ಮಾಡಲಾಯಿತು.

3, $\frac{1929}{1930}$ ಮತ್ತು $\frac{1930}{1931}$ ನೇ ಸಂವತ್ಸರಗಳ ವಾಯಿದೆ ಮೀರಿದ ಸಾಲಗಳ ಪಟ್ಟಿ ಓದಲಾಯಿತು.

4. ಅಮ್ಮತ್ತಿ ಟೌನ್ ಸೊಸೈಟಿಗೆ ರೂ. 600 ಮತ್ತು ಗಮೀನಾಡು ಬಳಗೇರಿ ದವಸ ಭಂಡಾರಕ್ಕೆ ರೂ 200 ಸಾಲ ಮಂಜೂರು ಮಾಡಲಾದವು.

5. ಬ್ಯಾಂಕಿನ ಬಾಕಿ 5000 ರೂಪಾಯಿಗಳನ್ನು ಮರ್ಕಂಟೈಲ್ ಬ್ಯಾಂಕಿನಲ್ಲಿ 6 ತಿಂಗಳ ಅವಧಿಗೆ ಶೇಕಡ 6 ರೂ. ದರದ ಬಡ್ಡಿಯಲ್ಲಿ ಡಿಪಾಜಿಟ್ಟು ಇಡುವಂತೆ ತೀರ್ಮಾನವಾಯಿತು.

6. $\frac{1930}{1931}$ ನೇ ಸಂವತ್ಸರದ ಡೈರೆಕ್ಟರುಗಳ ವರದು ರಿಪೋರ್ಟು ಓದಿ ಒಪ್ಪಲಾಯಿತು.

7. ಬ್ಯಾಂಕಿನ ತಾ 31-10-31ರ ಮೀಟಿಂಗಿನಲ್ಲು ತೀರ್ಮಾನವಾದ ಮೇರೆ ಬ್ಯಾಂಕಿನಿಂದ ಸೊಸೈಟಿಗಳಿಗೂ ಮತ್ತು ಸೊಸೈಟಿಗಳಿಂದ ಬ್ಯಾಂಕಿಗೂ ಕಳುಹಿಸಲ್ಪಡುವ ಹಣವನ್ನು ಇನ್ನು ಮುಂದೆ ನಾಡುಕಚೇರಿಗಳ ಮೂಲಕ ತೆಗೆದುಕೊಳ್ಳುವಂತೆ ಏರ್ಪಾಡು ಮಾಡಬೇಕಾಗಿ ನಂಬರು 421 ತಾರೀಖು 6-11-31ರಲ್ಲು ಬ್ಯಾಂಕಿನಿಂದ ಕೊಡಗು ಕಮಿಷನರವರಿಗೆ ಬರಕೊಂಡದ್ದಕ್ಕೆ, ನಾಡುಕಚೇರಿಗಳ ಮೂಲಕ ಸೊಸೈಟಿಗಳ ಮತ್ತು ಬ್ಯಾಂಕಿನ ಹಣ ಹೊಂದಿಕೊಳ್ಳಲು ಆಗುವುದಿಲ್ಲವಾಗಿ ಬಂದ ನಂಬರು ಬಿ. $\frac{4178}{31}$ ತಾರೀಖು 10-12-31ರ ಪತ್ರ ಓದಲಾಯಿತು.

8 ಬಿಡು ಮೆಂಬರುಗಳು ಡಿಪಾಜಿಟ್ಟಿನ ಸೆಕ್ಯೂರಿಟಿ ಮೇಲೆ ಸಾಲ ಹೊಂದಿಕೊಂಡ ಪಕ್ಷ ಈಗಿನ ರೂಲ್ ಮೇರೆ ಚಾಪಾ ಕಾಗದದಲ್ಲಿ ಕರಾರು ಬರೆಸಿಕೊಳ್ಳುವುದರ ಬದಲು ಪ್ರೊನೋಟು ಬರೆಸಿಕೊಳ್ಳಬಹುದೆಂತ ತೀರ್ಮಾನವಾಯಿತು.

9. ಬ್ಯಾಂಕಿನ ಡೈರೆಕ್ಟರಾದ ರಾ ಬಾ ಪಿ. ದೇವಯ್ಯನವರು ಶನಿವಾರಸಂತೆ ಸ್ಟೋರ್ಸ್ ನ್ಯಾಯವಾಗಿ ಕೆಲಸ ಮಾಡುವುದಿಲ್ಲ ವಗೈರೆಯಾಗಿ ಈ ದಿನ ಡೈರೆಕ್ಟರುಗಳಿಗೆ ಸೂಚನೆ ಕೊಟ್ಟದ್ದಕ್ಕೆ, ಸದರಿ ಸ್ಟೋರಿನಲ್ಲಿರುವ ಸ್ಟಾಕಿನ ಮತ್ತು ಇತರ ಭಂಡವಾಳದ ಕ್ರಯಕಟ್ಟಿ, ಸ್ಟೋರಿನ ಈಗಿನ ಪರಿಸ್ಥಿತಿಯನ್ನು ಸಹ ಕಪಶೀಲಾಗಿ ತಿಳಿಸಬೇಕೆಂತ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರಿಗೆ ಬರೆದು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

ಕೆ. ಅಪ್ಪಯ್ಯ.
(ಅಧ್ಯಕ್ಷರು)

ಶಕ್ತಿಯ ಉಂಗುರ (1ಕ್ಕೆ ರೂ. 1-4-0.)



ಈ ಉಂಗುರಗಳನ್ನು ಹಿಮಾಲಯ ಪರ್ವತದ ಒಬ್ಬ ಋಷಿಯಿಂದ ತಯಾರಿಸಿದ್ದು. ಇದನ್ನು ಬೆರಳಿನಲ್ಲಿ ಹಾಕಿಕೊಳ್ಳುವುದರಿಂದ ವ್ಯಾಪಾರದಲ್ಲಿ ಲಾಭವೂ, ಕೋರ್ಟಿನ ವ್ಯಾಜ್ಯಗಳಲ್ಲಿ ಜಯವೂ, ರೋಗ ಪೀಡಿತರಿಗೆ ಆರೋಗ್ಯವೂ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ, ಸಂಪಾದನೆ ಇಲ್ಲದಿದ್ದವರಿಗೆ ಸಂಪಾದನೆ, ಬಿಳಿಯ ತೊನ್ನು ಹಿಡಿದವರಿಗೆ ಗುಣವೂ ಮತ್ತು ಇತರ ಅನೇಕ ವಿಧವಾದ ಕಾರ್ಯಗಳಲ್ಲಿ ಜಯ, ಧೈರ್ಯ, ಲಾಭಗಳನ್ನು ಉಂಟು ಮಾಡುವವು. ಮತ್ತು ಈ ಶಕ್ತಿಯ ಉಂಗುರಗಳನ್ನು ಮಕ್ಕಳ ಕೊರಳಿನಲ್ಲಿ ಕಟ್ಟುವುದರಿಂದ ಮಕ್ಕಳಿಗೆ ಬರುವ ಎಲ್ಲಾ ವಿಧವಾದ ವ್ಯಾಧಿಗಳನ್ನು ಗುಣಪಡಿಸುವವು ಈ ಶಕ್ತಿಯ ಉಂಗುರಗಳು ನಾವು ತಿಳಿಸಿದ ಪ್ರಕಾರ ಪ್ರತಿ ಕೆಲಸದಲ್ಲಿಯೂ ಲಾಭವನ್ನು ಕೊಡಲಿಲ್ಲವೆಂದು ವ್ಯಕ್ತಪಡಿಸುವವರಿಗೆ 50 ರೂ. ಗಳನ್ನು ಇನಾಮಾಗಿ ಕೊಡುವೆವು. ಶಕ್ತಿಯ ಉಂಗುರ 1ಕ್ಕೆ 1-4-0, 3ಕ್ಕೆ 3-4-0 6ಕ್ಕೆ 6-0-0.

ವಿಳಾಸ—ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,

12-2 109 [illegible]

ವರ್ತಮಾನ ಸಂಗ್ರಹ.

ಒಳದೇಶ.

ಕೋರ್ಟು ಕಚೇರಿಗಳೂ, ಶಾಲೆಗಳೂ ಕ್ರಿಸ್‌ಮಸ್ ರಜೆ ಪ್ರಯುಕ್ತವಾಗಿ ಈ ತಾ. 22 ರಿಂದ ಜನವರಿ 1 ರ ವರೆಗೆ ಮುಚ್ಚಲ್ಪಟ್ಟು, ಜನವರಿ 2 ರಲ್ಲಿ ತೆರೆಯಲ್ಪಡುವುವು.

ಈ ವಾರ ಹೆಚ್ಚಿನ ಭಾಗ ಆಕಾಶವೆಲ್ಲಾ ಮೋಡ ಕವಿದುಕೊಂಡೇ ಇತ್ತು. ನಿನ್ನೆ ಸಾಯಂಕಾಲ ಮತ್ತು ಈ ದಿನ ಮಡಿಕೇರಿಯಲ್ಲಿ ಸ್ವಲ್ಪ ಮಳೆಯೂ ಹನಿಸಿತು. ಗಾಳಿಯೂ ಜೋರಾಗಿಯೇ ಇದೆ.

ಕೊಡಗೇತರರ ಸಂಘವೊಂದನ್ನು ಸ್ಥಾಪಿಸುವ ವಿಷಯ ಆಲೋಚಿಸುವುದಕ್ಕಾಗಿ ಈ ತಾ. 29ರಲ್ಲಿ ವೀರರಾಜಪೇಟೆಯ ಲ್ಲಿ ಕೊಡಗೇತರರ ಪಬ್ಲಿಕ್ ಮೀಟಿಂಗೊಂದು ನಡೆಯುವದಾಗಿ ತಿಳಿಯ ಬರುತ್ತದೆ.

ರಿಟಯರ್ಡ್ ಮುನ್ಸೀಫರಾದ ಮೆ. ಸಿ. ಯನ್. ಮುತ್ತಣ್ಣನವರಿಗೆ ಕಳೆದ ಬುಧವಾರ ವೀರರಾಜಪೇಟೆಯಲ್ಲಿ ಒಂದು ಪಬ್ಲಿಕ್ ಸತ್ಕಾರವು ಕೊಡಲ್ಪಟ್ಟಿತು. ಇದರ ವಿವರ ಇನ್ನೊಂದು ಕಡೆ ಪ್ರಕಟಿಸಲಾಗಿದೆ.

ಕೆಲವು ದಿವಸಗಳ ಹಿಂದೆ ಸುಂಟಿಕೊಪ್ಪದ ಸುಂಡೆಕಾಡು ತೋಟದಲ್ಲಿ ಇಬ್ಬರು ಪಾಲೆಗಳು ನಿಶಾ ಸೇವಿಸಿದ್ದಾಗಿ ಹೊಡೆದಾಡಿಕೊಂಡಲ್ಲಿ, ಚೂರಿಯಿಂದ ತಿವಿಯಲ್ಪಟ್ಟ ಅವನಲ್ಲೊಬ್ಬನು ಮಡಿಕೇರಿ ಆಸ್ಪತ್ರೆಗೆ ಒಯ್ಯಲ್ಪಟ್ಟು, ಅಲ್ಲಿ ಮೃತನಾದನು.

ಈ ವಾರ ಮಡಿಕೇರಿಯಲ್ಲಿ ಯಾಲಕ್ಕಿ ಮಣ ಒಂದಕ್ಕೆ 12 ರೂಪಾಯಿಯೂ, ಪ್ಲಾಂಟೇಶನ್ ಕಾಫಿ ಹಂಡ್ರೆಡ್ ವೈಟಿಗೆ 56 ರೂಪಾಯಿಯೂ, ನೇಟಿವ್ ಕಾಫಿ ಖಂಡಿಗೆ '30 ರೂಪಾಯಿಯೂ ಕ್ರಯವಿತ್ತು. ಆದರೆ ಮಂಗಳೂರಲ್ಲಿ ಉತ್ತಮವಾದ ನೇಟಿವ್ ಕಾಫಿ ಖಂಡಿಗೆ 307 ರೂ ಕ್ರಯವಿತ್ತು.

ತಿಂಗಳಿಗೆ 40 ರೂ ಗಿಂತ ಹೆಚ್ಚು ಸಂಬಳವಿರುವ ಕೊಡಗಿನ ಸರ್ಕಾರಿ ಉದ್ಯೋಗಸ್ಥರ ಸಂಬಳವನ್ನು ಈ ತಿಂಗಳಿಂದ '33ನೇ ಮಾರ್ಚಿ ಆಖೈರು ವರೆಗೆ ಶೇಕಡ 10ರಷ್ಟು ಕಡಿಮೆ ಮಾಡಲಾಗುವುದೆಂದು ಚೀಫ್ ಕಮಿಷನರ ಹುಕುಂ ಆಗಿದೆ.

ರಿಟ್ರೆಂಚ್‌ಮೆಂಟ್ ಕಮಿಟಿಯವರು ಅಮ್ಮತ್ತಿ ನಾಡು ಕಚೇರಿಯನ್ನು ತೆಗೆದು ಹಾಕಿ, ಅದನ್ನು ವೀರರಾಜಪೇಟೆ ನಾಡಿಗೆ ಸೇರಿಸಬೇಕೆಂದು ಶಿಫಾರಸ್ಸು ಮಾಡಿದ್ದರೂ, ಚೀಫ್ ಕಮಿಷನರವರು ಅದನ್ನು ಮಂಜೂರು ಮಾಡಿರುವುದಿಲ್ಲವಾಗಿ ವರ್ತಮಾನ.

ಕುಟ್ಟದ ಒಳ ಒಂದು ತೋಟದಲ್ಲಿ ಈ ವಾರ ಕೆಲವು ಕೂಲಿಯವರು ಜಗಳ ಹೂಡಿ ಒಬ್ಬನು ಕೊಲ್ಲಲ್ಪಟ್ಟು ಗುಪ್ತವಾಗಿ ಹೂಣಲ್ಪಟ್ಟಿರುವರೆಂತಲೂ, ಪೋಲೀಸಿನವರು ತನಿಖೆ ನಡೆಸುತ್ತಿರುವರೆಂತಲೂ ಸುದ್ದಿ. ಇದರ ವಿವರವು ಚೆನ್ನಾಗಿ ತಿಳಿಯ ಬಂದಿರುವುದಿಲ್ಲ.

ಮಳ್ಳಂದೂರು ಗ್ರಾಮದ ಅಣ್ಣಳ್ಳಿರ ಸಂಜಪ್ಪನೆಂಬವನು ಈ ತಾ. 22ರಲ್ಲಿ ಹೊಳೆಗೆ ಕೋವಿ ತಾಕುವಾಗ್ಯೆ ಅದು ಕೈ ಯಲ್ಲಿಯೇ ಒಡೆದು ಹೋಗಿ ಕೈಗಳಿಗೂ, ಕಣ್ಣಿಗೂ ಒಟ್ಟು ಗಾಯ ಆಗಿ, ತಾ. 23ರಲ್ಲಿ ಆಸ್ಪತ್ರೆಗೆ ತರಲ್ಪಟ್ಟವನು ಮರುದಿನ ಮೃತನಾದನೆಂದು ತಿಳಿಯುತ್ತೇವೆ.

ಲೇಟ್ ರಾ. ಬಾ. ಕೋದಂಡ ಮಾದಯ್ಯನವರ ಪುತ್ರರಾದ ಮತ್ತು ಈಗ ಮಧ್ಯ ಪ್ರಾಂತ್ಯದಲ್ಲಿ ಆರೋಗ್ಯ ಇಲಾಖೆಯ ಮೈರೆಕ್ಟರಾಗಿರುವ ಮೇಜರ್ ಗಣಪತಿ ಐ. ಯಂ. ಯ್. ರವರು ಎಸೆಂಬ್ಲಿಯ ಮೆಂಬರಾದ ಸರ್ ಹರಿಸಿಂಗ್ ಗೌ ರವರ ಪುತ್ರಿ ಡೌಪವಿಯೆಂಬವರನ್ನು ಈ ತಾ. 15 ರಲ್ಲಿ ನಾಗಪುರದಲ್ಲಿ ಲಗ್ನವಾದರೆಂದು ತಿಳಿಯಬರುತ್ತದೆ. ಈ ದಂಪತಿಗಳು ಬೇಗನೆ ಕೊಡಗಿಗೆ ಬಂದು ಹೋಗುವರೆಂಬ ಸುದ್ದಿಯೂ ಇದೆ.

ಬಾಡಗ ಗ್ರಾಮದ ಕೊಕ್ಕಿಯನ ಕುಕ್ಕಪ್ಪನೆಂಬವನು ಈ ತಾ. 18ರ ರಾತ್ರಿ ಸುಮಾರು 8 ಗಂಟೆಗೆ ಶಿವಾಚಾರದ ಮುದ್ದಯ್ಯನೆಂಬವರಿಗೆ ಅವರ ಮನೆಯಲ್ಲಿ ಗುಂಡು ಹೊಡೆದಲ್ಲಿ, ಪ್ರಥಮ ಗುಂಡು ತಗುಲಿಲ್ಲವೆಂದು ಎರಡನೇ ಗುಂಡು ಹೊಡೆಯುವಾಗ್ಯೆ 1ನೇ ಗುಂಡಿನ ಶಬ್ದ ಕೇಳಿ ಹೊರ ಬಂದಿದ್ದ ಮುದ್ದಯ್ಯನವರ ಪತ್ನಿಗೂ ಸಹ ಮುದ್ದಯ್ಯನವರೊಂದಿಗೆ ಗುಂಡು ತಗಲಿ, ಅವರಿಬ್ಬರೂ ಮಡಿಕೇರಿ ಆಸ್ಪತ್ರೆಯಲ್ಲಿರುವರೆಂತಲೂ, ಸದರಿ ಕುಕ್ಕಪ್ಪನು ತಾನು ಗುಂಡು ಹೊಡೆದದ್ದು ನಿಜವೆಂದು ತಾನಾಗಿ ಪೋಲೀಸು ಸ್ಟೇಶನಿಗೆ ಬಂದು ಹೇಳಿದನೆಂದೂ, ಅವನು ದಸ್ತಗಿರಿ ಮಾಡಲ್ಪಟ್ಟು, ಕೇಸು ಪೋಲೀಸು ವಿಚಾರಣೆಯಲ್ಲಿ ದೆಯೆಂದೂ ವರ್ತಮಾನ.

ಹಿಂದೂ ದೇಶ.

ಸಂಯುಕ್ತ ಪ್ರಾಂತ್ಯದ ಆರ್ಡಿನೆನ್ಸನ್ನು ಮುರಿಯಲಿಕ್ಕಾಗಿ ತಾ. 21ರಲ್ಲಿ ಭಾರಾಬಂಕಿಯಲ್ಲಿ ಕಿಸಾನರವರು (ರೈತರು) ಮೀಟಿಂಗು ಸೇರಿದ್ದನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪೋಲೀಸಿನ ಸಹಾಯದಿಂದ ಚದರಿಸಿ ಬಿಟ್ಟರು. ಅಲ್ಲದೆ ಏಳು ಜನರನ್ನು ಅಲ್ಲಿ ದಸ್ತಗಿರಿ ಮಾಡಿದರು.

ದುಂಡು ಮೇಜು ಪರಿಷತ್ತಿನ ಕೆಲಸವನ್ನು ಮುಂದುವರಿಸಲು ಏರ್ಪಡಿಸಲ್ಪಡುವ ಕಮಿಟಿಯ ಮೆಂಬರುಗಳು ಜನವರಿ ಪ್ರಥಮ ವಾರದಲ್ಲಿ ನೇಮಿಸಲ್ಪಡುವರೆಂದೂ, ಅವರು ಜನವರಿ 15ರಲ್ಲಿ ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಹೊರಡುವರೆಂದೂ, ಇಂಡಿಯಾದಲ್ಲಿ ಫೆಬ್ರವರಿ ಪ್ರಾರಂಭದಲ್ಲಿ ತಮ್ಮ ಕೆಲಸವನ್ನು ಅವರು ನಡೆಸುವರೆಂದೂ ವರ್ತಮಾನವಿದೆ.

ಸಿಂಗಾಪೂರದಲ್ಲಿ ಆರ್ಡಿನೆನ್ಸಿನ ಮೇರೆ ಹಲವು ದಸ್ತಗಿರಿಗಳು ಮೊದಲ್ಪಟ್ಟಿವೆ. ತಾ. 20ರಲ್ಲಿ ಹೆಚ್ಚು ಪೋಲೀಸಿನವರು 53 ಮನೆಗಳನ್ನು ಶೋಧಿಸಿದರು. ದೀವಾಳಿ ಪುರಿಗಿಯ ಹೈಸ್ಕೂಲಿನ ಬೋರ್ಡಿಂಗ್ ಮನೆಯನ್ನೂ, ಒಡನೆ ಇರುವ ಆನಂದ ಆಶ್ರಮ'ವನ್ನೂ ಶೋಧಿಸಿದರು. ಸದರಿ ಶಾಲೆಯ ಹೆಡ್ ಮಿಸ್ಟ್ರೆಸ್ಸಾದ ಶ್ರೀಮತಿ ಲೀಲಾವತಿಯವರೂ, ಢಾಕ್ಕಾ ಯುನಿವರ್ಸಿಟಿಯ ವಿದ್ಯಾರ್ಥಿನಿಯಾದ ಶ್ರೀಮತಿ ರೇಣು ಕಾ ಸೆನ್‌ರವರೂ ಮತ್ತು 16 ಯುವಕರೂ ಸೆರೆ ಹಿಡಿಯಲ್ಪಟ್ಟರು.

ಸಂಯುಕ್ತ ಪ್ರಾಂತ್ಯದಲ್ಲಿ ಹೊಸ ಆರ್ಡಿನೆನ್ಸಿನ ಮೇರೆ ಹಲವು ಕಾಂಗ್ರೆಸು ಕೆಲಸಗಾರರು ದಸ್ತಗಿರಿ ಮಾಡಲ್ಪಟ್ಟಿರುವರು. ಮೀಟಿಂಗು ಮಾಡಕೂಡದೆಂಬ ಹುಕುಮನ್ನು ಉಲ್ಲಂಘನೆ ಮಾಡಿದರೆಂದು ಅಲಹಾಬಾದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಮಿ. ಪುರುಷೋತ್ತಮದಾಸ್ ಟಾಂಡನ್‌ರವರಿಗೆ 1 ವರ್ಷ ಕಠಿಣ ಸಜೆಯೂ, ಪ್ರೈಸ್ ಪ್ರೆಸಿಡೆಂಟರಾದ ಪಂಡಿತ ಕೃಷ್ಣಕಾಂತ ಮಾಳವೀಯರವರಿಗೆ 9 ತಿಂಗಳು ಕಠಿಣ ಸಜೆಯೂ, ಯುನಾವು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಪಂಡಿತ ಬಿಶಂಬರ್ ದ್ಯಾಲ್ ತ್ರಿಪಥಿಯವರಿಗೆ 6 ತಿಂಗಳ ಕಠಿಣ ಸಜೆಯೂ ವಿಧಿಸಲಾಗಿದೆ.

ಚಿತ್ತಗಾಂಗಿನಲ್ಲಿ ಪೋಲೀಸು ಇನ್ಸ್‌ಪೆಕ್ಟರಾದ ರಾ. ಬಾ. ಅಹಸನುಲ್ಲಾ ರವರನ್ನು ಕೊಲೆ ನಡಿಸಿದೆಂಬ ತಕ್ಷೀರಿನ ಮೇಲೆ 16 ವರ್ಷ ಪ್ರಾಯದ ಹರಿಪಾದ ಭಟ್ಟಾಚಾರ್ಯರ ಮೇಲೆ ಎಡಿಶನಲ್ ಶೆಷನ್ಸ್ ಜಡ್ಜರ ಕೋರ್ಟಿನಲ್ಲಿ ಮೊಕದ್ದಮ್ಮೆ ನಡೆಯಿತು. ಅಲ್ಲಿ ಪಂಚಾಯಿತರಲ್ಲಿ ಇಬ್ಬರು ಅವನು 'ತಪ್ಪಿತಸ್ಥನಲ್ಲ'ವೆಂದು ಅಭಿಪ್ರಾಯಪಟ್ಟರು. ಅದನ್ನು ಜಡ್ಜರು ಒಪ್ಪದೆ ಕೇಸನ್ನು ಹೈಕೋರ್ಟಿಗೆ ಕಳುಹಿಸಿದರು. ಹೈಕೋರ್ಟಿನಲ್ಲಿ ಹರಿಪಾದನು ತಪ್ಪಿತಸ್ಥನೆಂದು ನಿಶ್ಚೈಸಿ ಅವನಿಗೆ ಜೀವ ಪರ್ಯಂತರ ಸಜೆಯು ವಿಧಿಸಲಾಯಿತು.

ಕೆಲವು ದಿವಸಗಳ ಹಿಂದೆ ವಿಷವನ್ನು ನುಂಗಿದರ ಮೇಲೆ ಕೆಲವರು ಸಂಭವನ್ನು ಕಾಡಿದದ್ದಾಗಿ, ಸದರಿ ನಾರಾಸಿಂಗ್ ಸ್ವಾಮಿಯವರು ಡಿಸೆಂಬರ್ ತಾ. 20ರಲ್ಲಿ ಕಲ್ಕತ್ತಾ ಯುನಿವರ್ಸಿಟಿಯ ಸೆನೆಟ್ಟಿಯಲ್ಲಿ ಹಲವು ಪ್ರಾಮುಖ್ಯ ಉದ್ಯೋಗಸ್ಥರು ಮತ್ತು ಡಾಕ್ಟರ್ ಎದುರಿನಲ್ಲಿ ತಮ್ಮ ವಿಶೇಷ ಶಕ್ತಿಯನ್ನು ಪ್ರದರ್ಶಿದರು. ಪ್ರಥಮದಲ್ಲಿ ಕನ್ನಡಿಯ ತುಂಡನ್ನು ಹಲ್ಲುಗಳಿಂದ ಕಚ್ಚಿ ಕಿರಿ ಪುಡಿ ಮಾಡಿ ನುಂಗಿದರು. ಸಂತರ 1 ತೊಲ ಪಾದರಸವನ್ನೂ, ಕೆಲವು ಹನಿ 'ನೈಟ್ರಿಕ್ ಮತ್ತು ಕಾರ್ಬೊಲಿಕ್ ಆಸಿಡ್' (ವಿಷದ್ರವ) ಗಳನ್ನು ಕುಡಿದರು. ಕಡೇಗೆ 1 ಡಜನು ಸ್ಪಿಣದ ಮೊಳೆಗಳನ್ನು ನೀರು ಕುಡಿಯುತ್ತಾ ನುಂಗಿದರು. ದು ಹಠಯೋಗದ ಮಹತ್ವವೆಂದು ಅವರು ವಿವರಿಸಿದರು.

ಸಂಯುಕ್ತ ಪ್ರಾಂತ್ಯದಲ್ಲಿ ಆರ್ಡಿನೆನ್ಸಿನ ಮೇರೆ 'ಗೇಣಿ ಕೊಡಬಾರದೆಂದು ಬೋಧಿಸುವ ಕಾಂಗ್ರೆಸ್ ಕೆಲಸಗಾರರನ್ನು ಆಸ್ತಿಗಳಲ್ಲಿರಲು ಬಿಡಬಾರದೆಂತಲೂ, ಹಾಗೆ ಒಬ್ಬರೆ ಬಿಟ್ಟರೆ ಲೈಸೆನ್ಸ್ ರದ್ದ ಮಾಡಲಾಗುವದೆಂದೂ ಹುಕುಂ ಮಾಡಿರುವರು. ಮಿಸ್ ಆರ್. ಯಸ್. ಪಂಡಿತರವರೂ (ಪಂಡಿತ ಮೋತಿಲಾಲ ಪುತ್ರಿಯವರು) ಮತ್ತು ಪಂಡಿತ ಮದನ ಮೋಹನ ಮಾಳವೀಯರ ಪುತ್ರ ಪಂಡಿತ ರಾಮಕಾಂತ ಮಾಳವೀಯರವರನ್ನು ಮೋಟಾರು ಕಾರುಗಳಲ್ಲಿ ಕಾಂಗ್ರೆಸು ಕೆಲಸಗಾರರನ್ನು ಸಾಗಿಸಕೂಡದೆಂದು ಹುಕುಂ ಮಾಡಿದ್ದ ವಿನಾ ಟೆಂಗುಗಳಿಗೆ ಸ್ವರಿಂದು ಸದರಿ ಕಾರುಗಳನ್ನು ಪೋಲೀಸು ಸ್ಟೇಷನಿನಲ್ಲಿ ಬಿಡಿಸಬೇಕೆಂದು ಅಧಿಕಾರಿಗಳು ಅವರಿಗೆ ನೋಟೀಸು ಕೊಟ್ಟಿದ್ದಾನೆ!

ಪೂನಾದಲ್ಲಿ ಕ್ರಿಸ್ತ ಸೇವಾ ಸಂಘಕ್ಕೆ ಸೇರಿದ ಫಾದರ್ ಎಲ್ವಿನ್‌ರವರು ತಾ. 21ರಲ್ಲಿ ಚಾದಿಯನ್ನು ಕರೆತು ಅಲ್ಲಹಾಬಾದು ಯೂನಿವರ್ಸಿಟಿಯಲ್ಲಿ ಮಾಡಿದ ಭಾಷಣದಲ್ಲಿ ಹಿಂಗಿಂದರು— ಬ್ರಿಟಿಷ ನಿಜವಾಗಿಯೂ ಆರ್ಥಿಕ ಕಷ್ಟಕ್ಕೆ ಸೌಂಸಿದಕ್ಕೆ ಕೆಲ್ದನನ್ನು ನೋಡುವುದಿಲ್ಲ. ಇಂಗ್ಲೆಂಡಿನ ನಿರುದ್ಯೋಗದ ಸಲ್ಕೆ ಅಧಿಕಸ್ಥಿತಿಯೇ ಕಾರಣ. ಇಂಗ್ಲೆಂಡಿನದಕ್ಕಿಂತ ಇಂಡಿಯದ ಕಷ್ಟವು ಬಹು ಹೆಚ್ಚಾಗಿದೆ. ಐಶ್ವರ್ಯವಂತರ ಬೊಕ್ಕಸ ಹಣ ತುಂಬುವುದರಿಂದ ಪ್ರಯೋಜನವಿಲ್ಲ. ಚರಖಾವ್ರುಗಳಲ್ಲಿ ನವ ಚೈತನ್ಯವನ್ನುಂಟುಮಾಡಿದೆ. ಅದನ್ನು ನಸು ಭಂಡವಾಳ ಬೇಡ. ಯಾವ ದೇಶದಲ್ಲೂ ಅದನ್ನು ನಡೆಸುದು. ಕಾರ್ಖಾನೆಯ ಕೈಗಾರಿಕೆಗಳು ಜನರನ್ನು ಹಿಚ್ಚಿತಿಗೆ ಇಳಿಸಿವೆ. ತಾನು ಕಾರ್ಖಾನೆ ಕೈಗಾರಿಕೆಯನ್ನು ವಿರೋಧಿಸುವವನಾಗಿದ್ದೇನೆ."

ಸಾಲಾವಾದಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈ ಕೆಳಗಿನ ಹುಕುಮನ್ನು ಮಾಡಿರುವರು. ಹೊಸ ಆರ್ಡಿನೆನ್ಸಿನರ ಅಲ್ಲಹಾಬಾದು ಡಿಸ್ಟ್ರಿಕ್ಟಿನ ಎಲ್ಲಾ ಜಮೀನ್ದಾರರೂ, ಡಾರ್‌ದಾರರೂ ಶಾಂತಿರಕ್ಷಣೆ ಬಗ್ಗೆ ಸರ್ಕಾರದವರಿಗೆ ಸಹಾಯ ಕೊಡಬೇಕು. ಚಾರಿಸಿನ ಮೇರೆ ಬದ್ಧ ತಕ್ಷೀರನ್ನು ಮಾಡಿದವರನ್ನು ಅವರು ದಸ್ತಗಿರಿ ಮಾಡಬೇಕು. ಗೇಣಿ ಕೊಡಬಾರದೆಂದು ಬೋಧಿಸುವವರನ್ನು ದಸ್ತಗಿರಿ ಪೋಲೀಸು ಸ್ಟೇಶನಿಗೆ ಕಳುಹಿಸಬೇಕು, ದಸ್ತಗಿರಿ ಮಾಡಲು ಸಾಧ್ಯವಾಗದೆ ಇದ್ದರೆ ಪೋಲೀಸಿಗೆ ತಿಳಿಸಬೇಕು. ಕಾಂಗ್ರೆಸು ಕೆಲಸಗಾರರು ಸಾಕ್ಕೆ ಬರುವುದನ್ನೂ, ಅವರು ಉಳಕೊಳ್ಳುವ ಸ್ಥಳ ಅವರ ಚಲನೆಗಳನ್ನೂ ಪೋಲೀಸಿಗೆ ಕೂಡಲೆ ತಿಳಿಸಬೇಕು. ಈ ಸಂಬಂಧ ವೈಕಿಲಾಪನಿಂದ ಬಂದ ಹಿತ್ಯಾನನಗೆ ಒದಗುವ ಪತ್ರವನ್ನು ಪೋಲೀಸಿಗೆ ತಿಳಿಸಬೇಕು. ಸಂಬಂಧಪಟ್ಟ ಕಾಗದ ಪತ್ರಗಳನ್ನು ನಾಶಪಡಿಸಬೇಕು. ಎಲ್ಲಿ ಒಂದು ಪ್ರತಿಯನ್ನು ಪೋಲೀಸಿಗೆ ಕಳುಹಿಸಬೇಕು. ಕೆಲಸ ಮಾಡದೆ ಹೋದಲ್ಲಿ ಜಮೀನ್ದಾರರಿಗೂ, ಟಾರ್‌ದಾರರಿಗೂ, ಸ್ವಾತಂತ್ರ್ಯ ಅವರು ಗೇಣಿ ವಸೂಲಿ ಮಾಡುವಾಗ್ಯೆ ಸರ್ಕಾರದವರು ಯಾವ ಸಹಾಯವನ್ನೂ ಕೊಡುವುದಿಲ್ಲ. ಅವರು ಸರ್ಕಾರಕ್ಕೆ ಕೊಡುವ ಕಂದಾಯದಲ್ಲಿ ರಿಯಾಯಿತಿ ಏನೂ ಕೊಡಲಾಗುವುದಿಲ್ಲ.

ವಿದೇಶ.

ಲಂಡನಿನ ವರ್ತಮಾನ ಪ್ರಚಾರಕಸಂಘದ ಮೆ. ಡಿಕ್ ಶಪ್ಪರ್ಡರವರು—'ಶಸ್ತ್ರಗಳ ಯುದ್ಧವನ್ನು ನಿಲ್ಲಿಸುವ ಬಗ್ಗೆ ಪೂರ್ವ ದೇಶಗಳ ಧರ್ಮ ಬೋಧಕರು ಪ್ರಪಂಚದ ಎಲ್ಲಾ ಕಡೆಗಳಲ್ಲಿ ಸುತ್ತಿ ಜನರಿಗೆ ಬೋಧನೆ ಕೊಡುವುದು ಉತ್ತಮವೆಂದೂ ಮಿ. ಗಾಂಧಿಯವರು ರಾಜಕೀಯದಲ್ಲಿ ಹೆಚ್ಚು ಭಾಗ ತೆಗೆದುಕೊಳ್ಳದಿದ್ದ ಪಕ್ಷ ಈ ಕೆಲಸಕ್ಕೆ ಅವರ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದೂ' ಹೇಳಿರುವರು.

ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ವಿರುದ್ಧವಾದ ಭಾವನೆಗಳನ್ನು ಹರಡುವ ಉದ್ದೇಶ್ಯ ಹಿಂದೂ ಸ್ವಾತಂತ್ರ್ಯ ಪ್ರೇಮಿಗಳಾದ ಮಿ. ಚರ್ಚಿಲ್‌ರವರು ಅಮೇರಿಕದಲ್ಲಿ ಭಾಷಣ ಮಾಡಲು ಹೋಗಿದ್ದರು. ಅವರು ನ್ಯೂಯಾರ್ಕ್ ಪಟ್ಟಣದಲ್ಲಿ ಪ್ರಯಾಣವಾಡ ತ್ತಿದ್ದಾಗ ಅವರ ಕಾರು ಇನ್ನೊಂದಕ್ಕೆ ಡಿಕ್ಕಿ ಹೊಡೆದು ಚರ್ಚಿಲ್ಲರ ... ಗಾಯಗಳು ತಗುಲಿ ... ಭುಜಕ್ಕೆ ಪೆಟ್ಟು ... ಚಿಕಿತ್ಸೆ ಪಡೆಯುತ್ತಿದ್ದಾರೆ. ... ಗುಣವಾಗುತ್ತಿರುವರು ... ಭಾಷಣ ಮಾಡಕೂಡದೆಂದು ಡಾಕ್ಟರರು ಅವರಿಗೆ ಹೇಳಿರುವರಂತೆ.

ಕಳೆದ ವಾರ ಆಸ್ಟ್ರೇಲಿಯಾದಲ್ಲಿ ನಡೆದ ಜನರಲ್ ಚುನಾವಣೆಯಲ್ಲಿ ಲೇಬರ್ ಪಕ್ಷದವರಿಗೆ ಸೋಲು ಆಗಿದೆ. ಯುನೈಟೆಡ್ ಆಸ್ಟ್ರೇಲಿಯಾ ಪಕ್ಷದವರಿಗೆ ಜಯವಾಗಿದೆ. ಕಳೆದಸಾರಿ ಪ್ರತಿನಿಧಿಗಳ ಸಭೆಯಲ್ಲಿ 25 ಮೆಂಬರುಗಳಿದ್ದ ಯುನೈಟೆಡ್ ಆಸ್ಟ್ರೇಲಿಯಾ ಪಕ್ಷದವರು ಈ ಸಾರಿ 35ಕ್ಕೂ, 'ಕಂಟ್ರಿ ಪಾರ್ಟಿ'ಯವರು 11ರಿಂದ ... ಏರಿರುವರು ಮತ್ತು ಫೆಡರಲ್ ಲೇಬರ್ ಪಾರ್ಟಿಯವರು ... ರಿಂದ 13ಕ್ಕೆ ಇಳಿದಿರುವರು. ಕಳೆದ ಲೇಬರ್ ಸರ್ಕಾರದ ಪ್ರಧಾನ ಮಂತ್ರಿಯಾಗಿದ್ದ ಮಿ. ಸ್ಕಲ್ಲಿನ್‌ರವರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿರುವರು. 'ಯುನೈಟೆಡ್' ಪಾರ್ಟಿಯ ಮುಖಂಡರಾದ ಮಿ. ಲಯನ್ಸ್‌ರವರು ಮಂತ್ರಿ ಮಂಡಲಿಯನ್ನು ಏರ್ಪಡಿಸಲಿಕ್ಕಿರುವರು.

ಸಿಬ್ಬಂದಿ ಪೋಷಕ.

ಕೊಡಗಿನಲ್ಲಿ ಸಿಬ್ಬಂದಿ ಖೋತಾವನ್ನು ಕುರಿತು ಚೀಫ್ ಕಮಿಷನರವರು ಈ ತಾ. 21 ರಲ್ಲಿ ಈ ಕೆಳಗಿನ ಹುಕುಮನ್ನು ಮಾಡಿರುವರು.

ಈಗಿನ ಆರ್ಥಿಕ ಸ್ಥಿತಿಯನ್ನು ಸರಿಪಡಿಸಲು ಹಿಂದೂ ಸರ್ಕಾರದವರು ಕೈಕೊಂಡಿರುವ ತಕ್ಷಣದ ಮೇರೆ ಈ ಕೆಳಗಿನ ಶರತು ಮತ್ತು ರಿಯಾಯಿತಿಗಳಿಗೊಳಪಟ್ಟು, ತಾತ್ಕಾಲಿಕವಾಗಿ, ಕೊಡಗಿನ ಸರ್ಕಾರಿ ನೌಕರರ ಸಂಬಳದಲ್ಲಿ ಎಲ್ಲರಿಗೂ ಒಂದೇ ಸಮನಾಗಿ ಶೇಕಡ 10 ರಷ್ಟು ಕಡಿಮೆ ಮಾಡಲಾಗಿದೆ.

ಶರತುಗಳು ಮತ್ತು ರಿಯಾಯಿತಿಗಳು.

1 ಈ ಖೋತಾಯು 1931 ನೇ ಡಿಸೆಂಬರ್ 1 ರಿಂದ ಜಾರಿಯಾಗುವ ಸಂಬಳಕ್ಕೆ ಅನ್ವಯಿಸುತ್ತದೆ.

2 25% ರ ಹೊಸ ಉತ್ತಮ ತೆರಿಗೆ ಮತ್ತು ಸೂಪರ್ ಟ್ಯಾಕ್ಸ್ ... ವಸ ಕ್ಕೆ ರೂ 100 ರಿಂದ ರೂ 201 ... ರಿಗಿನ ಸಂಬಳ ಮೇಲಿನ ... ಈ ಖೋತಾಯಾಗಿ ... ಅವರಿಗೆ ... ಸರ್ಕಾರಕ್ಕೆ ಸೇರುವುದು.

3 ತಿಂಗಳಿಗೆ 40 ರೂ ಗಿಂತ ಕಡಿಮೆ ಸಂಬಳ ... ಯಲ್ಲ ... ರ ಕಡಿಮೆ ... 40 ರ ... ಶ್ಯಕವಾದ ಅರ್ಥ ಕಡಿಮೆ ಮಾಡಲಾಗುವುದು. ... ಗೆ 4—8— ... ಕ್ಕೆ 10% ...

4 ... ಕಡಿಮೆ ... ಇಲ್ಲ.

5 ...

6 ಪೋಲೀಸ ... ಸಂಬಳದಲ್ಲಿ ...

7 ಈ ಖೋತಾ ... 1933 ನೇ ... ಲ್ಲಿ ...

ಆಧುನಿಕ 'ಮೇಘದೂತ.'

ಕಾಳಿದಾಸನ ಕಾವ್ಯದಲ್ಲಿ ವಿರಹಯುಕ್ತ ಯಕ್ಷನು ಮೇಘದ ಮೂಲಕ ಪ್ರಿಯಳಿಗೆ ಸಂದೇಶವನ್ನು ಕಳುಹಿಸಿದನೆಂದು ಕಥೆ ಇರುವುದು. ಇದು ನಮಗೆ ಕೇವಲ ಕವಿಕಲ್ಪನೆಯೆಂದು ತೋರುವುದು. ಆದರೆ ಒಬ್ಬ ಜರ್ಮನ್ ಶಾಸ್ತ್ರಜ್ಞನು ಈ ಕವಿಕಲ್ಪನೆಯನ್ನು ಸತ್ಯ ಸೃಷ್ಟಿಯಲ್ಲಿ ತೋರಿಸಿರುವನು. ಮೋಡದ ಮೇಲೆ ಎಂಥಾ ಅಕ್ಷರಗಳನ್ನು ಬರೆದರೆ ಜನರು ಉತ್ಸುಕತೆಯಿಂದ ಓದುವರೆಂದು ಒಬ್ಬ ಕಲ್ಪಕ ಮನುಷ್ಯನಿಗೆ ತೋರಿತು. ಪ್ರಕಟಣೆಗಳನ್ನು (ಜಾಹಿರಾತುಗಳನ್ನು) ಹರಡಲು ಇದು ಒಳ್ಳೆಯ ಯುಕ್ತಿಯೆಂದೂ ಅವನಿಗೆ ಭಾಸವಾಯಿತು. ಅವನು ಎಷ್ಟೊ ಅಡಿಯ ಒಂದು ಮೋಟರನ್ನು ರಚಿಸಿದನು. ಮತ್ತೆ ಸಾವಿರಾರು ಕ್ಯಾಂಡಲ್ ಪವರಿನ ಪ್ರಕಾಶದಿಂದ ರಾತ್ರಿ ಮೋಡಗಳ ಮೇಲೆ ಅಕ್ಷರಗಳನ್ನೆಸೆದನು. ಅಕ್ಷರಗಳನ್ನೆಸೆಯುವುದೆಂದರೆ ಅಕ್ಷರಗಳ ಆಕಾರದ ಪ್ರಕಾಶವನ್ನು ಬಿಡುವುದೆಂದು ಅರ್ಥ. ಸಿನೇಮಾ ಫಿಲ್ಮಿನಿಂದ ಹೊಂಬೀಳುವ ಅಕ್ಷರಗಳು ಸಿನೇಮಾ ಪರದೆಯ ಮೇಲೆ ಪ್ರಕಾಶಿಸುವಂತೆಯೇ ಎತ್ತರವಾದ ಮೋಟಾರಿನಿಂದ ಹೊರಬಿದ್ದ ಅಕ್ಷರಗಳು ಮೋಡಗಳ ಮೇಲೆ ಮೂಡಿದವು. ಈ ಚಮತ್ಕಾರವನ್ನು ನೋಡಲು ನೂರಾರು ಜನರು ಸೇರಿ, ಅಕ್ಷರಗಳನ್ನು ಓದಲಾರಂಭಿಸಿದರು. ಯುಕ್ತಿಯು ಸಫಲವಾಯಿತು. ಅರ್ಧ ಅಥವಾ ಒಂದು ಮೈಲು ದೂರದ ವರೆಗಿರುವ ಮೋಡದ ಮೇಲೆ ಈ ಅಕ್ಷರಗಳನ್ನು ಮೂಡಿಸಬಹುದು.

'ಸುಬೋಧ'

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

"ಕೊರವಂಡ ಅಪ್ಪಯ್ಯ ದೇವಯ್ಯ" ಇನಾಮು.

ಅಯ್ಯಾ,

ಹಿಂದಿನ ವಾರದ ಅಂದರೆ ತಾರೀ. 11 ನೇಯ ಕೊಡಗು ಪತ್ರಿಕೆಯಲ್ಲಿ "ಕೊರವಂಡ ಅಪ್ಪಯ್ಯ ದೇವಯ್ಯ" ಇನಾಮಿನ ವಿಷಯ ಕುರಿತು ಬರೆದ, ನಮ್ಮ ಜ್ಞಾಪಕಕ್ಕೆ ಬಂದ ನನ್ನ ಮಿತ್ರನಾದ ಕೊಡಗನಿಗೆ ಎಷ್ಟು ವಂದಿಸಿದರೂ ಸಾಲದು. ಆದರೆ ಅವರು "ಕೊಡಗು ವಿದ್ಯಾರ್ಥಿಗಳು ಪರೀಕ್ಷೆಗೆ ಹೋಗಲು ಕಳುಹಿಸುವ ಫಾರಮಿನಲ್ಲಿ ತಮ್ಮ ಕುಲವನ್ನು ಕಾಣಿಸದುದರಿಂದ ಯೂನಿವರ್ಸಿಟಿ ಅಧಿಕಾರಿಗಳು ಹೀಗೆ ತಪ್ಪು ಭಾವನೆ ಮಾಡಲು ಕಾರಣವಾಗಿದೆ' ಎಂದು ಬರೆದುದನ್ನು ನೋಡಿ ನನಗೆ ಅಧಿಕ ವ್ಯಸನ ಉಂಟಾಯಿತು. ಏಕೆಂದರೆ, ಕಳೆದ ಬಿ. ಎ. ಪರೀಕ್ಷೆಗೆ ಹೋದ ಇಬ್ಬರಲ್ಲಿ ಒಬ್ಬನಾಗಿರುವೆನು. ನಾನು ನನ್ನ ಕುಲವನ್ನು ಖಂಡಿತವಾಗಿಯೂ ತೋರಿಸಿದ್ದೇನೆಂದು ಧೈರ್ಯದಿಂದ ಹೇಳುವೆನು. ಇದು ಯೂನಿವರ್ಸಿಟಿ ಅಧಿಕಾರಿಗಳ ತಪ್ಪು ಭಾವನೆ ಅಲ್ಲದೆ ವಿದ್ಯಾರ್ಥಿಗಳ ತಪ್ಪಿಂದಿಗೂ ಆಗಲಾರದು.

ಒಂದು ವೇಳೆ ಕೊಡಗು ವಿದ್ಯಾರ್ಥಿಗಳು ತಮ್ಮ ಕುಲವನ್ನು ಕಾಣಿಸದೆಯೂ, ಅಥವಾ ಪಾಸಾಗದೆಯೂ ಇದ್ದ ಪಕ್ಷದಲ್ಲಿ ಕೊಡಗರಿಗೇ ಸಲ್ಲತಕ್ಕ ಪ್ರೈಸನ್ನು ಎಲ್ಲಿಯೋ ಇರುವ ಮಲಯಾಳದವರಿಗೆ ಕೊಡಿಸಬಹುದೇ? ಕೊಡಗು ವಿದ್ಯಾರ್ಥಿಗಳು ಪಾಸಾಗದಿದ್ದಲ್ಲಿ ಈ ಪ್ರೈಸನ್ನು ಯೂನಿವರ್ಸಿಟಿ ಅಧಿಕಾರಿಗಳು ತಮ್ಮ ಇಚ್ಛಾನುಸಾರ ಬೇರೆಯವರಿಗೆ ಕೊಡಬಹುದೋ ಎಂಬುದು ನನಗೆ ತಿಳಿಯದು. ಒಂದು ಸಮಯ ಹಾಗಿಲ್ಲದಿದ್ದರೆ ಆ ಪ್ರೈಸನ್ನು ಮಲೆಯಾಳದವನಿಗೆ ಹೇಗೆ ಕೊಟ್ಟರು ಎಂಬುದನ್ನು ವಿಚಾರಿಸಿ, ಕೊಡಗರಿಗೆ ಸಲ್ಲತಕ್ಕ ಪ್ರೈಸನ್ನು ಕೊಡಗರಿಗೇ ಕೊಡುವ ಹಾಗೆ ಮಾಡಬೇಕಾಗಿ ಈ ಇನಾಮಿಗೆ ಸಂಬಂಧಪಟ್ಟ ಮಹನೀಯರನ್ನು ನಾನು ಬೇಡಿಕೊಳ್ಳುತ್ತೇನೆ.

ಕೆ. ಯಸ್. ಸಿ.

ಡಿ. ಪಿ. ಡಬ್ಲ್ಯು. ಇಲಾಖೆಯ ವಿಶೇಷತ್ವ.

ಮಹನೀಯರೇ,

ಕೊಡಗಿನ ಸರ್ಕಾರದ ಇಲಾಖೆಗಳಲ್ಲೆಲ್ಲಾ ಡಿ. ಪಿ. ಡಬ್ಲ್ಯು. ಇಲಾಖೆಯಲ್ಲಿ ಒಂದು ವಿಶೇಷ ಪದ್ಧತಿ ಇರುವಂತೆ ಕಾಣುತ್ತದೆ. ಬಾಕಿ ಎಲ್ಲಾ ಇಲಾಖೆಗಳಿಗಿಂತ ಈ ಇಲಾಖೆಯಲ್ಲೇ ಕೊಡಗಿನ ಹೊರಗಿನವರು ಹೆಚ್ಚಾಗಿ ಕೆಲಸದಲ್ಲಿರುವರು. ಇದಕ್ಕೆ ಕಾರಣವೇನೆಂದರೆ— ಈ ಇಲಾಖೆಯಲ್ಲಿ ಉದ್ಯೋಗ ಮಾಡಲು ಅರ್ಹತೆ ಇದ್ದವರು ಕೆಲವು ವರ್ಷಗಳ ಹಿಂದೆ ಕೊಡಗಿನಲ್ಲಿ ದೊರೆಯುವುದು ದುರ್ಲಭವಾಗಿತ್ತು, ಆದುದರಿಂದ ಮದ್ರಾಸು ಪ್ರಾಂತ್ಯದಿಂದ ಉದ್ಯೋಗಸ್ಥರನ್ನು ಇಲ್ಲಿಗೆ ಕರೆಯಿಸುತ್ತಿದ್ದರು. ಆದರೆ ಕ್ರಮೇಣ ಕೊಡಗಿನವರೇ ಈ ಇಲಾಖೆಯ ಉದ್ಯೋಗಕ್ಕೆ ಬೇಕಾದ ಶಿಕ್ಷಣವನ್ನು ಪಡೆಯುತ್ತ ಬಂದುದರಿಂದ ಇಲ್ಲಿಯವರು ನೇಮಿಸಲ್ಪಡುತ್ತಾ ಬಂದರು. ಇತ್ತೀಚೆಗೆ ಈ ಇಲಾಖೆಯ ಗುಮಾಸ್ತರ ಕೆಲಸಗಳಲ್ಲಿ ಖಾಲಿ ಬಿದ್ದ ಸ್ಥಳಗಳಿಗೆ ಇಲ್ಲಿಯವರನ್ನು ನೇಮಿಸುವುದರ ಬದಲು ಪರ ಪ್ರಾಂತ್ಯದವರನ್ನು ನೇಮಿಸುತ್ತಿರುವುದು ಶೋಚನೀಯ. ಈ ವಿಷಯ ಕೆಲವು ಸಮಯದ ಹಿಂದೆ ಒಂದು ಬಾತ್ಮಿಯು ಪ್ರಕಟವಾದದ್ದನ್ನು ಓದಿದ ಜ್ಞಾಪಕ ನನಗಿದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಅದಕ್ಕೆ ಯಾಕೆ ಗಮನ ಕೊಡುವುದಿಲ್ಲವೋ ತಿಳಿಯದು.

ಕೆಲವು ವರ್ಷಗಳ ಹಿಂದೆ ಮೆಟ್ರಿಕ್ಯುಲೇಶನ್ ಪಾಸಾದವರು ಸರ್ಕಾರಿ ಉದ್ಯೋಗಕ್ಕೆ ದೊರೆಯಲು ಬಹು ಕಷ್ಟವಾಗಿದ್ದ ಈ ಪ್ರಾಂತ್ಯದಲ್ಲಿ ಈಗ ಮಾಹೆಯಾನ 30 ರೂ. ಸಂಬಳದ ಗುಮಾಸ್ತನ ಕೆಲಸ ಕೂಡ ದೊರೆಯದೆ ಅತ್ತಿತ್ತ ಅಲೆದಾಡುತ್ತಿರುವ ಗ್ರಾಜ್ಯುವೇಟರುಗಳೇ ಹಲವರಿರುವರೆಂದು ಜನರಿಗೆ ತಿಳಿಯದ್ದಲ್ಲ. ಇಂಥಾ ಸಮಯದಲ್ಲಿ ಡಿ. ಪಿ. ಡಬ್ಲ್ಯು. ಇಲಾಖೆಯವರು ತಮ್ಮ ಇಲಾಖೆಯಲ್ಲಿ ಖಾಲಿ ಬೀಳುವ ಸ್ಥಳಗಳಿಗೆ ಪರ ಪ್ರಾಂತ್ಯದವನ್ನು ನೇಮಿಸುವುದರ ಅರ್ಥವೇನು? ಪ್ರತಿಯೊಂದು ಪ್ರಾಂತೀಯ ಸರ್ಕಾರದವರು ಆಯಾಯ ಪ್ರಾಂತ್ಯದವರಿಗೆ ಉತ್ತೇಜನ ಕೊಡುತ್ತಿರುವಲ್ಲಿ ನಮ್ಮ ಸರಕಾರದ ಈ ಇಲಾಖೆಯವರು ಹೀಗೆ ಮಾಡಲು ಕಾರಣವೇನೆಂದು ಗೊತ್ತಾಗುವುದಿಲ್ಲ. ನಮ್ಮ ಯುವಕರಿಗೆ ಬೇರೆ ಕಡೆಗಳಲ್ಲಿ ಉದ್ಯೋಗ ದೊರೆಯುವುದು ಕಷ್ಟವೆಂಬುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಅವರಿಗೆ ತಮ್ಮ ಪ್ರಾಂತ್ಯದಲ್ಲೂ ಉತ್ತೇಜನ ಸಿಕ್ಕದೆ ಹೋದರೆ ಅವರ ಪಾಡೇನಾಗಬೇಕು? ಅವರು ತಮ್ಮ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಾಲವನ್ನಾದರೂ ತೀರಿಸುವ ಬಗೆ ಹೇಗೆ? ಆದುದರಿಂದ ಈ ಇಲಾಖೆಯ ಅಧಿಕಾರಿಗಳು ಇನ್ನು ಮುಂದೆಯಾದರೂ ಇಲ್ಲಿಯ ಬೇರೆ ಇಲಾಖೆಗಳಂತೆ, ಖಾಲಿ ಬಿದ್ದ ಸ್ಥಳಗಳಿಗೆ ಕೊಡಗಿನವರಲ್ಲಿ ಯಾರಾದರೂ ಸರಿ, ಅರ್ಹತೆ ಇರುವವರನ್ನು ನೇಮಿಸಿ, ಇಲ್ಲಿಯ ವಿದ್ಯಾವಂತ ಯುವಕರಿಗೆ ಪ್ರೋತ್ಸಾಹವನ್ನೀಯುವರಾಗಿ ನಂಬುತ್ತೇನೆ. ಈ ವಿಷಯಕ್ಕೆ ಇಲ್ಲಿಯ ಸರ್ಕಾರದ ಮೇಲಧಿಕಾರಿಗಳಾದ ಚೀಫ್ ಕಮಿಷನರವರೂ, ಕಮಿಷನರವರೂ ಲಕ್ಷ್ಯವನ್ನು ನೀಡುವರಾಗಿ ಆಶಿಸುವ

"ದೂರ ದೃಷ್ಟಿ"

ಸ್ಕಾಲರ್‌ಶಿಪ್‌ಗಳೂ, ಫ್ರೀಶಿಪ್‌ಗಳೂ.

ಅಯ್ಯಾ,

ತಮ್ಮ ಸ್ಕೂಲ್ ಫೀಜನ್ನು ಕೊಡಲು ಸಾಧ್ಯವಿಲ್ಲದ ಬಡವ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದಕ್ಕಾಗಿ ಅಂಥವರಿಗೆ ಫ್ರೀ ಶಿಪ್ ಮಂಜೂರು ಮಾಡುವುದಾಗಿದೆ. ಅಲ್ಲದೆ ಗಟ್ಟಿಗರಾಗಿಯೂ, ಬಡವರಾಗಿಯೂ ಇರುವ ಕೆಲವು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳನ್ನೂ ಕೊಡುವುದಾಗಿದೆ. ಇಂಥಾ ಸ್ಕಾಲರ್‌ಶಿಪ್ ದೊರೆಯುವುದರಿಂದಲೇ ಅಂಥಾ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುವುದಾಗಿದೆ. ಆದರೆ ಈ ಎರಡು ಅನುಕೂಲಗಳನ್ನು ಕಾಲಕ್ಕೆ ಸರಿಯಾಗಿ ಮಂಜೂರು ಮಾಡದೆ ಹೋದರೆ ಅಂಥಾ ವಿದ್ಯಾರ್ಥಿಗಳಿಗೆ ಸಹಾಯ ಮಾಡಿಯೂ ಮಾಡದಂತೆಯೇ ಆಗುವದು.

ವಾಡಿಕೆಯಾಗಿ ಹೈಸ್ಕೂಲುಗಳು ಜೂನ್ ತಿಂಗಳಲ್ಲಿ ವರ್ಷವನ್ನು ಪ್ರಾರಂಭಿಸುತ್ತವೆ. ಅಂದರೆ ಆ ತಿಂಗಳಿಂದಲೇ ವಿದ್ಯಾರ್ಥಿಗಳು ಸ್ಕೂಲು ಫೀಜನ್ನು ಕೊಡಬೇಕಾಗಿದೆ. ಫ್ರೀಶಿಪ್ ಮತ್ತು ಸ್ಕಾಲರ್‌ಶಿಪ್ ದೊರೆಯುವ ವಿದ್ಯಾರ್ಥಿಗಳು ತಮಗೆ ರಿಯಾಯಿತಿ ದೊರೆಯುವ ಕಾರಣ ತಮ್ಮ ಸ್ಕೂಲ್ ಫೀಜನ್ನು ಕೊಡಲು ಬೇರೆ ಯಾವ ಏರ್ಪಾಡು ಮಾಡಿಕೊಂಡಿರುವುದಿಲ್ಲ, ಮಾತ್ರವಲ್ಲ, ಅವರು ಹಾಗೆ ಏರ್ಪಾಡು ಮಾಡಿಕೊಳ್ಳಲು ಸಾಧ್ಯವಿಲ್ಲದವರಾಗಿರುವರು. ಆ ಕಾರಣ ಅದೇ ತಿಂಗಳಲ್ಲಿ ಅವರಿಗೆ ಕೊಡುವ ರಿಯಾಯಿತಿಗಳನ್ನು ಮಂಜೂರು ಮಾಡಬೇಕಾದದ್ದು ಅತ್ಯವಶ್ಯ. ಒಂದು ವೇಳೆ ಆ ತಿಂಗಳಲ್ಲಿ ಮಂಜೂರು ಮಾಡುವುದು ಸಾಧ್ಯವಿಲ್ಲದೇ ಹೋದರೆ ಅವು ಮಂಜೂರಾಗುವ ವರೆಗೆ ಅಂಥವರು ಸ್ಕೂಲ್ ಫೀಜು ಕೊಡದೆ ಇರುವ ಅನುಕೂಲವನ್ನಾದರೂ ಮಾಡಿಕೊಡಬೇಕು. ಇವೆರಡೂ ಮಾಡದೆ ಮಂಜೂರಾಗಿ ಬರುವ ವರೆಗೆ ಅವರು ಫೀಜನ್ನು ಕೊಡುತ್ತಾ ಇರಬೇಕೆಂದು ಮಾಡಿ, ವರ್ಷಾರಂಭವಾಗಿ ಎಂಟೊಂಭತ್ತು ತಿಂಗಳುಗಳ ವರೆಗೆ ಮಂಜೂರು ಮಾಡದೆ ಹೋದರೆ ಅವುಗಳಿಂದ ವಿದ್ಯಾರ್ಥಿಗಳಿಗೆಷ್ಟರ ಮಟ್ಟಿನ ಸಹಾಯ ದೊರೆತಂತಾಗುವುದೆಂದು ವಾಚಕರೇ ಊಹಿಸಿಕೊಳ್ಳಬಹುದು. ನಿಜ ಸಂಗತಿ ಹೇಳುವುದಾದರೆ ವಿದ್ಯಾರ್ಥಿಗಳಿಗೆ ಇದರಿಂದ ಸಹಾಯವಾಗುವುದರ ಬದಲು ತೊಂದರೆಯೆಂದೇ ತೋರುತ್ತೆ. ಯಾಕೆಂದರೆ— ಫೀ ಕೊಡಲು ಸಾಧ್ಯವಿಲ್ಲದವರು ಈ ರಿಯಾಯಿತಿಯ ಭರವಸೆಯ ಶಾಲೆಗೆ ಸೇರಿ, ಎಂಟೊಂಬತ್ತು ತಿಂಗಳುಗಳ ವರೆಗೆ ಕೊಡುತ್ತಾ ಬರಬೇಕಾಗುವುದು ತೊಂದರೆಯಲ್ಲದೆ ಮತ್ತೇನು? ಇವು ಮಂಜೂರಾದ ಮೇಲೆ ಅಷ್ಟರ ವರೆಗೆ ಕೊಟ್ಟ ಫೀಸೆಲ್ಲವೂ ವಾಪಸು ಕೊಡಲ್ಪಡುವುದು ನಿಜ. ಆದರೆ ಅವರೆಗೆ ಫೀಜು ಕೊಡಲು ಹಣವೆಲ್ಲಿಂದ ದೊರಕಿಸುವುದು? ಒಂದು ವೇಳೆ ಕೃಷಿಕರು ಬಡ್ಡಿ ಕೊಟ್ಟು ಸಾಲ ಮಾಡಬೇಕೇ ಹೊರತು, 'ಕಾಸೇ ಕೈಲಾಸ' ವಾಗಿರುವ ಈ ವರ್ಷದಲ್ಲಿ ಅವರ ತಂದೆ ತಾಯಿಗಳ ಪಾಡೇನೆಂದು ಹೇಳಲು ಏನಿಲ್ಲ.

ಇಷ್ಟು ವರ್ಷಗಳ ವರೆಗೆ ವಾಡಿಕೆಯಾಗಿ ಜನವರಿ ತಿಂಗಳಲ್ಲಿ ಈ ರಿಯಾಯಿತಿಗಳು ಮಂಜೂರಾಗುತ್ತಿತ್ತು. ಆದರೆ ಈ ವರ್ಷ ಸ್ಕಾಲರ್‌ಶಿಪ್‌ಗಳು ಅಕ್ಟೋಬರ, ನವಂಬರು ತಿಂಗಳುಗಳಲ್ಲಿ ಮಂಜೂರಾದವೆಂಬಲಾ, ಫ್ರೀಶಿಪ್‌ಗಳು ಇನ್ನೂ ಮಂಜೂರಾಗಿರುವುದಿಲ್ಲವೆಂತಲೂ ತಿಳಿಯ ಬರುತ್ತದೆ. ಬಡ ವಿದ್ಯಾರ್ಥಿಗಳ ಕಷ್ಟವನ್ನು ಕಥಾ ಶೋಚನೀಯ ಸಂಗತಿಯೆಂದು ನಾನು ಹೇಳಬೇಕಿಲ್ಲ. ಇಷ್ಟರ ವರೆಗೆ ಬಡ ವಿದ್ಯಾರ್ಥಿಗಳ ತಂದೆ ತಾಯಿಗಳು ಹೊಟ್ಟೆ ಬಟ್ಟೆ ಹಾಕಲು ಕೈಯಲ್ಲಿ ಕಾಸಿಲ್ಲದಿರುವ ಈ ವರ್ಷದಲ್ಲಿ ಹೇಗೆ ತಮ್ಮ ಮಕ್ಕಳ ಫೀಸನ್ನು ಕೊಡುತ್ತಿದ್ದಾರೋ ಹೇಳಲಾಗುವುದಿಲ್ಲ. ಅವರು ಇನ್ನೂ ಈ ಕಷ್ಟಕ್ಕೆ ಒಳಗಾಗಬೇಕೆಂಬುದು ಯಾವ ನ್ಯಾಯ? ಸಂಬಂಧಪಟ್ಟ ಅಧಿಕಾರಿಗಳು ಬಡ ಜನರ ಕಷ್ಟವನ್ನು ಮನಸ್ಸಿಗೆ ತಂದುಕೊಂಡು ಇನ್ನಾದರೂ ಕೂಡಲೇ ಫ್ರೀ ಶಿಪ್‌ಗಳನ್ನು ಮಂಜೂರು ಮಾಡುವರಾಗಿ ಕೋರುವ

"ಬಂಧು"

ಪುನಹ ಸೇಂದಿ ಇಳಿಸುವುದೇ!

ಮಹನೀಯರೇ,

ಮಹಾತ್ಮ ಗಾಂಧಿಯವರು ಕಳೆದ ವರ್ಷ ಸತ್ಯಾಗ್ರಹವನ್ನು ಶುರುಮಾಡಿದಾಗ ಯಾವ ಊರಿನಲ್ಲಿಯೂ ಯಾವ ಹಳ್ಳಿಯಲ್ಲಿಯೂ, ಜನರು ಮಹಾತ್ಮರ ವಿಷಯವಾಗಿ ಯಾವಾಗಲೂ ಮಾತಾಡುತ್ತಿದ್ದರಲ್ಲದೆ ಸೇಂದಿ ಕುಡಿಯುವುದನ್ನೂ, ಸೇಂದಿ ಕಟ್ಟುವುದನ್ನೂ, ಪರದೇಶೀ ಬಟ್ಟೆ ಹಾಕುವುದನ್ನೂ ತೊರೆದು ಬಿಟ್ಟಿದ್ದರು. ಕೊಡಗಿನಲ್ಲಿ ಮಹಾತ್ಮರ ಕೆಲವು ಹಿಂಬಾಲಕರು ಊರು ಊರು ಸುತ್ತಿಯೂ, ಸತ್ಯಾಗ್ರಹ ಮಾಡಿಯೂ, ಜೈಲಿಗೆ ಹೋಗಿಯೂ ಜನರ ಮನಸ್ಸನ್ನು ಕರಗಿಸಿದ್ದರಿಂದ ಸೇಂದಿ ಕುಡಿಯುವುದನ್ನು ಬಾಕಿ ಮಾಡಿಸಿದ್ದಲ್ಲದೆ, ಅನೇಕ ಊರುಗಳಲ್ಲಿ ಸೇಂದಿ ಕಟ್ಟುವುದೇ ನಿಂತು ಹೋಗಿತ್ತು. ಮಹಾತ್ಮ ಗಾಂಧಿಯವರೇ ಕೊಡಲಿಯನ್ನು ಎತ್ತಿಕೊಂಡು ಸೇಂದಿ ಮರ ಕಡಿಯುವ ಚಿತ್ರಗಳು ಎಷ್ಟೋ ಮನೆಯಲ್ಲಿರಬಹುದು. ಅಂತೂ ಮಹಾತ್ಮ ಗಾಂಧಿಯವರಿಗೂ ಲಾರ್ಡ್ ಇರ್ವಿನವರಿಗೂ ರಾಜಿ ಒಪ್ಪಂದವಾದ ಕೂಡಲೇ ಸತ್ಯಾಗ್ರಹವು ನಿಂತು ಹೋಯಿತು. ಅದರ ಜೊತೆಯಲ್ಲಿಯೇ ಸೇಂದಿ ಕಟ್ಟುವುದು ಶುರು ಆಗಬೇಕೆಂದು ಯಾವ ನಿರ್ಬಂಧವೂ, ಕಾರಣವೂ ಇಲ್ಲ.

ಮಹಾತ್ಮ ಗಾಂಧಿಯವರು ಇಂಗ್ಲೆಂಡಿಗೆ ಹೋಗಿ ಸರಕಾರದವರ ಜೊತೆಯಲ್ಲಿ ರಾಜಿ ಮಾಡಿ ಸೋತರೆಂದು ಜನರಲ್ಲಿ ಒಂದು ಅಭಿಪ್ರಾಯ ಹುಟ್ಟಿದೆ. ಆದರೆ ಅವರು ಯಾವ ಸ್ಥಿತಿಯಿಂದ ಹೋದರೋ ಅದಕ್ಕಿಂತ ಕಮ್ಮಿ ಯಾವುದೂ ಆಗಲಿಲ್ಲ. ಅವರು ಹೋಗುವಾಗ ಹೇಳಿದಕ್ಕಿಂತ ಸ್ವಲ್ಪ ಹೆಚ್ಚೇ ಮಾಡಿದ್ದಾರೆ. ಅಲ್ಲದೆ ಆ ವಿಷಯ ಹೇಗೂ ಆಗಲೀ, ಮಹಾತ್ಮ ಗಾಂಧಿಯವರು ಯಾವುದಕ್ಕೋಸ್ಕರ ಸೇಂದಿ ಕುಡಿಯುವುದನ್ನೂ, ಖಾದಿ ಬಟ್ಟೆ ಧರಿಸುವುದನ್ನೂ ಪ್ರಚಾರ ಮಾಡಿಸಿದ್ದಾರೆಂದು ಎಲ್ಲರೂ ನೆನಪಿನಲ್ಲಿಡತಕ್ಕದ್ದು.

ಸೇಂದಿ ಕುಡಿಯುವದರಿಂದ ನಮ್ಮ ದೇಶದ ಜನರು ಹೀನ ಸ್ಥಿತಿಯನ್ನು ಹೊಂದಿದ್ದಾರೆ. ಜನರು ಬಡವರಾಗುವುದಕ್ಕೆ ಅನೇಕ ಕಾರಣಗಳಲ್ಲಿ ಇದೊಂದಾಗಿದೆ. ದೇಹ ಕೆಡುವುದಕ್ಕೂ, ಬುದ್ಧಿಯ ಹೀನಸ್ಥಿತಿಗೂ ಅನೇಕ ಉದಾಹರಣೆಗಳಲ್ಲಿ ಇದೊಂದಾಗಿದೆ.

ಖಾದಿಯನ್ನು ಧರಿಸುವುದರಿಂದ ವರ್ಷದಲ್ಲಿ ೬ ತಿಂಗಳು ಮಾಡಲಿಕ್ಕೆ ಕೆಲಸವಿಲ್ಲದ ರೈತರಿಗೆ ಕೆಲಸವನ್ನು ಒದಗಿಸಿ, ನಾವು ಮಾಡಿದ ಅನ್ನವನ್ನು ನಾವು ಹೇಗೆ ಊಟ ಮಾಡುತ್ತೇವೋ ಹಾಗೆಯೇ ನಾವು ತಯಾರು ಮಾಡಿದ ಬಟ್ಟೆಯನ್ನು ನಾವು ಧರಿಸುವಂತೆ ಆಗುತ್ತದೆ. ದಿನಂಪ್ರತಿ 2 ಗಂಟೆ ಯಾ 1 ಗಂಟೆ ನೂಲು ಮಾಡಿದರೆ ತಮಗೆ ಬೇಕಾದ ಬಟ್ಟೆಯನ್ನು ತಾವೇ ಮಾಡಿಕೊಳ್ಳಬಹುದು. ಭೂಲೋಕದಲ್ಲಿ ಎಲ್ಲಾ ದೇಶಗಳಿಗಿಂತಲೂ ಉನ್ನತ ಸ್ಥಿತಿಯಲ್ಲಿದ್ದ ಹಿಂದೂಸ್ಥಾನವು ಈಗ ಹೀನಸ್ಥಿತಿಯನ್ನು ಹೊಂದಿದೆ. ಕೈರಾಟೆಯಿಂದ ಕೆಲಸ ಮಾಡಿದರೆ, ಯಾ ಖಾದಿ ಬಟ್ಟೆಯನ್ನು ಕ್ರಯಕ್ಕೆ ತೆಗೆದರೆ ಎಷ್ಟೋ ಬಡವರ ಹೊಟ್ಟೆಯ ಪಾಡು ಕಳೆಯುತ್ತದೆ.

ಇದನ್ನೆಲ್ಲಾ ಒಂದೊಂದಾಗಿ ಎಷ್ಟೋ ಕಾಂಗ್ರೆಸಿನವರು ವಿವರವಾಗಿ ಜನರಿಗೆ ತಿಳಿಸಿದ್ದಾರೆ. ಆದರೂ ಪದೇ ಪದೇ ಹೇಳುತ್ತಿದ್ದರೆ, ನೆಟ್ಟಗೆ ಹೋಗುವ ದಾರಿಯನ್ನು ಬಿಟ್ಟು ಎಡ ಬಲ ಕಡೆಗಳಿಗೆ ಹೋಗುವವರನ್ನು ಎಚ್ಚರಿಸಿದಂತಾಗುವುದೆಂದು ನನ್ನ ಭಾವನೆ. ಒಂದು ಕೆಲಸವನ್ನು ಆರಂಭಿಸಿ ಅದು ದೇಶದ ಉನ್ನತಿಗೆ ಒಳ್ಳೆಯದೆಂದು ಅನುಭವಿಸಿದ ಮೇಲೆ ಅದನ್ನು ಯಾರೂ ತೊರೆಯಬಾರದು. ಈಗೀಗ ಕೆಲವು ಗ್ರಾಮಗಳಲ್ಲಿ ಸೇಂದಿ ಕಟ್ಟಲಿಕ್ಕೆ ಶುರುಮಾಡಿದ್ದಾರೆಂದು ವರ್ತಮಾನವಿದೆ. ಇದು ಬಹು ವ್ಯಸನದ ಸಂಗತಿ.

ಸೇಂದಿಗಾಗಿ ಟ್ರೈನ್ ಕಟ್ಟುವುದರಿಂದ ಎಷ್ಟೋ ನಷ್ಟಗಳಾಗುತ್ತವೆ. ಪರದೇಶೀ ಬಟ್ಟೆ ಹಾಕುವುದರಿಂದ 60 ಕೋಟಿ ರೂಪಾಯಿ ನಮ್ಮ ದೇಶದಿಂದ ಪರದೇಶಗಳಿಗೆ ಹರಿದು ಹೋಗಿ ನಮ್ಮ ದೇಶವು ಇನ್ನೂ ಹೀನಸ್ಥಿತಿಗೆ ಬರುತ್ತದೆ. ಮಹಾತ್ಮರಾದವರೆಲ್ಲರೂ ಅನ್ನ ನೀರಿಲ್ಲದೆ ದೇಶಕ್ಕೋಸ್ಕರ ಕೆಲಸ ಮಾಡುತ್ತಿರುವಾಗ ನಾವು ಅವರ ಕೆಲಸವನ್ನು ಮೂಲೆಗೊತ್ತಲಿಕ್ಕೆ ನೋಡಿದರೆ ನಾವು ಪಾಪಮಾಡಿದಂತಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ 'ಎಲ್ಲರೂ ದಯಮಾಡಿ ಸೇಂದಿ ಕುಡಿಯುವುದನ್ನು ಬಿಡಿ, ಖಾದಿ ಬಟ್ಟೆಯನ್ನು ಧರಿಸಿ ಮತ್ತು ಕೈರಾಟೆಯಿಂದ ನೂಲು ಮಾಡಿರಿ ಎಂದು, ಕೈ ಜೋಡಿಸಿ ಬೇಡುತ್ತಿರುವ ಮಹಾತ್ಮ ಗಾಂಧಿಯವರ ಬೋಧನೆಯಂತೆ ನಡೆದು ಕೃತಾರ್ಥರಾಗಿರಿ' ಎಂದು ಕೋರುವ.

ಸಿ. ಕೆ. ಬಿ.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಶಾಶ್ವತ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರೈಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ 4.
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ ರೂ 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಆಯಾಸವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕಿಟಬಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—3 **ರಥಬೀದಿ, ಮಂಗಳೂರು, ದ. ಕನ್ನಡ.**

British Photo Camera Rs 4—8—0

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಗಳು ವಿಲಾಯಿತಿಯಲ್ಲಿ ತಯಾರಾದವು. ಈ ಕ್ಯಾಮರಗಳಲ್ಲಿ ಬೇರೆ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯ ಬಹುದು ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು, ಪೋಸ್ಟ್ ಕಾರ್ಡಿನ ಸೈಜಿನಲ್ಲಿ ತೆಗೆಯಬಹುದು ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು

ಇದನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಬಹುಮಾನವಾಗಿ ಕಳುಹಿಸುವೆವು ಈ ಟೇಬಲ್ ಟೈಂಪೀಸುಗಳೂ ಈ ಚಿತ್ರದಲ್ಲಿ ತೋರುವಂತೆಯೇ ಇರುವವು ಡಬ್ಬಲ್ ಪಾಲೀಷಿನ ನಿಕ್ಕಲ್ ಕೇಸೂ, ಬಲಿಷ್ಟವಾದ ಲೀವರ್ ಮೂವ್ಮೆಂಟ್‌ಗಳಿಂದ ತಯಾರಿಸಲ್ಪಟ್ಟವು ಸರಿಯಾದ ಕಾಲವನ್ನು ತೋರಿಸುವವು ಇವಕ್ಕೆ 5 ವರ್ಷಗಳ ಗ್ಯಾರಂಟಿ ಕೊಡುವೆವು ಕ್ರಯ ಫೋಟೋ ಕ್ಯಾಮರಾ ಬಹುಮಾನ ಟೈಂಪೀಸ್ ಸಹಿತ ರೂ 4—8—0.

The Legal Trading Co
12—2 P. B 243 Madras

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ತಾವು ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದದ್ದು. [illegible] ರು ಗಂಟೆಯನ್ನು ತೋರಿಸುವದು [illegible] ಗಳು ಇಲ್ಲಿವೆ. [illegible] ಭಂಗಾರಕ್ಕೆ [illegible] [illegible] [illegible] [illegible] [illegible] ರದ ಕತ್ತಿನ ಹಾರ (ನೆಕ್ಲೇಸ್), [illegible] ಸು ಇನಾಮಾಗಿ ಕೊಡುವೆವು 2 [illegible] ತ್ರಿಯದ 4 ವರ್ಷ ಗ್ಯಾರಂಟಿ ಪತ್ರ [illegible]

3 ಬಹುಮಾನಗಳ ಸಹಿತ ರಿಸ್ಟ್‌ವಾಚು [illegible]

[illegible]

12—2 [illegible]

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ಸ್ವದೇಶೀಯ ವಿಮಾ ಸಂಘ.

ಅಧ್ಯಕ್ಷರು:—ಮಾನನೀಯ ಸರ್ [illegible],
ಕೆಟಿ., ಸಿ. ಐ. ಇ., ಜೆ. ಪಿ., [illegible]

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚ್. [illegible]

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ [illegible] ರ ಜೀವನಾಧಾರ ಇದೇ ಜೀವ ವಿಮೆಯು ತಕ್ಕದ್ದು

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನು [illegible] ಯು ಭಾರತೀಯರ ಉತ್ತಮವಾದ ಆಡಳಿತದಿಂದ [illegible] ಟ್ರಸ್ಟ್ ಆಕ್ಟಿಗೆ ಒಳಪಟ್ಟ ಸರಕಾರದ ಭದ್ರತೆಯಿಂದ ದೇಶೀಯರ [illegible] ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ [illegible] ಧ್ಯದಲ್ಲು ಮರಣಾನಂತರ [illegible] ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು [illegible]

4 ಭರತಖಂಡದ ಮಹಾಜನರಿಂದ ಸ್ಥಾಪಿಸಲ್ಪಟ್ಟ [illegible] ಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಇಂದು [illegible] ವಗೈರೆರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ [illegible] ಕಾಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು [illegible]

ಆಫೀಸು—
ಟೆಂಪಲ್ ಸ್ಟ್ರೀಟ್, [illegible]
ಮಡಿಕೇರಿ. (26—10) [illegible]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು [illegible]

4 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟೆನ್‌ಪೆನ್‌ಗಳು.

ವಲ್ರ್ಡ್ಸ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ 3 0 0
„ , ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 3 0
„ „ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3 8 0
, ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3 14 0
„ ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4 2 0
„ ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ	5 8 0
[illegible] ಫೌಂಟನ್‌ಪೆನ್ 1ಕ್ಕೆ	10 8 0
[illegible] ಪೆನ್ 1ಕ್ಕೆ	11 8 0, & 20 10 0
[illegible] ಫೌಂಟನ್‌ಪೆನ್ 1ಕ್ಕೆ	3 8 0, & 3 12
[illegible] ಫೌಂಟನ್ ಪೆನ್ 1ಕ್ಕೆ	6 4 0, & 6 12 0
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8 10 0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3 [illegible]
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2 [illegible]
ಲಿಗಲಿಯಾ ಅಲಾರಂ ಟೈಂಪೀಸ್ 1ಕ್ಕೆ	6 9 0, & 6 [illegible]
ಲಿಗಲಿಯಾ [illegible] ಅಲಾರಂ ಟೈಂಪೀಸ್ 1ಕ್ಕೆ	7 [illegible]
ಲಿಗಲಿಯಾ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಸ್ಟೈಲಿನದು 1ಕ್ಕೆ	[illegible]
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	[illegible]
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ [illegible] ಯಾದ ಟೈಂಪೀಸ್ 1ಕ್ಕೆ	[illegible]
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ	[illegible]
ಡಿಟೋ ನಮೂನೆಯಲ್ಲಿ ಎಟ್ರಾ [illegible] ಪಾಕೆಟ್ ವಾಚ್ 1ಕ್ಕೆ	[illegible]
ನಿಕ್ಕಲ್ ಕೇಸ್ ಸಿಲಿಂಡರ್ ಮೂಮೆಂಟ್ [illegible]	[illegible]
ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 [illegible]



[illegible] ರವಾನಿಸುವವಿಳಾಸ:—ಎಂ. ಎಸ್. [illegible]

52—26

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ : ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ್	—	50,000
ವಸೂಲಾದ ಶೇರ್ ವೊಬಲಗು	—	26,800
ಜಮೂಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದ್ಧರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ನರ್ಸಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್,	ನವರು

ಸೆಕ್ರೆಟರಿ

ಸಿ. ಯಸ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಖು 1–7–1931

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ದಾಖಲು ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಉತ್ತರ ಕೊಡಗಿಗೆ ಮೆ. ಚೆಪ್ಪುಡಿರ ಮಾದಯ್ಯನವರು,
ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಪ್ಪಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಜಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ ಮುದ್ದಯ್ಯಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ ಸಿ. ತಿತಿಮತ್ತಿ—ಮೆ. ಜಿ. ಮಾದಯ್ಯಯ್ಯನವರು.
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚ್ಚಯ್ಯನವರು.

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜನ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 20,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ - 8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 1ರಕ್ಕಿಂತ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿ ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದಲ್ಲಿದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಪೆನಾಂಗ್	ರಂಗೂನ
ಅಹ್ಮದಾಬಾದ್	ಕೊಲಂಬೊ	ಲಾಹೋರ್	ನಾಗಪುರ	ಸಿಂಗಪೂರ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ [52–1

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು —	ಬ್ರಾಂಚ್ ಆಫೀಸು —
ಎಂಪೈರ್ ಆಫ್ ಇಂಡಿಯಾ	152–3 ಕಮರ್ಷಿಯಲ್ ಸ್ಟ್ರೀಟ್,
ಲೈಫ್ ಬಿಲ್ಡಿಂಗ್,	ಬೆಂಗಳೂರು.
ಬೊಂಬಾಯಿ.	

52–16

26–22



ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ. ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.

52–50

Printed & published by P. I Belliappa at "Kodagu" Press Mercara for "Kodagu" Ltd.